



# ಮಾಯಾಜೂಜಾಟ

ಅನೇಕ ನೂರು ವರ್ಷಗಳ ಹಿಂದೆ ಅಮರಾವತಿ ಎಂಬ ಮಹಾನಗರವು ತುಂಬ ಪ್ರಸಿದ್ಧವಾಗಿತ್ತು. ಅಲ್ಲಿಯ ರಾಜನ ಆಸ್ಥಾನದಲ್ಲಿ ಕುಲಶೇಖರನೆಂಬ ವನು ಮುಖ್ಯವಾದೊಂದು ಉದ್ಯೋಗದಲ್ಲಿದ್ದನು. ನ್ಯಾಯ ರೀತಿಯಲ್ಲಿ ನಡೆದುಕೊಂಡು ಅವನು ತುಂಬ ಶ್ರೀಮಂತನಾಗಿದ್ದನು. ಅವನಿಗೆ ಜಯಶೀಲ ನೆಂಬ ಒಬ್ಬನೇ ಮಗ. ಬಾಲ್ಯದಲ್ಲಿಯೇ ತಾಯಿ ಯನ್ನು ಕಳೆದುಕೊಂಡ ಜಯಶೀಲನನ್ನು ತಂದೆ ಬಹಳ ಪ್ರೀತಿಯಿಂದ ಬೆಳೆಸಿದ್ದನು. ಪ್ರೀತಿ ಹೆಚ್ಚಾ ದುದರಿಂದ, ಮನೆಯೊಳಗೆ ಖಂಡನೆ ದಂಡನೆಗಳಿಗೆ ಯಾರೂ ಇಲ್ಲದುದರಿಂದ, ಜಯಶೀಲನು ಭಯ ವಿಲ್ಲದವನಾಗಿ ಸ್ವೇಚ್ಛಾ ಸ್ವಭಾವದವನಾಗಿ ದೊಡ್ಡ ವನಾದನು. ಅವನಿಗೇನೂ ಕಡಿಮೆಯಾಗದಂತೆ ತಂದೆ ಅವನಿಗೆ ಒಳ್ಳೆಯ ವಿದ್ಯಾಭ್ಯಾಸವನ್ನೂ, ಪ್ರತ್ಯೇಕವಾಗಿ ಕ್ಷತ್ರಿಯೋಚಿತವಾದ ಯುದ್ಧ ವಿದ್ಯೆ ಗಳನ್ನೂ ಕಲಿಸಿದ್ದನು. ಅವುಗಳನ್ನೆಲ್ಲಾ ಅವನು ಮನಸ್ಸುಗೊಟ್ಟು ಕಲಿತಿದ್ದನು.

ಹೀಗೆ ಎಲ್ಲದರಲ್ಲೂ ತುಂಬ ಪ್ರವೀಣನಾಗಿ ಪ್ರಾಯ ಸಮರ್ಥನಾದ ತನ್ನ ಮಗನನ್ನು ಕುಲ ಶೇಖರನು ಆಸ್ಥಾನಕ್ಕೆ ಕರೆದೊಯ್ದು ರಾಜನಿಗೆ ಪರಿಚಯ ಮಾಡಿಸಿ, ಆಸ್ಥಾನದಲ್ಲಿ ಏನಾದರೂ ಉದ್ಯೋಗದಲ್ಲಿರಿಸಬೇಕೆಂದು ಆಲೋಚಿಸಿ, ಅದ ಕ್ಕೊಂದು ಒಳ್ಳೆಯ ದಿನವನ್ನೂ ನೋಡಿಟ್ಟನು. ಆದರೆ ಅಷ್ಟರೊಳಗೆ ಅವನಿಗೇನೋ ತೀವ್ರ ಕಾಯಿಲೆ ಬಡಿದು, ಮೂರು ದಿನಗಳೊಳಗೆ ಆಕಸ್ಮಿಕವಾಗಿ ತೀರಿಯೂ ಹೋದನು.

ತಂದೆ ತೀರಿಹೋದ ಮೇಲೆ ಜಯಶೀಲನಿಗೆ ತನ್ನವರೆನ್ನಲು ಯಾರೂ ಇಲ್ಲವಾದರು. ಅವನ ಒಳಿತು ಕೆಡುಕುಗಳನ್ನು ನೋಡಿ, ಅವನನ್ನು ಸರಿ ಯಾದ ಮಾರ್ಗದಲ್ಲಿ ನಡೆಯಿಸುವಂತಹ ಆಪ್ತ ಬಂಧುಗಳಾರೂ ಸಮೀಪದಲ್ಲಿರಲಿಲ್ಲ. ಇಷ್ಟ ಬಂದ ಹಾಗೆ ಖರ್ಚುಮಾಡಲು ಬೇಕಾದಷ್ಟು ಧನವೂ ಮನೆಯಲ್ಲಿತ್ತು. ಈ ಪರಿಸ್ಥಿತಿಯಲ್ಲಿ ಜಯಶೀಲ ನನ್ನು ಅವನ ಗೆಳೆಯರೇ ಆಕರ್ಷಿಸಿಕೊಂಡರು,



ಅವರೆಲ್ಲ ದುರ್ವ್ಯಸನಗಳಲ್ಲಿ ಮುಳುಗಿ ತೇಲುವವರಾದರಿಂದ ಜಯಶೀಲನೂ ಅವರೊಂದಿಗೆ ಸೇರಿದನು. ತಂದೆ ಸಂಪಾದಿಸಿದ ಸೊತ್ತು ಅವನ ಕೈಯಲ್ಲಿ ಕರಗತೊಡಗಿತು. ಬೇಗದಲ್ಲೇ ಜತೆಯುವಕರೊಂದಿಗೆ ಅವನು ಒಬ್ಬ ಜೂಜುಗಾರನಾದ.

ತಂದೆ ತೀರಿಹೋದ ಆರು ತಿಂಗಳೊಳಗೆ ಜಯಶೀಲನು ತನಗಿರುವ ಆಸ್ತಿಯನ್ನೆಲ್ಲಾ ಕಳೆದುಕೊಂಡನು. ತನ್ನದೆನ್ನಲು ಏನೂ ಇಲ್ಲದವನಾಗಿಬಿಟ್ಟನು. ಈ ಸ್ಥಿತಿಯಲ್ಲಿ ಒಮ್ಮೆ ಅವನು ಮೂರು ದಿನಗಳವರೆಗೆ ತಿನ್ನಲು ಏನೂ ಸಿಕ್ಕದೆ ಉಪವಾಸವಿರಬೇಕಾಯಿತು. ಕೊಳೆ ತುಂಬಿದ ತನ್ನ ಬಟ್ಟೆಗಳೊಂದಿಗೆ ಬೀದಿಗೆ ಬರಲು ನಾಚಿಕೆಯಾದುದರಿಂದ ಜೂಜಿನಮನೆಯೊಳಗೇ ಇದ್ದುಬಿಟ್ಟನು. ಅವನ ಜೂಜುಗಾರ ಮಿತ್ರರಲ್ಲಿ ಕೆಲವರು ಅವನ ಮೇಲೆ ಕನಿಕರಗೊಂಡು ಅವನಿಗೆ ಸ್ವಲ್ಪ ಆಹಾರವನ್ನು ತಂದುಕೊಟ್ಟರು. ಆದರೆ ಅದನ್ನು ತೆಗೆದುಕೊಳ್ಳಲು ಅವನ ಆತ್ಮಾಭಿಮಾನವು ಅಡ್ಡ ಬಂದುದರಿಂದ ನಿರಾಕರಿಸಿಬಿಟ್ಟನು. ಆಗ ದೇವಶರ್ಮನೆಂಬ ಮಿತ್ರನು ಅವನಿಗೆ ಏನೇನೋ ಬುದ್ಧಿ ಹೇಳಲು ತೊಡಗಿದನು. ಈ ಸ್ಥಿತಿಯಲ್ಲಿ ಮುಂದಿನ ದಾರಿ ಏನೆಂಬುದನ್ನು ಆಲೋಚಿಸಬೇಕೇ ಹೊರತು ಹೀಗೆ ಉಪವಾಸಮಾಡಿ ದುಃಖಿಸುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದೇ ಅವನ ಹಿತೋಪದೇಶವಾಗಿತ್ತು.

ಹಸಿವೆಯಿಂದಲೂ ದುಃಖದಿಂದಲೂ ಕುದಿದುಕೊಂಡಿದ್ದ ಜಯಶೀಲನು ಮಿತ್ರನ ಮಾತಿನಿಂದ ಕೋಪಗೊಂಡು, "ದೇವಶರ್ಮ, ನೀನು ಹೇಳುವ ಬುದ್ಧಿ ನೀತಿಗಳೆಲ್ಲ ನನಗೆ ತಿಳಿಯದೆಂದುಕೊಂಡೆಯಾ? ನನಗೆ ನೀನೇನೂ ಹೇಳಬೇಕಾಗಿಲ್ಲ. ನನ್ನ ಕಷ್ಟ ಹಂಚಿಕೊಳ್ಳುವುದೂ ಬೇಡ. ನಾನು ಹೇಗಾದರೂ ಸತ್ತುಕೊಳ್ಳುತ್ತೇನೆ." ಎಂದನು.

ಈ ಮಾತಿಗೆ ದೇವಶರ್ಮನು ಕಿರುನಗೆ ನಗುತ್ತ "ಜಯಶೀಲಾ, ಎಲ್ಲ ತಿಳಿದವನಾದರೆ ಈ ಜೂಜಿನ ಮನೆಗೆ ಏಕೆ ಬಂದೆಯೋ ನನಗೆ ಅರ್ಥವಾಗುತ್ತಿದಿಲ್ಲ. ಜೂಜಿನ ಕಾಯಿಗಳು ದರಿದ್ರದೇವತೆಯ ಕಣ್ಣುಗಳೆಂದು ನಿನಗೆ ಗೊತ್ತಿರಲಿಲ್ಲ. ಜೂಜುಗಾರನಿಗೆ ಬೀದಿಯ ಧೂಳೇ ಹಾಸಿಗೆಯೆಂದು, ಬೀದಿಯೇ ಮನೆಯೆಂದು ಬ್ರಹ್ಮ ಅವನ ಹಣೆಯಲ್ಲಿ ಬರೆದುದು ನಿನಗೆ ಗೊತ್ತಿರಲಿಕ್ಕಿಲ್ಲ. ಆದುದೆಲ್ಲ ಆಗಿಹೋಯಿತು. ವಿದ್ಯಾವಂತನಾದ ನೀನು ಮುಂದಿನ ಮಾರ್ಗ ಏನೆಂಬುದನ್ನು ನೋಡಬೇಕಲ್ಲದೆ ಹೀಗೆ ಬಿಮ್ಮಗೆ ಬೀಗಿ ಕುಳಿತುಕೊಳ್ಳಬಾರದು." ಎಂದನು.

ಜಯಶೀಲನು ಸ್ವಲ್ಪ ಹೊತ್ತು ಮೌನವಾಗಿದ್ದನು. ಆಮೇಲೆ ಯಾವುದೋ ಒಂದು ನಿಶ್ಚಯಕ್ಕೆ ಬಂದವನಂತೆ ತಲೆಯಾಡಿಸುತ್ತ, "ದೇವಶರ್ಮ, ನೀನು ನಿಜವಾದ ಮಿತ್ರನೇ ಸರಿ. ಮಿತ್ರನಾದವನು ಹೇಳತಕ್ಕಂತಹ ಮಾತುಗಳನ್ನೇ ಹೇಳಿದೆ.


ಗೌರವದಿಂದ ದೊಡ್ಡ ಸ್ಥಿತಿಯಲ್ಲಿ ಬದುಕಿದ ಈ ನಗರದಲ್ಲಿ ದರಿದ್ರನಾಗಿ ಜೀವಿಸಲು ನನಗಿಷ್ಟವಿಲ್ಲ. ಬೇರೆ ಯಾವ ದೇಶಕ್ಕಾದರೂ ಹೋಗಿಬಿಡುತ್ತೇನೆ. ಏನನ್ನುವಿ ?" ಎಂದನು.

ದೇವಶರ್ಮ ಅದಕ್ಕೇನೋ ಹೇಳಬೇಕೆಂದಿದ್ದ. ಅಷ್ಟರೊಳಗೆ ಆ ಜೂಜಿನಮನೆಯ ಮುಂದೆ ಒಂದು ಗಲಾಟೆಯೆದ್ದಿತು. ಜಯಶೀಲನೂ, ದೇವಶರ್ಮನೂ ಆ ಕಡೆಗೆ ಹೋಗಬೇಕೆಂದು ಎದ್ದರು. ಹೊರಗೆ ರಾಜನ ಅಶ್ವದಳ ನಾಯಕನಾದ ಕೃಪಾಣಜಿತನೆಂಬವನು, ಕೈಯಲ್ಲಿ ದೊಡ್ಡದೊಂದು ಹುರಿಮಾಡಿದ ಕೊರಡೆಯನ್ನಿಟ್ಟುಕೊಂಡು, ಅದನ್ನು ರೊಯ್ಯ ರೊಯ್ಯನೆ ಬೀಸುತ್ತ ಜೂಜಿನಮನೆಯಲ್ಲಿರುವವರನ್ನು ಹೊಡೆಯುತ್ತಿದ್ದನು. ಅವನೊಂದಿಗೆ ನಾಲ್ಕುಮಂದಿ ಭಟರೂ ಇದ್ದರು. ಅವರೂ ಸಿಕ್ಕಿದವರನ್ನು ಕೊರಡೆಯಿಂದ ಹೊಡೆಯುತ್ತಿದ್ದರು. ಜಯಶೀಲನು ಅವರ ಮುಂದೆ ಹೋಗುವುದಕ್ಕೂ ಅವರೇ ಅವನ ಬಳಿಗೆ ಬರುವುದಕ್ಕೂ ಸರಿಯೋಯಿತು. ಜಯಶೀಲನು ಸ್ವಲ್ಪವೂ ಹಿಂಜರಿಯದೆ ಕೃಪಾಣಜಿತನ ಮುಂದೆ ಹೋಗಿ "ಇದೇನು ಅನ್ಯಾಯವಯ್ಯ ? ಯಾರು ಏನು ಏಕೆ ಎಂಬುದೇನಿಲ್ಲದೆ ಕಂಡವರಿಗೆಲ್ಲ ಹೊಡೆಯುವುದೇನು ನ್ಯಾಯವಲ್ಲ, ಧರ್ಮವಲ್ಲ. ನಿಲ್ಲಿಸಿ !" ಎಂದನು.

"ಓಹೋ ! ಜೂಜುಕೋರನೇ ನನಗೆ ಧರ್ಮೋಪದೇಶ ಮಾಡುತ್ತಾನೆ ! ಏನು ಸೊಕ್ಕು !" ಎನ್ನುತ್ತ ಕೃಪಾಣಜಿತನು ಕೊರಡೆಯನ್ನು ಬೀಸಿ ಜಯಶೀಲನನ್ನು ಹೊಡೆದನು.

ಜಯಶೀಲನು ತನ್ನ ಮೇಲೆ ಪೆಟ್ಟು ಬೀಳುತ್ತಲೇ ಚೆಂಡಿನಂತೆ ಹಾರಿ ಬದಿಯಲ್ಲಿದ್ದ ಒಂದು ಕೋಲನ್ನು ತೆಗೆದುಕೊಂಡು ಕೃಪಾಣಜಿತನ ತಲೆಯ ಮೇಲೆ ಬಲವಾಗಿ ಹೊಡೆದನು. ತಲೆಗೆ ಪೆಟ್ಟು ಬೀಳುತ್ತಲೇ ಕೃಪಾಣಜಿತ ಕೆಟ್ಟ ಸ್ವರದಿಂದ ಕೂಗಿ ಹಲ್ಲು ಕಡಿದು ಕಣ್ಣು ತಿರುಗಿಸುತ್ತ ಒರೆಯಿಂದ ಕತ್ತಿಯನ್ನು ಸೆಳೆದೆತ್ತಿದನು. ಆದರೆ ಕತ್ತಿಯನ್ನು ಬೀಸುವುದರೊಳಗೆ ಜಯಶೀಲನು ತಟಕ್ಕನೆ ಹಾರಿ





ಅವನ ಸೊಂಟದ ಮೇಲೆ ಬಲವಾದೊಂದು ಒದೆ ಕೊಟ್ಟನು. ಕೃಪಾಣಜಿತ ಆಯ ತಪ್ಪಿ ಕರ್ಕಶ ಸ್ವರದಿಂದ ಕೂಗುತ್ತ ಧಢೀರನೇ ಬಿದ್ದು, ತಟ್ಟನೆ ಹೊರಳಿ ಎದ್ದು ಬಾಗಿಲ ಕಡೆಗೆ ಓಡತೊಡಗಿದ. ಇದನ್ನು ನೋಡಿ ಕೊರಡೆಯ ಪೆಟ್ಟು ತಿಂದ ಇತರ ಜೂಜುಗಾರರೆಲ್ಲ ರೊಚ್ಚಿಗೆದ್ದು ರಾಜಭಟರ ಮೇಲೆ ಬಿದ್ದರು. ಕೃಪಾಣಜಿತನು ಹೊರಗೆ ಹಾರಿ ತನ್ನ ಕುದುರೆಯ ಮೇಲೇರಿ ಓಡಿಹೋಗಲು ನೋಡಿದ. ಅವನನ್ನು ಓಡಿಸಿಕೊಂಡು ಜಯಶೀಲನು ಅವನ ಹಿಂದೆಯೇ ಕುದುರೆಯ ಮೇಲೆ ಹಾರಿ, ಒಂದು ಕೈಯಿಂದ ಕುದುರೆಯ ಕಡಿವಾಣವನ್ನು ಹಿಡಿದುಕೊಂಡು ಎರಡನೇ ಕೈಯಿಂದ ಕೃಪಾಣಜಿತನ ಜುಟ್ಟು ಹಿಡಿದೆಳೆದು, ಮೊಣಕೈಯಿಂದ ಒಂದೇ ಸವನೆ ತಿವಿಯತೊಡಗಿದನು.

ಕುದುರೆ ಹೆದರಿ ರಾಜಬೀದಿಯಲ್ಲಿ ಹುಚ್ಚು ಹಿಡಿದಂತೆ ಓಡುತ್ತಿದ್ದಿತು. ಒಂದು ಕುದುರೆಯ ಮೇಲೆ ಇಬ್ಬರು ರಾಹುತರು ಗುದ್ದಾಡಿಕೊಳ್ಳುವುದನ್ನು ನೋಡಿ ಜನರು ಗುಂಪು ಗುಂಪಾಗಿ ಓಡಿಬರುತ್ತಿದ್ದರು. ಕೆಲವರು ಹೋ ಹೋ ಎಂದು ಕೂಗುತ್ತ ಕೆಲವರು ಚಪ್ಪಾಳೆ ತಟ್ಟುತ್ತ ಕುದುರೆಯ ಹಿಂದೆ ದೊಡ್ಡ ಗುಂಪೇ ಓಡತೊಡಗಿತು. ಕುದುರೆ ತನ್ನ ಗುರುತಿನ ದಾರಿಯಲ್ಲೇ ಓಡಿ ಓಡಿ ರಾಜಭವನದ ಮುಂದೆ ಹೋಗಿ ನಿಂತಿತು.

ಆ ಸಮಯದಲ್ಲಿ ಮಹಾರಾಜನು ಭವನದ ಮೇಲು ಭಾಗದಲ್ಲಿ ನಿಂತುಕೊಂಡು ಮಂತ್ರಿಯೊಂದಿಗೆ ಏನೋ ಮಾತನಾಡಿಕೊಂಡಿದ್ದನು. ಇದ್ದಕ್ಕಿದ್ದಹಾಗೆ ಭವನದ ಮುಂದೆ ಗಲಾಟೆಯೆದ್ದುದರಿಂದ ರಾಜನ ಗಮನ ಇತ್ತ ಹರಿಯಿತು. ಇಬ್ಬರು ಸವಾರರೊಂದಿಗೆ ಓಡಿಬರುತ್ತಿರುವ ಕುದುರೆಯನ್ನು ನೋಡಿ ರಾಜನು ಆಶ್ಚರ್ಯಪಡುತ್ತ, ನೌಕರನೊಬ್ಬನನ್ನು ಕರೆದು "ಅದೇನು ಗಲಾಟೆ ನೋಡು. ಕುದುರೆಯ ಮೇಲೆ ಮರ್ಯಾದೆಗೆಟ್ಟು ಗುದ್ದಾಡಿಕೊಳ್ಳುವವರಾರದು? ಆ ಹುಂಬರಿಬ್ಬರನ್ನೂ ನನ್ನ ಬಳಿಗೆ ಕರೆದುಕೊಂಡು ಬಾ" ಎಂದು ಆಜ್ಞೆ ಮಾಡಿದನು.

ಸ್ವಲ್ಪ ಹೊತ್ತಿಗೆಲ್ಲಾ ನೌಕರನು ಕೃಪಾಣಜಿತನನ್ನೂ ಜಯಶೀಲನನ್ನೂ ಕರೆದುಕೊಂಡು ರಾಜನ ಬಳಿಗೆ ಬಂದನು. ರಾಜನಿಗೆ ತನ್ನ ಅಶ್ವದಳ ನಾಯಕನ ಗುರುತು ಹತ್ತಿತು. ಆದರೆ ಜಯಶೀಲನು ರಾಜನಿಗೆ ಅಪರಿಚಿತನಾಗಿದ್ದ. ಮಂತ್ರಿ ಜಯಶೀಲನನ್ನು ಅವನ ತಂದೆಯೊಂದಿಗೆ ಒಂದೆರಡು ಬಾರಿ ನೋಡಿದ್ದನು. ಆದುದರಿಂದ ಮಂತ್ರಿಗೆ ಮಾತ್ರ ಜಯಶೀಲನು ಯಾರೆಂಬುದು ಗೊತ್ತಾಯಿತು.

ತನ್ನ ಅಶ್ವದಳ ನಾಯಕನ ಅವಸ್ಥೆಯನ್ನು ನೋಡಿ ರಾಜನು ಕೋಪದಿಂದ "ಏನಿದು ಲಜ್ಜೆಗೇಡಿತನ? ಅಶ್ವದಳ ನಾಯಕನೆಂಬ ಗೌರವ ಪದವಿಯಲ್ಲಿರುವ ನೀನು ರಾಜಬೀದಿಯಲ್ಲಿ ಡೊಂಬರಾಟ ಪ್ರದರ್ಶಿಸುವಿಯೇನು?" ಎಂದನು.



ಕೃಪಾಣಜಿತ ತಲೆತಗ್ಗಿಸಿ, "ಮಹಾರಾಜರೇ! ಇವನೊಬ್ಬ ಜೂಜುಕೋರನಿಂದಾಗಿ ಹೀಗಾಯಿತು. ಇವನು ಹಿಂದಿನಿಂದ ನನ್ನ ಕುದುರೆಯ ಮೇಲೆ ಹಾರಿ ನನ್ನನ್ನು ಕಾಡಿದ. ಇವನನ್ನು ತಕ್ಕ ರೀತಿಯಲ್ಲಿ ಶಿಕ್ಷಿಸಬೇಕು. ಇಂಥಹವನಿಂದ ಇನ್ನೂ ಎಂತೆಂಥವರ ಮಾನ ಹೋಗುವುದೋ?" ಎಂದನು.

ಈ ಮಾತು ಕೇಳಿ ರಾಜನು ಹೇಳನವಾಗಿ ನಕ್ಕು, "ಒರೆಯಲ್ಲಿ ಕತ್ತಿಯಿಟ್ಟುಕೊಂಡಿರುವ ನಮ್ಮ ದಳ ನಾಯಕನನ್ನು ನಿರಾಯುಧನಾದೊಬ್ಬ ಸಾಮಾನ್ಯ ಜೂಜಿನ ಹುಚ್ಚ ಹೊಡೆದು ಮುರಿಯುವುದೆಂದರೇನು? ವಿಚಿತ್ರ ಸಂಗತಿ! ನಾಚಿಕೆ ಪಡಬೇಕಾದ ವಿಷಯ. ಹೌದು, ನಿನಗೆ ಈ ಜೂಜುಗಾರನೊಂದಿಗೆ ಜಗಳವೇಕೆ ಬಂತು? ನೀನೂ ಜೂಜಾಡಿದೆಯಾ?" ಎಂದು ಕೇಳಿದ.

"ಮಹಾರಾಜರೇ, ರಾಜಬೀದಿಯಲ್ಲಿರುವ ಜೂಜಿನ ಮನೆಯೊಳಗೆ ಆಟವಾಡುವವರೆಲ್ಲಾ ಮಹಾ ಮೂರ್ಖರು, ಮೊಂಡರು. ಜಗಲಿಯ ಮೇಲೆ ಬಾಗಿಲ ಮುಂದುಗಡೆ ಕಾಲಾಡಿಸುತ್ತಾ ಕುಳಿತುಕೊಂಡು, ದೊಡ್ಡ ಅಧಿಕಾರಿಗಳು ಬರುವಾಗ ಎದ್ದು ನಿಲ್ಲುವುದೂ ಇಲ್ಲ. ಅವರಿಗೆ ಮರ್ಯಾದೆಯ ಪಾಠ ಕಲಿಸಲಿಕ್ಕೇ ನಾನು ಜೂಜಿನ ಮನೆಯೊಳಕ್ಕೆ ಹೊಕ್ಕೆ. ಅಲ್ಲಿ ಈ ಹುಚ್ಚ ನನ್ನ ಮೇಲೆ ತಿರುಗಿಬಿದ್ದ" ಎಂದ ಕೃಪಾಣಜಿತ.

ರಾಜನು ಮಂತ್ರಿಯ ಮುಖವನ್ನು ಪ್ರಶ್ನಾರ್ಥಕವಾಗಿ ನೋಡಿದನು. ಮಂತ್ರಿ ಕೆನೆದು ಗಂಟಲು ಸರಿಮಾಡಿಕೊಂಡು, "ಮಹಾರಾಜರೇ, ಇದರ ಕಾರಣ ಏನೇ ಇರಲಿ, ನಮ್ಮ ಅಶ್ವದಳ ನಾಯಕನ ಗೌರವ ಪ್ರತಿಷ್ಠೆಗಳೆಲ್ಲ ಬೀದಿ ಪಾಲಾಗಿ ಹೋದುದಂತೂ ನಿಜ. ಇದು ನಮಗೂ ಅವಮಾನವೆಂದು ಹೇಳಲೇಬೇಕಾಗಿದೆ." ಎಂದನು.

"ನಿಜ. ಸಂದೇಹವೇ ಇಲ್ಲ. ಇಂಥವನು ಅಶ್ವದಳ ನಾಯಕನಾಗಿದ್ದರೆ ನಮ್ಮ ಮರ್ಯಾದೆ ಹೋಗುವುದು ಮಾತ್ರವಲ್ಲದೆ, ಶತ್ರುಗಳ ದೃಷ್ಟಿಯಲ್ಲಿ ಕೂಡಾ ಅಲ್ಪರಾಗಿ ಹೋಗುತ್ತೇವೆ" ಎಂದು ಹೇಳಿ ರಾಜನು ಕೃಪಾಣಜಿತನನ್ನು ನೋಡಿ, "ಮೂರ್ಖ, ನಿನ್ನ ಹೇಡಿತನದ ಕಾರಣವಾಗಿ ನಮ್ಮ ಇಡಿಯ ಸೈನ್ಯಕ್ಕೆ ಅವಮಾನವಾಗಿದೆ. ನಿನಗೆ ದೇಶ ಬಹಿಷ್ಕಾರ ಶಿಕ್ಷೆ ವಿಧಿಸಿದ್ದೇನೆ. ಎರಡು ದಿನಗಳ ಮೇಲೆ ನೀನು ನಮ್ಮ ದೇಶದ ಸರಹದ್ದಿನೊಳಗೆ ಎಲ್ಲಿ ಕಂಡರೂ ನಿನ್ನ ತಲೆ ಕಡಿಸಲಾಗುತ್ತದೆ. ಎಚ್ಚರ! ಕತ್ತಿ ಕೆಳಗಿಟ್ಟು ತತ್ಕ್ಷಣ ಹೊರಟು ಹೋಗಿಬಿಡು" ಎಂದನು.

ಕೃಪಾಣಜಿತನು ಏನೋ ಹೇಳಬೇಕೆಂದು ರಾಜನ ಮುಖ ನೋಡಿದನು. ರಾಜನು ಕೈಯಿಂದ ತಡೆದು ಹೊರಟುಹೋಗುವಂತೆ ಸನ್ನೆ ಮಾಡಿದನು. ರಾಜನಿಗೆ ಇನ್ನಿಷ್ಟು ಕೋಪ ಬರಿಸಿದರೆ, ಈ ನಿಮಿಷದಲ್ಲೇ ತನ್ನ ತಲೆ ಹಾರಬಹುದೆಂದು ಹೆದರಿ ಅವನು ಕತ್ತಿಯನ್ನು ನೆಲದ ಮೇಲಿಟ್ಟು, ಏನೂ ಹೇಳದೆ ತಲೆ ತಗ್ಗಿಸಿಕೊಂಡು ಹೊರಟುಹೋದನು.



ರಾಜನು ಜಯಶೀಲನನ್ನು ದುರುಗುಟ್ಟಿ ನೋಡಿ, "ಎಲೋ ಜೂಜುಕೋರ! ನಿನಗೆ ಶಿರಚ್ಛೇದನ ವಿಧಿಸಿದ್ದೇನೆ. ಏನಾದರೂ ಹೇಳಬೇಕೆಂದಿದ್ದರೆ ಹೇಳಿಕೋ" ಎಂದನು.

ತನ್ನ ದಾರಿದ್ರ್ಯವನ್ನು ನೆನೆಯುತ್ತ, ನಿರಾಶೆಯಿಂದ ಶೂನ್ಯತೆಯಲ್ಲಿದ್ದ ಜಯಶೀಲನು ರಾಜನ ಮಾತುಗಳಿಗೇನೂ ಹೆದರದೆ, "ಮಹಾರಾಜರೇ, ತಾವು ನನಗೆ ಶಿರಚ್ಛೇದನವನ್ನೇ ವಿಧಿಸಿದ ಮೇಲೆ ನಾನು ಹೇಳುವಂಥಾದ್ದು ಏನಿದೆ? ಪ್ರಯೋಜನವಾದರೂ ಏನಿದೆ?" ಎಂದನು.

"ನಿನಗೆ ಪ್ರಾಣಭಯವೇ ಇಲ್ಲವೇನು?" ಎಂದು ರಾಜನು ಆಶ್ಚರ್ಯದಿಂದ ಕೇಳಿದ.

"ಭಯಂಕರವಾದ ದಾರಿದ್ರ್ಯದ ಭಯದ ಮುಂದೆ ಪ್ರಾಣಭಯವೇನಿದೆ ಮಹಾ?" ಎಂದ ಜಯಶೀಲ ಸಣ್ಣ ನಗೆನಗುತ್ತಾ. "ಹೌದು ಹೌದು. ಹಾಳಾದ ದಾರಿದ್ರ್ಯಕ್ಕೆ ಮೂಲ ಕಾರಣ ಜೂಜೇ. ಜೂಜು ದುರ್ವ್ಯಸನಗಳ ಶಿರೋಮಣಿಯೆಂದು ನಮ್ಮ ಅಜ್ಜ ಹೇಳುತ್ತಾ ಇದ್ದರು!" ಎಂದ ರಾಜ ಮಂತ್ರಿಯನ್ನು ನೋಡಿ. "ಹೌದು ಮಹಾರಾಜರೇ. ಈ ಆಟದಿಂದ ಸರ್ವಸ್ವವನ್ನೂ ಕಳೆದುಕೊಂಡು, ಬಂಧುಮಿತ್ರ ಪರಿವಾರಗಳಿಂದಲೂ ಬಹಿಷ್ಕರಿಸಲ್ಪಡುವ ಜೂಜಿನವರು, ಮಹಾಯೋಗಿಗಳ ಹಾಗೆ ಈ ಪ್ರಪಂಚದಲ್ಲಿ ನಡೆಯುವ ಯಾವುದಕ್ಕೂ ಭಯಪಡರು. ನಾನೊಂದು ಸಣ್ಣ ವಿಜ್ಞಾಪನೆ ಮಾಡುತ್ತೇನೆ ಮಹಾರಾಜರೇ" ಎಂದನು ಮಂತ್ರಿ.

ಏನೆಂದು ರಾಜನು ಕೇಳಲು ಮಂತ್ರಿ, "ಮತ್ತೇನಿಲ್ಲ. ಜಯಶೀಲನೆಂಬ ಈ ಯುವಕನು, ಹಿಂದೆ ನಮ್ಮ ಆಸ್ಥಾನದಲ್ಲಿ ಪ್ರಾಮಾಣಿಕತೆಯಿಂದಿದ್ದ ಕುಲಶೇಖರನ ಒಬ್ಬನೇ ಒಬ್ಬ ಮಗ. ಆದುದರಿಂದ ತಾವು ಇವನ ಮೇಲೆ ಸ್ವಲ್ಪ ಕರುಣೆಯನ್ನು ತೋರಿಸಬಹುದು." ಎಂದನು.

ರಾಜನು ಜಯಶೀಲನನ್ನು ಆಪಾದಮಸ್ತಕ ಪರ್ಯಂತ ಒಂದು ಸಾರಿ ನೋಡಿ, ಕನಿಕರಗೊಂಡವನಂತೆ ತಲೆಯಾಡಿಸುತ್ತ, "ಅಂತಹವನ ಮಗನಾಗಿದ್ದು ಹೀಗಾದನಲ್ಲಾ? ಸರಿ, ಇವನ ಹಣೆಬರಹ! ಶಿರಚ್ಛೇದನವನ್ನು ರದ್ದುಮಾಡಿ ದೇಶ ಬಹಿಷ್ಕಾರ ಶಿಕ್ಷೆ ಕೊಡುತ್ತೇನೆ. ಎಂದಾದರೂ ದುರ್ವ್ಯಸನಗಳಿಂದ ಬಿಡುಗಡೆ ಹೊಂದಿ ಒಳ್ಳೆಯ ದಾರಿಯಲ್ಲಿ ನಡೆಯುವವನಾಗಿ ಹಿಂದಿರುಗಿಬಂದರೆ, ಇವನಿಗೆ ನಮ್ಮ ಆಸ್ಥಾನದಲ್ಲಿ ಇವನ ತಂದೆ ಮಾಡಿದ ಉದ್ಯೋಗವನ್ನೇ ಕೊಡಬಹುದು." ಎಂದನು.

ಜಯಶೀಲನು ಇನ್ನು ಹೊರಡುವೆನೆಂಬಂತೆ ತಲೆಬಾಗಿದನು. ಆಗ ಮಂತ್ರಿ ಅವನೊಂದಿಗೆ, "ಇನ್ನು ಹೋಗಪ್ಪ. ಮಹಾರಾಜರು ಹೇಳಿದ ಬುದ್ಧಿಯ ಮಾತನ್ನು ನೆನಪಿಟ್ಟುಕೋ" ಎಂದನು.

ಜಯಶೀಲನು ರಾಜನಿಗೆ ನಮಸ್ಕಾರ ಮಾಡಿ ಅಲ್ಲಿಂದ ಹೊರಟನು. ಅವನು ಕೆಲವು ಅಡಿ ಎತ್ತಿ

ಷ್ಟರಲ್ಲಿ ರಾಜನು ಅವನನ್ನು ಹಿಂದಕ್ಕೆ ಕರೆದು "ಹೋ, ಆ ಕೃಪಾಣಜಿತನು ಬಿಟ್ಟುಹೋದ ಕತ್ತಿಯನ್ನು ನೀನು ತೆಗೆದುಕೋ. ಒಂದು ವಾರ ದಿನದೊಳಗೆ ನಮ್ಮ ದೇಶದ ಸರಹದ್ದು ದಾಟಿ ಹೋಗಬೇಕು. ತಿಳಿಯಿತೇ ?" ಎಂದನು.

"ಅಪ್ಪಣೆಯಂತೇ ನಡೆಯುತ್ತೇನೆ ಮಹಾ ...ರೇ !" ಎಂದು ಜಯಶೀಲನು ಕತ್ತಿಯನ್ನು ತೆಗೆದುಕೊಂಡು, ಅಲ್ಲಿಂದ ಹೊರಟು ಬೀದಿಗೆ ಇಳಿದನು. ತಾನು ಈ ದೇಶವನ್ನು ಬಿಟ್ಟು ಹೋಗುವ ಮೊದಲು ತನ್ನ ಚಿರಕಾಲ ಮಿತ್ರನಾದ ದೇವಶರ್ಮನನ್ನು ಒಂದು ಸಾರಿ ನೋಡಿ, ಅವನೊಡನೆ ಹೇಳಿಕೊಂಡು ಹೋಗಬೇಕೆಂದು ಮಾಡಿದನು. ಅವನು ಸಾಧಾರಣವಾಗಿ ಜೂಜಿನ ಮನೆಯಲ್ಲೇ ಇರುವವನು. ...ಕಿಯೇ ಜಯಶೀಲನು ಅಲ್ಲಿಗೆ ಹೋದನು. ಜೂಜಿನ ಮನೆಯ ಬಾಗಿಲು ಮುಚ್ಚಲ್ಪಟ್ಟು, ಒಳಗಿ... ತಾಳ ಹಾಕಲಾಗಿತ್ತು.

ಎಂದಿನಂತಿಲ್ಲದೆ ಈ ದಿನ ಪ್ರತ್ಯೇಕವಾಗಿ ಒಳಗಿ... ಭದ್ರಪಡಿಸಿಕೊಂಡಿರುವುದನ್ನು ನೋಡಿ ಜಯಶೀಲನು ಆಶ್ಚರ್ಯದಿಂದ, ಬಾಗಿಲು ತಟ್ಟುತ್ತ, "ಯಾರೊಳಗೆ ? ಬಾಗಿಲು ತೆರೆಯಿರಿ !" ಎಂದು ...ಗಿ ಹೇಳಿದನು. ಆಗ ಒಳಗಿನಿಂದ ಗಟ್ಟಿಯಾಗಿ ...ಕ್ಕರ ಬಂತು: "ಯಾರದು ಕೂಗುವುದು ? ... ಜೂಜಿನ ಮನೆ ಅಲ್ಲ !"

ಈ ಬಗೆಯ ಪ್ರತ್ಯುತ್ತರವನ್ನು ಕೇಳಿ ಜಯಶೀಲನು ಆಶ್ಚರ್ಯಪಡುತ್ತ, "ನಾನು ಜೂಜುಗಾರ...! ಮೊದಲು ಬಂದು ಬೇಗ ಬಾಗಿಲು ತೆರೆ !" ... ತೀವ್ರ ಕಂಠದಿಂದ.

ಈ ಮಾತಿನ ಹೊಲಬು ನೋಡಿ ಒಳಗಿಂದ ...ನ ಮನೆಯ ಯಜಮಾನನಿಗೆ ಭಯವಾಯಿತು. ಬಾಗಿಲು ತಟ್ಟುವವನು ರಾಜೋದ್ಯೋಗಿಯೇ ...ಕೊಂಡು ಗಡಗಡನೆ ನಡುಗುತ್ತ ಬಂದು



ಬಾಗಿಲು ತೆರೆದನು. ಜಯಶೀಲನನ್ನು ನೋಡಿದ ಕೂಡಲೇ ಅವನ ಭಯ ಹೇಳ ಹೆಸರಿಲ್ಲದೆ ಹಾರಿ ಹೋಯಿತು. ಆದರ ಮೇಲೆ ಮೂದಲಿಸುವ ದನಿಯಿಂದ, ಹುಬ್ಬು ಗಂಟುಹಾಕಿಕೊಂಡು, "ಹಾಳಾದ ನೀನಾ ? ಇದ್ದ ಧನವನ್ನೆಲ್ಲಾ ಕಳೆದುಕೊಳ್ಳುವುದರ ಜೊತೆಗೆ ಕಣ್ಣು ಕಿವಿಗಳ ಶಕ್ತಿ ಕೂಡಾ ಕಳೆದುಕೊಂಡೆಯಾ ? ಬಾಗಿಲು ಮುಚ್ಚಿದುದು ಏತಕ್ಕೆಂದು ಕೂಡಾ ಗೊತ್ತಾಗುವುದಿಲ್ಲವೇ ?" ಎಂದನು.

ಜಯಶೀಲನು ಸರ್ರನೆ ಕತ್ತಿಯನ್ನು ಸೆಳೆದು, "ಜೂಜುಗಾರರ ರಕ್ತ ಮಾಂಸಗಳಿಂದಲೇ ಬದುಕಿಕೊಂಡಿರುವ ನೀನು ಇಷ್ಟರೊಳಗೆ ದೊಡ್ಡ ಮನುಷ್ಯನಾದೆಯೋ ? ಇಷ್ಟು ಗರ್ವ ನಿನಗೆ ಇಷ್ಟು ಬೇಗ ಬಂತೇ ? ಇಲ್ಲಿ ನೋಡು ಕಣ್ಣಿದ್ದವನಾದರೆ ! ನಾನು ಧನಹೀನನಾದರೂ ಖಡ್ಗಪಾಣಿಯಾಗಿದ್ದೇನೆ. ಬಾಯಿಗೆ ಬಂದ ಹಾಗೆ ಬೊಗಳುವುದನ್ನು ಬಿಟ್ಟು ಕೇಳುವ ಪ್ರಶ್ನೆಗೆ ಉತ್ತರ ಕೊಡು. ನನ್ನ ಮಿತ್ರ

ದೇವಶರ್ಮ ಒಳಗಿದ್ದಾನೋ ಇಲ್ಲವೋ ಹೇಳು" ಎಂದನು. ಜೂಜಿನ ಮನೆಯ ಒಡೆಯ ತಳತಳನೆ ಹೊಳೆಯುವ ಜಯಶೀಲನ ಕೈಯಲ್ಲಿರುವ ಕತ್ತಿಯನ್ನು ನೋಡಿ ಗರಬಡಿದಂತಾದನು. ಆದರ ಮೇಲೆ ಕೋಪದಿಂದ ಕೆಂಪಾದ ಅವನ ಮುಖವನ್ನು ನೋಡಿ ಇವನು ಎರಡು ಗಂಟೆಗಳ ಮೊದಲು ಗತಿಗೇಡಿಯಾಗಿದ್ದ ಜೂಜುಗಾರ ಜಯಶೀಲನಲ್ಲವೆಂದು ಪುನಃ ಹೆದರಿ ಆಶ್ಚರ್ಯಪಡುತ್ತ ತಗ್ಗಿ ವಿನಯದಿಂದ, "ಅಯ್ಯಾ, ಕೋಪಿಸಬೇಡಿ ಸ್ವಾಮಿ. ನಾನು ಇದು ವರೆಗೆ ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲಿಕ್ಕಾಗಿ ಈ ಜೂಜಿನ ಮನೆಯನ್ನು ಮುಚ್ಚಿಬಿಟ್ಟೆ. ಇನ್ನು ನನಗೆ ರಾಜಭಟರ ತಂಟೆಯೋ, ಯಮಕಿಂಕರರ ಭಯವೋ ಏನಿಲ್ಲ." ಎಂದನು.

ಜಯಶೀಲನು ಕೋಪದಿಂದ ಕತ್ತಿಯ ಮೊನೆಯನ್ನು ಅವನ ಗುಂಡಿಗೆಗೆ ತಾಗಿಸಿ, "ನಿಲ್ಲಿಸು. ನಾನು ಕೇಳಿದ ಪ್ರಶ್ನೆಗೆ ಉತ್ತರಕೊಟ್ಟು ಬಚಾವಾಗು. ಆ ನನ್ನ ಮಿತ್ರ ದೇವಶರ್ಮ ಒಳಗಿರುವನೋ ಇಲ್ಲವೋ ? ಬೊಗಳು " ಎಂದನು.

"ಅಯ್ಯಾ, ಕತ್ತಿಯನ್ನು ಒರೆಯೊಳಗಿರಿಸಿರಿ. ವೀರನಾದವನು ಮತ್ತೊಬ್ಬ ವೀರನೊಂದಿಗೆ ಪ್ರತಾಪ ತೋರಿಸಿದರೇನೇ ಲೋಕವು ಮೆಚ್ಚುತ್ತದಲ್ಲದೆ ನನ್ನಂಥ ಬಡಕಲನ ಮುಂದೆ ಇಷ್ಟು ದೊಡ್ಡ ಕತ್ತಿ ತೋರಿಸಬಹುದೇ ? ನನ್ನನ್ನು ಕೊಂದರೂ ನಿಮಗೆ ಅಪಕೀರ್ತಿ !" ಎಂದ ಜೂಜಿನ ಮನೆಯವ.

ಜಯಶೀಲನು ಕತ್ತಿಯನ್ನು ಒರೆಗಾಣಿಸಿ, ಅವನ ಕುತ್ತಿಗೆಯನ್ನು ಹಿಡಿದು ಹಿಂದೆ ಮುಂದೆ ಆಡಿಸುತ್ತ, "ಎಲೋ, ಮಾತು ಚೆನ್ನಾಗಿ ಆಡಲು ಬರುತ್ತದೆಂದು ನನ್ನನ್ನು ರೇಗಿಸಬೇಡ. ಬೇಗ ಹೇಳು. ನನ್ನ ಮಿತ್ರ ದೇವಶರ್ಮನೂ ಎಲ್ಲಿಗೋ ಹೊರಟು ಹೋದ, ಎಲ್ಲಿಗೆಂದು ಹೇಳಲಿಲ್ಲ." ಎಂದ ಜೂಜಿನ ಮನೆಯವ.

"ಇಷ್ಟು ಹೇಳಲಿಕ್ಕೆ ಎಷ್ಟು ಗೋಳು !" ಎಂದು ಹೇಳಿ ಜಯಶೀಲನು ಅಲ್ಲಿಂದ ಹೊರಟು ಬೀದಿಗಿಳಿದನು. ಈಗ ಅವನಿಗೆ ದೇಶಬಿಟ್ಟು ಹೊರಟು ಹೋಗುವುದರ ಹೊರತು ಬೇರೆ ಮಾರ್ಗ ತೋರಲಿಲ್ಲ. ಕಾಲ ಕೂಡಿ ಬಂದರೆ ಯಾವಾಗ ಬೇಕಾದರೂ ದೇವಶರ್ಮನನ್ನು ನೋಡಬಹುದು. ಹೀಗೆ ಯೋಚಿಸುತ್ತಾ ಜಯಶೀಲನು ನಗರವನ್ನು ಬಿಟ್ಟು ಗ್ರಾಮಗಳಲ್ಲಿ ಹಾದು, ನದಿ ದಾಟಿ ಗುಡ್ಡಗಳನ್ನೇರಿ ಇಳಿದು ಅರಣ್ಯಮಾರ್ಗ ಹಿಡಿದನು. ಹೀಗೆ ಅವನು ಒಂದು ವಾರದವರೆಗೆ ಪ್ರಯಾಣ ಮಾಡಿ, ಅರಣ್ಯಮಾರ್ಗದಲ್ಲಿ ದೊರಕಿದ ಹಣ್ಣುಕಾಯಿಗಳನ್ನು ತಿನ್ನುತ್ತ ಒಂದು ದಿನ ಸೂರ್ಯನು ಮುಳುಗುವ ಹೊತ್ತಿಗೆ ಮತ್ತೊಂದು ದೇಶದ ರಾಜಧಾನೀ ನಗರವನ್ನು ಸಮೀಪಿಸಿದನು. (ಮುಂದುವರಿಯುವುದು)





March 1976

# ಮಾಯಾಸರೋವರ

೧

[ದುರ್ವ್ಯಸನಗಳಿಗೆ ಗುರಿಯಾದ ಜಯಶೀಲನೆಂಬ ಯುವಕನು ತಂದೆಯ ಆಸ್ತಿಯನ್ನೆಲ್ಲಾ ಕಳೆದುಕೊಂಡ. ಆ ಸ್ಥಿತಿಯಲ್ಲಿ ಅವನಿಗೆ ಜೂಜಿನಮನೆಯಲ್ಲಿ ಅಶ್ವದಳ ನಾಯಕನೊಂದಿಗೆ ವೈರವುಂಟಾಯಿತು. ರಾಜನು ಅವನಿಗೆ ದೇಶ ಬಹಿಷ್ಕಾರ ಶಿಕ್ಷೆ ವಿಧಿಸಿದನು. ಜಯಶೀಲನು ತನ್ನ ದೇಶಬಿಟ್ಟು ಬೇರೊಂದು ದೇಶದ ರಾಜಧಾನಿಯನ್ನು ತಲಪಿದನು. ಅನಂತರ–]

ರಾತ್ರಿಯ ಹೊತ್ತಿನಲ್ಲಿ ನಗರವನ್ನು ಪ್ರವೇಶಿಸಲು ಇಷ್ಟವಿಲ್ಲದೆ, ಜಯಶೀಲನು ಅಲ್ಲಿದ್ದ ಒಂದು ಆಲದ ಮರದ ಕೆಳಗೆ ಆ ರಾತ್ರಿಯನ್ನು ಕಳೆಯಲು ನಿರ್ಧರಿಸಿದನು. ಹೊಸಬನಾದ ತಾನು ರಾತ್ರಿಯಲ್ಲಿ ನಗರದೊಳಗೆ ತಿರುಗಿದರೆ ತನ್ನ ಕ್ಷೇಮಕ್ಕೆ ಭಂಗಬರಬಹುದೆಂದು ಅವನಿಗೆ ತೋರಿತು. ತನ್ನ ಹರಿದ ಬಟ್ಟೆ ಬರೆಗಳೂ, ಧೂಳು ಅಂಟಿಕೊಂಡ ಶರೀರವೂ ತಾನು ಹೊಸಬನೆಂಬುದನ್ನು ಡಂಗುರ ಸಾರುವಂತಿವೆ. ಈ ಸ್ಥಿತಿಯಲ್ಲಿ ರಾಜಭಟರು ನೋಡಿದರೆ ಕಳ್ಳನೋ ಘಾತುಕನೋ ಎಂದುಕೊಂಡು ಸೆರೆಮನೆಗೆ ಎಳೆದು ಕೊಂಡು ಹೋದರೂ ಹೋದರೇ! ಈ ದೇಶದ ಶಾಸನಗಳು ಹೇಗೋ ಎಂತಹವೋ? ಆದುದರಿಂದ ತುಂಬ ಜಾಗರೂಕತೆಯಿಂದಿರಬೇಕು.

ಹೀಗೆ ಆಲೋಚಿಸುತ್ತ ಜಯಶೀಲನು ಆಲದ ಮರದ ದಪ್ಪವಾದೊಂದು ಬೇರನ್ನು ತಲೆದಿಂಬಾಗಿ ಮಾಡಿಕೊಂಡು ಮಲಗಿದನು. ಸ್ವಲ್ಪ ಹೊತ್ತಿಗೆಲ್ಲಾ ನಿದ್ದೆಯಲ್ಲಿ ಮುಳುಗಿಹೋದನು. ಸರಿಯಾಗಿ ಮಧ್ಯ ರಾತ್ರಿಯ ಹೊತ್ತಿನಲ್ಲಿ ಇದ್ದಕ್ಕಿದ್ದಹಾಗೆ ಅವನಿಗೆ ಎಚ್ಚರವಾಯಿತು. ಸಮೀಪದಲ್ಲೇ ನರಿಗಳು ಊಳಿಡುವ ಶಬ್ದವು ಕೇಳುತ್ತಿದ್ದಿತು.



ಈ ಶಬ್ದವೇ ತನ್ನ ಎಚ್ಚರಕ್ಕೆ ಕಾರಣವೆಂದು ಕೊಂಡು ಎದ್ದು ಕುಳಿತು ಕಣ್ಣು ತೆರೆದು ಅತ್ತಿತ್ತ ನೋಡಿದನು. ತುಸು ದೂರದಲ್ಲಿ ಮರಗಳ ಮರೆಯಿಂದ ಬೆಳಕಿನ ಪ್ರಕಾಶವೂ, ಮೇಲೇಳುತ್ತಿರುವ ಹೊಗೆಯೂ ಕಂಡುಬಂದುವು. ನಿದ್ದೆಯ ಮಂಪರು ಪೂರಾ ಜಾರಿತು.

"ಓಹೋ! ನಾನು ಯಾವುದೋ ಸ್ಮಶಾನದ ಪಕ್ಕದ ಆಲದ ಮರದ ಆಶ್ರಯದಲ್ಲಿರುವ ಹಾಗಿದೆ. ಇಂತಹ ಸ್ಥಳಗಳಲ್ಲಿ ಭೂತಪ್ರೇತ ಪಿಶಾಚಿಗಳು ತಿರುಗುತ್ತವೆಂದು ಹೇಳುತ್ತಾರೆ. ಈ ಮರದ ಮೇಲೆ ಅಂತಹವೇನಾದರೂ ಇವೆಯೇನು?" ಎಂದುಕೊಂಡು ಜಯಶೀಲನು ಮೇಲೆ ನೋಡಿದನು. ಎಲೆಗಳಿಂದ ಕೇವಲ ಕರೀ ಕತ್ತಲೆಯ ಗುಂಪೇ ಕಾಣಿಸಿತಲ್ಲದೆ, ಯಾವ ಭೂತವೂ ಇರುವ ಸೂಚನೆ ಕಾಣಲಿಲ್ಲ.

ತನ್ನ ಅನುಮಾನಕ್ಕಾಗಿ ತಾನೇ ನಕ್ಕನು. ತನ್ನ ಕತ್ತಿಯನ್ನು ಮುಟ್ಟಿ ನೋಡಿಕೊಂಡು, ಮತ್ತೆ ಮಲಗಿ ಕಣ್ಣು ಮುಚ್ಚಿಕೊಂಡನು. ಈ ಸಾರಿ ಅವನಿಗೆ ನಿದ್ದೆ ಹಿಡಿಯುವ ಸಮಯದಲ್ಲಿ ಯಾರೋ ಓಡುತ್ತಿರುವಂತೆ ಶಬ್ದವಾಗಿ ದೂರದಿಂದ, "ಅಯ್ಯೋ! ರಕ್ಷಿಸಿರಿ! ಮಹಾಕಾಲನು ನನ್ನನ್ನು ನುಂಗುತ್ತಾನಲ್ಲಾ!" ಎಂ ಆರ್ತನಾದವು ಅವನ ಕಿವಿಗೆ ಹೊಡೆದು ಮ ಸಮೀಪಿಸುವ ನಿದ್ದೆಯನ್ನು ಓಡಿಸಿಬಿಟ್ಟಿತು.

ಜಯಶೀಲನು ಚಟಕ್ಕನೆ ಎದ್ದುನಿಂತು ಕತ್ತಿ ಹಿಡಿದು ಶಬ್ದ ಬಂದ ದಿಕ್ಕಿಗೆ ಓಡಿದನು. ಅದೊಂದು ಸ್ಮಶಾ ವೆಂಬುದು ನಿಜವೇ. ದೂರ ದೂರದಲ್ಲಿ ಎರಡು ಮೂರು ಶವಗಳು ಉರಿಯುತ್ತಿದ್ದವು. ಆ ಉರಿಗ ಪ್ರಕಾಶದಲ್ಲಿ ಕರಿಯ ಬಟ್ಟೆಗಳನ್ನು ಧರಿಸಿ, ದಟ್ಟವಾ ಬಿಚ್ಚು ಗೂದಲಿನಿಂದ ಒಬ್ಬನು ಓಡುತ್ತಿದ್ದಾನೆ. ತಲೆ ಯಿಂದ ಪಾದದವರೆಗೂ ಬಿಳೀ ಬಟ್ಟೆ ಧರಿಸಿ ಮಾನವಾಕಾರವೊಂದು ಅವನನ್ನು ಓಡಿಸಿಕೊಂ ಹೋಗುತ್ತಿದೆ.

ಜಯಶೀಲನು ಕತ್ತಿಯನ್ನು ಮೇಲಕ್ಕೆತ್ತಿ ಆರ್ತ ನಾದ ಮಾಡುತ್ತ ಓಡುವವನ ಕಡೆಗೆ ಓಡಿ, "ಹೆದ ಬೇಡ! ನಿನ್ನನ್ನು ಕೊಲ್ಲಲು ಬರುವ ಆ ದುಷ್ಟನನ್ನು ನನ್ನ ಕತ್ತಿಗೆ ಬಲಿಗೊಡುತ್ತೇನೆ." ಎಂದು ಗಟ್ಟಿಯಾಗಿ ಕೂಗಿದನು.

ಜಯಶೀಲನ ಅಭಯವಾಣಿಯನ್ನು ಕೇಳಿ ಕರಿ ಬಟ್ಟೆಯವನು ಅವನ ಕಡೆಗೇ ಓಡಿಬರತೊಡಗಿದನು. ಅವನನ್ನು ಓಡಿಸುವ ಬಿಳೀ ಆಕಾರವು, "ನಿಲ್ಲು! ನಿಲ್ಲು! ಮಹಾಕಾಲನ ಬಂಟನಾದ ಈ ಕಾಲಕಾಲನನ್ನು ನೋಡಿಯೇ ಹೆದರಿ ಸಾಯುವಿಯಲ್ಲಾ? ಅಂಥವ ಮಹಾಕಾಲನನ್ನೇ ಆವಾಹನೆ ಮಾಡಲು ನೋಡು ದೆಂದರೇನು? ಹೆಮ್ಮೆ ನೆತ್ತಿಗೇರಿತೇ?" ಎಂದ ಕೂಗುತ್ತಾ ಬಂದನು.

ಜಯಶೀಲನು ಆ ಕಾಲಕಾಲನೆಂದು ಹೇ ಕೊಳ್ಳುವವನನ್ನು ಅಡ್ಡಗಟ್ಟಿ, "ಎಲವೋ, ನೀ ಎಂಥವನಾದರೂ ನನಗೇನೂ ಭಯವಿಲ್ಲ. ನಿನ್ನ

ದರಿ ಬೆನ್ನು ತೋರಿಸಿ ಓಡುವವನನ್ನು ಬೆನ್ನಟ್ಟಿ
ಂದು ಕೊಲ್ಲಲು ನೋಡುವುದು ಮಹಾ ಅನ್ಯಾಯ.
ನು ಸಹಿಸಲಾರೆ" ಎಂದನು.

ಜಯಶೀಲನ ಮಾತು ಕೇಳಿ ಕಾಲಕಾಲನು ವಿಕೃತ
ಗಿ ನಕ್ಕು, "ಶಾಭಾಸ್! ಯುವಕನೇ! ನಿನ್ನಲ್ಲಿ
ಟ್ಟಿ ಮಟ್ಟಿಗೆ ವೀರತ್ವದ ಲಕ್ಷಣವಿದೆ. ಇಕೋ, ಈಗ
ೋಡು ನನ್ನ ನಿಜರೂಪವನ್ನು!" ಎಂದು ಹೇಳಿ
ನು ತೊಟ್ಟುಕೊಂಡಿದ್ದ ಬಿಳೀ ವಸ್ತ್ರವನ್ನು ಎತ್ತಿ
ರ ಬಿಸುಟನು. ಈಗ ಆ ಕಾಲಕಾಲನ ಮುದಿ
ಪ ಅತಿಭಯಂಕರವಾಗಿ ತೋರಿತು. ಕುಚ್ಚುಗಡ್ಡ,
ಮೂಗುಗಳಲ್ಲಿ ಮುರಿಗೆಗಳಿಂದ, ಕರ್ರಗಿನ ಶರೀರ
ಯಿಂದ, ಕಿಡಿಗಳನ್ನುದುರಿಸುವ ಕಣ್ಣುಗಳಿಂದ,
ಯೂ ಹೊಗೆಯೂ ಹೊರಡುವ ಬಾಯಿ
ಂದ ಭಯಂಕರವಾಗಿ ಗರ್ಜಿಸಿದನು.

ಜಯಶೀಲನು ಕೆಲವು ಕ್ಷಣ ನಿಶ್ಚೇಷ್ಟಿತನಾದನು.
ರೆ ಅಷ್ಟರಲ್ಲೇ ಅರಿವಿಗೆ ಬಂದು, ತನ್ನ ಕತ್ತಿಯನ್ನು
ಲಕಾಲನ ಗುಂಡಿಗೆಗೆ ಗುರಿಹಿಡಿದು, "ನಿನ್ನ ವಿಕಾರ
ಪವನ್ನು ನೋಡಿ, ನಾನು ಹೆದರುವೆನೆಂದು ತಿಳಿಯು
ೇ. ಓಡುವವನ ಬೆನ್ನಟ್ಟಿ ಕೊಲ್ಲಲಿರುವ ನೀನು
ವ ಜಾತಿಗೆ ಸೇರಿದ ಅಂಜುಗುಳಿಯೋ? ನಾಚಿಕೆ
!" ಎಂದನು.

ಕಾಲಕಾಲನು ಹುಂಕಾರದೊಂದಿಗೆ ಒಂದಡಿ ಹಿಂದ
"ಎಲೋ ಯುವಕನೇ! ನನ್ನ ನಿಜರೂಪ
ನೋಡಿಯೂ ಹೆದರದೆ ನನ್ನನ್ನೇ ಹೆದರಿ
ಯಲ್ಲಾ! ನಿನ್ನ ಅಗಾಧವಾದ ಧೈರ್ಯಕ್ಕೆ ಮೆಚ್ಚು
ಸೂಕ್ಷ್ಮ ಹೇಳುತ್ತೇನೆ ಕೇಳು. ಅಮಾನುಷ
ಳನ್ನು ಮಹಾಸತ್ವಶಾಲಿಗಳಷ್ಟೇ ತಮ್ಮ ಅಧೀನ
ಕೊಳ್ಳುತ್ತಾರೆ. ಈಗ ನನ್ನನ್ನು ಆವಾಹನೆ
ದ ಈ ಸಿದ್ಧಸಾಧಕನು ಅಲ್ಪಸತ್ವದವನು.
ವನನ್ನು ಜೀವದೊಂದಿಗೆ ಬಿಡಬಾರದು. ತಿಳಿಯಿ
? ಅಡ್ಡದಿ ತೊಲಗು!" ಎನ್ನುತ್ತಾ ಮುಂದೆ
ದ ಮಾ



ಹಾರಲು ನೋಡಿದನು. ಆದರೂ ಬಿಡದೆ ಜಯಶೀಲನು ಹಾಗೇ ನಿಂತು ಕತ್ತಿಯನ್ನು ಕಾಲಕಾಲನ ವಕ್ಷಸ್ಥಳಕ್ಕೆ ಅಡ್ಡಹಿಡಿದು, ಆರ್ತನಾದ ಮಾಡಿ ಓಡಿದ ಸಿದ್ಧಸಾಧಕನು ಎತ್ತ ಓಡಿದನೆಂದು ಹಿಂತಿರುಗಿ ನೋಡಿದನು. ಆ ಸಾಧಕನು ವಿಪರೀತ ಭಯದಿಂದ ತಪ್ಪಿಸಿಕೊಂಡುಹೋಗಲು ಸರಿಯಾದ ಮಾರ್ಗವನ್ನು ಕಾಣದೆ, ಆ ಸ್ಮಶಾನದಲ್ಲೇ ಇನ್ನೂ ಆರ್ತನಾದ ಮಾಡುತ್ತಾ ತಿರುಗುತ್ತಿದ್ದನು.

ಜಯಶೀಲನು ತಾನು ಆ ಸಿದ್ಧಸಾಧಕನ ಬಳಿಗೆ ಹೋಗಿ ಅವನಿಗೆ ಧೈರ್ಯ ಹೇಳುವುದು ಒಳ್ಳೆಯದೆಂದುಕೊಂಡನು. ಅಷ್ಟರೊಳಗೆ ಕಾಲಕಾಲನು ಹುಮ್ಮೆಂದು ಹುಂಕರಿಸಿ ಕತ್ತಿಯನ್ನು ಬದಿಗೆ ದೂಡಿದನು. ಆದುದರಿಂದ ಜಯಶೀಲನು ಕತ್ತಿಯನ್ನೆತ್ತಿ ಕಾಲಕಾಲನ ಕಂಠಪ್ರದೇಶಕ್ಕೆ ಹೊಡೆದನು. ಆ ಪೆಟ್ಟಿಗೆ ಅವನ ತಲೆ ಮುಂಡದಿಂದ ಬೇರಾಗಿ ಅಷ್ಟು ದೂರ ಹೋಗಿ ಬಿತ್ತು.

165



ಆಗ ಆ ತಲೆ ಗಟ್ಟಿಯಾಗಿ ನಗುತ್ತ, "ಯುವಕನೇ! ನಿಃಸಂಶಯವಾಗಿಯೂ ನೀನು ಮಹಾವೀರನೇ ಸರಿ. ನನ್ನ ಕಂಠದ ರಕ್ತದಿಂದ ಒದ್ದೆಯಾದ ನಿನ್ನ ಕತ್ತಿಗೆ ಅಮೋಘ ಶಕ್ತಿಯುಂಟಾಯಿತು. ಇನ್ನು ನಿನ್ನ ಶಕ್ತಿಗೆ ಯಾವ ಕೊರತೆಯೂ ಇಲ್ಲ. ಹೋಗು! ನಿನ್ನ ಕೋರಿಕೆಗಳೆಲ್ಲವನ್ನೂ ಸಾಧಿಸಿಕೋ" ಎಂದಿತು.

ಆ ಮಾತುಗಳನ್ನು ಕೇಳಿ ಜಯಶೀಲನು ಆಶ್ಚರ್ಯಪಟ್ಟನು. ಕೆಲವು ಕ್ಷಣ ಏನು ಹೇಳಲೂ ತೋರದೆ ಸ್ತಂಭದಂತಿದ್ದು ಬಳಿಕ ಎಚ್ಚರಕ್ಕೆ ಬಂದು, "ಕಾಲಕಾಲಾ! ನಾನೇನೋ ಅದ್ಭುತ ಕಾರ್ಯ ಸಾಧಿಸಬೇಕೆಂದು ಮನೆಬಿಟ್ಟವನಲ್ಲ. ಅಂತಹ ನನಗೆ ದೊಡ್ಡ ದೊಡ್ಡ ಅಮಾನುಷ ಶಕ್ತಿಗಳಿಂದ ಏನಾಗಬೇಕಾಗಿದೆ? ಜೀವನೋಪಾಧಿಗೆ ಯಾವ ರಾಜನ ಆಶ್ರಯದಲ್ಲಾದರೂ ಚಿಕ್ಕದೊಂದು ಉದ್ಯೋಗ ದೊರಕಿದರೂ ಸಾಕು. ಅಷ್ಟರಿಂದಲೇ ತೃಪ್ತನಾಗುತ್ತೇನೆ" ಎಂದನು. ಆದರೆ ಈಗ ಕಾಲಕಾಲನ ತಲೆಯಿಂದ ಯಾವ

ಶಬ್ದವೂ ಹೊರಡಲಿಲ್ಲ. ಹೀಗೆ ಸತ್ತುಬಿದ್ದವ
ಯಾವ ಮಹನೀಯನೋ? ಅವನ ಕಿವಿಮೂ
ಗಳಲ್ಲಿ ಉರುಟಾದ ಬೆಳ್ಳಿಯ ಮುರಿಗೆಗಳಿದ್ದು
ಮೂಗಿನ ಕೆಳಗೆ ಕುಚ್ಚು ಮೀಸೆ. ಕೊರಳಲ್ಲಿ ಗ
ಯಾಗಿ ಸುತ್ತಲ್ಪಟ್ಟ ಮಣಿಗಳ ಮಾಲೆ.

ಅವುಗಳನ್ನು ನೋಡುತ್ತ ಜಯಶೀಲನು ಕ
ಯನ್ನು ಒರೆಯೊಳಗೆ ಹೊಗಿಸಿ, ಆರ್ತನಾದ ಮಾ
ವವನು ಎಲ್ಲಿದ್ದಾನೆಂದು ಸುತ್ತಲೂ ನೋಡಿದ

ಈಗ ಅವನು ಅಲ್ಲೆಲ್ಲಿಯೂ ಕಾಣಿಸಲಿಲ್ಲ. ಅವ
ಹೋಗಿರಬಹುದು? ಭೀತಿಯಿಂದ ಎದೆಯೊಡೆ
ಎಲ್ಲಿಯಾದರೂ ಸತ್ತುಬಿದ್ದನೋ! ಯೋಚಿಸು
ಜಯಶೀಲನು ಅವನನ್ನು ಹುಡುಕುತ್ತ ಅಲ್ಲ
ತಿರುಗಾಡಿ, ಕಡೆಗೆ ತಾನು ಮೊದಲು ಮಲಗಿದ್ದ ಆಲ
ಮರದ ಕಡೆಗೇ ನಡೆಯತೊಡಗಿದ. ಅಲ್ಲೆಲ್ಲಿಯ
ಆ ಓಡಿದವನ ಸುಳಿವೇ ಇರಲಿಲ್ಲ.

ಈಗ ಆ ಮರದ ಕೊಂಬೆಯಲ್ಲಿ ಗೂಗೆ
ಗೂಂಕಾರವು ಕೇಳಬರತೊಡಗಿತ್ತು. ದೂರದಲ್ಲಿ
ಗಳು ಇನ್ನೂ ಊಳಿಡುತ್ತಿದ್ದವು. ಈ ಸ್ಥಿತಿಯ
ತಾನು ಆ ಮರದ ಬುಡದಲ್ಲಿ ನೆಮ್ಮದಿಯಾಗಿ
ಗಲು ಸಾಧ್ಯವಿಲ್ಲವೆಂದು ಅವನಿಗೆ ತೋರಿತು. ಅ
ದಾಹದಿಂದ ಅವನ ನಾಲಿಗೆ ಒಣಗತೊಡಗಿ
ನೀರೆಲ್ಲಿದೆ?

"ರಾತ್ರಿ ಮೂರನೇ ಜಾಮ ಕಳೆದಹಾಗಿದೆ. ಇ
ಸಮೀಪದಲ್ಲಿ ಕೊಳವೋ ಕುಂಟೆಯೋ ಇರು
ಸ್ವಲ್ಪ ನೀರು ಕುಡಿಯಬಹುದಿತ್ತು. ಒಳ್ಳೆಯ
ಸ್ನಾನ ಕೂಡಾ ಮಾಡಿದರೆ ಬೆಳಗಾದ ಕೂಡಲೇ
ದೊಳಗೆ ಪ್ರವೇಶಿಸಲು ಚೆನ್ನಾಗಿರುತ್ತೆ. ಬಟ್ಟೆ
ಬರಕಾಗಿದ್ದರೂ ಸ್ವಲ್ಪ ಒಗೆದರೆ ಪರವಾಗಿಲ್ಲ.
ಯಲ್ಲಿ ಈ ಕತ್ತಿ ನೇತಾಡುತ್ತಿದ್ದರೆ, ಇದರ ಹಿಡಿ
ರುವ ಕುಸುರಿ ಕೆಲಸ ನೋಡಿದರೆ ನಾನೊಬ್ಬ ದೊ
ಕುಲೀನನೆಂದೇ ಜನರಿಗೆ ಕಾಣ ಬಟ್ಟೆ





ಹೋಗಲು ಕಾರಣವೇನೆಂದು ಕೇಳಿದವರಿಗೆ, ಕಾಡಿನಲ್ಲಿ ಒಂದು ಸಿಂಹವನ್ನೆದಿರಿಸಿ ಹೋರಾಹೋರಿ ನಡೆಸಿ ಪಾರಾಗಿಬಂದನೆಂದು ಹೇಳಿದರಾಯಿತು." ಎಂದು ಕೊಳ್ಳುತ್ತಾ, ಜಯಶೀಲನು ಯಾವುದಾದರೊಂದು ಊರು ಸಿಗಬಹುದೆಂಬ ಆಶೆಯಿಂದ ಆಲದ ಮರದ ಬುಡದಿಂದ ಆಚೆಗೆ ಹೊರಟನು.

ಹಾಗೆ ಅವನು ಸ್ವಲ್ಪದೂರ ನಡೆಯಲು, ತುಸು ದೂರದಲ್ಲಿ ಒಂದು ಸಣ್ಣ ಮನೆಯಿರುವಂತೆ ಕಂಡಿತು. ಆ ಮನೆಯ ಕಿಟಕಿಯಿಂದ ದೀಪದ ಬೆಳಕು ಕಾಣಿಸು ತ್ತಿತ್ತು. ಅಲ್ಲಿಗೆ ಹೋಗಿ ಮೊದಲು ಬಾಯಾರಿಕೆ ತೀರಿಸಿಕೊಳ್ಳಬೇಕೆಂದುಕೊಂಡು ಜಯಶೀಲನು ಬೇಗ ಬೇಗನೆ ಆ ಮನೆಯ ಮುಂದೆ ಹೋಗಿ, "ಅಯ್ಯಾ, ನಾನೊಬ್ಬ ದಾರಿಹೋಕ. ತುಂಬ ದಣಿದಿದ್ದೇನೆ. ದಯ ಮಾಡಿ ಒಂದಿಷ್ಟು ನೀರು ಕೊಟ್ಟು ಬಾಯಾರಿಕೆ ತೀರಿಸುವಿರಾ ?" ಎಂದು ಕೂಗಿ ಕರೆದನು. ಆ ಕೂಡಲೇ ಮನೆಯ ಬಾಗಿಲು ತೆರೆದು,

ಮುದುಕಿಯೊಬ್ಬಳು ದೀಪವನ್ನು ಕೈಯಲ್ಲಿ ಹಿಡಿ ಕೊಂಡು ಹೊರಗಿನ ಕತ್ತಲೆಯನ್ನು ನೋಡುತ್ತ "ಯಾರಪ್ಪಾ? ಈ ರಾತ್ರಿಯಲ್ಲಿ ಎಂತಹ ಪ್ರಯಾಣ ಕತ್ತಲೆಯಾದ ಕೂಡಲೇ ಯಾವುದಾದರೊಂದು ದಲ್ಲಿ ಮಲಗದೆ, ರಾತ್ರಿಯಲ್ಲಿಯೂ ಪ್ರಯಾಣವೆ ಸರಿ, ಒಳಗೆ ಬಾರಪ್ಪ, ನೀರು ಕೊಡುತ್ತೇನೆ ಎಂದಳು ಆದರದಿಂದ.

ಜಯಶೀಲನು ಒಳಗೆ ಹೋದನು. ಮುದು ದೀಪದ ಕಾಂತಿಯಲ್ಲಿ ಅವನನ್ನು ಪರೀಕ್ಷಿಸಿ ನೋ ಆಶ್ಚರ್ಯಪಡುತ್ತ, "ಇನ್ನೂ ಹುಡುಗ ! ಯಾರೋ ತೀರ್ಥಯಾತ್ರೆಗೆ ಹೋಗುವ ಮುದುಕರೇನೋ ಅಂದುಕೊಂಡೆ. ಇದೇನಪ್ಪ ? ಇಷ್ಟು ಚಿಕ್ಕ ವಯ ನಲ್ಲಿ ದೊಡ್ಡ ಕತ್ತಿಯನ್ನು ನಡುವಿಗೆ ಕಟ್ಟಿಕೊಂ ಅರ್ಧರಾತ್ರಿ ಹೊತ್ತಿನಲ್ಲಿ ಸ್ಮಶಾನದ ಹತ್ತಿರ ತಿರು ತ್ತಿರುವಿಯಲ್ಲಾ ? ದಾರಿ ತಪ್ಪಿತೋ ಅಲ್ಲ ಉದ್ದೆ ವಿಟ್ಟುಕೊಂಡೇ ಬಂದಿಯಾ ?" ಎಂದಳು.

ಜಯಶೀಲನು ಉತ್ತರ ಕೊಡಲು ಬಾಯಿ ದನು. ಮುದುಕಿ ಅವನನ್ನು ತಡೆದು "ಅಯ್ಯೋ ಪಾಪ, ನೀರು ಕೇಳಿದೆಯಲ್ಲವೆ ? ಮೊದಲು ಬಾಯ ರಿಕೆ ತೀರಿಸಿಕೋ, ನೀರು ತರುತ್ತೇನೆ. ಅಕೋ ಅ ಮೇಲೆ ಕುಳಿತುಕೋಪ್ಪ" ಎಂದು ಸಣ್ಣದೊಂ ಮೇಜನ್ನು ತೋರಿಸಿದಳು. ಬೇಗ ಬೇಗನೇ ಒ ಹೋಗಿ ಒಂದು ಲೋಟ ತುಂಬ ನೀರು ತಂ ಅವನಿಗೆ ಕೊಟ್ಟಳು.


ಜಯಶೀಲನು ನೀರನ್ನು ಗಳಗಳನೆ ಕುಡಿ "ಅಬ್ಬ! ಅವ್ವಾ, ಈ ದಿನ ನಿಮ್ಮಿಂದ ನನ್ನ ಪ್ರಾ ಉಳಿಯಿತು. ಈ ಮನೆಯಲ್ಲಿ ಬೇರೆ ಯಾರೂ ಇ ವಂತೆ ಕಾಣುವುದಿಲ್ಲವಲ್ಲ ?" ಎಂದು ಆಚ ನೋಡಿದನು.

"ಇಲ್ಲಪ್ಪ, ಯಾರೂ ಇಲ್ಲ. ನನಗೆ ಮಕ್ಕ ಹುಟ್ಟಲಿಲ್ಲ. ನನ್ನ ಗಂಡ ತೀರಿಹೋಗಿ ಒಂದು ವ

ಯಿತು. ಅವರು ರಾಜನ ಆಶ್ರಯದಲ್ಲಿದ್ದವರು. ಅವರು ತೀರಿಹೋದ ಮೇಲೆ, ಆಧಾರ ತಪ್ಪಿದ ನನಗೆ ಮಹಾರಾಜರು ನನ್ನ ಗಂಡನ ಸಂಬಳದ ಮೂರನೇ ಒಂದಂಶವನ್ನು ಭರಣವಾಗಿ ಕೊಡುತ್ತಿದ್ದಾರೆ. ನನಗೆ ಅದೇ ಯಥೇಷ್ಟವಾಯಿತು. ಅದೊಂದರ ಆಧಾರ ದಲ್ಲಿ ನಾನು ಒಂಟಿಯಾಗಿ ಕೃಷ್ಣಾರಾಮಾ ಎಂದು ದಿನ ಕಳೆಯುತ್ತ ಈ ಊರ ಹೊರಗಿನ ಈ ಮನೆ ಯಲ್ಲಿದ್ದೇನೆ. ನಿನ್ನ ಹಾಗೆ ಯಾರಾದರೂ ಬಂದರೆ ಕೈಲಾದ ಸಹಾಯ ಮಾಡುತ್ತೇನೆ. ನಿನಗೆ ಬರೀ ನೀರು ಸಾಕೋ? ತಿನ್ನಲೇನಾದರೂ ತಯಾರಿಸ ಬೇಕೋ? ಏನೂ ದಾಕ್ಷಿಣ್ಯ ಮಾಡದೇ ಕೇಳಪ್ಪ'' ಎಂದಳು ಮುದುಕಿ.

''ಅಮ್ಮಾ, ಅದೇನೂ ಬೇಡಮ್ಮಾ. ನಾನು ಈ ಪ್ರಾಂತಕ್ಕೆ ಹೊಸದಾಗಿ ಬಂದವನು. ಇದರ ಪಕ್ಕ ದಲ್ಲಿರುವ ನಗರದ ಹೆಸರೇನೋ? ರಾಜನ ಸ್ವಭಾವ ಹೇಗೋ? ನನ್ನಂಥವನನ್ನು ಆದರಿಸಬಲ್ಲನೆ? ಅವರ ಚರಿತ ಹೇಗಿದೆ ಎಂಬುದನ್ನಿಷ್ಟು ಹೇಳಬಲ್ಲೆಯಾ?'' ಎಂದು ಕೇಳಿದ ಜಯಶೀಲ.

ಆ ಪ್ರಶ್ನೆಗಳನ್ನು ಕೇಳಿ ಮುದುಕಿ ಸಣ್ಣದೊಂದು ನಿಟ್ಟುಸಿರುಬಿಟ್ಟು, ''ನಗರದ ಹೆಸರು ಹಿರಣ್ಯಪುರ. ರಾಜನ ಹೆಸರು ಕನಕಾಕ್ಷ. ಪ್ರಜೆಗಳ ಹಿತವನ್ನೇ ನೋಡುತ್ತ ಒಳ್ಳೆಯದಾಗಿಯೇ ಪರಿಪಾಲನೆ ಮಾಡು ತ್ತಾನೆ. ಧರ್ಮಾತ್ಮ. ಆದರೆ ಈ ನಡುವೆ ಒಂದು ತಿಂಗಳ ಹಿಂದೆ, ಮದುವೆಯ ವಯಸ್ಸಿಗೆ ಬಂದ ಅವನ ಮಗಳನ್ನೂ, ಯುವರಾಜನಾಗಿ ಪಟ್ಟಾಭಿಷೇಕ ಮಾಡಿಸಿಕೊಳ್ಳಲಿದ್ದ ಅವನ ಮಗನನ್ನೂ, ಯಾರೋ ಅಪಹರಿಸಿಕೊಂಡು ಹೋಗಿದ್ದಾರೆ. ಆ ದಿನದಿಂದಲೂ ಮಹಾರಾಜರು ದುಃಖದಿಂದ, ಚಿಂತೆಯಿಂದು ಮಂಚ ಹಿಡಿದಿದ್ದಾರೆ. ಎಲ್ಲರಿಗೂ ಅದೇ ಚಿಂತೆಯಾಗಿದೆ. ರಾಜನ ಚಿಂತೆಯೇ ಪ್ರಜೆಗಳಿಗೂ ಹಿಡಿದಿದೆ. ಯಾರಿಗೂ ಏನೂ ತೋರುವುದಿಲ್ಲ'' ಎಂದಳು.



ಇದನ್ನು ಕೇಳಿ ಜಯಶೀಲನಿಗೂ ಚಿಂತೆಯಾಯಿತು. ಮಗನನ್ನೂ ಮಗಳನ್ನೂ ಕಳೆದುಕೊಂಡು ದುಃಖ ದಲ್ಲಿರುವ ರಾಜನ ಹತ್ತಿರ ಹೋಗಿ ತನಗೇನಾದರೂ ಉದ್ಯೋಗ ಕೊಡಬೇಕೆಂದು ಕೇಳುವುದು ಹೇಗೆ? ಎಂದು ತೋರಿತು. ಆ ಕೂಡಲೇ ಇನ್ನೊಂದು ಯೋಚನೆಯೂ ಬಂತು. ಈ ಸಂದರ್ಭದಲ್ಲಿ ತನ್ನ ಹೊಟ್ಟೆ ತುಂಬಿಸುವ ಆಲೋಚನೆಗಿಂತಲೂ ಮುಖ್ಯ ವಾಗಿ ರಾಜನ ಚಿಂತೆಗೆ ಕಾರಣವಾದ ವಿವರಗಳನ್ನು ತಿಳಿದು ತನ್ನಿಂದೇನಾದರೂ ನಿವೃತ್ತಿ ಮಾಡಲು ಸಾಧ್ಯ ವಾದರೆ? ಕೇಳದೆಯೇ ಕೋರಿಕೆ ಈಡೇರಿಬಿಡುತ್ತದೆ.

''ಅಮ್ಮಾ, ರಾಜಕುಮಾರನನ್ನೂ ಕುಮಾರಿ ಯನ್ನೂ ಯಾವ ಶತ್ರು ರಾಜನೋ ಎತ್ತಿಕೊಂಡು ಹೋಗಿರಬೇಕೆಂದು ಕಾಣುತ್ತದೆ. ಇದರ ವಿಷಯದಲ್ಲಿ ಯಾರಾದರೂ ಏನಾದರೂ ಊಹಾಪೋಹ ಮಾಡಿ ಮಾತಾಡುವುದನ್ನು ನೀನು ಕೇಳಿರುವೆಯಾ?'' ಎಂದು ಕೇಳಿದ ಜಯಶೀಲ.

"ಹಾಗೆ ನಡೆದಿದ್ದರೆ ಇಷ್ಟು ದೊಡ್ಡ ಸಮಸ್ಯೆ ಇರುತ್ತಿರಲಿಲ್ಲ. ಆ ಶತ್ರು ರಾಜನನ್ನು ಹತಮಾಡಿ ತಮ್ಮ ಕುಮಾರ-ಕುಮಾರಿಯನ್ನು ಯಾವಾಗಲೋ ಬಿಡಿಸಿಕೊಂಡು ಬರುತ್ತಿದ್ದರು. ಅಷ್ಟೆಲ್ಲ ಶಕ್ತಿ ನಮ್ಮ ಕಮಲಾಕ್ಷ ರಾಜರಿಗಿದೆ. ಆದರೆ ಈ ಅಪಹರಣ ಮಾಡಿದವನು ಯಾರೋ ಅಮಾನುಷ ಶಕ್ತಿಯುಳ್ಳ ರಾಕ್ಷಸನೋ ಯಕ್ಷನೋ ಎಂದಲ್ಲವೇ ಜನರು ಊಹಿಸಿಕೊಳ್ಳುತ್ತಿದ್ದಾರೆ! ಪಾಪ! ಇಂಥಾ ಆಪತ್ತು ನಮ್ಮ ರಾಜನಿಗೆ ಏಕೆ ಬರಬೇಕೋ! ಪ್ರಾರಬ್ಧವೆನ್ನದೆ ಮತ್ತೇನು ಹೇಳಲಿ?" ಎಂದಳು ಮುದುಕಿ.

ಅವಳ ಮಾತು ಗಕ್ಕನೆ ನಿಂತುಹೋಯಿತು. ಕಾರಣವೇನೆಂದರೆ ಆಗಲೇ ಮನೆಯ ಮುಂದೆ ಕಲಕಲರವವು ಕೇಳಬಂದಿತು. ಒಬ್ಬನು ಅಳುಗೊರಲಿನಿಂದ. "ಅಯ್ಯಾ, ಸ್ಮಶಾನದಲ್ಲಿ ನನ್ನ ತಂದೆಯ ತಲೆ ಕಡಿದವನು ಈ ಕಡೆಗೇ ಬಂದ. ಈ ಬ್ರಾಹ್ಮಣಸ್ತ್ರೀಯ ಮನೆಯಲ್ಲಿ ದೀಪ ಬೆಳಗುವುದನ್ನು ನೋಡಿದರೆ ಅವನು ಈ ಮನೆಯಲ್ಲಿ ಅಡಗಿಕೊಂಡಿರುವನೋ ಏನೋ? ಅವಳನ್ನು ಕರೆದು ವಿಚಾರಿಸಿರಯ್ಯ!" ಎಂದು ಹೇಳುತ್ತಿದ್ದ.


"ಲೋ! ಎಂಥ ಸುಡುಗಾಡು ಕಾವಲುಗಾರನೋ ನೀನು? ಸುಮ್ಮನೆ ಬಾಯಿಮುಚ್ಚು. ಆ ಮಹಾವೀರನು ಕೊಂದದ್ದು ಭೂತಗಣಗಳ ಅಧಿಪತಿಯಾದ ಕಾಲಕಾಲನನ್ನು. ನಂಬು ನನ್ನ ಮಾತು. ಸಿದ್ಧಸಾಧಕನಾದ ನನಗೆ ಚೆನ್ನಾಗಿ ಗೊತ್ತಿದೆ." ಎಂದು ಕೋಪದಿಂದ ಹೇಳುತ್ತಿದ್ದಾನೆ ಇನ್ನೊಬ್ಬ.


ಅವರಿಬ್ಬರನ್ನೂ ಗದರಿಸುತ್ತ ಮತ್ತೊಂದು ಕಂಠ: "ನೀವಿಬ್ಬರೂ ಸ್ವಲ್ಪ ಬಾಯಿಮುಚ್ಚಿರಿ. ಸತ್ತುಹೋದ ಮುದುಕನಾದ ಸುಡುಗಾಡು ಕಾವಲುಗಾರ ಮತ್ತೆ ಹೇಗೆ ಬದುಕಿ ಬಂದಿದ್ದಾನೆ? ಇದನ್ನೆಲ್ಲ ಚೆನ್ನಾಗಿ ವಿಚಾರಿಸಿಕೊಂಡು ಬರುವಂತೆ ಮಂತ್ರಿಯವರು ನನ್ನನ್ನು ಕಳಿಸಿದ್ದಾರೆ. ನಗರರಕ್ಷಕನಾದ ನಾನು ಕೇಳುವುದಕ್ಕೆ ಸರಿಯಾದ ಉತ್ತರ ಕೊಡಿ. ಅಡ್ಡಡ್ಡವಾಗಿ ಬಾಯಿಗೆ ಬಂದ ಹಾಗೆ ಮಾತಾಡಬೇಡಿ. ಎಚ್ಚರ!"

ಈ ಸಂಭಾಷಣೆಗಳನ್ನು ಕೇಳುತ್ತಿದ್ದ ಜಯಶೀಲನು ಮುದುಕಿಯೊಂದಿಗೆ, "ಅಮ್ಮಾ, ನನ್ನನ್ನು ಹುಡುಕುತ್ತ ನಗರ ರಕ್ಷಕನು ರಾಜಭಟರೊಂದಿಗೆ ಬಂದ ಹಾಗಿದೆ? ಹಿಂದಿನ ಬಾಗಿಲಿನಿಂದ ಹೊರಗೆ ಹೋಗಿಬಿಡಲೆ?" ಎಂದು ಕೇಳಿದ.

ಮುದುಕಿ ಏನೋ ಹೇಳಲಿಕ್ಕಿರಲು, ನಗರರಕ್ಷಕನು ಮುಂಬಾಗಿಲನ್ನು ತಟ್ಟುತ್ತ "ಯಾರು ಒಳಗೆ! ಬೇಗನೆ ಬಾಗಿಲು ತೆರೆಯಿರಿ" ಎಂದು ಅಧಿಕಾರವಾಣಿಯಿಂದ ಕೂಗಿ ಹೇಳಿದನು.

(ಮುಂದುವರಿಯುವುದು)





# ಮಾಯಾಸರೋವರ

೩

[ಜಯಶೀಲನು ಮಧ್ಯರಾತ್ರಿಯಲ್ಲಿ ಕೇಳಿಸಿದ ಆರ್ತನಾದದಿಂದ ಎಚ್ಚೆತ್ತು ಹೋಗಿ, ಸ್ಮಶಾನದಲ್ಲಿರುವ ಪಿಶಾಚಾಕಾರದವನ ತಲೆಕಡಿದು ಸಿದ್ಧಸಾಧಕನನ್ನು ರಕ್ಷಿಸಿದನು. ತರುವಾಯ ಪಕ್ಕದಲ್ಲಿದ್ದೊಂದು ಮನೆಗೆ ಹೋಗಿ ಅಲ್ಲಿಯ ಮುದುಕಿಯೊಂದಿಗೆ ಮಾತಾಡುತ್ತಿರುವಾಗ ನಗರ ರಕ್ಷಕನು ಇಬ್ಬರು ಸೇವಕರೊಂದಿಗೆ ಬಂದು, ಬಾಗಿಲು ತಟ್ಟಿ ಕೂಗಿ ಕರೆದನು.—]

ನಗರ ರಕ್ಷಣಾಧಿಕಾರಿ ಇಂತಹ ರಾತ್ರಿಯ ಹೊತ್ತಲ್ಲದ ಹೊತ್ತಿನಲ್ಲಿ ತನ್ನ ಮನೆಗೆ ಬಂದು ಬಾಗಿಲು ಬಡೆದು ಗದ್ದಲ ಮಾಡುವುದೂ, ಕೂಗುವುದೂ ಆ ವೃದ್ಧೆಗೆ ಅಸಂದರ್ಭವಾಗಿ ತೋರಿತು. ಸಂದೇಹದಿಂದ ಆಕೆ ಬಾಗಿಲು ತೆರೆಯಲೋ ಬೇಡವೋ ಎಂಬಂತೆ ಬಾಗಿಲ ಬಳಿಗೆ ಹೋಗಿ ಇಣುಕಿ, ಜಯಶೀಲನನ್ನು ನೋಡಿ, "ಏನಪ್ಪಾ, ನೀನು ಏನಾದರೂ ದೊಡ್ಡ ತಪ್ಪುಗಿಪ್ಪು ಮಾಡಿ ರಾಜಭಟರಿಗೆ ಸಿಕ್ಕದೆ ತಪ್ಪಿಸಿಕೊಂಡು ಬಂದವನಲ್ಲ ತಾನೆ?" ಎಂದು ಕೇಳಿದಳು.

"ಹಾಗೇನಿಲ್ಲಮ್ಮ. ಅಂತಹ ಯಾವ ತಪ್ಪನ್ನೂ ನಾನು ಮಾಡಿಲ್ಲ. ಬದುಕುವ ದಾರಿ ಹುಡುಕುತ್ತ ದೇಶ ತಿರುಗುತ್ತಿದ್ದೇನೆ, ಅಷ್ಟೇ. ಈ ಮಾತನ್ನು ಪ್ರಮಾಣಮಾಡಿ ಹೇಳುತ್ತೇನೆ" ಎಂದ ಜಯಶೀಲ.

"ಏನಪ್ಪ. ನಿನ್ನ ರೂಪ ಮಾತಿನ ರೀತಿ ಎಲ್ಲಾ ನೋಡಿದರೆ ಬಹಳ ಮರ್ಯಾದೆಯೂ ಮನ್ನಣೆಯೂ ಇರುವವನಂತೆಯೇ ಕಾಣುವೆ. ನಿರ್ದೋಷಿಯಾದವನಿಗೆ ರಾಜಭಟರ ಭಯವೇಕೆ?" ಎಂದು ಬಾಗಿಲಿನ ತಾಳಸರಿಸಿ, ಅಗಲವಾಗಿ ತೆರೆದಳು. ಆದರೆ ನಗರ ರಕ್ಷಕನು ಒಳಗೆ ಪ್ರವೇಶಿಸದೆ, ವೃದ್ಧೆ



17 171



ಯನ್ನು ನೋಡಿ, "ಅಮ್ಮಾ, ನಿಮ್ಮ ಯಜಮಾನರು ನನಗೆ ಚೆನ್ನಾಗಿ ಪರಿಚಯದವರು. ಈ ಅಪರ ವೇಳೆಯಲ್ಲಿ ನಿಮಗೆ ನಿದ್ರಾಭಂಗ ಮಾಡಿದುದಕ್ಕೆ ಅನ್ಯಥಾ ಭಾವಿಸಬಾರದು. ಈ ಸ್ಮಶಾನದ ಕಾವಲುಗಾರನಾಗಿದ್ದವನ ಹಿರಿಯ ಮಗನೂ ಇನ್ನೊಬ್ಬ ಸಿದ್ಧಸಾಧಕನೆಂಬವನೂ ತಗಾದೆ ಮಾಡಿಕೊಂಡಿರುವ ಕಾರಣದಿಂದ ನಾನು ಬರಬೇಕಾಯಿತು. ನಿಮ್ಮ ಮನೆಯಲ್ಲಿ ಯಾವನಾದರೂ ಒಬ್ಬ ಯುವಕ—ನಡುವಿಗೆ ಕತ್ತಿಕಟ್ಟಿಕೊಂಡವನು ಬಂದನೇ ?" ಎಂದು ಕೇಳಿದನು.

ವೃದ್ಧೆ ಏನು ಪ್ರತ್ಯುತ್ತರ ಕೊಡಬೇಕೆಂದು ತಿಳಿಯದೆ ಅತ್ತಿತ್ತ ನೋಡಲು, ಜಯಶೀಲನು ಪಕ್ಕದ ಕೋಣೆಯಿಂದ ಹೊರಗೆ ಬಂದು, "ಅಯ್ಯಾ, ನಾನು ಈ ಊರಿಗೆ ಹೊಸಬ. ನೀವು ಹೇಳುವ ಆ ಯುವಕ ನಾನಾಗಿರಲಾರೆನಷ್ಟೇ ?" ಎಂದನು. ಸುಡುಗಾಡಿನ ಕಾವಲಿಗನ ಮಗ ಕಿಟ್ಟನೆ ಕಿರಿಚಿ "ಓ ! ಓ ! ಇವನೇ ! ಸತ್ತುಬದುಕಿದ ನನ್ನ ಅಪ್ಪ[...] ತಲೆ ಕಡಿದವನು ಇವನೇ" ಎಂದನು.

ತಲೆ ಕೆದರಿಕೊಂಡಿದ್ದ ಸಿದ್ಧ ಸಾಧಕನು ಕಾವಲಿ[...] ಮಗನನ್ನು ದುರುಗುಟ್ಟಿ ನೋಡುತ್ತ, "ಸುಮ್ಮ[...] ನಿರೋ ಮೂರ್ಖ ! ಎಷ್ಟುಸಾರಿ ಹೇಳಲಿ ನಿನ[...] ಸತ್ತುಹೋದ ಮನುಷ್ಯ ಮತ್ತೆ ಬದುಕಿ ಎ[...] ಸಂಗತಿ ಎಲ್ಲಿಯಾದರೂ ಇದೆಯೆ ? ಈ [...] ಯುವಕನು ಕೊಂದದ್ದು ನಿನ್ನ ತದೆಯ ಶವ[...] ಆವಾಹನೆಯಾಗಿದ್ದ ಮಹಾ ಭೂತವನ್ನು. [...] ಮಾತನ್ನು ಆ ಭೂತದ ಬಾಯಿಯಿಂದಲೇ ಹೇ[...] ಟಿರುವುದನ್ನು ನಾನು ಸ್ಪಷ್ಟವಾಗಿ ಕೇಳಿ[...] ಬಾಯಿ ಮುಚ್ಚಿಕೊಂಡಿರು" ಎಂದನು.

"ಏನಿದು ನಿಮ್ಮ ಗಲಾಟೆ ? ಪುನಃ ಇಬ್ಬ[...] ಜಗಳಕ್ಕೆ ಬೀಳುವಿರೇನು ? ಬಾಯಿ ಮುಚ್ಚಿ ಸು[...] ನಿರದಿದ್ದರೆ ಈಗಲೇ ನಿಮ್ಮಿಬ್ಬರ ತಲೆಗಳನ್ನೂ ಸ್ಮಶಾನದಲ್ಲಿ ಹುಗಿಸಿಬಿಡುತ್ತೇನೆ !" ಎಂದು ರಕ್ಷಕನು ಅವರಿಬ್ಬರಿಗೂ ಗದರಿಕೆ ಹಾಕಿ, ಜಯ[...] ನನ್ನು ನೋಡಿ, "ನಿನ್ನ ಹೆಸರೇನು ? ಎ[...] ಬರುತ್ತಿರುವೆ ?" ಎಂದು ಕೇಳಿದನು.


"ಅಯ್ಯಾ, ನನ್ನ ಹೆಸರು ಜಯಶೀ[...] ಅಮರಾವತೀ ನಗರದಲ್ಲಿ ಹುಟ್ಟಿದವನು. [...] ರಾಜರ ಹೆಸರು ರುದ್ರಸೇನ ಮಹಾರಾ[...] ನೀವು ಕೂಡಾ ಕೇಳಿರಬಹುದು. ನಾನು. ಅ[...] ದಲ್ಲಿರಲೊಲ್ಲದೆ, ಉದ್ಯೋಗವನ್ನು ಹುಡು[...] ಇಲ್ಲಿಗೆ ಬಂದವನು" ಎಂದ ಜಯಶೀಲ.

ನಗರ ರಕ್ಷಣಾಧಿಕಾರಿ, ಸಿದ್ಧ ಸಾಧಕ[...] ಸ್ಮಶಾನದ ಕಾವಲಿನವನ ಮಗನನ್ನೂ ಜಯ[...] ನಿಗೆ ತೋರಿಸಿ, "ಇವರಿಬ್ಬರ ಗುರುತು [...] ದೆಯೇ ? ನೀನು ಸ್ಮಶಾನದಲ್ಲಿ ಇವನ ತಂದೆ[...] ಕುತ್ತಿಗೆ ಕಡಿದು ಕೊಲೆಮಾಡಿದಿಯಂತೆ. ನಿಜವೇ ?" ಎಂದು ಕೇಳಿದನು.

ಜಯಶೀಲನು ಆ ಇಬ್ಬರನ್ನೂ ಒಂದುಸಾರಿ ನೋಡಿ, "ಅಯ್ಯಾ, ನಾನು ಈ ಸಾಧಕನನ್ನು ಸ್ಮಶಾನದಲ್ಲಿ ನೋಡಿದ್ದೇನೆ. ಕಾಲಕಾಲನೆಂಬ ಒಬ್ಬ ವಿಕಾರಾಕಾರದವನು ಇವನನ್ನು ಹಿಡಿಯಲು ಬೆನ್ನಟ್ಟಿಕೊಂಡಿದ್ದಾಗ, ನಾನು ಅವನನ್ನು ಅಡ್ಡಗಟ್ಟಿದೆ. ಇವನು ತಪ್ಪಿಸಿಕೊಂಡ. ಆಗ ಆ ವಿಕಾರಾಕಾರದವನು ನನ್ನ ಮೇಲೆ ಬೀಳಲು ಬಂದ. ಆತ್ಮರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ನಾನು ಅವನ ತಲೆಯನ್ನೇ ಕಡಿಯಬೇಕಾಯಿತು, ನಿಜ" ಎಂದನು.

"ನೀನು ಕಡಿದುದು ಕಾಲಕಾಲನ ತಲೆಯನ್ನಲ್ಲ. ನನ್ನ ಅಪ್ಪನ ತಲೆಯನ್ನು. ಅವರು ಬೆಳಗ್ಗೆ ಸತ್ತುಹೋದರು ಅಂತ ಎಲ್ಲರೂ ಹೇಳಿಬಿಟ್ಟರು. ನಾನು ತಂದೆಯ ಶವವನ್ನು ಸ್ಮಶಾನಕ್ಕೆ ತಂದುಹಾಕಿದೆ. ಕಟ್ಟಿಗೆ ತರಬೇಕು ಅಂತ ನಾನು ಸ್ವಲ್ಪ ದೂರ ಹೋಗಬೇಕಾಯಿತು. ಅಷ್ಟರೊಳಗೆ ಯಾವ ದೇವತೆಯ ದಯದಿಂದಲೋ ಅವರಿಗೆ ಜೀವ ಬಂದುಬಿಟ್ಟಿತು. ನಾನು ಮತ್ತೆ ಅಲ್ಲಿಗೆ ಬರುವಾಗಲೇ ನೀನು ಅವರ ತಲೆ ಕಡಿದುದನ್ನು ನೋಡಿದೆ." ಎಂದು ಕೋಪದಿಂದ ಹೇಳಿದ ಕಾವಲುಗಾರನ ಮಗ.

"ಎಲೋ, ಬುದ್ಧಿಗೇಡಿಯೇ! ನನ್ನನ್ನು ನೋಡಿದ ಕೂಡಲೇ ಶವದ ಹತ್ತಿರ ಇದ್ದವರೆಲ್ಲ ಓಡಿಹೋದರು. ಅದು ಯಾರದೆಂದು ಕೂಡಾ ನೋಡದೆಯೇ ನಾನು ನನ್ನ ಮಂತ್ರಶಕ್ತಿಯಿಂದ ಕಾಲನನ್ನು ಆವಾಹನೆ ಮಾಡಿದೆ. ಆಗ ಅದಕ್ಕೆ ಜೀವ ಬಂದು ಎದ್ದು ನನ್ನ ಮೇಲೆ ಕೋಪದಿಂದ ಹಾಯತೊಡಗಿತು. ನಾನು ಅದರ ವೇಗವನ್ನು ತಡೆದುಕೊಳ್ಳಲಾಗದೆ ಕೂಗುತ್ತಾ ಓಡಿದಾಗ, ಅದೂ ನನ್ನನ್ನು ಓಡಿಸಿಕೊಂಡು ಬಂದಿತ್ತು. ಆ ಸಮಯದಲ್ಲಿ ಈ ವೀರ ಯುವಕನು ಆ ಕಾಲನ ತಲೆಯನ್ನು ಕಡಿದು ನನ್ನನ್ನು ಕಾಪಾಡಿದ" ಎಂದು ಸಿದ್ಧ ಸಾಧಕನು ಭುಸುಗುಟ್ಟುತ್ತಾ ಹೇಳಿದ.



ಇದನ್ನೆಲ್ಲ ಕೇಳಿ ನಗರ ರಕ್ಷಣಾಧಿಕಾರಿ ತಲೆಯಾಡಿಸಿ ಸಣ್ಣದಾಗಿ ನಕ್ಕು, ಜಯಶೀಲನನ್ನು ನೋಡಿ, "ಅದೆಲ್ಲಾ ಇರಲಿ. ನಿನ್ನ ಹೆಸರು ಜಯಶೀಲನೆಂದಲ್ಲವೇ ಹೇಳಿದೆ? ಇವರಿಬ್ಬರೂ ಹೀಗೆ ನಾಲ್ಕೈದು ಗಂಟೆ ಹೊತ್ತಿನಿಂದ ಅರ್ಥವಿಲ್ಲದೆ ಕೀಚುಲಾಡಿಕೊಳ್ಳುತ್ತಾ ಇದ್ದಾರೆ. ನೀನು ತಲೆ ಕಡಿದುದು ನಿಜವೋ, ಯಾರದೋ ಎಂಬುದೊಂದೂ ತಿಳಿಯದೆ, ಆ ತಲೆಯೂ ಕಾಣಸಿಕ್ಕದೆ, ಯಾವ ಸ್ಥಳದಲ್ಲಿ ಎಂಬುದೂ ಗೊತ್ತಾಗದೆ, ನನ್ನ ಬುದ್ಧಿಯನ್ನೇ ಕೆಡಿಸುತ್ತಿದ್ದಾರೆ. ಇದರಲ್ಲಿ ಏನೋ ಸೂಕ್ಷ್ಮವಿರಬಹುದು. ನನಗೆ ಅನುಮಾನವಾಗಿದೆ. ಅದನ್ನೆಲ್ಲಾ ನಮ್ಮ ಮಂತ್ರಿಗಳು ನೋಡಿಕೊಳ್ಳುತ್ತಾರೆ. ಈಗ ನೀವೆಲ್ಲರೂ ನನ್ನ ಜತೆಯಲ್ಲಿ ಬನ್ನಿ" ಎಂದು ಹೇಳಿ, ಒಂದು ಮರಕ್ಕೆ ಕಟ್ಟಿದ ಕುದುರೆಯ ಕಡೆಗೆ ನಡೆದನು. ಜಯಶೀಲನು ಯಾವ ಉದ್ವೇಗಕ್ಕೂ ಒಳಗಾಗದೆ, ಮುದುಕಿಯೊಂದಿಗೆ, "ಅಮ್ಮಾ,





ಎಲ್ಲವನ್ನೂ ಕೇಳಿದೆಯಮ್ಮ? ನಾನಂತೂ ಯಾವ ತಪ್ಪನ್ನೂ ಮಾಡಿದವನಲ್ಲ. ಮಂತ್ರಿಯವರೋ ಮಹಾರಾಜರೋ ಈ ಸಂಗತಿಯನ್ನು ಸುಲಭವಾಗಿಯೇ ತಿಳಿಯದೆ ಹೋಗರು. ಅವರ ದಯದಿಂದ ಏನಾದರೂ ಉದ್ಯೋಗ ಸಂಪಾದಿಸಿಕೊಂಡ ಮೇಲೆ ಪುನಃ ಇಲ್ಲಿಗೆ ಬರುತ್ತೇನೆ" ಎಂದನು.

"ಹಾಗೇ ಆಗಲಪ್ಪ. ನಿನಗೆ ಶುಭವಾಗಲಪ್ಪ." ಎಂದು ವೃದ್ಧೆ ಕೈಯೆತ್ತಿ ಜಯಶೀಲನಿಗೆ ಆಶೀರ್ವಾದ ಮಾಡಿದಳು.

ಕುದುರೆಯ ಮೇಲೆ ನಗರ ರಕ್ಷಣಾಧಿಕಾರಿ ಹೋಗುತ್ತಿದ್ದಾಗ, ಹಿಂದೆಯೇ ಜಯಶೀಲನೂ, ಸಿದ್ಧಸಾಧಕನೂ, ಕಾವಲುಗಾರನ ಮಗನೂ ನಡೆಯುತ್ತಾ ಹೋದರು. ಅವರು ನಗರವನ್ನು ಪ್ರವೇಶಿಸುವ ಹೊತ್ತಿಗೆ ಬೆಳಗಾಯಿತು. ಹೆಚ್ಚಿಗೆ ರಾಜಭಟರಾರೂ ಇಲ್ಲದೆ, ಕುದುರೆಯ ಮೇಲೆ ಹೋಗುತ್ತಿರುವ ಅಧಿಕಾರಿಯನ್ನೂ, ಹಿಂದಿನಿಂದ ನಡೆಯುತ್ತಿರುವವರಲ್ಲಿ ತಲೆಕೂದಲು ಮು... ಕೆದರಿದ ಹಾಗೆ ಕಾಣುವ, ಕರ್ರಗಿನ ಕಫನಿ ಅಂ... ತೊಟ್ಟುಕೊಂಡಿದ್ದ ಸಿದ್ಧ ಸಾಧಕನನ್ನೂ, ಸಾಮಾ... ಮನುಷ್ಯನೊಬ್ಬನನ್ನೂ, ವೀರನಂತೆ ಎದೆ ಸೆಟೆ... ನಡೆಯುತ್ತಿರುವ ಖಡ್ಗವೀರ ಜಯಶೀಲನನ್ನು ನೋಡಿ ರಾಜಬೀದಿಯಲ್ಲಿದ್ದ ಜನರಿಗೆ ವಿಚಿ... ವೆನಿಸಿತು. ಏನು ಸಂಗತಿಯೆಂದು ತಿಳಿಯ... ಹತ್ತಿರ ಬಂದ ಜನರೊಂದಿಗೆ, ಸ್ಮಶಾನ ಕಾವ... ಗಾರನ ಮಗನು, "ಸೊಂಟಕ್ಕೆ ಕತ್ತಿ ಕಟ್ಟಿಕೊಂಡಿರು... ಈ ತುಂಟ ಬಂಟ ಸತ್ತುಬದುಕಿ ಎದ್ದ ನನ್ನ ಅ... ತಲೆ ಕಡಿದು ಕೊಂದಿದ್ದಾನೆ. ಆ ಕಪ್ಪು ದು... ಭೂತದವನು ಈ ಕೊಲೆಗಾರನ ಪಕ್ಷದವನಾಗಿದ್ದಾ... ಮಹಾರಾಜರು ಇವರಿಬ್ಬರ ತಲೆಗಳನ್ನೂ ... ಕೈಯಿಂದ ಕಡಿಸದೆ ಬಿಡಲಾರರು." ಎಂದು ಹೇ... ತ್ತಿದ್ದನು. ಇವರೆಲ್ಲರೂ ರಾಜಭವನವನ್ನು ಸಮೀ... ವಾಗ, ಮಂತ್ರಿ ಆಗತಾನೇ ರಾಜಭವನವನ್ನು ಪ್ರ... ಶಿಸಲಿಕ್ಕಿದ್ದನು. ಅವನು ನಗರ ರಕ್ಷಣಾಧಿಕಾರಿಯೊ... ಗಿರುವ ಜನರನ್ನು ನೋಡಿ, ಏನೋ ದೂರುಬಂ... ಯೆಂದು ತಿಳಿದುಕೊಂಡು ಅಲ್ಲೇ ನಿಂತನು. ರಕ್ಷ... ಕಾರಿ ಆತನೊಂದಿಗೆ ರಾತ್ರಿ ನಡೆದ ಎಲ್ಲಾ ಸಂ... ಯನ್ನೂ ಹೇಳಿದನು.

ಅದನ್ನೆಲ್ಲಾ ಕೇಳಿ ಮಂತ್ರಿ ಸ್ವಲ್ಪ ಹೊ... ಆಲೋಚನೆಮಾಡಿ, "ವೈದ್ಯರೂ, ನೋ... ಇತರರೂ ಸತ್ತುಹೋದನೆಂದು ಹೇಳಿದ ವ್ಯ... ಅಂಥವನು ಮತ್ತೆ ಬದುಕಿ ಎದ್ದು ಓಡುವುದೆಂ... ಅಸಂಭವ. ಸಿದ್ಧಸಾಧಕನು ಹೇಳುವಂತೆ ಆ ಕಳೇ... ದಲ್ಲಿ ಯಾವ ಕಾಲಭೂತವೋ ಪ್ರವೇಶಿಸಿರ... ಏನಾದರೂ ಸತ್ತವನಿಗೆ ಜೀವ ಬಂದು ಎದ್ದು... ದ್ದಾನೆ. ಅಂಥವನ ತಲೆಯನ್ನು ಈ ಯುವ... ಕಡಿದಿದ್ದಾನೆ. ಅಂದರೆ ಬದುಕಿರುವವನನ್ನು ... ಮಾಡಿದನೆಂದೇ ಆಯಿತು. ಇದು ಹತ್ಯಾಪರಾ...





ಯಾಕಾಗಬಾರದು ?..." ಎಂದು ಮಾತು ನಿಲ್ಲಿಸಿ ತನ್ನ ಗಲ್ಲವನ್ನು ತಡವಿಕೊಳ್ಳ ತೊಡಗಿದನು.


ಈ ಅವಕಾಶದಲ್ಲಿ ಜಯಶೀಲನು ವಿನಯದಿಂದ, "ಮಹಾಸ್ವಾಮಿಗಳು ನನ್ನದೊಂದು ವಿಜ್ಞಪ್ತಿ ಲಾಲಿಸಬೇಕು. ಉಳಿದೆಲ್ಲ ವಿಷಯವನ್ನೂ ಒಂದು ಬದಿಯಲ್ಲಿಟ್ಟು ನೋಡಿದರೆ, ಆತ್ಮರಕ್ಷಣೆಗಾಗಿ ನಾನು ಹಾಗೆ ಮಾಡಬೇಕಾಯಿತೆಂಬುದು ತಮಗೆ ಗೊತ್ತಾದೀತು. ಕ್ರೂರವಾದೊಂದು ಶಕ್ತಿಯನ್ನಿದಿರಿಸುವಾಗ ಆತ್ಮರಕ್ಷಣೆಯ ಪ್ರಯತ್ನದಲ್ಲಿ ಕೊಂದುಬಿಟ್ಟರೆ ದೊಡ್ಡ ತಪ್ಪಾಗಲಾರದೆಂದು ನನ್ನ ಅಲ್ಪಬುದ್ಧಿಗೆ ತೋರುತ್ತದೆ" ಎಂದನು.

"ಹೌದು. ನೀನು ಹೇಳುವುದು ನಿಜವೆ. ಅದಲ್ಲದೆ ಸತ್ತವನ ದೇಹದಲ್ಲಿ ಮಂತ್ರಶಕ್ತಿಯಿಂದ ಆವಾಹಿತವಾಗಿರುವ ಯಾವುದೋ ಭೂತವೆಂಬ ಮಾತೂ ಹೇಳಲ್ಪಡುತ್ತದಷ್ಟೇ?" ಎಂದನು ಮಂತ್ರಿ. ಆಗ ಸಿದ್ಧಸಾಧಕನು ಮುಂದೆ ಬಂದು ಮಂತ್ರಿಗೆ ನಮಸ್ಕಾರಮಾಡಿ, "ಮಹಾಸ್ವಾಮೀ, ನನ್ನದೊಂ ಚಿಕ್ಕ ವಿಜ್ಞಾಪನೆ. ಅಪ್ಪಣೆಯಾದರೆ ಹೇಳುತ್ತೇನೆ" ಎಂದನು. ಹೇಳುವಂತೆ ಮಂತ್ರಿ ತಲೆಯಾಡಿಸಿದನು. ಸಾಧಕನು ಒಂದುಸಾರಿ ಗಂಟಲು ಕೆನೆದುಕೊಂಡು "ಈ ಜಯಶೀಲನೆಂಬ ಯುವಕನು ಸಾಮಾ ನೆಂದು ತಿಳಿಯಬಾರದು. ಮಹಾವೀರ; ಶವದ ಆವಾಹಿತನಾಗಿದ್ದ ಕಾಲನೆಂಬ ಭೂತರಾಜನು ತ ಕಡಿದ ಕೂಡಲೇ ಈ ವೀರನ ಖಡ್ಗಕ್ಕೆ ಮ ಶಕ್ತಿಯನ್ನು ಪ್ರಸಾದಿಸಿದ್ದಾನೆ. ಆಗ ಹೊರ ಮಾತುಗಳನ್ನು ನಾನು ಕೇಳಿದ್ದೇನೆ. ಆದುದರಿ ಮಹಾರಾಜರು ಈ ವೀರನಿಂದ ಲಾಭ ಪಡೆಯ ವಂತಹ ಅವಕಾಶವಿದೆ" ಎಂದನು.

ಮಂತ್ರಿ ಅದರಲ್ಲೇನೂ ಸ್ವಾರಸ್ಯವಿಲ್ಲದವನ "ನೀನು ಹೇಳುವುದೇನು ಮಹಾ? ಕುಮಾರಿಯ ಕುಮಾರನೂ ಕಣ್ಮರೆಯಾಗಿ ಹೋದ ದು ದಲ್ಲಿರುವ ಮಹಾರಾಜರು ಈ ಯುವಕನ ಒಂ ಕತ್ತಿಯ ಸಹಾಯದಿಂದ ರಾಜ್ಯಗಳನ್ನು ಜಯಿಸ ಹೊರಡುವರೆನ್ನುವಿಯಾ?" ಎಂದು ಕೇಳಿದನು.

"ನನ್ನ ಅಭಿಪ್ರಾಯ ಹಾಗಲ್ಲ ಸ್ವಾಮೀ. ಮ ರಾಜರು ತಮ್ಮ ಕುಮಾರ ಕುಮಾರಿಯರ ಹುಡುಕಿಕೊಂಡು ಬರಲು ಈ ಜಯಶೀಲ ಕಳುಹಿಸಬಹುದು. ಈತನು ಆ ಕಾರ್ಯದಲ್ಲಿ ವಿ ಯಾಗುವನೆಂದು ನಂಬಲು ಎಡೆಯುಂಟು. ಮೇಲೆ ಮಹಾಕಾಲನ ರಕ್ಷಣೆಯೂ, ಆಶೀರ್ವಾ ಲಭಿಸುವುದೆಂಬುದರಲ್ಲಿ ಯಾವ ಸಂದೇಹವೂ ಎಂದ ಸಿದ್ಧಸಾಧಕ.

ಈಮಾತು ಕೇಳಿದ ಕೂಡಲೇ ಮಂತ್ರಿಗೆ ದೊ ದೊಂದು ಸಮಸ್ಯೆ ಪರಿಹಾರವಾದಂತೆ ತೋರಿ ವಯಸ್ಸಾಗಿ ಕಾಲ ತುಂಬಿ ಸತ್ತುಹೋದ ಸ್ಮ ಕಾವಲುಗಾರನ ಮತ್ತೊಂದು ಸಾವನ್ನು ಕು ಧರ್ಮಸಂದೇಹಗಳನ್ನಿಟ್ಟುಕೊಂಡು ವ್ಯರ್ಥ



...ಗು ಮಾಡುವುದರಲ್ಲಿ ಅರ್ಥವಿಲ್ಲವೆಂದುಕೊಂಡನು. ...ಧಿಕನು ಹೇಳುವಂತೆ ಈ ಜಯಶೀಲನನ್ನು ...ಹಾರಾಜರ ಮಕ್ಕಳನ್ನು ಹುಡುಕಿಸಲು ...ಸಿಸುವುದು ಒಳ್ಳೆಯದೇ.

...ಗೆ ಆಲೋಚನೆ ಮಾಡಿ ಮಂತ್ರಿ, ಅವರನ್ನು ...ಲ್ಲಿಯೇ ಇರುವಂತೆ ಹೇಳಿ, ರಾಜನನ್ನು ನೋಡಲು ...ದನು. ಆ ಸಮಯದಲ್ಲಿ ಕನಕಾಕ್ಷರಾಜ ...ಂದಿಗೆ ಸೇನಾಪತಿಯ ಮಗ ಮಂಗಳವರ್ಮನು ...ಾಡಿಕೊಂಡಿದ್ದನು. ಮಂತ್ರಿಯನ್ನು ನೋಡಿದ ...ಲೇ ರಾಜನು ಆದರದಿಂದ ಕೈಯಾಡಿಸಿ ...ಕೊಳ್ಳುವಂತೆ ಹೇಳಿ, " ಮಹಾಮಂತ್ರಿಗಳೇ, ...ಳವರ್ಮನು ನಮ್ಮ ಕುಮಾರಿಯನ್ನೂ, ...ರಾಜನನ್ನೂ ಹುಡುಕಲು ಹೋಗುವನಂತೆ. ...ಕ್ಕಾಗಿ ಅನುಮತಿ ಕೇಳುತ್ತಿದ್ದಾನೆ. ನಿಮ್ಮ ...ಪ್ರಾಯವೇನು ? " ಎಂದು ಕೇಳಿದನು.

ಮಂತ್ರಿ ಒಂದೆರಡು ಕ್ಷಣ ಆಲೋಚನೆಮಾಡಿ, ...ಹಾರಾಜರೇ, ಈ ಕೆಲಸಕ್ಕೆ ಮಾನವರ ಧೈರ್ಯ ...ಗಳಿದ್ದರೆ ಮಾತ್ರ ಸಾಲದು ; ಅಲೌಕಿಕ ...ಸಹಾಯ ಕೂಡಾ ಬೇಕಾಗುತ್ತದೆ. ಅದಕ್ಕೆ ...ಗೆ ಜಯಶೀಲನೆಂಬ ಯುವಕನೊಬ್ಬ ...ನೆ. ಅವನು ಇಟ್ಟುಕೊಂಡಿರುವ ಕತ್ತಿಗೆ ...ಘವಾದ ಶಕ್ತಿಗಳಿವೆಯಂತೆ " ಎಂದನು.

...ಕ್ಷರಾಜನು ತಲೆಯೊಲಿದು ಏನೋ ...ಚನೆಗೆ ಬಿದ್ದನು. ಮಂಗಳವರ್ಮನಿಗೆ ...ಯ ಮೇಲೆ ಬಹಳ ಕೋಪ ಬಂದಿತು. ... ಅವನು ಆ ಕೋಪವನ್ನು ಮುಖದಲ್ಲಿ ...ಗೊಡದೆ, ಮಂತ್ರಿಯನ್ನು ನೋಡಿ, " ಹೌದು, ... ವಿಷಯ ಆಲೋಚನೆ ಮಾಡಿದಿರಾ ಮಹಾ...ಳೇ ? ನೀವು ಹೇಳುವ ಆ ಜಯಶೀಲ ... ಎಂಥವನೆಂಬುದನ್ನು ವಿವರಿಸಲಿಲ್ಲ. ... ಅವನು ಒಳ್ಳೆಯ ವಂಶದವನೋ ? ಏಕೆಂದರೆ, ಮಹಾರಾಜರು ಯುವರಾಜ ಯುವ ರಾಣಿಯರನ್ನು ಹುಡುಕಿ ಕರೆದುಕೊಂಡು ಬಂದವರಿಗೆ ಅರ್ಧ ರಾಜ್ಯವನ್ನು ಹಂಚಿಕೊಡುವುದಾಗಿ ಪ್ರಕಟಿಸಿದ್ದಾರಷ್ಟೆ ? ಅದಕ್ಕೆ ಕೂಡಾ ಅವನು ಅರ್ಹನಾಗಬಲ್ಲನೇ ? " ಎಂದು ಕೆದರಿದನು.

ಈ ಅಸಂದರ್ಭದ ಪ್ರಶ್ನೆಗೆ ಮಂತ್ರಿ ಬೇಸರಪಡುತ್ತ, " ಯುವರಾಜನನ್ನೂ, ಯುವರಾಣಿಯನ್ನೂ ಅಪಹರಿಸಿಕೊಂಡು ಹೋದವರು ಮಾನವರೋ ದಾನವರೋ ನಮಗೆ ತಿಳಿಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಹುಡುಕಿ ಕರೆತಂದವನು ಎಷ್ಟೊಂದು ಶಕ್ತಿಶಾಲಿಯಾಗಿರಬೇಡ ? ಅಂಥವನು ಅರ್ಧ ರಾಜ್ಯಕ್ಕೆ ಏಕೆ ಅರ್ಹನಾಗಲಾರ ? " ಎಂದನು.

" ಅವನಿಗೆ ಅಷ್ಟು ಶಕ್ತಿಯಿರುವುದೆಂದು ಸುಮ್ಮನೆ ಹೇಳುವುದೋ ಅಥವಾ ಪರೀಕ್ಷಿಸಿದ್ದೀರೋ ? ಅವನ ಕತ್ತಿಗೆ ಅಮೋಘ ಶಕ್ತಿಯಿರುವ ಮಾತು ನಿಜವಾದರೆ, ಆ ಕತ್ತಿಯನ್ನು ಒಮ್ಮೆ ಕೊಡಿಸಿರಿ,

ಪರೀಕ್ಷಿಸಿ ನೋಡುತ್ತೇನೆ" ಎಂದ ಮಂಗಳವರ್ಮ. "ಕೊಡಿಸಬಹುದೆಂದು ಕಾಣುತ್ತದೆ. ಇದಕ್ಕೆ ಅವನೇನೂ ಅಭ್ಯಂತರ ಹೇಳಲಾನೆಂದು ಭಾವಿಸುತ್ತೇನೆ." ಎಂದ ಮಂತ್ರಿ.

ಕನಕಾಕ್ಷರಾಜನು ಬಹಳ ಸೂಕ್ಷ್ಮಬುದ್ಧಿಯುಳ್ಳವನಾಗಿದ್ದನು. ಹಾಗೆಯೇ ವಿವೇಕಶಾಲಿಯಾದ ರಾಜನು ಸಂಗತಿ ಸಂದರ್ಭಗಳನ್ನು ಅರ್ಥಮಾಡಿಕೊಂಡು, "ಮಹಾಮಂತ್ರಿಗಳೇ, ದಿಕ್ಕು ದಿಸೆ ತಿಳಿಯದಿರುವ ಯಾವನೋ ಒಬ್ಬ ಯುವಕನನ್ನು ನಮ್ಮ ಮಕ್ಕಳನ್ನು ಹುಡುಕಿಕೊಂಡು ಬರಲು ಕಳುಹಿಸುವುದು ಸಾಮಾನ್ಯ ಸಂಗತಿಯಲ್ಲ. ಆ ಜಯಶೀಲನೆಂಬವನ ಕತ್ತಿ ಎಂತಹ ಶಕ್ತಿಯುಳ್ಳದೆಂದು ಪರೀಕ್ಷಿಸಬೇಕು. ಅದನ್ನು ತರಿಸಿ ನಮ್ಮ ಮಂಗಳವರ್ಮನಿಗೆ ಕೊಡಿಸಿರಿ. ಪರೀಕ್ಷಿಸಲಿ. ಅಷ್ಟೊಂದು ಅದ್ಭುತಶಕ್ತಿ ಆ ಕತ್ತಿಗಿದ್ದರೆ ಆ ಯುವಕನಿಗೆ ದೊಡ್ಡ ಬಹುಮಾನ ಕೊಟ್ಟು ನಮ್ಮ ಆಸ್ಥಾನದಲ್ಲಿ ಒಳ್ಳೆಯದೊಂದು ಸ್ಥಾನಕೊಟ್ಟು ಇರಿಸಿಕೊಳ್ಳೋಣ" ಎಂದನು.

"ಎಂತಹ ಪರೀಕ್ಷೆ ಇಡೋಣ ಮಹಾರಾಜರೇ ?" ಎಂದು ಮಂತ್ರಿ ಕೇಳಿದ.


"ನಮ್ಮ ಮೃಗಶಾಲೆಯ ಅಧಿಕಾರಿಯೊಂದಿಗೆ ಹೇಳಿ, ಬೋನಿನಲ್ಲಿರುವ ಎರಡು ಹೆಬ್ಬುಲಿಗಳನ್ನು ಹೊರಗೆ ಬಿಡಿಸಿರಿ. ಮಂಗಳವರ್ಮನು ಆ ಕತ್ತಿಯನ್ನು ಹಿಡಿದುಕೊಂಡು ಬೋನಿನಿಂದ ಹೊರಗೆಬಂದ ಹುಲಿಗಳನ್ನು ಇದಿರಿಸಲಿ" ಎಂದನು. ಕನಕಾಕ್ಷರಾಜ.


ಈ ಸಂಗತಿಯನ್ನು ಮಂತ್ರಿ ಜಯಶೀಲನೊಂದಿಗೆ ಹೇಳಲು, ಜಯಶೀಲನು ಸಂತೋಷದಿಂದ ತನ್ನ ಕತ್ತಿಯನ್ನು ಮಂಗಳವರ್ಮನಿಗೆ ಕೊಟ್ಟುಬಿಟ್ಟನು.

ಕೆಲವು ನಿಮಿಷಗಳಲ್ಲೇ ಹುಲಿಗಳಿರುವ ಬೋನುಗಳನ್ನು ತರಿಸಲಾಯಿತು. ಅವುಗಳನ್ನು ಸುತ್ತಲೂ ಹತ್ತಡಿ ಎತ್ತರವಾದ ಪ್ರಾಕಾರಗಳ ನಡುವಿನ ಜಾಗದಲ್ಲಿ ಇಡಿಸಲಾಯಿತು. ಮಂಗಳವರ್ಮನು ಕತ್ತಿ ತೆಗೆದುಕೊಂಡು ಅದರೊಳಗೆ ಹೋದ ಕೂಡಲೇ ಪ್ರಾಕಾರದ ಬಾಗಿಲನ್ನು ಮುಚ್ಚಿಬಿಟ್ಟರು. ರಾಜನೂ, ಮಂತ್ರಿಯೂ ಜಯಶೀಲ ಮತ್ತು ಇತರ ಪರಿವಾರದವರೂ ಪ್ರಾಕಾರದ ಪಕ್ಕದಲ್ಲಿರುವ ಭವನಗಳ ಜಗಲಿಗಳಲ್ಲಿದ್ದು ಆ ದೃಶ್ಯವನ್ನು ನೋಡತೊಡಗಿದರು.

ಮೃಗಶಾಲಾಧಿಕಾರಿ, ಮಂಗಳವರ್ಮನಿಗೆ ಸಿದ್ಧವಾಗಿರುವಂತೆ ಎಚ್ಚರಿಕೆ ಕೊಟ್ಟು, ಬೋನುಗಳ ಬಾಗಿಲುಗಳನ್ನೆತ್ತಿ ಪ್ರಾಕಾರದ ಮೇಲೆ ಬದಿಗೆ ಸರಿದನು. ಎರಡು ಹೆಬ್ಬುಲಿಗಳೂ ಭಯಂಕರವಾಗಿ ಗರ್ಜಿಸುತ್ತ, ಮಂಗಳವರ್ಮನನ್ನು ನೋಡಿ ರೋಷಗೊಂಡು ಕೆರಳಿಬರತೊಡಗಿದುವು.

(ಮುಂದುವರಿಯುವುದು)






# ಮಾಯಾಸರೋವರ

೪

[ನಗರ ರಕ್ಷಣಾಧಿಕಾರಿಯೊಂದಿಗೆ, ಜಯಶೀಲನೂ, ಸಿದ್ಧಸಾಧಕನೂ, ಸ್ಮಶಾನ ಕಾವಲುಗಾರನ ಮಗನೂ ಹಿರಣ್ಯಪುರದ ಮಂತ್ರಿಯ ಬಳಿಗೆ ಹೋದರು. ಮಂತ್ರಿ ಅವರ ಸಂಗತಿಯನ್ನು ರಾಜನಿಗೆ ತಿಳಿಸಲು ಒಳಗೆ ಹೋದಾಗ ಅಲ್ಲಿ ಮಂಗಳವರ್ಮನೆಂಬವನು ಜಯಶೀಲನ ಅದ್ಭುತ ಶಕ್ತಿಯ ಕತ್ತಿಯನ್ನು ಪರೀಕ್ಷಿಸಲು ಬಯಸಿದುದರಿಂದ, ಅದಕ್ಕಾಗಿ ಬೋನಿನಲ್ಲಿದ್ದ ಎರಡು ಹುಲಿಗಳನ್ನು ಅವನ ಮುಂದೆ ಬಿಟ್ಟರು.]

ಸೇನಾಪತಿಯ ಮಗನಾದ ಮಂಗಳವರ್ಮ ಸ್ವತಃ ವೀರನೇ ನಿಜ. ಅದರ ಮೇಲೆ ಖಡ್ಗವಿದ್ಯೆ, ಧನುವಿದ್ಯೆಗಳೇ ಮೊದಲಾದುವನ್ನೂ ಚೆನ್ನಾಗಿ ಕಲಿತವನು. ಈಗ ಇದ್ದಕ್ಕಿದ್ದ ಹಾಗೆ ತಾನು ಒಬ್ಬಂಟಿಗನಾಗಿ ನಿಂತಿರುವುದನ್ನೂ, ಎರಡು ಹೆಬ್ಬುಲಿಗಳು ಬಾಯಿ ತೆರೆದುಕೊಂಡು ಕೋರೆಹಲ್ಲುಗಳನ್ನು ತೋರಿಸಿ ಗರ್ಜಿಸುತ್ತ ತನ್ನ ಕಡೆಗೆ ಬರುವುದನ್ನೂ ನೋಡುತ್ತಲೇ, ಅವನಲ್ಲಿ ಎಲ್ಲಿಲ್ಲದ ಒಂದು ಭಯವು ಉಂಗುಷ್ಟದಿಂದ ನೆತ್ತಿಯವರೆಗೂ ಜುಮ್ಮನೆ ಏರಿತು. ಅವನು ಎರಡಡಿ ಹಿಂದಿಟ್ಟು, ಸ್ವಲ್ಪ ಮುಖವೆತ್ತಿ ಕಣ್ಣುಗಳನ್ನು ತಿರುಗಿಸಿ ನೋಡಲು, ಅಕಸ್ಮಾತ್ ತಲೆ ಸುತ್ತುವಂತಾಯಿತು. ಏಕೆಂದರೆ ಥಕ್ಕನೆ ಪ್ರಾಕಾರದ ಗೋಡೆಯ ಮೇಲೆ ಹಾರಿ ತನ್ನ ಜೀವ ಉಳಿಸಿಕೊಳ್ಳಲೂ ಸಾಧ್ಯವಿಲ್ಲದ ಪರಿಸ್ಥಿತಿ! ತಾನು ಪಾತಾಳದಲ್ಲಿರುವಂತೆ ತೋರಿತು. ಅಗಲೇ ಒಂದು ಹುಲಿ ಗಟ್ಟಿಯಾಗಿ ಗಾಂಡ್ರಿಸಿ ಅವನ ಮೇಲೆ ಹಾರಲು ಮುಂಗಾಲುಗಳನ್ನೆತ್ತಿ, ಪಂಜಾ ಅಗಲಿಸಿತು. ಅವನು ನಡುಗುತ್ತಾ, ಇನ್ನೆರಡಡಿ ಹಿಂದಿಟ್ಟ.

ಮಂಗಳವರ್ಮನು ಭಯಪೀಡಿತನಾಗಿದ್ದಾನೆಂದು, ಬಹುಶಃ ಆತ್ಮರಕ್ಷಣೆಗಾದರೂ ಕತ್ತಿಯನ್ನು ಉಪ



ಯೋಗಿಸಲಾರನೇನೋ ಎಂದು ಜಯಶೀಲನಿಗೆ ಅನುಮಾನವಾಯಿತು. ಅವನು ಮಂಗಳವರ್ಮನಿಗೆ ಧೈರ್ಯಬರುವಂತೆ ಪ್ರಾಕಾರದ ಮೇಲಿನಿಂದ, "ಮಂಗಳವರ್ಮಾ! ನಿನ್ನ ಕೈಯಲ್ಲಿರುವ ಖಡ್ಗವು ಅಮೋಘ ಶಕ್ತಿಯುಳ್ಳದ್ದು, ಸಂದೇಹಬೇಡ. ಹೊಡಿ, ಒಂದೊಂದೇಟಿಗೆ ಒಂದೊಂದು ಹುಲಿ! ಹೊಡಿ!" ಎಂದು ಕೂಗಿ ಹೇಳಿದನು.

ಆ ಮಾತಿನಿಂದ ಮಂಗಳವರ್ಮನಿಗೆ ಮತ್ತೆ ಧೈರ್ಯ ತಲೆ ಎತ್ತಿತು. ತನ್ನ ಕೈಯಲ್ಲಿರುವ ಈ ಕತ್ತಿಯಲ್ಲಿ ಅಪೂರ್ವಶಕ್ತಿಯಿರುವುದನ್ನು ಪರೀಕ್ಷಿಸಲಿಕ್ಕಾಗಿಯೇ ತಾನಿದ್ದೇನೆಂಬುದು ನೆನಪಾಯಿತು. ನೆನಪು ಮಾಡಿದವನು ಈ ಕತ್ತಿಯನ್ನು ಕೊಟ್ಟ ಜಯಶೀಲ. ಒಂದುವೇಳೆ ಎರಡು ಹುಲಿಗಳ ಮುಂದೆ ಅವನ ಮಾತು ಸುಳ್ಳಾದರೆ ಏನು ಮಾಡಬೇಕು? ಪ್ರಾಣ ಹೋದ ಮೇಲೆ ತಿರುಗಿ ಬರುತ್ತದೆಯೇ? ಮಂಗಳವರ್ಮನಲ್ಲಿ ಈ ಸಂಶಯ ಮತ್ತೆ ತಲೆ ಎತ್ತಲು, ಕೈ ನಡುಗಿತು. ಅದೇ ವೇಳೆಗೆ ಒಂದು ಹುಲಿ ಅವನ ಮೇಲೆ ಹಾರಿ ಪಂಜಾದಿಂದ ಭುಜದ ಮೇಲೆ ಹೊಡೆಯಿತು. ಆ ಪೆಟ್ಟಿಗೆ ದೇಹದ ಮೇಲೆ ಕೆಂಡ ಸುರುವಿದಂತಾಗಿ ಮಂಗಳವರ್ಮನು ಕಿಟ್ಟನೆ ಕಿರಿಚಿ, ಇನ್ನು ತನಗೆ ಸಾವು ತಪ್ಪದೆಂದುಕೊಂಡು ಕತ್ತಿಯನ್ನೆತ್ತಿ ಆ ಹುಲಿಯ ಗುಂಡಿಗೆಯನ್ನು ತಿವಿಯಲು ಪ್ರಯತ್ನಿಸಿದನು. ಆದರೆ ಭೀತಿ ಕವಿದ ಮೇಲೆ ಅವನ ಶಕ್ತಿಗೆ ಚೈತನ್ಯ ಬಂದೀತೇ? ನಡುಗುವ ಕೈಯಿಂದ ಕತ್ತಿ ಜಾರಿ ಕೆಳಗೆ ಬಿದ್ದಿತು.

ಮರುಕ್ಷಣಕ್ಕೆ ಅವನ ಕಥೆ ಮುಗಿಯುತ್ತದೆಂದುಕೊಂಡು ಕನಕಾಕ್ಷರಾಜನೂ, ಮಂತ್ರಿಯೂ, "ಹಾ!" ಎನ್ನುತ್ತಾ ನಡುಗಿದರು. ಹುಲಿಗಳೆರಡೂ ನಾಲ್ಕಡಿ ಹಿಂದಕ್ಕೆ ಹೋಗಿ ಅವನ ಮೇಲೆ ಕುಪ್ಪಳಿಸಲಿಕ್ಕಾಗಿ ಬಾಲ ಕುಣಿಸುತ್ತ ನೆಲವನ್ನು ಗೀರತೊಡಗಿದುವು. ಮಂಗಳವರ್ಮ ಪ್ರಾಕಾರದ ಗೋಡೆಗೆ ಒರಗಿಕೊಂಡು ಸಾಯಲು ಸಿದ್ಧನಾಗಿ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡನು.

"ವೀರಯುವಕ ಜಯಶೀಲಾ! ಜಯಶೀಲಾ!" ಎಂದು ಸಿದ್ಧಸಾಧಕನು ಗಂಟಲೊಡೆಯುವಂತೆ ಕಿರಿಚಿದ. ಅವನ ಕೂಗು ನಡೆಯುತ್ತಿದ್ದಂತೆಯೇ ಜಯಶೀಲನು ಗಟ್ಟಿಯಾಗಿ ಚಪ್ಪಾಳೆ ಹೊಡೆದು ಹತ್ತಡಿ ಎತ್ತರವಿರುವ ಪ್ರಾಕಾರದ ಮೇಲಿನಿಂದ ಮಿಂಚಿನ ವೇಗದಲ್ಲಿ ಹುಲಿಗಳ ಮುಂದೆ ಹಾರಿ ಚೆಂಡಿನಂತೆ ಕುಪ್ಪಳಿಸಿ ನಿಂತನು.

ಹಠಾತ್ತಾಗಿ ತಮ್ಮ ಮುಂದೆ ಹಾರಿಬಿದ್ದ ಆಕಾರವು ಏನೋ ಎಂದು ತಿಳಿದುಕೊಳ್ಳಲಾರದೆ ಎರಡು ಹುಲಿಗಳೂ ಗಭಾಲನೆ ಹಿಂದಕ್ಕೆ ಜಗಿದುವು. ಇಂತಹ ಸಮಯದಲ್ಲಿ ಪ್ರಾಣಿಗಳಿಗೆ ಹುಟ್ಟುವ ಸಹಜವಾದ ಭೀತಿಯಿಂದ ಆಚೀಚೆ ಬದಿಗಳಿಗೆ ಓಡಿದುವು. ಅದೇ ಸಮಯದಲ್ಲಿ ಜಯಶೀಲನು ಕೆಳಗೆ ಬಿದ್ದಿದ್ದ ಕತ್ತಿಯನ್ನು ಎತ್ತಿಕೊಂಡು ತಿರುಗಿಸುತ್ತ ಒಂದು ಗರ್ಜನೆ

ನು, ಹುಲಿಗಳನ್ನು ಎದುರಿಸಲು ಸಿದ್ಧನಾಗಿಬಿಟ್ಟನು. ಕ್ಷರಾಜನಿಗೆ ಒಮ್ಮೆಗೇ ಹರ್ಷದ ಗಾಳಿ ಗಿದಂತೆ, ಅತ್ಯಂತ ಸಂತೋಷದಿಂದ ಮಂತ್ರಿಯ ಹಿಡಿದು, "ಆಹಾ! ಮಹಾಮಂತ್ರೀ! ಏನು ಹಸ! ಏನು ಧೈರ್ಯ! ಇಂತಹ ಯುವಕನ ಾಯವಿದ್ದರೆ ನನ್ನ ಮಗನೂ ಮಗಳೂ ತಿರುಗಿ ುವರೆಂಬ ನಂಬುಗೆ ತೋರುತ್ತದೆ, ತೋರು ದೆ!" ಎಂದನು.


"ಮಹಾರಾಜರೇ! ಮೊದಲು ಅವನು ಜೀವ ೊಂದಿಗೆ ಗೆದ್ದುಬರಲಿ. ನೋಡಿ, ನೋಡಿ! ಹುಲಿಗ ಳೂ ಒಂದೇಸಾರಿ ಅವನ ಮೇಲೆ ಹಾರುವ ಗಿವೆ!" ಎಂದ ಮಂತ್ರಿ ಧರ್ಮಮಿತ್ರ.

ಎರಡು ಹುಲಿಗಳೂ ಒಂದೇಬಾರಿಗೆ ತನ್ನ ಮೇಲೆ ರುವ ಎತ್ತುಗಡೆಯಲ್ಲಿರುವುದನ್ನು ನೋಡಿ ಜಯ ಲನು, ಅವುಗಳ ಹಾಗೆಯೇ ನೆಲವನ್ನು ಒದ್ದು ಡಿ, "ಹೇಯ್" ಎಂದು ಅರಚಿ ಪ್ರಾಕಾರದ ೋಡೆಯ ಕಡೆಗೆ ಓಡಿ ಹೋಗುವವನಂತೆ ಆಟ ತೋರಿಸಿದನು. ಆಗ ಒಂದು ಹುಲಿ ತುಂಬ ಕೆರಳಿ ಭಯಂಕರವಾಗಿ ಗರ್ಜಿಸುತ್ತ ಅವನ ಕಡೆಗೆ ರಭಸ ದಿಂದ ಬಂದಿತು. ಅದು ಎರಡಡಿ ಸಮೀಪ ಬಂದಾಗ ಜಯಶೀಲನು ಕತ್ತಿಯನ್ನು ಬೀಸಿ ಅದರ ತಲೆಯ ಮೇಲೆ ಹೊಡೆದನು.

ಆ ಪೆಟ್ಟಿಗೆ ಹುಲಿಗೆ ತಲೆ ಧಿಮ್ಮೆನಿಸಿದಂತಾಗಿ ಪಕ್ಕಕ್ಕೆ ಹೊರಳಿಬೀಳುವಾಗ, ಅವನು ಇನ್ನೊಂದು ಹುಲಿಯ ಕಡೆಗೆ ಕತ್ತಿಯನ್ನು ಝಳಪಿಸಿದ. ಅದು ಸ್ತಂಭಿಸಿಹೋಗಿತ್ತು.

ಪೆಟ್ಟು ತಿಂದ ಹುಲಿ ಭಯಂಕರವಾಗಿ ಗರ್ಜಿಸಿಕೊಂಡು ರೋಷದಿಂದ ಪುನಃ ಹಾರಲು ಮುಂಗಾಲುಗಳನ್ನೆತ್ತಿದಾಗ ಜಯಶೀಲನು ಕತ್ತಿಯನ್ನು ಅದರ ಎದೆಯೊಳಗೆ ಛುಳ್ಳನೆ ಹೊಗಿಸಿದನು. ಆ ಹುಲಿ ಪಟಪಟನೆ ಕಾಲುಗಳನ್ನು ಹೊಡೆದುಕೊಂಡು ಹೊರಳಾಡುತ್ತಿರಲು, ಕತ್ತಿಯನ್ನು ಸೆಳೆದುಕೊಂಡು ಎರಡನೇ ಹುಲಿಯ ಕಡೆಗೆ ಹಾರಿದನು ಜಯಶೀಲ. ಅಲ್ಲಿಗೆ ಒಂದನೇ ಹುಲಿಯ ಹೊರಳಾಟ ಮಂದ





ಮಂದವಾಗುತ್ತಾ ಹೋಯಿತು. ಇದೆಲ್ಲಾ ಒಂದೆರಡು ಕ್ಷಣಗಳಲ್ಲೇ ನಡೆದುಹೋಯಿತು.

ತನ್ನ ಜತೆಗಾರ ಹುಲಿ ಹೊರಳುತ್ತಾ ಸ್ತಬ್ಧವಾಗುವುದನ್ನು ನೋಡಿ ಎರಡನೇ ಹುಲಿ ಇದಿರಾಳಿಯನ್ನು ಪ್ರತಿಭಟಿಸುವ ಆಬ್ಬರ ಬಿಟ್ಟು ತಿರುಗಿ ತುಸು ದೂರ ಹೋಗಿ ಮತ್ತೆ ತಿರುಗಿ ನೋಡಿತು. ಕತ್ತಿಯನ್ನು ಕುಣಿಸಿ ಕುಪ್ಪಳಿಸಿಕೊಂಡು ಬರುವ ಜಯಶೀಲನನ್ನು ಕಂಡು, ಅದು ಅಲ್ಲಿಂದ ಗಿರ್ರನೆ ತಿರುಗಿ ತನ್ನ ಪ್ರಾಣ ಉಳಿಸಿಕೊಳ್ಳುವ ಒಂದೇ ಯೋಚನೆಯಿಂದ ಬಾಣದಂತೆ ಓಡಿಹೋಗಿ ಬೋನಿನೊಳಗೆ ಹೊಕ್ಕು ಮುದುಡಿತು.

ಪ್ರಾಕಾರದ ಮೇಲಿನಿಂದ ಇದನ್ನೆಲ್ಲಾ ನೋಡುತ್ತಿದ್ದ ಕನಕಾಕ್ಷರಾಜನು ಎಲ್ಲರೊಂದಿಗೆ ಚಪ್ಪಾಳೆ ತಟ್ಟುತ್ತ ಹರ್ಷಧ್ವನಿ ಮಾಡಿದನು. ಗೋಡೆಗೆ ಒರಗಿ ನಿಂತಿದ್ದ ಮಂಗಳವರ್ಮನು ಆಗತಾನೇ ತಾನು ಇನ್ನೂ ಬದುಕಿರುವುದನ್ನು ತಿಳಿದು ಕಣ್ಣು ತೆರೆದನು. ಸತ್ತು ಬಿದ್ದಿರುವ ಒಂದು ಹುಲಿಯನ್ನು ನೋಡಿ, ಹಾಗೆ ತೆರೆದ ಬೋನಿನ ಮೂಲೆಯಲ್ಲಿ ಕುಳಿತು ಗು ಗುಟ್ಟುತ್ತಿರುವ ಇನ್ನೊಂದು ಹುಲಿಯನ್ನು ನೋಡಿ ಧೈರ್ಯದಿಂದ ಮುಂದೆ ನಡೆದು ಮುಖವೆತ್ತಿ ಕಾಕ್ಷರಾಜನನ್ನು ನೋಡಿ, "ಮಹಾರಾಜರೇ, ಕತ್ತಿಗೆ ಮಹಾಶಕ್ತಿಗಳಿರುವ ಮಾತು ನಿಜವೇ. ಅ ನನ್ನ ಕೈಯಿಂದ ತನ್ನಂತೆ ಜಾರಿ ಬಿದ್ದುಹೋಯಿತು. ಆದ್ದರಿಂದಲೇ ಅದರ ಬಲವನ್ನು ನಿರ್ಣಯಿಸಲು ನನ್ನಿಂದಾಗದೆ ಹೋಯಿತು. ಜಯಶೀಲನೇ ಆ ಕೆಲ ಮಾಡುವಂತಾಯಿತು. ಏನಾದರೂ ಕತ್ತಿಯ ಅದ್ಭುತವೇ ನಿಜ!" ಎಂದನು.

"ಭೇಷ್! ಭೇಷ್! ಚೆನ್ನಾಗಿ ಹೇಳಿದೆ ಮಂಗ ವರ್ಮಾ! ಅದೃಷ್ಟವಂತ ನೀನು. ನಿನ್ನ ಭುಜದಿಂ ರಕ್ತ ಹರಿಯುತ್ತಿದೆ. ಸ್ವಲ್ಪ ಗಾಯವೂ ಆಗಿದೆ ಮಹಾವೀರನಿಗೆ ಆಗುವಂತಹ ಗಾಯವೇ ಸ ನಿನ್ನಂಥಾ ಮಹಾವೀರನನ್ನು ಯಾರೂ ಕಂ ಲಾರರು!" ಎಂದು ಮಂತ್ರಿ ಧರ್ಮಮಿ ನೆಗಾಡಿದನು.

"ನನಗೆ ಗೊತ್ತು. ನಾನು ಮೊದಲೇ ಹೇ ದ್ದೇನೆ. ಆ ಕತ್ತಿಯನ್ನು ಕಾಲಕಾಲನು ತನ್ನ ರ ದಿಂದ ಆಶೀರ್ವದಿಸಿ ಜಯಶೀಲನಿಗೆ ಕೊಟ್ಟಿದ್ದಾ ಆ ಕತ್ತಿಯಿಂದ ಅವನು ಪ್ರಪಂಚವನ್ನೇ ಗೆ ಬಹುದು" ಎಂದ ಸಿದ್ಧಸಾಧಕ. ಅವನಿಗೆ ಸಂತೋ ದಲ್ಲಿ ಹಾರಾಡುವಂತಾಗಿತ್ತು.

"ಆದರೆ ಅಷ್ಟೊಂದು ಶಕ್ತಿಯುಳ್ಳ ಕತ್ತಿ ಮಂಗ ವರ್ಮನ ಕೈಯಲ್ಲಿರುವಾಗ ಹುಲಿಯನ್ನು ಕೊಲ್ಲ ಲಾಗದೆ ಹೋದನಲ್ಲ?" ಎಂದ ಕನಕಾಕ್ಷರಾ ತಿರಸ್ಕಾರ ಸೂಚಿಸುವವನಂತೆ.

ಮಂತ್ರಿ ಧರ್ಮಮಿತ್ರನು ಪ್ರಾಕಾರದ ಮೇಲಿ ನಿಂದ ಬಗ್ಗಿ ಕೈಚಾಚಿ, ಜಯಶೀಲನೊಂದಿಗೆ, "ಜಯ ಶೀಲಾ, ಇನ್ನು ಮೇಲೆ ಬಾ. ನಿನ್ನ ಧೈರ್ಯಸಾಹ


ಳು ಮಾತ್ರವೇ ಅಲ್ಲದೆ ನಮ್ಮ ಸೇನಾಪತಿಯ ಕುಮಾರನನ್ನೂ ಬದುಕಿಸಿರುವೆ. ನಿನ್ನನ್ನು ಅಭಿನಂದಿಸುತ್ತೇವೆ. ಸೇನಾಪತಿ ಸದ್ಯನಗರದಲ್ಲಿಲ್ಲ. ದೇಶದ ಸರಹದ್ದಿನ ಸಂರಕ್ಷಣೆ ಹೇಗಿರುವುದೆಂದು ನೋಡಲು ಹೋಗಿದ್ದಾನೆ. ಅವನು ಹಿಂದಿರುಗಿ ಬರುವಾಗ ತನ್ನ ಮಗನು ಹುಲಿಯ ಬಾಯಿಗೆ ಬಿದ್ದು ಸತ್ತನೆಂಬ ದುರ್ವಾರ್ತೆ ಕೇಳದಂತೆ ಕಾಪಾಡಿದೆಯಪ್ಪ! ಮಾತ್ರವಲ್ಲ ನಿನ್ನ ಸಾಹಸಕ್ಕೆ ಈಡುಜೋಡು ಕಾಣೆವು! ಬಾರಿ ನನ್ನ ಕೈಹಿಡಿ ನೋಡೋಣ" ಎಂದನು.

ಮಂತ್ರಿಯ ಮಾತು ಕೇಳುತ್ತ ಕನಕಾಕ್ಷರಾಜನೂ ಉಮುಖದೊಂದಿಗೆ ತನ್ನ ಕೈಗಳನ್ನೂ ಕೆಳಗೆ ಚಾಚಿ "ಜಯಶೀಲಾ, ನಮ್ಮಿಬ್ಬರ ಕೈಗಳ ಆಧಾರದಿಂದ ಮೇಲೆ ಬರಬಲ್ಲೆಯಾ ?" ಎಂದನು.

"ಮೇಲೆ ಬರುವುದು ಅಷ್ಟೇನೂ ಕಷ್ಟವಲ್ಲ ಪ್ರಭುಗಳೇ. ಮೊದಲು ಹುಲಿಯ ಬೋನನ್ನು ಮುಚ್ಚಿಸಿಬಿಡುವುದು ಕ್ಷೇಮ. ರೋಷಗೊಂಡ ಹುಲಿಯನ್ನು ನಂಬಲಾಗುವುದಿಲ್ಲವಷ್ಟೆ? ನಾನು ಮೇಲೆ ಬಂದುಬಿಟ್ಟರೆ ಮಂಗಳವರ್ಮನು ನಿರಾಯುಧನಾಗಿ ಒಬ್ಬನೇ ಇಲ್ಲಿರಬೇಕಾಗುತ್ತದೆ" ಎಂದ ಜಯಶೀಲ.

"ಅವನ ಕೈಯಲ್ಲಿ ಆಯುಧವಿದ್ದರೂ ನಿರಾಯುಧನಂತೆಯೇ ಸರಿ. ಇದರಿಂದ ಒಂದು ವಿಷಯ ಗೊತ್ತಾಯಿತು. ದೇವೇಂದ್ರನ ವಜ್ರಾಯುಧವೇ ಆದರೂ ಅದನ್ನು ಹಿಡಿದವನು ಓಡುಗುಳಿಯಾದರೆ ಅದು ಒಂದು ಹಿಡಿಗಡ್ಡಿಗೇ ಸಮ!" ಎಂದ ಸಿದ್ಧಸಾಧಕ.

ಕನಕಾಕ್ಷರಾಜನೂ, ಮಂತ್ರಿಯೂ ಚಾಚಿದ ಕೈಗಳನ್ನು ಹಾರಿ ಹಿಡಿದು ಗೋಡೆಗೆ ಕಾಲೂರುಗೊಟ್ಟು ಮೇಲಕ್ಕೆ ಹಾರಿ ಬಂದನು ಜಯಶೀಲ. ರಾಜಾ ಮಂತ್ರಿಗಳಿಬ್ಬರೂ ಅವನ ಭುಜವನ್ನು ತಟ್ಟಿತಟ್ಟಿ ಅಭಿನಂದಿಸಿದರು. ಆ ಕೂಡಲೇ ಸಿದ್ಧಸಾಧಕನು ಆತ್ಮಾತುರದಿಂದ ಅವನನ್ನು ಬಿಗಿಯಾಗಿ ಆಲಿಂಗಿಸಿ



ಕೊಂಡು, "ಜಯಶೀಲಾ! ನೀನು ಗಟ್ಟಿ ಗುಂಡಿಗೆಯ ವೀರಶಿರೋಮಣಿಯೆಂದು, ಸ್ಮಶಾನದಲ್ಲೇ ನಾನು ಲೆಕ್ಕಹಾಕಿದ್ದೆ. ನೀನು ನನಗೆ ಮಹಾಕಾಲನನ್ನು ವಶಪಡಿಸಿಕೊಳ್ಳಲು ಸಹಾಯ ಮಾಡಿದ್ದನ್ನು ಎಂದಿಗೂ ಮರೆಯಲಾರೆ. ಈಗ ಮಹಾರಾಜರಿಗೆ ಅವರ ಕುಮಾರನೂ ಕುಮಾರಿಯೂ ತಿರುಗಿ ದೊರೆಯುವಂತೆ ನಿನ್ನಿಂದಲೇ ಆಗಬಲ್ಲುದು. ಅವರಿಗೂ ನಿನ್ನ ನಿಜ ಸಂಗತಿಯೆಲ್ಲ ನಿರೂಪಣೆಯಾಯಿತಲ್ಲ?" ಎಂದನು.

"ಸಾಧಕನೇ, ಆ ಸಂಗತಿಗಳನ್ನೆಲ್ಲ ಮಹಾರಾಜರು ಭವನದೊಳಗೆ ಹೋದ ಮೇಲೆ ಮಾತಾಡುತ್ತಾರೆ. ನೀನು ಸ್ವಲ್ಪ ನಿನ್ನ ಆತುರವನ್ನು ತಡೆದುಕೋ" ಎಂದು ಮಂತ್ರಿ ಧರ್ಮಮಿತ್ರನು ದೂರದಲ್ಲಿರುವ ಸೇವಕರನ್ನು ಕೂಗಿ ಕರೆದು, ಮಂಗಳವರ್ಮನನ್ನು ಮೇಲಕ್ಕೆ ಕರೆ ತಂದು, ಅವನ ಗಾಯಕ್ಕೆ ತಕ್ಕ ಚಿಕಿತ್ಸೆಗೆ ಅಣಿಮಾಡಲು ಆಜ್ಞೆಮಾಡಿದನು.



ರಾಜನೊಂದಿಗೆ ಎಲ್ಲರೂ ಭವನದ ಕಡೆಗೆ ಹೊರಟರು. ಮೃಗಶಾಲೆಯ ಅಧಿಕಾರಿ ಹುಲಿಗಳ ಬೋನಿನ ಬಾಗಿಲನ್ನು ಮುಚ್ಚಿ, ಅವಮಾನದ ಭಾರದಿಂದ ಬಾಡಿಮುದುರಿ ದಿಕ್ಕುಗಳನ್ನು ನೋಡುತ್ತಿದ್ದ ಮಂಗಳವರ್ಮನ ಬಳಿಗೆ ಹೋಗಿ, ಅವನ ಭುಜದ ಮೇಲಿನ ಗಾಯವನ್ನು ಪರೀಕ್ಷಿಸಿ ನೋಡಿ, "ಇದೇನೂ ಅಷ್ಟು ಅಪಾಯಕರವಾದ ಗಾಯವಲ್ಲ. ಏಳೆಂಟು ದಿನಗಳಲ್ಲಿ ಕಡಮೆಯಾಗಿ ಹೋಗುತ್ತದೆ. ಆದರೆ ಆ ಜಯಶೀಲನೆಂಬ ಹೊಸ ಯುವಕ ಮೃಗಶಾಲೆಯಲ್ಲೇ ಉತ್ತಮ ಜಾತಿಯ ಒಂದು ಹುಲಿಯನ್ನು ಕೊಂದೇ ಬಿಟ್ಟನಲ್ಲ? ಅದನ್ನು ನಾನು ಕಾಡಿನಲ್ಲಿ ಹಿಡಿಯುವಾಗ ನಮ್ಮ ಇಬ್ಬರು ಸೇವಕರನ್ನು ಕೊಂದು ಹಾಕಿತ್ತು. ಅಂಥಾ ವೀರಧೀರ ಹುಲಿ ಇನ್ನೊಂದಿಲ್ಲ." ಎಂದು ಸತ್ತ ಹುಲಿಯ ಬಳಿಯಲ್ಲಿ ಕುಳಿತು ದುಃಖದಿಂದ ಹೇಳಿದನು. "ಹಾಳು ಹುಲಿ ಸತ್ತಿತೆಂದು ಅಷ್ಟೇನೂ ದುಃಖಪಡಬೇಡ ಬಿಡು. ಜಯಶೀಲನ ಕತ್ತಿಯಲ್ಲಿ ನಿಜ... ಅಮೋಘಶಕ್ತಿ ಉಂಟೆನ್ನುವಿಯಾ?" ಎಂದು ... ನನ್ನು ಕೇಳಿದ ಮಂಗಳವರ್ಮ.

ಈ ಮಾತಿನಿಂದ ಕೋಪಿಸಿಕೊಂಡ ಮೃಗಶಾಲೆ... ಅಧಿಕಾರಿ, ತನ್ನ ಕೋಪವನ್ನು ಹಲ್ಲುಕಡಿದು ಅದು... ಕೊಂಡು, "ಅಯ್ಯಾ, ಆ ಕತ್ತಿಗೆ ಶಕ್ತಿ ಉಂಟೋ ಇಲ್ಲವೋ ನಾನರಿಯೆ. ಒಂದು ವಿಷಯ ಮಾ... ನಿಜ. ಆ ಕತ್ತಿ ಮಹಾಹರಿತದ್ದು! ಮಿಂಚು ಹಾ... ವಂತೆ ಹಾರುವಂಥಾದ್ದು. ಅದನ್ನು ಉಪಯೋ... ಸುವವನೂ ಅಂಥವನೇ! ಅದೆಲ್ಲಾ ನಿಮ್ಮ ಕಣ್ಣ... ನಡೆದಾಗ ನೀವು ಕಣ್ಣು ಮುಚ್ಚಿಕೊಳ್ಳದೆ ನೋಡಿ... ರಷ್ಟೇ?" ಎಂದನು.

"ಹೂಂ. ಹಾಗಾದರೆ ಆ ಪರದೇಶಿಗೆ ಅ... ರಾಜ್ಯವೂ, ಸುಂದರಿಯಾದ ರಾಜಕುಮಾರಿಯೂ... ಸಿಗುವ ಅವಕಾಶವಿದೆ ಅನ್ನು. ಏನು ಮಾ... ವುದು?" ಎಂದ ಮಂಗಳವರ್ಮ ತನಗೆ... ಗೊಣಗಿಕೊಂಡಂತೆ.

ಮಂತ್ರಿ ಕಳುಹಿಸಿದ ನಾಲ್ಕುಮಂದಿ ಸೇವಕ... ಬಂದು ಮಂಗಳವರ್ಮನ ಕೈಗಳನ್ನು ಹಿಡಿ... ಕೊಂಡು ಪ್ರಾಕಾರದ ಮೇಲಕ್ಕೆ ಕರೆದುಕೊಂ... ಹೋದರು. ಅವನು ರಾಜಭವನದ ಕ... ನೋಡಿ, ಮುಂದುವರಿಯಲಾರದವನಾಗಿ ದಿ... ನಿಂದ, ಸೇವಕರನ್ನು ನೋಡಿ, "ಹೌದು, ಹು... ಯನ್ನು ಕೊಂದ ಆ ಹೊಸಬನಿಗೆ ಮಹಾರಾಜ... ಏನಾದರೂ ಬಹುಮಾನಕೊಟ್ಟು ಕಳುಹಿಸಿಬಿಟ್ಟರೋ, ಅಥವಾ ಯುವರಾಜ, ಯುವರಾಣಿಯರನ್ನು ಹುಡುಕುವ ಕೆಲಸವನ್ನು ಅವನಿಗೇ ಒಪ್ಪಿ... ದ್ದಾರೋ?" ಎಂದು ಕೇಳಿದನು.

"ಅಯ್ಯಾ, ಆ ಸಂಗತಿಗಳಾವುದೂ ನಮಗೆ ... ಯದು. ಎಲ್ಲರೂ ಭವನದೊಳಗೆ ಹೋಗುತ್ತಿದ್ದಾ... ಸ್ಮಶಾನದ ಕಾವಲುಗಾರನ ಮಗ ಮಾತ್ರ ಬಾಗಿಲ...

ಹತ್ತಿರ ನಿಂತಿದ್ದಾನೆ." ಎಂದು ಒಬ್ಬ ಸೇವಕ ಹೇಳಿದ. "ನಿಮ್ಮನ್ನು ಕರೆದುಕೊಂಡು ವೈದ್ಯರ ಬಳಿಗೆ ಹೋಗಲು ಹೇಳಿದ್ದಾರೆ. ಬನ್ನಿ. ಎಲ್ಲಾ ಅಲ್ಲೇ ಇದ್ದಾರೆ" ಎಂದು ಇನ್ನೊಬ್ಬ ಸೇವಕ ಮುಂದೆ ಹೋಗಲು ಮಂಗಳವರ್ಮ ಅವನನ್ನನುಸರಿಸಿದ.

ರಾಜನೂ ಮಂತ್ರಿ ಮುಂತಾದವರೂ ಮುಂದೆ ಹೋಗುತ್ತಿದ್ದಾಗ, ಬಾಗಿಲಲ್ಲಿ ನಿಂತಿದ್ದ ಸ್ಮಶಾನ ಕಾವಲುಗಾರನ ಮಗ, "ಮಹಾಪ್ರಭುಗಳೇ, ಸತ್ತು ಬದುಕಿದ ನನ್ನ ತಂದೆಯನ್ನು ಕೊಂದವನನ್ನು ಹೀಗೆ ಬಹುಮಾನಿಸುವುದುಂಟೇ ? ನನಗೇನಾದರೂ ನಷ್ಟ ಪರಿಹಾರ ಕೊಡಿಸಲಾರಿರಾ ?" ಎಂದು ದೈನ್ಯತೆ ಯಿಂದ ಕೂಗಿದ.

ಆ ಕೂಗು ಕೇಳಿ ಮಂತ್ರಿ ಧರ್ಮಮಿತ್ರನು ಹಿಂದಿ ರುಗಿ ನೋಡಿ ರಾಜನೊಂದಿಗೆ ಏನೋ ಮಾತಾಡಿ, ಸ್ಮಶಾನದವನನ್ನು ಕುರಿತು, "ಎಲೋ, ಆಯುಷ್ಯ ಮುಗಿದು ತಂದೆ ಸತ್ತದ್ದಕ್ಕೆ ಯಾಕೆ ಕೂಗುತ್ತೀ ? ಇದೋ ಈ ಸಂತೋಷದ ಸಮಯದಲ್ಲಿ ಮಹಾ ರಾಜರು ನಿನ್ನನ್ನು ನಗರದೊಳಗಿನ ಎಲ್ಲಾ ಸ್ಮಶಾನ ಗಳಿಗೂ ಮುಖ್ಯಾಧಿಕಾರಿಯಾಗಿ ನಿಯಮಿಸಿದ್ದಾರೆ. ಈಗ ನಿನಗೆ ಸಿಗುವ ಸಂಬಳಕ್ಕಿಂತ ನೂರು ಪಾಲು ಹೆಚ್ಚು ಕೊಡುತ್ತಾರೆ. ಇನ್ನು ಮುಗಿಯಿತಷ್ಟೇ ನಿನ ಗೋಳು ? ಹೋಗಿನ್ನು" ಎಂದನು.

"ಪ್ರಭುಗಳೇ ! ಯಥೇಷ್ಟವಾಯಿತು. ಸಾಯುವ ವರೆಗೂ ನಿಮ್ಮ ಉಪಕಾರ ಮರೆಯಲಾರೆ. ನನ್ನ ಅಪ್ಪ ಸತ್ತದ್ದಕ್ಕೆ ಒಂದು ದುಃಖ, ಬದುಕಿ ಎದ್ದವರು ಪುನಃ ಸತ್ತದ್ದಕ್ಕೆ ಇನ್ನೊಂದು ದುಃಖ. ಎದ್ದವರು ಇನ್ನೂ ಬದುಕಿರುತ್ತಿದ್ದರೆ ಈಗ ನನಗೆ ಬಂದ ಪದವಿಯನ್ನು ನೋಡಿ ಎಷ್ಟು ಸಂತೋಷ ಪಡು ತ್ತಿದ್ದರು! ಏನು ಮಾಡುವುದು ? ಪುಣ್ಯವಿಲ್ಲ ! ಅವರ ಹಣೆಯಲ್ಲಿ ಬರೆದುದೇ ಅಷ್ಟು !" ಎಂದ ಸ್ಮಶಾನ ದವನ ಮಗ.



ಮಂತ್ರಿ ಧರ್ಮಮಿತ್ರನು ನಗುತ್ತ "ಸರಿ ಸರಿ. ಹೋಗಿನ್ನು ಅಂದೆನಲ್ಲಾ ?" ಎಂದು ಮತ್ತೊಮ್ಮೆ ಅವನಿಗೆ ಹೇಳಿ, ಭವನದೊಳಗೆ ಹೋಗಿಬಿಟ್ಟನು. ಕನಕಾಕ್ಷರಾಜನು ಉನ್ನತಾಸನದ ಮೇಲೆ ಸ್ವಲ್ಪ ಹೊತ್ತು ಆಲೋಚನೆ ಮಾಡುತ್ತಾ ಕುಳಿತಿದ್ದು, ಆಮೇಲೆ ಮಂತ್ರಿಯನ್ನು ನೋಡಿ, "ಮಹಾಮಂತ್ರಿ ಗಳೇ, ಈಗ ಏನು ಮಾಡೋಣ ? ಯುವರಾಜ ನನ್ನೂ ಯುವರಾಣಿಯನ್ನೂ ಹುಡುಕಿ ಕರೆದು ತರುವ ಪ್ರಯತ್ನದಲ್ಲಿ ನಮ್ಮ ಕಡೆಯ ವೀರಾಧಿ ವೀರರೆಲ್ಲ ವಿಫಲರಾಗಿ ಹೋದರಷ್ಟೆ ? ಆ ಭಾರ ವನ್ನು ಧೈರ್ಯವಂತನೂ, ಶಕ್ತಿವಂತನೂ ಎಂಬು ದನ್ನು ಎಲ್ಲರೆದುರು ನಿರೂಪಿಸಿದ ಈ ಜಯಶೀಲನ ಮೇಲೆ ಹಾಕಬಹುದೆ ?" ಎಂದು ಕೇಳಿದನು.

ಕೂಡಲೇ ಸಿದ್ಧಸಾಧಕನು ಆತುರದಿಂದ, "ಇನ್ನು ಮೀನಮೇಷ ನೋಡುವ ಅಗತ್ಯವೇ ಇಲ್ಲ ಮಹಾ ರಾಜರೇ. ತಮ್ಮ ಇಬ್ಬರು ಮಕ್ಕಳನ್ನೂ ಹುಡುಕಿ

ಕರೆತರಲು ಧೈರ್ಯ ಮತ್ತು ಶಕ್ತಿಸಾಮರ್ಥ್ಯಗಳಿದ್ದರೆ ಮಾತ್ರ ಸಾಲದು. ಅವುಗಳೊಂದಿಗೆ ಅಲೌಕಿಕ ಶಕ್ತಿಯ ಬೆಂಬಲವೂ ಬೇಕಾಗುತ್ತೆ. ಅಂತಹ ಶಕ್ತಿ ಜಯಶೀಲನಿಗೆ ಆಕಸ್ಮಿಕವಾಗಿ ಬಂದಿದೆ. ಆದುದರಿಂದ ಜಯಶೀಲನೇ ತಕ್ಕವನು. ಅವನೊಂದಿಗೆ ಹೋಗಲು ದಯಮಾಡಿ ನನಗೂ ಅನುಮತಿ ಕೊಡಬೇಕು. ಆತನ ಮೇಲೆ ವಿಶ್ವಾಸವಿಡುವ ವಿಷಯದಲ್ಲಿ ನಾನೇ ಜವಾಬುದಾರನಾಗಿರುತ್ತೇನೆ." ಎಂದನು.


ಜಯಶೀಲನು ಇಷ್ಟವಿಲ್ಲದವನಂತೆ ತಲೆಯಾಡಿಸುತ್ತ "ಮಹಾಪ್ರಭುಗಳ ಮುಂದೆ ನನ್ನದೊಂದು ವಿಜ್ಞಾಪನೆ" ಎಂದನು. "ಏನು ಹೇಳಿಬಿಡು. ನಿನ್ನ ಅಭಿಪ್ರಾಯವನ್ನು ಅಗತ್ಯವಾಗಿ ತಿಳಿಯಬೇಕು ನಾವು" ಎಂದ ಕನಕಾಕ್ಷರಾಜ.


"ಮಹಾಪ್ರಭುಗಳೇ, ನಾನು ನನ್ನ ದೇಶವನ್ನು ಬಿಟ್ಟು ಬದುಕುವ ದಾರಿ ಹುಡುಕುತ್ತಾ, ತಮ್ಮ ಹತ್ತಿರ ಏನಾದರೊಂದು ಚಿಕ್ಕ ಉದ್ಯೋಗವನ್ನು ಪ್ರಾರ್ಥಿಸಲು ಬಂದವನು. ಅಂತಹುದೇನಾದರೂ ಕೊಟ್ಟರೆ ಉಪ್ಪು ತಿನ್ನುವವನೆಂಬ ರೀತಿಯಲ್ಲಿ ಕೃತಜ್ಞನಾಗಿರುತ್ತೇನೆ." ಎಂದ ಜಯಶೀಲ.

ಕನಕಾಕ್ಷರಾಜನು ಮಂತ್ರಿಯ ಕಡೆಗೆ ಅರ್ಥಪೂರ್ಣವಾಗಿ ನೋಡಿದನು. ಅದನ್ನರಿತು ಮಂತ್ರಿ ಜಯಶೀಲನನ್ನು ನೋಡಿ, "ಜಯಶೀಲ, ಮಹಾರಾಜರು ನಿನಗೆ ತಕ್ಕ ಉದ್ಯೋಗವನ್ನು ಕೊಟ್ಟು ತಮ್ಮ ಭೃತ್ಯರಲ್ಲೊಬ್ಬನಾಗಿ ಸೇರಿಸಿಕೊಂಡಿದ್ದಾರೆ. ಇನ್ನು ರಾಜಾಜ್ಞೆಯನು ಪಾಲಿಸಬೇಕಾದುದು ಭೃತ್ಯನ ಧರ್ಮಮಾತ್ರದಷ್ಟೆ?" ಎಂದನು.

"ಧರ್ಮ ಮಾತ್ರವಲ್ಲ ಒಡೆಯರೇ, ವಿಧಿ ಕೂಡಾ. ಅಪ್ಪಣೆಯಾಗಲಿ !" ಎಂದು ಕೈಮುಗಿದು ನಿಂತನು ಜಯಶೀಲ. ಮಂತ್ರಿ ಧರ್ಮಮಿತ್ರನು ತೃಪ್ತಿಯ ಮುಗುಳುನಗುವಿನೊಂದಿಗೆ ತಲೆಯಾಡಿಸಿ, "ಜಯಶೀಲಾ, ನೀನು, ಕಣ್ಮರೆಯಾಗಿರುವ ಯುವರಾಜ ಮತ್ತು ಯುವರಾಣಿಯರನ್ನು ಹುಡುಕಿಕೊಂಡು ಬರಲು ಹೋಗಬೇಕೆಂದು ಮಹಾರಾಜರು ಆಜ್ಞಾಪಿಸುತ್ತಾರೆ." ಎಂದನು.

ಜಯಶೀಲನು ತಲೆಬಾಗಿ ನಮಸ್ಕರಿಸಿದನು. ಅಷ್ಟರಲ್ಲಿ ಸೇವಕನೊಬ್ಬನು ಆತುರದಿಂದ ಬರುವುದು ಕಾಣಿಸಿತು. ಅವನ ಕೈಯಲ್ಲಿ ಒಂದು ಮುತ್ತಿನ ಹಾರವೂ, ಮುರಿದ ಕತ್ತಿಯೂ ಇದ್ದಿತು. ಅವನು ಅವುಗಳನ್ನು ರಾಜಾ ಮಂತ್ರಿಗಳ ಮುಂದೆ ತೋರಿಸುತ್ತ, "ಮಹಾಸ್ವಾಮಿಗಳೇ, ಇವೆರಡೂ ನಮ್ಮ ಯುವರಾಜ ಯುವರಾಣಿಯರು ಕಾಣೆಯಾಗಿ ಹೋದ ಮರದ ಹತ್ತಿರ ಒಬ್ಬ ಬೇಡನಿಗೆ ಸಿಕ್ಕಿರುತ್ತವೆ. ಅವನು ಬುದ್ಧಿ ಕೆಟ್ಟ ಸ್ಥಿತಿಯಲ್ಲಿ ಬಿದ್ದಿದ್ದಾನೆ" ಎಂದು ಹೇಳಿದನು. (ಮುಂದುವರಿಯುವುದು)





# ಮಾಯಾಸರೋವರ

೫

[ಸೇನಾಪತಿಯ ಮಗನಾದ ಮಂಗಳವರ್ಮನನ್ನು ಜಯಶೀಲನೇ ಹುಲಿಯ ಬಾಯಿಯಿಂದ ಕಾಪಾಡಿಬಿಟ್ಟನು. ...ಕ್ಷರಾಜನು ಅವನನ್ನು ತುಂಬಾ ಮೆಚ್ಚಿ, ಮಂತ್ರಿಯ ಅಭಿಪ್ರಾಯದಂತೆ ಅವನಿಗೊಂದು ಉದ್ಯೋಗವನ್ನು ಕೊಟ್ಟನು. ರಾಜನ ಮಕ್ಕಳನ್ನು ಹುಡುಕುವ ಭಾರವನ್ನೂ ಅವನಿಗೆ ಒಪ್ಪಿಸಲಾಯಿತು. ಆಗ ...ಕನೊಬ್ಬ ಮುರಿದ ಕತ್ತಿಯನ್ನೂ ಮುತ್ತಿನಹಾರವನ್ನೂ ಹಿಡಿದುಕೊಂಡು ಅಲ್ಲಿಗೆ ಬಂದನು.]

...ಕ್ಷರಾಜನು ಅತ್ಯಾಶ್ಚರ್ಯದಿಂದ ಮಂತ್ರಿ ...ಮಿತ್ರನ ಮುಖವನ್ನು ನೋಡಿದನು. ...ಕೈಯಲ್ಲಿರುವ ಕತ್ತಿಯನ್ನೂ ಮುತ್ತಿನ ಹಾರ ...ನೋಡಿ ಧರ್ಮಮಿತ್ರನಿಗೂ ಏನೋ ಹೊಸ ...ವಾದಂತೆನಿಸಿತು.

...ನು ರಾಜನನ್ನು ನೋಡಿ ತಲೆದೂಗಿ, ಮುತ್ತಿನ ...ವನ್ನು ಹಿಡಿದು ಪರೀಕ್ಷಿಸುತ್ತ, "ಮಹಾರಾಜರೆ, ...ಮುತ್ತಿನ ಹಾರವು ನಮ್ಮ ಯುವರಾಣಿಯದೇ ...ದು ನಿಜವೇನು? ಅದರಂತೆ ಈ ಮುರಿದ ಕತ್ತಿ ... ಯುವರಾಜನದೇ ಎಂದು ನಿಶ್ಚಯ ಮಾಡಿಕೊಳ್ಳಬಹುದೇ? ಈ ಸಂದೇಹವನ್ನು ಮೊದಲು ಪರಿಹರಿಸಿಕೊಂಡು ಮುಂದಿನ ವಿಷಯ ಆಲೋಚನೆ ಮಾಡಬೇಕು" ಎಂದನು.

ರಾಜನು ಕೂಡಾ ಮಂತ್ರಿಯ ಸಂದೇಹವನ್ನು ಅನುಮೋದಿಸಿದವನಾಗಿ ತಲೆಯೊಲಿಯುತ್ತ, ಮುತ್ತಿನ ಹಾರವನ್ನೂ ಕತ್ತಿಯನ್ನೂ ಪರೀಕ್ಷಿಸಿ ನೋಡುತ್ತ, "ನಮ್ಮ ಮಕ್ಕಳು ಅರಣ್ಯದಲ್ಲಿದ್ದ ಮರದ ಹತ್ತಿರದಿಂದ ಕಾಣದೇ ಹೋದ ಸ್ಥಳದಲ್ಲೇ ಇವೆರಡೂ ವಸ್ತುಗಳು ದೊರಕಿವೆ ಎಂದು ಹೇಳಿದ್ದರೆ ಇವು ನಮ್ಮ ಮಕ್ಕಳದೇ ಎಂದು ಅನುಮಾನ



ಕೂಡಾ ಬಂದಿರಲಿಕ್ಕಿಲ್ಲ. ಹೌದು. ಈಗ ಈ ಅನುಮಾನ ಹೇಗೆ ಪರಿಹರಿಸಿಕೊಳ್ಳೋಣ ?" ಎಂದನು.

"ಅದಕ್ಕೆ ಕಷ್ಟವೇನಿಲ್ಲ ಮಹಾರಾಜರೇ, ಇವುಗಳನ್ನು ಚೆನ್ನಾಗಿ ತಿಳಿದವರು ನೋಡಿ ಹೇಳಬೇಕಾಗಿದೆ. ಅಂಥವರಿಗೇ ತೋರಿಸಿ ಕೇಳಿದರೆ ಕೂಡಲೇ ನಿಜ ತಿಳಿಯುತ್ತದೆ. ಯುವರಾಣಿಯ ಮುಖ್ಯ ಗೆಳತಿ ತಾನೇ ಮಲ್ಲಿಕಾ ? ಅವಳನ್ನು ಕರೆಸಿ ಕೇಳಿದರೆ ಹಾರದ ವಿಷಯ ಗೊತ್ತಾದೀತು. ಕತ್ತಿಯ ವಿಷಯ ಅವಳಿಗೆ ತಿಳಿಯದಿದ್ದರೂ, ಅದನ್ನು ಆಮೇಲೆ ನೋಡುವ" ಎಂದ ಧರ್ಮಮಿತ್ರ.

ರಾಜನ ಆಜ್ಞೆಯಂತೆ ಸೇವಕನೊಬ್ಬ ಓಡಿಹೋಗಿ ಮಲ್ಲಿಕಾಳನ್ನು ಕರೆದುಕೊಂಡು ಬಂದನು. ಅವಳ ಮುಖವು ತುಂಬ ದುಗುಡದಿಂದಿರುವವಳಂತೆ ಕಾಣಿಸುತ್ತಿತ್ತು. ತನ್ನ ಗೆಳತಿಯಾದ ರಾಜಕುಮಾರಿ ಅವಳಿಗೆ ಒಡತಿಯೂ ಹೌದು. ಅವಳ ಕಣ್ಮರೆಯಿಂದ ಇವಳು ದುಃಖದಲ್ಲಿರುವುದು ಸಹಜವೇ. ಅಂತೆಯೇ ಅವಳು ಆತ್ಮಾಕರೆಯಿಂದ ರಾಜಮಂತ್ರಿಗಳನ್ನು ನೋ...

ರಾಜನು ಅವಳ ಕೈಗೆ ಮುತ್ತಿನ ಹಾರ... ಕೊಟ್ಟು, "ಇದನ್ನು ನೋಡು ಮಲ್ಲಿಕಾ. ಅಂತಃಪುರದವರಾರೋ ಕಳೆದುಕೊಂಡಿರ... ಯಾರದೆಂಬುದು ನಿನಗೆ ಗೊತ್ತಿರಬಹುದು. ... ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು... ಅದಕ್ಕೇ ಕರೆಸಿದೆವು," ಎಂದನು. ಅದು ಎ... ತೆಂಬುದನ್ನು ಅವಳಿಗೆ ಹೇಳಲಿಲ್ಲ.

ಮಲ್ಲಿಕ ಕುತೂಹಲದಿಂದ ಹಾರದಲ್ಲಿರುವ ಮುತ್ತನ್ನೂ ತಡವಿ ತಡವಿ ನೋಡುತ್ತ... ಕ್ಕಿದ್ದಂತೆ ಎರಡು ಮುತ್ತುಗಳ ಮೇಲೆ ಬೆ... "ಹೌದು, ಮಹಾ ಪ್ರಭುಗಳೇ. ಇದು ನನ್ನ... ಯುವರಾಣಿಯ ಹಾರ! ಇದೀಗ ಎಲ್ಲಿ... ಹೇಗೆ ಸಿಕ್ಕಿತು ? ನಾವೆಲ್ಲಾ ಅರಣ್ಯ... ಹೋದಾಗ, ಅವಳು ಈ ಮುತ್ತಿನ ಹಾ... ಧರಿಸಿಕೊಂಡಿದ್ದಳು" ಎಂದಳು.

ಅವಳು ಹಾಗೆ ಹೇಳಿದುದನ್ನು ಕೇಳಿದ ಕ... ಕನಕಾಕ್ಷರಾಜನ ಮನಸ್ಸು ಚಿವುಕ್ಕೆಂದಿತು. ಮಲ್ಲಿಕಳಿಗೆ ಮತ್ತೇನೋ ಕೇಳಬೇಕೆಂದು ಪ್ರಯ... ನಾದರೂ, ಮಗಳ ನೆನಪಿನಿಂದ ಕಂಠ ಕಟ್ಟಿ... ಶಬ್ದವೇ ಹೊರಡದಾಯಿತು. ಕಣ್ಣು... ಮಂಜಾದುವು. ಕೂಡಲೇ ಮುಖವನ್ನು ತಿರುಗಿಸಿ ಗಂಟಲು ಕೆನೆಯುತ್ತ, ಶಾಲುವೆಯ... ಗೊತ್ತಿಕೊಂಡನು.

ರಾಜನ ಸ್ಥಿತಿಯನ್ನು ಗಮನಿಸಿದ ಮಂತ್ರಿ... ಮಿತ್ರನು ಮಲ್ಲಿಕಳನ್ನು ಕುರಿತು, "ಹೌದು... ಇಂತಹ ಮುತ್ತಿನ ಹಾರಗಳನ್ನು ಎಷ್ಟೋ ಶ್ರೀ... ಮನೆಯ ಹೆಣ್ಣು ಮಕ್ಕಳು ಧರಿಸಬಹುದ... ಹಾರ ನಮ್ಮ ಯುವರಾಣಿಯದೇ ಎಂದು... ವಾಗಿ ಹೇಗೆ ಹೇಳುತ್ತೀ ? ಏನಾದರೂ ಗುರುತಿದೆಯೆ ?" ಎಂದು ಕೇಳಿದ.




ಳ್ಳಿ ಮಂತ್ರಿಯ ಸಮೀಪ ಬಂದು, ಹಾರ
ದ ಎರಡು ಮುತ್ತುಗಳನ್ನು ತೋರಿಸುತ್ತ,
ನಂತೆ ಕಾಣುವ ಈ ಎರಡು ಮುತ್ತುಗಳನ್ನು
ು. ಒಂದುಸಾರಿ ಯುವರಾಣಿಗೆ ನನ್ನ ಮೇಲೆ
ಒಂದು ಮಾತಿಗೆ ಕೋಪ ಬಂದು, ಕೊರಳಿಗೆ
ಳ್ಳಲು ಕೈಯಲ್ಲಿ ಎತ್ತಿಕೊಂಡಿದ್ದ ಈ ಹಾರ
ನನ್ನ ಕಡೆಗೆ ಬೀಸಿ ಒಗೆದಳು. ಆಗ ನಾನು
ಕೊಂಡದ್ದರಿಂದ ಗುರಿ ತಪ್ಪಿ ಹಾರವು ಮರದ
ಕ್ಕೆ ತಗಲಿತು. ಆಗ ಈ ಎರಡು ಮುತ್ತುಗಳು
ಬಿದ್ದುವು. ನಮ್ಮ ಆಸ್ಥಾನದ ಸ್ವರ್ಣಕಾರನ
ಕೊಟ್ಟು ಹೊಸ ಮುತ್ತುಗಳನ್ನು ಹಾಕಿಸ
ಅಂದುಕೊಂಡೆವು ಅದಕ್ಕೆ ಸಮಯ
ಕೂಡಿಬರಲಿಲ್ಲ." ಎಂದಳು.

ಮಾತು ಕೇಳಿದ ಮೇಲೆ ರಾಜನಿಗೂ
ಗೂ ಸಂದೇಹವೇನೂ ಉಳಿಯಲಿಲ್ಲ. ಆದ
ಗೆ ಮುರಿದು ಬಿದ್ದಿದ್ದ ಕತ್ತಿ ಕೂಡಾ ಯುವ
ಕಾಂಚನವರ್ಮನದೇ ಎಂಬುದರಲ್ಲಿ ಯಾರಿಗೂ
ಉಳಿಯಲಿಲ್ಲ. ಆದರೆ ಆ ಕತ್ತಿ ಅರ್ಧ
ಮುರಿದು ಹೋಗಿರುವುದನ್ನು ನೆನೆಯುವಾಗ
ಕೆಟ್ಟ ಕಲ್ಪನೆಗಳು ಬರುತ್ತ ಭಯವೇಳುತ್ತ
ಮಂತ್ರಿಗಳನ್ನು ತಳಮಳ ಪಡಿಸುತ್ತಿದ್ದುವು.
ಬಲವಾದ ಕತ್ತಿ ಹೀಗೆ ಮುರಿಯ
ಅದಕ್ಕೆ ಬಿದ್ದ ಪ್ರತಿಭಟನೆ ಎಷ್ಟೊಂದು
ಬೇಡ !

ರಾಜನು ತನ್ನ ಭಯವನ್ನು ಹತ್ತೊತ್ತಿ
ಗೆ, ಜಯಶೀಲನಿಗೆ ಅದನ್ನು ಕೊಡುತ್ತ,
ಜಯಶೀಲಾ, ಈ ಕತ್ತಿ ಯಾವ ಕಾರಣ
ಮುರಿದಿರಬಹುದೆಂದು ನಿನಗೆ ಕಾಣುತ್ತದೆ ?
ವನ್ನು ಹೀಗೆ ಮಾಡಿದ ಶಕ್ತಿ ಯಾವ ರೀತಿ
ತು ?" ಎಂದು ಕೇಳಿದನು. ಜಯಶೀಲನು
ನ್ನು ಸ್ವಲ್ಪ ಹೊತ್ತು ಹಾಗೆ ಹೀಗೆ
ಪರೀಕ್ಷಿಸಿದ ಮೇಲೆ, "ಮಹಾರಾಜರೆ, ಯುವ
ರಾಜರು ಮಹಾವೀರರೆಂದು ಈ ಕತ್ತಿಯಿಂದ ಗೊತ್ತಾ
ಗುತ್ತದೆ. ಅವರು ಶತ್ರುವಿನೊಂದಿಗೆ ಬಹು ಚೆನ್ನಾಗಿ
ಹೋರಾಡಬಲ್ಲವರು. ಆದರೆ ಈ ಕತ್ತಿ ಶತ್ರುವಿನ
ಶರೀರಕ್ಕೆ ತಾಗಿ ಮುರಿದಂತಿಲ್ಲ. ಗಟ್ಟಿಯಾದ ಕಲ್ಲಿಗೆ
ಅಥವಾ ಮರದ ಬೊಡ್ಡೆಗೆ ತಾಗಿದುದರಿಂದಲೇ
ಮುರಿದು ಹೋಗಿದೆ. ಪ್ರತಿಭಟನೆಯ ಶಕ್ತಿ ತಾನು
ಮುರಿದುಬೀಳುವುದನ್ನು ತಪ್ಪಿಸಿಕೊಂಡುದರಿಂದ, ಈ
ಕತ್ತಿ ಕಠಿನ ವಸ್ತುವಿಗೆ ತಾಗಿ ಮುರಿದಿದೆ ಎಂದನು."

"ಹಾಗೆ ನಡೆದಿದ್ದರೆ ಮುರಿದು ಬಿದ್ದ ಇನ್ನೊಂದು
ತುಂಡು ಅಲ್ಲೆಲ್ಲಾದರೂ ಸಿಕ್ಕಿರಬೇಕಿತ್ತಲ್ಲವೇ? ಅಲ್ಲದೆ,
ಇವುಗಳನ್ನು ಕಂಡು ಹಿಡಿದ ಆ ಬೇಡರವನ ಸಂಗತಿ
ತಿಳಿಯಬೇಕಲ್ಲ ? ಅವನಿಗೆ ಇನ್ನೂ ಹೆಚ್ಚಿನ ವಿಷಯ
ಗೊತ್ತಿದ್ದೀತು ?" ಎಂದು ನುಡಿದು ಮಂತ್ರಿ ಧರ್ಮ
ಮಿತ್ರನು ಹಾರವನ್ನೂ, ಕತ್ತಿಯನ್ನೂ ತಂದ ಸೇವಕನ
ಮುಖವನ್ನು ಪ್ರಶ್ನಾರ್ಥವಾಗಿ ನೋಡಿದನು.




ಆ ಸೇವಕನು ಮುಂದೆ ಬಂದು, "ಅಯ್ಯಾ ಮಹಾಸ್ವಾಮಿ, ಆ ಬೇಡರವನು ತುಂಬ ವಿಚಿತ್ರ ಪರಿಸ್ಥಿತಿಯಲ್ಲಿದ್ದ. ಕೇಳುವ ಪ್ರಶ್ನೆಗಳಿಗೆ ಸರಿಯಾಗಿ ಜವಾಬು ಹೇಳಲಿಕ್ಕೂ ಅವನ ಬುದ್ಧಿ ಸ್ಥಿಮಿತದಲ್ಲಿರಲಿಲ್ಲ. ಹುಚ್ಚು ನೋಟದಿಂದ ಆಚೀಚೆ ನೋಡುತ್ತಾನೆ. ಆಗಾಗ ಎರಡು ಕಾಲಿನ ಮೊಸಳೆ ಅನ್ನುತ್ತಾನೆ. ಇದ್ದಕ್ಕಿದ್ದ ಹಾಗೆ ಕೂಗುತ್ತಾನೆ. ಅವನಿಗೇನೋ ಭೂತ ಬಡಿದ ಹಾಗಿದೆ. ಅವನ ಕಡೆಯವರು ಭೂತ ವೈದ್ಯನನ್ನು ಕರೆಯಿಸಿ ಏನೇನೋ ಮಂತ್ರ ಚಿಕಿತ್ಸೆ ನಡೆಸಿಕೊಂಡಿದ್ದಾರೆ. ಬುದ್ಧಿ ಕೆಟ್ಟಿರುವ ಅವನು ಯಾವುದನ್ನೂ ಸರಿಯಾಗಿ ಹೇಳುತ್ತಿರಲಿಲ್ಲ. ನಾನು ಈ ಕತ್ತಿಯನ್ನೂ ಮುತ್ತಿನ ಹಾರವನ್ನೂ ನೋಡಿ ನಮ್ಮ ಯುವರಾಜ, ಯುವರಾಣಿಯರದೇನೋ ಎಂಬ ಅನುಮಾನದಿಂದ ತೆಗೆದುಕೊಂಡುಬಂದೆ" ಎಂದನು.

ಸೇವಕನ ಬಾಯಿಯಿಂದ ಹೊರಟ ಹೊಸ ಸಂಗತಿಯನ್ನು ಕೇಳಿ ಸಿದ್ಧಸಾಧಕನಿಗೆ ಏನೋ ಸ್ಫುರಿಸಿತು. ಅವನು "ಓಹ್ಹೋ! ಅದೋ ಸಂಗತಿ!" ಎಂದು ಹೇಳಿಕೊಂಡು, "ಮಹಾರಾಜರೇ, ಮಹಾ... ಪರಿವಾರದ ಕೆಲವು ಪಿಶಾಚಿಗಳು ಆಗಾಗ ಬ... ವೇಷದಲ್ಲಿ ಮನುಷ್ಯರಿಗೆ ಕಾಣಿಸುತ್ತವೆಂಬ... ತಮಗೆ ಗೊತ್ತಿರಬಹುದು. ಆ ಬೇಡರವನನ್ನು ಭೂತವು ಅಂತಹುದೇ ಒಂದು ಪಿಶಾಚಿ... ಬೇಕೆಂದು ನನಗೆ ತೋರುತ್ತದೆ. ಅದನ್ನು ಈ ವಸ್ತುಗಳು ಅವನಿಗೆ ಹೇಗೆ ಸಿಕ್ಕಿದುವೆಂಬು... ಅವನಿಂದಲೇ ಬಾಯಿ ಬಿಡಿಸುತ್ತೇನೆ. ನನಗೂ ಶೀಲನಿಗೂ ಅಪ್ಪಣೆಕೊಡಿರಿ. ಈ ಸೇವಕನು ... ವನ್ನು ನಮಗೆ ತೋರಿಸಲಿ" ಎಂದನು.

ಯುವರಾಜ, ಯುವರಾಣಿಯರ ಮಾಯ... ಆ ಬೇಡರವನ ಬುದ್ಧಿ ಚಾಂಚಲ್ಯಕ್ಕೂ ಏನಾ... ಸಂಬಂಧವಿರಬಹುದೆಂದು ಮಂತ್ರಿ ಧರ್ಮಮಿತ್ರ... ರಾಜನಿಗೂ ಸಂದೇಹವುಂಟಾಯಿತು. ಅವರಿ... ಮುಂದೇನೆಂಬುದನ್ನು ಕುರಿತು ತಮ್ಮೊಳಗೆ ... ಕೊಳ್ಳುತ್ತಿರಲು, ಜಯಶೀಲನು "ಮಹಾರಾ... ನಿಮ್ಮ ಕುಮಾರ, ಕುಮಾರಿಯರು ಕಾ... ಹೋದ ಸ್ಥಳದ ಹತ್ತಿರವೇ ಬೇಡನಿಗೆ ಈ ವ... ಸಿಕ್ಕಿವೆ. ಅವನನ್ನು ಮತ್ತಾರೋ ಬೆದರಿಸಿ ಕೆಡಿಸಿ ಹಾಕಿದ್ದಾರೆ. ನಾವೀಗ ಅಲ್ಲಿಗೇ ಹೋಗಿ ವಿವರಗಳನ್ನು ತಿಳಿಯುವುದೇ ಸಂದರ್ಭೋಚಿ... ವೆಂದು ನನಗೂ ಕಾಣುತ್ತದೆ. ಆದುದ... ನಾವಿಬ್ಬರೂ ಬೇಗ ಅಲ್ಲಿಗೆ ಹೋಗಬೇಕು" ಎ...

ಇದಕ್ಕೆ ರಾಜನೂ ಮಂತ್ರಿಯೂ ಒಪ್ಪಿಗೆ ಕೊ... ಕೂಡಲೇ ಜಯಶೀಲನೂ ಸಿದ್ಧಸಾಧಕನೂ ಸೇವಕರು ತಂದು ನಿಲ್ಲಿಸಿದ ಕುದುರೆಗಳ... ಕುಳಿತುಹೊರಟರು.


ಅವರಿಗೆ ದಾರಿ ತೋರಿಸಲು, ಅರಣ್ಯದಿಂದ ಸೇವಕನು ಸಹಾಯಕನಾಗಿ ಮುಂದಿನಿಂದ ಸಾ... ಹಾಗೆ ಮೂವರೂ ಕುದುರೆಗಳ ಮೇಲೆ ವೇ...


ಒಂದು ಗಂಟೆಯು ಮೇಲೆ ಅರಣ್ಯದಲ್ಲಿದ್ದ ...ದೊಂದು ಬೀಳಲು ತುಂಬಿದ ಆಲದ ಮರದ ...ನ್ನು ಸೇರಿದರು. ತುಸು ದೂರದಲ್ಲಿ ದೊಡ್ಡ ...ಪೊದೆಗಳೂ, ಮರಗಳೂ, ಅವುಗಳಾಚೆಗೆ ...ದೂರ ದೊಡ್ಡ ದೊಡ್ಡ ಬೆಟ್ಟಗಳೂ ಇದ್ದುವು. ...ಲದ ಮರದ ಬುಡದಲ್ಲಿ ಹತ್ತು ಹನ್ನೆರಡು ...ಬೇಡರ ಗುಂಪು ಗಡಿಬಿಡಿಯಲ್ಲಿದ್ದಂತೆ ...ತ್ತು. ಅವರ ಮಧ್ಯೆ ಬುದ್ಧಿಕೆಟ್ಟ ಬೇಡನೊಬ್ಬ ...ನ್ನು ಕಟ್ಟಲ್ಪಟ್ಟ ಸ್ಥಿತಿಯಲ್ಲಿ ಹೊರಳಾಡುತ್ತಿದ್ದ. ...ವೈದ್ಯನೊಬ್ಬ ತನ್ನ ಕೈಯಲ್ಲಿ ಹಾವಿನಾಕಾರದ ಕೋಲನ್ನೂ, ಇನ್ನೊಂದು ಕೈಯಲ್ಲಿ ಕಸಬರಿಕೆ ...ಹಿಡಿದುಕೊಂಡು ಬೀಸುತ್ತ ಕುಣಿಯುತ್ತ, ... ಹ್ರೀಂ, ಹಟ್, ಫಟ್..." ಎಂದು ...ಮಂತ್ರ ಹಾಕುತ್ತಿದ್ದ. ಅವರ ಸುತ್ತಲೂ ...ರು ಭಯ ಭಕ್ತಿಯಿಂದ, ಬಿಟ್ಟ ಕಣ್ಣು ಬಿಟ್ಟ ...ಗಳಿಂದ ಸ್ತಬ್ಧರಾಗಿದ್ದರು. ಅಟ್ಟಹಾಸ ಮಾಡು ...ಆ ಭೂತವೈದ್ಯ ಹೊಸತಾಗಿ ಬಂದವರನ್ನು ಸುಟ್ಟು ಬಿಡುವ ಹಾಗೆ ಕಿಡಿ ಗಣ್ಣುಗಳಿಂದ ನೋಡುತ್ತಿರಲು, ಮೂವರೂ ಕುದುರೆಯಿಂದಿಳಿದು ಅವರನ್ನು ಸಮೀಪಿಸ ತೊಡಗಿದರು.

ಸಿದ್ಧಸಾಧಕನು ಮುಂದಾಗಿ ನಡೆಯುತ್ತ, ಭೂತವೈದ್ಯನನ್ನು ಲೆಕ್ಕಹಾಕುವವನಂತೆ ನೋಡುತ್ತ, ಇದ್ದಕ್ಕಿದ್ದ ಹಾಗೆ ತನ್ನ ಕೈಯಲ್ಲಿದ್ದ ದಂಡವನ್ನು ಮೇಲಕ್ಕೆತ್ತಿ, "ನಿಲ್ಲಿಸು ! ನಿಲ್ಲಿಸು !" ಎಂದು ಕಾಡೇ ದದ್ದರಿಸುವಂತೆ, ಗರ್ಜಿಸಿದನು.

ಭೂತವೈದ್ಯನು ಸಿದ್ಧಸಾಧಕನನ್ನು ನೋಡುತ್ತಾ ಹಲ್ಲು ಕಡಿಯುತ್ತಾ, ಒಮ್ಮೆಲೇ ಅವನ ಮೇಲೆ ಹಾರಲು ಬಂದನು. ಆಗ ರಾಜಸೇವಕನು ಮುಂದೆ ಹಾರಿಬಂದು ಅವನನ್ನು ಅಡ್ಡಕಟ್ಟಿ, "ಅವರು ನಿಲ್ಲೆಂದರೆ ನಿಲ್ಲಬೇಕು. ಅವರ ಮಾತು ರಾಜಾಜ್ಞೆಗೆ ಸಮ ! ಅವರು ಯಾರು ಗೊತ್ತೇ ? ಮಹಾರಾಜರ ಆಸ್ಥಾನ ಮಾಂತ್ರಿಕರು !" ಎಂದನು.

ಆ ಮಾತು ಕೇಳಿ ಭೂತಮಾಂತ್ರಿಕನು ಹೆದರಿ ಬಿದ್ದು ಮುದುಡಿ, ಪಿಳಿಪಿಳನೆ ಕಣ್ಣುಗಳನ್ನು ತೇಲಿ





ಸುತ್ತ ಸಿದ್ಧಸಾಧಕನನ್ನು ಭಯದಿಂದ ನೋಡಿ, ಬದಿಬದಿಗೆ ಸರಿದನು.

ಸಿದ್ಧಸಾಧಕನು ಅವನ ಕಡೆಗೆ ಅಡಿಯಿಟ್ಟು, "ಎಲೋ: ನೀಚಗ್ರಹೋಪಾಸಕನಾದ ಅಲ್ಪನೇ! ನನ್ನನ್ನು ಯಾರೆಂದುಕೊಂಡು ಹೆದರಿಸಿದೆ? ನನ್ನ ಮಂತ್ರ ಶಕ್ತಿಯಿಂದ ನಿನ್ನನ್ನೊಂದು ಹುಲ್ಲು ಕಡ್ಡಿಯನ್ನಾಗಿ ಮಾಡಿ ನನ್ನ ಕಿರುಬೆರಳಿಗೆ ಸುತ್ತಿಕೊಳ್ಳುತ್ತೇನೆ! ಏನು ಪೊಗರು ನಿನಗೆ!" ಎಂದ ಕಣ್ಣು ತಿರುಗಿಸುತ್ತ.

ಭೂತಮಾಂತ್ರಿಕ, "ಇಲ್ಲ, ಇಲ್ಲ! ತಪ್ಪು! ತಪ್ಪು! ಕ್ಷಮಿಸಿ!" ಎಂದು ತೊದಲುತ್ತ ಸಿದ್ಧಸಾಧಕನ ಪಾದಗಳ ಬಳಿಯಲ್ಲಿ ಬಿದ್ದ. ಸಿದ್ಧಸಾಧಕನು ಅವನನ್ನು ಪಾದದಿಂದ ಬದಿಗೆ ಸರಿಸಿ, ಬುದ್ಧಿಗೆಟ್ಟು ಹುಚ್ಚು ನೋಟ ಬೀರುತ್ತಿರುವ ಬೇಡನಬಳಿಗೆ ಹೋದನು. "ಎಲೋ, ಬೇಡರ ಭೀಮಾ! ನಿನ್ನನ್ನು ಹೆದರಿಸಿದ ಎರಡು ಕಾಲಿನ ಮೊಸಳೆಯನ್ನು, ಇಕ್ಕೋ ಈ ವೀರ ಯುವಕ ಜಯಶೀಲನು, ಅದರ ಎದೆಗೆ ಕತ್ತಿಯನ್ನು ಹೊಗಿಸಿ ಕೊಂದು ಹಾಕಿದ. ಈಗ ನೀನು ಬಲಿಷ್ಠನಾಗಿ ಭೀಮನಾಗಿದ್ದೀ. ಇನ್ನು ನಿನಗೆ ಭಯವೂ ಇಲ್ಲ. ಎಲ್ಲಾ ಹೋಯಿತು. ಸರಿ ಧೈರ್ಯದಿಂದ ನಿಲ್ಲು!" ಎಂದನು.

ಬೇಡರವರಿಗೆ ಆ ಮಾತುಗಳು ವಾದಂತೆಯೂ, ಅರ್ಥವಾಗದಂತೆ ತೋರಿದುವು. ಅವನು ಕಣ್ಣುಗಳನ್ನು ಕಿರಿಸಿ ಸಿದ್ಧಸಾಧಕನನ್ನು ವಿಚಿತ್ರವಾಗಿ ನೋಡ ತೊಡಗಿ ಅಲ್ಲಿ ಸೇರಿದ್ದ ಅವನ ಬಂಧುಗಳಲ್ಲೊಬ್ಬ ಬಂದು ಸಿದ್ಧಸಾಧಕನೊಂದಿಗೆ ವಿನಯ "ಅಯ್ಯಾ, ತಾವು ಇವನನ್ನು ಯಾ ತಿಳಿದುಕೊಂಡಿರೋ? ಇವನ ಹೆಸರು ಭೀ ರಾವು." ಎಂದನು.

"ಗೊತ್ತಿದೆ! ಈ ಕ್ಷಣದಿಂದ ಇವನು ಭೀ ನಿಜ. ನಾನು ಹೇಳಿದ ಮೇಲೆ ತೀರಿಹೋ ಜಯಶೀಲಾ, ನಿನ್ನ ಕತ್ತಿಯನ್ನು ಇವನಿಗೆ ತೋ ಎರಡು ಕಾಲಿನ ಮೊಸಳೆಯ ರಕ್ತ ನಿನ್ನ ಯಲ್ಲಿರುವುದನ್ನು ಇವನು ನೋಡಲಿ, ತೋ ಎಂದು ಜಯಶೀಲನ ಕೈಯಿಂದ ಕತ್ತಿಯನ್ನು ಎಳೆದು, ಯಾರಿಗೂ ತಿಳಿಯದಂತೆ ತನ್ನ ಯಲ್ಲಿರುವ ಕುಂಕುಮವನ್ನಿಷ್ಟು ತೆಗೆದು ಅ ಮೇಲೆ ತಿಕ್ಕಿದನು.

ಸಿದ್ಧಸಾಧಕನು ತೋರಿಸಿದ ಕತ್ತಿಯನ್ನು ಬಡಿದ ಬೇಡರವನು ಬಿಟ್ಟ ಕಣ್ಣಿನಿಂದ ತಟಕ್ಕನೆ ಬಾಗಿ ಕೈಮುಗಿದು, "ದೊರೆಗಳೇ, ಎರಡು ಕಾಲಿನ ಮೊಸಳೆ ಪಿಶಾಚಿಯನ್ನು ಕೊಂ ಅದರ ಹೆಣಾ ಎಲ್ಲಿದೆಯೋ? ಅದು ನಿಜವಾ ಸತ್ತಿದೆಯೇ?" ಎಂದನು.


ಇದನ್ನೆಲ್ಲಾ ಜಯಶೀಲನು ತುಸು ದೂರ ಲಕ್ಷ್ಯವಿಟ್ಟು ನೋಡುತ್ತಿದ್ದನು. ಈ ಸಿದ್ಧಸಾ ಏನೋ ಅತಿ ಬುದ್ಧಿವಂತಿಕೆಗೆ ಕಾಲು ಹಾ

ಅನುಮಾನವಾಯಿತು ಅವನಿಗೆ. ಸಿದ್ಧಸಾಧಕನ ...ಸದ ಕತೆಯನ್ನೆಲ್ಲ ಬೇಡರ ಗುಂಪು ನಂಬಿದೆ ...ರೆ, ಅವರೆಲ್ಲ ಒಟ್ಟು ಮೊರೆಟು ತನದಿಂದ ... ಬೀಳಬಹುದಷ್ಟೇ ? ಆಗ ತನ್ನ ಕತ್ತಿಗೆ ಕೆಲಸ ...ಕಾಗಿ ಬಂದೀತಲ್ಲ !

...ಶೀಲನು ಹೀಗೆ ಆಲೋಚಿಸುವಾಗ, ಸಿದ್ಧ ...ನು ಒಂದಿಷ್ಟೂ ಶಂಕಾತಂಕ ತೋರಿಸದೆ ದಿಟ್ಟ ...ದ ಆ ಬೇಡರವನನ್ನು ನೋಡಿ, " ಸರಿಯಾಗಿ ... ಎಲೋ ಮೂಢನಾದ ಬೇಡಾ ! ಲೋಕ ...ಮನುಷ್ಯರೇ ಮೊದಲಾದ ಪ್ರಾಣಿಗಳು ಸತ್ತು ...ಗುತ್ತಾರೆಯೇ ಹೊರತು ಪಿಶಾಚಿಗಳು ಸತ್ತರೆ ...ಗಿ ಕಾಣಿಸುತ್ತವೇನೋ ಮಂಕಾ ? ಆ ಮೊಸಳೆ ...ಯನು ನನ್ನ ಮಂತ್ರದಿಂದ ಸುಟ್ಟು ಬೂದಿ ... ಆ ಬೂದಿಯನ್ನೆಲ್ಲ ಶರೀರಕ್ಕೆ ಹಚ್ಚಿಕೊಂಡರೆ ... ಗೊತ್ತಾಯಿತೇ ? [illegible] ...ಕೊಂಡವನು [illegible] ನಡೆ [illegible] ... ಪದವಿ [illegible] ಬರು[illegible]ದು. ...ಯಾ ? [illegible] ನಿನಗೆ [illegible] ಇಲ್ಲ. ...ತ್ತಿನ, ಹಾರವೂ ಮುರಿದ ಕತ್ತಿಯೂ ನಿನಗೆ ...ದುವೋ ಹೇಳು. ಆ ಮೊಸಳೆ ಪಿಶಾಚಿ ನಿನ್ನ ... ಬಂದೀತು ? ಎಲ್ಲಾ ನೆನಪು ಮಾಡಿ ಸರಿಯಾಗಿ ..." ಎಂದನು.

...ಡವನಿಗೆ ಇನ್ನೂ ಪೂರ್ತಿ ಭಯಬಿಟ್ಟಂತಿಲ್ಲ. ... ಸಮೀಪದಲ್ಲಿರುವ ತನ್ನ ಬಂಧುಗಳ ಕಡೆಗೆ ... ತಲೆಬಗ್ಗಿಸಿ ನಿಂತು, ಭೂತ ಮಾಂತ್ರಿಕನನ್ನು ...ರಿ ನೋಡಿ, ಆಮೇಲೆ ಸಿದ್ಧಸಾಧಕನೊಂದಿಗೆ, ...ಗಳೇ, ಹಾರವನ್ನೂ ಕತ್ತಿಯನ್ನೂ ಮೊಸಳೆ ...ಯೇ ಎತ್ತಿಕೊಂಡು ಹೋಗಿರಬೇಕು. ನಾನು ...ನ್ನು ತೆಗೆದಿಲ್ಲ." ಎಂದನು.

... ರಾಜನ ಸೇವಕನು ಬೇಡರವನ ಮುಂದೆ ..., "ಎಲೋ, ಆ ಎರಡೂ ವಸ್ತುಗಳನ್ನು ನಾನೇ



ತೆಗೆದುಕೊಂಡು ಹೋಗಿ ಮಹಾರಾಜರಿಗೆ ಕೊಟ್ಟೆ. ನಾನು ಅವುಗಳನ್ನು ತೆಗೆದುಕೊಂಡ ಸಮಯದಲ್ಲಿ ನೀನು ಹುಚ್ಚು ಹಿಡಿದವನ ಹಾಗೆ [illegible] ನೆಲದಲ್ಲಿ ಹೊರಳಿಕೊಂಡಿದ್ದೆ. ಆದುದರಿಂದ ಆ ಸಂಗತಿ ನಿನಗೆ ಗೊತ್ತಾಗಲಿಲ್ಲವೇನೋ. ಬೇಕಾದರೆ ನಿನ್ನ ಜನರನ್ನೇ ಕೇಳು " ಎಂದನು.

ಆಗ ಒಬ್ಬ ಬೇಡರವನು ಮುಂದೆ ಬಂದು, " ಹೌದೌದು. ಈ ಮಹಾರಾಜರ ಕಡೆಯವರು ಹೇಳಿದ್ದೇ ನಿಜವೋ ರಾಮಾ " ಎಂದನು. ಆ ಮಾತಿನಿಂದ ಬೇಡನಿಗೆ ತೃಪ್ತಿಯಾಗಿ ಭಯಹೋಗಿ, ಸಿದ್ಧಸಾಧಕನನ್ನು ನೋಡಿ, " ದೊರೆಗಳೇ, ಈ ಆಲದ ಮರವು ಪಿಶಾಚಿಗಳ ಹುತ್ತ. ಇಲ್ಲಿಯ ಪಿಶಾಚಿಗಳೇ ಚಿಕ್ಕ ರಾಜರಾಣಿಯರನ್ನು ಎತ್ತಿಕೊಂಡು ಹೋಗಿರಬೇಕು " ಎಂದನು.

ಒಂದೂ ತಿಳಿಯದಂತಿದ್ದ ಆತನ ಮಾತುಗಳಿಂದ ಜಯಶೀಲನಿಗೆ ಬೇಸರಬಂದಿತು. ಅವನು ಸಿದ್ಧ

ಸಾಧಕನನ್ನು ನೋಡಿ, "ಸಾಧಕಾ, ಸುಮ್ಮ ಸುಮ್ಮನೆ ಇಲ್ಲಿ ಹೊತ್ತು ಕಳೆಯುವುದೇಕೆ? ನಾವು ಈ ಕಡೆಗೆ ಬಂದದ್ದು ಯುವರಾಜ ಯುವರಾಣಿಯರನ್ನು ಯಾರು ಅಪಹರಿಸಿದರೆಂಬುದನ್ನು ಕಂಡು ಹಿಡಿಯಲು. ಅದಕ್ಕೇನಾದರೂ ಕುರುಹುಗಳು ಸಿಗುತ್ತವೇನೋ ಅಂದುಕೊಂಡೆವು. ಆ ಸಂಗತಿ ಇವನಿಂದ ಹೊರಡುವುದೇನೋ! ನಿರ್ಣಯ ಮಾಡಿ ಬೇಗ ಮುಗಿಸಿಬಿಡು ಈ ಹಾಳು ಹಗರಣ!" ಎಂದನು.

"ಸ್ವಾಮೀ, ಕ್ಷಮಾ! ಆ ಮುತ್ತಿನ ಹಾರವೂ ಕತ್ತಿಯೂ ನಿನಗೆ ಎಲ್ಲಿ ಸಿಕ್ಕಿದುವು? ನೀನು ಹೇಳಿದ ಆ ಮೊಸಳೆ [illegible]ಚೆ. ಎಲ್ಲಿ ನಿನಗೆ ಗ[illegible]ತ್ತು? ಅದೇನಾದರೂ [illegible]ತ್ತಿದ್ದರೆ ಬೇಗ ಹೇಳು" ಎಂದ ಸಿದ್ಧಸಾಧಕ.

ಬೇಡರವನು ಗಂಟಲಲ್ಲೊ ಕನೆದು ಸರಿಮಾಡಿಕೊಂಡು, "ದೊರೆಗಳೇ, ಈ ದಿನ ಬೆಳುಬೆಳಗ್ಗನೇ ಕತ್ತಲೆ ಇರುವಾಗಲೇ ನಾನು ಬಿಲ್ಲು ಅಂಬು ತೆಗೆದುಕೊಂಡು ಬೇಟೆಗೆ ಹೋದೆ. ಆಗ [illegible] ಅಲ್ಲಿ ಕಾಣುವ ದಪ್ಪದ ಮರದ ಕೊಂಬೆಯಿಂದ ಕಾಡು ಹುಂಜದ ಕೂಗು ಕೇಳಿಸಿತು. ನಾನು ಹೊಂಚಿ ನಿಂತು ಗುರಿಹಿಡಿದು ಆ ಶಬ್ದದ ಕಡೆಗೆ ಬಾಣ ಹೊಡೆದೆ. ಬಾಣ ಅದರ ರೆಕ್ಕೆಗಳಲ್ಲಿ [illegible]. ಅದು ಕೆಟ್ಟ ಸ್ವರದಿಂದ ಕ[illegible]ತ್ತಾ ಹಾರಿತು, ಹಾರಿ, ಅಲ್ಲಿ ಕಾಣುವ ಪೊದರಿನಲ್ಲಿ ಬೊತ್ತನೆ ಬಿತ್ತು..." ಎಂದನು. ಜಯ[illegible] ಕೂಡಲೇ ಅವನ ಮಾತಿಗೆ ತಡೆ ಹಾಕಿ, "ಪೊದೆಯನ್ನು ತೋರಿಸು. ನಡೆ, ಅಲ್ಲೆಲ್ಲಾ ಮುಳ್ಳಿನ ಪೊದರುಗಳಿವೆಯಷ್ಟೇ? ಯಾವ[illegible]" ಎಂದು ಆ ಕಡೆಗೆ ನಡೆದನು.

ಬೇಡರವನು ಜಯಶೀಲನನ್ನೂ, ಸಿದ್ಧ[illegible]ನನ್ನೂ ಗುಂಪಾಗಿದ್ದೊಂದು ದೊಡ್ಡ ಪೊದರಿ[illegible] ಕರೆದುಕೊಂಡು ಹೋದನು. "ಓಹೋ! [illegible] ಪೊದರಿನಲ್ಲೇ ನಿನಗೆ ಮುತ್ತಿನ ಹಾರವೂ ಹೊ[illegible] ಕತ್ತಿಯೂ ಸಿಕ್ಕಿತೇನು?" ಎಂದು [illegible]ಶೀಲನು ಕೇಳಿದನು.

"ಹೌದು ದೊರೆಗಳೇ" ಎಂದ ಬೇಡರವ[illegible]. ಸಾಧಕನು [illegible] ತೀ[illegible] ನೋಡುತ್ತಿದ್ದನು. ಅದೇನು [illegible]ವೋ? ಸಿದ್ಧಸಾಧಕನು [illegible] ಕಡೆಗೆ ಬಾಗಿ, ಕಂಡು ಹಿಡಿದ[illegible], "ಜಯಶೀಲಾ! ರಣ[illegible] ಮಧ್ಯದಲ್ಲಿರುವ ಮುಳ್ಳಿನ ಪೊದರಿ[illegible] ಎಂಥದೋ [illegible]ತನದ ತಾಳೆಪತ್ರ ಗ್ರಂಥ! ಮಹಾಕಾಲಾ! ಜೈ!" ಎಂದು ಉತ್ಸಾ[illegible] ಕೂಗುತ್ತಾ, ಪೊದೆಯೊಳಗೆ ಕೈಯನ್ನು ತೂರಿಸಿ, ಒಂದು ತಾಳಪತ್ರದ ಕಟ್ಟನ್ನು ಎತ್ತಿಕೊಂಡ[illegible]

(ಮುಂದುವರಿಯು[illegible]





# ಮಾಯಾಸರೋವರ

July 1976

೭

[ ...ಯಶೀಲನೂ ಸಿದ್ಧಸಾಧಕನೂ ರಾಜಭಟನ ಹಿಂದೆ ಅರಣ್ಯಕ್ಕೆ ಹೋಗಿ ಅಲ್ಲಿಯ ಆಲದಮರದ ಕೆಳಗೆ ...ಭ್ರಾಂತನಾದ ಬೇಡನನ್ನೂ, ಅವನಿಗೆ ಮಂತ್ರ ಹಾಕುತ್ತಿದ್ದವನನ್ನೂ ನೋಡಿದರು. ಆ ಬೇಡನಿಂದ ...ಂದ ಕತ್ತಿಯೂ ಮುತ್ತಿನ ಹಾರವೂ ಸಿಕ್ಕಿರುವ ಒಂದು ಪೊದೆ ಗೊತ್ತಾಯಿತು. ಆ ಪೊದರಿನೊಳಗೆ ...ಸಾಧಕನಿಗೆ ಒಂದು ತಾಲಪತ್ರಗ್ರಂಥವು ಸಿಕ್ಕಿತು. ]

...ಪೊದರಿನೊಳಗೆ ಸಿಕ್ಕಿದ ಹಳೆಯ ತಾಲ... ಕಟ್ಟನ್ನು ನೋಡಿ ಸಿದ್ಧಸಾಧಕನು ಅಷ್ಟೊಂದು ...ಹಾವೇಶದಿಂದ ಕುಣಿಯುವುದನ್ನು ನೋಡಿ ...ಲನಿಗೆ ಅತ್ಯಾಶ್ಚರ್ಯವಾಯಿತು. ಯಾವ ...ಕ್ಕೆ ಹೊರಟಿದ್ದೇವೋ ಅದನ್ನು ಮರೆತು ...ವುದನ್ನೋ ನೋಡಿ ನಿಧಿ ಸಿಕ್ಕವನಂತೆ ...ಪಡುವ ಅವನದು ಎಂಥ ವಿಚಿತ್ರ ಸ್ವಭಾ...! ಇಂಥವನ ಸಹಕಾರದಿಂದ ಉಪಯೋಗ... ಉಪದ್ರವೇ ಹೆಚ್ಚಾದರೆ ಏನು ಪ್ರಯೋಜನ? ... ಆ ತಾಲಪತ್ರದ ಕಟ್ಟನ್ನು ಬಿಚ್ಚಿ ಒಂದೊಂದೇ ಪತ್ರವನ್ನು ತಿರುಗಿಸಿ ತಿರುಗಿಸಿ ನೋಡುತ್ತ "ಇದೇನು ಭಾಷೆಯು ಬರೆಹವಪ್ಪ! ಯಾವ ಲೋಕದವರು ಮಾತಾಡುವ ಭಾಷೆಯಿದು? ಈ ಪತ್ರದ ಎಲೆಗಳು ಕೂಡಾ ಯಾವುದೋ? ತಾಳೆಯೋಲೆಯೂ ಅಲ್ಲ. ಭೂರ್ಜಪತ್ರವೂ ಅಲ್ಲ. ದಪ್ಪವಾಗಿರುವ ತಾವರೆಯೆಲೆಯನ್ನು ಕತ್ತರಿಸಿ ಮಾಡಿದ ಹಾಗಿದೆ" ಎಂದನು ತನಗೇ ತಾನೇ.

"ಸಾಧಕ, ಅದರಲ್ಲಿಯ ಭಾಷೆ ಕೂಡಾ ನಿನಗೆ ತಿಳಿಯಲಿಲ್ಲವೇ? ಹಾಗಾದರೆ ಅಷ್ಟು ಸಂತೋಷಪಡಲಿಕ್ಕೇನಾಯಿತು? ಅದೇನೆಂದುಕೊಂಡೆ?"



ಎಂದು ಬೇಸರದಿಂದ ಕೇಳಿದ ಜಯಶೀಲ.

ಸಿದ್ಧಸಾಧಕನು ಮೋರೆಯನ್ನು ಶುಂಠಿಯ ಹಾಗೆ ಸೊಟ್ಟಗಾಗಿ ಮಾಡಿಕೊಂಡು, "ಇದು ಯಾವುದೋ ದೇವಲೋಕದ ಭಾಷೆಯಾಗಿರಬೇಕು. ಅಥವಾ ರಾಕ್ಷಸರ ಪಾತಾಳ ಭಾಷೆಯೋ ಏನೋ! ಅಂಥವರ ಸಹಾಯದಿಂದ ಇದನ್ನು ಓದಿ ತಿಳಿಯಬೇಕಾಗಿದೆ. ಒಂದುವೇಳೆ ಕನಕಾಕ್ಷ ರಾಜರ ದರ್ಬಾರಿನಲ್ಲಿರುವ ಪಂಡಿತರಾರಿಗಾದರೂ ಈ ಭಾಷೆ ಗೊತ್ತಿದೆಯೋ ಏನೋ ನೋಡಬೇಕು" ಎಂದನು.


ಜಯಶೀಲನು ಸಾಧಕನ ಕೈಯಿಂದ ಆ ಗ್ರಂಥದ ಕಟ್ಟನ್ನು ತೆಗೆದುಕೊಂಡು ಕೆಲವು ಪತ್ರಗಳನ್ನು ನೋಡಿ "ಇದನ್ನು ಈ ಬೇಡರವನು ಹೇಳಿದ ಆ ಎರಡು ಕಾಲಿನ ಮೊಸಳೆಯೇ ಈ ಪೊದರಿನಲ್ಲಿ ಹಾಕಿರಬೇಕು. ಆದರೆ ನಮ್ಮ ಯುವರಾಜ ಯುವರಾಣಿಗಳ ಜಾಡು ಕಂಡು ಹಿಡಿಯುವುದಕ್ಕೆ ಈ ಓಲೆಯ ಕಟ್ಟಿನಿಂದ ಯಾವ ಉಪಯೋಗವೂ ಇಲ್ಲ. ಇದನ್ನು ಕುರಿತು ಆಲೋಚನೆ ಮಾಡುವುದೇ ಸಮಯದ ಕೆ... ನಮಗೇಕಿದು ಹಾಳು" ಎಂದು ಹೇಳಿ ಆ ಗ್ರಂಥ... ಬದಿಯಲ್ಲಿದ್ದ ಪೊದರಿನೊಳಗೆ ಎಸೆದುಬಿಟ್ಟನು.

ಸಿದ್ಧಸಾಧಕನು ಅದನ್ನು ನೋಡಿ ಗಟ್ಟಿ... ಕೂಗಿ, "ಜಯಶೀಲಾ! ಏನು ಕೆಲಸ ಮಾಡಿ... ಅದರಲ್ಲಿರುವುದು ಯಾವುದೋ ಮಂತ್ರ... ಬಹುದು. ಅವುಗಳ ಮೂಲಕ ಮಹಾಕಾಳ... ವಶಪಡಿಸಿಕೊಳ್ಳಲೂಬಹುದು. ಹಾಗಾಗಿಬಿ... ನಮ್ಮಿಂದಾಗದ ಕಾರ್ಯವೇ ಇರಲಾರದು. ಯ... ಗೊತ್ತು ನಮ್ಮ ಅದೃಷ್ಟ!" ಎನ್ನುತ್ತಾ ಓಡಿ... ಪೊದೆಯೊಳಗಿನಿಂದ ಅದನ್ನೆತ್ತಿ ಕಣ್ಣಿಗೊತ್ತಿಕೊ...

ಜಯಶೀಲನು ಕೋಪದಿಂದ ಸಿದ್ಧಸಾಧ... ನೋಡಿ, "ನಾವು ಇಲ್ಲಿಗೆ ಬಂದುದು ಮಹಾ... ನನ್ನು ಪ್ರತ್ಯಕ್ಷ ಮಾಡಿಕೊಳ್ಳಲಿಕ್ಕೋ, ಕನಕಾಕ್ಷರ... ಹೇಳಿದ ಕೆಲಸವನ್ನು ಸಾಧಿಸಲಿಕ್ಕೋ? ... ಲೋಕದಲ್ಲಿದ್ದಿ ನೀನು? ಹೀಗೇಕೆ ಮನಸ್ಸನ್ನು... ಲ್ಲೆಲ್ಲಾ ಅಲೆಯಬಿಡುತ್ತೆ?" ಎಂದು ಕೇಳಿದನು.

ಅವನ ಕೋಪವನ್ನು ನೋಡಿ ಸಿದ್ಧಸಾಧ... ಹೆದರಿ, ವಿಧೇಯತೆಯಿಂದ, "ಜಯಶೀ... ಕೋಪಿಸಬಾರದು. ನನ್ನ ಮೇಲೆ ಗುರಿ ತಪ್ಪಿ... ನೆಂದು ಆರೋಪಿಸಬೇಡ. ನಾನು ಈ ... ಭೀಮನ ಮೂಲಕ ಆ ಎರಡುಕಾಲಿನ ಮೊ... ಸಮಾಚಾರ ತಿಳಿದುಕೊಳ್ಳುತ್ತೇನೆ. ಅವನೇ ... ರಾಜ ಯುವರಾಣಿಯರನ್ನು ಅಪಹರಿಸಿರಬೇ... ನನಗೆ ತೋರುತ್ತದೆ." ಎಂದನು.

"ಅವನೊಬ್ಬ ಬುದ್ಧಿಕೆಟ್ಟ ಹುಚ್ಚ ... ಎರಡುಕಾಲಿನ ಮೊಸಳೆಯಂತೆ! ನಾಲ್ಕು ... ಮನುಷ್ಯ ಅಂದ ಹಾಗೆ! ಅದನ್ನು ನಂಬಿ ಕತೆ ... ನೀನೊಬ್ಬ ನನಗೆ ಗಂಟುಬಿದ್ದೆಯಲ್ಲ!" ಎಂದ ... ಶೀಲ ಹುಬ್ಬು ತಿರುಗಿಸಿ ತಿರಸ್ಕಾರದಿ... ಸಿದ್ಧಸಾಧಕನು ಹೆದರಿಕೆಯಿಂದ ಮೇಲೆ ...



ಉತ್ತಿರುವ ಬೇಡರವನ ಭುಜವನ್ನು ತಟ್ಟುತ್ತ ! ಇನ್ನು ಹೆದರಲಿಕ್ಕೇನಿಲ್ಲ. ನನ್ನ ಪ್ರಶ್ನೆಗಳಿಗೆ ದಿಂದ ಉತ್ತರ ಕೊಡು. ಆ ಎರಡು ಕಾಲಿನ ಇಲ್ಲಿಗೆ ಏಕೆ ಬಂತು ? ನಿನ್ನನ್ನು ಏನೆಂದು ? " ಎಂದು ಕೇಳಿದ.

ಡರವನು ಭಯದಿಂದ ನಾಲ್ಕು ಸುತ್ತಲೂ ನೋಡಿ. "ಅಯ್ಯಯ್ಯೋ ! ದೊರೆಗಳೇ ! ನನ್ನನ್ನು ಪ್ರಶ್ನೆಮಾಡಿ. ಅದಕ್ಕೆ ನಾನು ಉತ್ತರ ಇನ್ನೂ ಬದುಕಿರುವುದುಂಟೆ ? ನಾನು ನೊಳಗೆ ಬಿದ್ದ ಕೋಳಿಯನ್ನು ಮೆಲ್ಲನೆ ಎತ್ತಿ ೇಕಂತ ಬಗ್ಗಿ ಹುಡುಕುವಾಗ ನನ್ನ ಹಿಂದಿನಿಂದ ಾಯಿತು. ತಿರುಗಿ ನೋಡಿದೆ. ಅಷ್ಟುದ್ದದ ಭೂತದ ಹಾಗೆ ಎರಡು ಕಾಲಿನಲ್ಲಿ ! ನಾನು ಗಿರ್‍ರಂತ ಆಕಾಶ ತಿರುಗಿದ ಹಾಗಾಗಿ ಕತ್ತಲೆ ಬಂದು ಭೋ ಅಂತ ಕೂಗಿಬಿದ್ದೇಂತ . ಆಮೇಲೆ ಏನಾಯಿತು ಅಂತ ನನಗೊಂದೂ ." ಎಂದನು.

ನು ಬಾಣದಿಂದ ಹೊಡೆದ ಆ ಕೋಳಿ ಯಿತು ? " ಎಂದು ಕೇಳಿದ ಜಯಶೀಲ.

ಅದನ್ನು ಗಿರಿದೇವತೆಯೇ ಎತ್ತಿಕೊಂಡು ರುತ್ತೆ ! ಬೆಳ್ಳಂಬೆಳಗ್ಗೆ ಆ ಕೋಳಿಯನ್ನು ದೊಡ್ಡ ಅಪಚಾರ ಮಾಡಿದ್ದಾನೆ ! ಅದಕ್ಕೇ ಮೇಲೆ ಗಿರಿದೇವತೆಗೆ ಹಗೆಯಾಗಿದೆ ! ಆದರ ದಿಂದಲೇ ಇವನಿಗೆ ಹೀಗೆಲ್ಲಾ ಆಯಿತು."

ಹಲ್ಲು ಕಡಿಯುತ್ತ ಬೇಡರ ಭೂತ ಮಾಂತ್ರಿಕ.

ಶೀಲನು ಆ ಭೂತಮಾಂತ್ರಿಕನನ್ನು ನಿಂದ ನೋಡಿ, ಸಿದ್ಧಸಾಧಕನನ್ನು ಕುರಿತು, ಬುದ್ಧಿ ಭ್ರಮೆಯಾದವರೇ ತುಂಬಿದ . ಈಗ ನಾವು ಏನು ಮಾಡೋಣ ? ಇಲ್ಲಿಗೆ ಸ್ವರವರೆಗೆ ಕನಕಾಕ್ಷ ರಾಜರಿಗೆ ಹೇಳುವಂತಹ ಯಾವುದೂ ಕಾಣಲಿಲ್ಲ. ಈಗ ಹಿಂದಿರುಗಿ ಅಲ್ಲಿಗೇ ಹೋದರೆ ಅರ್ಥವಿಲ್ಲದ ಕೆಲಸ ಮಾಡಿದಂತಾಗುತ್ತದೆ. ನಾವೀಗ ಇವರ ಗೊಡವೆಯನ್ನು ಇಲ್ಲಿಗೇ ಬಿಟ್ಟು, ಈ ಸುತ್ತುಮುತ್ತಲಿರುವ ಗುಡ್ಡ ಬೆಟ್ಟ ಕಣಿವೆಗಳಲ್ಲಿ ಕಡೇಪಕ್ಷ ಒಂದು ವಾರದ ವರೆಗಾದರೂ ತಿರುಗಾಡಿ ಆ ದುಷ್ಕರ ಜಾಡು ಸಿಗುವುದೋ ನೋಡೋಣ " ಎಂದನು.

"ಇದು ಒಳ್ಳೆಯ ಯೋಚನೆ ಜಯಶೀಲಾ !" ಎಂದು ಸಿದ್ಧಸಾಧಕನು ಜಯಶೀಲನನ್ನು ಮೆಚ್ಚಿಕೊಳ್ಳುತ್ತ, ತಾಳಪತ್ರದ ಓಲೆಗಳನ್ನು ಎರಡು ಮೂರುಸಾರಿ ತಿರುಗಿಸಿ ನೋಡಿ, "ಜಯಶೀಲಾ, ಈ ಓಲೆಗಳಿಗೂ, ನಾವು ಬಂದ ಕೆಲಸಕ್ಕೂ ಸಂಬಂಧವಿಲ್ಲವೆಂದು ಹೊಡೆದು ಹಾಕುವಂತಿಲ್ಲ. ಈ ಓಲೆಯ ಕಟ್ಟನ್ನು ಇಲ್ಲಿ ಹಾಕಿದವನೇ ರಾಜನ ಮಕ್ಕಳನ್ನು ಎತ್ತಿಕೊಂಡು ಹೋಗಿರಬೇಕು. ಅವನು ಮಾನವ ಜಾತಿಯವನಂತೂ ಅಲ್ಲ: ರಾಕ್ಷಸ ಜಾತಿಯವನೋ, ಯಕ್ಷ ಕಿನ್ನರ ಗಂಧರ್ವ ಜಾತಿಯವನೋ ಆಗಿದ್ದಾನು.



ಈ ತಾಲ ಪತ್ರದ ಗ್ರಂಥದ ಭಾಷೆಯೊಂದು ಅರ್ಥ ವಾಗಿಬಿಟ್ಟರೆ ಆ ವಿಷಯಗೊತ್ತಾಗಿ ಬಿಡುತ್ತದೆ. ದಾರಿಯಲ್ಲಿ ನಮಗೆ ಯಾವ ಪಂಡಿತರಾದರೂ ಭೇಟಿ ಯಾದರೆ ಎಷ್ಟು ಒಳ್ಳೆಯದಿತ್ತು" ಎಂದನು.

"ಅವನು ಯಾವ ಜಾತಿಯವನಾದರೂ ಆಗಿರಲಿ ಸಾಧಕಾ, ನನ್ನ ಕತ್ತಿಯ ಬಲವೂ, ನಿನ್ನ ಮಂತ್ರ ಶಕ್ತಿಯೂ ಒಂದಾದರೆ ಸೋಲಿಸಬಹುದು. ಮುಖ್ಯ ಕನಕಾಕ್ಷ ರಾಜರ ಅದೃಷ್ಟವೂ ನಮ್ಮ ಅದೃಷ್ಟವೂ ಹೊಂದಿಕೊಂಡಿರಬೇಕು. ಅದು ಹೊಂದಿಕೊಂಡಿದೆಯೋ ಇಲ್ಲವೋ ಎಂಬುದು ಮುಂದೆ ಹೋದಂತೆ ಗೊತ್ತಾಗುತ್ತದೆ" ಎಂದ ಜಯಶೀಲ.

ತರುವಾಯ ಅವರಿಬ್ಬರೂ ಅಲ್ಲಿಂದ ಹೊರಟು ಸಮೀಪದ ಬೆಟ್ಟದ ಕಡೆಗೆ ನಡೆದರು. ಆಗ ಅವರೊಂದಿಗೆ ಬಂದಿದ್ದ ರಾಜಭಟನು ಅವರನ್ನು ಕುರಿತು, "ಅಯ್ಯಾ, ನನಗೆ ಅಪ್ಪಣೆ ಕೊಡುವಿರಾ? ಮಹಾರಾಜರ ಹತ್ತಿರ ಹೋಗಿ ಏನೆಂದು ಹೇಳಬೇಕು?" ಎಂದು ಕೇಳಿದನು. ಜಯಶೀಲನು ಏನೋ ಹೇಳಲಿಕ್ಕಿರಲು, ಅವನನ್ನು ಮಾತಾಡಲು ಬಿಡದೆ ಸಾಧಕನೆ ಅವನಿಗೆ ಹೀಗೆಂದ: "ಮಹಾರಾಜರಿಗೆ ಶುಭ ಸಮಾಚಾರವನ್ನು ಹೇಳಿಬಿಡು. ಅವರ ಕುಮಾರಿಯರು ಅಪಹರಿಸಲ್ಪಟ್ಟ ಅಲದ ... ಹತ್ತಿರ ಒಂದು ಮಹೋದ್ಗ್ರಂಥವು ದೊರಕಿತು. ಅದರ ಸಹಾಯದಿಂದ ಬೇಗದಲ್ಲೇ ರಾಜಕುಮಾರಿಯರನ್ನು ಅಪಹರಿಸಿದವರನ್ನು ಸಂ... ಮಾಡಿ ಅವರನ್ನು ಕ್ಷೇಮದಿಂದ ಕರೆದುಕೊಂಡು ಬರುತ್ತೇವೆಂದೂ ಹೇಳು. ನಾವಿಬ್ಬರೂ ಉ... ದಿಂದ ಕಾರ್ಯೋನ್ಮುಖರಾಗಿದ್ದೇವೆಂದೂ ಹೇ..."

ಆ ಮಾತನ್ನು ಕೇಳಿ ಜಯಶೀಲನು ತನ್ನೊ... ತಾನೇ ನಕ್ಕನು. ಆಮೇಲೆ ಅವರಿಬ್ಬರೂ ಮರಗಳಿಂದ ದಟ್ಟವಾಗಿ ತುಂಬಿದ ಬೆಟ್ಟದ ... ಸಾಗಿದರು. ದಾರಿಯಲ್ಲಿ ಅವರಿಗೊಂದು ಕಾಡು ... ಹತ್ತಿತು. ಅದರ ಹತ್ತಿರ ಅವರೊಂದು ವಿಚಿತ್ರ... ನೋಡಿದರು.

ಆ ಹಳ್ಳಿಯ ಜನರೆಲ್ಲಾ ನಡು ದಾರಿಯಲ್ಲಿ ಯಾವುದನ್ನೋ ಕುರಿತು ಭಯಭೀತರಾದಂತೆ ... ಗುತ್ತ, ಏನು ಮಾಡುವುದೆಂದು ಒಬ್ಬೊ... ಒಂದೊಂದು ಅಭಿಪ್ರಾಯ ಹೇಳುತ್ತ ... ಕೊಳ್ಳುತ್ತಿದ್ದರು. ಯಾವುದೋ ಸಮಸ್ಯೆ ... ಮುಂದೆ ನಿಂತಿತ್ತು.


ಅವರ ಆ ಹೆದರಿಕೆಯ ಗಡಿಬಿಡಿಗೆ ಕಾ... ವಾದುದು ಆ ದಿನ ಬೆಳಗ್ಗೆ ನಡೆದ ಒಂದು ಸಂಘ... ಆ ಬೆಳಗ್ಗಿನ ಹೊತ್ತಿನಲ್ಲಿ, ಹಳ್ಳಿಗೆ ದೂರವಾಗಿ... ಜೋಳದ ಹೊಲದ ಹತ್ತಿರ ಒಂದು ಘಟನೆ ... ಸಿತ್ತು. ಆ ಹೊಲದ ನಡುವೆ ಮಂಚಿಕೆಯ ಮೇ... ಹದಿನಾಲ್ಕು ವಯಸ್ಸಿನ ಕಾವಲು ಹುಡುಗ ... ಅವನಿಗೆ ದೂರದಲ್ಲಿ ಒಂದು ಆನೆ ಹೊಲದ ... ಬರುವುದು ಕಂಡಿತು.

ದನ್ನು ನೋಡಿ ಹುಡುಗ ಚುರುಕಾದ. ತತ್‌ಕ್ಷಣ ಮಾಡುವುದೆಂದು ಅತ್ತಿತ್ತ ನೋಡಿದ. ಪಕ್ಷಿ ಓಡಿಸುವಂತೆ ಕವಣೆ ಕಲ್ಲಿನಿಂದ ಆನೆ ಓಡಿಸಲು ಸಾಧ್ಯವಿಲ್ಲವೆಂದು ಅವನಿಗೆ ತ್ತು. ಆದರೆ ಆನೆ ಒಂದು ಸಾರಿ ಜೋಳದ ಕ್ಕೆ ಕಾಲಿಟ್ಟಿತೆಂದರೆ ಕಾಲುಗಂಟೆಯೊಳಗೆ ಇಡೀ ಲದೇ ನಾಶವಾಗಿ ಹೋಗುತ್ತದೆ. ಭಾರೀ ಶಬ್ದ ಅಥವಾ ಬೆಂಕಿಯನ್ನು ತೋರಿಸಿ ಅದನ್ನು ಬೇಕು. ಅವನೊಬ್ಬನಿಂದ ಅದು ಬೇಗನೇ ವಂತಹ ಕೆಲಸವಲ್ಲ.

ವಲಿನ ಹುಡುಗ ವಯಸ್ಸಿಗೆ ಮೀರಿದ ಧೈರ್ಯ ಬೇಗ ಹೋಗಿ ಹಳ್ಳಿಯ ಹಿರಿಯರ ಹತ್ತಿರ ಸುದ್ದಿ ಹೇಳಿ ಬರಬೇಕೆಂದು ಒಮ್ಮೆ ಯೋಚಿಸಿದ. ಕವಣೆ ಕಲ್ಲುಗಳನ್ನು ಆನೆಯ ಮೇಲೆ ರೆ ಒಡೆದುವೇಳೆ ಅದು ಹೆದರಿ ಹಿಂದಿರು ಸಾಕು ಎಂದು ಅವನಿಗೆ ತೋರಿತು.

ತೆಯೇ ಅವನು ಕವೆಗೋಲಿನಲ್ಲಿ ದೊರಗಾದ ಟ್ಟು ಆನೆಗೆ ಗುರಿಹಿಡಿದು ಬಿಸುಟನು. ಆ ಕಲ್ಲು ಆನೆಯ ದೇಹಕ್ಕೆ ತಾಗಿತು. ಆದರೆ ಆನೆ ಘೀಂಕರಿಸುವುದಕ್ಕೆ ಬದಲಾಗಿ ಒಂದು ವಿಚಿತ್ರ ಆಕಾರವು ಆನೆಯ ಮೇಲೆ ತಲೆ ಎತ್ತಿ ! ಯಾರೋ ಅದು ಕಲ್ಲು ಬಿಸುಡೋದು ? ಯಾರೆಂದು ಮಾಡಿ ಕಲ್ಲು ಬಿಸಾಡಿದೆ ? " ಗುಡುಗುದನಿಯಿಂದ ಹೇಳಿ ಹೊಂಕಾರ ತು. ಹುಡುಗ ಮರಗಟ್ಟಿದ.

ಯ ಮೇಲೆ ಕಂಡ ಆಕೃತಿಯನ್ನೂ, ಅದರ ನ್ನೂ ಕೇಳಿ ಹುಡಗನಿಗೆ ಪ್ರಾಣವೇ ಹಾರಿದ ಯಿತು, ಅವನು ಗಡಗಡ ನಡುಗುತ್ತ ಮಂಚಿಕೆ ಹಾರಿ ಓಡಿಹೋಗಲು ನೆನೆಯುತ್ತಾ, ಕೈಕಾಲು ಧೀನ ತಪ್ಪಿದವನಾಗಿ ಮಂಚಿಕೆಯ ಮೇಲೆ ವಿನಂತೆ ಸುಮ್ಮನೆ ನಿಂತನು.



ಅಷ್ಟರಲ್ಲಿ ಆನೆ ಮಂಚಿಕೆಯ ಸಮೀಪವೇ ಬಂದಿತು. ಅದು ಸಾಧಾರಣ ಆನೆಯಂತಿರಲಿಲ್ಲ. ಅದು ಸಮುದ್ರ ದಲ್ಲಿ ಈಜುವುದೇನೋ ಎಂಬಂತೆ ಅದರ ಶರೀರವು ಮೀನಿನ ಪೊರೆಯ ಹಾಗಿತ್ತು. ಅದರ ಮೇಲೆ ಕುಳಿತಿರುವವನ ತಲೆಯಲ್ಲಿ ಮೊಸಳೆಯ ಆಕಾರ ದಲ್ಲಿರುವ ಶಿರಸ್ತ್ರಾಣವಿದ್ದಿತು. ಅವನ ಶರೀರದ ಮೇಲೆ ಮೊಸಳೆಯ ಚರ್ಮದ ಮುಸುಗು. ಹೀಗೆ ಇವನು ಯಾವ ಪಾತಾಳಲೋಕದಿಂದ ಭೂಮಿಗೆ ಬಂದನೋ ? ಏಕೆ ಬಂದನೋ ?

ಆ ವಿಕೃತಾಕಾರದವನು ಕಾವಲಿನ ಹುಡುಗನಿಗೆ ಅಭಯ ಪ್ರದಾನ ಮಾಡುವವನಂತೆ ಕೈಯೆತ್ತಿ, "ಲೋ, ಹುಡುಗಾ, ಹೆದರಬೇಡ. ನಿನಗೇನೂ ಮಾಡಲಾರೆ. ನೀನೀಗ ನಾನು ಹೇಳಿದಂತೆ ಮಾಡಿದರೆ ಸಾಕು. ನಿನ್ನ ಹಳ್ಳಿಗೆ ಹೋಗಿ ನನಗೆ ತಿನ್ನಲಿಕ್ಕೆ ಏನಾದರೂ ಒಳ್ಳೆಯ ತಿಂಡಿ ತೆಗೆದುಕೊಂಡು ಬಾ. ಹಾಗೆಯೇ ನಿನ್ನ ಹಳ್ಳಿಯಲ್ಲಿ ಒಳ್ಳೆಯ ವೈದ್ಯನಿದ್ದರೆ



ಅವನನ್ನು ಕೂಡಾ ಕರೆದುಕೊಂಡು ಬಾ. ಅವನು ಶಸ್ತ್ರ ಚಿಕಿತ್ಸೆ ಗೊತ್ತಿದ್ದವನಾಗಿರಬೇಕು ತಿಳಿಯಿತೇ? ಇಲ್ಲಿ ನೋಡು, ನನ್ನ ಹೊಟ್ಟೆಯೊಳಗೆ ಇಳಿದು ತುಂಡಾಗಿ ಸಿಕ್ಕಿಕೊಂಡಿರುವ ಈ ಕತ್ತಿಯನ್ನು ಉಪಾಯದಿಂದ ಹೊರಗೆ ಎಳೆದು ಬಿಡಬೇಕು ಆ ವೈದ್ಯ. ಪ್ರಾಣ ಉಳಿಸುವವನಾಗಿರಬೇಕಪ್ಪಾ" ಎಂದನು.

ಕಾವಲಿನ ಹುಡುಗ ಹೆದರಿ ನಡುಗುತ್ತ, ಆ ವಿಕೃತಾಕಾರದವನು ಹೇಳಿದ ಮಾತುಗಳನ್ನೇನೋ ಕೇಳಿದ. ಆದರೆ ಅವನಿಗೆ ಮಂಚಿಕೆಯಿಂದ ಕೆಳಗಿಳಿಯಲು ಧೈರ್ಯವಿಲ್ಲ.

ಅವನ ಅವಸ್ಥೆಯನ್ನು ಅರ್ಥಮಾಡಿಕೊಂಡವನಂತೆ ಆ ವಿಕೃತಾಕಾರದವನು ಮುಂದೆ ಬಂದು ಕಾವಲು ಹುಡುಗನ ಸೊಂಟ ಹಿಡಿದು ಮೇಲೆತ್ತಿ, ಆನೆಯ ಮೇಲಕ್ಕೆ ಏರಿಸಿ ಆಮೇಲೆ ಅವನ ಎರಡು ಕೈಗಳನ್ನೂ ಹಿಡಿದು ನೆಲದ ಮೇಲಕ್ಕೆ ಜಾರಿಸಿದನು. ಕಾಲುಗಳು ನೆಲದ ಮೇಲೆ ಸೋಂಕುತ್ತಲೇ ಆ ಹುಡುಗನಿಗೆ ಅದೆಷ್ಟೊಂದು ಚುರುಕು ಬಂದಿತೋ! ಅವನು ಯಮಕಿಂಕರರ ಹಿಡಿತ[...] ಪಾರಾದವನಂತೆ "ಓ! ದೇವರೇ!" ಎಂದು ದೊ[...]ದೊಂದು ಕೂಗು ಹಾಕಿ ಸುಳಿಗಾಳಿಯ ವೇಗ[...] ಓಡುತ್ತಾ, ಸ್ವಲ್ಪ ಹೊತ್ತಿನಲ್ಲಿ ಹಳ್ಳಿ[...] ಮುಟ್ಟಿ "ಹೋ ಹೋ" ಎಂದು ಕರೆದನು.

ಆ ಸಮಯದಲ್ಲಿ ಹಳ್ಳಿಯ ನಡುಭಾಗದ[...] ದೊಡ್ಡ ಬೇವಿನ ಮರದ ಕಟ್ಟೆಯ ಮೇಲೆ ಕೆ[...] ಕುಳಿತು ಏನೋ ಹರಟೆ ಹೊಡೆದುಕೊಂಡಿ[...] ಓಡುತ್ತಾ ಬರುವ ಕಾವಲಿನ ಹುಡುಗನನ್ನು [...] ಕೂಡಲೇ ಅವರಿಗೆ ಜೋಳದ ಹೊಲಕ್ಕೆ [...] ಹಂದಿಗಳ ಗುಂಪೋ ಮತ್ತೇನೋ ಬಂದಿರಬೇ[...] ತೋರಿತು. "ಏನೋದೂ ಸಣ್ಣಪ್ಪಾ, ಅದೇಕೆ [...] ಓಡುತ್ತೀ? ಏನಾಯಿತೋ?" ಎಂದು ಕೇ[...]

ಸಣ್ಣಪ್ಪ ನಿಂತು ಶ್ವಾಸ ಬಿಡುತ್ತ ಬಿಕ್ಕುತ್ತ[...] ಸುತ್ತ ಜೋಳದ ಹೊಲದಲ್ಲಿ ನಡೆದುದನ್ನೆಲ್ಲಾ [...] ಮುಗಿಸಿದ. ಅದನ್ನು ಕೇಳಿದ ಹಳ್ಳಿಯ ಪ್ರ[...] ರಾರಿಗೂ ಅವನ ಮಾತಿನ ಮೇಲೆ ನ[...] ಯುಂಟಾಗಲಿಲ್ಲ. ಅವನೇನೋ ತೂಕಡಿ[...] ಯಾವುದನ್ನೋ ನೆನೆದು ಹೆದರಿ ಮತಿ ಭ[...] ಗೊಂಡಿರುವನೆಂದು ಅವರಿಗೆ ತೋರಿತು. [...] ಸಮಯಕ್ಕೆ ಅಲ್ಲಿಗೆ ಬಂದ ಆ ಪ್ರಾಂತದ ಗ[...] ಹಳ್ಳಿಯವರ ಮೂಲಕ ಆ ಸಂಗತಿಯನ್ನೆಲ್ಲಾ [...] "ಸಣ್ಣಪ್ಪ ಹೇಳಿದ್ದು ನಡೆಯಲಾರದ ಸಂಗತಿ[...] ನನಗೆ ಗಣಾವೇಶಬಂದಾಗ ಇಂತಹ ನೀರಾನೆ[...] ಹೊಸಳೆ ಮನುಷ್ಯರನ್ನೂ ಮಾತ್ರವಲ್ಲ, [...] ತಲೆಗಳ ಸಿಂಹ, ಹತ್ತು ತಲೆಗಳ ವಿಚಿತ್ರ [...] ರನ್ನು ಕೂಡಾ ನೋಡಿದ್ದೇನೆ." ಎಂದನು.

"ಹಾಗಾದರೆ ಈಗ ನಾವು ಏನು ಮಾಡ[...] ಎಲ್ಲಾನ್ನೆಲ್ಲಾ ಕೊಂದು ತೀರಿಸಬೇಕೆಂದು ಆ [...] ಜಾತಿಯವನು ಹೇಗೇನಾದರೂ ತಂತ್ರ ಮ[...]


201

ನೇನೋ ? ಹೊಟ್ಟೆಯೊಳಗೆ ಕತ್ತಿಯ ತುಂಡು ಅಂತ ಇಲ್ಲದ್ದಲ್ಲಾ ಹೇಳಿ, ಕೋಪಕ್ಕೆ ದಾರಿಮಾಡಿಕೊಂಡು ನಮ್ಮನ್ನೆಲ್ಲಾ ನುಂಗಿದರೆ ಏನು ಗತಿ ?" ಎಂದ ಒಬ್ಬ ಮುದುಕ ಅನುಭವಸ್ಥ.

ಅಲ್ಲಿಂದ ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಹೇಳುತ್ತ ಚರ್ಚೆ ಮಾಡುತ್ತ ವಾದೋಪವಾದಕ್ಕೆ ಪ್ರಾರಂಭಿಸಿದ್ದರು. ಗುಂಪು ಸೇರಿತು. "ಅವನ ದೇಹದಲ್ಲಿ ಕತ್ತಿ ಸಿಕ್ಕಿಕೊಂಡಿದೆ. ಅವನು ಆಹಾರವನ್ನೂ, ವೈದ್ಯನ ಸಹಾಯವನ್ನೂ ಕೇಳುತ್ತಾನೆ. ನಾವು ನಮ್ಮ ಚರಕಾಚಾರಿಯನ್ನು ಕರೆದುಕೊಂಡು ಹೋಗಿ ಉಪಕಾರ ಮಾಡಿಸುವುದೇ ಒಳ್ಳೆಯದು" ಎಂದು ಒಬ್ಬನು ಗಟ್ಟಿಯಾಗಿ ಹೇಳುತ್ತ ಗುಂಪಿನಲ್ಲಿದ್ದ ಗ್ರಾಮ ವೈದ್ಯ ಚರಕಾಚಾರಿಯ ಕೈಹಿಡಿದನು.

ಚರಕಾಚಾರಿ ಹೆದರಿ. "ಅಯ್ಯಯ್ಯೊ! ಆ ವಿಕೃತಾಕಾರದ ರಾಕ್ಷಸನಿಗೆ ನಾನು ಚಿಕಿತ್ಸೆ ಮಾಡಲು ಸಾಧ್ಯವೇ ? ಅದಂತೂ ಶಸ್ತ್ರಚಿಕಿತ್ಸೆ ಮಾಡುವವನ ಕೆಲಸ. ನಮಕ್ಷೌರಿಕ ವೀರನಾರಾಯಣನ್ನ ಕರೆಯಿಸಿರಿ. ಅವನು ರಾಕ್ಷಸನ ಹೊಟ್ಟೆಯೊಳಗಿನಿಂದ ಮುರಿದ ಕತ್ತಿಯನ್ನು ಹೊರಗೆಳೆದ ಮೇಲೆ, ರಕ್ತಸ್ರಾವವಾಗಿ ಸಾಯದಂತೆ ಬೇಕಾದರೆ ನಾನು ಮದ್ದು ಕೊಟ್ಟು ಕಾಪಾಡಿಯೇನು ! ಇದು ನನ್ನೊಬ್ಬನಿಂದಾಗುವ ಕೆಲಸವಂತೂ ಅಲ್ಲ." ಎಂದನು.

ಅಷ್ಟರಲ್ಲಿ ಒಬ್ಬಿಬ್ಬರು ಓಡಿಹೋಗಿ ವೀರ[illegible] ಯಣನನ್ನು ಕರೆದುಕೊಂಡು ಬಂದರು. ಅವನು [illegible] ತಿಳಿದ ಕೂಡಲೇ "ಅಯ್ಯೊ!" ಎಂದು ಕಿರಿ[illegible] ಬಿದ್ದು "ಆ ಮೊಸಳೇ ರಾಕ್ಷಸನ ಹೊಟ್ಟೆಯೊಳ[illegible] ನಿಂದ ಮುರಿದ ಕತ್ತಿ ಎಳೆದು ತೆಗೆಯು[illegible] ನನಗಿದ್ದೀತೇ ?" ಎಂದನು.


"ಏನೂ ಹೆದರಬೇಕಾಗಿಲ್ಲ ಯಾರೂ ! [illegible] ಇದ್ದೇವಲ್ಲಾ. ಹೂಂ, ಎಲ್ಲಾ ಹೊರಡಿರಿ. ಆಯುಧಗಳೂ ಇರಲಿ. ಯಾವುದಕ್ಕೂ [illegible] ಸಣ್ಣಪ್ಪ ಹೇಳಿದ ಮಾತು ಎಷ್ಟು ಸುಳ್ಳು [illegible] ಸತ್ಯವೆಂಬುದನ್ನಾದರೂ ರುಜುಮಾಡಿಕೊಳ್ಳ[illegible] ಎಂದ ಹಳ್ಳಿಯ ವೀರನೆಂದು ಪ್ರಸಿದ್ಧನಾದ [illegible] ಬಂಟ. ಎಲ್ಲರೂ ಹೊರಟರು.

ಜನರೆಲ್ಲ ಗುಂಪಾಗಿ ಕತ್ತಿ, ಕೋಲು, [illegible] ಗಧಾರೆಗಳನ್ನು ಹಿಡಿದುಕೊಂಡು ಜೋಳದ [illegible] ಕಡೆಗೆ ಬರುವುದನ್ನು ನೋಡಿದ ಕೂಡಲೇ [illegible] ಮೇಲಿದ್ದ ವಿಕೃತಾಕಾರದವನು, ಆನೆಗೆ ಜೋ[illegible] ತಿವಿದು ಹುರುಡಿಸಿದನು.

ಕೂಡಲೇ ಆನೆ ಸೊಂಡಿಲೆತ್ತಿ ಘೀಂಕರಿಸಿ, [illegible] ವರಕಡೆಗೆ ವೇಗದಿಂದ ಹಾರಿಹಾರಿ ಬರುವ ಯಾ[illegible] ಭೂತದಂತೆ ಬರತೊಡಗಿತು.

—(ಮುಂದುವರಿಯು[illegible])





August 1976

# ಮಾಯಾಸರೋವರ

## ೭

[ಸಿದ್ಧಸಾಧಕನಿಗೆ ಆಲದಮರದ ಹತ್ತಿರ ಪೊದರಿನಲ್ಲಿ ಒಂದು ಹಳೆಯ ತಾಳಪತ್ರದ ಗ್ರಂಥ ಸಿಕ್ಕಿದರೂ ರಾಜನ ಮಕ್ಕಳ ಜಾಡು ತಿಳಿಯಲಿಲ್ಲ. ಆದುದರಿಂದ ಜಯಶೀಲನು ಸಿದ್ಧಸಾಧಕನೊಂದಿಗೆ ಗುಡ್ಡಗಳ ಕಡೆಗೆ ಹೋಗುವಾಗ, ಒಂದೆಡೆಯಲ್ಲಿ ಗುಂಪಾಗಿದ್ದ ಗ್ರಾಮಸ್ಥರ ಕಡೆಗೆ ಆನೆಯ ಮೇಲಿನ ವಿಕೃತಾಕಾರದವನೊಬ್ಬ ಧಾವಿಸಿ ಬರುವುದು ಕಂಡಿತು.]

ತಮ್ಮ ಕಡೆಗೆ ವೇಗವಾಗಿ ಬರುತ್ತಿರುವ ದೊಡ್ಡ ಆನೆಯನ್ನೂ, ಅದರ ಮೇಲೆ ಕುಳಿತಿರುವ ಮೊಸಳೆಯಂತಹವನನ್ನೂ ನೋಡಿ ಗ್ರಾಮಸ್ಥರ ಹೊಟ್ಟೆಯೊಳಗೆ ಭಯವು ಕಡೆದಾಡ ತೊಡಗಿತು. ಓಡಿ ಹೋಗಲಿಕ್ಕೂ ಸಾಧ್ಯವಾಗದಂತೆ ಕಾಲುಗಳು ನಡುಗುತ್ತಿದ್ದುವು. ಅವರಿಗೆಲ್ಲ ಎಂತಹುದೋ ದಿಗ್ಬಂಧನವಾದಂತಾಯಿತು.

ಗಜವಾಹಕನಾದ ವಿಕೃತಾಕಾರದವನು ಅವರ ಬಳಿಗೇ ತನ್ನ ವಾಹನವನ್ನು ತಂದು ನಿಲ್ಲಿಸಿ, ದೊಡ್ಡ ಕಂಠ ಸ್ವರದಿಂದ, "ಓಹೋಯ್! ನಿಮ್ಮಲ್ಲಿ ಓಡಿ ಹೋಗಲು ನೋಡುವವರಿಗೆ ಮಾತ್ರ ನನ್ನಿಂದ ಗಂಡಾಂತರ ಬರುತ್ತೆ. ಉಳಿದವರಾರಿಗೂ ನನ್ನಿಂದ ಯಾವ ಕೆಡುಕೂ ಇಲ್ಲ. ಧೈರ್ಯವಿದ್ದವರು ಸ್ವಲ್ಪವೂ ಹೆದರ ಬೇಡಿ!" ಎಂದನು.

ಆ ಮಾತು ಕೇಳಿದ ಮೇಲೆ ಗ್ರಾಮದವರೆಲ್ಲ ಬದುಕಿನ ಆಸೆ ಮರುಕಳಿಸಿ ಶ್ವಾಸ ಬಿಡಲಾರಂಭಿಸಿದರು. ಆನೆಯ ಮೇಲೆ ಕುಳಿತಿರುವವನು ಮೊಸಳೆಯಂತೆ ಕಾಣಿಸಿದರೂ, ಅವನೊಬ್ಬ ಮನುಷ್ಯನಂತೆಯೇ ಇರುವುದನ್ನು ನೋಡಿ ಎಲ್ಲರಿಗೂ ಸಂತೋಷ ಆಶ್ಚರ್ಯ ಸಮಾಧಾನಗಳುಂಟಾದುವು.



7-1 203



ಯಾವ ಪ್ರತ್ಯುತ್ತರವೂ ಕೊಡದೆ ಬೆರಗು ಕಣ್ಣುಗಳಿಂದ ಮಿಕಿಮಿಕಿ ತನ್ನನ್ನೇ ನೋಡುತ್ತಿರುವ ಹಳ್ಳಿಯವರನ್ನು ನೋಡಿ ಆ ವಿಕೃತಾಕಾರದವನೇ ಮಾತಾಡಿಸಿದನು: "ಹಾಗೆ ನೋಡುವಿರೇಕೆ? ನೀವೆಲ್ಲಾ ಮೂಕರೇನು? ನಿಮ್ಮೊಳಗೆ ಮುಖಂಡನು ಯಾರು? ಜೋಳದ ಹೊಲದ ಕಾವಲಿನ ಹುಡುಗ ನಿಮ್ಮ ಕಡೆಯವನೇನಾ? ಅವನ ಹತ್ತಿರ ನನಗೆ ಒಳ್ಳೆಯ ಆಹಾರ ಬೇಕೆಂದು ಹೇಳಿದ್ದೆನಲ್ಲಾ? ಅವನೆಲ್ಲಿದ್ದಾನೆ? ಅದರ ಬದಲಿಗೆ ನೀವೆಲ್ಲಾ ಕತ್ತಿ ಕೋಲುಗಳನ್ನು ಹಿಡಿದುಕೊಂಡು ನನ್ನನ್ನು ಕೊಲ್ಲಲು ಬಂದಿರುವ ಹಾಗಿದೆ. ನಿಜ ತಾನೇ? ನಿಮಗೇನು ಕೆಡುಕಾಯಿತು ನನ್ನಿಂದ?"

ಇಷ್ಟು ಹೊತ್ತಿಗೆ ಗುಂಪಿನಲ್ಲಿದ್ದ ಗ್ರಾಮದ ಹಿರಿಯನಿಗೆ ಭಯವು ಪೂರಾ ತೊಲಗಿತು. ಗಜವಾಹಕನ ರೂಪಮಾತ್ರ ವಿಕಾರವಾಗಿದೆಯೇ ಹೊರತು ಎಲ್ಲಾ ಮನುಷ್ಯರಿಗಿರುವಂತೆ ಇವನಿಗೂ ಹಸಿವೆಯಾಗುತ್ತಿದೆ, ಏನೋ ರೋಗವೂ ಇದೆ. ಒಳ್ಳೆಯ ತಿಂಡಿ ಬೇಕೆನ್ನುತ್ತಾನೆ. ಯಾವ ಲೋಕದಿಂದ ಎಷ್ಟು ದಿನ ಉಪವಾಸ ಬೀಳುತ್ತ ಬಂದನೋ?

ಗ್ರಾಮದ ಮುಖಂಡ ಧೈರ್ಯದಿಂದ ಅವನಿಗೆ ಕೈ ಮುಗಿದುಕೊಂಡು ಮುಂದೆ ಹೋಗಿ, "ಅಯ್ಯಾ ಮೊಸಳೆ ದೊರೆಗಳೇ, ನಮ್ಮನ್ನು ಕ್ಷಮಿಸಬೇಕು. ನೀವು ಹೇಳಿದ ಆ ಹುಡುಗ ನಮ್ಮ ಗ್ರಾಮದವನೇ. ಅವನೊಂದಿಗೆ ನೀವು ಹೇಳಿ ಕಳಿಸಿದ ಮಾತುಗಳನ್ನು ನಮ್ಮೊಂದಿಗೆ ಹೇಳಿದ್ದಾನೆ. ಆಗ ಅವನು ನಿಮ್ಮ ಆನೆ ನಿಮ್ಮ ರೂಪಗಳನ್ನೆಲ್ಲ ಹೇಳಿದ ರೀತಿ ನೋಡಿ ನಮಗೆ ನಂಬುಗೆಯಾಗಲಿಲ್ಲ. ಈ ಗುಡ್ಡಗಾಡು ಪ್ರಾಂತದಲ್ಲಿ ಎಲ್ಲಾ ಬಗೆಯ ಕ್ರೂರ ಮೃಗಗಳೂ ಇರುತ್ತವಷ್ಟೆ? ಕಾಡಾನೆಗಳು ಕೂಡಾ ಮುಂದೆ ಮುಂದೆಯಾಗಿ ಅಲೆದಾಡುತ್ತಿರುತ್ತವೆ. ಅಂತಹ ಯಾವುದೋ ಆನೆ ಜೋಳದ ಹೊಲಕ್ಕೆ ಬಂದಿರಬೇಕೆಂದು ಮಾಡಿದೆವು. ಹುಡುಗ ಯಾವುದನ್ನೋ ನೋಡಿ ಹೆದರಿರಬೇಕೆಂದೂ ನಮಗೆ ತೋರಿತು. ಆದಕ್ಕೇ ಆಯುಧಗಳೊಂದಿಗೆ ಬಂದೆವು. ವ್ಯತ್ಯಾಸವಾಗಿ ತಿಳೀಬಾರದು." ಎಂದನು.

ಆನೆಯ ಮೇಲಿದ್ದ ವಿಕೃತಾಕಾರನು ಆನೆಯ ತಲೆಯನ್ನೊಮ್ಮೆ ಗಟ್ಟಿಯಾಗಿ ಗುದ್ದಿ, "ಎಲೋ ಗ್ರಾಮದ ಹಿರಿಯ ಮನುಷ್ಯ! ನೀನು ಅಸಲು ಸಂಗತಿ ಬಿಟ್ಟು ಅಗತ್ಯವಿಲ್ಲದ ಸಂಗತಿಗಳನ್ನು ತುಂಬಾ ಹೇಳಿದೆ. ಮುಖ್ಯವಾಗಿ ನನಗೆ ಬೇಕಾದ ಆಹಾರವೆಲ್ಲಿದೆ? ವೈದ್ಯನೆಲ್ಲಿದ್ದಾನೆ? ಬರಲಿ ಮುಂದೆ." ಎಂದನು ಕೋಪದಿಂದ.

ಅವನ ಕೋಪವನ್ನು ನೋಡಿ ಗ್ರಾಮದ ಹಿರಿಯ ಎರಡಡಿ ಹಿಂದಕ್ಕಿಟ್ಟು, "ಅಯ್ಯಾ, ಮೊಸಳೆ ದೊರೆಗಳೇ, ತಮ್ಮ ಸಲುವಾಗಿ ನನ್ನ ಮನೆಯಲ್ಲಿ ಪಂಚಭಕ್ಷ್ಯಪರಮಾನ್ನಗಳೊಂದಿಗೆ ಭೋಜನ ತಯಾರಾಗುತ್ತದೆ. ಮತ್ತೆ ನೋಡಿ, ಒಬ್ಬನಲ್ಲ, ಇಬ್ಬರು ವೈದ್ಯ ಶಿಖಾಮಣಿಗಳನ್ನು ಕರೆ ತಂದಿದ್ದೇನೆ." ಎಂದು ಹೇಳಿ ತಿರುಗಿ ನೋಡಿ, "ಎಲ್ಲಿದ್ದೀರೋ? ಬನ್ನೋ

"ಮುಂದೆ" ಎಂದು ಗಟ್ಟಿಯಾಗಿ ಕೂಗಿದನು. ಮೊಸಳೆಯಾಕಾರದವನು ತನ್ನ ಹೊಟ್ಟೆಯೊಳಗೆ ಹೊಕ್ಕಿರುವ ಮುರಿದ ಕತ್ತಿಯ ಕಡೆಗೆ ನೋಡಿ, "ಅಬ್ಬಾ!" ಎಂದು ಸಣ್ಣ ದನಿಯಿಂದ ನರಳಿ, "ಆಹ್! ವೈದ್ಯರೆಲ್ಲಿ?" ಎನ್ನುತ್ತಾ, ಜನರ ಗುಂಪನ್ನು ಪರೀಕ್ಷಿಸಿ ನೋಡ ತೊಡಗಿದ.

ಗ್ರಾಮದ ಹಿರಿಯನು ಬಹಳ ತಿಳುವಳಿಕೆಯುಳ್ಳವನೇ. ಕುಯುಕ್ತಿಗಾರನೂ ಕೂಡ. ಅಂತೆಯೇ ಅವನು ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ಮೇಲೆತ್ತಿ ಗುಂಪಿನ ಕಡೆಗೆ ಆಡಿಸುತ್ತ, "ಎಲೋಯ್! ನಿಮ್ಮಲ್ಲಿ ಒಬ್ಬಿಬ್ಬರು ಊರೊಳಗೆ ಓಡಿ ಹೋಗಿ ಮೊಸಳೆ ದೊರೆಗಳಿಗೆ ಪಕ್ವವಾದ ಆಹಾರ ತೆಗೆದುಕೊಂಡು ಬನ್ನಿ. ನಮ್ಮ ಚರಕಾಚಾರಿ ಎಲ್ಲಿದ್ದಾನೆ? ಆ ವೀರನಾರಾಯಣ ಎಲ್ಲಿ ಸತ್ತ? ಕರೆದದ್ದು ಕೇಳಿಸಲಿಲ್ವೇನೋ?" ಎಂದನು.

ಅವನ ಮಾತು ಮುಗಿಯುವುದರೊಳಗೆ ಜನರ ಗುಂಪಿನೊಳಗಿಂದ ಕೆಲವರು ಚರಕಾಚಾರಿಯನ್ನೂ, ವೀರನಾರಾಯಣನನ್ನೂ ಮುಂದಕ್ಕೆ ದೂಡಿದರು. ಆದರೆ ಅವರು ಹೆದರಿಕೆಯಿಂದ ಅತ್ತಿತ್ತ ಸರಿಯುತ್ತ ಜಾರುತ್ತ ಅಡಗಿಕೊಳ್ಳಲು ನೋಡುತ್ತಿದ್ದರು. ಗ್ರಾಮದ ಹಿರಿಯ ಸ್ವತಃ ಅತ್ತ ನಡೆದು ಚರಕಾಚಾರಿ ಮತ್ತು ವೀರನಾರಾಯಣರ ಕೈಗಳನ್ನು ಹಿಡಿದು ಮುಂದಕ್ಕೆಳೆದುಕೊಂಡು ಬಂದು, ಮೊಸಳೆಯವನೊಂದಿಗೆ, "ನೋಡಿರಿ ಮೊಸಳೆ ದೊರೆಗಳೇ, ಇವರೇ ನಮ್ಮ ಗ್ರಾಮದ ವೈದ್ಯ ಚೂಡಾಮಣಿಗಳು. ಇಬ್ಬರದೂ ಒಳ್ಳೆಯ ಕೈಗುಣ! ನಿಮಗಾಗುವ ಬಾಧೆಯನ್ನು ಇವರೊಂದಿಗೆ ಹೇಳಿ. ಅಷ್ಟರಲ್ಲಿ ಆಹಾರ ಬಂದುಬಿಡುತ್ತೆ." ಎಂದನು.

ಮೊಸಳೆಯಾಕಾರದವನು ಅವರಿಬ್ಬರನ್ನೂ ಚುರುಚುರು ನೋಡಿ "ಹೂಂ" ಎಂದು, ತನ್ನ ತಲೆಯನ್ನು ಮುಚ್ಚಿಕೊಂಡಿದ್ದ ಶಿರಸ್ತ್ರಾಣವನ್ನು ಎತ್ತಿ ಹಿಂದಕ್ಕೆ



ದೂಡಿಕೊಂಡನು. ಈಗ ಅವನ ಮುಖವನ್ನು ಗ್ರಾಮಸ್ಥರೆಲ್ಲ ಸ್ಪಷ್ಟವಾಗಿ ನೋಡಿದರು, ಅವನು ಸುಮಾರು ನಲುವತ್ತು ವಯಸ್ಸಿನ ಮನುಷ್ಯ. ಕೆಂಪಗಿನ ದೇಹಚ್ಛಾಯ. ದಟ್ಟವಾದ ಕಪ್ಪಗಿನ ಉಂಗುರಾಕಾರದ ತಲೆ ಗೂದಲ ರಾಶಿ ಅವನ ಭುಜಗಳ ಮೇಲೆ ಹೊರಳಾಡುತ್ತಿದ್ದುವು.

"ಸಾಧಾರಣದ ಮನುಷ್ಯ! ಯಾವುದೋ ರಾಜಕುಟುಂಬಕ್ಕೆ ಸೇರಿದವನಾಗಿರಬೇಕು" ಎಂದು ಶಸ್ತ್ರವೈದ್ಯನಾದ ವೀರನಾರಾಯಣ ತನ್ನ ಪಕ್ಕದಲ್ಲಿದ್ದ ಚರಕಾಚಾರಿಯೊಂದಿಗೆ ಮೆಲ್ಲನೆ ಹೇಳಿದ.

"ನಮ್ಮ ಕಣ್ಣಿಗೆ ಹೀಗೆ ಕಂಡರೂ ಖಂಡಿತ ಹೇಳಲಾಗದು. ರಾಕ್ಷಸರೂ ಪಿಶಾಚಗಳೂ ಮಾಯಾಶಕ್ತರಾದ ಕಾಮರೂಪಿಗಳು ತಾನೇ? ಅದೇನಿದ್ದರೂ ನಾವು ನಮ್ಮ ಗುರುಗಳ ಹತ್ತಿರ ಮಾಡಿದ ಪ್ರಮಾಣದ ಪ್ರಕಾರ ರೋಗ ಗ್ರಸ್ತನಾದವನು ರಾಕ್ಷಸನಾದರೂ, ಪಿಶಾಚಿಯಾದರೂ ನಾನಂತೂ ಚಿಕಿತ್ಸೆ ಮಾಡುತ್ತೇನೆ.



"ಗುರುರಾಜರೇ ! ಕಾಪಾಡಿ !" ಎಂದು ಆಕಾಶದ ಕಡೆಗೆ ಕೈಮುಗಿದ ಚರಕಾಚಾರಿ.

"ನಾನು ಸಹಾ ವೈದ್ಯ ಕಲಿಸಿದ ಅಪ್ಪನ ಹತ್ತಿರ ಹಾಗೆಯೇ ಪ್ರಮಾಣ ಮಾಡಿದ್ದೇನೆ. ಉಂ, ನೀವೇ ಮೊದಲು ಮಾಡಿಬಿಡಿ. ನಿಮ್ಮ ಹಿಂದೆ ನಾನೂ." ಎಂದ ವೀರನಾರಾಯಣ.

ವೈದ್ಯರಿಬ್ಬರಿಗೂ ಹೆದರಿಕೆ ಹೋಯಿತೆಂದು ಗ್ರಾಮದ ಹಿರಿಯನಿಗೆ ಗೊತ್ತಾದುದರಿಂದ ಅವನು ಆಚೆಗೆ ಹೋದನು. ಚರಕಾಚಾರಿಯೂ ವೀರ ನಾರಾಯಣನೂ ಆನೆಯ ತೀರ ಸಮೀಪ ಹೋದರು. ಚರಕಾಚಾರಿ ತಲೆಯೆತ್ತಿ, "ಮಕರ ಪ್ರಭೋ! ಅಪ್ಪಣೆ ಯಾಗಲಿ; ತಮ್ಮನ್ನು ಹಿಡಿದು ಪೀಡಿಸುವ ವ್ಯಾಧಿ ಯಾವುದು? ಅದರ ಲಕ್ಷಣಗಳನ್ನು ಸ್ವಲ್ಪ ಹೇಳು ವಿರಾ?" ಎಂದನು.

ಮೊಸಳೆಯವನು ಆ ಪ್ರಶ್ನೆಗಳಿಂದ ಕೋಪ ಗೊಂಡು, "ಎಲೋ ವೈದ್ಯನೇ, ನಿನಗೇನಾದರೂ ದೃಷ್ಟಿ ಮಾಂದ್ಯವಿದೆಯೆ? ನಾನು ನಿಮ್ಮ ಗ್ರಾಮದ ಹುಡುಗನ ಹತ್ತಿರ ಹೇಳಿ ಕಳುಹಿಸಿದ ಸಂಗತಿಯೇನು? ಇಗೋ ಇಲ್ಲಿ ನೋಡು, ನನ್ನ ಹೊಟ್ಟೆಯ ಕೆಳಗೆ ಪಕ್ಕೆ ಯಲ್ಲಿ ಕುತ್ತಿಕೊಂಡಿರುವ ಈ ಕತ್ತಿಯನ್ನು ಹೊರಕ್ಕೆ ತೆಗೆದು ನಾನು ಸಾಯದ ಹಾಗೆ ನೋಡಿಕೊಳ್ಳಬೇಕು. ಬುದ್ಧಿಯಿಲ್ಲದೆ ನನಗೇನಾದರೂ ಪ್ರಾಣಾಪಾಯ ಉಂಟು ಮಾಡಿದಿರಾದರೆ ನಿಮ್ಮಿಬ್ಬರನ್ನೂ ಈ ಆನೆ ನಜ್ಜು ಗುಜ್ಜು ಮಾಡಿಕೊಲ್ಲುತ್ತದೆ, ಎಚ್ಚರ! ಮೊದಲೇ ಹೇಳಿದ್ದೇನೆ." ಎಂದನು.

ಚರಕಾಚಾರಿ ತುಸು ಹಿಂದೆ ಸರಿದು "ಒಳ್ಳೆಯದು. ಈ ವೀರನಾರಾಯಣನು ಶಸ್ತ್ರ ಚಿಕಿತ್ಸೆಯಲ್ಲಿ ಬಲು ಜಾಣ. ನಿಮ್ಮ ಪಕ್ಕೆಯಲ್ಲಿ ಸಿಕ್ಕಿಕೊಂಡ ಕತ್ತಿಯ ಭಾಗವನ್ನು ಇವನು ಉಪಾಯವಾಗಿ ಎಳೆದು ಬಿಡುತ್ತಾನೆ. ಅಷ್ಟರೊಳಗೆ ನಾನು ಗಾಯಕ್ಕೆ ತಕ್ಕ ಮೂಲಿಕೆಯನ್ನು, ಇದೋ ತಂದು ಬಿಡುತ್ತೇನೆ. ನಮ್ಮ ಮೇಲೆ ನಂಬಿಗೆಯಿಡಿ. ಸಂದೇಹ ಪಡಬೇಡಿ." ಎಂದು ಹೇಳಿ, ಪಕ್ಕದಲ್ಲಿರುವ ಪೊದರುಗಳ ಕಡೆಗೆ ಬೇಗಬೇಗನೇ ಹೋದನು.

"ಓಯ್, ಚರಕಾಚಾರಿಗಳೇ, ನಾನು ಕತ್ತಿಯನ್ನೆಳೆದ ಅರ್ಧಗಳಿಗೆಯೊಳಗೆ ಮೂಲಿಕೆ ಮದ್ದು ತಯಾರಾಗಬೇಕು. ರಕ್ತ ಸ್ರಾವವಾಗಲು ಬಿಡಬಾರದು. ಬೇಗ ಬಂದುಬಿಡಿ" ಎಂದು ಕೂಗಿ ಹೇಳಿದ ವೀರ ನಾರಾಯಣ.


ತರುವಾಯ ಅವನು ಮೊಸಳೆಯಾಕಾರದವನ ಕೈಯನ್ನು ಹಿಡಿದುಕೊಂಡು ಆನೆಯ ಬೆನ್ನ ಮೇಲೆ ಏರಿದನು. ಆಮೇಲೆ ವಿಕೃತಾಕಾರದವನ ಹೊಟ್ಟೆಯ ಕೆಳಗೆ ಪಕ್ಕೆಯಲ್ಲಿ ಇಳಿದಿರುವ ಕತ್ತಿಯ ತುಂಡನ್ನು ಪರೀಕ್ಷಿಸಿ ನೋಡಿ "ಕತ್ತಿ ಥಳಥಳ ಹೊಳೆಯುತ್ತಿದೆ ಯಲ್ಲ ದೊರೆಗಳೇ! ಸಾಮಾನ್ಯರ ಕತ್ತಿಯಲ್ಲ. ಯಾವುದೋ ರಾಜ ಖಡ್ಗದ ಹಾಗಿದೆ!" ಎಂದನು. ಮೊಸಳೆಯಾಕಾರದವನಿಗೆ ಅವನ ಮಾತುಗಳು

ಅಸಂಬಂಧವೆನಿಸಿತು. ಅವನು ಬೇಸರದಿಂದ, "ರಾಜ ಖಡ್ಗದ ಹಾಗೆಂದರೇನು ? ರಾಜಖಡ್ಗವೇ ಇದು ! ಯಾವನೋ ಒಬ್ಬ ಗರ್ವಿಷ್ಠ ರಾಜಕುಮಾರ ನನ್ನನ್ನು ಈ ಕತ್ತಿಯಿಂದ ಬಲವಾಗಿ ತಿವಿದ. ಈ ಮೊಸಳೆ ಚರ್ಮದ ಕವಚ ನನ್ನನ್ನು ಸಾಯದ ಹಾಗೆ ಕಾಪಾಡಿತು. ಆ ರಾಜಕುಮಾರನನ್ನು ಜೀವದೊಂದಿಗೆ ಹಿಡಿಯಲು ಹೋಗಿ ನನ್ನ ಜೀವಕ್ಕೇ ಬಂತು. ನನ್ನ ಬೇಟೆಗಾರರೆಲ್ಲ ಆನಂದದಿಂದ ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದಾರೆ. ನಾನೊಬ್ಬ ಈ ಪ್ರಾಂತದಲ್ಲಿ ಅರ್ಧಮತಿ ಪ್ರಮಾಣೆಯಿಂದ ಅಲೆದುಕೊಂಡಿದ್ದೇನೆ" ಎಂದನು. ತನಗೆತಾನೇ ವಟಗುಟ್ಟಿಕೊಂಡವನಂತೆ.

ಈ ಮಾತನ್ನು ಕೇಳಿ ವೀರನಾರಾಯಣನಿಗೆ ಒಂದು ಸಂಗತಿ ಹೊಳೆಯಿತು. ತಮ್ಮ ರಾಜನ ಕುಮಾರನೂ ಕುಮಾರಿಯೂ ಅಪಹರಿಸಲ್ಪಟ್ಟ ಸಂಗತಿ ನೆನಪಿಗೆ ಬಂತು. ಅವರನ್ನು ಅರಣ್ಯದಲ್ಲಿ ಬಲವಂತವಾಗಿ ಎತ್ತಿಕೊಂಡುಹೋದ ಗುಂಪಿನವರಲ್ಲೊಬ್ಬನೇ ಇವನಾಗಿರಬೇಕು, ಎಂದು ತೋರಿತು. ಈಗ ತಾನು ಇವನ ಪಕ್ಕೆಯಲ್ಲಿ ಇಳಿದಿರುವ ಕತ್ತಿಯನ್ನು ಎಳೆಯುವ ಪ್ರಯತ್ನದಲ್ಲಿ ಆಚೀಚೆ ಕದಲಿಸುತ್ತ ಪ್ರಾಣ ಹೋಗುವಂತೆ ಮಾಡುವುದು ಬಲು ಸುಲಭ. ಇಂಥ ದುಷ್ಟನು ಏಕೆ ಬದುಕಿರಬೇಕು ?


ಆದರೆ ಅದರಿಂದ ರಾಜನಿಗೆ ಪ್ರಯೋಜನವೇನೂ ಆಗದು. ತನ್ನ ಮಕ್ಕಳು ಎಲ್ಲಿ ಅಡಗಿಸಲ್ಪಟ್ಟಿದ್ದಾರೆಂಬ ಸಂಗತಿ ಇನ್ನಷ್ಟು ಗಾಢವೇ ಆಗುತ್ತದೆ. ಆದುದರಿಂದ ಈ ದುಷ್ಟನನ್ನು ಸಾಯದಂತೆ ಕಾಪಾಡಿ ರಾಜರಿಗೇ ಒಪ್ಪಿಸಿ ಬಿಡುವುದು ಒಳ್ಳೆಯದೆಂದು ವೀರನಾರಾಯಣನಿಗೆ ತೋರಿತು.

ಇಷ್ಟೆಲ್ಲ ಯೋಚನೆಯನ್ನು ಮಾಡುತ್ತಿದ್ದಂತೆಯೇ ವೀರನಾರಾಯಣನು ತನ್ನ ದುಸ್ತಿನೊಳಗೆ ಕಟ್ಟಿಕೊಂಡಿದ್ದ ಚೀಲದೊಳಗಿನಿಂದ ಹದನಾದ ಚಿಕ್ಕ ಕತ್ತಿ ಕತ್ತರಿ ಚಿಮಟ ಮುಂತಾದ ಆಯುಧಗಳನ್ನು ತೆಗೆದು,



"ದೊರೆಗಳೇ, ಚರಕಾಚಾರಿಯೂ ಬರಲಿ. ಕತ್ತಿಯನ್ನು ಹೊರಕ್ಕೆ ತೆಗೆದ ಮರುಕ್ಷಣದಲ್ಲಿ, ಔಷಧದ ಕಟ್ಟು ಕಟ್ಟದೇ ಹೋದರೆ ಅಪಾಯವಾದೀತು." ಎಂದು ಹೇಳಿ, ದೂರದಲ್ಲಿ ನಿಂತಿದ್ದ ಗ್ರಾಮದ ಹಿರಿಯನನ್ನು ನೋಡಿ, "ಅಯ್ಯಾ ಇಲ್ಲಿ ಕೇಳಿ, ಇಲ್ಲಿಯ ಚಿಕಿತ್ಸೆ ಮುಗಿದ ಕೂಡಲೇ ಇವರನ್ನು ನಮ್ಮ ಗ್ರಾಮಕ್ಕೆ ಕರೆದುಕೊಂಡು ಹೋಗಬೇಕು. ಇವರು ವಿಶ್ರಾಂತಿ ಪಡೆಯಬೇಕು. ಆದುದರಿಂದ ಮುಂದಾಗಿ ಯಾರನ್ನಾದರೂ ಕಳುಹಿಸಿ ಇವರಿಗೆ ತಕ್ಕ ಬಿಡಾರದ ಏರ್ಪಾಡು ಮಾಡಿಸಿರಿ." ಎಂದನು.

ವೀರನಾರಾಯಣನು ಹಾಗೆ ಹೇಳುತ್ತಿರುವಾಗ ಮೊಸಳೆ ರೂಪದವನು ಅವನನ್ನು ತೀಕ್ಷ್ಣವಾಗಿ ನೋಡುತ್ತ, "ಲೋ, ನಿನ್ನ ಹೆಸರು ವೀರನಾರಾಯಣ ತಾನೇ ?" ಎನ್ನುತ್ತ ಅವನ ಭುಜವನ್ನು ಬಿಗಿಯಾಗಿ ಹಿಡಿದು, "ನಾನು ನೋವನ್ನು ಅನುಭವಿಸುತ್ತ ಹೇಳಿದ ಮಾತಿನಿಂದ ನಾನು ಯಾರೆಂಬುದನ್ನು ನೀನು



ತಿಳಿದುಕೊಂಡೆ ಅಂತ ಕಾಣುತ್ತೆ. ಆ ಸಂಗತಿಯನ್ನು ನಿನ್ನ ಗ್ರಾಮದವರ ಹತ್ತಿರ ಹೇಳಿದೆಯೆಂದರೆ ನಿನ್ನ ಶರೀರದಲ್ಲಿ ಜೀವ ಉಳಿಯಲಾರದು ತಿಳಿಯಿತೇ ?" ಎಂದು ಬೆದರಿಸಿದನು.

ವೀರನಾರಾಯಣನು ಗಡಗಡ ನಡುಗುತ್ತ, "ಮೊಸಳೆ ದೊರೆಗಳೇ, ನನ್ನನ್ನು ಕೊಲ್ಲಬೇಡಿ. ನಮ್ಮ ಮಹಾರಾಜರೂ ನೀವೂ ಸಮಾನ ಬಲಶಾಲಿಗಳು. ಏನೋ ಅಳಲೇಕಾಯಿ ವೈದ್ಯ ಮಾಡಿ ಬದುಕಿಕೊಂಡಿರುವ ನಾನು, ಎರಡು ಬಲಿಷ್ಠ ಹೋರಿಗಳು ಹೋರಾಡಿಕೊಂಡಿರುವಾಗ ಮಧ್ಯದಲ್ಲಿ ತಲೆ ಹಾಕುವ ಕೆಲಸ ನನಗೇನಿದೆ? ನೀವೇನು ಹೇಳಿಕೊಂಡಿರೋ, ಅದನ್ನೆಲ್ಲ ಅರ್ಥಮಾಡಿಕೊಳ್ಳುವ ಅಗತ್ಯ ನನಗೇನಿದೆ? ಸ್ವಲ್ಪ ಹಲ್ಲು ಕಚ್ಚಿಕೊಂಡು ನೋವು ಸಹಿಸಿಕೊಳ್ಳಿ. ಈಗ ಕತ್ತಿಯನ್ನು ಮೆಲ್ಲಗೆ ಹೊರಗೆಳೆದು ಬಿಡುತ್ತೇನೆ" ಎಂದನು. ಮೊಸಳೆ ಮನುಷ್ಯ ಒಂದು ಹೂಂಕಾರ ಮಾಡಿ ತನ್ನ ಬಲವಾದ ಮುಷ್ಟಿಯನ್ನು ವೀರನಾರಾಯಣನ ಭುಜದಿಂದ ತೆಗೆದ. ವೀರನಾರಾಯಣನು ಸರಿಯಾಗಿ ಕುಳಿತು, ಮೊಸಳೆಯವನ ಪಕ್ಕೆಯಲ್ಲಿ ಹುದುಗಿದ್ದ ಕತ್ತಿಯನ್ನು ತನ್ನ ಕೈಯಲ್ಲಿದ್ದ ಸಾಧನಗಳಿಂದ ಕದಲಿಸುತ್ತ, ಕಡೆಗೆ ಎರಡು ಕೈಗಳಿಂದಲೂ ಬಲವಾಗಿ ಹಿಡಿದು "ಜೈ ಗುರುದೇವಾ! ರಕ್ಷಿಸು! ರಕ್ಷಿಸು!" ಎನ್ನುತ್ತ ಎಳೆಯ ತೊಡಗಿದನು.

ಅದೇ ವೇಳೆಯಲ್ಲಿ ದೂರದಲ್ಲಿದ್ದ ಮರಗಳ ಹಿಂದಿನಿಂದ ಚರಕಾಚಾರಿಯ ಕಂಠದಿಂದ "ಅಯ್ಯೋ! ರಕ್ಷಿಸಿ! ರಕ್ಷಿಸಿ!" ಎಂಬ ಬೊಬ್ಬೆ ಕೇಳಿತು. ಅದರೊಂದಿಗೆ ಎರಡು ಮೂರು ಆನೆಗಳು ಒಂದೇಬಾರಿಗೆ ಘೀಂಕರಿಸಿದ ಶಬ್ದವೂ ಭಯಂಕರವಾಗಿ ಕೇಳಿಸಿತು. ಎಲ್ಲರ ಲಕ್ಷ್ಯವೂ ಅತ್ತ ಹೊರಳಿತು.

ಚರಕಾಚಾರಿಯ ಆರ್ತನಾದವನ್ನೂ, ಆನೆಗಳ ಘೀಂಕಾರಗಳನ್ನೂ ಕೇಳಿದ ಕೂಡಲೇ ಮೊಸಳೆಯವನು ಆ ಶಬ್ದಗಳು ಬಂದ ಕಡೆಗೆ ತಲೆ ತಿರುಗಿಸಿದನು. ಕಾಡಾನೆಗಳ ಘೀಂಕಾರಗಳನ್ನು ಕೇಳಿ ಚರಕಾಚಾರಿ ಹೆದರಿ ಆರ್ತನಾದ ಮಾಡಿರಲಾರನೆಂದು ಆಗ ಅವನಿಗೆ ತಿಳಿಯಿತು. ಏಕೆಂದರೆ ಆನೆಗಳ ಘೀಂಕಾರ ಬಹಳ ದೂರದಿಂದ ಹೊರಟಿತ್ತು. ಆದುದರಿಂದ ಚರಕಾಚಾರಿ ಮತ್ತೇನೋ ಆಪದಕ್ಕೆ ಸಿಕ್ಕಿ ಆರ್ತನಾದ ಮಾಡುತ್ತಿರಬೇಕು. ಅವನಿಗೇನಾಯಿತು ?

ಆ ಶಬ್ದಗಳನ್ನು ಕೇಳಿ ಗುಂಪಾಗಿದ್ದ ಹಳ್ಳಿಯವರೆಲ್ಲಾ ಹೆದರಿ ತರಗೆಲೆಗಳಂತೆ ನಡುಗುತ್ತಿದ್ದರು. ಅವರಿಗೆ ಕಾಡಾನೆಗಳೆಂದರೆ ಹುಲಿ ಸಿಂಹಗಳಿಗಿಂತಲೂ ಹೆಚ್ಚು ಭಯ. ಕಾಡಾನೆಗಳು ಗುಂಪಾಗಿ ಊರಿನ ಮೇಲೆ ಒಂದೇಸಾರಿ ಬಂದು ಬಿದ್ದು ಮನೆಗಳನ್ನೆಲ್ಲ ನೆಲಮಟ್ಟ ಮಾಡುತ್ತವೆಂದು ಅವರಿಗೆಲ್ಲ ಅನುಭವವೇದ್ಯವಾದ ಸಂಗತಿ.

ಗ್ರಾಮದ ಹಿರಿಯ ಮೊಸಳೆಯವನನ್ನು ಸಮೀಪಿಸಿ, "ಮೊಸಳೆ ದೊರೆಗಳೇ, ನಮ್ಮ ಚರ


CHITRA

ಚಾರಿ ಯಾಕೋ ಒಂದುಸಾರಿಮಾತ್ರ ಕೂಗಿ ಸುಮ್ಮನಾಗಿ ಬಿಟ್ಟಿದ್ದಾನೆ. ಆದುದರಿಂದ ಅವನಿಗೆ ಎದುರಾದ ಅಪಾಯವು ಅವನನ್ನು ನುಂಗಿ ಬಿಟ್ಟಿರಬೇಕೆಂದು ತಾನೇ ಅರ್ಥ? ಅಯ್ಯೋ ಪಾಪ! ಇನ್ನು ಕಾಡಾನೆಗಳ ಮಂದೆ ನಮ್ಮ ಮೇಲೆ ಬಂದು ಬೀಳುವ ಮೊದಲೇ ನಾವು ನಮ್ಮ ಗ್ರಾಮ ಸೇರುವುದು ಒಳ್ಳೆಯದು. ನಿಮಗೂ ಪ್ರಾಪ್ತಿಯಿಲ್ಲ. ನಮಗೂ ಉಳಿಗಾಲವಿಲ್ಲ. ಕ್ಷಮಿಸಿ!" ಎಂದನು.

"ಚೆನ್ನಾಗಿದೆ ನಿಮ್ಮ ಮಾತು. ನನ್ನ ಚಿಕಿತ್ಸೆಯ ಗತಿ ಏನು? ಎಷ್ಟುಕಾಲ ನಾನು ಈ ತುಂಡು ಕತ್ತಿಯನ್ನು ಹೊಟ್ಟೆಯೊಳಗಿಟ್ಟುಕೊಂಡಿರಲಿ? ಅರ್ಧಂಬರ್ಧ ಕದಲಿಸಿ ಪುನಃ ರಕ್ತ ಬೇರೆ ಜಿನುಗುತ್ತಿದೆಯಲ್ಲಾ!" ಎಂದ ಮೊಸಳೆಯಾಕಾರದವನು.

ವೀರನಾರಾಯಣನು ಆನೆಗಳ ಘೀಂಕಾರವು ಕೇಳಿಬರುವ ದಿಕ್ಕಿಗೆ ನೋಡಿ, ಗಾಳಿಗೆ ಸಿಕ್ಕಿದ ಹುಲ್ಲಿನಂತೆ ನಡುಗುತ್ತ, "ಮೊಸಳೆ ದೊರೆಗಳೇ, ನಮ್ಮ ಗ್ರಾಮದ ಹಿರಿಯರು ಹೇಳಿದ ಹಾಗೆ ಮಾಡುವುದೇ ಒಳ್ಳೇದು. ನನ್ನ ಕೈ ಬೇರೆ ನಡುಗುತ್ತಿದೆ! ಏನೋ ಗುರುಗಳ ದಯೆ ಕಾಣುವುದಿಲ್ಲ." ಎಂದನು.


ಮೊಸಳೆ ಮನುಷ್ಯನಿಗೆ ಕೂಡ ತಾನು ಯಾವುದೋ ಇಕ್ಕಟ್ಟಿನಲ್ಲಿ ತಲೆ ತೂರಿಸಿಕೊಂಡೆನೆನಿಸಿ, ಏನು ಮಾಡುವುದೆಂದು ತೋರದೆ ಅತ್ತಿತ್ತ ನೋಡತೊಡಗಿದ. ಅಷ್ಟರಲ್ಲಿ ಪುನಃ ಚರಕಾಚಾರಿಯ ಕಂಠಸ್ವರವು, "ಅಯ್ಯಯ್ಯೋ! ಕಾಪಾಡಿರಪ್ಪೋ!" ಎಂದು ಕೆಟ್ಟ ಸ್ವರದಿಂದ ಕೇಳಿಸಿತು.

ಅದೇ ವೇಳೆಯಲ್ಲಿ ದೂರದಿಂದ ಕೆಲವು ಕಾಡಾನೆಗಳು ಪೊದರುಗಳನ್ನು ನೆಲಮಟ್ಟ ಮಾಡುತ್ತ ಹುಡಿಯೆಬ್ಬಿಸಿಕೊಂಡು, ಮರದ ಕೊಂಬೆಗಳನ್ನು ಮುರಿಯುತ್ತ, ಚಟಪಟ ಶಬ್ದಗಳನ್ನು ಮಾಡುತ್ತ, ಘೀಂಕರಿಸುತ್ತ, ಬಿರುಗಾಳಿಯಂತೆ ವೇಗವಾಗಿ ಬರತೊಡಗಿದುವು.

ಇದನ್ನು ನೋಡಿದ ಗ್ರಾಮದ ಹಿರಿಯ ತನ್ನ ಕೈ ಕೋಲನೆತ್ತಿ ಗ್ರಾಮದವರಿಗೆ ತೋರಿಸುತ್ತ, "ಓಡಿರಿ! ಇನ್ನಿಲ್ಲಿ ಒಂದು ಕ್ಷಣವಿದ್ದರೂ ಸಾಯುತ್ತೇವೆ. ಕಾಲಿಗೆ ಬಲವಿದ್ದಷ್ಟೂ ವೇಗದಿಂದ ಗ್ರಾಮಕ್ಕೆ ಓಡಿರಿ!" ಎಂದು ಅರಚಿ ಹೇಳಿದ.

ಗ್ರಾಮದವರೆಲ್ಲಾ ಹಿಂದಿರುಗಿ ಓಡಲು ಪ್ರಾರಂಭಿಸಿದರು. ಮೊಸಳೆಯಾಕಾರದವನು ತಟಕ್ಕನೆ ತನ್ನ ಶಿರಸ್ತ್ರಾಣವನ್ನು ತಲೆಯ ಮೇಲೆ ಎಳೆದುಕೊಂಡು ಆನೆಯನ್ನು ಹುರುಡಿಸಿ, ಉದ್ದವಾದೊಂದು ಶೂಲವನ್ನು ಎತ್ತಿ ಹಿಡಿದುಕೊಂಡನು. ವೀರನಾರಾಯಣನು ಆನೆಯ ಮೇಲೆ ತಟಪಟನೆ ಹಾರುತ್ತ ಕಾಲ್ಕುಣಿಸುತ್ತ ಚರಕಾಚಾರಿಗಿಂತಲೂ ದೊಡ್ಡ ಸ್ವರದಿಂದ ಕೂಗಲು ತೊಡಗಿದನು. —(ಮುಂದುವರಿಯುವುದು)





Sept 1976

# ಮಾಯಾ ಸರೋವರ

೮

[ ಆನೆಯ ಮೇಲೇರಿ ಧಾವಿಸಿ ಬಂದ ಮೊಸಳೆಯಾಕಾರದವನಿಗೆ ಗ್ರಾಮದ ಹಿರಿಯ ಇಬ್ಬರು ವೈದ್ಯರನ್ನು ತೋರಿಸಿ ಶಾಂತ ಪಡಿಸಿದ. ಶಸ್ತ್ರವೈದ್ಯ ವೀರನಾರಾಯಣನು ಮೊಸಳೆಯವನ ಹೊಟ್ಟೆಯಲ್ಲಿದ್ದ ಕತ್ತಿಯನ್ನು ಎಳೆಯುವಾಗ ದೂರದಲ್ಲಿದ್ದ ಚರಕಾಚಾರಿ ವೈದ್ಯ ಆರ್ತನಾದ ಮಾಡಿದ. ಕಾಡಾನೆಗಳು ಅಲ್ಲಿಗೆ ಧಾವಿಸಿಬರುತ್ತಿದ್ದುವು.]

...ಒಬ್ಬ ಮದ ಹಿಡಿದು ಧಾವಿಸಿ ಬರುವ ಕಾಡಾನೆ ... ತನ್ನ ಮೇಲೆಯೇ ಎಗರುವಂತಿರುವ ಅಪಾಯ...ನ್ನು ಮೊಸಳೆಯಾಕಾರದವನು ತಿಳಿದು, ಆನೆಗಳ ...ವನ್ನು ಧೈರ್ಯದಿಂದ ನೋಡಿದನು. ತನ್ನ ...ಬದಿಯಲ್ಲಿ ಅರಚಿಕೊಂಡಿರುವ ವೀರನಾರಾಯಣ...ಗೆ "ಬಾಯಿ ಮುಚ್ಚು" ಎಂದು ಗದರಿಸಲು, ಅವನ ...ರು ಕೂಡ ನಿಂತುಹೋಯಿತು.


ಆನೆಗಳನ್ನು ನೋಡಿದ ಮೇಲೆ ಮೊಸಳೆಯವನಿಗೆ ಧೈರ್ಯ ಬಂದಿತು. "ಅಲ್ಪ ಪುಕ್ಕಲು ಆನೆಗಳು !" ...ದು ಗೊಣಗಿದ.

ಆನೆಗಳ ಗುಂಪು ಚಿಕ್ಕದಾಗೇ ಇದ್ದಿತು. ದೊಡ್ಡ ಆನೆಗಳು ಮೂರು, ಚಿಕ್ಕ ಆನೆಗಳು ಮೂರು, ಒಟ್ಟು ಆರೇ ಆನೆಗಳು. ಈ ಕಾಡಾನೆಗಳು ಅದ್ಭುತವಾದ ತನ್ನ ವಾಹನದ ಆನೆಯನ್ನು ಎಂದಿಗೂ ನೋಡಿರಲಿಕ್ಕಿಲ್ಲ. ಈ ಆನೆಯ ಶಕ್ತಿಯನ್ನೂ, ತನ್ನ ಶೂಲದ ಕರಾಮತಿಯನ್ನೂ ಒಮ್ಮೆ ತೋರಿಸಿಬಿಟ್ಟರೆ, ಈ ಕಾಡಾನೆಗಳು ಬಿದ್ದು ಸತ್ತಾವು. ಬದುಕಿ ಉಳಿದರೆ ಕಾಡಿನೊಳಗೆ ಓಡಿ ಹೋದಾವು. ಸಂದೇಹವೇನಿಲ್ಲ.

ಮೊಸಳೆಯವನು ಹೀಗೆ ಅಂದುಕೊಂಡಿರುವಾಗಲೇ, ತನ್ನ ವಾಹನದ ತಲೆಯನ್ನು ತಟ್ಟಿ,



211 8-1



"ಹೇ ! ಜಲಗ್ರುಹಾ ! ಅಕೋ ನೋಡು ! ಅಲ್ಲಿ ಮುಂದಿನಿಂದ ಬರುವ ಆನೆಯನ್ನು ನಿನ್ನ ದಾಡೆಗಳಿಗೆ ಬಲಿಹಾಕು. ಆಮೇಲೆ ಉಳಿದುವೆಲ್ಲ ಕಾಲಿಗೆ ಬುದ್ಧಿ ಹೇಳುತ್ತವೆ." ಎಂದು ಕೂಗಿ ಹೇಳಿದನು.

ಅವನ ಅಪ್ಪಣೆಯನ್ನು ಕೇಳಿದ ಕೂಡಲೇ ಜಲಗ್ರುಹವು ಆವೇಶ ಬಂದಹಾಗೆ ಹಾರುತ್ತ ಹಾರುತ್ತ ಹೋಗಿ ಸುಮಿದು ಸುಯ್ಯುಗ್ಗಟ್ಟಿ ಮುಂದಿನಿಂದಿದ್ದ ಕಾಡಾನೆಯ ತಲೆಯ ಪಕ್ಕಗಳನ್ನು ಢೀಕೊಟ್ಟು ದಂತಗಳಿಂದ ತಿವಿಯಿತು. ಆ ಏಟಿಗೆ ಆ ಸಲಗವು ಆಕ್ರಂದನದ ಘೀಂಕಾರ ಮಾಡುತ್ತಾ ಬದಿಗೆ ಹೊರಳಿಕೊಂಡಿತು. ಅದೇ ಸಮಯದಲ್ಲಿ ಮೊಸಳೆಯಾಕಾರದವನು ಮತ್ತೊಂದು ಕಾಡಾನೆಯ ಕುಂಭಸ್ಥಳದ ಮೇಲೆ ಶೂಲದಿಂದ ತಿವಿದ. ಅದು ಕೂಡ ತಲೆ ಬಗ್ಗಿಸಿ ಘೀಂಕರಿಸಿಕೊಂಡು ಮುಂದಕ್ಕೆ ಕುಸಿಯಿತು. ಜಲಗ್ರುಹವು ಅದನ್ನು ಕಾಲುಗಳಿಂದ ತುಳಿಯುತ್ತಾ ಹೋಗಿ ಮತ್ತೊಂದು ಆನೆಯ ತಲೆಯನ್ನು ಸೊಂಡಿಲಿನಿಂದ ಬಿಗಿದು ಹಿಡಿದುಕೊಂಡು ದಾಡೆಗಳಿಂದ ಹಾಯ್ದಿತು. ಇದೆಲ್ಲ ಒಂದರ ಹಿಂದೊಂದಾಗಿ ಲೀಲಾಜಾಲದಂತಾಯಿತು. ಆನೆಗಳು ಸ್ವಲ್ಪವೂ ಇದಿರು ನೋಡದ ಆಘಾತ.

ಈ ಮೂರು ಹಿರಿಯ ಕಾಡಾನೆಗಳ ಗತಿ ಕೆಲವೇ ಕ್ಷಣಗಳಲ್ಲಿ ಹಾಗಾದುದನ್ನೂ, ಪ್ರತಿಭಟಿಸಿದ ಅದ್ಭುತ ಪ್ರಾಣಿಯನ್ನೂ ನೋಡಿ ಉಳಿದ ಚಿಕ್ಕಾನೆಗಳು ಹಿಂದಿರುಗಿ ಓಡಿಹೋಗತೊಡಗಿದವು. ಮೊಸಳೆಯಾಕಾರದವನು ಅವುಗಳನ್ನು ಕೂಡ ಸುಮ್ಮನೆ ಬಿಡದೆ ತನ್ನ ಜಲಗ್ರುಹವನ್ನು ಓಡಿಸುತ್ತಾ ಸಿಕ್ಕಸಿಕ್ಕ ಹಾಗೆ ಅವುಗಳ ಮೇಲೆ ಶೂಲದಿಂದ ತಿವಿದನು. ಅವು ನೋವಿನಿಂದ ಘೀಂಕರಿಸುತ್ತಾ ಅರಣ್ಯದ ಕಡೆಗೆ ಓಡಿದುವು. ಮೊಸಳೆಯಾಕಾರದವನು ಜಲಗ್ರುಹದ ಮೇಲೆ ಸ್ವಲ್ಪ ದೂರ ಅವುಗಳನ್ನು ಓಡಿಸಿಕೊಂಡು ಹೋಗಿ ಆಮೇಲೆ ಆಯಾಸದ ನಿಟ್ಟುಸಿರುಬಿಡುತ್ತಾ ತನ್ನ ವಾಹನವನ್ನು ನಿಲ್ಲಿಸಿದನು. ಸುತ್ತಮುತ್ತಲೂ ಒಮ್ಮೆ ನೋಡಿ, ಇನ್ನೇನೂ ಅಪಾಯವಿಲ್ಲವೆಂದು ಸಮಾಧಾನ ಪಡುತ್ತ ತನ್ನ ಜಲಗ್ರುಹದ ಭುಜಗಳನ್ನು ತಟ್ಟಿದನು. ಅದೂ ವಿಜಯಧ್ವನಿಯಂತೆ ಘೀಂಕರಿಸಿತು.

ಅಷ್ಟರಲ್ಲಿ ಮೊಸಳೆಯವನು ಥಕ್ಕನೆ ತನ್ನ ಹಿಂದೆ ಕುಳಿತಿದ್ದ ವೀರನಾರಾಯಣನ ನೆನಪು ಬಂದು ಗಾಬರಿ ಬಿದ್ದನು. ಅವನೆಲ್ಲಿ ? ಅವನ ಸದ್ದೇ ಕೇಳಿಸುವುದಿಲ್ಲವಲ್ಲ ? ತಾನು ಕಾಡಾನೆಗಳನ್ನು ಮರ್ದಿಸುವಾಗ ಅವನು ಜಾರಿಬಿದ್ದು ಆನೆಗಳ ಕಾಲಡಿಗೆ ಸಿಕ್ಕಿ ಸತ್ತು ಗಿತ್ತು ಹೋದನೇನೋ ? ತನ್ನ ಹೊಟ್ಟೆಯಲ್ಲಿನ ಕತ್ತಿಗೆ ಇನ್ನೆಂದು ವಿಮೋಚನೆ ? ಧೂತ್ತೆಂದು ದೊಡ್ಡ ಚಿಂತೆಯೇ ಕವಿಯಿತು ಅವನಿಗೆ.

ಮೊಸಳೆಯಾಕಾರದವನು ತನ್ನ ಹೊಟ್ಟೆಯನ್ನು ಒತ್ತಿಕೊಂಡು ತಲೆ ತಿರುಗಿಸಿ ಆಚೆಗೂ ಈಚೆಗೂ ನೋಡುತ್ತಾ, ದೊಡ್ಡ ಕಂಠದಿಂದ ದಿಕ್ಕುಗಳು ಪ್ರತಿಧ್ವನಿಸುವಂತೆ "ಎಲೋ ವೀರನಾರಾಯಣಾ, ಎ

212



8-2

ಹೋದ್ಯೋ ? ಜೀವದಿಂದಿರುವೆಯಾ ? ಎಲ್ಲಿ ಬಿದ್ದಿರುವಿಯೋ ?" ಎಂದು ಕೂಗಿದನು.

ಕೂಡಲೇ ಮೊಸಳೆಯಾಕಾರದವನ ಬೆನ್ನಿನ ಹಿಂದಿನಿಂದಲೇ ವೀರನಾರಾಯಣನ ಸ್ವರ ಕೇಳಿಸಿತು : "ಮೊಸಳೇ ದೊರೆಗಳೇ, ನಾನು ಇಲ್ಲೇ ಬದುಕಿಕೊಂಡಿದ್ದೇನೆ. ಇಷ್ಟು ಹೊತ್ತು ನಿಮ್ಮ ಬಾಲ ಹಿಡಿದುಕೊಂಡು ನೇತಾಡುತ್ತಾ ಇದ್ದೆ. ಕಾಡಾನೆಗಳೇನಾದವು ? ನಾವೇ ಗೆದ್ದೆವೋ ? ಮತ್ತೆ ಬರುತ್ತವೆಯೋ ? ಇನ್ನೇನೂ ಭಯವಿಲ್ಲವೋ ?"

ಕಾಡಾನೆಗಳು ಜಲಗ್ರುಹದ ಮೇಲೆ ಏರಿ ಬಂದ ಕೂಡಲೇ ವೀರನಾರಾಯಣನು ಕೆಳಕ್ಕೆ ಹಾರಿ ಓಡಿ ಹೋಗೋಣವೆಂದು ಒಮ್ಮೆ ಯೋಚಿಸಿದ. ಹಾಗೆ ಓಡಿಹೋಗಲು ಸಾಧ್ಯವಾಗದೆಂದು ಮರುಕ್ಷಣವೇ ಹೊಳೆಯಿತು. ಆನೆಗಳ ಕಾಲಡಿಗೆ ಸಿಕ್ಕಿ ಜಜ್ಜಿ ಹೋಗುವೆನೆಂದು ಹೆದರಿ, ಸಮಯಕ್ಕೆ ಕೈಗೆ ಸಿಕ್ಕಿದ್ದ ಮೊಸಳೆಯಾಕಾರದ ಬಾಲವನ್ನು ಬಿಗಿಯಾಗಿ ಹಿಡಿದು ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡನು. ಆಮೇಲೆ ನಡೆದ ರಭಸಗಳೊಂದೂ ಅವನಿಗೆ ತಿಳಿಯದು. ಕದಲಾಟದಲ್ಲಿ ತಾನು ಕೆಳಗೆ ಬಿದ್ದಂತೆಯೂ ಸತ್ತಂತೆಯೂ ತೋರಲು ಇಷ್ಟ ದೈವವನ್ನು ಸ್ಮರಿಸಿಕೊಂಡಿದ್ದನು. ಒಮ್ಮಿಂದೊಮ್ಮೆಗೇ ಎಲ್ಲಾ ಶಾಂತವಾದಂತೆ ತೋರಿದಾಗ ತಾನು ಸತ್ತು ಬೇರೊಂದು ಲೋಕಕ್ಕೆ ಬಂದೆನೆನಿಸಿತು. ಆಮೇಲೆ ಅವನಲ್ಲಿ ಬದುಕುವ ಆಶೆ ಚಿಗುರಿತು.

ವೀರ ನಾರಾಯಣನ ಮಾತುಗಳನ್ನು ಕೇಳಿದ ಮೇಲೆ ಮೊಸಳೆಯಾಕಾರದವನಿಗೆ ಸಹಾ ಸಂತೋಷವೆನಿಸಿತು. "ಓಹ್ ಇದ್ದಿಯಾ ಇಲ್ಲೇ ? ನನ್ನ ಜಲಗ್ರುಹವನ್ನು ಬಿಟ್ಟು ಹಾರಲಿಲ್ಲವೆಂದಾಯಿತು. ನೀನು ಬದುಕಿದೆ, ನಾನು ಬದುಕಿದೆ. ಇನ್ನೇನೂ ಭಯವಿಲ್ಲ ಬಿಡು. ಈಗ ನನ್ನ ಪಕ್ಕೆಯೊಳಗಿನಿಂದ ಮುರಿದ ಕತ್ತಿಯನ್ನು ಯಾವಾಗ ತೆಗೆಯುತ್ತೀ ? ಈಗಲೇ



ಅದಕ್ಕೆ ಸಿದ್ಧನಾಗಿರುವಿಯಷ್ಟೇ ?" ಎಂದು ಕೇಳಿದ.

"ಮೊಸಳೇ ದೊರೆಗಳೇ, ಅವಸರ ಪಡಬೇಡಿ. ನೀವು ಕಾಡಾನೆಗಳೊಡನೆ ಯುದ್ಧ ಮಾಡುವಾಗ ಅಸಲು ಸಂಗತಿ ಮರೆತುಬಿಟ್ಟಿರೀ ಅಂತ ಕಾಣುತ್ತದೆ. ಅವರು ತರುವ ಮೂಲಿಕೆಗಳೂ ನಿಮ್ಮ ಚಿಕಿತ್ಸೆಗೆ ಬೇಕೆಂದೆನಲ್ಲವೆ ? ನಮ್ಮ ವೈದ್ಯ ಚರಕಾಚಾರ್ಯರು, ಈ ನಡುವೆ ಅಲ್ಲೆಲ್ಲೋ ಎರಡು ಮೂರು ಭಾರಿ ಸಾಯುವ ಹಾಗೆ ಬೊಬ್ಬೆ ಹೊಡೆದರಲ್ಲಾ ? ಅವರು ಯಾವುದೋ ಮೂಲಿಕೆಗಳನ್ನು ತರಲು ಆ ಕಡೆಗೆ ಹೋದವರು, ಅವರ ವಿಷಯ ಏನಾಯಿತೆಂದು ತಿಳಿದ ಮೇಲೆಯೇ ನಿಮ್ಮ ಹೊಟ್ಟೆಯಲ್ಲಿದ್ದ ಕತ್ತಿಯನ್ನು ಎಳೆಯಬೇಕಾಗಿದೆ. ಈ ಸಂಗತಿ ಮೊದಲೇ ಹೇಳಿದ್ದೇನೆ. ಈಗ ಆ ಚರಕಾಚಾರ್ಯರು ಸತ್ತರೋ ಇದ್ದಾರೋ ತಿಳಿಯಬೇಕಾಗಿದೆ. ಸ್ವಲ್ಪ ಹುಡುಕೋಣ." ಎಂದ ವೀರನಾರಾಯಣ. "ಓಹ್ ! ಅದು ಬೇರೆಯೋ ? ನಿಜ, ನಿಜ. ಆ ಚರಕಾಚಾರಿ



ಎರಡು ಮೂರು ಸಾರಿ ರಕ್ಷಿಸಿರಿ ರಕ್ಷಿಸಿರಿ ಅಂತ ಬೊಬ್ಬೆ ಹೊಡೆದುದನ್ನು ನಾನೂ ಕೇಳಿದೆ. ಮತ್ತೆ ಅವನಿಂದ ಯಾವ ಶಬ್ದವೂ ಇಲ್ಲ. ಒಂದು ವೇಳೆ ಅವನನ್ನು ಯಾವುದೋ ಹುಲಿಯೋ ಸಿಂಹವೋ ಹಿಡಿದಿರಬೇಕು. ಅಯ್ಯಯ್ಯೋ! ಹಾಗಾದರೆ ನಿನ್ನೊಬ್ಬನಿಂದ ನನ್ನ ಚಿಕಿತ್ಸೆ ಸಾಧ್ಯವಾಗದೇ? ನನ್ನ ಹೊಟ್ಟೆಯೊಳಗಿನ ಕತ್ತಿ ಹಾಗೇ ಉಳಿದು ಹೋಗಬೇಕಾದ್ದೇನಾ? ಏನೋ ವೀರ ನಾರಾಯಣಾ, ಅದನ್ನು ಹೊರಕ್ಕೆ ಎಳೆದು, ಗಾಯವನ್ನು ಗುಣಪಡಿಸಲು ನಿನ್ನಿಂದ ಸಾಧ್ಯವಾಗಲಾರದೇ! ನೀವಿಬ್ಬರೂ ಅರ್ಧರ್ಧ ವೈದ್ಯರೇನು? ಆ ಚರಕಾಚಾರಿ ಇಲ್ಲದಿದ್ದರೆ ನನ್ನ ಗತಿ ಇಷ್ಟೇನಾ?" ಎಂದು ಕೇಳಿದ.

ಅವನ ಮಾತು ಕೇಳಿ ವೀರ ನಾರಾಯಣನು ಗಹಗಹಿಸಿ ನಕ್ಕನು. ಆಮೇಲೆ ನಗುವನ್ನು ಹತ್ತೊತ್ತಿಕೊಂಡು, "ಶಸ್ತ್ರಚಿಕಿತ್ಸೆ ಕಲಿತಿರುವ ನನಗೆ ಗಾಯವನ್ನು ಗುಣಪಡಿಸುವ ಔಷಧ ತಿಳಿಯದೆಂದುಕೊಂಡಿರೇನು? ನಮ್ಮಿಬ್ಬರ ಬದುಕುವ ದಾರಿಗೆ ಸ್ಪರ್ಧೆಯಿಲ್ಲದೆ ನಡೆದು ಬರಬೇಕೆಂದುಕೊಂಡೇ ಚರಕಾಚಾರ್ಯರೂ ನಾನೂ ಒಬ್ಬರಿಗೆ ಗೊತ್ತಿದ್ದ ಚಿಕಿತ್ಸೆ ಇನ್ನೊಬ್ಬರಿಗೆ ಗೊತ್ತಿಲ್ಲವೆಂಬಂತೆ ಈ ಗ್ರಾಮದಲ್ಲಿ ನಟಿಸಿಕೊಂಡಿದ್ದೇವೆ. ಹೀಗೆ ಮಾಡದಿದ್ದರೆ ಗ್ರಾಮಸ್ಥರು ನಮ್ಮಿಬ್ಬರಲ್ಲಿ ಯಾರಾದರೊಬ್ಬನಿಗೇ ಬದುಕುವ ಸಂದರ್ಭವನ್ನು ಕೊಡುತ್ತ ಇನ್ನೊಬ್ಬನನ್ನು ಓಡಿಸಿಬಿಡುತ್ತಾರೆ. ಅಂದರೆ ಓಡಿಹೋಗುವ ಹಾಗೆ ಮಾಡುತ್ತಾರೆ. ನಾವಿಬ್ಬರೂ ಸ್ನೇಹದಿಂದ ಹೀಗೊಂದು ಒಡಂಬಡಿಕೆ ಮಾಡಿಕೊಂಡು ಪರಸ್ಪರ ಸಹಾಯಕರಾಗಿದ್ದೇವೆ." ಎಂದನು.

ಅವನ ಮಾತು ಕೇಳಿ ಮೊಸಳೆಯಾಕಾರದವನು ದೊಡ್ಡದಾಗಿ ನಗಲು ಬಾಯಿ ತೆರೆದು, ಪಕ್ಕೆಯಲ್ಲಿ ಚುಚ್ಚಿಕೊಂಡ ಕತ್ತಿ ಛುಳ್ಳೆನಿಸಲು, ಹವ್ವೋ ಎಂದು ನರಳಿ, "ಎಲೋ, ವೈದ್ಯ ಭಡವಾ! ಒಳ್ಳೇ ಪಕ್ಕಾ ಇದ್ದೀಬಿಡು. ಹಾಗಾದರೆ ಚರಕಾಚಾರಿಯ ಆಸೆ ಬೇಡ. ಅವನಿಗಾಗಿ ಆಮೇಲೆ ಅಳು. ಈಗ ನನ್ನ ಬಾಲಬಿಟ್ಟು ಮುಂದಕ್ಕೆ ಬಾ" ಎಂದನು ಕೋಪದಿಂದ.

ವೀರನಾರಾಯಣನು ಹೆದರುತ್ತಲೇ ಮೊಸಳೆಯವನ ಮುಂದೆ ಬಂದನು. ಏಕೆಂದರೆ ಅವನಿಗೆ ಒಂದು ಹೊಸ ಅನುಮಾನ ಬರುತ್ತಿದ್ದಿತು. ಅಷ್ಟೊಂದು ಮದ್ದಾನೆಗಳನ್ನು ಓಡಿಸಿದ ಈ ಮೊಸಳೆಯವನ ಆನೆ ಯಾವುದಾದರೂ ಪಿಶಾಚಿ ಜಾತಿಯದೇನೋ ಎಂದು ತೋರತೊಡಗಿತ್ತು! ಅಂತಹ ಆನೆಯನ್ನು ವಶಪಡಿಸಿಕೊಂಡವನು ಕೂಡ ಸಾಮಾನ್ಯದವನಾಗಿರಲಾರ. ಹೌದು. ಪಕ್ಕೆಯಲ್ಲಿ ಅಷ್ಟು ದೊಡ್ಡ ಕತ್ತಿಯ ತುಂಡನ್ನು ಚುಚ್ಚಿಕೊಂಡು ಆನೆಗಳೊಂದಿಗೆ ಜಗಳಾಡಿದ್ದಾನೆ. ಇಷ್ಟೊಂದು ಸಹನಶಕ್ತಿ ಸಾಧಾರಣ ಮಾನವನಿಗೆ ಸಾಧ್ಯವೇ? ಇವನಾರೋ! "ಎಲೋ ವೀರ ನಾರಾಯಣಾ, ನಿನ್ನ ವೀರ


ತನಕ್ಕೆ ಬೆಂಕಿ ಹಚ್ಚುವ ಹಾಗೆ ಪಿಳಿಪಿಳಿ ಪುಕ್ಕಲು ನೋಟ ನೋಡದೆ ವೀರನ ಹಾಗೆ ನೋಡು. ಇನ್ನಾವ ಭಯವೂ ಇಲ್ಲ. ಈ ಕತ್ತಿಯ ತುಂಡನ್ನು ಆದಷ್ಟು ಬೇಗ ಹೊರಗೆಳೆದು, ಚಿಕಿತ್ಸೆ ಮಾಡು" ಎಂದ ಮೊಸಳೆಯಾಕಾರದವನು.

"ಮೊಸಳೆ ದೊರೆಗಳೇ, ಮಾಡುತ್ತೇನೆ. ಆದರ ಚಿಕಿತ್ಸೆಗೆ ಅಗತ್ಯವಾದ ಮೂಲಿಕೆ ಸೊಪ್ಪುಗಳಿಗಾಗಿಯೇ ಚರಕಾಚಾರ್ಯರು ಆ ಮರಗಳ ಗುಂಪಿನೊಳಗೆ ಹೋದರು. ನಾನಾದರೂ ಮೊದಲು ಮೂಲಿಕೆಗಳನ್ನು ತಯಾರು ಮಾಡಿಟ್ಟುಕೊಂಡೇ ಕತ್ತಿಯ ತುಂಡನ್ನು ಹೊರಗೆಳೆಯಬೇಕಷ್ಟೇ. ಇಲ್ಲದಿದ್ದರೆ ನಿಮ್ಮ ಜೀವಕ್ಕೆ ಅಪಾಯವಾದೀತು! ಅವರ ಶಬ್ದ ಕೇಳಿ ಬಂದ ಕಡೆಯಲ್ಲೇ ಬೇಕಾದ ಮೂಲಿಕೆಯೂ ಇದ್ದೀತು. ಅತ್ತ ಹೋಗುವ." ಎಂದ ವೀರನಾರಾಯಣ.

"ನನಗೆ ಪ್ರಾಣ ಹೋಗುವ ಹಾಗೆ ಆದರೆ ನೀನೂ ನನ್ನೊಂದಿಗೆ ಆ ಲೋಕಕ್ಕೆ ಬರಬೇಕಾದ್ದೇ, ತಿಳಿಯಿತೇ? ಸರಿ, ನಡೆ, ಆ ಚರಕಾಚಾರಿ ಎಲ್ಲಿ ಸತ್ತನೋ ನೋಡೋಣ. ಹುಲಿಗಿಲಿ ಅವನನ್ನು ಹೊಟ್ಟೆಯೊಳಗೆ ಹಾಕಿಕೊಂಡಿದ್ದರೆ ಎಲುವುಗಳಾದರೂ ಕಣ್ಣಿಗೆ ಬೀಳಬಹುದು. ಬೇಗನೇ ಮೂಲಿಕೆ ಹುಡುಕಿತೆಗೆ." ಎಂದ ಮೊಸಳೆಯವನು.

ಅವನ ಸೈಗೆಯಂತೆ ಅವನ ಜಲಗ್ರಹವು ಗುಂಪಾಗಿ ಕಾಣುವ ಮರಗಳ ಕಡೆಗೆ ಹೊರಟಿತು. ಚರಕಾಚಾರಿ "ರಕ್ಷಿಸಿರಿ" ಎಂದು ಕೂಗಿದುದು ಆ ಮರಗಳ ಗುಂಪಿನ ಕಡೆಯಿಂದಲೇ.

ಈಗ ಚರಕಾಚಾರಿ ಉಸಿರಾಡಿಸಿಕೊಂಡಿದ್ದನೇ ಹೊರತು ಶಬ್ದ ಹೊರಡುವ ಸ್ಥಿತಿಯಲ್ಲಿರಲಿಲ್ಲ. ಇದೀಗ ಸ್ವಲ್ಪ ಹೊತ್ತಿನ ಮೊದಲು ಅವನು ಮೊಸಳೆಯಾಕಾರದವನ ಗಾಯದ ಚಿಕಿತ್ಸೆಗಾಗಿ, ಮೂಲಿಕೆಯ ಗಿಡಗಳನ್ನು ಹುಡುಕುತ್ತ, ಒಂದೆಡೆಯಲ್ಲಿದ್ದ ಯಾವುದೋ ಗಿಡವನ್ನು ನೋಡಿ, "ಎಲಯೆಲಾ! ಊರ ಮುಖಂಡನ ಕಣ್ಣಿಗೆ ಬಂದಿರುವ ರೋಗಕ್ಕೆ ಇದೊಳ್ಳೇ ಮೂಲಿಕೆ" ಎಂದುಕೊಳ್ಳುತ್ತಾ, ಅದನ್ನು





ಕೇಳಲಿಕ್ಕಾಗಿ ಬಾಗಿದನು. ಆಗ ಏನಾಯಿತೆಂದರೆ, ಚರಕಾಚಾರಿ ಬಾಗಿದ ಪ್ರದೇಶದಲ್ಲಿ ಮೇಲ್ಭಾಗಕ್ಕೆ ಚಾಚಿದ್ದ ಒಂದು ದೊಡ್ಡ ಮರದ ಕೊಂಬೆಗೆ ಸುತ್ತಿಕೊಂಡು ದೊಡ್ಡದಾದ ಹೆಬ್ಬಾವು ಹಸಿವೆಯಿಂದ ಸಂಕಟಪಡುತ್ತಿದ್ದಿತು. ಎರಡು ದಿನಗಳಿಂದ ಅದಕ್ಕೇನೂ ದೊರಕಿರಲಿಲ್ಲ. ಹಸಿವೆಯ ಮಂಪರಿನಲ್ಲಿದ್ದ ಅದು ದೊಡ್ಡ ಹುಲಿಯೋ ಆನೆಯೋ ಕಣ್ಣಿಗೆ ಬಿದ್ದರೆ ಸಾಕು, ಹಿಡಿದು ನುಂಗಲು ಸಿದ್ಧವಾಗಿತ್ತು. ಅಂತಹ ಹೆಬ್ಬಾವಿನ ಕಣ್ಣಿಗೆ ಚರಕಚಾರಿಯ ರೂಪ ಕಂಡದ್ದೇ ತಡ, ಸಿಕ್ಕಿದ್ದೇ ಲಾಭವೆಂಬಂತೆ ಧೊಪ್ಪನೆ ಅವನ ಮೇಲೆ ಜಾರಿಬಿದ್ದಿತು.

ಯಾವುದೋ ಮರದ ಕೊಂಬೆ ತನ್ನ ಮೇಲೆ ಬಿದ್ದಿತೆಂದು ಚರಕಾಚಾರಿ ದೂರ ಓಡಲು ನೋಡಿದ. ಆದರೆ ಅವನ ಕಾಲುಗಳೂ ಕೈಗಳೂ ಅಲುಗಾಡಲಿಲ್ಲ. ಅವನು ಹೆದರಿ "ರಕ್ಷಿಸಿರಿ ರಕ್ಷಿಸಿರಿ" ಎಂದು ಕೂಗುವಾಗ, ಹೆಬ್ಬಾವು ಅವನ ಶರೀರವನ್ನು ಸುತ್ತತೊಡಗಿತ್ತು. ಅಂತೆಯೇ ಅವನ ಗಂಟಲಿನ ಸ್ವರವೂ ಬಿಟ್ಟುಬಿಟ್ಟು ಹೊರಟಿತ್ತು.

ಅವನ ಕೂಗನ್ನು ಜೋಳದ ಹೊಲದ ಹತ್ತಿರವಿದ್ದ ಮೊಸಳೆಯಾಕಾರದವರೂ, ಗ್ರಾಮಸ್ಥರೂ ಕೇಳಿದರು. ಅದೇ ಸಮಯದಲ್ಲಿ ಆ ಕಡೆಗೆ ಬರುತ್ತಿದ್ದ ಜಯಶೀಲನೂ ಸಿದ್ಧಸಾಧಕನೂ ಸಹ ಚರಕಾಚಾರಿಯ ಆರ್ತನಾದವನ್ನು ಕೇಳಿದರು.

ಅವರಿಬ್ಬರೂ ಪೊದರಿನಲ್ಲಿ ದೊರೆತ ತಾಳಪತ್ರಗಳ ಗ್ರಂಥವನ್ನು ತೆಗೆದುಕೊಂಡು, ಅದನ್ನು ಅಲ್ಲಿ ಹಾಕಿದವನನ್ನು ಹುಡುಕುತ್ತ ಹಾಗೆ ಬಂದಿದ್ದರೆಂಬುದನ್ನು ಈ ಮೊದಲೇ ನೋಡಿದ್ದೇವೆ.

"ರಕ್ಷಿಸಿರಿ" ಎಂಬ ಶಬ್ದ ಎರಡು ಸಾರಿ ಮಾತ್ರ ಕೇಳಿಸಿದುದರಿಂದ, ಜಯಶೀಲ ಸಿದ್ಧಸಾಧಕರು ಚರಕಾಚಾರಿಯನ್ನು ತಟ್ಟನೆ ಕಂಡು ಹಿಡಿಯಲಾರದೆ ಹೋದರು. ಆ ಶಬ್ದ ಕೇಳಿಬಂದ ಕಡೆಗೆ ಅವರಿಬ್ಬರೂ ನಡೆಯುತ್ತಿದ್ದಾಗಲೇ ಕಾಡಾನೆಗಳ ಘೀಂಕಾರಗಳೂ, ಅವುಗಳೊಂದಿಗೆ ವಿಚಿತ್ರಾಕಾರದ ಆನೆಯ ಮೇಲಿನ ಮೊಸಳೆಯಾಕಾರದವನೊಬ್ಬ ಶೂಲದೊಂದಿಗೆ ಹೋರಾಡುವುದನ್ನೂ ಅವರು ನೋಡಿದರು. ಆ ದೃಶ್ಯ ಅವರಲ್ಲಿ ವಿಶೇಷವಾದ ಆಸಕ್ತಿಯನ್ನು ಹುಟ್ಟಿಸಿತು.

ಸಿದ್ಧಸಾಧಕನು ಆವೇಶದಿಂದ ಹಾರುತ್ತ ತನ್ನ ಕೈಯಲ್ಲಿದ್ದ ದಂಡವನ್ನೆತ್ತಿ ಕುಣಿಸುತ್ತ, "ಸಿಕ್ಕಿದ! ಸಿಕ್ಕಿದ! ಜಯಶೀಲಾ! ನಮ್ಮ ಕನಕಾಕ್ಷರಾಜರ ಮಕ್ಕಳನ್ನು ಎತ್ತಿಕೊಂಡು ಹೋದ ದುಷ್ಟನು ಇವನೇ. ನಾನು ಮೊದಲೇ ಹೇಳಿದಂತೆ ಇವನು ಮನುಷ್ಯ ಜಾತಿಯವನಲ್ಲ. ಯಕ್ಷನೋ ಗಂಧರ್ವನೋ ಕಿನ್ನರನೋ ಆಗಿರಬೇಕು." ಎಂದನು.

"ಹೌದು, ಇವನು ಯಾವ ಜಾತಿಯವನೋ ಮಾನವನಂತೂ ಅಲ್ಲ. ಅವನು ಹತ್ತಿದ್ದ ಆನೆಯನ್ನು ನಾವು ಸ್ವಪ್ನದಲ್ಲೂ ಕೂಡ ನೋಡಿರಲಿಕ್ಕಿಲ್ಲ!"

ಂದ ಜಯಶೀಲ. ಅಷ್ಟರಲ್ಲಿ ಮತ್ತೊಮ್ಮೆ ಚರಕಾಚಾರಿಯ ಕಂಠದಿಂದ ವಿಕಾರವಾದ ಆರ್ತನಾದವು ಕೇಳಿಸಿತು. ಜಯಶೀಲನು ಕೂಡಲೇ ಕತ್ತಿ ಹಿರಿದು, "ಹೇದರಬೇಡ, ಬಂದೆ ಬಂದೆ!" ಎನ್ನುತ್ತ ಆ ಕಡೆಗೆ ವೇಗವಾಗಿ ಹೊರಟನು.

ಸಿದ್ಧಸಾಧಕನು ಎಲ್ಲಿಲ್ಲದ ಆಶ್ಚರ್ಯದಿಂದ, "ಇದೇನು ಕೆಲಸ ಜಯಶೀಲಾ? ನಮ್ಮ ಯುವರಾಜ ಯುವರಾಣಿಯರನ್ನು ಅಪಹರಿಸಿದವನು ಅತ್ತ ಕಣ್ಣೆದುರು ಕಾಣುವಾಗ ಅವನನ್ನು ಬಿಟ್ಟು ಯಾವನೋ ಕಾಡುಮನುಷ್ಯ ಯಾವ ಕ್ರೂರಮೃಗದ ಬಾಯಿಗೋ ಬಿದ್ದು ಕೂಗಿದರೆ ಅಲ್ಲಿಗೆ ಓಡುವೆಯಲ್ಲಾ? ನಮಗೆ ಅದು ಮುಖ್ಯವೋ ಇದು ಮುಖ್ಯವೋ" ಎಂದನು.

"ಈಗ ಇದೇ ಮುಖ್ಯ. ಇವನಿಗೆ ನಾವು ಈ ಕ್ಷಣದಲ್ಲಿ ಸಹಾಯಮಾಡದಿದ್ದರೆ ಅವನ ಪ್ರಾಣವೇ ಹೋಗುತ್ತದೆ. ಯುವರಾಜ ಯುವರಾಣಿಯರು ಈ ನಿಮಿಷಗಳಲ್ಲಿ ಅಷ್ಟೊಂದು ಪ್ರಾಣಾಪಾಯ ಸ್ಥಿತಿಯಲ್ಲಿರಲಿಕ್ಕಿಲ್ಲ," ಎನ್ನುತ್ತ ಜಯಶೀಲನು ಓಡತೊಡಗಿದನು. ಉಪಾಯವಿಲ್ಲದೆ ಅವನ ಹಿಂದೆ ಸಿದ್ಧಸಾಧಕನೂ ಓಡಿದನು.

ಅವರಿಬ್ಬರೂ ಚರಕಾಚಾರಿಯ ಬಳಿಯನ್ನು ತಲಪಿದಾಗ, ಹೆಬ್ಬಾವು ಅವನ ಶರೀರರನ್ನು ಬಲವಾಗಿ ಸುತ್ತಿಕೊಂಡು, ಅವನ ತಲೆಯನ್ನು ಬಾಯಿಯೊಳಗೆ ಹಿಡಿದುಕೊಳ್ಳಲು ಪ್ರಯತ್ನಿಸುತ್ತಿತ್ತು. ಚರಕಾಚಾರಿಯುರದ ಕಾಂಡಕ್ಕೆ ನಿಟಾಗಿ ಒರಗಿಹೋಗಿದ್ದ. ಅವನಿನ್ನೂ ಚೈತನ್ಯದಿಂದಿರುವನೆಂಬುದಕ್ಕೆ ಸೂಚನೆಯಾಗಿ ಅವನ ಕೈಬೆರಳುಗಳು ಮಾತ್ರ ಅಲುಗಾಡಿಕೊಂಡಿದ್ದುವು.

ಜಯಶೀಲನು ಹಾರುತ್ತಾ ಹೋಗಿ ತನ್ನ ಕತ್ತಿಯಿಂದ ಹೆಬ್ಬಾವಿನ ತಲೆಯನ್ನು ದೂರಕ್ಕೆ ದೂಡಲು ನೋಡಿದನು. ಕತ್ತಿಯಿಂದ ಹೊಡೆದರೆ ಹಾವಿನ



ಶರೀರದೊಳಗೆ ಹೊಕ್ಕ ಕತ್ತಿ ಮನುಷ್ಯನನ್ನೂ ಕೊಲ್ಲಬಹುದೆಂಬ ಭಯ ಅವನಿಗೆ. ಆದರೆ ಬಲಿಷ್ಠವಾದ ಆ ಹೆಬ್ಬಾವು ಜಯಶೀಲನ ಕತ್ತಿಯನ್ನೇ ಬದಿಗೆ ದೂಡಿಬಿಟ್ಟಿತು.

"ಜಯಶೀಲಾ, ಇವನು ಕಾಡು ಮನುಷ್ಯನಲ್ಲ. ಓದುಬರೆಹ ಕಲಿತ ಪಂಡಿತನ ಹಾಗಿದ್ದಾನೆ. ಬೇಗನೇ ಹಾವನ್ನು ಕೊಲ್ಲು" ಎಂದ ಸಿದ್ಧಸಾಧಕ. ಅವನ ಕಣ್ಣುಗಳು ಚರಕಾಚಾರಿಯನ್ನು ಸೂಕ್ಷ್ಮವಾಗಿ ಪರೀಕ್ಷೆ ಮಾಡುತ್ತಿದ್ದುವು.

ಜಯಶೀಲನು ಹೆಬ್ಬಾವಿನ ತಲೆಯನ್ನು ಎಡಗೈಯಿಂದ ಹಿಡಿದು ಹಿಂದಕ್ಕೆಳೆಯುತ್ತ, ಕತ್ತಿಯಿಂದ ತಲೆಯ ಕೆಳಗಿನ ಭಾಗಕ್ಕೆ ಬಲವಾಗಿ ಹೊಡೆದನು. ಆ ಪೆಟ್ಟಿಗೆ ಅರ್ಧತಲೆ ಕಡಿಯಲ್ಪಟ್ಟು ಜೋತಾಡತೊಡಗಿದ ಹೆಬ್ಬಾವು ಬಲಗುಂದಿ ತುಡಿಸುತ್ತ ಚರಕಾಚಾರಿಯ ಸುತ್ತುಗಳನ್ನು ಸಡಿಲಿಸಿ ಜಾರಿತು. ಧಡೀರೆಂದು ಹೆಬ್ಬಾವು ನೆಲದ ಮೇಲೆ ಅಪ್ಪಳಿಸಿಬೀಳು

ವಾಗ ಅದರೊಂದಿಗೇ ಬೀಳಲಿದ್ದ ಚರಕಾಚಾರಿಯನ್ನು ಜಯಶೀಲನು ಹಿಡಿದುಕೊಂಡು "ಸಾಧಕಾ, ಬೇಗ ಹೋಗಿ ನೀರು ತೆಗೆದುಕೊಂಡು ಬಾ. ಈ ಮನುಷ್ಯ ಇನ್ನೂ ಬದುಕಿದ್ದಾನೆ." ಎಂದನು.

ಸಿದ್ಧಸಾಧಕನು ಓಡುತ್ತಾ ಹೋಗಿ ಸಮೀಪದಲ್ಲಿದ್ದ ಕೊಳದಿಂದ ಕಮಂಡಲುವಿನಲ್ಲಿ ನೀರು ತುಂಬಿಕೊಂಡು ಬಂದು, ಚರಕಾಚಾರಿಯ ಮುಖದ ಮೇಲೆ ಚಿಮುಕಿಸಿದನು. ಜಯಶೀಲನೂ ನೀರು ಬಗ್ಗಿಸಿ ಚರಕಾಚಾರಿಯ ಬಾಯಿಗೂ ಕಣ್ಣಿಗೂ ಹಾಕಿದನು. ಸ್ವಲ್ಪ ಹೊತ್ತಿಗೆ ಚರಕಾಚಾರಿ ಕಣ್ಣು ತೆರೆಯುತ್ತ, "ನಾನು ಹೊಟ್ಟೆಯೊಳಗೆ ಬದುಕಿದ್ದೇನಾ? ಇದು ಹೆಬ್ಬಾವಿನ ಹೊಟ್ಟೆಯೋ? ಗಾಳಿಯಿದೆಯಲ್ಲಾ!" ಎಂದು ಮೂಲುಗಿದ ಹಾಗೆ ಹೇಳಿದ.


"ನೀನು ಬದುಕಿ ಭೂಮಿಯಲ್ಲೇ ಇರುವಿ. ಮೊದಲು ಈ ಮಂತ್ರದ ನೀರನ್ನೂ ಸ್ವಲ್ಪ ಕುಡಿ. ನಿನಗೆ ಹಿಡಿದ ಭಯವೂ, ನಿರ್ಬಲತೆಯೂ ಹೋಗುತ್ತದೆ" ಎಂದು ಸಿದ್ಧಸಾಧಕನು ಚರಕಾಚಾರಿಗೆ ಇನ್ನಿಷ್ಟು ನೀರು ಕುಡಿಸಿದನು.

ಅದುವರೆಗೆ ಅರ್ಧಂಬರ್ಧ ಎಚ್ಚರದಲ್ಲಿದ್ದ ಚರಕಾಚಾರಿ, ನಿಚ್ಚಳವಾಗಿ ಕಣ್ಣು ತೆರೆದು ಸುತ್ತಲೂ ನೋಡುತ್ತ, "ನೀವು ಯಾರು? ಆ ಮಕರಪ್ರಭು ಎತ್ತ ಹೋದ? ನಮ್ಮ ವೀರನಾರಾಯಣನೆಲ್ಲಿದ್ದಾನೆ? ನಾನೆಲ್ಲಿದ್ದೇನೆ?" ಎಂದನು. ಅವನ ಬಾಯಿಂದ ಹೊರಟ ಪ್ರಶ್ನೆಗಳನ್ನು ಕೇಳಿದ ಕೂಡಲೇ ಚರಕಾಚಾರಿ ಯಾರನ್ನು ಕುರಿತು ಮಾತಾಡುವನೆಂದು ಜಯಶೀಲನಿಗೆ ತಿಳಿದು ಹೋಯಿತು. ಅವನು ಸಿದ್ಧಸಾಧಕನೊಂದಿಗೆ, "ಸಾಧಕಾ, ಇವನ ಮಾತುಗಳನ್ನು ಕೇಳಿದೆಯಾ? ಆ ವಿಚಿತ್ರವಾದ ಆನೆಯ ಮೇಲೆ ಕುಳಿತಿದ್ದ ಆ ಮೊಸಳೆಯಾಕಾರದವನೊಂದಿಗೆ ಇವನಿಗೇನೊ ಸಂಬಂಧವಿದೆ." ಎಂದು ಹೇಳಿ ಚರಕಾಚಾರಿಯೊಂದಿಗೆ, "ನಿನ್ನ ಹೇಸರೇನಪ್ಪಾ? ಆ ಮೊಸಳೆಯವನಿಗೆ ನೀನು ಬಂಟನೋ? ಸ್ನೇಹಿತನೋ?" ಎಂದು ಕೇಳಿದನು.

ಚರಕಾಚಾರಿ ಏನೋ ಉತ್ತರ ಕೊಡುವುದರೊಳಗೆ ಮೊಸಳೆಯಾಕಾರದವನು ಮರದ ಮರೆಯಿಂದ ಮುಂದಕ್ಕೆ ಬಂದು, "ಈ ಚರಕಾಚಾರ್ಯರು ನನ್ನ ಸ್ವಂತ ವೈದ್ಯರು. ನೀವು ಯಾರು? ಎಲ್ಲಿಯವರು? ನಿಜ ಸಂಗತಿ ಹೇಳದೆ ಹೋದರೆ ನನ್ನ ಜಲಗ್ರಹದಿಂದ ನಿಮ್ಮನ್ನು ನಜ್ಜುಗುಜ್ಜಾಗಿ ತುಳಿಸಿಬಿಡುತ್ತೇನೆ ಎಚ್ಚರ!" ಎಂದನು.

ಜಯಶೀಲನೂ ಸಿದ್ಧಸಾಧಕನೂ ಎದ್ದು ಬಲವಾಗಿ ನಿಂತರು. ಜಯಶೀಲನು ಕತ್ತಿಯ ಹಿಡಿಯ ಮೇಲೆ ಕೈಹಾಕಿದನು. ಸಿದ್ಧಸಾಧಕನು ತನ್ನ ದಂಡವನ್ನು ಎತ್ತಿ ಹಿಡಿದನು. (ಮುಂದುವರಿಯುವುದು)





October 1976


# ಮಾಯಾಸರೋವರ

೯

[ಕಾಡಾನೆಗಳನ್ನು ಓಡಿಸಿದ ಮೇಲೆ ಮೊಸಳೆಯಾಕಾರದವನು ಚರಕಾಚಾರಿಯನ್ನು ಹುಡುಕತೊಡಗಿದ. ಹೆಬ್ಬಾವಿನ ಬಾಯಿಗೆ ಸಿಕ್ಕಿ ಪ್ರಾಣಾಪಾಯದ ಸ್ಥಿತಿಯಲ್ಲಿದ್ದ ಚರಕಾರಿಯನ್ನು ಜಯಶೀಲನು ಕಾಪಾಡಿ, ಅವನೊಂದಿಗೆ ಮಾತಾಡಲು ತೊಡಗಲು, ಮೊಸಳೆಯಾಕಾರದವನು ಅಲ್ಲಿಗೆ ಬಂದನು. ಅವನನ್ನು ನೋಡಿದ ಕೂಡಲೇ ಜಯಶೀಲನು ತನ್ನ ಕತ್ತಿಗೆ ಕೈಹಾಕಿದನು. ಸಿದ್ಧಸಾಧಕನು ದಂಡವನ್ನು ಎತ್ತಿದನು.]

ಜಯಶೀಲನೂ, ಸಿದ್ಧಸಾಧಕನೂ ನಿಂತ ಭಂಗಿಯನ್ನು ನೋಡಿ ಮೊಸಳೆಯಾಕಾರದವನು ಬೆರಗಾದನು. ತನ್ನನ್ನೂ, ತನ್ನ ವಾಹನವನ್ನೂ ನೋಡಿ ಸ್ವಲ್ಪವೂ ಅಳುಕದೆ ಬೆದರದೆ ಆಶ್ಚರ್ಯ ಪಡದೆ ತಬ್ಬಿಬ್ಬಾಗದೆ, ತನ್ನನ್ನು ಇದಿರಿಸಲು ಸಿದ್ಧರಾಗಿರುವುದನ್ನು ನೋಡಿ ಅವನಿಗೆ ಜುಮ್ಮೆಂದಿತು. ತನ್ನ ರೂಪವನ್ನೂ, ಆನೆಯ ಭಯಂಕರಾಕಾರವನ್ನೂ, ಶೂಲವನ್ನೂ ನೋಡಿದವರು ಜೀವ ಉಳಿದರೆ ಸಾಕೆಂದು ಓಡಬೇಕಿತ್ತಲ್ಲ! ಅವನ ನಂಬುಗೆಗೆ ತೀರ ವಿರುದ್ಧವಿದು. ಆದರೂ ಧೈರ್ಯಶಾಲಿಯಾದ ಅವನು ಶೂಲವನ್ನೆತ್ತಿ ಹೆದರಿಸುವ ದನಿಯಿಂದ, "ಯಾರು ನೀವು? ಈ ಭಯಂಕರವಾದ ಕಾಡಿನಲ್ಲಿ ನಿಮಗೇನು ಕೆಲಸ?" ಎಂದು ಅವರಿಬ್ಬರನ್ನೂ ಗದರಿಸಿ ಕೇಳಿದ. ಆ ಕಾಡಿಗೆ ತಾನೇ ಅಧಿಪತಿಯಾಗಿರುವಂತೆ, ಅವರಿಬ್ಬರೂ ಅತಿಕ್ರಮ ಪ್ರವೇಶ ಮಾಡಿದ ಅಪರಾಧಿಗಳಂತೆ ಅವನ ಪ್ರಶ್ನೆಯ ರೀತಿಯಲ್ಲಿತ್ತು.

ಜಯಶೀಲನು ಕತ್ತಿಯನ್ನು ಒರೆಯಿಂದ ಸರ್ರನೆ ಎಳೆದೆತ್ತಿ ಕುಣಿಸುತ್ತ, "ಭಾರೀ ದೊಡ್ಡ ವಿಚಾರಣೆ ಮಾಡಿದೆಬಿಡು! ಮೊಸಳೆಯ ಚರ್ಮದೊಳಗೆ ಹುದುಗಿರುವ ನಿನ್ನನ್ನು ನೋಡಿದರೆ ನಗುಬರುತ್ತದೆ.



ಎಲೋ! ನೀನು ಕೇಳಿದ ಪ್ರಶ್ನೆಯನ್ನು ಕೇಳಬೇಕಾದವನು ನಾನು. ಸರಿ, ಈಗ ಹೇಳು. ಯಾರು ನೀನು? ಈ ಅರಣ್ಯದೊಳಗೆ ಏಕೆ ಬಂದೆ? ನೀನು ಏರಿರುವ ಆನೆಗೆ ಕೂಡಾ ಯಾವುದೋ ವಿಚಿತ್ರವಾದ ಚರ್ಮವನ್ನು ಹೊದೆಸಿರುವಿಯಲ್ಲಾ! ಯಾರನ್ನು ಮೋಸಪಡಿಸಲು? ಈ ಕಪಟ ನಾಟಕವನ್ನೆಲ್ಲಾ ಏತಕ್ಕಾಗಿ ಆಡುವಿ? ಒಳ್ಳೆಯ ಮಾತಿನಲ್ಲಿ ಹೇಳಿಬಿಡು" ಎಂದನು.

"ಏನೇನು? ನನ್ನನ್ನು ಪ್ರಶ್ನಿಸುವಷ್ಟು ಧೈರ್ಯವೇ? ಛೀ! ಅಲ್ಪಮಾನವನ ಮುಂದೆ ನನಗೆ ಇಷ್ಟೊಂದು ಧಿಕ್ಕಾರವೇ? ನಾನು ಸಹಿಸಿಕೊಂಡಿರಲಾರೆ! ಎಚ್ಚರದಲ್ಲಿ ಮಾತಾಡು!" ಎಂದು ತನ್ನ ಶೂಲವನ್ನು ಪ್ರಯೋಗಿಸಲು ನೋಡಿದನು. ಆಗ ಅವನ ಬಾಲವನ್ನು ಹಿಡಿದು ನಡುಗಿಕೊಂಡಿದ್ದ ವೀರನಾರಾಯಣನು ಮೊಂಡು ಧೈರ್ಯ ತಂದುಕೊಂಡು ಮೊಸಳೆಯವನ ಶೂಲದ ಕೈಯನ್ನು ತನ್ನೆರಡು ಕೈಗಳಿಂದಲೂ ಬಿಗಿಯಾಗಿ ಹಿಡಿದು, "ಮೊಸಳೆ ದೊರೆಗಳೇ, ಸ್ವಲ್ಪ ನಿಧಾನಿಸಿರಿ. ನೀವೆಂತಹ ಮಹಾವೀರರಾದರೂ ನಿಮ್ಮ ಕಿಬ್ಬೊಟ್ಟೆಯೊಳಗೆ ಚುಚ್ಚಿಕೊಂಡಿರುವ ತುಂಡು ಕತ್ತಿಯನ್ನು ಮರೆಯಬೇಡಿರಿ. ಈಗ ಆ ಇಬ್ಬರೊಂದಿಗೆ ಸಮಾಧಾನ ಮಾಡಿಕೊಳ್ಳುವುದೇ ಒಳ್ಳೆಯದು. ಚರಕಾಚಾರ್ಯರು ವೈದ್ಯಕೀಯಕ್ಕೆ ಬೇಕಾದೀತೆಂದು ಹೆಬ್ಬಾವನ್ನು ಹಿಡಿಯಲು ಹೋಗಿ ಅದರ ಹಿಡಿಯಲ್ಲಿ ಸಿಕ್ಕಿಕೊಂಡ ಹಾಗಿದೆ. ನೀವೂ ದುಡುಕಬೇಡಿ" ಎಂದನು.

ಅದುವರೆಗೂ ಮೊಸಳೆಯಾಕಾರದವನು ಚರಕಾಚಾರಿಯ ಸ್ಥಿತಿಯನ್ನು ಗಮನಿಸಿರಲಿಲ್ಲ. ವೀರನಾರಾಯಣನ ಮಾತು ಕೇಳಿದ ಮೇಲೆ ಗಮನಿಸಿ ನೋಡಿದನು.

ಚರಕಾಚಾರಿ ತಡಬಡಿಸುತ್ತ ನಿಲ್ಲಲು ಪ್ರಯತ್ನಿಸುತ್ತಿದ್ದನು. ಅವನ ಗಂಟಲಿನಿಂದ ಏನೋ ನರಳಿಕೆ ಕೇಳಿಬರುತ್ತಿದ್ದಿತು. ಅವನ ಪಕ್ಕದಲ್ಲಿ ನೆಲದ ಮೇಲೆ ತಲೆ ಕಡಿಯಲ್ಪಟ್ಟು ಬಿದ್ದಿರುವ ಹೆಬ್ಬಾವು ಹೊರಳಾಡುತ್ತ ಪ್ರಾಣಬಿಟ್ಟು ಕೊಂಡಿತ್ತು. ಇದನ್ನೆಲ್ಲ ನೋಡಿ ಮೊಸಳೆಯಾಕಾರದವನು ಒಂದೆರಡು ಕ್ಷಣ ಸ್ತಬ್ಧನಾಗಿ, ಬಳಿಕ, "ಚರಕಾಚಾರೀ, ನನಗೆ ವೈದ್ಯ ಮಾಡಲಿಕ್ಕಾಗಿ ಹೆಬ್ಬಾವನ್ನು ಹಿಡಿಯಲು ಹೋಗಿ ಈ ಕಷ್ಟದಲ್ಲಿ ಬಿದ್ದೆಯಾ? ಆನೆಗಳನ್ನು ನುಂಗಬಲ್ಲಂತಹ ದೊಡ್ಡ ದೊಡ್ಡ ಹೆಬ್ಬಾವುಗಳನ್ನು ನನ್ನ ಶೂಲದಿಂದ ಚುಚ್ಚಿ ಚುಚ್ಚಿ ನಿನಗೆ ಕೊಡುತ್ತಿದ್ದೆನಲ್ಲ!" ಎಂದನು.

ಅವನ ಶಬ್ದ ಕೇಳಿ ಚರಕಾಚಾರಿ, "ಮೊಸಳೆ ದೊರೆಗಳೇ," ಎಂದು ಏನೋ ಹೇಳಲು ಬಾಯಿ ತೆರೆದು. ಹೇಳಲಾಗದೆ ಕೆಮ್ಮಿ, ಮರದ ಬೊಡ್ಡೆಗೆ ಒರಗಿ ಕೈಯೆತ್ತಿ ಜಯಶೀಲನನ್ನೂ, ಸಿದ್ಧ ಸಾಧಕನನ್ನೂ ತೋರಿಸಿದನು.

ಮೊಸಳೆಯಾಕಾರದವನು, ಅವರಿಬ್ಬರನ್ನು ನೋಡಿ ಕಣ್ಣು ಕೆಕ್ಕರಿಸಿ, "ಹುಲು ಮಾನವರೆ, ನೀವಿನ್ನೂ

...ಲ್ಲೇ ಇದ್ದೀರಾ? ಉಂ, ಬದುಕುವ ಆಸೆಯಿದ್ದರೆ ...ನ್ನ ಕಣ್ಣಿಗೂ ಶೂಲಕ್ಕೂ ಸಿಕ್ಕದಷ್ಟು ದೂರಕ್ಕೆ ...ರಿ!" ಎಂದನು ಶೂಲವನ್ನು ತಿರುಗಿಸುತ್ತಾ.


ಜಯಶೀಲನು ಕತ್ತಿ ಹಿರಿದು ಮುಂದಕ್ಕೆ ಜಿಗಿದ. ...ದನ್ನು ನೋಡಿ ವೀರನಾರಾಯಣನು ಜಯಶೀಲ...ನ್ನು ನೋಡಿ, "ಓ, ಶೂರಕತ್ತೀ ರಾಜಾ! ದಂಡ...ನೇ! ಸ್ವಲ್ಪ ನಿಲ್ಲಿರಪ್ಪಾ. ಈ ಮೊಸಳೆಯ ...ರೆಯ ಮೇಲೆ ಕತ್ತಿಯೆತ್ತುವುದೆಂದರೆ, ನಿಸ್ಸಹಾಯ...ದ ಒಬ್ಬನನ್ನು ಕೊಲೆ ಮಾಡಿದ ಹಾಗೇ ಆಗುತ್ತದೆ. ...ಂದರೆ, ಈತನ ಕಿಬ್ಬೊಟ್ಟೆಯಲ್ಲಿ ಇಳಿದಿರುವ ...ಯ ತುಂಡನ್ನು ನೋಡಿದಿರಾ? ಅದನ್ನು ಹೊರಗೆ ...ಯದೆ ಹೋದರೆ, ಇವರು ನೆತ್ತರು ಗಡ್ಡೆ ಕಟ್ಟಿ ...ಯುವುದು ಖಂಡಿತ" ಎಂದನು.

"ಇನ್ನೂ ಒಳ್ಳೆಯದಾಯಿತು. ಈ ಮೊಸಳೆ ...ಸುಗಿನ ಕಳ್ಳರದೊರೆ ಅಷ್ಟು ಸುಲಭದಲ್ಲಿ ...ಯುವುದು ನನಗೂ ಇಷ್ಟವಿಲ್ಲ. ಇವನ ಕಿಬ್ಬೊಟ್ಟೆ...ಳಗೆ ಸಿಕ್ಕಿಕೊಂಡಿರುವ ಕತ್ತಿಯ ಇನ್ನೊಂದು ತುಂಡು ಕನಕಾಕ್ಷ ಮಹಾರಾಜರ ಹತ್ತಿರ ಇದೆ. ಅಲ್ಲಿಗೇ ಹೋಗೋಣ" ಎಂದ ಜಯಶೀಲ.

ಜಯಶೀಲನ ಮಾತು ಕೇಳಿದ ಕೂಡಲೇ ಮೊಸಳೆ ಯಾಕಾರದವನು ಮೆಟ್ಟಿ ಬಿದ್ದವನಂತೆ ಕಣ್ಣರಳಿಸಿ, ದೊಡ್ಡದೊಂದು ಹುಂಕಾರ ಮಾಡಿ ಶೂಲವನ್ನೆತ್ತಿ, "ಓಹೋ! ಹಾಗಾದರೆ ನಾನು ಯಾರೆಂಬುದು ನಿನಗೆ ತಿಳಿದಿದೆಯೆಂದಾಯಿತು. ಇನ್ನು ನೀವು ಬದುಕಿರಲು ಸಾಧ್ಯವಿಲ್ಲ!" ಎಂದನು.

"ಭೇಷ್! ನಮ್ಮ ಸಂದೇಹ ನಿಜವಾಯಿತು. ಕಾಡಿನಲ್ಲಿದ್ದ ರಾಜಕುಮಾರನನ್ನೂ ರಾಜಕುಮಾರಿಯನ್ನೂ ಅಪಹರಿಸಿಕೊಂಡು ಹೋದವನು ನೀನೇ ಎಂದು ಒಪ್ಪಿಕೊಂಡಾಯಿತು! ನಿನ್ನ ಹೊಟ್ಟೆಯೊಳಗೆ ಸೇರಿಕೊಂಡಿರುವ ಕತ್ತಿ ರಾಜಕುಮಾರ ಕಾಂಚನವರ್ಮನದು! ನಿಜತಾನೇ?" ಎಂದ ಜಯಶೀಲ.

"ಇಷ್ಟೆಲ್ಲ ತಿಳಿದವನಾದ ನೀನೇ ಮೊದಲು ಸಾಯಿ!" ಎಂದು ಮೊಸಳೆಯಾಕಾರದವನು ಆನೆಯನ್ನು ಕೆರಳಿಸಿ ಜಯಶೀಲನ ಮೇಲೆ ಧುಮುಕಿಸಲು



221 9-2



ನೋಡಿದನು. ಆಗ ಗಾಬರಿಬಿದ್ದ ವೀರನಾರಾಯಣನು "ಅಯ್ಯಯ್ಯೋ! ಬೇಡ ಬೇಡ!" ಎಂದು ಕೂಗುತ್ತಾ ಅವನ ಶೂಲವನ್ನು ಎರಡು ಕೈಗಳಿಂದಲೂ ಹಿಡಿದುಕೊಂಡು, "ಮೊಸಳೆ ದೊರೆಗಳೇ, ಇಷ್ಟೊಂದು ಆವೇಶಮಾಡಿದರೆ ನಿಮಗೆ ರಕ್ತದ ಒತ್ತಡ ಶುರುವಾಗುತ್ತೆ. ಬೇಡ, ಅಪಾಯ!" ಎಂದು ಹೇಳುತ್ತ ಜಲಗ್ರಹವೆಂಬ ಆ ಆನೆಯ ಕದಲಾಟದಲ್ಲಿ ಆಯತಪ್ಪಿ ಶೂಲದೊಂದಿಗೆ ದಭಾಲ್ಲನೆ ಕೆಳಗೆ ಬಿದ್ದ.

ಜಯಶೀಲನು ಅದೇ ಕ್ಷಣದಲ್ಲಿ ಮಿಂಚಿನ ವೇಗದಲ್ಲಿ ಹಾರಿ ಜಲಗ್ರಹದ ಬೆನ್ನಿನ ಮೇಲೇರಿ ಮೊಸಳೆಯವನ ಕುತ್ತಿಗೆ ಹಿಡಿದುಕೊಂಡನು.

ಅಷ್ಟರಲ್ಲಿ ಸಿದ್ಧಸಾಧಕನು ಕೆಳಗೆ ಬಿದ್ದ ಶೂಲವನ್ನು ಎತ್ತಿಕೊಂಡು "ಜೈ! ಮಹಾಕಾಳಾ!" ಎಂದು ಅರಚಿದನು.

ಹೀಗೆ ಕಣ್ಣು ಮುಚ್ಚಿ ಬಿಡಿಸುವುದರೊಳಗೆ ಮೊಸಳೆಯಾಕಾರದವನು ತನ್ನ ಶೂಲವನ್ನು ಕಳೆದುಕೊಂಡು ನಿರಾಯುಧನಾಗಿ ಶತ್ರುವಿನ ಕೈಯಲ್ಲಿ ಸಿಕ್ಕಿಕೊಂಡನು. ಜಯಶೀಲನು ಕತ್ತಿಯನ್ನು ಅವನ ಕುತ್ತಿಗೆಗೆ ತಾಗಿ... "ಎಲೋ ಹೇಳು. ಯಾರು ನೀನು? ಎಲ್ಲಿಯವನು? ಶರಣಾಗತನಾಗಿ ಎಲ್ಲವನ್ನೂ ಬೊಗಳುವಿಯಾ? ಅಲ್ಲ ಕುತ್ತಿಗೆ ಕಡಿಸಿಕೊಳ್ಳುವಿಯಾ?" ಎಂದು ಕೇಳಿದನು.


ಮೊಸಳೆಯಾಕಾರದವನು ಒಂದು ನಿಮಿಷ ಮಾ... ಗಟ್ಟಿದವನಂತಿದ್ದು, ನಿರ್ವಿಣ್ಣನಾಗಿ, ಬೇರೆ ಉಪಾಯ ತೋರದೇ ಸಮಾಧಾನದ ಸ್ವರದಲ್ಲಿ, "ಅಯ್ಯಾ, ಮಾನವವೀರನೇ! ನಿನ್ನ ಸಾಹಸಕ್ಕೆ ತುಂಬಾ ಮೆಚ್ಚಿದೆ. ನಿನ್ನಂಥವನ ಸ್ನೇಹವನ್ನು ಬಯಸುತ್ತೇನೆ" ಎಂದನು.

ಆ ಮಾತು ಕೇಳಿ ಸಿದ್ಧಸಾಧಕನು ದೊಡ್ಡದಾಗಿಯಿಂದ ನಕ್ಕು, "ನಮ್ಮ ಜಯಶೀಲನಂಥವನ ಸಾಹಸವನ್ನು ನಿನ್ನಂಥ ಹಗಲುವೇಷದ ಭಂಡ ಮೆಚ್ಚುತ್ತಾನಂತೆ! ಸಾಕ್ಷಾತ್ ಮಹಾಕಾಲನೇ ಮೆಚ್ಚಿ ಪ್ರತ್ಯಕ್ಷನಾಗಿ ಇವನ ಕತ್ತಿಯನ್ನು ನೀವಿಕೊಟ್ಟಿದ್ದಾನೆ!" ಎಂದನು.

"ಯಾರು, ಯಾರು? ಮಹಾಕಾಲನೇ? ಅದು ಹೇಗೆ ಸಾಧ್ಯ?" ಎಂದು ಮೊಸಳೆಯಾಕಾರದವನು ಅತ್ಯಾಶ್ಚರ್ಯದಿಂದ ಕೇಳಿದ.

ಜಯಶೀಲನು ಅವನ ಕುತ್ತಿಗೆಯನ್ನು ಇಕ್ಕಳದಂತೆ ಹಿಡಿದು ಅತ್ತಿತ್ತ ಆಡಿಸಿ, "ಎಲೋ, ಮೊಸಳೆ ಕಳ್ಳಾ! ಅದೆಲ್ಲಾ ಬಹು ದೊಡ್ಡ ಕತೆ. ನಾನು ಕೇಳಿದ ಪ್ರಶ್ನೆಗಳಿಗೆ ಇನ್ನೂ ನೀನು ಉತ್ತರ ಕೊಡಲಿಲ್ಲ. ನಿನ್ನ ಹೆಸರೇನು? ನಮ್ಮ ಜತೆಯಲ್ಲಿ ವಿಧೇಯತೆಯಿಂದ ಮರ್ಯಾದೆ ಕಾಪಾಡಿಕೊಂಡು ಹಿರಣ್ಯಪುರದವರೆಗೆ ಬಂದು, ನಮ್ಮ ರಾಜರ ಹತ್ತಿರ ಅವರ ಕುಮಾರ ಕುಮಾರಿಯರನ್ನು ಎಲ್ಲಿ ಅಡಗಿಸಿರುವೆಯೆಂಬುದನ್ನು ಹೇಳಬೇಕು. ಏನನ್ನುವಿ?" ಎಂದನು.

"ನನ್ನ ಹೆಸರು ಮಕರಕೇತು. ರಾಜರಮಕ್ಕಳನ್ನು ಎಲ್ಲಿ ಅಡಗಿಸಿರುವೆನೆಂಬುದನ್ನು ಹೇಳಲಿಕ್ಕೆ ಅಲ್ಲಿಯ



ವರೆಗೆ ಹೋಗುವ ಆಗತ್ಯವೇನಿದೆ ? ಆ ಸಂಗತಿಯನ್ನು ಇಲ್ಲಿಯೇ ನಿನಗೇ ಹೇಳಿಬಿಡುತ್ತೇನೆ. ಆಯಿತಲ್ಲ ?" ಎಂದ ಮೊಸಳೆಯಾಕಾರದವ.

ಈ ಮಾತು ಕೇಳಿ ಜಯಶೀಲನಿಗೆ ತುಸು ಆಶ್ಚರ್ಯವಾಯಿತು. ಅವನು ಇಷ್ಟು ಸುಲಭದಲ್ಲಿ ಯುವರಾಜ ಯುವರಾಣಿಯರನ್ನು ಕುರಿತು ಹೇಳುವನೆಂದು ಊಹಿಸಿರಲಿಲ್ಲ. ಈಗ ಅವನು ಹೇಳಿದರೂ ಅದು ನಂಬುವಂತಿರಲಾರದು. ಆದುದರಿಂದ ಇದರಲ್ಲಿ ಏನೋ ಮೋಸವಿರಲೇ ಬೇಕು. ಅಂತೆಯೇ ಕೈಗೆ ಸಿಕ್ಕಿದ ಈ ದುಷ್ಟನನ್ನು ರಾಜನ ಸಮಕ್ಷಮಕ್ಕೆ ಕರೆದೊಯ್ಯುವುದೇ ಎಲ್ಲದಕ್ಕೂ ಒಳ್ಳೆಯದೆಂದುಕೊಂಡನು. ರಾಜನೂ ಮಂತ್ರಿಯೂ ಇವನನ್ನು ಪ್ರಶ್ನಿಸಿ, ನಿಜಸಂಗತಿಯನ್ನು ಬರಮಾಡಿಕೊಳ್ಳುವರು. ಆಮೇಲೆ ಏನು ಮಾಡಬೇಕೆಂಬುದನ್ನೂ ಅಪ್ಪಣೆ ಕೊಡುವರು.


ಜಯಶೀಲನು ಹೀಗೆ ಆಲೋಚನೆ ಮಾಡಿ ಮಕರಕೇತುವಿನೊಂದಿಗೆ, "ಎಲೋ ಕೇತು, ನಿನ್ನ ಸಂಕರ ಜಾತಿಯ ಆನೆಯನ್ನು ನಾನು ಹೇಳುವ ದಾರಿಗೆ ತಿರುಗಿಸು. ಕಿಂಕಂ ಎನ್ನದೆ ಹಿರಣ್ಯಪುರದ ಕಡೆಗೇ ಹೋಗಬೇಕು. ದಾರಿಯಲ್ಲಿ ತಪ್ಪಿಸಿಕೊಂಡು ಹೋಗಲು ಏನಾದರೂ ಕುಟಿಲಪ್ರಯತ್ನ ಮಾಡಿದರೆ, ಒಂದೇಟಿಗೆ ನಿನ್ನ ಕೊರಳು ತುಂಡಾಗಿ ತಲೆ ನೆಲಕ್ಕೆ ಬೀಳುತ್ತದೆ." ಎಂದನು.

"ಸರಿಯಪ್ಪ" ಎಂದು ಮಲಯಕೇತು ಜಲಗ್ರಹಗಜವನ್ನು ಹಿರಣ್ಯಪುರದ ದಾರಿಗೆ ತಿರುಗಿಸಿದನು. ಆಗ ಸಿದ್ಧಸಾಧಕನು ಬೇಗಬೇಗನೆ ಆನೆಯ ಬಳಿಗೆ ಓಡಿ, "ಜಯಶೀಲಾ, ನಾನೂ ಬರುತ್ತೇನೆ. ಸ್ವಲ್ಪ ಕೈಕೊಟ್ಟು ಆನೆಯ ಮೇಲೆ ಎಳೆದುಕೊಳ್ಳಯ್ಯ" ಎಂದನು.

ಜಯಶೀಲನು ಸಿದ್ಧಸಾಧಕನನ್ನು ಆನೆಯ ಮೇಲಕ್ಕೆ ಎಳೆದುಕೊಂಡನು. ಆಮೇಲೆ ಆನೆ ಮುಂದಡಿ ತೆಗೆಯುವುದರೊಳಗೆ ವೀರನಾರಾಯಣನೂ ಚರಕಾಚಾರಿಯೂ ಚಪ್ಪಾಳೆ ತಟ್ಟುತ್ತ "ಸ್ವಲ್ಪ ನಿಲ್ಲಿ ದೊರೆಗಳೇ, ನಮ್ಮ ಗ್ರಾಮ ಸಮೀಪದಲ್ಲೇ ಇದೆಯಾದರೂ ಹೋಗುವ ದಾರಿಯಲ್ಲಿ ಕೆಟ್ಟಕಾಡು. ಹುಲಿ ಕರಡಿ ತೋಳಗಳೆಲ್ಲಾ ಇವೆ. ನಮ್ಮನ್ನು ಇಂಥ ಸ್ಥಳದಲ್ಲಿ ಹೀಗೇ ಬಿಟ್ಟು ಹೋಗುವಿರಾ ?" ಎಂದರು.

ಅವರನ್ನು ನೋಡಿ ಜಯಶೀಲ, "ಹೆದರಬೇಡಿ. ಆನೆ ಮೆಲ್ಲಗೇ ನಡೆಯುತ್ತದೆ. ನೀವಿಬ್ಬರೂ ಈ ದುಷ್ಟನಿಗೆ ಚಿಕಿತ್ಸೆ ಮಾಡುವ ಪ್ರಯತ್ನದಲ್ಲಿದ್ದುದರಿಂದಲೇ ಇವನು ನಮ್ಮ ಕೈಗೆ ಸಿಕ್ಕಿದ. ನಿಮ್ಮನ್ನು ಬಿಟ್ಟು ಹಾಕುತ್ತೇವೆಯೇ ? ನೀವಿಬ್ಬರೂ ಈ ಆನೆಯ ಹಿಂದೆಯೇ ಬನ್ನಿ" ಎಂದನು.

"ಈ ಹೊಸ ದೊರೆಗಳು ಯಾರೋ, ಪ್ರಾಯ ಚಿಕ್ಕದಾದರೂ ಗುಣ ದೊಡ್ಡದು. ಮಹಾಧೈರ್ಯ ಕೂಡ. ಇವರು ಸಮಯಕ್ಕೆ ಬಾರದಿರುತ್ತಿದ್ದರೆ



ಇಷ್ಟು ಹೊತ್ತಿಗೆ ನಾನು ಹೆಬ್ಬಾವಿಗೆ ಗುಳಂಕಾಯಿ ಸ್ವಾಹಾ ಆಗುತ್ತಿದ್ದೆ!" ಎಂದ ಚರಕಾಚಾರಿ ವೀರ ನಾರಾಯಣನೊಂದಿಗೆ.

ಅವರಿಬ್ಬರೂ ಆನೆಯ ಹಿಂದೆ ನಡೆಯುತ್ತಿರಲು, ಆನೆ ಜಯಶೀಲನ ನಿರ್ದೇಶನದಂತೆ ಹಿರಣ್ಯಪುರದ ದಾರಿಯನ್ನು ಹಿಡಿಯಿತು. ಸ್ವಲ್ಪ ಹೊತ್ತಿನವರೆಗೆ ಸುಮ್ಮನಿದ್ದ ಚರಕಾಚಾರಿ, ಗಟ್ಟಿಯಾಗಿ ಒಮ್ಮೆ ಗಂಟಲು ಕೆನೆದು, "ಜಯಶೀಲ ಪ್ರಭುಗಳೇ, ನಮ್ಮದೊಂದು ವಿಜ್ಞಾಪನೆ!" ಎಂದ. ಜಯಶೀಲನು ಆಶ್ಚರ್ಯದಿಂದ ಅವನನ್ನು ನೋಡಿ, "ಏನು ನಿನ್ನ ವಿಜ್ಞಾಪನೆ?" ಎಂದು ಕೇಳಿದ.

ನಡೆಯುತ್ತಾ ಚರಕಾಚಾರಿ ಹೀಗೆಂದ: "ಅಯ್ಯಾ, ನಾನೂ ಈ ವೀರನಾರಾಯಣನೂ ಈ ಮೊಸಳೇ ಮುಸುಗಿನ ಮಹಾರಾಜರಿಗೆ ಚಿಕಿತ್ಸೆ ಮಾಡಬೇಕೆಂದು ತುಂಬಾ ಕಷ್ಟಪಟ್ಟೆವು. ಇವರ ಹೊರತು ಬೇರೊಬ್ಬ ಮನುಷ್ಯನಾಗಿರುತ್ತಿದ್ದರೆ, ಅಷ್ಟುದ್ದದ ಕತ್ತಿಯ ತುಂಡು ಪಕ್ಕೆಲುಬುಗಳಲ್ಲಿ ಹೊಕ್ಕ ಕೂಡಲೇ ಸಾಯಬೇಕಿತ್ತು. ಆದರೆ ಇವರು ಆ ಮುರಿದ ಕತ್ತಿಯನ್ನು ಏನೋ ಒಂದು ಆಭರಣದಂತೆ ಧರಿಸಿಕೊಂಡಿದ್ದಾರೆ ನೋಡಿದಿರಾ? ನಾನು ಅವರ ನಾಡೀ ಪರೀಕ್ಷೆ ಮಾಡಿದ್ದೆ. ಆಶ್ಚರ್ಯವೆಂದರೆ ಅವರ ಶರೀರದಲ್ಲಿ ಪ್ರವಹಿಸುವುದು ಶೀತಳರಕ್ತ. ಇವರು ಜಲಚರ ಪ್ರಾಣಿವರ್ಗಕ್ಕೆ ಸೇರಿದವರು. ನಿಮಗೂ ಈ ವಿಷಯ ತಿಳಿದಿದ್ದರೆ ಒಳ್ಳೆಯದೆಂತಲೇ ಹೇಳುತ್ತೇನೆ."

"ಹಾಗೇನು? ಅಂದರೆ ಇವನು ನೀರಿನಲ್ಲಿಯೂ ನೆಲದಲ್ಲಿಯೂ ಬದುಕಿರಬಲ್ಲಂತಹ ಯಾವುದೋ ಕಪ್ಪೆಜಾತಿಯ ನರಪ್ರಾಣಿ. ಕನಕಾಕ್ಷಮಹಾರಾಜರಿಗೆ ಇವನ ಅಗತ್ಯ ಮುಗಿದ ಮೇಲೆ ಇವನನ್ನೂ ಇವನ ವಾಹನವನ್ನೂ ನಿನಗೇ ಬಹುಮಾನವಾಗಿ ಕೊಡಿಸಿ ಬಿಡುತ್ತೇನೆ. ಆಗ ಇವನ ಮೇಲೆ ಏನಾದರೂ ಹೊಸ ವೈದ್ಯಸಂಶೋಧನೆ ಮಾಡಿ ಕೀರ್ತಿ ಸಂಪಾದಿಸಬಹುದು. ಆಗಬಹುದಷ್ಟೇ ಚರಕಾಚಾರೀ ವೈದ್ಯಶಿರೋಮಣೀ?" ಎಂದ ಜಯಶೀಲ.

ಈ ಮಾತು ಕೇಳಿ ಸಿದ್ಧಸಾಧಕನೂ, ವೀರನಾರಾಯಣನೂ ನಕ್ಕರು. ಚರಕಾಚಾರಿಯೂ ಧೈರ್ಯಗೊಂಡು ನಕ್ಕನು. ಮಕರಕೇತು ಕರಕರನೆ ಹಲ್ಲು ಕಡಿದುಕೊಂಡನು.

ಅವನ ಕೋಪದ ಹುಂಕಾರವನ್ನು ಕೇಳಿ ಜಯಶೀಲನು ಕತ್ತಿಯನ್ನು ಅವನ ಕುತ್ತಿಗೆಗೆ ಆನಿಸಿ ಹಿಡಿದು, "ಏಯ್ ಮಕರಕೇತು! ಎಚ್ಚರ! ಏನಾದರೂ ದುಸ್ಸಾಹಸಕ್ಕೆ ನೋಡಿದರೆ ಮುಂಡದಿಂದ ತಲೆ ಕೆಳಗೆ ಬೀಳುತ್ತದೆ" ಎಂದನು.


ಆಗ ಸಿದ್ಧಸಾಧಕನು "ಹೌದೌದು. ಈ ಕತ್ತಿ ಸಾಮಾನ್ಯವಾದುದಲ್ಲ! ಅಹ! ಜಯಶೀಲಾ! ಆ ದಿನ ರಾತ್ರಿ ನಿನ್ನ ಕತ್ತಿಯ ಪೆಟ್ಟಿಗೆ ಸ್ಮಶಾನದಲ್ಲಿ ಆ ಮಹಾಭೂತವು ಆವಾಹಿಸಿದ ಕಾವಲುಗಾರರ ತಲೆ ಕೆಳಗೆ ಬಿದ್ದು ಹೇಗೆ ಉರುಳಾಡಿತು. ಆ ಮಹಾ

ಲಭೂತದ ರಕ್ತದ ಶಕ್ತಿ ಅಪಾರ! ಆ ದೃಶ್ಯ ನೆಂದೂ ಮರೆಯಲಾರೆ" ಎಂದು ಉತ್ಸಾಹದಿಂದ ಕೈಯಲ್ಲಿದ್ದ ಶೂಲವನ್ನು ತಿರುಗಿಸಿದನು.

ಆನೆಯ ಹಿಂದಿನಿಂದ ನಡೆದು ಬರುತ್ತಿದ್ದ ವೀರ ರಾಯಣನು. ಚರಕಾಚಾರಿಯ ಬೆನ್ನನ್ನು ಮೆಲ್ಲಗೆ ವಿದು, "ಅಲ್ಲಯ್ಯಾ, ಚರಕಾಚಾರ್ಯರೇ, ನೀವು ಮಾಡಬೇಕಾಗಿದ್ದ ವಿಜ್ಞಾಪನೆಯನ್ನು ಮರೆತು ಆ ಮೊಸಳೆ ಮುಸುಗಿನಲ್ಲಿರುವ ಕಪಟಿಯ ಶರೀರತತ್ವ ವನ್ನು ಕುರಿತು ತುಂಬಾ ಹೇಳಿದಿರಲ್ಲ! ಆ ಧೂರ್ತನ ಗತಿ ಹೇಗಾದರೆ ನಮಗೇನು?" ಎಂದನು.

"ಹೌದೌದು ವೀರನಾರಾಯಣಾ, ಮುಖ್ಯ ಸಂಗತಿ ಹೇಳಲೇ ಇಲ್ಲ" ಎಂದು ಚರಕಾಚಾರಿ ಗಟ್ಟಿಯಾಗಿ ಜಯಶೀಲನನ್ನು ಕುರಿತು, "ಅಯ್ಯಾ, ಜಯಶೀಲ ಪ್ರಭುಗಳೇ, ನಾನು ತಮಗೆ ವಿಜ್ಞಾಪಿಸಬೇಕಾದ ಸಂಗತಿ ಅದಲ್ಲ; ಬೆಳಗ್ಗಿನಿಂದಲೂ ಈ ಮೊಸಳೆಯವನಿಗಾಗಿ ನಾನೂ ವೀರನಾರಾಯಣನೂ ತುಂಬಾ ತಾಪತ್ರಯಪಟ್ಟು ಒದ್ದಾಡಿದೆವು. ಅವನಿಗೆ ಶಸ್ತ್ರಚಿಕಿತ್ಸೆಯಿಂದ ಆ ಕತ್ತಿಯ ತುಂಡನ್ನು ಹೊರಕ್ಕೆಳೆಯುವುದರೊಳಗೆ ಹೀಗೆಲ್ಲಾ ಆಗಿಹೋಯಿತು. ನೀವೀಗ ಅವನನ್ನು ಕರೆದುಕೊಂಡು ಹೋಗುತ್ತೀರಿ. ನಾವು ಕಷ್ಟಪಟ್ಟದ್ದೇ ಬಂತು, ಲಾಭ ಪೂರಾ ಸೊನ್ನೆ. ಆದುದರಿಂದ ವೈದ್ಯಕೀಯ ಆಲೋಚನೆ ಹೇಳಿದ ನಮಗೆ ರುಸುಮು ಏನಾದರೂ ಕೊಡಿಸಿದರೆ ಒಳ್ಳೆಯದಿತ್ತು." ಎಂದನು.

ಜಯಶೀಲನು ಕಿರುನಗೆ ನಕ್ಕು, ಏನೋ ಹೇಳಲಿದ್ದನು. ಅಷ್ಟರೊಳಗೆ ಯಾವುದೋ ಒಂದು ಮರದ ಕೊಂಬೆಗಳ ಕಡೆಯಿಂದ ರೊಯ್ಯನೆ ಬಂದ ಒಂದು ಬಾಣವು ಮಕರಕೇತುವಿನ ಭುಜದಲ್ಲಿ ನೆಟ್ಟಿತು. ಆಕಸ್ಮಿಕವಾದ ಆ ಏಟಿಗೆ ಮಕರಕೇತು ಪ್ರಾಣ ಹೋಗುವಂತೆ ಕಿಟ್ಟದನಿಯಿಂದ ಕೂಗುತ್ತಾ, ಕುಳಿತಲ್ಲೇ ಹಾರಿಬಿದ್ದು, "ಜಯಶೀಲಾ, ಇದು ಅನ್ಯಾಯ! ನಿನ್ನ ಆಜ್ಞೆಗೆ ಒಳಪಟ್ಟು ನಡೆಯುತ್ತಿರುವ ನನ್ನನ್ನು ಶೂಲದಿಂದ ಇರಿದೆಯಲ್ಲಾ!" ಎಂದ ನೋವಿನ ಬಾಧೆಯಿಂದ. ಹಠಾತ್ತಾಗಿ ಬಂದ ಆ ಬಾಣವನ್ನು ನೋಡಿ



225 9-7

ಜಯಶೀಲನೂ ಸಿದ್ಧಸಾಧಕನೂ ಮೆಟ್ಟಿಬಿದ್ದರು. ಜಯಶೀಲನು ಬಾಣ ಬಂದ ದಿಕ್ಕಿಗೆ ನೋಡಿ ಪರೀಕ್ಷೆ ಮಾಡುವಾಗ, ಆಕಡೆಯಿಂದ ಪಕಪಕನೆ ನಗುವ ಶಬ್ದವೂ ಅದರೊಂದಿಗೆ, "ಎಲೋ ಮೊಸಳೇ ಮುಸುಗಿನ ಕಳ್ಳಾ! ನಾನು ಹೊಡೆದ ಕಾಡುಕೋಳಿಯನ್ನು ಕದ್ದುಕೊಂಡು ಹೋಗುವ ನಾಚಿಕೆಗೇಡಿ ಭಂಡಾ! ಭೂತದ ವೇಷದಲ್ಲಿ ಮೋಸ ಮಾಡಿದವನೇ! ನಿನ್ನ ಗುಟ್ಟು ಗೊತ್ತಾಗಿಹೋಯಿತು. ಅಲ್ಪ ಮನುಷ್ಯ! ಇಕೋ, ಈ ಬಾಣ ನಿನ್ನ ಎದೆಯನ್ನೇ ಸೀಳುತ್ತದೆ! ಸಾಯಿ!" ಎಂಬ ಕ್ರೂರ ಮಾತುಗಳೂ ಕೇಳಿಬಂದುವು.


ಜಯಶೀಲನಿಗೂ ಸಿದ್ಧಸಾಧಕನಿಗೂ ಆ ಕಂಠಸ್ವರದ ಗುರುತು ಹತ್ತಿತು. ಅದು ಬೇಡರಭೀಮನ ಶಬ್ದ. ಕೂಡಲೇ ಸಿದ್ಧಸಾಧಕನು ತನ್ನ ಮಂತ್ರದಂಡವನ್ನು ಮೇಲೆತ್ತಿ "ಎಲೋ ಭೀಮಾ! ಮಹಾರಾಜ ಮಾಂತ್ರಿಕನಾನಿದ್ದೇನೆ ಇಲ್ಲಿ! ನಮ್ಮ ಬಲಿಯನ್ನು ನೀನು ಕೊಲ್ಲುವುದೇ? ಇನ್ನೊಂದು ಬಾಣ ಬಿಟ್ಟೆಯಾದರೆ ನಿನ್ನನ್ನು ಮಹಾಕಾಲನಿಗೆ ನೈವೇದ್ಯ ಮಾಡಿಬಿಡುತ್ತೇನೆ! ಎಚ್ಚರ! ಮರದಿಂದ ಕೆಳಗಿಳಿದು ಮುಂದೆ ಬಾ" ಎಂದು ಕೂಗಿ ಹೇಳಿದನು.


"ಯಾರೂ? ಮಹಾರಾಜರ ಮಹಾಮಾಂತ್ರಿಕರೇ! ಅಯ್ಯಯ್ಯೋ!" ಎಂದು ನಡುಗುವ ಸ್ವರದಿಂದ ಬೇಡರಭೀಮನು ಹೇಳಿಕೊಂಡ. "ಹೌದು ಹೌದು! ನಾನು ಸಿದ್ಧಸಾಧಕನೆಂಬ ಮಹಾಮಾಂತ್ರಿಕ. ಬಾಯಿ ಮುಚ್ಚಿ ಸುಮ್ಮನೆ ಮರದಿಂದಿಳಿದು ಬರುವಿಯಾ, ಮಂತ್ರಹಾಕಿ ಆ ಮರದ ಕೊಂಬೆಯಲ್ಲೇ ಸುಟ್ಟು ಬೂದಿ ಮಾಡಲೋ?" ಎಂದು ಸಿದ್ಧಸಾಧಕನು ಹುಂಕರಿಸಿದನು.

"ನನ್ನನ್ನು ಬಾಣದಿಂದ ಹೊಡೆದವನು ಆ ಬೇಡರ ಭಡವನೇ? ಎಷ್ಟೊಂದು ದೊಡ್ಡ ಮಾಯಾ ಸರೋವರೇಶ್ವರನ ಪ್ರತಿನಿಧಿಯಾದ ನನಗೆ ಎಂತಹ ದುರ್ಗತಿ ಬಂದಿತು! ಅವನನ್ನು ಆ ಮರದೊಂದಿಗೇ ನೆಲಕ್ಕೆ ಅಪ್ಪಳಿಸಿ ಎಲುಬು ಕೂಡ ಸಿಕ್ಕದಂತೆ ಮಾಡುತ್ತೇನೆ ನನ್ನ ಈ ಜಲಗ್ರಹದಿಂದ!" ಎಂದು ಮಕರಕೇತು ಜಲಗ್ರಹಕ್ಕೆ ಏನೋ ಸನ್ನೆ ಮಾಡಿದನು.

ಜಯಶೀಲನು ಬೇಡವೆನ್ನುವುದರೊಳಗೇ, ಜಲಗ್ರಹವು ಒಂದು ತೀಕ್ಷ್ಣಘೀಂಕಾರ ಹಾಕಿ ಶರವೇಗದಿಂದ ಹಾರುತ್ತ ಹಾರುತ್ತ ಹೋಗಿ ಬೇಡರಭೀಮ ಹತ್ತಿದ್ದ ಮರವನ್ನು ತಲೆಯಿಂದ ಢೀಕೊಟ್ಟಿತು. ಹಾಗೆಯೇ ಸೊಂಡಿಲಿನಿಂದ ಕಾಂಡವನ್ನು ಸುತ್ತಿ ಎಳೆಗಿಡವನ್ನು ಕಿತ್ತಂತೆ ಕಿತ್ತಿತು. ಕೊಂಬೆಯಲ್ಲಿದ್ದ ಬೇಡರಭೀಮ ಓಲಾಡುವ ಮರದೊಂದಿಗೆ ಮೇಲೆ ಕೆಳಗಾಗುತ್ತ ಆರ್ತನಾದ ಮಾಡತೊಡಗಿದನು.

—(ಮುಂದುವರಿಯುವುದು)





# ಮಾಯಾಸರೋವರ


Nov 1976

## ೧೦

[ಜಯಶೀಲನು ಚರಕಾಚಾರಿಯ ಬಳಿಗೆ ಬಂದ ಮೊಸಳೆಯುವನನ್ನು ಉಪಾಯದಿಂದ ಹಿಡಿದು ಅವನ ಜಲಗ್ರಹದ ಮೇಲೆ ಏರಿದನು. ಸಿದ್ಧಸಾಧಕನೂ ಏರಿದನು. ಅಲ್ಲಿಂದ ಹಿರಣ್ಯಪುರಕ್ಕೆ ಹೊರಡುವ ದಾರಿಯಲ್ಲಿ ಬೇಡರಭೀಮ ಮೊಸಳೆಯುವನ ಮೇಲೆ ಬಾಣ ಹೊಡೆದ. ಜಲಗ್ರಹವು ಅವನಿರುವ ಮರವನ್ನೇ ಕಿತ್ತು ಹಾಕಿತು.]

ಜಲಗ್ರಹದ ಸೊಂಡಿಲಿಗೆ ಸಿಕ್ಕಿ ತೂಗಾಡುವ ಮರದ ಕೊಂಬೆಯಲ್ಲಿ ನೇತಾಡುತ್ತಿದ್ದ ಬೇಡರ ಭೀಮನು, ಜಲಗ್ರಹವು ಮರವನ್ನು ನೆಲಕ್ಕೆ ಅಪ್ಪಳಿಸಲು ಅವನೂ ತಬ್ಬಿಕೊಂಡನು. ಮೇಲೇಳಲಾಗದೇ ಅವನು ಅರಚುವುದನ್ನು ಕೇಳಿ ಜಯಶೀಲನು ಕೋಪದಿಂದ ಮಕರಕೇತುವಿನ ಭುಜವನ್ನು ಹಿಡಿದು ಕುಲುಕುತ್ತ, "ಎಲೋ ಮೊಸಳೇ ಮುಸುಗಿನ ದುಷ್ಟನೇ! ಈಗ ನೀನು ಮಾಡಿದ ಕೆಲಸವೇನು? ನನ್ನ ಅನುಮತಿ ಇಲ್ಲದೆ ನಿನ್ನ ಹಾಳಾನೆಯಿಂದ ಆ ಮರವನ್ನು ಬೀಳಿಸಿ ಒಬ್ಬನ ಸಾವಿಗೆ ಕಾರಣನಾದೆಯಲ್ಲ? ಅವನೇನಾದರೂ ಸತ್ತಿದ್ದರೆ ನಿನ್ನ ಆಯುಷ್ಯ ಇಂದಿಗೆ ಮುಗಿದಂತೆಯೇ ಆಯಿತು!" ಎಂದನು.

ಮಕರಕೇತು ತನ್ನ ಎಡದ ಭುಜದಲ್ಲಿ ಇಳಿದಿರುವ ಬಾಣವನ್ನು ನೋಡಿ, ತುಟಿಬಿಗಿದು ನೋವಿನಿಂದೊಮ್ಮೆ ಮುಲುಗಿ, "ಜಯಶೀಲಾ, ನಾನು ಆ ಬೇಡರ ಭಂಡನನ್ನು ಹೀಗೆ ನೆಲ ಹಿಡಿಸದೆ ಹೋಗಿರುತ್ತಿದ್ದರೆ ಅವನು ಇನ್ನೊಂದು ಬಾಣಬಿಟ್ಟು ನನ್ನ ಗುಂಡಿಗೆಯನ್ನೇ ಸೀಳುತ್ತಿದ್ದನು. ಆಮೇಲೆ ನನ್ನನ್ನು ಕೊಲ್ಲುವ ಅವಕಾಶವಾದರೂ ನಿನಗೆಲ್ಲಿಯದು? ನಿನಗೂ ಹಾಗೆ ತೋರುವುದಿಲ್ಲವೇ"



ಎಂದನು. ಅವನ ಮಾತು ನಿಜವೆಂದು ಜಯಶೀಲನಿಗೂ ಅನಿಸದಿರಲಿಲ್ಲ. ಆದರೆ ಮಕರಕೇತು ತನ್ನ ಅಪ್ಪಣೆಯಿಲ್ಲದೆ ದುಡುಕಿ ಸ್ವತಂತ್ರನಂತೆ ವರ್ತಿಸಿದುದರಿಂದ ಅವನ ಅಭಿಮಾನವನ್ನು ಕೆಣಕಿದಂತಾಗಿ ರೋಷಗೊಂಡನು.

ಇಷ್ಟರಲ್ಲಿ ಸಿದ್ಧಸಾಧಕನು ಜಲಗ್ರುಹದ ಬೆನ್ನಿನಿಂದ ಕೆಳಕ್ಕೆ ಹಾರಿ, ಕೆಳಗೆ ಬಿದ್ದಿರುವ ಮರದ ಕೊಂಬೆಗಳೆಡೆಯಲ್ಲಿ ನೆಲಕ್ಕೆ ಅಮುಕಲ್ಪಟ್ಟಿರುವ ಬೇಡರ ಭೀಮನನ್ನು ಉಪಾಯದಿಂದ ಹಿಡಿದು ಹೊರಗೆ ಎಳೆದು ಹಾಕಿದನು.

"ಎಲೋ ಬೇಡರ ಭಡವಾ! ಬದುಕಿಕೊಂಡಿರುವೆಯಷ್ಟೆ? ನಿನ್ನ ಕೈಕಾಲುಗಳೇನಾದರೂ ಮುರಿದಿದೆಯೋ ನೋಡಿಕೋ" ಎಂದು ಸಿದ್ಧಸಾಧಕನು ಕನಿಕರದಿಂದ ನೋಡಿದನು.

"ಹಮ್ಮಮ್ಮಾ!" ಎನ್ನುತ್ತ ಬೇಡರ ಭೀಮ ಎದ್ದು ನಿಂತು ಬೆನ್ನು ಮುರಿಯುತ್ತ ಕೈಕಾಲಾಡಿಸಿ, ಒಂದೆರಡು ಸಾರಿ ಹಾರಿ ಕುಣಿದು, "ಆಹ್! ದೆ… ದೊರೆಗಳೇ, ನನಗೇನೂ ಪೆಟ್ಟಾಗಿಲ್ಲ. ಹಾಗೇ ಮೇ… ನಿಂದ ಗರುಡಪಕ್ಷೀ ಹಾಗೆ ಭೂಮಿಗೆ ಇಳಿದ ಹಾ… ಯಿತು. ಈ ಮೊಸಳೇ ಮುಸುಗಿನ ಕಳ್ಳ ನ… ಬಾಣದ ಪೆಟ್ಟು ತಿಂದು ಕೂಡ ಇನ್ನೂ ಈ ಪಿಶಾ… ಯಂಥ ಆನೆ ಮೇಲೆ ಕುಳಿತಿರುವುದನ್ನು ನೋಡಿದ… ನನಗೆ ತಲೆಯೆತ್ತಲಿಕ್ಕೆ ನಾಚಿಕೆಯಾಗುತ್ತದೆ. ಇ… ವನು ಬಹಳ ಹೊತ್ತು ಬದುಕಿರಬಾರದು. ಈ ಸಾ… ನನ್ನ ಬಾಣವು ಅವನ ಗುಂಡಿಗೆಯೊಳಗೆ ಹೊ… ದಿದ್ದರೆ ಮತ್ತೆ ಕೇಳಿರಿ. ನೋಡಿರೀಗ!" ಎಂ… ತನ್ನ ಬಿಲ್ಲಿಗೆ ಮತ್ತೆ ಬಾಣ ಹೂಡಲು ನೋಡಿದ…

"ಕೂಡದು, ಕೂಡದು!" ಎನ್ನುತ್ತಾ ಜ… ಶೀಲನು ಜಲಗ್ರುಹದ ಮೇಲಿನಿಂದ ಕೆಳಕ್ಕೆ ಹಾ… ಬೇಡರ ಭೀಮನ ಕುತ್ತಿಗೆಯ ಹಿಮ್ಮಡವನ್ನು ಹಿಡಿ… ಕೊಂಡು, "ಎಲೋ ಬುದ್ಧಿಗೆಟ್ಟ ಗರ್ವಿಷ್ಠ! ಆನೆ… ಮೇಲೆ ನಾನಿರುವುದನ್ನು ನೋಡಿ ಕೂಡಾ, ಆ… ಮಾಂತ್ರಿಕರನ್ನು ಕಂಡು ಕೂಡಾ ಬಾಣ ಬಿಡು… ಯೇನು? ಅದು ಗುರಿ ತಪ್ಪಿ ನನಗೇ ತಾಗ… ದೆಂಬ ಅನುಮಾನ ಕೂಡಾ ನಿನಗೆ ಬರಲಿಲ್ಲವೇ! ನಿನ್ನ ಕಣ್ಣಿಗೆ ಕುರುಡೋ ಬುದ್ಧಿಗೆ ಕುರುಡೋ! ಅಥವಾ ಮೊಂಡು ಧೈರ್ಯವೋ?" ಎಂ… ಕೇಳಿದನು.

"ದೊರೆಗಳೇ, ನಿಮ್ಮ ಶತ್ರುವನ್ನು ಕೊಂ… ನಿಮಗೆ ಸಂತೋಷವೆಂದೇ ತಿಳಿದೆ. ಇನ್ನು… ಬಾಣದ ಗುರಿ ಕೂದಲಿನೆಳೆಯಷ್ಟೂ ತಪ್ಪುವ… ಬೇಕಾದರೆ ಆ ಮೊಸಳೇ ಕಳ್ಳನ ಎರಡು ತು… ನಡುಮಧ್ಯಕ್ಕೆ ಮಾತ್ರ ತಗಲುವ ಹಾಗೆ ಬಾ… ಹೊಡೆಯಬಲ್ಲೆ ನೋಡಿರೀಗ!" ಎನ್ನುತ್ತಾ ಭೀ… ಮತ್ತೆ ಬಿಲ್ಲನ್ನು ಎತ್ತಿದ.

ಜಯಶೀಲನು ತಟ್ಟನೆ ಹಾರಿ ಅವನ ಬಿಲ್ಲ… ಅಂಬುಗಳನ್ನೂ ಕಿತ್ತು ದೂರ ಬಿಸುಟು, "…

ನೋಡಿಯೋ, ಈಗ ಆ ಮಕರಕೇತು ನನ್ನ ಅಧೀನ ದಲ್ಲಿರುವವನು. ಅಂದರೆ ಮಹಾರಾಜರಿಗಾಗಿ ನಾನು ಇವನನ್ನು ಹಿಡಿದಿದ್ದೇನೆ. ಅಂಥವನಿಗೆ ನೀನು ಏನಾದರೂ ಹಾನಿ ಮಾಡಿಬಿಟ್ಟರೆ, ಅದು ಭಯಂಕರ ರಾಜದ್ರೋಹ. ಅಷ್ಟು ದೂರ ಹೋಗಲು ಬಿಡದೇ ನಾನೇ ನಿನ್ನನ್ನು ಕೊಂದುಬಿಡುವೆನು. ಕಾಡಾಡಿಯಾದ ನಿನಗೆ ರಾಜನೆಂದರೇನು, ರಾಜದ್ರೋಹ ಎಂದರೇನು ಗೊತ್ತಿಲ್ಲವೆಂದು ಕಾಣುತ್ತದೆ. ಈಗಾದರೂ ತಿಳಿದುಕೋ. ಜಾಗ್ರತೆ " ಎಂದ ಕೋಪದಿಂದ.


"ಹಾಗಾದರೆ ನಾನು ಹಿಡಿದ ಕಾಡುಕೋಳಿಯ ಜಾತಿಗೇನು ಮಾಡಲಿ ? ಇವನು ಕದ್ದು ತಿಂದನಲ್ಲಾ ! ಅದಕ್ಕೆ ಪರಿಹಾರವೇನು ? " ಎಂದ ಬೇಡರ ಭೀಮ ಕೋಪದಿಂದ ಗುರುಗುಡುತ್ತ.

ಜಯಶೀಲನಿಗೆ ನಗುವೇ ಬಂದಿತು, ಆಗ ಸಿದ್ಧ ಸಾಧಕನು "ಎಲೋ ಭೀಮಾ, ಸದ್ಯ ಬಾಯಿ ಮುಚ್ಚಿಕೋ. ಆ ಕೋಳಿಯ ಸಂಗತಿಯನ್ನು ಮಹಾರಾಜರೊಂದಿಗೆ ಹೇಳಿಕೋ ತೀರ್ಪು ಕೊಡುತ್ತಾರೆ. ಆ ತೀರ್ಪಿನಂತೆ ನಡೆ." ಎಂದು ಭೀಮನ ಭುಜ ಹಿಡಿದು ಬದಿಗೆ ಎಳೆದನು.

ಆ ಸಮಯಲ್ಲಿ ಅಲ್ಲಿಗೆ ಚರಕಾಚಾರಿಯೂ ವೀರ ನಾರಾಯಣನೂ ಬಂದರು. ಚರಕಾಚಾರಿ ಜಲಗ್ರಹದ ಮೇಲಿರುವ ಮಕರಕೇತುವನ್ನು ನೋಡಿ ಆಶ್ಚರ್ಯ ಪಡುತ್ತ, "ಇದೇನಿದೇನು ! ಕಿಬ್ಬೊಟ್ಟೆಯಲ್ಲಿ ಇಳಿದ ಕತ್ತಿಯ ತುಂಡು ಮಾತ್ರವಲ್ಲದೆ, ಭುಜದಲ್ಲಿ ಬಾಣ ಬೇರೆ ಚುಚ್ಚಿಕೊಂಡಿದೆಯಲ್ಲಾ ! ಸಾಮಾನ್ಯ ಮಾನವನು ಯಾವಾಗಲೋ ಸಾಯುತ್ತಿದ್ದ. ಅಸಾಮಾನ್ಯರಾದ ಈ ಮೊಸಳೆ ದೊರೆರಾಯರಿಗೆ ಏನು ಗ್ರಹ ಚಾರವೋ ! ದಿನಗಳೇನೂ ಅಷ್ಟು ಒಳ್ಳೆಯದಾಗಿ ಕಾಣುವುದಿಲ್ಲ," ಎಂದನು.

"ಛೀ ಇಷ್ಟೊಂದು ಸಾಮಾನ್ಯ ಮಾನವರ ಮುಂದೆ ಅವಮಾನಿತನಾಗಿ, ಪೆಟ್ಟು ತಿಂದುಕೊಂಡು ಬದುಕಿರುವುದಕ್ಕಿಂತ ಸಾವೇ ಮೇಲು ! ಎಲ್ಲಿ ನನ್ನ ಶೂಲವೆಲ್ಲಿ ! ಅದರ ಮೊನೆಗೆ ಎದೆಯೊಡ್ಡಿ......" ಎಂದು ಮಕರಕೇತು ಜಲಗ್ರಹದ ಮೇಲೆ ಶೂಲವನ್ನು





ಹುಡುಕತೊಡಗಿದನು. ಆಗ ಸಿದ್ಧಸಾಧಕನು ನಗಾಡುತ್ತ ತನ್ನ ಕೈಯಲ್ಲಿರುವ ಅವನ ಶೂಲವನ್ನು ಮೇಲೆಕ್ಕೆತ್ತಿ ಹಿಡಿದು, "ಓಯ್ ಮಕರಕೇತೂ! ನಿನ್ನ ಬುದ್ಧಿಗೆ ಮಂಕು ಕವಿಯಿತೆಂದು ಕಾಣುತ್ತದೆ. ನಿನ್ನ ಶೂಲವನ್ನು ನನ್ನ ಕೈಗೆ ತಂದುಕೊಂಡು ಬಹಳ ಹೊತ್ತಾಯಿತು ಬಿಡು!" ಎಂದನು.

ಮಕರಕೇತು ತುಂಬ ಕಳವಳ ಪಡುತ್ತ, ಎರಡು ಕೈಗಳನ್ನೂ ಮೇಲೆತ್ತಿ "ಹಾ! ಮಾಯಾ ಸರೋವರೇಶ್ವರಾ!" ಎಂದು ಕೂಗಿದನು. ಅದನ್ನು ಕೇಳಿ ಜಯಶೀಲನು ಆಶ್ಚರ್ಯದಿಂದ ಕಣ್ಣರಳಿಸಲು, ಮಕರಕೇತು, "ಈಗ ನಾನು ಏನು ಮಾಡಬೇಕೆನ್ನುವಿರಿ? ನನ್ನ ಹೊಟ್ಟೆಯಲ್ಲಿಯೂ ಭುಜದಲ್ಲಿಯೂ ಇಳಿದು ಪ್ರಾಣಕ್ಕೆ ಸಂಚಕಾರ ತರುವ ಈ ಕುತ್ತುಗಳಿಗೇನು ದಾರಿ? ಹೀಗೆಯೇ ಒದ್ದಾಡಿ ನಾನು ಸಾಯುವುದನ್ನು ನೋಡುತ್ತ ನೀವೆಲ್ಲ ಸಂತೋಷಪಡುವಂತೆ ನನ್ನ ಗತಿಯಾಯಿತಲ್ಲಾ! ಭೋ ಮಾಯಾ ಸರೋವರೇಶ್ವರಾ!" ಎಂದನು ದೀನನಾದವನಂ...

ಜಯಶೀಲನು ಚರಕಾಚಾರಿಯನ್ನು ಸಮೀಪ... ಕರೆದು, "ಆಚಾರೀ, ಈಗ ಇವನನ್ನು ಹೀಗೆಯೆ ಹಿರಣ್ಯಪುರದವರೆಗೂ ಕರೆದೊಯ್ಯಬಹುದೇ? ಏನು ನಿನ್ನ ಅಭಿಪ್ರಾಯ?" ಎಂದು ಕೇಳಿದ.

"ಜಯಶೀಲ ಪ್ರಭುಗಳೇ, ಹಾಗೆ ಮಾಡುವು... ಒಳ್ಳೆಯದಲ್ಲ. ಮೊದಲು ಶಸ್ತ್ರಪ್ರಯೋಗದಿಂ... ಕತ್ತಿಯ ತುಂಡನ್ನೂ ಬಾಣವನ್ನೂ ಕಿತ್ತುಹಾಕದಿ... ಮಕರಕೇತುವಿನ ಶವಮಾತ್ರವೇ ಹಿರಣ್ಯಪುರವ... ತಲಪೀತು. ಸಂದೇಹವಿದ್ದರೆ ವೀರನಾರಾಯಣನ... ಕೇಳಿರಿ" ಎಂದ ಚರಕಾಚಾರಿ.

"ಹೌದು, ಚರಕಾಚಾರ್ಯರು ಹೇಳಿದ್ದು ನಿ... ಇವನನ್ನು ಮೊದಲು ನಮ್ಮ ಹಳ್ಳಿಗೆ ಒಯ್ದು ಶ... ಚಿಕಿತ್ಸೆ ನಡೆಸಿ ಔಷಧವಿಟ್ಟು ಕಟ್ಟಬೇಕು. ಒಂದೆರ... ದಿನ ವಿಶ್ರಾಂತಿ ತೆಗೆದುಕೊಂಡ ಮೇಲೆ ಮಹಾರಾ... ಬಳಿಗೆ ಕರೆದುಕೊಂಡು ಹೋಗಬಹುದು." ಎಂದ ವೀರನಾರಾಯಣ.

ಜಯಶೀಲನಿಗೂ ಸಿದ್ಧಸಾಧಕನಿಗೂ ಹಾಗೆ ಮಾಡುವುದೇ ಒಳ್ಳೆಯದೆಂದು ತೋರಿತು. ಮಕ... ಕೇತುವನ್ನು ಜೀವದೊಂದಿಗೆ ಕನಕಾಕ್ಷರಾಜರ ಬಳಿಗೆ ಕರೆದುಕೊಂಡು ಹೋಗಿ ಅವನ ಬಾಯಿಂದಲೇ ರಾ... ಕುಮಾರ ಕುಮಾರಿಯರ ಸಂಗತಿ ಬರುವಂತೆಮಾ... ಬೇಕು. ಆಗ ಮಹಾರಾಜರೂ ತೃಪ್ತರಾಗಿ ಮುಂದೆ ಏನು ಮಾಡಬೇಕೆಂಬುದನ್ನು ನಿರ್ಣಯಿಸುತ್ತಾರೆ. ಅದಕ್ಕಾಗಿ ಮೊದಲು ಇವನಿಗೆ ಚಿಕಿತ್ಸೆಮಾಡುವುದೇ ಸರಿಯಾದುದು.

ಹೀಗೆ ಯೋಚಿಸಿ ಜಯಶೀಲನು ಸಿದ್ಧಸಾಧಕ... ನೊಂದಿಗೆ ಜಲಗ್ರಹ ಗಜದ ಮೇಲೇರಿಕೊಂಡನು. ಅವನು ಮಕರಕೇತುವಿನೊಂದಿಗೆ, "ಕೇತೂ, ನಿ... ಗೇನೂ ಪ್ರಾಣಭಯವಿಲ್ಲ. ಈಗ ನಿನ್ನನ್ನು ಮೊದಲು ಪಕ್ಕದಲ್ಲಿರುವ ಹಳ್ಳಿಗೆ ಕರೆದುಕೊಂಡುಹೋಗಿ

ಒಳ್ಳೆಯ ರೀತಿಯಲ್ಲಿ ಚಿಕಿತ್ಸೆ ಮಾಡಿಸುತ್ತೇವೆ. ಗಾಯಗಳು ಮಾಸಿದ ಮೇಲೆ ನಿನ್ನನ್ನು ಹಿರಣ್ಮಪುರಕ್ಕೆ ಕರೆದುಕೊಂಡು ಹೋಗುತ್ತೇವೆ. ಆಯಿತಷ್ಟೆ? ಅನಾವಶ್ಯಕ ಸಂದೇಹವನ್ನೂ ಭೀತಿಯನ್ನೂ ಇಟ್ಟುಕೊಳ್ಳಬೇಡ'' ಎಂದನು.

ಮಕರಕೇತು ಎರಡುಕೈಗಳನ್ನೂ ಮೇಲೆತ್ತಿ, "ಎಲ್ಲವೂ ಪ್ರಭು ಮಾಯಾಸರೋವರೇಶ್ವರನ ದಯೆ.'' ಎಂದು ಕಣ್ಣುಮುಚ್ಚಿ ಪ್ರಾರ್ಥಿಸಿ, ''ಅಯ್ಯಾ ಜಯಶೀಲಾ, ನಿನ್ನ ಪುಣ್ಯ. ದಾರಿಯಲ್ಲಿ ಇನ್ನಾದರೂ ಬೇಡರ ಭಡವ ಉಳಿದಿರುವ ಬಲಭುಜಕ್ಕೂ ಹಾನಿಗೀನಿ ಬಿಡದಂತೆ ಕಾಪಾಡಿರಿ. ಈ ಕಾಡಿನಲ್ಲಿ ಎಂತೆಂತಹ ಕೆಟ್ಟ ಜನರಿರುವರೋ?'' ಎಂದನು.

"ನೀನು ಮಾತ್ರ ಬಹಳ ಒಳ್ಳೆಯವನು! ಇರಲಿ. ಯಾವ ಭಯವನ್ನೂ ಇಟ್ಟುಕೊಳ್ಳದೆ ನಿನ್ನ ಜಲಗ್ರಹವನು ನಡೆಯಿಸು.'' ಎಂದ ಜಯಶೀಲ.

ಜಲಗ್ರಹವು ಕದಲಿತು. ಚರಕಾಚಾರಿ ತೋರಿಸುವ ಮಾರ್ಗದಲ್ಲಿ ಅದು ಹೋಗುವಂತೆ ಮಕರಕೇತು ಸನ್ನೆ ಮಾಡಿದನು. ಜಯಶೀಲನು ಏನೋ ಆಲೋಚನೆಯಲ್ಲಿದ್ದನು. ಮಕರಕೇತು ಎರಡು ಮೂರು ಸಾರಿ ಮಾಯಾ ಸರೋವರೇಶ್ವರನ ಹೆಸರನ್ನು ಹೇಳಿದ್ದಾನೆ. ಅದೂ ಬಹಳ ಭಕ್ತಿಯಿಂದ ದೇವರನ್ನು ಸ್ಮರಿಸಿದ ಹಾಗೆ! ಯಾರು ಆ ಮಾಯಾ ಸರೋವರೇಶ್ವರ? ಅಂತಹ ಒಂದು ದೇವರ ಹೆಸರನ್ನು ಇದುವರೆಗೂ ಕೇಳಿಲ್ಲವಲ್ಲ? ಅವನಿರುವುದೆಲ್ಲಿ? ಆ ಪ್ರದೇಶದ ವಿಶೇಷಗಳೇನು? ಅವನ ಶಕ್ತಿಗಳೇನು? ಇದನ್ನೆಲ್ಲ ತಿಳಿಯಲು ಏನು ಮಾಡಬೇಕು? ಮಕರಕೇತುವನ್ನು ಕೇಳಿ ಪ್ರಯೋಜನವಿಲ್ಲ. ಇವನು ಎಂದೂ ನಿಜ ಸಂಗತಿಯನ್ನು ಹೇಳಲಿಕ್ಕಿಲ್ಲ...

ಇದ್ದಕ್ಕಿದ್ದ ಹಾಗೆ ಜಯಶೀಲನ ಆಲೋಚನೆಗೆ ಭಂಗ ಬಂದಿತು. ಎಲ್ಲರ ಕಿವಿಗಳೂ ನೆಟ್ಟಗಾದುವು. ಎದುರುಗಡೆಯಲ್ಲಿರುವ ದಟ್ಟವಾದ ಮರಗಳ ಗುಂಪಿ



ನೊಳಗಿನಿಂದ ಢಕ್ಕೆಡಮರು ತಮಟೆಗಳೂ, ಸಿಳ್ಳುಗಳ ಶಬ್ದವೂ ಕೇಳಿಬರತೊಡಗಿದುವು.

ಯಾರವರು? ಎಂಥವರು? ಏನು ಮಾಡುತ್ತಿದ್ದಾರೆ? ಎಂದು ಜಯಶೀಲ ಮೊದಲಾದವರು ನೋಡುತ್ತಿರಲು, ಬೇಡರ ಜಾತಿಯ ದೆವ್ವಗಳ ಪೂಜಾರಿಯೊಬ್ಬನೂ, ಅವನನ್ನು ಸುತ್ತಿಕೊಂಡು ಆ ರೀತಿ ಶಬ್ದ ಮಾಡುವವರೂ ಮರಗಳ ಗುಂಪಿನಿಂದ ಹೊರಬಿದ್ದರು. ಅನೇಕರ ಕೈಯಲ್ಲಿ ಬಿಲ್ಲುಬಾಣಗಳಿದ್ದುವು. ಒಟ್ಟು ಹತ್ತು ಹನ್ನೆರಡು ಮಂದಿ ಬೇಡರದೊಂದು ಗುಂಪು.

ದೆವ್ವಗಳ ಪೂಜಾರಿ ಬಿಚ್ಚಿದ ತಲೆಗೂದಲು ಹಾರುತ್ತಿರಲು, ಕೋಪದಿಂದ ನೆಲ ಅಪ್ಪಳಿಸಿಕೊಂಡು ಹಾರುತ್ತ ಆರ್ಭಟಿಕೆಯ ದನಿಯಲ್ಲಿ, "ಬಲಿ! ಬಲಿ! ನಾನು ಬೇಡರ ಮಹಾಕಾಳಿ! ಮೊಸಳೆ ಮನುಷ್ಯನ ಕುತ್ತಿಗೆ ಕಟ್ಟುತ್ತೇನೆ! ಅವನ ಬಿಸಿ ರಕ್ತವನ್ನು ಮುಕ್ಕಳಿಸಿ ನನ್ನ ಪಾದಗಳನ್ನು ತೊಳೆಯುತ್ತೇನೆ.



ಹಾಗೆ ಮಾಡದೆ ನನಗೆ ಶಾಂತಿಯಿಲ್ಲ. ಯಾರು ತಪ್ಪಿಸುವಿರೋ ನೋಡುತ್ತೇನೆ. ತಪ್ಪಿಸಿದವರ ಕುಲವನ್ನೇ ತಿಂದು ತೀರಿಸುತ್ತೇನೆ. ಸರ್ವನಾಶ ಮಾಡಿಬಿಡುತ್ತೇನೆ..." ಎಂದು ಕೂಗುತ್ತಿದ್ದ.

ತನ್ನ ಜಾತಿಯವರನ್ನು ನೋಡುತ್ತಲೇ ಬೇಡರ ಭೀಮನಿಗೆ ಹೊಸ ಹುರುಪು ಬಂದು "ತಾಯೀ! ಮಾಂಕಾಳೀ!" ಎಂದು ಕೂಗಿದನು.

ಆಮೇಲೆ ಅವನು ಸಿದ್ಧಸಾಧಕನನ್ನು ನೋಡಿ, "ರಾಜಮಾಂತ್ರಿಕ ಪ್ರಭುಗಳೇ, ನಮ್ಮ ಗಣಾಚಾರಿ ಪೂಜಾರಿಗಳ ಮೇಲೆ ಮಹಾಕಾಳಿಯ ಆವೇಶವಾಗಿದೆ. ಆಕೆ ನಮ್ಮ ಕುಲದೇವತೆ. ಆ ತಾಯಿಗೆ ಈ ಮೊಸಳೆಯವನ ಕಂಠದ ರಕ್ತ ಬೇಕಂತೆ. ಕೂಡಲೇ ಅವನನ್ನು ಆನೆಯ ಮೇಲಿನಿಂದ ಕೆಳಕ್ಕೆ ದೂಡಿಸಿ ಬಿಡಿ. ಮುಂದಿನ ಕಾರ್ಯ ಗಣಾಚಾರಿಯವರೇ ನೋಡಿಕೊಳ್ಳುತ್ತಾರೆ." ಎಂದನು, ತನ್ನ ಕೈಯಲ್ಲಿದ್ದ ಬಿಲ್ಲಂಬುಗಳನ್ನು ಕುಣಿಸುತ್ತಾ.

ತಾನು ಬಿಸುಟ ಬಿಲ್ಲಂಬುಗಳನ್ನು ಅವನು ಹೆ
ಕೊಂಡು ಹೊರಟಾಗ ಜಯಶೀಲನು ಸುಮ್ಮ
ನಿದ್ದನು. ಆದರೆ ಈಗ ಮಕರಕೇತುವಿನ ಭಯ
ನಿಜವಾಗುವಂತೆಯೇ ಇದೆ! ಬೇಡರಗಣಾಚಾರಿಯ
ಆವೇಶವನ್ನು ನೋಡಿ ಬೇಡರ ಭೀಮನಿಗೂ ಆವೇ
ಬರತೊಡಗಿದೆಯೆಂದು ಜಯಶೀಲನಿಗೆ ತಿಳಿದು, ವೀ
ನಾರಾಯಣನಿಗೆ ಕಣ್ಣು ಸನ್ನೆ ಮಾಡಿದನು. ಅದ
ಅರ್ಥವನ್ನು ತಿಳಿದು ವೀರನಾರಾಯಣನು ಭೀಮ
ಕೈಯಲ್ಲಿದ್ದ ಬಿಲ್ಲಂಬುಗಳನ್ನು ಕಿತ್ತುಕೊಂಡು, ಅ
ನನ್ನು ಗಟ್ಟಿಯಾಗಿ ಹಿಡಿದುಕೊಂಡನು. ಅದೇ
ಸಮಯದಲ್ಲಿ ಜಯಶೀಲನು ಮಕರಕೇತುವಿನ ಕಿ
ಯಲ್ಲಿ ಏನೋ ಪಿಸುಗುಟ್ಟಿದನು.

ಮಕರಕೇತು ಹೆದರುತ್ತಲೇ, "ಜಲಗ್ರುಹಾ
ಆ ಕಾಡು ಬೇಡನನ್ನು ಸೊಂಡಿಲಿನಿಂದ ಸು
ಮೇಲೆತ್ತು!" ಎಂದು ಕೂಗಿ ಹೇಳಿದನು.

ಜಲಗ್ರುಹವು ತಲೆಯಾಡಿಸಿ ಕಿವಿಗಳನ್ನು ಫಡಫಡ
ಬಡಿದು ಮಿಂಚಿನವೇಗದಲ್ಲಿ ಹೋಗಿ ಬೇಡರ ಭೀಮ
ಸೊಂಟವನ್ನು ಸುತ್ತಿಹಿಡಿದು ಮೇಲಕ್ಕೆತ್ತಿತು. ಭೀಮ
ಕೈಕಾಲುಗಳನ್ನು ಆಡಿಸುತ್ತಾ ದಿಕ್ಕುಗಳು ಸೀಳು
ಹಾಗೆ ಕೆಟ್ಟ ದನಿಯಿಂದ ಕಿರಿಚತೊಡಗಿದನು.

"ಮಕರಕೇತೂ, ಈಗ ನಿನ್ನ ಜಲಗ್ರುಹವನ್ನು
ಬೇಡರ ಗುಂಪಿನ ಕಡೆಗೆ ನಡೆಸು. ನಿನ್ನ ಪ್ರಾಣ
ಯಾವ ಅಪಾಯವೂ ಬಾರದಂತೆ ನಾನು ನೋ
ಕೊಳ್ಳುತ್ತೇನೆ. ಒಳ್ಳೆಯ ರೀತಿಯಲ್ಲಿ ನಾನು ಹೇ
ದಂತೆ ಕೇಳಲು ಧೈರ್ಯವಿಲ್ಲದೆ ಹೋದರೆ ನಾನ
ಸಿದ್ಧಸಾಧಕನೂ ಅವರೆಲ್ಲರನ್ನೂ ಧ್ವಂಸಮಾಡಿಬಿ
ತ್ತೇವೆ." ಎಂದು ಹೇಳಿ, ಭೀಮನೊಂದಿಗೆ "ಎಲೋ
ಭೀಮಾ! ನಿನ್ನ ಕಡೆಯವರೆಲ್ಲಾ ಗಲಾಟೆ ಮಾಡ
ಹಿಂದಿರುಗಿ ಹೋಗಲು ಹೇಳು. ನಮ್ಮ ಮೇಲೆ
ಬಾಣಗೀಣ ಅಂತ ಏನಾದರೂ ಪ್ರಯೋಗಿ
ರಾದರೆ ಮೊದಲು ನೀನು ಜಲಗ್ರುಹದ ಕಾಲಡಿಯ

...ಹೋಗುವಿ. ಆಮೇಲೆ ನಿನ್ನವರನ್ನೆಲ್ಲಾ ನನ್ನ ...ದಿಂದ ಹಚ್ಚಿಹಚ್ಚಿ ಹೋಳು ಮಾಡಿ ರಾಶಿ ...ಕುತ್ತೇನೆ. ಯಾವ ಮಹಾಕಾಳಿಯೂ ನನ್ನನ್ನು ...ರಿಸಲಾರಳು !" ಎಂದ ಜಯಶೀಲ.

"ಜಯಶೀಲ ಪ್ರಭುಗಳೇ ! ಕಾಳಿದೇವಿಯ ...ಗೆ ವಿರುದ್ಧವಾಗಿ ಮಾತಾಡುವಿರಾ ? ಮಹಾ ...ಯಿ ಮೊಸಳೇ ಮುಖದವನ ನೆತ್ತರು ಬೇಕೆಂದರೆ, ...ದಕ್ಕೆ ವಿರೋಧ ತೋರಿಸಿದರೆ ಮಹಾದೇವಿ ಸುಮ್ಮ ...ವಳೇ ?" ಎಂದು ಭೀಮ ನಡುಗುವ ಸ್ವರ ...ದ ಅರಚಿದ.


"ಎಲೋ ಮಂಕು ಭೀಮಾ ! ನಿನ್ನ ತಲೆಹರಟೆ ...ಸು. ಈ ಮಕರಕೇತು ಮಹಾರಾಜರ ಖೈದಿ. ...ವನನ್ನು ರಕ್ಷಿಸಬೇಕಾದುದು ನನ್ನ ಬಾಧ್ಯತೆ. ನಾನು ...ರು ಗೊತ್ತೇ ? ಮಹಾಕಾಳಿಯನ್ನೇ ನುಂಗು ...ತಹ ಪ್ರಳಯಕಾಲದ ಕಾಲಭೈರವ ! ಅರ್ಥ ...ಯಿತೋ ? ನಾನು ಹೇಳಿದಂತೆ ಮಾಡು ಅವ ...ನ್ನು !" ಎನ್ನುತ್ತಾ ಜಯಶೀಲನು ಬಗ್ಗಿ ಕತ್ತಿಯ ಮೊನೆಯನ್ನು ಭೀಮನ ಬೆನ್ನಿಗೆ ತಾಗಿಸಿದನು.

"ಅಯ್ಯಯ್ಯೋ ! ಕತ್ತಿಯಿಂದ ನನ್ನನ್ನು ಚುಚ್ಚ ಬೇಡಿ. ಮಹಾಂಕಾಳಿಯ ಕೋರೆಗಳಿಗಿಂತಲೂ ನಿಮ್ಮ ಕತ್ತಿ ಹರಿತವಾಗಿದೆ ! ಅಯ್ಯೋ ! ನಾನೇನು ಮಾಡಲೀ ?" ಎಂದು ಭೀಮ ಕೂಗಿದ.

ಅಷ್ಟರಲ್ಲಿ ಅಲ್ಲಿಗೆ ಬೇಡರ ದೆವ್ವಗಳ ಪೂಜಾರಿ ಭಯಂಕರವಾಗಿ ಅರಚುತ್ತಾ, ಆರ್ಭಟಿಸುತ್ತಾ ಬಂದನು. ಅವನೊಂದಿಗಿದ್ದ ಬೇಡರು ಜಲಗ್ರಹದ ಮೇಲಿದ್ದವರನ್ನು ಗುರಿ ಹಿಡಿದು ಬಿಲ್ಲುಬಾಣ ಗಳೊಂದಿಗೆ ನಿಂತರು.

"ಜಯಶೀಲಾ ! ಈಗೇನು ಗತಿ ? ಏನು ಮಾಡೋಣ ? ಎನ್ನುತ್ತ ಮಕರಕೇತು ಗಡಗಡ ನಡುಗತೊಡಗಿದನು." ಹಾ ! ಮಾಯಾ ಸರೋವರೇಶ್ವರಾ !" ಎಂದು ಗೊಣಗಿಕೊಂಡನು.

"ಪ್ರಭುಗಳೇ ! ಈಗೇನು ಮಾಡೋಣ ?" ಎನ್ನುತ್ತ ಚರಕಾಚಾರಿಯೂ ವೀರನಾರಾಯಣನೂ ಬೋರಲಬಿದ್ದು ಅಡಗಲು ಪ್ರಯತ್ನಿಸಿದರು.



"ಎಲೋ ಭೀಮಾ! ನಾನೇನು ಹೇಳಿದೆ?" ಎಂದು ಗರ್ಜಿಸುತ್ತಾ ಜಯಶೀಲನು ಭೀಮನ ಬೆನ್ನಿನ ಮೇಲೆ ಆನಿಸಿದ ಕತ್ತಿಯನ್ನು ತುಸು ಒತ್ತಿದನು. ಅದೇ ಸಮಯದಲ್ಲಿ ಸಿದ್ಧಸಾಧಕನು "ಜೈ ಮಹಾಕಾಳಾ!" ಎಂದು ಕೂಗುತ್ತ ಕೈಯಲ್ಲಿದ್ದ ಶೂಲವನ್ನು ಎತ್ತಿ ಬೇಡರ ಗಣಾಚಾರಿಯ ಎದೆಗೆ ಗುರಿ ಹಿಡಿದನು.

ಭೀಮ ಎರಡು ಕೈಗಳನ್ನೂ ಎತ್ತಿ ನಡುಗುವ ಕಂಠದಿಂದ "ಓ ಹೋಯ್! ಗುಂಡು ಮಾವೋ! ಕೋಲು ಚಿನ್ನಪ್ಪೋ! ಬಾಣಾ ಹೊಡೀಬೇಡಿ. ಪೂಜಾರಿ ಗಣಾಚಾರೀರೇ! ಈ ಮೊಸಳೆ ತಲೆಯವ ಮಾರಾಜರ ಬಲಿಗೆ ಬೇಕಂತೆ. ಇವನನ್ನು ಜಯಶೀಲ ಪ್ರಭುಗಳು ರಾಜಾಧಾನಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಇವರು ನಿಜಕ್ಕೂ ಕಾಲಭೈರವರೇ ಆಗಿರಬಹುದು! ಸುಮ್ಮನೆ ಹಿಂದೆ ಹೋಗಿಬಿಡಿ! ನನ್ನನ್ನು ಸಾಯಿಸಬೇಡಿ. ದಯಾಮಾಡಿ ಹೋಗಿಬಿಡಿರಪ್ಪೋ!" ಎಂದನು.

"ನನ್ನ ಕಾಲಿಗೆ ಅವನ ರಕ್ತ ಮುಕ್ಕಳಿಸಿ ಉಗಿಯಬೇಕಲ್ಲ! ಹಾಗೆ ಮಾಡದೆ ನನಗೆ ಶಾಂತಿಯಿಲ್ಲ. ನಾನು ಕಾಳಿ! ಮಹಾಕಾಳಿ! ಬೇಡರ ಮಹಾಂಕಾಳಿ!" ಎಂದು ಕೂಗುತ್ತಾ, ಜಲಗ್ರುಹದ ಕಡೆಗೆ ಎರಡಡಿ ಮುಂದಿಟ್ಟನು ದೆವ್ವಗಳ ಪೂಜಾರಿ.

ಅವನ ಮೊಂಡುತನವೂ ಅಹಂಕಾರವೂ ಜಯಶೀಲನನ್ನು ತುಂಬ ಕೆರಳಿಸಿತು. ಅವನು ಒಮ್ಮೆಗೇ ಜಲಗ್ರುಹದ ಮೇಲಿನಿಂದ ಕೆಳಗೆ ಹಾರಿ, ಮಿಂಚಿನ ಹಾಗೆ ಆ ದೆವ್ವಗಳ ಪೂಜಾರಿಯ ಜಟ್ಟು ಓಡಿ ಕೊಂಡು, ಆಚೀಚೆ ಅಡಿಸಿ ನೆಲದ ಮೇಲೆ ಬೀಳಿಸಿ ಅವನ ಎದೆಯ ಮೇಲೆ ಕತ್ತಿಯನ್ನು ಚುಚ್ಚುವಂತೆ ನಿಲ್ಲಿಸಿ, "ಎಲೋ ಸುಳ್ಳಿನ ಪುಂಜ ಪೂಜಾರೀ!, ನಿಜ ಹೇಳು. ನಿನ್ನನ್ನು ಆವೇಶಿಸಿದ್ದು ಮಹಾಂಕಾಳಿಯಾ ಹುಳಿಹುಳಿ ಕಳ್ಳಾ?" ಎಂದು ಕೇಳಿದ.


"ಹೋ! ಮಹಾಂಕಾಳೀ! ನಿನ್ನನ್ನೇ ನಂಬಿದ ನನ್ನು ರಕ್ಷಿಸು! ರಕ್ಷಿಸು!" ಎಂದು ಗಣಾಚಾರಿ ಗಟ್ಟಿಯಾಗಿ ಕೂಗಿದ.

ಅವನ ಕಡೆಯ ಬೇಡರು ಬಾಣ ಪ್ರಯೋಗ ಮಾಡಲು ಸಿದ್ಧರಾಗುವುದರಲ್ಲಿ ಸಿದ್ಧಸಾಧಕನು "ಜೈ ಜೈ! ಮಹಾಕಾಳಾ!" ಎಂದು ಕೂಗುತ್ತಾ ಜಲಗ್ರುಹದಿಂದ ಕೆಳಗೆ ಹಾರಿ ಶೂಲವನ್ನೆತ್ತಿ ಅವನ ಕಡೆಗೆ ಓಡಿದನು.

ಮರುಕ್ಷಣದಲ್ಲಿ "ನಿಲ್ಲಿರಿ! ನಿಲ್ಲಿರಿ!" ಎಂದು ಉಚ್ಚ ಕಂಠದಿಂದ ಕೂಗುತ್ತಾ ಹತ್ತುಮಂದಿ ಕುದುರೆ ಸವಾರರು, ಈಟಿಗಳನ್ನು ಝಳಪಿಸುತ್ತಾ ಓಡಿಬಂದು ಅವರೆಲ್ಲರನ್ನೂ ಮುತ್ತಿಕೊಂಡರು.

(ಮುಂದುವರಿಯುವುದು)





# ಮಾಯಾಸರೋವರ


## ೧೧

[ ಕನಕಾಕ್ಷ ರಾಜನ ಮಗನನ್ನೂ ಮಗಳನ್ನೂ ಅಪಹರಿಸಿದವನು ಮಕರಕೇತುವೇ ಎಂದು ಜಯಶೀಲನಿಗೆ ಗೊತ್ತಾಯಿತು. ಅವನಿಗೆ ಚಿಕಿತ್ಸೆ ಮಾಡಿಸಿ ರಾಜನ ಬಳಿಗೆ ಕರೆದೊಯ್ಯಬೇಕೆಂದಿರುವಾಗಲೇ, ಕಾಡಿನ ಬೇಡರ ಗುಂಪೊಂದು ಅವರನ್ನು ಆಟಕಾಯಿಸಿತು. ಅಷ್ಟು ಹೊತ್ತಿಗೆ ಇದ್ದಕ್ಕಿದ್ದ ಹಾಗೆ ಎಲ್ಲಿಂದಲೋ ಹತ್ತು ಮಂದಿ ಅಶ್ವೀಕರು ಬಂದು ಅವರೆಲ್ಲರನ್ನೂ ಮುತ್ತಿಕೊಂಡರು.]

ಅಕಸ್ಮಾತ್ತಾಗಿ ತಮ್ಮೆಲ್ಲರನ್ನೂ ಸುತ್ತುಗಟ್ಟಿ ನಿಂತ ಅಶ್ವೀಕರು, ರಾಜನ ಸೇನೆಯ ವೀರರೆಂದು ಜಯಶೀಲನು ಗುರುತಿಸಿಕೊಂಡನು. ಆಗ ಅವನ ಮನಸ್ಸಿಗೆ ತುಂಬ ಹಗುರಾದಂತೆನಿಸಿತು.

ಕೂಡಲೇ ಅವನು ಎತ್ತಿ ಹಿಡಿದಿದ್ದ ಕತ್ತಿಯನ್ನು ಕೆಳಗಿಳಿಸಿ, ಅಶ್ವೀಕರನ್ನು ನೋಡಿ ಉತ್ಸಾಹದಿಂದ "ಓಹೋ! ನೀವೋ? ಸರಿಯಾದ ಸಮಯಕ್ಕೇ ಬಂದಿರುವಿರಿ. ಅಗೋ ನೋಡಿದಿರಾ, ವಿಚಿತ್ರವಾದ ಆನೆಯ ಆಕಾರದ ಪ್ರಾಣಿಯ ಮೇಲೆ ಮೊಸಳೆ ಆಕಾರದ ಮಾನವನೊಬ್ಬನು, ಇವನೇ ಕನಕಾಕ್ಷ ಮಹಾರಾಜರ ಬಂದೀಯಾಗಿ ನಮಗೆ ಸಿಕ್ಕಿದ್ದಾನೆ. ಇವನು ತಪ್ಪಿಸಿಕೊಂಡು ಹೋಗದಂತೆ ನೋಡಬೇಕು. ನೀವು ಬಂದುದು ಒಳ್ಳೆಯದಾಯಿತು." ಎಂದನು.

ಅಶ್ವೀಕದಳ ನಾಯಕನು ಮಕರಕೇತುವನ್ನೂ ಅದ್ಭುತ ಪ್ರಾಣಿಯಾದ ಜಲಗ್ರಹವನ್ನೂ ನೋಡಿ, ಆಶ್ಚರ್ಯದಿಂದ ಕೆಲವು ಕ್ಷಣ ಸ್ತಂಭೀಭೂತನಾದನು. ತಾನು ಯಾವುದೋ ಬೇರೆ ಲೋಕಕ್ಕೆ ಬಂದಂತೆ ಭ್ರಮೆ ಕವಿಯಿತೇನೋ! ಆಮೇಲೆ ಅರಿವಿಗೆ ಬಂದು ವಸ್ತುಸ್ಥಿತಿಯನ್ನು ಗ್ರಹಿಸಿ, "ಯಾರಿವನು? ಯಾವ ಲೋಕದ ಆನೆಯಿದು?" ಎಂದು ಕೇಳಿದನು.



"ಇವನು ರಾಕ್ಷಸದವನೂ ಅಲ್ಲ, ಪಿಶಾಚದವನೂ ಅಲ್ಲ. ಹಾಗಂತ ಯಾವ ಜಾತಿಯವನೆಂದು ಸರಿಯಾಗಿ ತಿಳಿದು ಹೇಳಲೂ ಸಾಧ್ಯವಿಲ್ಲ. ಅದೆಲ್ಲ ಇನ್ನು ಮುಂದಿನ ವಿಚಾರಣೆಯಲ್ಲಿ ಗೊತ್ತಾಗಬೇಕು. ಸದ್ಯ ಇವನು ನಮ್ಮ ಹಾಗೆಯೇ ಮಾತುಕತೆಯಾಡುತ್ತಾನೆ" ಎಂದ ಜಯಶೀಲ.

ಈ ಸಮಯದಲ್ಲಿ ಸಿದ್ಧಸಾಧಕನು ಏನು ಮಾಡುತ್ತಿದ್ದನೆಂದರೆ, ಜಯಶೀಲನ ಹಿಡಿಯಿಂದ ತಪ್ಪಿಸಿಕೊಂಡ ಬೇಡರ ಗಣಾಚಾರಿಯನ್ನು ಕೈಹಿಡಿದು ಸ್ವಲ್ಪ ದೂರ ಕರೆದೊಯ್ದು ನಿಲ್ಲಿಸಿ, ಬಿಲ್ಲಿಗೆ ಬಾಣ ಹೂಡಿ ನಿಂತಿದ್ದ ಬೇಡರ ಗುಂಪನ್ನು ನೋಡಿ, "ಎಲವೋ ಪಾಪದ ಬಡ ಬೇಡಬಾಂಧವರೇ, ನಿಮ್ಮ ಈ ಗಣಾಚಾರಿ ಒಬ್ಬ ವೇಷಧಾರಿ. ನಿಜವಾದ ಕಾಳಿಯ ಭಕ್ತನೇ ಅಲ್ಲ. ಮಹಾಕಪಟಿ. ಮಹಾಕಾಳನ ನಿಕಟ ಭಕ್ತನಾದ ನಾನು ಇವನನ್ನು ನೋಡಿದ ಕೂಡಲೇ ಈ ಸಂಗತಿಯನ್ನು ಕಂಡು ಹಿಡಿದುಬಿಟ್ಟೆ. ಇಂಥವನಿಗೆ ನಿಮ್ಮ ಕೈಯಿಂದಲೇ ಶಿಕ್ಷೆಯಾಗ... ನೀವೆಲ್ಲಾ ಇವನ ಗುಂಡಿಗೆಯೊಳಗೆ ತೂರಿಹೋಗು... ಹಾಗೆ ಬಾಣಗಳನ್ನು ಹೊಡೆಯಿರಿ. ನಾನೀಗ ಒಂ... ರಿಂದ ಮೂರರವರೆಗೆ ಹೇಳುತ್ತೇನೆ. ಮೂರು ಹೇ... ವಾಗ ನೀವು ಬಾಣಗಳನ್ನು ಬಿಡಬೇಕು !" ಎಂದ...

ಸಿದ್ಧ ಸಾಧಕನ ಮಾತನ್ನು ಕೇಳಿ ಬೇಡರೆಲ್ಲರ... ಹೆದರಿ ನಡುಗಿದರು. ಸುತ್ತಲೂ ಹತ್ತುವ... ರಾಜಭಟರು, ಕರ‍್ರಗಿನ ನಿಲುವಂಗಿಯ, ಉದ್ದವಾ... ಗಡ್ಡದ ಮಹಾಮಾಂತ್ರಿಕನಂತೆ ಕಾಣುವ ಸಿದ್ಧಸಾಧ... ಕತ್ತಿಯೊಂದಿಗೆ ನಿಂತಿರುವ ಜಯಶೀಲ, ಇವರೆ... ರನ್ನೂ ಮೀರಿಸುವಂತೆ ವಿಚಿತ್ರವಾದ ಆನೆಯ... ಆದರ ಮೇಲಿರುವ ಮೊಸಳೆಯಾಕಾರದವನೂ, ಅವ... ಗಾಯಗಳೂ. ಭಯಂಕರ ರೂಪವೂ ! ಇಂಥವ... ನ್ನೆಲ್ಲಾ ಗೆದ್ದುಕೊಂಡಂತೆ ಕಾಣುವ ಸಿದ್ಧಸಾಧಕನ ಅ... ಯಂತೆ, ತಾವು ತಮ್ಮ ಗಣಾಚಾರಿಯನ್ನೇ ಕೊ... ಬೇಕೇ ? ಕೊಲ್ಲದಿದ್ದರೆ ತಮ್ಮ ಗತಿ ಏನಾಗುವುದೋ !

ಈ ಭಯಂಕರಗಳ ನಡುವೆ ಸಿಕ್ಕಿಕೊಂಡು ಬೀ... ದೊಂದಿಗೆ ಪಾರಾಗಲು ಸಾಧ್ಯವಿಲ್ಲವೆಂದು ತರಗೆ... ಯಂತೆ ನಡುಗುತ್ತಿದ್ದ ಒಬ್ಬ ಬೇಡನು ತನ್ನ ಸಹ... ರನ್ನು ನೋಡಿ, "ಏನ್ರಪ್ಪೋಯ್, ಈಗ ಏ... ಮಾಡೋದು ? ಆ ದೊಡ್ಡ ಮಾಂತ್ರಿಕಯ್ಯ ಹೇ... ಹಾಗೆ ನಮ್ಮ ಗಣಾಚಾರೀ ಪೂಜಾರೀನ ಬಾಣಗಳಿ... ಹೊಡೆಯೋಣವಾ ? ಇಲ್ಲದಿದ್ದರೆ ನಮ್ಮನ್ನೆಲ್ಲ... ಕೊಂಧಾಕಿಬಿಡ್ತಾರೆ ಅಂತ ಕಾಣುತ್ತೆ. ದೊಡ್ಡ ರಾ... ಮಾಂತ್ರಿಕರ ಮಾತು ಕೇಳೋದೇ ಒಳ್ಳೇದು... ಏನಂತೀರಾ ? ಬೇಗ ಹೇಳಿಯಪ್ಪಾ!" ಎಂದ.

"ಹೌದು ಹೌದು. ನಾವಿಷ್ಟು ಮಂದೀ ಸಾಯು... ವುದಕ್ಕಿಂತ ಒಬ್ಬ ಮಾತ್ರ ಸಾಯುವುದು ನ್ಯಾಯವೇ... ಹೌದು. ಅಯ್ಯಾ. ನಮ್ಮ ಗಣಾಚಾರಿಗಳೇ, ಅವರು... ಹೇಳಿದ ಹಾಗೇ ನಿಮ್ಮ ಮೇಲೆ ಬಾಣಾ ಹೊಡೀತೇವೆ, ಕ್ಷಮಿಸಿಕೊಳ್ಳೀ" ಎಂದ ಇನ್ನೊಬ್ಬ ಬೇಡ.



ಆ ಮಾತು ಕೇಳಿದ ಕೂಡಲೇ ಗಣಾಚಾರಿ ಪ್ರಾಣ ಭಯದಿಂದ ತತ್ತರಿಸುತ್ತ ಜಯಶೀಲನನ್ನು ನೋಡಿ, "ಅಯ್ಯಾ! ನನ್ನನ್ನು ನಮ್ಮ ಬೇಡರ ಕೈಯಿಂದ ಕೊಲ್ಲಿಸಬೇಡೀ! ಅವರು ಹೇಳಿದ ಹಾಗೆ ಮಾಡಿಯೇ ಬಿಡುತ್ತಾರೆ. ಒಮ್ಮೆಲೇ ಅಷ್ಟೂ ಬಾಣಗಳಿಂದ ನನ್ನ ಸಾಯಿಸಬೇಡಿ ಸ್ವಾಮಿಾ? ರಕ್ಷಿಸಿ! ರಕ್ಷಿಸಿ!" ಎಂದು ಗೋಳಿಟ್ಟ.

"ರಕ್ತ ಕುಡೀತೆನೇ ಅಂತ ಬಾಯಿ ಬಾಯಿಬಿಟ್ಟವನಿಗೆ ಪುಡಿ ಬಾಣಗಳಿಂದ ತಪ್ಪಿಸಿಕೊಳ್ಳಲಾಗದೇನೋ ಕಪಟೀ? ನಿನ್ನ ಕಾಳೀ ನಿನ್ನನ್ನು ರಕ್ಷಿಸಲಿ. ಸಾಯಲಿಕ್ಕೆ ಸಿದ್ಧನಾಗು!" ಎಂದು ಗರ್ಜಿಸಿದ ಸಿದ್ಧಸಾಧಕ.


ಬೇಡರು ಮತ್ತೆ ಬಾಣಗಳ ಗುರಿಹಿಡಿದಾಗ ಜಯಶೀಲನು "ಸುಮ್ಮನಿರಿ!" ಎಂದು ಕಠೋರವಾಗಿ ಹೇಳಿ, ಸಿದ್ಧಸಾಧಕನನ್ನು ನೋಡಿ, "ಏನಿದು ಸಾಧಕಾ, ನಿನ್ನ ಸ್ವಾತಂತ್ರ್ಯ ಅತಿರೇಕವಾಯಿತು. ಏನು ಕೆಲಸವಿದು? ನೀನೇ ರಾಜನೆಂದುಕೊಂಡೆಯಾ ಮರಣಶಿಕ್ಷೆ ವಿಧಿಸಲಿಕ್ಕೆ?" ಎಂದು ಆಕ್ಷೇಪಿಸಿದನು ಕೋಪದಿಂದ.

ಜಯಶೀಲನ ಕೋಪವನ್ನು ನೋಡಿ ಸಿದ್ಧಸಾಧಕನು ಹೆದರಿ ವಿನಯದಿಂದ, "ಇದೆಲ್ಲಾ ನಿಜವೆಂದುಕೊಂಡೆಯಾ ಜಯಶೀಲಾ? ಈ ಠಕ್ಕಿನ ಗಣಾಚಾರಿಗೆ ಸ್ವಲ್ಪ ಬುದ್ಧಿ ಕಲಿಸಲಿಕ್ಕಾಗಿ ಹೀಗೆ ಮಾಡಿದೆ. ಮಹಾರಾಜರ ಕಡೆಯ ಅಶ್ವೀಕರು ಸಮಯಕ್ಕೆ ಬಾರದಿರುತ್ತಿದ್ದರೆ ಇಷ್ಟು ಹೊತ್ತಿಗೆ ನಾವೋ ಅಥವಾ ಈ ಬೇಡರ ಗಣಾಚಾರಿ ಮುಂತಾದವರೋ ಸಾಯುವ ಹಾಗೆ ಆಗುತ್ತಿತ್ತೋ ಇಲ್ಲವೋ? ಅಷ್ಟರಮಟ್ಟಿಗೆ ಹಾರಿಕೊಂಡಿದ್ದವನಿಗೆ ಬುದ್ಧಿ ಬರಬೇಕು ಹೇಗೆ?" ಎಂದನು.

"ಇವನಿಗೆ ಬುದ್ಧಿ ಕಲಿಸುವುದೇನು ಮಣ್ಣು!" ಎಂದ ಜಯಶೀಲ. ಇದನ್ನೆಲ್ಲಾ ನೋಡಿಕೊಂಡಿದ್ದ ಅಶ್ವೀಕ ದಳನಾಯಕನು ಜಯಶೀಲನನ್ನು ಕುರಿತು, "ಅಯ್ಯಾ, ಜಯಶೀಲರೆಂದರೆ ನೀವೇ ಏನು? ನಮ್ಮ ಮಂತ್ರಿಯವರು ಇಲ್ಲೇ ಸಮಿಾಪವಿರುವ ಗುಡ್ಡದ ಕೆರೇ ಹಳ್ಳಿಗೆ ಬಂದು ಬೀಡುಬಿಟ್ಟಿದ್ದಾರೆ. ನೀವು ನಮ್ಮ ರಾಜರ ಮಕ್ಕಳನ್ನು ಎತ್ತಿಕೊಂಡು ಹೋದವನನ್ನು ಹಿಡಿದಿರುವಂತೆ ನಗರಕ್ಕೆ ಸುದ್ದಿ ಬಂದಿತ್ತು. ನಿಮಗೆ ಸಹಾಯಕರಾಗಿ ಹುಡುಕುತ್ತಾ ಬಂದವರು ನಾವು." ಎಂದನು.

"ಹಾಗೇನು? ಬಹಳ ಒಳ್ಳೆಯದಾಯಿತು. ನಾನು ಜಯಶೀಲನ ಜತೆಗಾರ ಸಿದ್ಧಸಾಧಕ. ನಾವಿಬ್ಬರೂ ಕೂಡಿ ಯುವರಾಜ ಯುವರಾಣಿಯರನ್ನು ಎತ್ತಿಕೊಂಡುಹೋದ ಮಹಾ ಧೂರ್ತನನ್ನು ಈ ಅರಣ್ಯವನ್ನೆಲ್ಲಾ ಗಾಳಿಸಿ ಹಿಡಿದುಬಿಟ್ಟೆವು. ಅವನೇ ಇವನು! ಮನುಷ್ಯನಂತೆ ಕಾಣುವ ಮೊಸಳೇ ಸ್ವರೂಪಿ!" ಎಂದ ಸಿದ್ಧಸಾಧಕ.

"ಅಬ್ಬ! ನೋಡಲಿಕ್ಕೇ ಭಯೋತ್ಪಾದಕನಾಗಿದ್ದಾನೆ! ಸೊಂಟದಲ್ಲಿಯೂ ಭುಜದಲ್ಲಿಯೂ ಕತ್ತಿ



ಯನ್ನೂ ಬಾಣವನ್ನೂ ಆಭರಣಗಳ ಹಾಗೆ ಧರಿಸಿದ್ದಾನಲ್ಲ! ಎಂಥ ಆಶ್ಚರ್ಯವಿದು! ಇವನನ್ನು ಹೇಗೆ ಹಿಡಿದಿರಪ್ಪ!" ಎಂದ ಆಶ್ವೀಕದಳ ನಾಯಕ.

ಆಗ ಆನೆಯ ಮರೆಯಲ್ಲಿದ್ದ ವೀರನಾರಾಯಣನು ಮುಂದೆ ಬಂದು, "ಅವು ಆಭರಣಗಳಲ್ಲ. ಅವನ ಪ್ರಾಣ ತೆಗೆಯಬಲ್ಲ ಯಮನ ಆಯುಧಗಳೇ. ಹೇಗೋ ಜೀವ ಹಿಡಿದುಕೊಂಡಿದ್ದಾನೆ. ನಾನೂ ಇಲ್ಲಿಯ ಚರಕಾಚಾರಿಯವರೂ ಇವನನ್ನು ನಮ್ಮ ಗ್ರಾಮಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಬೇಕೆಂದಿದ್ದೇವೆ. ಮಹಾ ಮಂತ್ರಿಯವರೇ ನಮ್ಮ ಗ್ರಾಮಕ್ಕೆ ಬಿಜಯಮಾಡಿಸಿದ ಸಂಗತಿ ಕೇಳಿ ಬಹಳ ಸಂತೋಷವಾಯಿತು." ಎಂದು ಬಹು ಉತ್ಸಾಹದಿಂದ ಹೇಳಿದ.

ಇನ್ನು ಇಲ್ಲಿ ಸುಮ್ಮನೆ ಹರಟಿಕೊಂಡು ಕಾಲಯಾಪನೆ ಮಾಡುವುದು ಸರಿಯಲ್ಲವೆಂದು ಜಯಶೀಲನಿಗೆ ತೋರಿತು. ತಾನು ಆದಷ್ಟು ಭೇಗ ಗ್ರಾಮಕ್ಕೆ ಹೋಗಿ ಮಂತ್ರಿಯನ್ನು ನೋಡಿ ಸಂಗತಿ ಸಂದರ್ಭಗಳನ್ನು ಹೇಳಿಬಿಡುವುದು ಒಳ್ಳೆಯದೆನಿಸಿತು. ರಾಜಮಕ್ಕಳು ಅಷ್ಟೊಂದು ಬೇಗದಲ್ಲಿ ಸಿಗುವ ಹಾಗಿಲ್ಲವೆಂದು ಅವರಿಗೆ ಮುಂದಟ್ಟು ಮಾಡಿಸಬೇಕು. ಮೊದಲು ಈ ಮಕರಕೇತು ಸಾಯದಂತೆ ನೋಡಿಕೊಳ್ಳಬೇಕು. ಇವನ ಮುಖಾಂತರವಾಗಿಯೇ ಯುವರಾಜನೂ ಯುವರಾಣಿಯೂ ಎಲ್ಲಿರುವರೆಂಬುದನ್ನು ಇನ್ನುಮೇಲೆಯಷ್ಟೇ ತಿಳಿಯಬೇಕಾಗಿದೆ...

ಜಯಶೀಲನು ಹೀಗೆ ಆಲೋಚಿಸಿ ಮಕರಕೇತುವಿನೊಂದಿಗೆ, "ಮಕರಕೇತೂ, ಇನ್ನುಮೇಲೆ ನಿನಗೆ ಸ್ವಲ್ಪವೂ ಪ್ರಾಣಭೀತಿ ಬೇಡ. ಕನಕಾಕ್ಷ ಮಹಾರಾಜರೇ ನಿನ್ನ ಪ್ರಾಣವನ್ನು ಕಾಪಾಡಲಿಕ್ಕಾಗಿ ತಮ್ಮ ಮಂತ್ರಿಯವರನ್ನು ಕಳುಹಿಸಿದ್ದಾರೆ. ನಿನ್ನ ಚಿಕಿತ್ಸೆಗಾಗಿ ಅಗತ್ಯಬಿದ್ದರೆ ನಗರದಿಂದ ನಿಮಿಷ ಮಾತ್ರದಲ್ಲಿ ರಾಜವೈದ್ಯರನ್ನು ಕರೆಸಬಹುದು. ಇನ್ನು ನಾವು ಹೊರಡೋಣ" ಎಂದನು.

ಮಕರಕೇತು ಒಂದು ಸಾರಿ ದೊಡ್ಡದಾಗಿ ಶ್ವಾಸಬಿಟ್ಟು ನರಳಿ, "ಅಬ್ಬಾ! ಪಕ್ಕೆಯೊಳಗೆ ಹೊಕ್ಕ ಕತ್ತಿಗಿಂತಲೂ ಭುಜದಲ್ಲಿ ಚುಚ್ಚಿಕೊಂಡ ಈ ಬಾಣದ ನೋವು ಸಹಿಸಲಾಗದಂತಿದೆಯಲ್ಲಾ! ಈ ಬಾಣವನ್ನು ಬಿಟ್ಟ ಕ್ರೂರ ಬೇಡ ನನ್ನ ಜಲಗ್ರುಹದ ಸೊಂಡಿಲಿನಲ್ಲಿ ಸಿಕ್ಕು ಪ್ರಾಣಬಿಟ್ಟ ಹಾಗಿದೆ. ಅವನಲ್ಲಿ ಚಲನವೇ ಇಲ್ಲ. ಇವನನ್ನು ದೂರ ಬಿಸಟುಬಿಡುವಂತೆ ಜಲಗ್ರುಹಕ್ಕೆ ಹೇಳಲೇ?" ಎಂದು ಕೇಳಿದ.

ಜಯಶೀಲನು ಬೇಡರ ಭೀಮನ ಮುಖವನ್ನು ಪರೀಕ್ಷಿಸಿ ನೋಡಿದನು. ಅವನಲ್ಲಿ ಶ್ವಾಸಮಾಡುವ ಸೂಚನೆಯೇ ಕಾಣಲಿಲ್ಲ. ಭೀತಿಯ ಅತಿರೇಕತೆಯಿಂದ ಎದೆನಿಂತು ಸತ್ತುಹೋದನೇನೋ ಎಂಬ ಅನುಮಾನವುಂಟಾಯಿತು. ಜಯಶೀಲನು ಚರಕಾಚಾರಿಯ ಮುಖ ನೋಡಲು, ಚರಕಾಚಾರಿ ಓಡಿಬಂದು ಭೀಮನ ನಾಡಿಯನ್ನು ಪರೀಕ್ಷಿಸಿ ನೋಡಿ,


"ಇವನು ಸಾಯಲಿಲ್ಲ ಜಯಶೀಲ ಪ್ರಭುಗಳೇ. ಬದುಕಿರುವುದಕ್ಕೆ ಸೂಚನೆಯಾಗಿ ನಾಡಿ ಮಂದವಾಗಿ ಹೊಡೆದುಕೊಳ್ಳುತ್ತಿದೆ. ಮೊಸಳೆಯುವನು ಹೇಳುವಂತೆ ಇವನನ್ನು ದೂರ ಬಿಸುಟರೆ ಕೊಲೆಮಾಡಿದ ಹಾಗೆಯೇ ಸರಿ!" ಎಂದನು.


"ಜೀವವಿದ್ದವನನ್ನು ಜಜ್ಜಿ ಕೊಂದರೆ ಕೊಲೆಯಲ್ಲದೆ ಮತ್ತೇನಾದೀತು? ಹಾಗಾದರೆ ಇವನಿಗೆ ಚಲನ ಬರುವಂತೆ ಮಾಡುವುದು ಹೇಗೆ? ಇವನನ್ನು ಇವನ ಜಾತಿಯವರ ವಶಕ್ಕೇ ಕೊಟ್ಟು ನಾವು ಹೋಗೋಣ. ಅಲ್ಲದೆ ಇವನೂ ಒಬ್ಬ ರೋಗಿ ಎಂದು ಭಾವಿಸಿ ಗ್ರಾಮಕ್ಕೆ ಹೊತ್ತುಕೊಂಡು ಹೋಗಿ ಚಿಕಿತ್ಸೆ ಮಾಡಿಸುವ ಕಷ್ಟ ನಮಗೇಕೆ? ಇರುವ ಕಷ್ಟ ಸಾಲದೇನು?" ಎಂದ ಜಯಶೀಲ ಬೇಸರದಿಂದ.

"ನಾನೆಲ್ಲಾ ಸರಿ ಮಾಡುತ್ತೇನೆ" ಎನ್ನುತ್ತಾ ಸಿದ್ಧಸಾಧಕನು ಧಡಧಡ ಬಂದು ಬೇಡರಭೀಮನ ಕಿವಿಯ ಹತ್ತಿರ ಬಾಯಿ ಇಟ್ಟು ದೊಡ್ಡ ಕಂಠದಿಂದ, "ಎಲೋ ಭೀಮಾ! ನಿನ್ನ ಕೋಳಿ ಬಂತು! ಕಣ್ಣು ಬಿಡಿಸು! ನೋಡು. ಮಹಾ ಮಂತ್ರಿಯವರು ನೀನು ಹೊಡೆದ ಅಡವಿ ಕೋಳಿಯನ್ನು ಮೊಸಳೇಯವನ ಕೈಯಿಂದ ಕಿತ್ತು ಕೊಟ್ಟಿದ್ದಾರೆ. ಅದನ್ನು ಎಳೆದುಕೊಂಡು ನಿಮ್ಮ ಗಣಾಚಾರಿ ಓಡಿ ಹೋಗುತ್ತಿದ್ದಾನೆ. ನೋಡಲ್ಲಿ!" ಎಂದು ಹೇಳಿ ಗಟ್ಟಿಯಾಗಿ ಚಪ್ಪಾಳೆ ತಟ್ಟಿದನು.

ಮರು ಕ್ಷಣದಲ್ಲಿ ಬೇಡರ ಭೀಮ ಮಿಂಚಿನ ವೇಗದಲ್ಲಿ ಜಲಗ್ರಹದ ಸೊಂಡಿಲಿನೆಡೆಯಿಂದ ಕೆಳಗೆ ಹಾರಿ, ಸಮೀಪದಲ್ಲಿದ್ದ ಒಬ್ಬ ಆಶ್ವೀಕನ ಕೈಯಲ್ಲಿದ್ದ ಈಟಿಯನ್ನು ಎಳೆದುಕೊಂಡು, "ಎಲ್ಲಿ ಎಲ್ಲಿ ಆ ದೆವ್ವಗಳ ಪೂಜಾರಿ ಗಣಾಚಾರಿ! ನನ್ನ ಕೋಳಿ ಕೊಟ್ಟರೆ ಸರಿ, ಇಲ್ಲದಿದ್ದರೆ ಯಾರಾದರೂ ಸರಿಯೆ, ಕೊಂಧಾಕಿಬಿಡ್ತೇನೆ" ಎನ್ನುತ್ತಾ ಆಚೆ ಈಚೆ ನೋಡತೊಡಗಿದ.

ಸಿದ್ಧಸಾಧಕನು ಭೀಮನ ಭುಜವನ್ನು ತಟ್ಟಿ, "ಲೋ ಭೀಮಾ! ಇನ್ನೂ ನಿನ್ನ ಕಣ್ಣಿಗೆ ಕವಿದ ಮಂಜು ತೊಲಗಲಿಲ್ಲವೇ? ಇತ್ತ ನೋಡು, ಅವರೆಲ್ಲ ಯಾರು? ಅವರೆಲ್ಲರ ಮುಂದೆ ನಿಂತವನು ನಿಮ್ಮ ಗಣಾಚಾರಿಯಲ್ಲವೇ? ಸರಿಯಾಗಿ ನೋಡು, ಅದು





ನಿನ್ನ ಕೋಳಿ ಎಂಬುದನ್ನು ಹೇಳಿ ಒಪ್ಪಿಸಿ ತೆಗೆದುಕೋ" ಎಂದನು.

ಸಿದ್ಧಸಾಧಕನು ತೋರಿಸುವ ಕಡೆಯಲ್ಲಿ ನಿಂತಿರುವ ತನ್ನ ಜಾತಿಯವರನ್ನು, ಅವರೆಲ್ಲರ ಮುಂದೆ ಭಯದಿಂದ ನಡುಗುತ್ತಿರುವ ಗಣಾಚಾರಿಯನ್ನು ಕಣ್ಣು ತಿರುಗಿಸುತ್ತಾ ನೋಡಿದ ಬೇಡರ ಭೀಮ. ತನ್ನ ಕೋಳಿ ಅವನ ಕೈಯಲ್ಲಿಯೇ ಇದೆ ? ಅದಕ್ಕೇ ತನ್ನನ್ನು ನೋಡಿ ಹೆದರುತ್ತಾನೆ !

" ಮೊಸಳೆ ಪಿಶಾಚಿಯವನ ಕೈಯಿಂದ ಕಿತ್ತುಕೊಂಡ ನನ್ನ ಕೋಳಿ ಎಲ್ಲಿದೆ ? ಎಲ್ಲಿ ಅಡಗಿಸಿಟ್ಟೆ ಈ ಗಣಾಚಾರಿ ? ನಾನು ಹೊಡೆದ ಕೋಳಿ, ನನ್ನ ಹಸಿವಿಗೆ ತಪ್ಪಿಸಿ...ಬಿಡಲಾರೆ, ಬಿಡಲಾರೆ !" ಎನ್ನುತ್ತಾ ಭೀಮ ಈಟಿ ಕುಣಿಸುತ್ತಾ, ಗಣಾಚಾರಿಯ ಕಡೆಗೆ ಹಾರಿದ.

ಗಣಾಚಾರಿ ಕೆಟ್ಟ ದನಿಯಿಂದ ಕಿರಿಚಿ, "ಅಯ್ಯಯ್ಯೋ ! ನಮ್ಮವನನ್ನು ಕುಕ್ಕುಟ ಪಿಶಾಚಿ ಹಿಡಿಯಿತು ! ಅದಕ್ಕೆ ಮಾರ್ಜಾಲ ಮಂತ್ರ ಹಾಕಿದ ಹೊರತು ಉಳಿಗಾಲವಿಲ್ಲ. ಮೊದಲು ಅವನ ಈಟಿಯ ಗುರಿಯನ್ನು ತಪ್ಪಿಸಿಕೊಳ್ಳಬೇಕು. ಎಲ್ಲಾ ಓಡಿರಿ !" ಎಂದು ಕಿರಿಚಿ ಹಿಂದಿರುಗಿ ಓಡತೊಡಗಿದನು.

ಅವನ ಹಿಂದೆ ಉಳಿದ ಬೇಡರೂ ಓಡಲು ತೊಡಗಿದರು. ಭೀಮ ರೌದ್ರಾಕಾರಿಯಾಗಿ ಕೂಗುತ್ತಾ ಅವರ ಬೆಂಬತ್ತಿ ಓಡಿದ.

"ಎಲ್ಲಾ ತೊಲಗಿಹೋದರಪ್ಪ ! ಶನಿ ಬಿಡುಗಡೆಯಾಯಿತು." ಎಂದು ಸಿದ್ಧಸಾಧಕನು ನೆಗಾಡಿದನು. ಅವನನ್ನು ಕುರಿತು ಜಯಶೀಲನು, "ಈ ರಗಳೆಗೆಲ್ಲಾ ನೀನೇ ಬಾಧ್ಯನು. ಈ ಕಾಡಿನೊಳಗಿದ್ದು ಸಣ್ಣ ಪುಟ್ಟ ಹಕ್ಕಿಗಳನ್ನೂ ಪ್ರಾಣಿಗಳನ್ನೂ ಹೊಡೆದು ತಿಂದು ಬದುಕಿಕೊಂಡಿರುವ ಬೇಡರ ರಾಮನಿಗೆ ಭೀಮ ಅಂತ ಹೆಸರಿಟ್ಟು ಇಲ್ಲದ ಹೊಲ್ಲದ ಭ್ರಾಂತಿ ಹುಟ್ಟಿಸಿ ಕುಣಿಸುವುದೇನೂ ಚೆನ್ನಾಗಿಲ್ಲ ಬಿಡು. ಭೀಮ ಎಂಬ ಬಿರುದಿನಿಂದ ಅವನಲ್ಲೊಂದು ಅಹಂಕಾರವೇಳುವಂತಾಯಿತು !" ಎಂದನು.

"ನೀನು ಹೇಳುವುದರಲ್ಲಿ ಸ್ವಲ್ಪ ನಿಜವೂ ಇದೆ ಜಯಶೀಲಾ. ಆದರೆ ಈಗ ಆ ಮಾಯದ ಮಾರಿ ಗಣಾಚಾರಿಗೆ ಅವನೊಬ್ಬ ಸರಿಯಾದ ಪ್ರತಿಸ್ಪರ್ಧಿಯಾಗಿದ್ದಾನೆ. ಇನ್ನೀಗ ಅವರು ಪಾನಕದಲ್ಲಿ ಬರುವ ಕಡ್ಡೀಹಾಗೆ ನಮ್ಮ ಕಾರ್ಯಕ್ಕೆ ಅಡ್ಡ ಬರಲಾರರು." ಎಂದು ಸಮಾಧಾನ ಹೇಳಿದ ಸಿದ್ಧಸಾಧಕ.

"ಇನ್ನು ಹೊರಡಬಹುದೇ ಜಯಶೀಲ ನಾಯಕರೇ ?" ಎಂದು ಅಶ್ವದಳ ನಾಯಕನು ಕೇಳಲು, "ಹೊರಡೋಣ" ಎಂದು ಜಯಶೀಲನು ಚರಣಚಾರಿಯನ್ನೂ, ವೀರಾನಾರಾಯಣನನ್ನೂ ಬಳಿಗೆ ಕರೆದು, "ನೀವಿಬ್ಬರೂ ದಾರಿ ತೋರಿಸುತ್ತಾ ನಡೆಯಿರಿ. ಮಂತ್ರಿಯವರು ನಿಮ್ಮ ಗ್ರಾಮದಲ್ಲೇ ತಂಗಿದ್ದಾರಂತೆ. ಸುಮ್ಮನೆ ಸುತ್ತಿಬಳಸಿ ಹೋಗದೆ ಅಲ್ಲಿಗೆ ಸಮೀಪದ ದಾರಿಯಿಂದಲೇ ಸಾಗಿರಿ" ಎಂದನು. "ಮಹಾ ಮಂತ್ರಿಗಳು ಗ್ರಾಮದ ಹತ್ತಿರವಿರುವ


ಗುಡ್ಡದ ಕೆರೆಯ ಹತ್ತಿರ ಬೀಡುಬಿಟ್ಟಿದ್ದಾರೆ. ನೀವು ಈ ಅರಣ್ಯದಲ್ಲಿ ಸಿಕ್ಕಿದರೆ ಅಲ್ಲಿಗೇ ಕರೆತರುವಂತೆ ನಮಗೆ ಅಪ್ಪಣೆ ಕೊಟ್ಟಿದ್ದಾರೆ" ಎಂದ ಅಶ್ವೀಕದಳ ನಾಯಕ. "ಓಯ್ ಚರಕಾಚಾರಿ, ವೀರನಾರಾಯಣರೆ, ಕೇಳಿದಿರಷ್ಟೆ? ಆ ಗುಡ್ಡದ ಕೆರೆಯ ಬಳಿಗೇ ಸಾಗಿರಿ" ಎಂದ ಜಯಶೀಲ.

"ಆದೇ ದಾರಿ ಹಿಡಿದಿದ್ದೇವೆ ಜಯಶೀಲ ಪ್ರಭುಗಳೇ. ಅದ್ಭುತರೂಪಿಯಾದ ಈ ಮೊಸಳೇಯಾಕಾರದವನಿಗೆ ಮಂತ್ರಿಗಳ ಸಮಕ್ಷಮದಲ್ಲೇ ಶಸ್ತ್ರಚಿಕಿತ್ಸೆ ನಡೆಸಿ ಭೇಷ್ ಅನ್ನಿಸಿಕೊಳ್ಳುತ್ತೇವೆ!" ಎಂದ ಚರಕಾಚಾರಿ.

"ಹೌದಯ್ಯ, ಚರಕಾಚಾರಿಯವರೆ, ಆ ವಿಧವಾಗಿ ನಮಗೆ ಕನಕಾಕ್ಷ ಮಹಾರಾಜರ ದರಬಾರಿನಲ್ಲಿ ವೈದ್ಯಾಚಾರ್ಯರಾಗುವಂಥ ಸುಯೋಗವೂ ಬರಬಹುದು. ಏನಂತೀರಿ?" ಎಂದ ವೀರನಾರಾಯಣ ಸಂಭ್ರಮಾವೇಶದಿಂದ. "ಸಾಕುಬಿಡಿ! ನಿಮ್ಮ ಆತುರ ಆಶೆಗಳಿಗೇನೂ ಕಡಮೆಯಿಲ್ಲ. ಆಚಾರ್ಯ ಪದವಿಗಳೆಲ್ಲ ಆಮೇಲಿನ ಮಾತು. ಈಗ ನೀವು ಶಸ್ತ್ರಚಿಕಿತ್ಸೆಯಿಂದ ಈ ಮಕರಕೇತುವಿನ ಪ್ರಾಣವನ್ನು ಕಾಪಾಡಲಾರದೆ ಹೋದ ಪಕ್ಷದಲ್ಲಿ ಮಂತ್ರಿಯವರೇ ನಿಮ್ಮಿಬ್ಬರನ್ನೂ ಕೊಳದ ದಂಡೆಯಲ್ಲೇ ತಲೆ ಹಾರಿಸಿಬಿಡುತ್ತಾರೆ! ನೆನಪಿಟ್ಟುಕೊಳ್ಳಿ!" ಎಂದ ಜಯಶೀಲ.

"ಅಂಥಾ ಕೆಲಸವನ್ನು ಮಂತ್ರಿಯವರು ನನಗೇ ಒಪ್ಪಿಸಿಬಿಟ್ಟರೆ ಇವರಿಬ್ಬರನ್ನೂ ಸಮಂತ್ರಕವಾಗಿ ಮಹಾ ಕಾಲನಿಗೆ ನಾನೇ ಬಲಿ ಕೊಡುತ್ತೇನೆ. ಇಂತಹ ವಿಶೇಷ ವ್ಯಕ್ತಿಗಳನ್ನು ಬಲಿಕೊಡುವುದರಿಂದ, ಮಹಾಕಾಲನ ಅಮೋಘ ದಯೆಗೆ ಪಾತ್ರರಾಗಿ ನಮಗೂ ಲೋಕಕ್ಕೂ ಕ್ಷೇಮವಾಗುತ್ತದೆ!" ಎಂದ ಸಿದ್ಧಸಾಧಕ ಆತ್ಮಾವೇಶದಿಂದ.

"ಸುಮ್ಮನೆ ಮಾತಾಡಬೇಡಿ. ದಾರಿಯಲ್ಲಿ ಲಕ್ಷ್ಯವಿರಲಿ!" ಎಂದ ಜಯಶೀಲ. ಎಲ್ಲರೂ ಬಾಯಿ ಮುಚ್ಚಿಕೊಂಡರು. ಸುಮಾರು ಅರ್ಧ ಗಂಟೆ ಹೊತ್ತು ನಡೆಯುವಷ್ಟರಲ್ಲಿ ಮಂತ್ರಿ ಮುಂತಾದವರು ಬಿಡಾರ ಮಾಡಿದ ಸ್ಥಳವು ಸಮೀಪಿಸಿತು.



ಇವರ ಬರುವಿಕೆಯನ್ನು ನೋಡಿ ಮಹಾ ಮಂತ್ರಿ ಧರ್ಮಮಿತ್ರನು ಮುಂದೆ ಬಂದು, ಕುತೂಹಲದಿಂದ ಜಲಗ್ರಹ ಮೊದಲಾದ ಎಲ್ಲವನ್ನೂ ನೋಡಿ ತಲೆ ದೂಗುತ್ತ ಜಯಶೀಲನೊಂದಿಗೆ ಸಾದರವಾಗಿ, "ಬಾ ಜಯಶೀಲಾ, ಮಹಾರಾಜರ ಮಕ್ಕಳನ್ನು ಅಪಹರಿಸಿದವನನ್ನು ಹಿಡಿದಿರುವುದಕ್ಕಾಗಿ ನಿನ್ನನ್ನು ಅಭಿನಂದಿಸುತ್ತೇನೆ. ಆ ದುಷ್ಟನು ಇವನೇ ಏನು ? ಅವರನ್ನು ಎಲ್ಲಿ ಅಡಗಿಸಿಟ್ಟಿದ್ದಾನೇ ?" ಎಂದು ಕೇಳಿದನು.

ಜಯಶೀಲನು ಮಂತ್ರಿಗೆ ನಮಸ್ಕಾರ ಮಾಡಿ, ಎಲ್ಲಾ ವಿಷಯಗಳನ್ನೂ ಸಂಕ್ಷೇಪವಾಗಿ ಹೇಳಿ, "ಅಯ್ಯಾ, ಮೊದಲು ಇವನಿಗೆ ಶಸ್ತ್ರಚಿಕಿತ್ಸೆಯಾಗಬೇಕು. ಆ ತುಂಡುಗತ್ತಿಯನ್ನೂ ಬಾಣವನ್ನೂ ಎಳೆದು ಔಷಧೋಪಚಾರವಾಗಬೇಕು. ಗಾಯಗಳು ವಾಸಿಯಾದ ಮೇಲೆ ಅವನನ್ನು ಪ್ರಶ್ನಿಸಿ ಉಳಿದ ಸಂಗತಿಯನ್ನು ತಿಳಿಯಬೇಕಾಗಿದೆ" ಎಂದನು.


"ಹಾಗೇ ಮಾಡೋಣ. ಆಮೇಲೆ ನಿಜಸಂಗತಿ ಹೇಳದೆಹೋದರೆ ಈ ಮೊಸಳೇ ಮುಸುಗಿನ ಮೋಸಗಾರನನ್ನು ಆನೆಗಳಿಂದಲೇ ತುಳಿಸಿ ಸಾಯಿಸಿ ಬಿಡೋಣ! ಘಾತುಕದವನು!" ಎಂದ ಮಂತ್ರಿ ಮಕರಕೇತುವನ್ನು ಕೋಪದಿಂದ ನೋಡುತ್ತಾ.

ಈ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಾ ಇದ್ದ ಮಕರಕೇತು, ಜಯಶೀಲನನ್ನು ನೋಡಿ, "ಅಯ್ಯಾ, ಜಯಶೀಲಾ, ಈ ಜಲಗ್ರಹವು ನೀರು ಕುಡಿದು ಬಹಳ ದಿನಗಳಾಯಿತು. ಈ ಕೆರೆಯನ್ನು ನೋಡಿ ಇದು ತಾಳಲಾರದಾಗಿದೆ. ಇದನ್ನು ಕೆರೆಯೊಳಗಿಳಿಸಿ ಸ್ವಲ್ಪ ನೀರು ಕುಡಿಸಬೇಕು." ಎಂದನು.

"ಹಾಗೇ ಮಾಡು. ನಾನೂ ಸಿದ್ಧಸಾಧಕನೂ ನಿನ್ನ ಪಕ್ಕದಲ್ಲೇ ಜಲಗ್ರಹದ ಮೇಲಿರುತ್ತೇವೆ. ಹಾಗಿಲ್ಲದಿದ್ದರೆ ನಿನ್ನನ್ನು ನಂಬುವುದು ಹೇಗೆ?" ಎಂದು ಹೇಳಿ ಜಯಶೀಲನು ಜಲಗ್ರಹದ ಮೇಲೆ ಹತ್ತಿ ನಿಂತುಕೊಂಡನು. ಸಿದ್ಧಸಾಧಕನೂ ಅದರ ಮೇಲೆ ಹತ್ತಿ ಜಯಶೀಲನ ಬದಿಯಲ್ಲೇ ನಿಂತನು.

ಮಕರಕೇತು ಜಲಗ್ರಹವನ್ನು ನಡೆಯಿಸುತ್ತಾ ಹೋಗಿ ಅದನ್ನು ಕೆರೆಯೊಳಗಿಳಿಸಿ, "ಜಯಶೀಲಾ! ನನಗೆ ಹೇಗಿದ್ದರೂ ಮರಣವು ತಪ್ಪುವಂತಿಲ್ಲ. ಅದು ನನ್ನ ಗಾಯಗಳು ವಾಸಿಯಾದ ಮೇಲೆ ಬಂದರೂ ಒಂದೇ, ಮೊದಲು ಬಂದರೂ ಒಂದೇ!" ಎಂದು ಹೇಳಿ ದೊಡ್ಡ ಕಂಠದಿಂದ "ಹೇ! ಮಾಯಾ ಸರೋವರೇಶ್ವರಾ!" ಎಂದು ಕೂಗಿ, "ಜಲಗ್ರಹಾ! ಮುಳುಗಿ ದಾರಿ ಹಿಡಿ!" ಎಂದನು. ಏನಾಯಿತೆಂದು ತಿಳಿಯುವದರೊಳಗೇ ಜಲಗ್ರಹವು ನೀರಿನೊಳಗೆ ಮುಳುಗಿತು. ಅದರೊಂದಿಗೆ ಮಕರಕೇತು, ಜಯಶೀಲ, ಸಿದ್ಧಸಾಧಕರೂ ಮುಳುಗಿದರು.

(ಮುಂದುವರಿಯುವುದು)





January 1977

# ಮಾಯಾ ಸರೋವರ

೧೨

[ಆಶ್ವಿಕ ಭಟರ ಮೂಲಕ ಜಯಶೀಲನಿಗೆ ಮಂತ್ರಿ ಧರ್ಮಮಿತ್ರನು ಅಲ್ಲಿಗೆ ಸಮೀಪದಲ್ಲಿ ಬಂದು ತಂಗಿರುವ ಸಂಗತಿ ಗೊತ್ತಾಯಿತು. ಮಕರಕೇತುವನ್ನು ಅಲ್ಲಿಗೇ ಸಾಗಿಸಿಕೊಂಡುಹೋದನು. ಇನ್ನು ತನಗೆ ಉಳಿಗಾಲವಿಲ್ಲವೆಂದು ಗ್ರಹಿಸಿದ ಮಕರಕೇತು, ತನ್ನ ಆನೆಗೆ ನೀರು ಕುಡಿಸುವ ನೆವನದಲ್ಲಿ ಕೆರೆಯೊಳಗೆ ಇಳಿಸಿ, ಆನೆಯ ಮೇಲಿದ್ದ ಜಯಶೀಲ ಮತ್ತು ಸಿದ್ಧಸಾಧಕರೊಂದಿಗೆ ಒಮ್ಮೆಗೇ ಆನೆಯನ್ನು ಮುಳುಗಿಸಿದನು.]

...ಕರಕೇತುವಿನ ವಿಚಿತ್ರ ವಾಹನವಾದ ಆ ಜಲ ...ಮೆಂಬ ಆನೆ ನೀರಿನಲ್ಲಿ ಮುಳುಗಿದ್ದು ಮಾತ್ರವಲ್ಲ, ... ಮೇಲಿದ್ದವರನ್ನು ಅಲುಗಾಡಲು ಸಾಧ್ಯವಿಲ್ಲ ...ಷ್ಟು ಕಡು ವೇಗದಲ್ಲಿ ನೀರಿನೊಳಗೆ ಹೋಗುತ್ತಿತ್ತು. ...ಯಶೀಲನಿಗೂ ಸಿದ್ಧಸಾಧಕನಿಗೂ ಅದರಿಂದ ...ಗಡೆಯಾಗಿ ಮೇಲಕ್ಕೆ ತೇಲಿ ಬರುವ ಅವಕಾಶವೇ ...ದಷ್ಟು ವೇಗವಿತ್ತು ಅದಕ್ಕೆ.

... ಆಕಸ್ಮಿಕ ಜಲಗಂಡದಲ್ಲಿ ತಮ್ಮ ಇತಿಶ್ರೀಯಾ...ಯೇ ಅವರಿಗೆ ತೋರಿತು. ಜಯಶೀಲನು ... ಬುದ್ಧಿಗೇಡಿತನಕ್ಕೆ ತಲೆ ಚಚ್ಚಿಕೊಂಡನು. ಸಿದ್ಧಸಾಧಕನು "ಹೋ! ಮಹಾಕಾಳಾ!" ಎಂದು ಗಟ್ಟಿಯಾಗಿ ತನ್ನ ಇಷ್ಟದೈವವನ್ನು ನೆನೆದು ಕೂಗಿದನು.

ತನ್ನ ಹಿಂದೆಯೇ ಇರುವ ಅವನ ಕೂಗು ಜಯಶೀಲನಿಗೆ ಸ್ಪಷ್ಟವಾಗಿ ಕೇಳಿಸಿತು. ತನ್ನ ಮುಂದಿರುವ ಮಕರಕೇತು ಕೂಡಾ ಅವನ ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿದ್ದ. ಇದರಿಂದ ಜಯಶೀಲನಿಗೆ ಆಶ್ಚರ್ಯವೆನಿಸಿ ಯೋಚನೆ ಹರಿಯಿತು. ಹಾಗಾದರೆ ನೀರಿನ ಅಡಿಯಲ್ಲಿ ತನ್ನ ಶ್ರವಣ ಶಕ್ತಿ ದೃಷ್ಟಿ ಶಕ್ತಿಗಳಿಗೆ ಯಾವ ಕುಂದೂ ಬಂದಿಲ್ಲವೆಂದಾಯಿತು. ಇದು ಹೇಗೆ? ಕನಸೋ ನಿಜವೋ? ತಾನು ಹಿಡಿದ ಮಕರಕೇತುವೂ



ಜಲಗ್ರಹವೂ ತನ್ನನ್ನು ಬಂಧಿಸಿಕೊಂಡಂತೆ ಸ್ವೇಚ್ಛೆಯಾಗಿ ಓಡಾಡುತ್ತಿರುವುದು ಅನುಭವದ ಮುಂದಿರುವಾಗ ಕನಸು ಹೇಗಾದೀತು ?

ಜಯಶೀಲನು ಬುದ್ಧಿ ಮಂಕಾದವನಂತೆ, ಆವೇಶಗೊಂಡು ಮಕರಕೇತುವಿನ ಭುಜವನ್ನು ಹಿಡಿದು, "ಎಲೋ ದುಷ್ಟನೇ ! ಇದೆಂಥಾ ಕೆಲಸ ನಿನ್ನದು ? ನಾನು ಮನಸ್ಸು ಮಾಡಿದ್ದರೆ ಯಾವಾಗಲೋ ನಿನ್ನನ್ನು ಕೊಂದು ಹಾಕುತ್ತಿದ್ದೆ. ಅಂಥಾ ಕ್ರೂರ ನಾನಲ್ಲವೆಂದು ನಿನಗೆ ಗೊತ್ತಾಗಲಿಲ್ಲವೇನು? ಅದಕ್ಕೆ ಪ್ರತಿಫಲವಾಗಿ ನಮ್ಮನ್ನು ಹೀಗೆ ಕೊಲ್ಲಲು ನೋಡುವೆಯಾ ? ಏನು ನಿನ್ನ ಉದ್ದೇಶ ? ಕೊಲ್ಲುವ ಮೊದಲು ಸ್ಪಷ್ಟವಾಗಿ ಹೇಳಿಬಿಡು." ಎಂದನು. ನೀರಿನೊಳಗೆ ಮಾತೂ ಸ್ಪಷ್ಟವಾಗಿಯೇ ಹೊರಡುತ್ತಿತ್ತು,

ಮಕರಕೇತು ಗಟ್ಟಿಯಾಗಿ ನಗಲು ಬಾಯಿ ತೆರೆದು "ಅಯ್ಯೋ !" ಎಂದು ಹೊಟ್ಟೆ ಹಿಡಿದುಕೊಂಡು "ಆವೇಶ ಪಡಬೇಡ ಜಯಶೀಲಾ, ನಿನಗೇನಾದರೂ ಬುದ್ಧಿ ಭ್ರಮಣೆಯುಂಟಾಗಲಿಲ್ಲವಷ್ಟೆ ? ನಾವಿ... ಕೆರೆಯ ನೀರಿನಲ್ಲಿ ತಾಳೇಮರದಷ್ಟು ಆಳದಲ್ಲಿದ್ದ... ಮನುಷ್ಯನಾಗಿರುವವನು ಇಷ್ಟೊಂದು ... ಶ್ವಾಸೋಚ್ಛ್ವಾಸ ಮಾಡಿಕೊಂಡಿರ ಬಲ್ಲ... ಕೋಪಾವೇಶದಿಂದ ಮಾತಾಡ ಬಲ್ಲನೇ ? ... ನೋಡುವಾ !" ಎಂದನು.

ಈ ಪ್ರಶ್ನೆಗಳಿಗೆ ಜಯಶೀಲನ ಹಿಂದಿರುವ ... ಸಾಧಕನು ಆಶ್ಚರ್ಯದಿಂದ ಬಾಯಿಬಿಟ್ಟು, "... ಜಯಶೀಲಾ, ಇದೇನೋ ಅತ್ಯಾಶ್ಚರ್ಯವೇ ... ಕೆರೆಯಲ್ಲಿ ಸಮುದ್ರದಷ್ಟು ನೀರೇ ? ಇಷ್ಟಾ... ಇನ್ನೂ ಬದುಕಿದ್ದೇವೆ ! ಎಲ್ಲಾ ಆ ಮಹಾ... ದಯೆ !" ಎಂದ ಸುತ್ತಮುತ್ತಲೂ ನೋಡು... ಅವನಿಗೆ ನೀರಿನೊಳಗೆ ಎಲ್ಲಾ ಕಾಣುತ್ತಿತ್ತು.

ಆ ಬೆಟ್ಟದ ಕೆರೆಯ ಅಡಿ ಭಾಗದಲ್ಲಿರುವ ... ಬಗೆಯ ಜಲಚರ ಪ್ರಾಣಿಗಳು ಅವರ ಅಕ್ಕ... ಗಳಿಂದಲೇ ಈಜಿಕೊಂಡು ಹೋಗುತ್ತಿದ್ದುವು. ... ಗಳಲ್ಲಿ ದೊಡ್ಡ ದೊಡ್ಡ ಮೀನುಗಳು, ಮೊಸಳೆ... ಉದ್ದುದ್ದವಾದ ಹಾವುಗಳು ಚಿತ್ರವಿಚಿತ್ರವಾದ ... ಹಲವು ಬಗೆಯ ಜಲಜಂತುಗಳೂ ಅವರ ಕಣ್ಣಿ... ಬಿದ್ದುವು. ಜಲಗ್ರಹವು ಯಾವುದನ್ನೂ ಲಕ್ಷ್ಯಮಾಡ... ತಲೆಯೆತ್ತಿ ನೇರವಾಗಿ ಹೋಗುತ್ತಲೇ ... ನೋಡ ನೋಡುತ್ತಿದ್ದಂತೆ ಎದುರಿನಲ್ಲಿ ಒಂದು ... ನೀರಿನ ಅಡಿಯಲ್ಲಿ ಬೆಟ್ಟದ ಗುಹೆಯೊಳಗಿನಿಂದ ನೀರಿ... ರಾಶಿ ಭಾರಿ ಶಬ್ದದೊಂದಿಗೆ ಹೊರಗೆ ಉಕ್ಕಿಕೊಂ... ಬರುತ್ತಿದ್ದಿತು. ಆ ಸ್ಥಳವು ಮಹಾ ಅಲ್ಲಕಲ್ಲೋ... ವಾಗಿ ಮೈ ನಡುಗಿಸುವಂತಿದೆ !

ಮಕರಕೇತು "ಜಲಗ್ರಹಾ !" ಎಂದು ... ತನ್ನ ವಾಹನದ ತಲೆಗೆ ಕುಟ್ಟಿ ಸನ್ನೆ ಮಾಡಿದ... "ಜಯಶೀಲಾ, ಸಿದ್ಧ ಸಾಧಕಾ ! ಇಬ್ಬರ... ಮಾತಾಡುವುದಿಲ್ಲವೇಕೆ ? ನೀರಿನ ಅಡಿಯಲ್ಲಿದ್ದ... ನೀವು ಜೀವದಿಂದಿರುವ ಕಾರಣವು ಅರ್ಥವಾಯಿತೆ ?"


ಎಂದು ಕೇಳಿದ ಮಕರಕೇತು. ಜಯಶೀಲನು ಕೋಪದಿಂದ ಸರ್ರನೆ ಕತ್ತಿಯನ್ನೆತ್ತಿ, "ಅರ್ಥವಾಯಿತು. ನಿನ್ನನ್ನೂ ನಿನ್ನ ಜಲಗ್ರಹವನ್ನೂ ಅಂಟಿಕೊಂಡಿರುವವರೆಗೆ, ನಮಗೆ ಉಸಿರಾಡಿಸಿಕೊಂಡಿರಲು ಸಾಧ್ಯವಾಗುವುದೆಂದು ಗೊತ್ತಾಯಿತು. ಆದರೆ ಕ್ರೂರ ಘಾತಿಯವನೇ! ಸಾಯುವೆವೆಂದು ಹೆದರುವವರು ನಾವಲ್ಲ!" ಎಂದನು.


"ನಿನ್ನ ತಿಳುವಳಿಕೆ ಸರಿಯಾಗಿದೆ. ಹಾಗಾದರೆ ಕತ್ತಿಯನ್ನೆತ್ತಿಕೊಂಡೆ ಏಕೇ?" ಎಂದು ಕೇಳಿದ ಮಕರಕೇತು.

"ನಿನ್ನ ತಲೆ ಕಡಿಯಲಿಕ್ಕೆ. ನೀನು ಈಗ ಜಲಗ್ರಹವನ್ನು ನೀರಿನ ಮೇಲೆ ಒಯ್ಯುವಿಯೋ ಇಲ್ಲವೋ? ಒಯ್ಯದಿದ್ದರೆ ನಿನ್ನ ತಲೆ ಮುಂಡದಲ್ಲಿರಲಾರದು. ನನ್ನ ಕತ್ತಿ ಸಾಮಾನ್ಯವಾದುದಲ್ಲ! ಎಚ್ಚರ!" ಎಂದ ಜಯಶೀಲ ಕತ್ತಿ ಕುಣಿಸುತ್ತಾ.

ಅದೇ ವೇಳೆಯಲ್ಲಿ ಸಿದ್ಧಸಾಧಕನೂ ತನ್ನ ಶೂಲವನ್ನೆತ್ತಿ, "ಜೈ ಮಹಾಕಾಳಾ! ನೀರಿನ ಬುಡದಲ್ಲಿ ಮಹಾಕಾಳನಿಗೆ ದೊಡ್ಡ ಬಲಿಯನ್ನು ಕೊಟ್ಟ ಭಕ್ತ ಈವರೆಗೆ ಯಾರೂ ಇರಲಿಕ್ಕಿಲ್ಲ. ಆ ಮಹಾ ಅವಕಾಶವು ನನಗೇ ಸಿಕ್ಕಲಿ. ಜಯಶೀಲಾ! ಅಪ್ಪಣೆ ಕೊಡು!" ಎಂದು ಶೂಲವನ್ನು ಮಕರಕೇತುವಿನ ಕುತ್ತಿಗೆಯ ಕಡೆಗೆ ಆಡಿಸಿದನು.

ಮಕರಕೇತು ನಗಲು ಬಾಯ್ತೆರೆದು, ಶೂಲದ ಮೊನೆ ಚುಚ್ಚಿಕೊಂಡುದರಿಂದ, ಕೈಯಿಂದ ಅದನ್ನು ಬದಿಗೆ ತಳ್ಳಿ "ಮಹಾವೀರನಿಗೂ, ದೊಡ್ಡ ಮಹಾಕಾಲನ ಭಕ್ತನಿಗೂ ಬುದ್ಧಿ ಕೆಟ್ಟುಹೋಯಿತು. ನಾನು ಇನ್ನೆಷ್ಟು ಮಾತ್ರಕ್ಕೂ ಜಲಗ್ರಹವನ್ನು ನೀರ ಮೇಲಕ್ಕೆ ಸಾಗಿಸಿ ನಿಮ್ಮ ಬಂದಿಯಾಗಲಾರೆ. ಬಹುಶಃ ನಿನ್ನ ಆಜ್ಞೆಯನ್ನು ಮೀರುವುದಕ್ಕಾಗಿ ನೀನು ನನ್ನ ತಲೆ ಕಡಿಯುವಿಯೆಂದು ಕಾಣುತ್ತದೆ. ಆ ಮರುಕ್ಷಣದಲ್ಲಿ ನಿಮಗಿಬ್ಬರಿಗೂ ನೀರಿನಲ್ಲಿ ಬದುಕಿರುವ ಶಕ್ತಿ ಹೋಗುತ್ತದೆ. ನಲವತ್ತು, ಐವತ್ತು ಅಡಿಗಳಷ್ಟು ಆಳದಿಂದ ನೀವು ಜೀವದೊಂದಿಗೆ ಮೇಲೇಳಲು ಸಾಧ್ಯವಿಲ್ಲ. ನಿಮ್ಮಿಬ್ಬರ ಶವಗಳಷ್ಟೇ ನೀರ ಮೇಲೆ





ತೇಲಬಹುದು! ಅದನ್ನು ಯೋಚನೆ ಮಾಡಿ ನಿಮ್ಮ ಕೊಲೆ ನಡೆಸಿರಿ!" ಎಂದನು.

ಜಯಶೀಲನೂ ಸಿದ್ಧಸಾಧಕನೂ ಒಬ್ಬರನ್ನೊಬ್ಬರು ನೋಡಿಕೊಂಡರು. ಅವನ ಮಾತು ಯಥಾರ್ಥವೇ ಆದುದರಿಂದ, ತಾವೀಗ ಅವನ ಬಂದಿಗಳಾಗಿರುವ ನಿಜವೂ ತಿಳಿಯಿತು. ತಮ್ಮ ಧೈರ್ಯವೂ ವೀರಪ್ರತಾಪಗಳೂ ವ್ಯರ್ಥವಾಗಿ ಹೋದುವು. ಈಗ ಇಬ್ಬರ ಮನಸ್ಸಿಗೂ ಭಯದ ಗಾಳಿ ಸೋಂಕಿತು.

ಈ ಸಮಯದಲ್ಲಿ ಜಲಗ್ರಹವು ನೀರಿನ ಪ್ರವಾಹವು ಧುಮುಕುತ್ತಿರುವ ಗುಹೆಯನ್ನೇ ಸಮೀಪಿಸುತ್ತಿರಲು, ಜಯಶೀಲನು ಕಿರಿಚುದನಿಯಲ್ಲಿ "ಹೋ! ಮಕರಕೇತೂ! ನೀನೀಗ ನಮ್ಮಿಬ್ಬರನ್ನೂ ಬಂದಿಯಾಗಿ ಹಿಡಿದುಕೊಂಡು ಎಲ್ಲಿಗೆ ಒಯ್ಯುತ್ತೀ? ಅದನ್ನಾದರೂ ಹೇಳಿಬಿಡು!" ಎಂದು ಕೇಳಿದ.

ಮಕರಕೇತು ಉತ್ತರಿಸುವುದರೊಳಗೆ ದೊಡ್ಡದೊಂದು ಮೊಸಳೆ ಒಂದು ಮಹಾ ಮೀನನ್ನು ಓಡಿಸುತ್ತಾ ಸಮೀಪಕ್ಕೆ ಬಂದಿತು. ಜಯಶೀಲನು ಕತ್ತಿಯಿಂದ ಆ ಮೊಸಳೆಯನ್ನು ತಿವಿಯಲು ನೋಡಿದನು. ಆಗ ಮಕರಕೇತು ಆ ಮೊಸಳೆಯ ಬಾಲವನ್ನು ಹಿಡಿದೆತ್ತಿ ಮೇಲಕ್ಕೂ ಕೆಳಕ್ಕೂ ಆಡಿಸಿ ದೂರ ಹೋಗಿ ಬೀಳುವಂತೆ ಬೀಸಿಬಿಟ್ಟನು. ಬಳಿಕ "ಜಯಶೀಲಾ, ನೀವಿಬ್ಬರೂ ನನ್ನ ಬಂದೀಗಳಲ್ಲ. ಅದೋ, ಅಲ್ಲಿ ಕಾಣುವ ಗುಹೆಯೊಳಗೆ ಜಲಗ್ರಹವು ಹೋಗಿ ಬೆಟ್ಟದ ಮೇಲಿರುವ ಜಲಾಶಯವನ್ನು ತಲಪುತ್ತಲೇ ಅಲ್ಲಿಂದ ನೀವು ನಿಮ್ಮ ದಾರಿ ಹಿಡಿದು ಹೋಗಬಹುದು. ನಿಮ್ಮನ್ನು ಕೊಲ್ಲುವುದರಿಂದ ನನಗೇನೂ ಆಗಬೇಕಾದುದಿಲ್ಲ." ಎಂದನು.

ಮಕರಕೇತುವಿನ ಮಾತು ಮುಗಿಯುವುದಕ್ಕೂ ಜಲಗ್ರಹವು ಗುಹೆಯೊಳಗೆ ಪ್ರವೇಶಿಸುವುದಕ್ಕೂ ಸರಿಹೋಯಿತು. ಈಗ ನಾಲ್ಕು ಸುತ್ತಲೂ ಕಗ್ಗತ್ತಲು. ಜಯಶೀಲನು ತಾನು ಆನೆಯ ಮೇಲಿನಿಂದ ಜಾರಿ ನೀರಿನಲ್ಲಿ ಹೊಡೆದುಕೊಂಡು ಹೋಗಬಹುದೆಂಬ ಭಯದಲ್ಲಿ ಮಕರಕೇತುವಿನ ಸೊಂಟವನ್ನು ಹಿಡಿದುಕೊಂಡನು. ಸಿದ್ಧಸಾಧಕನು "ಹೋ! ಮಹಾಕಾಳಾ! ರಕ್ಷ! ರಕ್ಷ!" ಎನ್ನುತ್ತಾ ಜಯಶೀಲನ ನಡುವನ್ನು ಸುತ್ತಿ ಹಿಡಿದುಕೊಂಡನು. ಏನೂ ತಿಳಿಯದಷ್ಟು ಜಲಾಂಧಕಾರವದು.

ನಾಲ್ಕಾರು ನಿಮಿಷಗಳಲ್ಲೇ ಜಲಗ್ರಹವು ಬೆಟ್ಟದ ಮೇಲಿನ ಜಲಾಶಯವನ್ನು ಸೇರಿಕೊಂಡಿತು. ಮಕರಕೇತುವಿನ ಆಜ್ಞೆಯಂತೆ ಜಲಗ್ರಹವು ನೀರಿನ ಮೇಲೆ ತೇಲಿ ಸೊಂಡಿಲನ್ನೆತ್ತಿ ದಿಕ್ಕುಗಳು ಪ್ರತಿಧ್ವನಿಸುವಂತೆ ಘೀಳಿಟ್ಟಿತು. ಇಬ್ಬರೂ ಆಕಾಶವನ್ನು ನೋಡಿ ಬದುಕಿನ ಮೇಲೆ ಆಶೆ ತಾಳಿದರು.

ಜಯಶೀಲನೂ ಸಿದ್ಧಸಾಧಕನೂ ಒಂದುಸಾರಿ ಬಲವಾಗಿ ಗಾಳಿಯನ್ನು ಹೀರಿಕೊಂಡು, ಜೀವದಿಂದುಳಿದು ವಾತಾವರಣ ನೋಡಿದುದಕ್ಕೆ ಸಂತೋಷಪಡುತ್ತ ನಾಲ್ಕು ಸುತ್ತಲೂ ನೋಡಿದರು. ನಾಲ್ಕು


...ತ್ತಲೂ ಎತ್ತರವಾದ ಬೆಟ್ಟಗಳೇ. ಮಧ್ಯದಲ್ಲಿರುವ ...ವೆ ಪೂರಾ ಜಲಮಯ. ಒಂದು ಕಡೆಯಲ್ಲಿ ...ಟ್ಟದ ಸೀಳಿಕೆಯಲ್ಲಿ ನೀರಿನ ಪ್ರವಾಹವು ಕವ...ಡೆದು ಮತ್ತೊಂದು ಕಡೆಗೆ ವೇಗವಾಗಿ ಸಾಗು...ತ್ತು. ಇದೇನಾದರೂ ಬೇರೆ ಲೋಕವಾಗಿರಬಹುದೆ?

ಇದನ್ನೆಲ್ಲಾ ನೋಡಿದ ಜಯಶೀಲನಿಗೆ ಒಂದು ...ನುಮಾನ ಉಂಟಾಯಿತು. ಮಕರಕೇತು ಆಗಾಗ "...ಸರೋವರೇಶ್ವರಾ!" ಎಂದು ಕೂಗುತ್ತಿದ್ದನಷ್ಟೇ, ... ಸರೋವರವೇ ಇದಾಗಿರಬಹುದೆ? ಅವನ ...ರೋವರೇಶ್ವರನು ಇಲ್ಲೆಲ್ಲಾದರೂ ಇರುವನೆ?

ಜಯಶೀಲನು ತನ್ನ ಅನುಮಾನವನ್ನು ಮಕರ...ತುವಿನೊಡನೆ ಹೇಳಿದನು. ಅದಕ್ಕೆ ಮಕರಕೇತು, "ನಿನ್ನ ಅನುಮಾನ ತಪ್ಪು. ನಮ್ಮ ರಾಜನಾದ ...ರೋವರೇಶ್ವರನಿರುವ ಸರೋವರವು ಇದಲ್ಲ. ...ದನ್ನು ನೋಡಿದ ಮಾನವ ಮಾತ್ರರು ಯಾರೂ ...ವರೆಗೂ ಆ ಸ್ಥಳದಿಂದ ತಿರುಗಿ ಬಂದಿಲ್ಲ. ...ರುವುದೂ ಸಾಧ್ಯವಿಲ್ಲ!" ಎಂದನು.

"ಹಾಗಾದರೆ ನಮ್ಮನ್ನು ಅಲ್ಲಿಗೇ ಕರೆದುಕೊಂಡು ...ೋಗುವೆಯಾ?" ಎಂದು ಕೇಳಿದ ಜಯಶೀಲ.


ಮಕರಕೇತುವಿನ ಬಾಯಿಯಿಂದ ಹೌದೆಂಬ ಉತ್ತರ ...ರಟ ಮರುಕ್ಷಣವೇ ಶೂಲದಿಂದ ಚುಚ್ಚಿಕೊಲ್ಲಲು ...ಸಾಧಕನು ಹಿಂದಿನಿಂದ ಅವನ ಬೆನ್ನಿಗೆ ನೇರಾಗಿ ...ಲವನ್ನು ಗುರಿ ಹಿಡಿದಿದ್ದನು. ಅದನ್ನು ಗಮನಿಸಿದ ...ರಕೇತು, ಸ್ವಲ್ಪ ಕೂಡಾ ಗಾಬರಿಯಾಗದೆ, "...ವಿಬ್ಬರೂ ತುಂಬ ಅವಸರಬುದ್ಧಿಯವರು. ಕಾಡಿ...ಲ್ಲಿ ಸುಮ್ಮ ಸುಮ್ಮನೆ ನನ್ನನ್ನು ಹಿಡಿದುಕೊಂಡು ...ಲ್ಲಾ ರಗಳೆಗಳಿಗೆ ಕಾರಣರಾದಿರಿ. ಪಕ್ಕೆಯಲ್ಲಿ ...ಕ್ಕ ಕತ್ತಿ ಸಾಲದ್ದಕ್ಕೆ ಆ ಬೇಡನಿಂದ ಬಾಣ ...ಡೆಸಿ ಭುಜದಲ್ಲಿ ಚುಚ್ಚಿಸಿದಿರಿ. ನಿಮಗೆ ಈಜಲು ...ರುವುದಷ್ಟೇ? ಹೆಚ್ಚು ದೂರ ಈಜಲು ಸಾಧ್ಯ...ಗದಿದ್ದರೆ, ಬೆಟ್ಟದ ಮೇಲಿನಿಂದ ಉರುಳಿಕೊಂಡು



ಮರಗಳೋ ಕೊಂಬೆಗಳೋ ನೀರಿನೊಂದಿಗೆ ಬರುತ್ತವೆ. ಅಂತಹ ಏನಾದರೂ ಹಿಡಿದುಕೊಂಡು ಜೀವ ಕಾಪಾಡಿಕೊಳ್ಳಿ! ಇನ್ನು ನಿಮ್ಮ ಗೊಡವೆ ನನಗಿಲ್ಲ." ಎಂದವನೇ "ಹೋ! ಜಲಗ್ರಹಾ!" ಎಂದು ಕೂಗಿ ಆನೆಗೆ ಸನ್ನೆ ಮಾಡಿದನು.

ಜಲಗ್ರಹವು ಭೋಳಮ್ಮನೆ ನೀರಿನಲ್ಲಿ ಮುಳುಗಲು, ಜಯಶೀಲನು ಸಿದ್ಧಸಾಧಕನಿಗೆ ಸನ್ನೆ ಮಾಡಿ ಅವನೊಂದಿಗೆ ಆನೆಯಿಂದ ಮೇಲೆ ಹಾರಿ ನೀರಿಗೆ ಬಿದ್ದನು. ಬಳಿಕ ಇಬ್ಬರೂ ಈಜುತ್ತಾ, ನೀರಿನಲ್ಲಿ ತೇಲಾಡಿ ಬರುತ್ತಿದ್ದ ದೊಡ್ಡದೊಂದು ಮರವನ್ನು ಹೇಗೋ ಹಿಡಿದುಕೊಂಡರು.

ಅವರಿಬ್ಬರೂ ಹಾಗೂ ಹೀಗೂ, ನೀರಲ್ಲಿ ಬಿದ್ದೂ ಎದ್ದೂ ಅದರ ಕೊಂಬೆಗಳ ಮೇಲೆ ಹೋದರು. ಆ ಮರದ ಮೂರು ಕೊಂಬೆಗಳ ನಡುವೆ ಮರದ ಬೊಡ್ಡೆಯನ್ನು ಹಿಡಿದುಕೊಂಡು ಒಂದು ಹುಲ್ಲಿ ಕೌಚಿ ಮಲಗಿತ್ತು. ಅದು ಮುಂಗಾಲುಗಳಿಂದ ಮುರಿದ



ಕೊಂಬೆಗಳನ್ನು ಹಿಡಿದುಕೊಂಡಿತ್ತು. ಅದಕ್ಕೂ ಜೀವ ಭಯ. ಏನೋ ನೊಂದ ಹುಲಿ. ಅವರು ಹುಲಿಯನ್ನು ನೋಡುವುದಕ್ಕೂ ಹುಲಿ ಅವರನ್ನು ನೋಡುವುದಕ್ಕೂ ಮೇಳ ಕೂಡಿತು.

ಹುಲಿ ಗುರ್ರೆನ್ನುತ್ತ ಹಿಂದಿನ ಕಾಲಿನ ಮೇಲೆ ನಿಂತು ತುಸು ಸಮೀಪದಲ್ಲಿರುವ ಸಿದ್ಧಸಾಧಕನ ಮೇಲೆ ಧುಮುಕುವ ಹವಣಿಕೆಯಲ್ಲಿ ಬಾಲವನ್ನು ಕುಣಿಸ ತೊಡಗಿತು. ಅದು ತುಂಬ ಹಸಿದಿರಬಹುದು. ಸಾಧಕನು ತನ್ನ ಕೈಯಲ್ಲಿದ್ದ ಶೂಲವನ್ನು ಎತ್ತುವುದನ್ನು ನೋಡಿ ಜಯಶೀಲನು ಅವನನ್ನು ತಡೆದು, "ಸಾಧಕಾ, ಜಾಗ್ರತೆ! ಅದೂ ನಮ್ಮ ಹಾಗೆಯೇ ನೀರಿಗೆ ಬಿದ್ದು ತನ್ನ ಪ್ರಾಣವನ್ನು ಕಾಪಾಡಿಕೊಳ್ಳಲು ಈ ಮರದ ಮೇಲೇರಿಕೊಂಡಿದೆ. ಶೂಲದಿಂದ ತಿವಿದುಬಿಟ್ಟರೆ ಅದು ನಿನ್ನನ್ನು ಕೆಡವಲು ನೋಡೀತು. ಪ್ರವಾಹದ ಸೆಳೆತದೊಂದಿಗೆ ನಿಮ್ಮಿಬ್ಬರ ಗುದಮುರಿಗೆಯಲ್ಲಿ ಮರವು ಮುಳುಗಿಬಿಟ್ಟರೆ, ಅಥವಾ ನಾವು ಹಾರಿಬಿಟ್ಟರೆ ಎಲ್ಲರಿಗೂ ಜಲಗಂಡವೇ ಆದೀತು!" ಎಂದನು. ಅವನು ಮಾತಾಡುವಾಗ ಹುಲಿ ಅ... ಕಡೆಗೆ ನೋಡ ತೊಡಗಿತು.

"ಅದು ನಿಜವೇ. ಆ ಹುಲಿ ನನ್ನ ಮೇ... ಹಾರುವ ಎತ್ತುಗಡೆಯಲ್ಲಿದೆಯಲ್ಲಾ! ಮ... ಕಾಳನೇ ರಕ್ಷೆ!" ಎಂದು ಸಾಧಕನು ಶೂಲವ... ಸಿದ್ಧವಾಗಿ ಹಿಡಿದು, ಅದರ ಮುಖವನ್ನೇ ತೀವ್ರವಾ... ನೋಡುತ್ತ, "ಜಯಶೀಲಾ, ನಾನೀಗ ತಲೆ ತಿರುಗಿ... ನೆಂದರೆ, ಹುಲಿ ನನ್ನ ಮೇಲೆ ಹಾರಿಬಿಡುತ್ತ... ಏನೋ ಭಯವಾಗುತ್ತದೆ." ಎಂದನು. "ಜೀ... ವಿರುವವರೆಗೂ ಧೈರ್ಯ ಬಿಡಬಾರದು. ಅದಕ್ಕೆ... ಧ್ವನಿಯೂ ಕೇಳುವುದರಿಂದ ಸಮಸ್ಯೆ ಗ... ಕೊಂಡಿದೆ!" ಎಂದ ಜಯಶೀಲ.

"ಅಯ್ಯೋ! ಇನ್ನೇನೋ ಶಬ್ದ ಕೇಳಿಸುತ್ತದೆ. ... ಪ್ರವಾಹದ ನೀರು ಸಮೀಪದಲ್ಲೆಲ್ಲಿಯೋ ಕ... ಯೊಳಗೆ ಬೀಳುವ ಶಬ್ದವಲ್ಲವೇ ಅದು? ... ಸಮೀಪದಲ್ಲೇ ಜಲಪಾತದೊಂದಿಗೆ ನಾವೂ ಬೀಳು... ವವ್ವೋ!" ಎಂದನು ತಡವರಿಸುತ್ತ ಸಿದ್ಧಸಾಧಕ.

ಜಯಶೀಲನೂ ಆಶ್ಚರ್ಯವೂ ಭಯವೂ ಮಿ... ವಾದ ಸ್ವರದಿಂದ, "ಸಾಧಕಾ, ನಾವೀಗ ಜಲಪಾ... ನೀರಿನಲ್ಲಿ ಸಿಕ್ಕಿಕೊಂಡು ಯಮನ ಬಾಯೊಳಗೆ ಬೀ... ವಂತೆ ಎಷ್ಟೆತ್ತರದಿಂದಲೋ ಬೀಳಲಿಕ್ಕಿದ್ದೇವೆ. ... ಇನ್ನೊಂದು ಇನ್ನೂರು ಮುನ್ನೂರು ಗಜ ದ... ವಿರಬಹುದು, ಅಷ್ಟೇ!" ಎಂದನು.

ಸಿದ್ಧಸಾಧಕನು ಭಯವಿಹ್ವಲನಾಗಿ, "ನಾ... ಕೆಳಗೆ ಬಿದ್ದು ನಜ್ಜುಗುಜ್ಜಾಗಿ ಹೋಗುವುದ... ಮೊದಲೇ ಮರವನ್ನು ಬಿಟ್ಟು ನೀರಿಗೆ ಹಾರಿ... ಹೇಗೆ?" ಎಂದ.

"ಬೇಡ ಬೇಡ. ಮರದ ಆಧಾರದಲ್ಲಿ ನಾ... ಬದುಕುವ ಅವಕಾಶವಿದೆ. ಬಿಡಬೇಡ!" ಎಂ... ಕೂಗಿದ ಜಯಶೀಲ.


ಪ್ರವಾಹಕ್ಕೆ ತೀವ್ರ ಸೆಳೆತ ಬಂತು. ಹುಲಿ ಹೆದರಿ ...ಸಾಧಕನ ಮೇಲೆ ಎಗರುವುದಕ್ಕೂ, ಮರವು ...ನೊಂದಿಗೆ ಗಿರಿಕೆ ಹೊಡೆಯುತ್ತ ಜಲಪಾತದಲ್ಲಿ ... ಇನ್ನೂರಡಿ ಕೆಳಗಿನ ಕಣಿವೆಗೆ ಬೀಳುವುದಕ್ಕೂ ... ಹೋಗಿ ಯಾರಿಗೆ ಏನಾಯಿತೆಂದೇ ತಿಳಿಯಲಿಲ್ಲ.

ಜಯಶೀಲನೂ ಸಿದ್ಧಸಾಧಕನೂ ಇವೇ ತಮ್ಮ ...ನೆಯ ಕ್ಷಣಗಳೆಂದು ಗಟ್ಟಿಯಾಗಿ ಕಣ್ಣು ಮುಚ್ಚಿ ...ಂಡರು. ಜಲಪಾತವು ಬೀಳುವ ಸ್ಥಳದಲ್ಲಿ ಚಿಕ್ಕವೂ ...ದ್ದವೂ ಆದ ಅನೇಕಾನೇಕ ಗುಂಡುಗಲ್ಲು ...ದ್ದವು. ಮರದ ಮಧ್ಯಭಾಗವು ಅಂತಹುದೊಂದು ...ಲ್ಲದ ಬಂಡೆಗೆ ಬಡೆದು ಮರವು ಎರಡು ...ಂಡಾಯಿತು. ಒಂದು ಭಾಗದಲ್ಲಿ ಜಯಶೀಲನೂ, ...ನ್ನೊಂದು ಭಾಗದಲ್ಲಿ ಸಿದ್ಧಸಾಧಕನೂ ಹುಲಿಯೂ ...ಕೊಂಡಿದ್ದರು.

ಜಯಶೀಲನ ಕೈಯಿಂದ ಮರದ ಪಟ್ಟು ತಪ್ಪಿತ್ತು. ...ಲ್ಲಿಯೋ ಬಿದ್ದಿರುವೆನೆಂಬ ಅರಿವಾಗಿ, ಸ್ವಲ್ಪ ...ಹೊತ್ತಿನ ಮೇಲೆ ಕಣ್ಣು ತೆರೆದನು. ಅವನು ಈಗ ನೀರಿನ ಬದಿಯಲ್ಲಿ ಬಿದ್ದಿದ್ದನು. ನೀರಿನ ಶಕ್ತಿ ಅವನನ್ನು ಬದಿಗೆ ತಳ್ಳಿತ್ತು. ಸೊಂಟದಿಂದ ಕೆಳ ಭಾಗವು ನೀರೊಳಗಿದೆ. ತಲೆ ಎತ್ತರವಾದ ಸ್ಥಳದ ಮಣ್ಣಿನ ಮೇಲಿದೆ. ದೂರದಲ್ಲಿ ಜಲಪಾತದ ಬೊಬ್ಬೆ ಕೇಳಿಸುತ್ತಾ ಇದೆ. ತಲೆಗೆ ಪೆಟ್ಟಾದಂತಿಲ್ಲ.

"ನಾನು ಬದುಕಿರುವೆನೆಂದಾಯಿತು. ಕೈಗಳೂ ಕಾಲುಗಳೂ ಸರಿಯಾಗಿವೆಯೋ? ಮುರಿದಿವೆಯೋ?" ಎಂದು ಕೊಳ್ಳುತ್ತಾ ಜಯಶೀಲನು ಪಕ್ಕಕ್ಕೆ ಹೊರಳಿದನು. ಬಲದ ಮೊಣಕೈ ನೋಯುತಿತ್ತು. ನಿಧಾನವಾಗಿ ಕಾಲುಗಳನ್ನು ಕದಲಿಸಿದನು. ಸ್ವಲ್ಪ ನೋವು ಕಾಣಿಸುತ್ತಿತ್ತು.

"ನಾನು ಅದೃಷ್ಟಶಾಲಿ. ಅಷ್ಟೆತ್ತರದಿಂದ ಬಿದ್ದು ಬದುಕಿದ್ದೇನೆ ಮಾತ್ರವಲ್ಲದೆ ಕಾಲೂ ಕೈಗಳೂ ಮುರಿಯಲಿಲ್ಲ. ಮುರಿದಿದ್ದರೆ ಇಲ್ಲಿ ಯಾರು ದಿಕ್ಕು? ನರಳಿ ನರಳಿ ಸಾಯಬೇಕಿತ್ತು!" ಎಂದುಕೊಂಡು ಕಾಪಾಡಿದ ದೇವರಿಗೆ ನಮಸ್ಕಾರ ಸಲ್ಲಿಸಿ ಎದ್ದು ನಿಂತು, ಕೈಕಾಲುಗಳಿಗಾದ ಗಾಯಗಳನ್ನು ನೋಡಿದನು.



ಒರೆಯಲ್ಲಿದ್ದ ಕತ್ತಿಯನ್ನು ಸವರಿದನು. ತನ್ನ ಚಲನ ವಲನ ಸರಿಯಾಗಿದೆಯೋ ನೋಡಿಕೊಳ್ಳಲು ಕೆಲವಡಿ ನಡೆದಾಡಿದನು. ಹಠಾತ್ತಾಗಿ ಸಿದ್ಧಸಾಧಕನ ನೆನಪು ಬಂದು, "ಅವನೆಲ್ಲಿ?" ಎನ್ನುತ್ತಾ ಜಲಪಾತದ ಪ್ರವಾಹದ ಕಡೆಗೆ ನೋಡಿದನು.

ಪ್ರವಾಹದ ಮಧ್ಯದಲ್ಲಿ ಅಲ್ಲಲ್ಲಿ ದೊಡ್ಡ ದೊಡ್ಡ ಬಂಡೆಗಲ್ಲುಗಳಿದ್ದುವು. ಜಯಶೀಲನು ಹಿಡಿದಿದ್ದ ಮರದಭಾಗವು ಎರಡು ದೊಡ್ಡ ಬಂಡೆಗಲ್ಲುಗಳ ಮಧ್ಯೆ ಸಿಕ್ಕಿಕೊಂಡಿತ್ತು. ಅದಕ್ಕಿಂತ ಕೆಳಗಡೆಯಲ್ಲಿ ಮರದ ಎರಡನೇ ಭಾಗವು ತೀರಕ್ಕೆ ಒಂದಿಕೊಂಡಿತ್ತು. ಆದರೆ ಸಿದ್ಧಸಾಧಕನು ಎಲ್ಲಿಯೂ ಕಾಣಲಿಲ್ಲ.

"ಪಾಪ, ಸಾಧಕನು ದುರದೃಷ್ಟದವನು! ಮಹಾ ಕಾಳನು ಅವನ ಕೈ ಬಿಟ್ಟಹಾಗಿದೆ. ಜಲಪಾತದಲ್ಲಿ ಬೀಳುವಾಗ ಯಾವ ಬಂಡೆಗೋ ತಗಲಿ, ಸತ್ತಿರಬೇಕು. ಶವವು ಪ್ರವಾಹದಲ್ಲಿ ಹೊಡೆದುಕೊಂಡು ಎಲ್ಲಿ ಹೋಯಿತೋ, ಯಾವುದರಡೆಗೆ ಸಿಕ್ಕಿಕೊಂಡಿತೋ? ಹೀಗೆಣಿಸುತ್ತಾ, ಅವನಿಗಾಗಿ ದುಃಖಿಸಿದ ಜಯಶೀಲ.


ಅನೇಕ ದಿನಗಳಿಂದ ತನಗೆ ಮಿತ್ರನಾಗಿ ಸಹಚರನಾಗಿ, ಕಷ್ಟಗಳಲ್ಲಿ ಭಾಗವಹಿಸುವವನಾಗಿದ್ದ ಸಾಧಕನ ಮೇಲೆ ಅವನಿಗೆ ತುಂಬಾ ಕನಿಕರವುಂಟಾಯಿತು. ಸಾಧಕನ ಶವವು ನೀರಲ್ಲಿ ನೆನೆದು ಯಾವ ಮೊಸಳೆಗೋ ಆಹಾರವಾಗುವುದಕ್ಕೆ ಮೊದಲೇ ಅದನ್ನು ಹುಡು ಹಿಡಿದು ಒಳ್ಳೆಯ ರೀತಿಯಲ್ಲಿ ದಹನ ಸಂಸ್ಕಾ ಮಾಡಬೇಕೆಂದು ಅವನಿಗೆ ತೋರಿತು. ಶವವು ಎ ಯಾದರೂ ಬದಿಗೆ ಒಂದಿರಲೂಬಹುದು.


ಅಂತೆಯೇ ಅವನು ಬೇಗ ಬೇಗನೆ ಅಲ್ಲಿರು ಪೊದರುಗಳ ನಡುವೆ ದಾರಿ ಮಾಡಿಕೊಳ್ಳುತ್ತ ಸ್ವ ದೂರ ಹುಡುಕುತ್ತಾ ಹೋದನು. ಇದ್ದಕಿದ್ದ ಹಾ ಹುಲಿಯ ಗರ್ಜನೆ ಅವನ ಕಿವಿಗೆ ಬಿತ್ತು. ತನ್ನೊಂದಿ ಒಂದು ಹುಲಿಯೂ ಜಲಪಾತದಲ್ಲಿ ಬಿದ್ದಿರುವುದೆಂ ಈಗ ನೆನಪಿಗೆ ಬಂತು.

"ಸಾಧಕನನ್ನು ಹುಲಿ ತಿಂದಿರಲಾರದಷ್ಟೇ?" ಎಂದು ಕೊಳ್ಳುತ್ತ ಜಯಶೀಲನು ಕತ್ತಿ ಹಿರಿ ಕೊಂಡು ಆತುರದಿಂದ ಆ ಧ್ವನಿ ಬಂದ ಕಡೆಗೆ ಬೇ ಬೇಗ ನಡೆದನು.

ಒಂದುಕಡೆ ಸಿದ್ಧಸಾಧಕನು ಚಲನವಿಲ್ಲದೆ ನೀರಿ ಬದಿಯಲ್ಲಿ ಅಂಗಾತ ಬಿದ್ದಿದ್ದಾನೆ. ಅವನಿಗೆ ತು ದೂರದಲ್ಲಿ ಹಿಂದಿನ ಕಾಲುಗಳೆರಡೂ ಮುರಿ ಹೋಗಿದ್ದ ಹುಲಿ, ಮುಂಗಾಲುಗಳನ್ನು ಎತ್ತಿ ಹಾಕುತ್ತ, ಸಣ್ಣಗಂಟಲಿನಿಂದ ಗಾಂಡ್ರಿಸುತ್ತ ಸಾಧ ಬಳಿಗೆ ತೆವಳಿಕೊಂಡಿತ್ತು. ನೋವು ಸಂಕಟಗಳ ಜ ಹಸಿವೆಯ ಕಾಟದಿಂದ ಆ ಹುಲಿ ತುಂಬಾ ಬಳ ಹೋಗಿತ್ತು!

(ಮುಂದುವರಿಯುವುದು)





February 1977


# ಮಾಯಾಸರೋವರ

## ೧೩

[ ಕೆರೆಯ ನೀರಿನಲ್ಲಿ ಮುಳುಗಿದ ಜಲಗ್ರಹವನ್ನು ಮಕರಕೇತು ಬೆಟ್ಟದ ಮೇಲಿನ ಜಲಾಶಯಕ್ಕೆ ಒಯ್ದು, ಅಲ್ಲಿ ಜಯಶೀಲ ಮತ್ತು ಸಿದ್ಧಸಾಧಕರನ್ನು ಬಿಟ್ಟು ತನ್ನ ಆನೆಯೊಂದಿಗೆ ಮುಳುಗಿ ಮಾಯವಾದನು. ಜಯಶೀಲ ಸಿದ್ಧಸಾಧಕರು ಜಲಪಾತದಲ್ಲಿ ಸಿಕ್ಕಿ ಕಣಿವೆಗೆ ಬಿದ್ದರು. ಬೋಧವಿಲ್ಲದೆ ಬಿದ್ದಿದ್ದ ಸಿದ್ಧಸಾಧಕನನ್ನು ಒಂದು ಹುಲಿ ಭಕ್ಷಿಸಲು ನೋಡುವಾಗ ಜಯಶೀಲ ಬಿದ್ದಲ್ಲಿಂದೆದ್ದು ಅಲ್ಲಿಗೇ ಹೋದ.]

ಹಸಿವೆಯ ಪೀಡನೆಯಿಂದಿದ್ದ ಆ ಕುಂಟ ಹುಲಿ ಬೋಧವಿಲ್ಲದೆ ಬಿದ್ದವನನ್ನು ಎಟಕರಿಸಿ ಕಬಳಿಸುವ ಎತ್ತುಗಡೆಯಲ್ಲಿರುವಾಗಲೇ ಜಯಶೀಲನು "ಹೋ! ಹೋ!" ಎಂದು ಕೂಗುತ್ತ ವೇಗವಾಗಿ ಓಡಿದ. ಹುಲಿ ತನ್ನ ಮುಂಗಾಲಿನ ಪಂಜಾದಿಂದ ಸಿದ್ಧಸಾಧಕನ ತಲೆಯನ್ನು ಹೊಡೆಯಲು ಎತ್ತಿದಾಗ, ಜಯಶೀಲನು ಅದರ ಲಕ್ಷ್ಯವನ್ನು ಮರಳಿಸಲಿಕ್ಕಾಗಿ ಕರ್ಕಶವಾಗಿ ಕೂಗಿ, ಅದರ ಪಕ್ಕದಲ್ಲಿ ಬೀಳುವಂತೆ ಕಲ್ಲುಗಳನ್ನೆತ್ತಿ ಹಾಕಿದ. ಅವನು ಬಿಸುಟ ಎರಡನೇ ಕಲ್ಲು ಅದರ ಮೇಲೆಯೇ ಬಿದ್ದು ತಲೆ ತಿರುಗಿಸಿತು ಗುರ್ರೆನ್ನುತ್ತ.

ಆ ಸಮಯದಲ್ಲಿ ಜಯಶೀಲನು ಹುಲಿಯನ್ನು ಸಮೀಪಿಸಲು ಇನ್ನೂ ಇಪ್ಪತ್ತು ಮೂವತ್ತು ಅಡಿಗಳಿದ್ದುವು. ಮನುಷ್ಯನ ಕೂಗಿನೊಂದಿಗೆ ಕಲ್ಲು ಬಂದು ಶರೀರಕ್ಕೆ ತಾಗಿದ ಕೂಡಲೇ ಹುಲಿ ಗಾಂಡ್ರೆನ್ನುತ್ತಾ ಹಿಂದಕ್ಕೆ ತಿರುಗಿತು. ಸರಿಯಾಗಿ ತಿರುಗಲೂ ಅದಕ್ಕಾಗಲಿಲ್ಲ. ಅಷ್ಟರೊಳಗೆ ಜಯಶೀಲನು ಹಾರೋಟದಿಂದ ಹೋಗಿ, ಪೆಟ್ಟುಬಿದ್ದ ಹುಲಿಯ ಹಿಂದಿನ ಕಾಲುಗಳನ್ನು ಹಿಡಿದು ಎಳೆದು, ದೂರ ಬೀಳುವಂತೆ ಹೊರಳಿಸಿ ಹಾಕಿದ. ಬಹಳ ಹೊತ್ತಿನವರೆಗೆ ಸ್ಮೃಹೆ ತಪ್ಪಿ ಬಿದ್ದಿದ್ದ ಸಿದ್ಧ



ಸಾಧಕನಿಗೆ ಆಗಳಾಗಲೇ ಎಚ್ಚರ ಬರ ತೊಡಗಿತ್ತು. ಹುಲಿಯ ಗರ್ಜನೆಯನ್ನು ಕೇಳಿ, ಅದು ತನ್ನ ಮೇಲೆಯೇ ಎರಗಿತೆಂದುಕೊಂಡವನಂತೆ, "ಅಯ್ಯೊ! ಮಹಾಕಾಳಾ! ಕಾಪಾಡು!" ಎಂದು ಕೆಟ್ಟ ಸ್ವರ ದಿಂದ ಕೂಗುತ್ತಾ ಹಾರಿಬಿದ್ದದ್ದು ಕುಳಿತ. ಆಗ ಮೊದಲು ಅವನ ಕಣ್ಣಿಗೆ ಬಿದ್ದುದೇ ಹುಲಿ! "ಓಹ್! ಜೈ ಮಹಾಕಾಳಾ!" ಎಂದು ಕೂಗುತ್ತ ಹಾರಿನಿಂತು, ಶೂಲವೆತ್ತುವೆನೆಂಬ ಅಭ್ಯಾಸದಂತೆ ಕೈಯನ್ನೆತ್ತಿದ. ಆಗ ತಾನೇ ಶೂಲವಿಲ್ಲದಿರುವುದು ಗೊತ್ತಾಗಿ, ಭಯ ದಿಂದ ಹಿಂದೆ ಹಿಂದೆ ಹೋಗಿ ನೀರಿಗೆ ಬಿದ್ದ.

ಸಿದ್ಧಸಾಧಕನು ಬದುಕಿರುವನೆಂದು ತಿಳಿದು, ಅದೂ ಕೈಕಾಲುಗಳ ಸ್ವಾಧೀನತೆಯೊಂದಿಗಿರುವುದನ್ನು ನೋಡಿ, ಜಯಶೀಲನು ಅವನ ವಿಷಯದಲ್ಲಿ ಸಮಾ ಧಾನಗೊಂಡು ಆತುರವನ್ನು ಬಿಟ್ಟು, ಹುಲಿಯ ಹಿಂಗಾಲುಗಳನ್ನು ಹಿಡಿದು ಅದನ್ನು ಇನ್ನಷ್ಟು ದೂರಕ್ಕೆ ಎಳೆದು ಹಾಕಿ, ಸಿದ್ಧಸಾಧಕನ ಬಳಿಗೆ ಬಂದನು. "ಇನ್ನೇನೂ ಹೆದರಬೇಡವೋ ಸಾಧಕಾ! ನಿನ್ನ ದೃಷ್ಟಿಗೆ ಆ ಹುಲಿಯು ಹೊರ... ಅದರ ಹಿಂದೆಯೇ ಇರುವ ನಾನು ಕಾಣುವು... ಇಲ್ಲವೇನು? ಒಳ್ಳೇ ಹುಲಿ ಹುಚ್ಚನಪ್ಪಾ!" ಎಂದ...

ಅವನನ್ನು ನೋಡಿದ ಕೂಡಲೇ ಸಿದ್ಧಸಾಧ... ಬೇಗಬೇಗನೇ ನೀರಿನಲ್ಲಿ ಎದ್ದು ನಿಂತು, "ಓ! ಓ! ಮಹಾಕಾಳನ ದಯೆ! ಜಯಶೀಲಾ! ... ಇಲ್ಲಿಯೇ ಇರುವೆಯಾ? ಜಲಪಾತದಲ್ಲಿ ... ಬೀಳುವುದೊಂದೇ ನನಗೆ ಗೊತ್ತಿತ್ತು. ಹುಲಿ ... ಮೇಲೆ ಹಾರಿದ ಹಾಗೇ ಅನಿಸಿತ್ತು. ಮತ್ತೆ ... ಹೇಗಿದ್ದೇನೋ? ಹುಲಿಯ ಶಬ್ದದಿಂದಲೇ ... ಎಚ್ಚರಿಕೆಯಾಯಿತಪ್ಪಾ!" ಎಂದು ಹೇಳು... ಮುಂದೆ ಬಂದನು.

"ಹೇಗೋ ಏನೋ ನನಗೂ ಗೊತ್ತಿಲ್ಲ... ನಾವಿಬ್ಬರೂ ಜೀವದೊಂದಿಗೆ ನಡೆದಾಡಿಕೊಂ... ವೆಂಬುದು ನಿಜ." ಎಂದು ಜಯಶೀಲನು, ದೂರ... ನೆಲದ ಮೇಲೆ ತೆವಳುತ್ತ ಹೊರಳುತ್ತ, ಆಗ... ವಿಕಾರ ಧ್ವನಿಯಿಂದ ನರಳುವ ಹುಲಿಯನ್ನು ನೋ... "ಆ ಹುಲಿಯನ್ನು ನೋಡಿದರೆ ಮರುಕ ಬರು... ಜಲಪಾತದೊಂದಿಗೆ ಕಲ್ಲಿನ ಮೇಲೆ ಬಿದ್ದು ಹುಲಿ... ಎರಡು ಕಾಲುಗಳು ಕೆಲಸಕ್ಕೆ ಬಾರದಂತಾಗಿ... ಇನ್ನು ಇದಕ್ಕೆ ಹೊಟ್ಟೆ ತುಂಬಿಸಿಕೊಳ್ಳುವ ... ಎಲ್ಲಿಯದು? ಹಸಿವೆಯಿಂದ ವಿಲವಿಲನೆ ಒದ... ಸಾಯುವುದಕ್ಕಿಂತ, ಈಗಲೇ ಸತ್ತುಬಿಡುವು... ಅದಕ್ಕೆ ಒಳ್ಳೆಯದು" ಎಂದು ಹೇಳಿ, ಕತ್ತಿ ತೆಗೆ... ಕೊಂಡು ಹುಲಿಯ ಕಡೆಗೆ ಹೋದನು.

ಆಗ ಸಿದ್ಧಸಾಧಕನು ಕಾಣದೆ ಹೋದ ತನ್ನ ಶೂ... ವನ್ನು ನೆನೆದು ಅತ್ತಿತ್ತ ಹುಡುಕ ತೊಡಗಿದ... ಆ ಶೂಲ ಕೈಯಲ್ಲಿಲ್ಲದಿದ್ದರೆ ಅವನಿಗೆ ತಾನೇ ... ದಂತೆನಿಸುತಿತ್ತು. ಪುಣ್ಯವಶಾತ್ ಅದು ನೀರಿನ ... ಯಲ್ಲಿ ಸ್ವಲ್ಪ ಕೆಳಗಡೆಯಲ್ಲಿ ಅವನ ಕಣ್ಣಿಗೆ ಬಿ...



ಆಗ ತಾನೇ ಪೂರ್ಣ ಬದುಕಿದವನಂತೆ ಆ ಶೂಲ ವನ್ನೆತ್ತಿಕೊಂಡು ಉತ್ಸಾಹದಿಂದ ಜಯಶೀಲನಬಳಿಗೆ ಬಂದನು. ಆಗ ಜಯಶೀಲನು, ಅಸಹಾಯವಾಗಿ ಹೊರಳುತ್ತಿರುವ ಹುಲಿಯನ್ನೇ ತಲೆ ತಗ್ಗಿಸಿ ನೋಡುತ್ತ, "ಸಾಧಕಾ, ಈ ಹುಲಿ ನಮಗೆ ಯಾವ ಹಾನಿಯನ್ನೂ ಮಾಡಲಿಲ್ಲ. ಇದನ್ನು ಕೊಲ್ಲುವುದಕ್ಕೆ ನನಗೆ ಕೈಯೇ ಬರುವುದಿಲ್ಲ" ಎಂದನು.

"ಇತ್ತ ಕೊಡು" ಎಂದು ಸಿದ್ಧಸಾಧಕನು ಜಯಶೀಲನ ಕೈಯಿಂದ ಕತ್ತಿಯನ್ನು ತೆಗೆದುಕೊಂಡು, "ಜೀವದೊಂದಿಗೆ ನರಕಬಾಧೆ ಪಡುತ್ತಿರುವ ಈ ಹುಲಿಗೆ ಸಕಲ ಬಾಧೆಗಳನ್ನು ನಿವಾರಿಸುವುದು ಪುಣ್ಯ ಕಾರ್ಯವೇ. ಅದೊಂದು ಚಿಕಿತ್ಸೆಗೆ ಸಮಾನವೆಂದು ಕೊಂಡು ನಾನೇ ಆ ಕಾರ್ಯ ನೆರವೇರಿಸುತ್ತೇನೆ! ಮಹಾಕಾಳನೇ ರಕ್ಷ!" ಎನ್ನುತ್ತಾ ಕತ್ತಿಯ ಒಂದೇಟಿಗೆ ಹುಲಿಯ ತಲೆಯನ್ನು ಬೇರ್ಪಡಿಸಿದನು.

ಆಮೇಲೆ ಜಯಶೀಲನು ಸುತ್ತು ಮುತ್ತಲೂ ನೋಡಿದನು. ಅದು ಯಾವ ಪ್ರದೇಶ? ತಾವು ಯಾವ ದಿಕ್ಕಿಗೆ ಹೋಗಬೇಕು? ಹೇಳುವವರಾರು? ಸಾಧಕಾ, ನಿನಗೇನು ತೋರುತ್ತದೆ? ಈಗ ನಾವು ಯಾವ ದಿಕ್ಕಿಗೆ ಪ್ರಯಾಣ ಮಾಡಬೇಕು? ಕನಕಾಕ್ಷ ಮಹಾರಾಜರ ಮಕ್ಕಳನ್ನು ಅಪಹರಿಸಿಕೊಂಡು ಹೋದವನೊಬ್ಬ ನಮ್ಮ ಕೈಗೆ ಸಿಕ್ಕಿಯೂ, ತಪ್ಪಿಸಿಕೊಂಡು ಹೋಗಿಬಿಟ್ಟ. ಅವನನ್ನು ಬಿಡಬಾರದಿತ್ತು. ನಾವೇ ಅವನ ಕೈಗೆ ಸಿಕ್ಕಿ ಎಂಥಾ ಪೇಚಾಟಕ್ಕಿಟ್ಟುಕೊಂಡಿತು!" ಎಂದ ಜಯಶೀಲ.

"ಜಯಶೀಲಾ, ಅವನನ್ನು ನಾವು ಬಿಟ್ಟುಬಿಟ್ಟೆವೋ, ಅವನೇ ನಮ್ಮಿಂದ ಬಿಡುಗಡೆ ಹೊಂದಿ ತಪ್ಪಿಸಿಕೊಂಡನೋ ಹೇಳುವುದು ಕಷ್ಟ. ಆ ಜಲಗ್ರಹದೊಂದಿಗೆ ನಾವಾದರೂ ಎಷ್ಟುಕಾಲ ಅವನನ್ನಂಟಿಕೊಂಡು ಬದುಕಿರಬಲ್ಲೆವು? ನಾವೀಗ ಆಲೋಚನೆ ಮಾಡಬೇಕಾದುದು ನಡೆದುಹೋದ ವಿಷಯವನ್ನು ಕುರಿತು ಅಲ್ಲ; ನಾವು ಎಂತಹ ಸ್ಥಳಕ್ಕೆ ಬಂದು ಸೇರಿದ್ದೇವೆ? ಈ ಪ್ರಾಂತದಲ್ಲಿ ಎಲ್ಲಿಯಾದರೂ ಮಾನವರಾರಾದರೂ ಇದ್ದಾರೆಯೆ? ಇದನ್ನು ಮೊದಲು ತಿಳಿದುಕೊಳ್ಳಬೇಕು" ಎಂದ ಸಿದ್ಧಸಾಧಕ.

ಅವನ ಮಾತಿಗೆ ಪ್ರತ್ಯುತ್ತರ ಬರುತ್ತಿದೆಯೋ ಏನೋ ಎಂಬಂತೆ, ನದಿಯ ಕೆಳಭಾಗದಲ್ಲಿರುವ ದಟ್ಟವಾದ ಮರಗಳ ಗುಂಪಿನೆಡೆಯಿಂದ, ಮನಷ್ಯ ಕಂಠದಿಂದ ಹೊರಟ, ಸಾಯುವವನ ಕೂಗೊಂದು ಕಿವಿಗೆ ಅಪ್ಪಳಿಸಿತು. ಅದರೊಂದಿಗೆ ಯಾವುದೋ ಬೆಟ್ಟದ ಕುರಿಯ ವಿಕಾರ ಕಂಠ ಸ್ವರವೂ ಹೊರಟಿತು! ಆ ಕಡೆಗೆ ನೋಡುತ್ತ ಇಬ್ಬರೂ ಸ್ತಬ್ಧರಾಗಿ ನಿಂತರು.

"ಕಾಡು ಕುರಿಯನ್ನು ಮನುಷ್ಯ ಹಿಡಿದನೋ, ಕಾಡುಟಗರೇ ಮನುಷ್ಯನನ್ನು ಹಿಡಿದಿದೆಯೋ?" ಎಂದ ಸಿದ್ಧಸಾಧಕ.

"ಆ ಇಬ್ಬರನ್ನೂ ಮತ್ತಾವುದೋ ಕ್ರೂರ ಮೃಗ ಹಿಡಿದಿದ್ದರೂ ಇದ್ದೀತು. ಆ ಕಾಡಿನೊಳಗೆ ಏನು



ಭಯಂಕರವಿದೆಯೋ ? ನೋಡಿಬಿಡೋಣ ಬಾ. ಏನೂ ತೋರದಿರುವ ನಮ್ಮ ಬುದ್ಧಿಗೆ ಸ್ವಲ್ಪ ಚುರುಕಾದರೂ ಬಂದೀತು" ಎನ್ನುತ್ತಾ ಜಯಶೀಲ ನದಿಯ ಕೆಳ ಭಾಗದ ಆ ಕಾಡಿನಕಡೆಗೆ ಓಡ ತೊಡಗಿದ.

ಜಯಶೀಲನೂ ಸಿದ್ಧಸಾಧಕನೂ ಅಲ್ಲಿಗೆ ಹೋಗಿ ನೋಡಲು, ಭಯಂಕರವಾದೊಂದು ಅದ್ಭುತ ದೃಶ್ಯ ಅವರ ಮುಂದೆ ಕಂಡಿತು. ನೀರ ಬದಿಯಲ್ಲಿದ್ದ ದೊಡ್ಡದೊಂದು ಕೊಂಬೆಗೆ ಸಿಕ್ಕಿಕೊಂಡು ಒಂದು ಟಗರೂ, ಮತ್ತೊಬ್ಬ ಕುಳ್ಳ ಜಾತಿಯ ಮನುಷ್ಯನೂ ಪಟಪಟ ಕೈಕಾಲಾಡಿಸುತ್ತ ನೇತಾಡಿಕೊಂಡಿದ್ದರು. ಆ ಮರದ ಕೊಂಬೆಗಳಲ್ಲಿ ಚಿಕ್ಕ ಚಿಕ್ಕ ಎಲೆಗಳೇ ಇದ್ದುದರಿಂದ ಅದೊಂದು ಬೋಳು ದೈತ್ಯ ಮರದಂತೆ ಕಾಣುತಿತ್ತು.


"ಇದೇನು ವಿಚಿತ್ರ ! ಕೊಂಬೆಯಲ್ಲಿ ಬೇರೆ ಯಾವ ಪ್ರಾಣಿಯೂ ಇಲ್ಲ. ಟಗರನ್ನೂ ಆ ಕುಳ್ಳನನ್ನೂ ಮೇಲಕ್ಕೆ ಎಳೆಯುತ್ತಿರುವವರು ಯಾರು ? ಯಾರೂ ಎಳೆಯದೆ ಕೊಂಬೆ ತನ್ನಂತೆ ತಾನೇ ಮೇಲೆ ಮೇಲೆ ಹೋಗುತ್ತಿದೆಯಲ್ಲಾ ?" ಎಂದ ಜಯಶೀಲ.

"ಇದು ಯಾವುದೋ ಅದೃಶ್ಯ ಪಿಶಾಚಿಯ ಕೆಲಸ. ನಾನು ಮಂತ್ರದಿಂದ ಅದನ್ನು ಕಂಡುಹಿಡಿದು ಶೂಲದಿಂದ ಅದರ ಗುಂಡಿಗೆಯನ್ನು ಸೀಳಿಬಿಡುತ್ತೇನೆ" ಎಂದು ಸಿದ್ಧಸಾಧಕನು ಆ ಮರದ ಅಡಿಗೆ ಹೋಗಿ ಶೂಲವನ್ನೆತ್ತಿ ಏನೋ ಮಂತ್ರೋಚ್ಚಾರಕ್ಕಾಗಿ ಬಾಯಿ ತೆರೆಯುವಷ್ಟರಲ್ಲಿ, ಮರದ ಮತ್ತೊಂದು ಕೊಂಬೆ ಸೊಯ್ಯನೆ ಬಾಗಿಬಂದು ಅವನ ಭುಜವನ್ನು ಬಳಸಿತು.

ಯಾವನೋ ಬಲಿಷ್ಠನೊಬ್ಬ ತನ್ನ ಭುಜವನ್ನು ಹಿಡಿದು ಮೇಲಕ್ಕೆ ಎತ್ತುತ್ತಿರುವಂತೆ ಅನುಭವಾಗಿ ತೋರಲು, ಸಿದ್ಧಸಾಧಕನು ನುಸುಳಿ ಈಚೆಗೆ ಹಾರಿ, "ಓಹ್! ಜಯಶೀಲಾ! ಇದು ಯಾವುದೋ ರಾಕ್ಷಸ ವೃಕ್ಷ. ಅಥವಾ ಭೂತ ವೃಕ್ಷ." ಎಂದನು. ತನ್ನ ಮಂತ್ರವು ಪ್ರಯೋಜನವಿಲ್ಲವೆಂದು ಅವನ ಭಾವನೆಯಿಂದ ಗೊತ್ತಾಯಿತು.

"ಇದು ಎಂತಹ ಮರವೆಂದು ಈವರೆಗೂ ನಾನು ಕಂಡಿಲ್ಲ. ಒಂದು ವಿಷಯ ಕೇಳಿದ್ದು ನೆನಪಿಗೆ ಬರುತ್ತದೆ. ಇದು ತನ್ನ ಎಟಕಿನೊಳಗೆ ಬಂದ ಮನುಷ್ಯರನ್ನೂ ಪ್ರಾಣಿಗಳನ್ನೂ ಹಿಡಿದು ಎತ್ತಿ ಸಾರ ಹೀರಿ ಕೊಲ್ಲುವ ಮರವೆಂಬುದು ನಿಜ. ಅಂತಹ ಮರವೂ ಇದೆಯಂತೆ" ಎಂದು ಜಯಶೀಲನು, ದೂರ ನಿಂತು ಹಾರಿ ಹಾರಿ ಕತ್ತಿಯನ್ನು ಬೀಸಿ, ಕುಳ್ಳನನ್ನೂ, ಟಗರನ್ನೂ ಹಿಡಿದಿದ್ದ ಕೊಂಬೆಯನ್ನು ತುಂಡು ಮಾಡಿಬಿಟ್ಟನು. ಕೂಡಲೇ ಆ ಕೊಂಬೆಗೆ ನೇತಾಡುತ್ತಿದ್ದ ಇಬ್ಬರೂ ಕೆಳಗಿದ್ದ ನೀರಿನೊಳಗೆ ಬಿದ್ದರು.

ಜಯಶೀಲ ಸಿದ್ಧಸಾಧಕರು ಲಗುಬಗೆಯಿಂದ ಹೋಗಿ ನೀರಿನಲ್ಲಿ ಬಿದ್ದ ಕುಳ್ಳನನ್ನು ಮೇಲಕ್ಕೆ ಎಳೆದು ತಂದರು. ಟಗರು ಈಜಿ ತೀರದಲ್ಲಿರುವ ಬಂಡೆಯ ಮೇಲೇರಿ, ಮೈ ಕೊಡರಿಕೊಂಡು ತಲೆಯೆತ್ತಿ ದೊಡ್ಡ ದನಿಯಿಂದ ಕೂಗಿತು, ಬದುಕಿದೆನೆಂಬ ಸಂತೋಷದಿಂದ.



"ಜಯಶೀಲಾ, ಇದು ಸಾಧಾರಣ ಟಗರಿನಂತಿಲ್ಲ. ದಕ್ಕೆ ಸವಾರಿಯ ಕುದುರೆಗಿರುವ ಹಾಗೆ ಜೀನು ವಾಣ ಎಲ್ಲಾ ಇವೆ. ಇದೊಂದು ಆಶ್ಚರ್ಯ ಲ್ಲವೇ ?" ಎಂದ ಸಿದ್ಧಸಾಧಕ.

"ಇಲ್ಲಿಯದು ಎಲ್ಲವೂ ಆಶ್ಚರ್ಯವೇ ! ನಾನು ಗಲೇ ಅದನ್ನು ನೋಡಿದ್ದೇನೆ ಬಿಡು" ಎಂದ ಯಶೀಲ.

ಮೊದಲು ಮರದಕೊಂಬೆಯಲ್ಲಿ ಸಾವಿನ ಭಯ ಂದ, ಆಮೇಲೆ ನೀರಿನ ಭಯದಿಂದ ಬಿಡುಗಡೆ ೊಂದಿ ಮೇಲೆದ್ದರೂ, ನೆನೆದು ಗಡಗಡ ನಡುಗು ರುವ ಕುಳ್ಳನು, ಜಯಶೀಲ ಸಿದ್ಧಸಾಧಕರನ್ನು ಟ್ಟ ಕಣ್ಣುಗಳಿಂದ ನೋಡುತ್ತ, ಕೈಮುಗಿದು, "ಅಯ್ಯಾ, ಒಬ್ಬ ಸೇನಾನಾಯಕನನ್ನು ನರಭಕ್ಷಕ ಕ್ಷದಿಂದ ಕಾಪಾಡಿದುದಕ್ಕೆ ಗಡೇಕಾರಿ ರಾಣಿ ತಮಗೆ ಳ್ಳಿಯ ಬಹುಮಾನ ಕೊಡುತ್ತಾಳೆ. ನೀವು ಮಹಾ ಣಿಯ ಅಭಿಮಾನಕ್ಕೆ ಪಾತ್ರರಾದಿರಿ" ಎಂದನು.

ಜಯಶೀಲನು ಅವನನ್ನು ಆಶ್ಚರ್ಯದಿಂದ ೋಡುತ್ತ, "ಏನು, ಏನಂದೆ ? ಈ ಪ್ರಾಂತಕ್ಕೆ ಟ್ಟಳು ರಾಣಿ, ಆ ರಾಣಿಗೆ ಸೈನಿಕರು, ಆ ಸೈನಿಕರಿಗೆ ನ್ನಂಥ ಅಂಗುಷ್ಠ ಸೇನಾನಾಯಕನೂ ಇದ್ದಾ ಂದಾಯಿತು ! ಭೇಷ್ ! ಭೇಷ್ !" ಎಂದನು.

"ಎಲ್ಲಕ್ಕಿಂತಲೂ ವಿಚಿತ್ರ, ಪ್ರಾಣಿಗಳನ್ನು ತಿನ್ನುವ ಮರ. ಇಂತಹ ಮರವು ಎಲ್ಲೋ ಇದೆಯೆಂದು ಳಿದ್ದೇವೆಯೇ ಹೊರತು ನೋಡುವುದು ಇದೇ ೊದಲು. ಚೆನ್ನಾಗಿಯೇ ನೋಡಿಬಿಡೋಣ" ಂದು ಹೇಳುತ್ತ ಸಿದ್ಧಸಾಧಕನು, ಮರದ ಹಿಂದಿನ ದಿಗೆ ಹೋಗಿ ಗಟ್ಟಿಯಾಗಿ ಚಪ್ಪಾಳೆ ತಟ್ಟುತ್ತ, "ಹೋ ! ಜಯಶೀಲಾ ! ಈ ರಾಕ್ಷಸೀ ವೃಕ್ಷದ್ದು ಧಾರಣ ಹಸಿವೆಯಲ್ಲವಪ್ಪಾ ! ಕುಂಭಕರ್ಣನ ವೆ ! ಇಲ್ಲಿಗೆ ಬಂದು ನೋಡು ! ಎಷ್ಟು ಪ್ರಾಣಿಗಳ, ನವ ತಲೆಬುರುಡೆಗಳ ರಾಶಿ ಇದೆ ! ಸಾರ ಹೀರಿ ಎಲ್ಲಾ ಆದ ಮೇಲೆ ಹಿಪ್ಪೆಯನ್ನು ಹೀಗೆ ಕೆಳಗೆ ಹಾಕುತ್ತದೆಂದು ಕಾಣುತ್ತದೆ !" ಎಂದನು.


ಜಯಶೀಲನು ಸಿದ್ಧಸಾಧಕನಬಳಿಗೆ ಹೋಗಿ ನೋಡಿದನು. ಕೆಳಗಿನ ಹಳ್ಳದಲ್ಲಿ ಪೊದೆಗಳ ನಡುವೆ ಹಾಗು ಅತ್ತಿತ್ತ ಚೆಲ್ಲಾಚೆದರಾಗಿ ಬಿದ್ದಿರುವ ಎಲುವು ಗಳನ್ನೂ ಕಂಕಾಳಗಳನ್ನೂ ನೋಡಿದನು. ಹಾಗೆ ನೋಡುತ್ತಾ ಆ ಮರದ ಕೊಂಬೆಯ ಬುಡಕ್ಕೆ ಬಂದಾಗ, ಕೆಳಗಿನ ಕೊಂಬೆಯೊಂದು ಜೊಯ್ಯನೆ ಬಾಗಿಬಂದು ಅವನನ್ನು ಹಿಡಿಯಲು ನೋಡಿತು. ಜಯಶೀಲನು ತಟಕ್ಕನೆ ದೂರ ಹಾರಿ ಆ ಮರದ ಕಡೆಗೆ ತಿರುಗಿ ಸುಮ್ಮನೆ ನೋಡತೊಡಗಿದನು.

ಆ ಕುಳ್ಳ ಸೇನಾಪತಿ, ತನ್ನ ವಾಹನವಾದ ಟಗರಿನ ಬಳಿಗೆ ಹೋಗಿ, ಅದರ ಬೆನ್ನುತಟ್ಟಿ, ಕಡಿವಾಣ ವನ್ನು ಹಿಡಿದು ನಡೆಯಿಸಿಕೊಂಡು, ಜಯಶೀಲನ ಬಳಿಗೆ ಬಂದು, "ಅಯ್ಯಾ, ನನ್ನನ್ನು ಪ್ರಾಣಾಪಾಯ ದಿಂದ ಕಾಪಾಡಿ ಗಡೇಕಾರೀಜಾತಿಗೆ ಎಂದೆಂದೂ

255



13-5



ಮರೆಯಲಾರದ ಉಪಕಾರ ಮಾಡಿದಿರಿ. ಬನ್ನಿ, ನಮ್ಮ ರಾಣಿಯ ದರ್ಶನಕ್ಕೆ ಹೋಗೋಣ'' ಎಂದು ಇಬ್ಬರನ್ನೂ ಕರೆದನು.

ಆ ಮಾತುಗಳಿಗೆ ಸಾಧಕನು ಗಟ್ಟಿಯಾಗಿ ನಗುತ್ತ, ''ಎಂಥ ಮಹಾಸೇನಾಧಿಪತಿಯೋ! ಪ್ರಾಣಕ್ಕೆ ಅಪಾಯವೆಂದು ತಿಳಿದಿದ್ದೂ, ಆ ಮರದಿಂದ ಜೀವ ಉಳಿಸಿಕೊಳ್ಳಲು ನಿನಗೂ ಆಗಲಿಲ್ಲ, ನಿನ್ನ ಮಹಾ ಕುದುರೆಯಂಥ ಟಗರಿಗೂ ಆಗಲಿಲ್ಲ. ಇನ್ನು ನಿನ್ನ ರಾಣೀದೇವಿ ನಮಗೇನು ತಾನೇ ಬಹುಮಾನ ಕೊಟ್ಟಾಳು? ಬಹುಶಃ ಒಂದಿಷ್ಟು ಗೆಣಸುಗಡ್ಡೆಯನ್ನೂ, ಬಿದಿರಕ್ಕಿಯನ್ನೂ ಕೊಡುವಳೇನೋ? ಸುಮ್ಮನೆ ನಿನ್ನ ದಾರಿ ಹಿಡಿದು ಹೋಗಪ್ಪ; ನಮ್ಮ ದಾರಿ ಹಿಡಿದು ನಾವೂ ಹೋಗುತ್ತೇವೆ'' ಎಂದನು.

ಅವನ ಅವಹೇಳನೆಯ ಮಾತುಗಳಿಗೆ ಕುಳ್ಳ ಸೇನಾಪತಿ ಮುಖಬಾಡಿಸಿಕೊಂಡು ಏನೂ ತೋರದೆ ದಿಕ್ಕುದಿಕ್ಕು ನೋಡತೊಡಗಿದ. ಇಷ್ಟು ದೊಡ್ಡ ಉಪಕಾರ ಮಾಡಿದವರಿಗೆ ಏನೂ ಪ್ರತಿಫಲ ಕೊಡದೆ ಸುಮ್ಮನಿರಲು ಅವನಿಗಾಗಲಿಲ್ಲವೇನೋ! ಅಷ್ಟರಲ್ಲಿ ಮರಗಳ ಆಚೆಯ ಬದಿಯಲ್ಲಿ ಏನೋ ಕಲಕಲರವ ಹೊರಡತೊಡಗಿತು. ಜಯಶೀಲನೂ ಸಿದ್ಧಸಾಧಕನೂ ಆ ಧ್ವನಿ ಕೇಳಿ ಬರುವ ಕಡೆಗೆ ತಿರುಗಿ ನಿಂತರು. ಬರಬರುತ್ತ ಧ್ವನಿ ಸಮೀಪವಾಗುತ್ತಿದ್ದಿತು.

ಎರಡು ಟಗರುಗಳನ್ನು ಹೂಡಿದ ರಥದ ಮೇಲೆ ಒಂದು ಕುಳ್ಳ ಸ್ತ್ರೀವ್ಯಕ್ತಿ ಕುಳಿತಿರುವುದನ್ನು ನೋಡಿದರು. ಅವಳ ವೇಷಭೂಷಣಗಳು ವಿಚಿತ್ರವಾಗಿದ್ದುವು. ಅವಳು ಜಿಂಕೆಯ ಚರ್ಮವನ್ನು ಧರಿಸಿದ್ದಳು. ಕೊಕ್ಕರೆ ಮತ್ತು ನವಿಲುಗಳ ಗರಿಗಳಿಂದ ಹೊಲಿದು ಮಾಡಲ್ಪಟ್ಟ ಕಿರೀಟವನ್ನು ತಲೆಯಲ್ಲಿ ಇರಿಸಿಕೊಂಡಿದ್ದಳು. ಆ ರಥದ ಹಿಂದೆಯೂ ಅಕ್ಕಪಕ್ಕಗಳಲ್ಲಿಯೂ ಟಗರುಗಳನ್ನೇರಿಕೊಂಡು ಕೈಯಲ್ಲಿ ಭಲ್ಲೆಗಳನ್ನು ಹಿಡಿದುಕೊಂಡ ಅನೇಕ ಮಂದಿ ಕುಳ್ಳರಿದ್ದರು. ಅವರೆಲ್ಲರೂ ''ಮಹಾರಾಣಿಗೆ ಜಯ! ಗಡೇಕಾರೀ ರಾಣೀದೇವಿಗೆ ಜಯ!'' ಎಂದು ಒಂದೇ ಲಯದಲ್ಲಿ ಘೋಷಿಸಿಕೊಂಡು ಬರುತ್ತಿದ್ದರು.

ಅವರನ್ನು ನೋಡಿ ಕುಳ್ಳಸೇನಾಪತಿ ಮುಂದೆ ಹೋಗಿ, ''ಜಯ ಮಹಾರಾಣೀದೇವೀ'' ಎಂದು ಬಗ್ಗಿ ರಾಣಿಗೆ ನಮಸ್ಕಾರ ಮಾಡಿದನು. ಅವನೇ ಜಯಶೀಲ, ಸಿದ್ಧಸಾಧಕರನ್ನು ಅವಳಿಗೆ ತೋರಿಸಿ ''ಇವರು ನನ್ನನ್ನು ನರಭಕ್ಷಕ ವೃಕ್ಷದ ಹಿಡಿತದಿಂದ ಕಾಪಾಡಿದರು'' ಎಂದು ಅರಿಕೆ ಮಾಡಿದನು.


ಕುಳ್ಳರ ರಾಣಿ ತನ್ನ ರಥವನ್ನು ಜಯಶೀಲನ ಮುಂದೆ ನಿಲ್ಲಿಸಿ. ''ಓ, ಮಹಾಕಾಯರಾದ ಮಹಾನುಭಾವರುಗಳೇ! ನೀವೇ ರಾತ್ರಿಯಲ್ಲಿ ನನ್ನ ಕನಸಿನಲ್ಲಿ ಬಂದವರು. ನಮ್ಮನ್ನು ಹೆದರಿಸುವ ಶತ್ರುಗಳಿಂದ ನಮ್ಮನ್ನು ಕಾಪಾಡುವವೆಂದು ನನಗೆ ಭರವಸೆಕೊಟ್ಟವರು ನೀವಿಬ್ಬರೂ! ಹೇಳಿದ ಹಾಗೇ ಬಂದಿದ್ದೀರಿ. ನಿಮಗೆ ನಮಸ್ಕಾರ'' ಎಂದಳು.

ಸಿದ್ಧಸಾಧಕನು ಜಯಶೀಲನ ಕಿವಿಯಲ್ಲಿ "ಈ ಕಳ್ಳರಾಣಿ ನಮ್ಮ ಮೇಲೇನೋ ಗಾಳಹಾಕುವ ಹಾಗಿದೆ!" ಎಂದ ಪಿಸುದನಿಯಿಂದ.

"ಬಹಳ ಮಾತಿನ ಮಲ್ಲಿಯು ಹಾಗಿದ್ದಾಳೆ. ಪಾಪ, ಈ ಕಳ್ಳ ಮನುಷ್ಯರಿಗೆ ಯಾರಿಂದಲೋ ಏನೋ ಅಪಾಯ ಬರುವ ಹಾಗಿದೆ. ವಿಚಾರಿಸೋಣ. ನಮ್ಮಿಂದಾದರೆ ಸಹಾಯ ಮಾಡೋಣ. ಒಳಿತು ಮಾಡಿದುದರ ಫಲ ಸುಮ್ಮನೆ ಹೋಗಲಾರದು" ಎಂದು ಮೆಲ್ಲನೆ ಜಯಶೀಲನು ಹೇಳಲು, ಅದು ಸಿದ್ಧಸಾಧಕನಿಗೆ ಹಿಡಿಸಲಿಲ್ಲ. ಅವನು ಮುಖವನ್ನು ಸೊಟ್ಟಗೆ ಮಾಡಿ, "ಜಯಶೀಲಾ, ನಾವು ಒಂದು ಮಹೋನ್ನತವಾದ ಕಾರ್ಯವನ್ನು ಸಾಧಿಸಲಿಕ್ಕಾಗಿ ಹೊರಟು ಬಂದವರು. ಆ ಸಮಾಚಾರವನ್ನು ಮರೆತು ಈ ಸಣ್ಣ ಸಣ್ಣ ಪುಡಿಗಾಳುಗಳನ್ನು ಹೆಕ್ಕುವ ...ಸಕ್ಕೆ ಬೀಳುವುದುಂಟೇ ?" ಎಂದನು.

"ಸಾಧಕಾ, ಕನಕಾಕ್ಷ ಮಹಾರಾಜರ ಮಕ್ಕಳ ಪ್ರಾಣಗಳಂತಹುದೇ ಈ ಕಳ್ಳಜಾತಿಯವರ ಪ್ರಾಣಗಳೂ ಎಂಬುದನ್ನು ಮರೆಯಬೇಡ. ಪ್ರಾಣವೆಂದರೆ ರಾಕ್ಷಸನಿಗೂ ಮನುಷ್ಯ ಮೊದಲಾದ ಸಣ್ಣಪುಟ್ಟ ಪ್ರಾಣಿಗಳಿಗೂ ಒಂದೇವಿಧ ಗೊತ್ತೆ ? ಈಗ ಇವರಿಗೆ ಯಾರಿಂದ ಏನು ಕಷ್ಟ ಬರುತ್ತದೆಂಬುದನ್ನು ವಿಚಾರಿಸಿ ಕೈಲಾದ ಸಹಾಯಮಾಡುವುದೇ ನಿಜವಾದ ಮನುಷ್ಯ ಧರ್ಮ" ಎಂದ ಜಯಶೀಲ.

ಜಯಶೀಲನ ಮಾತು ಮುಗಿಯುವುದರೊಳಗೆ ಪಕ್ಕದಲ್ಲಿದ್ದೊಂದು ಗುಡ್ಡದ ದಿಣ್ಣೆಯ ಮೇಲಿನಿಂದ ಭೀತಾವಹವಾದ ಗರ್ಜನೆಯೊಂದು ಹೊರಟಿತು. ಎಲ್ಲರೂ ಆ ಕಡೆಗೆ ನೋಡಿದರು. ಅಲ್ಲೊಂದು ರಾಕ್ಷಸಾಕಾರವೇ ನಿಂತಿತ್ತು. ಸುಮಾರು ಹನ್ನೆರಡಡಿ ಎತ್ತರವಾದ ಶರೀರ. ಅದು ತನ್ನ ಎರಡು ಕೈಗಳಲ್ಲಿಯೂ ಒಂದು ದೊಡ್ಡ ಬಂಡೆಗಲ್ಲನ್ನು ಎತ್ತಿ ಬಿಸುಡಲು ಸಿದ್ಧವಾಗಿ ನಿಂತಿತ್ತು. ಅದರ ನಡುವಿಗೆ ಕಟ್ಟಿದ ಬಲವಾದ ಕಬ್ಬಿಣದ ಸಂಕಲೆಯನ್ನು ಒಬ್ಬ ಮನುಷ್ಯನು ಹಿಡಿದಿದ್ದನು. ಅವನ ಇನ್ನೊಂದು ಕೈಯಲ್ಲಿ ಕತ್ತಿ ಇದ್ದಿತು. ಅವನನ್ನೂ, ಅವನು ಹಿಡಿದಿದ್ದ



ವಿಕೃತಾಕಾರವನ್ನೂ ನೋಡಿ, ಕುಳ್ಳ ರಾಣಿಯೂ ಇತರ ಕುಳ್ಳ ಸಮುದಾಯವೂ ಒಣಗಿದ ತರಗೆಲೆಗಳಂತೆ ನಡುಗ ತೊಡಗಿದರು. ಅಷ್ಟರಲ್ಲಿ ಕತ್ತಿಯವನು ವಿಕೃತಾಕಾರದ ಬೆನ್ನಿನಲ್ಲಿ ಕತ್ತಿಯಿಂದ ಗೀರಿದನು. ಆಗ ಆ ವಿಕೃತಾಕಾರವು ಕಲ್ಲನ್ನು ಹಾಗೇ ಎತ್ತಿಕೊಂಡು ಆಚೆಗೂ ಈಚೆಗೂ ಹಾರಾಡತೊಡಗಿತು.

ಅದನ್ನು ನೋಡಿ ಜಯಶೀಲನು ಸಿದ್ಧಸಾಧಕನೊಂದಿಗೆ, "ನೋಡಿದೆಯಾ ಸಾಧಕಾ, ಆ ಭಯಂಕರ ದೈತ್ಯಾಕಾರದ ಪ್ರಾಣಿಯನ್ನು ಪಳಗಿಸಿ ಆಡಿಸುವವನು ಕುಳ್ಳ ಜಾತಿಯವನಲ್ಲ. ನಮ್ಮ ಹಾಗಿನ ಮನುಷ್ಯನೇ. ಆ ಪ್ರಾಣಿ ಎಂಥದಿರಬಹುದು ?" ಎಂದನು. ಸಿದ್ಧಸಾಧಕನೂ ತಿಳಿಯದೆಂಬಂತೆ ತಲೆ ಆಡಿಸುತ್ತಾ ಅದನ್ನೇ ನೋಡುತ್ತಿದ್ದನು.

ಜಯಶೀಲನು ಕುಳ್ಳರ ರಾಣಿಯನ್ನು ಕುರಿತು, "ಓ ರಾಣಿಯೇ, ನಿಮಗೇನೋ ಶತ್ರುಗಳ ಕಾಟವಿರುವುದೆಂದು ಹೇಳಿದೆಯಲ್ಲಾ ? ಆ ಶತ್ರುಗಳು ಈ ಭಯಂಕರ ಪ್ರಾಣಿಯೂ ಅದನ್ನಾಡಿಸುವ ಆ ಕತ್ತಿ ಹಿಡಿದ ಮನುಷ್ಯನೂ ಅಂತ ಕಾಣುತ್ತದೆ, ಹೌದೇ ?" ಎಂದು ಕೇಳಿದ.


ಕುಳ್ಳರ ರಾಣಿ ಅದಕ್ಕೇನೂ ಉತ್ತರ ಕೊಡದೆ, ಭಯವನ್ನು ಬಿಟ್ಟು ರಥದಿಂದ ಕೆಳಗಿಳಿದು ಜಯಶೀಲ, ಸಿದ್ಧಸಾಧಕರ ಮುಂದೆ ಬಂದು, "ಮಹಾನುಭಾವರೇ, ನಮ್ಮನ್ನು ಕಾಡಿಸುವ ಶತ್ರುಗಳು ಇವರಲ್ಲ; ಬೆಟ್ಟದ ಆಚೆಗಿರುವ ನಮ್ಮಂತಹ ಕುಳ್ಳ ಜಾತಿಯವರೇ. ಅವರು ತಾವು ಯಕ್ಷರಿಂದ ಉದ್ಭವಿಸಿದ ಯಾಕ್ಷಿಕರೆಂದು, ನಮಗಿಂತ ಹೆಚ್ಚಿನವರೆಂದು ಅಹಂಕಾರವಿಟ್ಟುಕೊಂಡು ನಮ್ಮನ್ನು ನಾಶಮಾಡಲು ಕಂಕಣ ಕಟ್ಟಿಕೊಂಡಿದ್ದಾರೆ !" ಎಂದಳು.

"ಹಾಗಾದರೆ ಆ ದೈತ್ಯಾಕಾರದ ಪ್ರಾಣಿಯನ್ನು ಇಷ್ಟಬಂದಂತೆ ಆಡಿಸುವವರು ಎಂದೋ ನಿಮ್ಮನ್ನು ಬಗ್ಗಿಸ ಬೇಕಿತ್ತು. ಇವರಿಗೂ ಅವರಿಗೂ ಸಂಬಂಧವು ಇಲ್ಲವೇನು ?" ಎಂದು ಕೇಳಿದ ಸಿದ್ಧಸಾಧಕ.

"ಮಹಾಕಾಯದ ವೀರರೇ. ಆ ಭಯಂಕರ ಪ್ರಾಣಿ ನರವಾನರ ಜಾತಿಯದು. ಅದರಿಂದ ನಮ್ಮ ಮೇಲೆ ಕಲ್ಲುಬಂಡೆ ಬೀಸಿಸುವವನು ನಿಮ್ಮಂತಹ ಮನುಷ್ಯ. ಇವರಿಬ್ಬರೂ ಹನ್ನೆರಡು ದಿನಗಳ ಹಿಂದೆ ಬಂದು ನಮ್ಮ ಆ ಶತ್ರುಗಳೊಂದಿಗೆ ಸೇರಿದ್ದಾರೆ. ಅದೇ ನಮಗೀಗ ಬಂದಿರುವ ದೊಡ್ಡ ಕುತ್ತು !" ಎಂದಳು ಕುಳ್ಳರ ರಾಣಿ.

ರಾಣಿಯ ಮಾತು ಮುಗಿಯುವಷ್ಟರಲ್ಲಿ ನರವಾನರವು ಪ್ರಳಯ ಭಯಂಕರ ಧ್ವನಿಯಿಂದ ಅರಚಿ, ಕೈಯಲ್ಲಿ ಹಿಡಿದಿದ್ದ ದೊಡ್ಡಬಂಡೆಗಲ್ಲನ್ನು ಗುಡ್ಡದ ಮೇಲಿನಿಂದ ಕುಳ್ಳ ಜಾತಿಯವರ ಮೇಲೆ ಒಗೆದು ಹಾಕಿತು.

(ಮುಂದುವರಿಯುವುದು)






March 1977

# ಮಾಯಾಸರೋವರ

೧೪

[ಜಲಪಾತದಲ್ಲಿ ಸಿಕ್ಕಿ ಬದುಕಿ ಉಳಿದ ಜಯಶೀಲನೂ ಸಿದ್ಧಸಾಧಕನೂ ಒಬ್ಬ ಕುಳ್ಳನನ್ನು ನರಭಕ್ಷಕ ವೃಕ್ಷದ ಹಿಡಿತದಿಂದ ಕಾಪಾಡಿದರು. ಆ ಸಮಯದಲ್ಲಿ ಅಲ್ಲಿಗೆ ಕುಳ್ಳರ ರಾಣಿ ಬಂದಳು. ಅವಳು ತಮ್ಮ ಶತ್ರುಗಳನ್ನು ಕುರಿತು ಹೇಳುತ್ತಿದ್ದಾಗ, ಬೆಟ್ಟದ ಮೇಲಿನಿಂದ ಕೋತಿಯಂತಹ ಬೃಹತ್ ಪ್ರಾಣಿಯೊಂದು ಅವರ ಕಡೆಗೆ ದೊಡ್ಡದೊಂದು ಬಂಡೆ ಕಲ್ಲನ್ನು ಎತ್ತಿ ಬಿಸುಟಿತು.]

ಅದೃಷ್ಟವಶಾತ್ತಾಗಿ ಆ ದೊಡ್ಡ ಬಂಡೆಗಲ್ಲು ಜಯಶೀಲ ಮೊದಲಾದವರು ನಿಂತಿದ್ದ ಸ್ಥಳಕ್ಕೆ ಇಪತ್ತು ಮೂವತ್ತು ಅಡಿ ದೂರಕ್ಕೆ ಬಿದ್ದುಬಿಟ್ಟಿತ್ತು. ಇದರಿಂದ ಆ ಪ್ರಾಣಿಗೆ ಗುರಿಯ ಸಾಧನೆ ಸರಿಯಾಗಿಲ್ಲವೆಂಬುದು ಸ್ಪಷ್ಟವಾಯಿತು. ಅದಕ್ಕೆ ಅಭ್ಯಾಸ ಮಾಡಿಸಿದ ಮನುಷ್ಯನಿಗೆ ಅವಸರದ ಬುದ್ಧಿಯಾಗಿರಬೇಕು.

ಜಯಶೀಲನೂ ಸಿದ್ಧಸಾಧಕನೂ ಬೆಟ್ಟದ ತಲೆಯಲ್ಲಿ ಇನ್ನೂ ನಿಂತಿರುವ ಆ ಭಯಂಕರ ಪ್ರಾಣಿಯನ್ನೂ, ಅದರ ಪಕ್ಕದಲ್ಲಿ ನಿಂತಿದ್ದ ಮನುಷ್ಯನನ್ನೂ ನೋಡುತ್ತ ಬಹಳ ಆಶ್ಚರ್ಯಪಡುತ್ತಿದ್ದರು. ಕಾರಣವೇನೆಂದರೆ ಆ ಮನುಷ್ಯನನ್ನು ಎಲ್ಲಿಯೋ ನೋಡಿರುವೆನೆಂಬ ನೆನಪು ಜಯಶೀಲನನ್ನು ಚುಚ್ಚಿಕೊಂಡೇ ಇದ್ದಿತು. ಅವನೊಬ್ಬ ತನ್ನ ಹಗೆಗಾರನಂತಿದ್ದಾನೆ. ಎಲ್ಲಿ, ಎಲ್ಲಿಯೆಂದು ತೀವ್ರವಾಗಿ ನೆನಪನ್ನು ಕೆದರಿಕೊಳ್ಳುತ್ತಿದ್ದರೂ ನೆನಪಿಗೆ ಬರಲೊಲ್ಲದು.

ಅಷ್ಟರಲ್ಲಿ ದಢಾಲ್ಲನೆ ಆ ಬಂಡೆಗಲ್ಲು ಬಿದ್ದು, ಎಲ್ಲರನ್ನೂ ಹಾರಿ ಬೀಳಿಸಿ ಕೂಗಿಡಿಸಿತು. ಕುಳ್ಳ ಜನರೆಲ್ಲಾ ತಮ್ಮ ಟಗರು ವಾಹನಗಳನ್ನು ದೂರಕ್ಕೆ ಓಡಿಸಿ ನಿಂತರು, ಕುಳ್ಳ ರಾಣಿ ಕೂಡಾ ತುಸು ದೂರಸಾಗಿ ನಿಂತು, ಜಯಶೀಲನನ್ನು ನೋಡಿ, "ಮಹಾ



ಕಾಯರೇ, ಆ ಭಯಂಕರವಾದ ಗುಡ್ಡದಷ್ಟು ದೊಡ್ಡ ನರವಾನರವನ್ನು ನೋಡಿದಿರಾ? ಅದನ್ನು ಪಳಗಿಸಿದ ಆ ಮಹಾಕಾಯನೂ ನಮ್ಮನ್ನು ನಾನಾ ಹಿಂಸೆಗಳಿಗೆ ಒಳಪಡಿಸುತ್ತಿದ್ದಾನೆ. ಈ ಕಷ್ಟವು ನಮಗೆ ಬಂದು ಹತ್ತು ಹನ್ನೆರಡು ದಿನಗಳಾದುವು. ಕಾಡಿನಲ್ಲಿ ಬೇಟೆಯಾಡಲು ಹೋಗಿದ್ದ ನಮ್ಮ ಜಾತಿಯ ನಾಲ್ಕು ಮಂದಿಯನ್ನು ಆ ಮಹಾಕಾಯನು ಕೊಂದುಹಾಕಿದ್ದಾನೆ ಕೂಡಾ. ಯಾವ ಕ್ಷಣದಲ್ಲಾದರೂ ನಮ್ಮ ಜಾತಿಗಳವರು ಈ ಕ್ರೂರನ ಸಹಾಯ ತೆಗೆದುಕೊಂಡು ನಮ್ಮ ಮೇಲೆ ದಾಳಿ ಮಾಡಬಹುದು. ರಾತ್ರಿಹಗಲೂ ಇದೇ ಚಿಂತೆಯಾಯಿತು ನಮಗೆ. ಅವನನ್ನು ಹೇಗೆ ತೊಲಗಿಸುವುದೆಂದೇ ಗೊತ್ತಾಗುವುದಿಲ್ಲ." ಎಂದಳು.

ಜಯಶೀಲನಿಗೂ ಸಿದ್ಧಸಾಧಕನಿಗೂ ಈ ಗಡೇಕಾರಿ ರಾಣಿಯ ಮೇಲೆ ಕನಿಕರವಾಯಿತು. ಅವರ ರೂಪಾಕಾರಗಳ ಮಟ್ಟಿಗೆ ಅವಳೂ ಅವಳ ಕಡೆಯವರೂ ಧೈರ್ಯ ಸಾಹಸಗಳುಳ್ಳವರೆಂದು ಗೊತ್ತಾಗುತ್ತಿ... ಆದರೆ ಅವರ ಅಳವಿಗೆ ಮೀರಿದಂತಿರುವ ನರವಾನ... ವನ್ನೂ, ಅದರೊಂದಿಗಿರುವ ಮನುಷ್ಯನನ್ನೂ ನೋ... ಭಯಭ್ರಾಂತರಾಗಿದ್ದಾರೆ. ಕುಳ್ಳಜನಾಂಗವಾದ ಅವ... ಶಕ್ತಿಗೆ ಅವೆರಡೂ ದೊಡ್ಡ ದೈತ್ಯ ಶಕ್ತಿಗಳೇ.

"ಜಯಶೀಲಾ, ಆ ನರವಾನರದ ಹತ್ತಿರ ಶ... ಹಿಡಿದುಕೊಂಡಿರುವವನು ನಮ್ಮ ರಾಜ್ಯದ ಮನು... ನಾಗಿರಲಾರನಷ್ಟೆ? ಅವನ ನಡೆನುಡಿ ಹಾವ ಭಾ... ಗಳನ್ನು ನೋಡುವಾಗ ನನಗೇನೋ ಸಂದೇಹವಾಗಿ... ಸ್ವಲ್ಪ ಪರೀಕ್ಷಿಸಿ ನೋಡು!" ಎಂದ ಸಿದ್ಧಸಾಧಕ.

ಇಷ್ಟರಲ್ಲಿ ಜಯಶೀಲನಿಗೆ ಕೂಡಾ ಆ ಮನು... ಇಂಥವನೇ ಆಗಿರಬೇಕೆಂಬ ಅನುಮಾನ ಉಂ... ಯಿತು. ಆದರೆ ಅವನು ತನ್ನ ಹಾಗೆ ಅರಣ್ಯಗಳನ್ನೂ, ಬೆಟ್ಟಗಳನ್ನೂ, ನದಿಗಳನ್ನೂ ದಾಟಿ ಈ ಸ್ಥ... ಬರುವುದು ಸಾಧ್ಯವೆಂದು ತೋರಲಿಲ್ಲ. ಬರ... ಕಾರಣವಾದರೂ ಏನಿದ್ದೀತು ಅವನಿಗೆ? ಅವನಂತಿರು... ಇನ್ನೊಬ್ಬನಿರಬೇಕು.

ಜಯಶೀಲನು ಹೀಗೆ ಆಲೋಚಿಸಿಕೊಂಡಿರುವಾ... ನರವಾನರದ ಬದಿಯಲ್ಲಿದ್ದವನು, ವಾನರವ... ಕತ್ತಿಯ ತುದಿಯಿಂದ ತಿವಿತಿವಿದು ಏನೋ ಮಾ... ವಂತೆ ಒತ್ತಾಯಿಸುತ್ತಿದ್ದನು. ನರವಾನರವು ಹಾರು... ಹೋಗಿ ಸಮೀಪದಲ್ಲಿದ್ದ ಬಂಡೆಗಲ್ಲನ್ನು ಮೇಲೆತ್ತ... ಪ್ರಯತ್ನಿಸುತ್ತಿತ್ತು. ಆ ಕಲ್ಲು ಬಹಳ ದೊಡ್ಡದಾದ... ರಿಂದ ಸುಲಭದಲ್ಲಿ ಎತ್ತಲು ಆದರಿಂದಾಗಲಿಲ್ಲ. ಎ... ವಂತೆ ಅವನು ತಿವಿದು ಪೀಡಿಸುತ್ತಿದ್ದನು.


"ನೋಡಿದೆಯಾ ಸಾಧಕಾ? ಆ ಕ್ರೂರ ಮ... ಬಂಡೆಗಲ್ಲನ್ನು ನಮ್ಮ ಮೇಲೆ ಬಿಸುಡಿಸುವ ... ಮಾಡುತ್ತಾನೆ. ಈ ಹಚ್ಚಹಗಲಿನಲ್ಲಿ ಅಂತಹ ... ಗಳನ್ನು ತಪ್ಪಿಸಿಕೊಳ್ಳುವುದು ಬಹಳ ಸುಲಭವ... ಯೋಚನೆ ಕೂಡ ಆ ಮಡೆಯನಿಗೆ ಬಂದಂತಿಲ್ಲ" ಎಂದು ಹೇಳಿ ಜಯಶೀಲನು ಗಡೇಕಾರಿ ರಾಣಿ...

ಗೆ ತಿರುಗಿ, "ಏನಮ್ಮಾ ಕುಬ್ಜರಾಣೀ, ನಿನ್ನ ಕಡೆ ವರು ಕಾಡಿನಲ್ಲಿ ಬೇಟೆಯಾಡಲು ಬಿಲ್ಲುಬಾಣ ನ್ನು ಉಪಯೋಗಿಸುತ್ತಾರಷ್ಟೆ ? ಅಂತಹ ಬಿಲ್ಲು ಣಗಳನ್ನು ಬೇಗನೇ ತರಿಸು. ಇವರ ಕಥೆ ತೀರಿಸು ನೆ" ಎಂದನು. ಅವರ ಬಿಲ್ಲುಬಾಣಗಳು ತೀರ ವಾಗಿದ್ದರೆ ಅದರಿಂದ ಪ್ರಯೋಜನವಿರಲಾರ ದೂ ಅವನಿಗೆ ತೋರಿತು.

ಆ ಕುಳ್ಳ ಜಾತಿಯವರು ಸಾಧಾರಣವಾಗಿ ಭಲ್ಲೆ ಂದಲೇ ಬೇಟೆಯಾಡುತ್ತಾರೆ. ಬಿಲ್ಲುಬಾಣಗಳನ್ನು ಟ್ಟಕೂಡದೆಂಬುದು ಅವರ ಜಾತಿಯ ಕಟ್ಟಳೆಯೇ ತು. ಬಿಲ್ಲುಬಾಣಗಳು ಅವರ ಮಟ್ಟಿಗೆ ನಿಷಿದ್ಧಾ ಧ. ಭಲ್ಲೆ ಬಳಸುವುದರಲ್ಲಿ ನಿಪುಣನಾದವನಿಗೆ ಲ್ಲೇ ಕುಳ್ಳ ಮಲ್ಲ" ನೆಂದು ಬಿರುದು ಕೊಡು ರು. ಅಪ್ಪಿತಪ್ಪಿ ಯಾವ ಕುಳ್ಳ ಜಾತಿಯವ ದರೂ ಬಿಲ್ಲು ಹಿಡಿದನೆಂದರೆ ಅವನನ್ನು ಅಪರಾಧಿ ನ್ನಾಗಿ ಮಾಡಿ ಕ್ರೂರ ದಂಡನೆ ವಿಧಿಸುತ್ತಿದ್ದರು. ಆದರೆ ಅವರ ಸೇನಾ ನಾಯಕನಿಗೆ ಎಂದೋ ದು ದಿನ ಅರಣ್ಯದಲ್ಲೊಂದು ಕಡೆ ದೊಡ್ಡದೊಂದು ಲ್ಲೂ ಐದಾರು ಬಾಣಗಳೂ ಸಿಕ್ಕಿದ್ದುವು. ಅವು ನ್ನು ಬಿಟ್ಟುಹೋಗಲು ಮನಸ್ಸು ಬಾರದೆ, ಅವನು ಗಳನ್ನು ಯಾರಿಗೂ ತಿಳಿಯದಂತೆ ರಹಸ್ಯವಾಗಿ ದು ಒಂದು ಕಡೆ ಅಡಗಿಸಿಟ್ಟಿದ್ದನು.

ಜಯಶೀಲನು ಬಿಲ್ಲುಬಾಣಗಳನ್ನು ಕೇಳಿದ ಡಲೇ ಏನು ಹೇಳುವುದೆಂದು ತಿಳಿಯದೆ ಕುಳ್ಳ ಣಿ ತಮ್ಮ ಸೇನಾ ನಾಯಕನನ್ನು ನೋಡಿದಳು. ಸೇನಾ ನಾಯಕ ಅವಳನ್ನು ನೋಡಿ ತಟ್ಟನೆ ಲ್ಲುಬಾಣ..." ಎಂದೇನೋ ಹೇಳಲು ಬಾಯಿ ದು ಮರುಕ್ಷಣ ಮೌನವಾಗಿ ಮುಖ ತಿರುಗಿಸಿ ಶ ನೋಡಿದನು.

ಇದನ್ನು ಗಮನಿಸಿದ ಸಿದ್ಧಸಾಧಕ, "ಏನಪ್ಪಾ, ಟ್ಟಯೋಧ ! ಮಾತಾಡಲಿಕ್ಕೇ ಭಯಪಡುವ



ನೀನು ಸೈನಿಕರನ್ನೂ, ಟಗರು ವೀರರನ್ನೂ ಹೇಗೆ ತಾನೇ ನಡೆಸುವಿಯೋ ? ಹೇಳುವುದನ್ನು ಧೈರ್ಯದಿಂದ ಹೇಳಬಾರದೆ ? " ಎಂದನು.

ಈ ಅವಹೇಳನೆಯ ಮಾತಿನಿಂದ ಕಳ್ಳರ ಸೇನಾಪತಿ ಹೋದ ಧೈರ್ಯವನ್ನು ಒಟ್ಟುಗೂಡಿಸಿಕೊಂಡವನಾಗಿ, "ಮಹಾರಾಣಿ, ನಮ್ಮ ಜಾತಿಯವರು ಬಿಲ್ಲುಬಾಣಗಳನ್ನು ಮುಟ್ಟಬಾರದೆಂಬ ನಿಯಮವಿದೆಯಷ್ಟೆ ? ಹಾಗಿದ್ದೂ ನಾನು ಸ್ವಲ್ಪ ನಿಯಮಕ್ಕೆ ಭಂಗ ಮಾಡಿದ್ದೇನೆ. ಒಂದು ದಿನ ಅರಣ್ಯದಲ್ಲಿ ಅನಾಥವಾಗಿ ಬಿದ್ದಿದ್ದ ಬಿಲ್ಲನ್ನೂ ಕೆಲವು ಬಾಣಗಳನ್ನೂ ನೋಡಿ, ನಮಗಲ್ಲದಿದ್ದರೂ ಬೇರೆ ಯಾರಿಗಾದರೂ ಸಮಯಕ್ಕೆ ಉಪಯೋಗವಾದೀತು ಎಂದುಕೊಂಡು ತಂದು ಮನೆಯಲ್ಲಿ ಅಡಗಿಸಿಟ್ಟಿದ್ದೇನೆ. ಇದೊಂದು ಅಪರಾಧವೇ ಹೌದು. ಇನ್ನು ನಿಮ್ಮ ಚಿತ್ತ!" ಎಂದನು.

ಕುಳ್ಳ ರಾಣಿ ಕಣ್ಣು ಕೆಂಪು ಮಾಡಿಕೊಂಡು ಸೇನಾಪತಿಗೆ ಏನೋ ಹೇಳಲಿರುವುದನ್ನು ನೋಡಿ, ಜಯ



ಶೀಲನು ಕೈಯೆತ್ತಿ ಅವಳನ್ನು ಸುಮ್ಮನಿರಿಸಿ, "ಕುಬ್ಜ ರಾಣೀ, ನಿನ್ನ ಸೇನಾಪತಿ ಮಾಡಿದ ಕೆಲಸವು ನಿನ್ನ ದೃಷ್ಟಿಯಲ್ಲಿ ಎಷ್ಟು ದೊಡ್ಡ ತಪ್ಪೇ ಆದರೂ ಅವನು ಸ್ವಾರ್ಥಕ್ಕಾಗಿ ಅದನ್ನು ಬಳಸಲಿಲ್ಲ. ಆದುದರಿಂದ ಕ್ಷಮೆಗೆ ಅರ್ಹನಾಗುತ್ತಾನೆ, ಈಗಂತೂ ಅವನು ಮಾಡಿದ ಕೆಲಸ ಒಳ್ಳೆಯದಕ್ಕೇ ಆಗುವುದೆಂದು ನಂಬು. ಈಗ ಈ ಸಮಸ್ಯೆಯ ಚರ್ಚೆಯನ್ನು ಬಿಟ್ಟು ತತ್‌ಕ್ಷಣವೇ ಆ ಬಿಲ್ಲುಬಾಣಗಳನ್ನು ತರಿಸಿಬಿಡು. ಆ ನರವಾನರದ ಪೀಡೆಯನ್ನು ನಿವಾರಿಸಬಹುದು. ಆ ಮೇಲೆ ನಾನೇ ನನಗೆ ತಕ್ಕುದಾದ ಬಿಲ್ಲುಬಾಣಗಳನ್ನು ತಯಾರಿಸಿ ಆ ಮನುಷ್ಯನನ್ನೂ, ನರವಾನರವನ್ನೂ ಹೇಗೆ ಹತ ಮಾಡುತ್ತೇವೆಂಬುದನ್ನೂ ನೀನೇ ನೋಡುವಿ." ಎಂದನು.

ಕುಳ್ಳರ ರಾಣಿ ಶಾಂತಳಾಗಿ ತನ್ನ ಸೇನಾ ನಾಯಕನನ್ನು ನೋಡಿದಳು. ಅದರ ಅರ್ಥವನ್ನರಿತು ಸೇನಾನಿ ತನ್ನ ಟಗರುವಾಹನವನ್ನು ಓಡಿಸಿಕೊಂಡು ಹೋಗಿ, ಮರಗಳ ಮರೆಯಲ್ಲಿ ಮರೆಯಾ... ಇಷ್ಟರಲ್ಲಿ ನರವಾನರವು ಮತ್ತೊಂದು ಬ... ಗಲ್ಲನ್ನು ಎತ್ತಿ ಹಿಡಿದುಕೊಂಡುಬಿಟ್ಟಿತ್ತು. ... ನಡುವಿಗೆ ಕಟ್ಟಿದ್ದ ಕಬ್ಬಿಣದ ಸರಪಳಿಯನ್ನು ಹಿಡಿ... ಮನುಷ್ಯನು ಕೋಪ ಕರ್ಕಶ ಸ್ವರದಿಂದ ಕೂಗು... ಕತ್ತಿಯ ಹಿಡಿಯಿಂದ ಅದರ ಬೆನ್ನಿನ ಮೇಲೆ ಹೊ... ದನು. ಕುಪಿತವಾದ ನರವಾನರವು ಅವನಿಗೆ ... ತೋರಿಸಿ ಹೆದರಿಸುತ್ತ ಪಕ್ಕಕ್ಕೆ ತಿರುಗಿ, ಬಂಡೆಗಲ್ಲ... ಅವನ ತಲೆಯ ಮೇಲೆಯೇ ಹಾಕಲು ನೋಡಿ... ಆಗ ಅವನು ಕತ್ತಿ ಮೊನೆಯನ್ನು ಅದರ ಕ... ಅನಿಸಿ ಹಿಡಿದು ಜೋರಾಗಿ ಕೂಗುತ್ತ ಹೆದರಿಸಿ...

ಆ ಮನುಷ್ಯನ ಕೂಗನ್ನೂ ಹಾವಭಾವ ಚ... ವಲನಗಳನ್ನೂ ಕೆಳಗಿನಿಂದ ನೋಡುತ್ತಿರುವ ಜ... ಶೀಲನಿಗೆ ಅವನ ಗುರುತು ಸ್ಪಷ್ಟವಾಗಿ ತಿ... ಬಿಟ್ಟಿತು. ಅವನು ಸಂತೋಷದಿಂದೊಂದು ಸ... ನೆಯ ಸಿಳ್ಳು ಹಾಕಿ, ಸಿದ್ಧಸಾಧಕನನ್ನು ನೋ... ಕಣ್ಣು ಹಾರಿಸುತ್ತ, "ತಿಳಿಯಿತು ಸಿದ್ಧಸಾಧಕಾ! ... ಮನುಷ್ಯ ಯಾರೆಂಬುದು ಗೊತ್ತಾಗಿಹೋಯಿತು... ಅವನು ನಮ್ಮ ಅಮರಾವತೀ ನಗರದವನು. ನ... ಹುಟ್ಟಿ ಬೆಳೆದ ಊರನ್ನು ಬಿಟ್ಟು ದೇಶಾಂ... ಹೊರಟು, ನಿಮ್ಮ ಹಿರಣ್ಯಪುರವನ್ನು ತಲುಪಿ ... ಕಾಡುಮೇಡು ತಿರುಗುವಂತಾದುದಕ್ಕೆ ಕಾರಣ... ವನೇ ಇವನು. ಆಗ ಇವನು ನಮ್ಮ ರಾಜ ರ... ಸೇನನ ಹತ್ತಿರ ಅಶ್ವದಳನಾಯಕನಾಗಿದ್ದ. ಬ... ಜೋರಿನವ! ಹೆಸರು ಕೃಪಾಣಜಿತ್ತು!" ಎಂದ...

ಜಯಶೀಲನ ಮಾತಿನಿಂದ ಸಿದ್ಧಸಾಧಕ... ಅತ್ಯಾಶ್ಚರ್ಯಪಡುತ್ತ, "ಹಾಗಾದರೆ ಇದೊಂ... ಅದ್ಭುತವೇ ಸರಿ. ಅಮರಾವತೀ ನಗರವೆಲ್ಲಿ? ... ಕಾಡು ಪ್ರದೇಶವೆಲ್ಲಿ? ಇಲ್ಲಿ ನಿನ್ನ ಹಳೆಯ ಶತ್ರು... ಹಾಗಾದರೆ ಈಗ ನೀನು ಏನು ಮಾಡಬೇ... ದಿರುವೆ?" ಎಂದು ಕೇಳಿದನು.


ಜಯಶೀಲನು ಸ್ವಲ್ಪ ಹೊತ್ತು ಆ ಬೆಟ್ಟವನ್ನು ನೋಡುತ್ತಾ ಸುಮ್ಮನಿದ್ದು, ಸಿದ್ಧಸಾಧಕ! ಅವನನ್ನು ಯಾರಾದರೂ ಕೊಂದುಬಿಡಲಿಕ್ಕೆ ನನಗಿಷ್ಟವಿಲ್ಲ. ಅವನ್ನು ಕೊಂದವನು ಯಾರೆಂಬುದು ಅವನಿಗೆ ಗೊತ್ತಾಗಬೇಕು. ಅವನೀಗ ಆ ನರವಾನರದೊಂದಿಗೆ ಹಿಡಿದ ಕೆಲಸವನ್ನೇ ಮಾಡಲು ಒತ್ತಾಯಿಸುತ್ತಾನೆ. ಅದಕ್ಕೆ ಕೋಪ ಬಂದಿದೆ. ಗುರಿ ನೋಡಿ ಬಂಡೆಗಲ್ಲು ಬಿಸುಡುವ ಸಾಧನೆ ಇನ್ನೂ ಅದಕ್ಕೆ ಇಲ್ಲ. ಅಷ್ಟರೊಳಗೆ ಅವನಿಗೆ ಅವಸರವೆಂದರೆ ಏನೋ ಸ್ವಾರ್ಥವಿರಬೇಕು. ಅದೀಗ ಅವನ ಮೇಲೇ ತಿರುಗಿ ಬಿದ್ದರೂ ಆಶ್ಚರ್ಯವೇನಿಲ್ಲ." ಎಂದನು.


ಜಯಶೀಲನು ಹೀಗೆ ಮಾತಾಡುತ್ತಿರುವಾಗಲೇ ವೀರ ಸೇನಾಪತಿ, ಬಿಲ್ಲುಬಾಣಗಳನ್ನು ಹೊತ್ತು ಕೊಂಡು ಅಲ್ಲಿಗೆ ಬಂದು ಟಗರುವಾಹನದಿಂದಿಳಿದು, ತಾನು ತಂದವುಗಳನ್ನು ಜಯಶೀಲನ ಪಾದಗಳ ಹತ್ತಿರ ಇಟ್ಟನು. ಜಯಶೀಲನು ಬಿಲ್ಲನ್ನು ಪರೀಕ್ಷಿಸಿ ನೋಡಿದನು.

ದೃಢವಾದ ಬಿಲ್ಲು. ತೀಕ್ಷ್ಣವಾದ ಆರು ಬಾಣಗಳು! ಸಿದ್ಧಸಾಧಕನು ಅವುಗಳನ್ನು ನೋಡಿ, "ಇನ್ನೇನು? ಜಯಶೀಲಾ, ನಿನ್ನ ಶತ್ರು ಆ ಕೃಪಾಣಜಿತ್ತನ್ನೂ ಆ ನರವಾನರಕ್ಕೆ ಜತೆಯಾಗಿ ಪರಲೋಕಕ್ಕೆ ಕಳುಹಿಸಿಬಿಡಬಹುದು! ಮೊದಲು ನಿನ್ನ ಹೆಸರನ್ನು ಕೂಗಿ ಹೇಳಿಬಿಡು." ಎಂದನು.

ಜಯಶೀಲನು ನಕ್ಕು, "ಸಾಧಕಾ, ಇಷ್ಟೊಂದು ದೂರದಿಂದ ಆ ಇಬ್ಬರನ್ನೂ ಗುರಿ ನೋಡಿ ಬಾಣದಿಂದ ಹೊಡೆಯುವುದು ಸುಲಭವೆಂದುಕೊಂಡೆಯಾ? ಇವು ಸಾಧಾರಣ ಬೇಟೆಯ ಬಾಣಗಳು. ಇಂದ್ರಾಸ್ತ್ರ ನಾಗಾಸ್ತ್ರಗಳೇನಲ್ಲ!" ಎಂದನು.

ಇಷ್ಟರಲ್ಲಿ ಬೆಟ್ಟದ ತಲೆಯಲ್ಲಿರುವ ಆ ನರವಾನರವು ತುಂಬ ರೋಷದಿಂದ ಕೆರಳಿಬಿಟ್ಟಿತ್ತು. ನರ ಮತ್ತು ನರವಾನರಗಳದೊಂದು ಹೋರಾಟದ ಗಲಭೆ! ಅದು ತನಗೆ ಪಾಠ ಕಲಿಸುವವನ ಮೇಲೆಯೇ ತಿರುಗಿಬಿದ್ದು ಬಂಡೆಗಲ್ಲಿನಿಂದ ಅವನನ್ನು ಹೊಡೆಯಲಿಕ್ಕೆ ನೋಡುವುದೂ, ಅವನು ಕತ್ತಿಯ ಮೊನೆಯಿಂದ ಅದನ್ನು





ಚುಚ್ಚುವುದೂ, ಅದು ಆಚೆಗೂ ಈಚೆಗೂ ಹಾರುವುದೂ ಪ್ರಾರಂಭವಾಯಿತು.

ಅಷ್ಟರಲ್ಲಿ ಅಲ್ಲಿಗೆ ನಾಲ್ಕೈದು ಮಂದಿ ಕುಳ್ಳ ಜನರು ಬಂದರು. ಅವರನ್ನು ನೋಡಿ ಕೃಪಾಣಜಿತ್ತುವಿಗೆ ಧೈರ್ಯಬಂದು ಅವರಿಗೆ ಸನ್ನೆಗಳನ್ನು ಮಾಡಿದನು. ಅವರ ಕೈಗಳಲ್ಲಿ ಹಗ್ಗವಿದ್ದಿತು. ಅವರು ಸ್ವಲ್ಪ ದೂರದಲ್ಲಿದ್ದು ಹಗ್ಗವನ್ನು ಬೀಸಿ ನರವಾನರದ ಕಾಲುಗಳನ್ನೂ ಕೈಗಳನ್ನೂ ಉರುಳಿನಿಂದ ಬಂಧಿಸಿ ಬಿಟ್ಟರು. ನರವಾನರವು ಬಂಡೆಯ ತುಂಡನ್ನು ಕೆಳಗೆ ಮೇಲೆತ್ತಿ ಇನ್ನೂ ಹೋರಾಡುತ್ತಲೇ ಇತ್ತು.

ಗಳನ್ನು ತಯಾರಿಸಿ ಆ ವಿಲ್ಲದನ್ನು ನೋಡಿ ಉತ್ಸಾಹ
ವನ್ನೂ ಹೇಗೆ ಹತ ಮಾಡು "ಅಯ್ಯೊ, ಆ ಭಯಂಕರ
ನೋಡುವಿ." ಎಂದನು. ಒಳ್ಳೇ ಸಮಯ. ಗುರಿ
ಕುಳ್ಳರ ರಾಣಿ ಶಾಂತಳಾಗಿ ತ" ಎಂದನು.
ನನ್ನು ನೋಡಿದಳು. ಅದರ ಹೌದು ಹೌದೆಂದು
ಸೇನಾನಿ ತನ್ನ ಟಗರುವಾಹನವನ್ನು ನುಷ್ಯನಿಗಿಂತಲೂ

ನರವಾನರಕ್ಕೇ ಹೆಚ್ಚಿಗೆ ಹೆದರುತ್ತೇವೆ. ಅದ ಭಯವನ್ನೊಂದು ಪರಿಹರಿಸಿಬಿಟ್ಟರೆಂದರೆ, ಜಾತಿ ಅಹಂಕಾರದಿಂದ ನಮ್ಮನ್ನು ನಾಶ ಮಾಡಬೇಕೆಂ ರುವ ದುಷ್ಟ ಗಡೇಗುಡ್ಡನನ್ನೂ ಅವನ ಅನು ರನ್ನೂ ಒಂದೆರಡು ದಿನಗಳಲ್ಲೇ ನಿರ್ನಾಮ ಮಾ ಬಿಡಬಲ್ಲೆವು" ಎಂದಳು.

ಅಷ್ಟು ದೂರದಿಂದ ಬೆಟ್ಟದ ಮೇಲಕ್ಕೆ ಗು ಯಿಟ್ಟು ಬಾಣಪ್ರಯೋಗ ಮಾಡುವುದು ಸಾ ವೆಂದು ಜಯಶೀಲನಿಗೆ ತೋರಲಿಲ್ಲ. ಆದರೂ ತಾ ಆ ಪ್ರಾಂತಕ್ಕೆ ಬಂದಿರುವ ಸಂಗತಿ ಶತ್ರುಗಳಿ ಮುಖ್ಯವಾಗಿ ಕೃಪಾಣಜಿತ್ತುವಿಗೆ ತಿಳಿಯುವ ಏನಾದರೂ ಮಾಡಬೇಕೆಂದುಕೊಂಡನು. ಯುದ್ಧ ಧರ್ಮವನ್ನು ಮೀರಿದಂತಾಗಬಾರದೆಂಬ ಪ್ರ ಯಿಂದ ಅವನು ಸ್ವಲ್ಪ ಮುಂದೆ ಹೋಗಿ ಅ ದ್ದೊಂದು ಎತ್ತರವಾದ ಬಂಡೆಯ ಮೇಲೆ ನಿಂತು ಕತ್ತಿಯನ್ನು ಮೇಲೆತ್ತಿ ಕುಣಿಸುತ್ತ, "ಎಲೋ ನೀಚನೇ! ಕೃಪಾಣಜಿತ್ತೂ! ಇಕೋ, ನನ್ನ ನೋಡು! ನಾನು ಜಯಶೀಲ! ಬಂದಿದ್ದೇನೆ" ಎಂ ಕೂಗಿ ಹೇಳಿದ.


ಅವನ ಕೂಗನ್ನು ಬೆಟ್ಟದ ಮೇಲಿನವರು ಕೇ ಕೊಂಡಂತೆ ಕಾಣಲಿಲ್ಲ. ಕೃಪಾಣಜಿತ್ತುವಿನೊ ಉಳಿದ ಕಳ್ಳರು ಸೇರಿ, ಆ ನರವಾನರವನ್ನು ಅದ ಲಿಕ್ಕೆ ಉರುಳಾಡಿಕೊಂಡಿದ್ದರು. ಕೃಪಾಣಜಿ ವಾನರದ ನಡುವಿಗೆ ಬಿಗಿದ ಕಬ್ಬಿಣದ ಸರಪಳಿಯ ಬಲವಾಗಿ ಅಡಿಸಿ ಹಿಂದಕ್ಕೆಳೆಯುತ್ತಿದ್ದ. ಕುಳ್ಳ ಅದರ ಕಾಲು ಕೈಗಳಿಗೆ ತಗಲಿಸಿದ ಹಗ್ಗ ಮುಂದಕ್ಕೂ ಹಿಂದಕ್ಕೂ ಎಳೆಯುತ್ತಿದ್ದರು. ಅವರನ್ನು ಕಚ್ಚಲು ನೋಡುತ್ತ, ಭಯಂಕರ ಕೂಗುತ್ತ ತಪ್ಪಿಸಿಕೊಳ್ಳಲು ಹೆಣಗುತ್ತಿತ್ತು. ಆ ಗುರಿಯಿಟ್ಟು ಏನನ್ನು ಹೊಡೆಯಲೂ ಸಾಧ್ಯ ಕತ್ತಿ ಎತ್ತಿಕೊಂಡು ನಿಂತಿದ್ದ ಜಯಶೀಲನ

ಸಿದ್ಧಸಾಧಕನೂ, ಕುಳ್ಳರ ರಾಣಿಯೂ ಬಂದರು. ಸಿದ್ಧಸಾಧಕನು ಜಯಶೀಲನನ್ನು ಕುರಿತು, "ಇದೇಕೆ ಇಲ್ಲಿ ನಿಂತಿರುವೆ? ರಾಣಿಯೂ ಆಕೆಯ ಸೈನಿಕರೂ ಶತ್ರುಗಳನ್ನು ಹತ ಮಾಡಲು ಇದೇ ತಕ್ಕ ಸಮಯ ಎಂದು ಭಾವಿಸುತ್ತಾರೆ. ನರವಾನರವನ್ನು ಹಗ್ಗದಿಂದ ಕಟ್ಟಿ ಎಳೆಯುತ್ತಿರುವವರಲ್ಲಿ ರಾಣಿಯ ಮುಖ್ಯ ಶತ್ರುಗಳಾಗಿದ್ದ ಗಡೇಗುಡ್ಡ ಎಂಬವನೂ ಅಲ್ಲಿದ್ದಾ ನಂತೆ. ಅಲ್ಲಿರುವ ಕುಳ್ಳರ ಮಧ್ಯದಲ್ಲಿ ತಲೆಯ ಮೇಲೆ ಹದ್ದಿನ ಗರಿಗಳನ್ನು ಕಟ್ಟಿಕೊಂಡ ಕುಳ್ಳ ಕಾಣಿಸು ತ್ತಾನೆಯೋ? ಅವನೇ ಗಡೇಗುಡ್ಡ. ಈ ರಗಳೆಗಳಿಗೆಲ್ಲ ಸೂತ್ರಧಾರ." ಎಂದನು.

ಜಯಶೀಲನು ಬೆಟ್ಟದಲ್ಲಿ ಕಾಣುವ ಪ್ರತಿಯೊಬ್ಬ ನನ್ನೂ ಪರೀಕ್ಷಿಸಿ ನೋಡಿದನು. ಅವರಲ್ಲಿ ಸಿದ್ಧ ಸಾಧಕನು ಹೇಳಿದಂತೆ ಹದ್ದಿನ ಗರಿಯ ತಲೆಯುವ ಳೊಬ್ಬನಿದ್ದ. ಅವನೇ ಗಡೇಗುಡ್ಡನೇನು? ಅವನು ಈ ಗಡೇಕಾರೀ ರಾಣಿಗೆ ಶತ್ರುವಾಗಿದ್ದರೂ ಜಯ ಶೀಲನಿಗೂ ಅವನಿಗೂ ಯಾವ ಸಂಬಂಧವಿದೆ? ಏನು ಶತ್ರುತ್ವವಿದೆ? ಅವನ ಶತ್ರುವೆಂದರೆ ಆ ಕೃಪಾಣ ಚಿತ್ತು ಮಾತ್ರ. ನರವಾನರ ಪ್ರಾಣಿಯ ಮೇಲೆಯೂ ಅವನಿಗೇನೂ ವೈರವಿಲ್ಲ. ತಾನು ಬಾಣ ಪ್ರಯೋಗ ಮಾಡುವುದಾಗಿದ್ದರೆ ಅವನೊಬ್ಬನನ್ನೇ ಹೊಡೆಯ ಬೇಕಾದುದೆಂದು ಜಯಶೀಲನು ಅಂದುಕೊಂಡನು.

ಅವನು ಬಿಲ್ಲುಬಾಣಗಳನ್ನು ಹಿಡಿದುಕೊಂಡು ತನ್ನ ಹಿಂದಿರುವವರನ್ನು ಒಮ್ಮೆ ನೋಡಿದನು. ಟಗರು ಸವಾರರಾದ ಅನೇಕ ಮಂದಿ ಕುಳ್ಳ ವೀರರೂ, ಅವರ ಹಿಂದೆ ಭಲ್ಲೆಗಳನ್ನು ಹಿಡಿದುಕೊಂಡಿರುವ ಕುಳ್ಳ ಸೈನಿಕರೂ ಬೆಟ್ಟದ ಮೇಲೆ ಏರಿ ಹೋಗಲು ಸಿದ್ಧ ರಾಗಿ ನಿಂತಿದ್ದರು.

ಜಯಶೀಲನು ಕುಳ್ಳರ ರಾಣಿಯನ್ನು ನೋಡಿ, "ರಾಣಿ, ನಿಮ್ಮವರೆಲ್ಲಾ ಯುದ್ಧಕ್ಕೆ ಸಿದ್ಧರಾಗಿರು ವಂತಿದೆ. ನಾನು ಒಂದೇ ಬಾಣದಿಂದ ನರವಾನರ ವನ್ನೂ, ಆ ಮನುಷ್ಯನನ್ನೂ ಕೊಂದುಬಿಡುವೆನೆಂದು ಭಾವಿಸಿಬಿಡಬೇಡ. ನನ್ನದೊಂದು ಬಾಣ ಹಾರಿದ ಕೂಡಲೇ ಅದು ಯಾರಿಗೆ ತಗಲುವುದೋ ಹೇಳ



ಲಾಗುವುದಿಲ್ಲ. ಅಂತೂ ಬಾಣ ಬಿದ್ದ ಕೂಡಲೇ ಶತ್ರುಗಳು ತಕ್ಕ ಜಾಗ್ರತೆ ತೆಗೆದುಕೊಳ್ಳುತ್ತಾರೆ. ಅವರೊಂದಿಗೆ ಯುದ್ಧ ಮಾಡಲು ಇದು ಒಳ್ಳೆಯ ಸಮಯ ಹೌದೋ ಅಲ್ಲವೋ ಎಂಬುದನ್ನು ನೀನೇ ಆಲೋಚಿಸು." ಎಂದನು.


ಕುಳ್ಳರ ರಾಣಿ ತನ್ನ ಸೇನಾಪತಿಯ ಅಭಿಪ್ರಾಯ ಹೇಗೆಂದು ತಿಳಿಯಲು ಅವನ ಮುಖ ನೋಡಿದಳು. ಆ ಕುಳ್ಳ ಸೇನಾಪತಿ ತನ್ನ ಟಗರುವಾಹನದ ಮೇಲೆ, ಬಹು ಠೀವಿಯಿಂದ, ಭಲ್ಲೆಯನ್ನೆತ್ತಿ ಕುಣಿಸುತ್ತ ಜಯಶೀಲನೊಂದಿಗೆ "ಅಯ್ಯಾ, ನೀವು ಆ ದುಷ್ಟರ ಗುಂಪಿಗೆ ಒಂದು ಬಾಣ ಹೊಡೆಯಿರಿ ಸಾಕು. ಇಷ್ಟರವರೆಗೂ ನಮ್ಮ ಶತ್ರುಗಳು ಭಲ್ಲೆಯ ಹೊಡೆತ ಎಂತಹುದೆಂದು ಮಾತ್ರ ತಿಳಿದಿದ್ದಾರೆ. ಬಾಣದ ಏಟು ಹೇಗೆಂಬುದನ್ನು ಅರಿಯರು. ನಿಮ್ಮ ಬಾಣ ಹೋಗಿ ತಾಗಿದ ಕೂಡಲೇ ಅವರು ಭೀತಿಯಿಂದ ತತ್ತಳಿಸಿ ಹೋಗುತ್ತಾರೆ. ಅದನ್ನು ಅವಕಾಶ ಮಾಡಿಕೊಂಡು ನಾವು ದಾಳಿ ಮಾಡಿ ಅವರನ್ನೆಲ್ಲಾ ಆ ಬೆಟ್ಟದ ಆಚೆವರೆಗೂ ಪುಡಿ ಹಾರಿಸಿಬಿಡುತ್ತೇವೆ. ಸಾಧ್ಯವಿದ್ದರೆ ಅವರ ಪಾಳ್ಯದ ಮೇಲೂ ಬಿದ್ದು ಬೆಂಕಿ ಹಚ್ಚಿಬಿಡುತ್ತೇವೆ" ಎಂದನು.


"ಆದರೆ, ಅಪ್ಪಾ, ಸೇನಾಪತಿಯೇ, ನಿನಗಿರುವ ಉತ್ಸಾಹದಭರದಲ್ಲಿ ಕತ್ತಿ ಹಿಡಿದ ಮನುಷ್ಯನನ್ನೂ ಆ ನರವಾನರವನ್ನೂ ಮರೆತುಬಿಟ್ಟ ಹಾಗಿದೆ. ಆದರೂ ನಿನ್ನ ಶಕ್ತಿಯನ್ನೂ, ನಿನ್ನ ಕಡೆಯವರ ಶಕ್ತಿಯನ್ನೂ ನೋಡಬೇಕೆಂದು ಬಹಳ ಆಸೆಯಾಗಿದೆ ನನಗೆ" ಎಂದು ಜಯಶೀಲನು ಬಿಲ್ಲನ್ನು ಎತ್ತಿದನು.

ಆಗ ಸಿದ್ಧಸಾಧಕನು ತನ್ನ ಶೂಲವನ್ನೆತ್ತಿ, "ಜೈ! ಮಹಾಕಾಳಾ! ಇದು ಒಳ್ಳೆಯ ಸಮಯ! ಜಯಶೀಲಾ! ಬಾಣ ಹೊಡಿ. ನರವಾನರವು ಆ ಕುಳ್ಳ ಮಂದಿ ಬೀಸಿದ ಹಗ್ಗದ ಕಟ್ಟನ್ನು ಕಡಿದುಕೊಂಡು ಒಬ್ಬ ಕುಳ್ಳನನ್ನು ಆಮುಕಿ ಹಿಡಿಯಿತು." ಎಂದು ಕೂಗಿದನು.

ಜಯಶೀಲನು ಬಾಣವನ್ನು ಬಿಲ್ಲಿಗೆ ಸಂಧಿ ನಾಣೆಳೆದು ನರವಾನರಕ್ಕೆ ಗುರಿಯಿಟ್ಟು ಪ್ರಯೋಗಿಸಿದನು. ಬಾಣವು ರಿವ್ವನೆ ಹೋಗಿ ನರವಾನರದ ಸೊಂಟಕ್ಕೆ ಹೊಕ್ಕು, ಅದನ್ನು ಅಷ್ಟೆತ್ತರಕ್ಕೆ ಹಾರಿ ಕೆಡವಿತು. ಅದು ಒಮ್ಮೆಗೇ ಭೀಕರವಾಗಿ ಅರಚುತ್ತ ಕೈಯಲ್ಲಿದ್ದ ಕುಳ್ಳನನ್ನು ಕೆಳಕ್ಕೆ ಕುಕ್ಕಿ ತಾನೂ ಬಿತ್ತು.

ಕೆಳಕ್ಕೆ ಕುಕ್ಕಲ್ಪಟ್ಟಕುಳ್ಳನು ಕಿರುಚುತ್ತ ಹಾರಿ ಕೆಳಗೆ ಬೀಳುವಾಗ, ಕುಳ್ಳರ ಸೇನಾನಾಯಕನು ತನ್ನ ಅನುಚರರಿಗೆ ಸನ್ನೆ ಮಾಡಿದನು. ತತ್‌ಕ್ಷಣವೇ ಟಗರಿನ ರಾವುತರೂ, ಕಾಲಾಳುಗಳೂ ಕೇಕೇ ಹಾಕುತ್ತ ಭಲ್ಲೆಗಳನ್ನು ಕುಣಿಸುತ್ತ ಬೆಟ್ಟದ ಮೇಲಕ್ಕೆ ಓಡ ತೊಡಗಿದರು. (ಮುಂದುವರಿಯುವುದು)





April 1977

# ಮಾಯಾಸರೋವರ


## ೧೫

[ಕಳ್ಳರರಾಣಿಗೆ ಶತ್ರುವಾದ ಗಡೇಗುಡ್ಡ ಎಂಬವನು ಒಬ್ಬ ಮನುಷ್ಯನಿಂದ ನರವಾನರದ ಮೂಲಕ ಜಯ ಪಡೆಯಲು ಪ್ರಯತ್ನಿಸುತ್ತಿದ್ದನು. ನರವಾನರವನ್ನು ಪಳಗಿಸುವ ಮನುಷ್ಯ ತನ್ನ ಶತ್ರು ಕೃಪಾಣ ಜಿತ್ತುವೆಂದು ಜಯಶೀಲನಿಗೆ ಗೊತ್ತಾಯಿತು. ಜಯಶೀಲನು ಬಿಟ್ಟ ಬಾಣವು ನರವಾನರವನ್ನು ತಾಗಿತು. ಅದೇ ವೇಳೆಗೆ ಕಳ್ಳರ ಸೇನಾನಿ ತನ್ನವರೊಂದಿಗೆ ಶತ್ರುಗಳ ಮೇಲೆ ದಾಳಿ ತೆಗೆದನು.]

...ಳ್ಳರ ರಾಣಿಯ ಸೈನಿಕರು ಬೆಟ್ಟದ ಮೇಲಕ್ಕೆ ...ಬರುವುದನ್ನು ನೋಡುತ್ತಲೇ, ರಾಣಿಯ ...ವಾದ ಕಳ್ಳ ಜನಾಂಗದ ಅಧಿಪತಿ ಗಡೇ ...ನು. ತನ್ನ ಭಟರೆಲ್ಲರೂ ಬೆಟ್ಟದ ಮೇಲೆ ಬರು... ಅವಸರದಿಂದ ಕೂಗಿಕೂಗಿ ಆಜ್ಞೆ ಮಾಡಿದನು. ...ಕಡೆಯ ಕಳ್ಳಸೈನಿಕರು ಭಲ್ಲೆಯನ್ನು ಕುಣಿಸುತ್ತಾ ...ವೇಶದ ಕೂಗುಗಳೊಂದಿಗೆ ಬೆಟ್ಟದ ಮೇಲಕ್ಕೆ ...ಡಗಿದರು.

... ಸಮಯದಲ್ಲಿ ಹುಚ್ಚು ಹುಚ್ಚಾಗಿ ಹಾರುತ್ತಿ... ನರವಾನರವನ್ನು ಅಡಗಿಸಲಿಕ್ಕಾಗಿ ಕೃಪಾಣ ಜಿತ್ತುವೂ, ಮತ್ತೆ ಕೆಲವಂದಿ ಕಳ್ಳರೂ ಹೆಣಗಾಡಿ ಕೊಂಡಿದ್ದರು. ಅವರಿಗೀಗ ಹೊರಗಿನ ಶತ್ರುಗಳೊಂದಿಗೆ ನರವಾನರವೊಂದು ದೊಡ್ಡ ಕಂಟಕವಾಗಿತ್ತು. ಕಳ್ಳರು ಅದರ ಕೈಕಾಲುಗಳೆಡೆಗೆ ಸಿಕ್ಕಿ ಘಾಸಿಗೊಳ್ಳುತ್ತಿದ್ದರೂ ಧೈರ್ಯದಿಂದ ಅದನ್ನು ಹಿಂಸಿಸುತ್ತಿದ್ದರು.

ಜಯಶೀಲನು ನಿಂತಲ್ಲೇ ಇದ್ದು. ಬೆಟ್ಟದ ಇನ್ನೊಂದು ಕಡೆಯಿಂದ ಮೇಲೆ ಬರುತ್ತಿದ್ದ ಗಡೇ ಗುಡ್ಡನ ಕಡೆಯವರನ್ನು ನೋಡಿ ಸಿದ್ಧಸಾಧಕನೊಂದಿಗೆ. "ಸಾಧಕಾ, ನಾವೀಗ ರಾಣಿಯ ಸೈನಿಕರಿಗೆ



ಸಹಾಯಮಾಡದೆ ಹೋದರೆ, ಅವಳ ಶತ್ರುಗಳು ಅವಳ ಕಡೆಯವರನ್ನೆಲ್ಲ ಸುಲಭವಾಗಿ ಹತಮಾಡುವರೆಂದೇ ಕಾಣುತ್ತದೆ. ಕೃಪಾಣಜಿತ್ತು ಹಾಕಿಕೊಂಡ ವೇಷ ನೋಡಿದೆಯಾ ? ಆಟವಿಕರ ಹಾಗೆ ಪೋಷಾಕು ಧರಿಸಿಕೊಂಡಿದ್ದಾನೆ. ಆದರೂ ಅವನ ಕಂಠಸ್ವರದಿಂದ ಅವನನ್ನು ಗುರುತಿಸಿಬಿಟ್ಟೆ. ಅವನೂ ನನ್ನ ಗುರುತು ಹಿಡಿದಿರುವನೋ ಏನೋ ? " ಎಂದನು. "ಅವನಿಗೆ ಆ ನರವಾನರದಿಂದ ತನ್ನನ್ನು ಕಾಪಾಡಿಕೊಳ್ಳುವುದೇ ಪೇಚಾಟವಾಗಿದೆ ! " ಎಂದು ಸಿದ್ಧ ಸಾಧಕನು ನಕ್ಕನು.

ಸಿದ್ಧಸಾಧಕನಿಗಂತೂ ನೋಡುತ್ತಾ ಸುಮ್ಮನಿರುವುದು ಚೆನ್ನಾಗಿಲ್ಲವೆಂದೇ ತೋರಿತು. ರಾಣಿಯ ಸೈನಿಕರಿಗೆ ಸಹಾಯಮಾಡುವುದೇ ಒಳ್ಳೆಯದೆನಿಸಿತು. ಅವನು ರಾಣಿಯನ್ನು ನೋಡುತ್ತ, "ರಾಣೀ, ನೀನು ಇಲ್ಲಿದ್ದುಕೊಂಡೇ ನೋಡುತ್ತಿರು. ನಾವು ನಿನ್ನ ಸೈನಿಕರಿಗೆ ಸಹಾಯಕರಾಗಿ ಹೋಗಿ, ನಿನ್ನ ಶತ್ರುವಾದ ಆ ಕುಳ್ಳರ ಗುಂಪನ್ನೂ, ಕೃಪಾಣಜಿತ್ತುವನ್ನೂ
ಒಂದೊಂದು ಕೈ ನೋಡುತ್ತೇವೆ. ನೀನು ಇಲ್ಲಿ
ವುದೇ ಕ್ಷೇಮ" ಎಂದನು.

ಅಷ್ಟರಲ್ಲಿ ಬೆಟ್ಟದ ಮೇಲಿನಿಂದ ನರವಾನರ
ದಿಕ್ಕುಗಳು ಸೀಳುವಂತೆ ಕರ್ಕಶವಾಗಿ ಕೂಗಿ
ಅದಕ್ಕೇನಾಯಿತೆಂದು ಜಯಶೀಲನೂ
ಸಾಧಕನೂ ಅತ್ತ ನೋಡಿದರು. ಥಕ್ಕನೆ ಅ
ಹಾರಾಟ ನಿಂತುಹೋಗಿತ್ತು.

ಅದರ ನಡುವಿಗೆ ಕಟ್ಟಿದ್ದ ಕಬ್ಬಿಣದ ಸರಪಳಿಯ
ಕೃಪಾಣಜಿತ್ತು ಒಬ್ಬನೇ ಹಿಡಿದುಕೊಂಡಿದ್ದ.
ತೇಕುತ್ತಾ, ನೆಟ್ಟಗೆ ನಿಂತುಕೊಂಡು, ಆಗಾಗ ಬೆ
ಕೆಳಗಡೆಯನ್ನು ನೋಡಿ ಭುಜ ಕೆರೆದುಕೊಳ್ಳು
ಕೂಗುತ್ತಿದ್ದಿತು. ಕೃಪಾಣಜಿತ್ತುವನ್ನು ನೋಡಿ ಅ
ಭಯವಾಗುವುದೂ, ಅವನ ಮುಂದೆ ಅದು
ವಂತದ ವಿಧೇಯತೆಯಲ್ಲಿರುವುದೂ, ಆದರೆ
ಆಜ್ಞೆಯಂತೆ ನಡೆಯಲು ಅದಕ್ಕೆ ಕಷ್ಟವಾಗುವು
ಅರ್ಥವಾಗುತ್ತಿತ್ತು.

"ಸಾಧಕಾ, ನರವಾನರವು ಮತ್ತೆ ಅವನ ವ
ಬಂತು ಪಾಪ. ಇನ್ನು ಅದು ಅವನು ಹೇಳಿದ
ಕೇಳುತ್ತದೆ. ಅದೀಗ ಅವನು ಹೇಳಿದಂತೆ ದೊ
ಬಂಡೆಯನ್ನು ಕೆಳಗೆ ಹಾಕಿಬಿಟ್ಟರೆ, ರಾಣಿಯ ಸೈ
ರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಸಾಯುತ್ತಾ
ಏನಾದರೂ ಮಾಡಿ ಆ ನರವಾನರಕ್ಕೆ ಇನ್ನ
ಭಯ ಹುಟ್ಟಿಸಬೇಕು. ಉಂ, ಬೇಗ ಬಾ ! " ಎನ್ನು
ಜಯಶೀಲನು ಬೆಟ್ಟದಮೇಲಕ್ಕೆ ಹಾರಿಹಾರಿ
ತೊಡಗಿದನು. "ಜೈ ಮಹಾಕಾಳಾ ! " ಎನ್ನು
ಸಿದ್ಧಸಾಧಕನೂ ಅವನನ್ನು ಅನುಸರಿಸಿ ಓಡಿದ.


ಇಬ್ಬರೂ ತೀವ್ರಗತಿಯಿಂದ ಹೋಗಿ, ಇ
ಬೆಟ್ಟದ ಮೇಲಕ್ಕೆ ತಲಪಲು ತುಸುದೂರದಲ್ಲಿ
ಕುಳ್ಳರ ಸೇನಾಪತಿಯ ಬಳಿಗೆ ತಲಪಿ, "ಸೇ
ಪತಿಯೇ, ನಿನ್ನ ಭಟರನ್ನು ಸ್ವಲ್ಪ ನಿಲ್ಲುವಂತೆ ಹೇ
ನರವಾನರವು ಮತ್ತೆ ನಿಮ್ಮ ಮೇಲೆ ದೊಡ್ಡ ದೊ


ಲ್ಲು ಬಿಸುಡುವ ಅಪಾಯವಿದೆ ನೋಡು!" ಎಂದರು.
"ಅಯ್ಯಾ, ನೀವು ಆ ಭಯಂಕರವಾದ ಪರ್ವತ ಣಿಯಿಂದಲೂ, ಆ ಮಹಾಕಾಯ ಮಾನವ ದಲೂ ಗಂಡಾಂತರವಾಗದಂತೆ ನೋಡಿಕೊಂಡರೆ ರು. ನಾವು ಹೋಗಿ ಅಲ್ಲಿ ನಿಂತಿರುವ ಗಡೇಗುಡ್ಡ ನ್ನೂ ಅವನ ಬಂಟರನ್ನೂ ನಮ್ಮ ಭಲ್ಲೆಗಳಿಗೆ ಬಲಿ ಟ್ಟು, ಬೆಟ್ಟದ ಕಣಿವೆಗೆ ಎಸೆದುಬಿಡುತ್ತೇವೆ. ವರೆಲ್ಲ ನಮಗೆ ಹುಲ್ಲಿನ ಸಮಾನದವರು. ತ್ತೆಂದೂ ಅವರು ಇಂಥ ದುಷ್ಕೃತನ ಮಾಡಲಿಕ್ಕಿಲ್ಲ." ದ ಕಳ್ಳರ ಸೇನಾಧಿಪತಿ.

"ಭಲೇ ಭಲೇ! ನಿನ್ನ ಶೂರತನದ ಮಾತುಗಳೂ, ಲ್ಲೆಗಳ ಮೊನೆಗಳೂ ಚೆನ್ನಾಗಿವೆಯಾದರೂ, ದುಡುಕಿ ದ ಅಪಾಯವಾಗಬಾರದಷ್ಟೇ? ನೀನು ನೆನೆದ ಲ್ಲಾ ನೆನೆಸಿದಂತೆಯೇ ಆಗಲಿಕ್ಕೆ ನೀನು ದೇವಜಾತಿಯ ನೋ ರಾಕ್ಷಸ ಜಾತಿಯವನೋ ಅಲ್ಲವಷ್ಟೇ? ಲ್ಲದಕ್ಕೂ ಒಂದು ಮಿತಿ ಬೇಕು. ನೀವೆಲ್ಲಾ ಧಾರಣ ಕಳ್ಳ ಜನಾಂಗವೆಂಬುದೂ ನೆನಪಿರಲಿ!" ಎಂದು ತುಸು ಕೋಪದಿಂದ ಹೇಳಿದ ಸಿದ್ಧಸಾಧಕ. ಜಯಶೀಲನು, ಹಾಗೆ ಕೋಪ ಮಾಡುವುದು ಒಳಿತಲ್ಲವೆಂದು ಅವನಿಗೆ ಕೈ ಸನ್ನೆ ಮಾಡಿದನು. ಅದೇ ಹೊತ್ತಿಗೆ ಕೃಪಾಣಜಿತ್ತುವಿನ ಆಜ್ಞೆಯಂತೆ ನರ ವಾನರವು ದೊಡ್ಡದೊಂದು ಬಂಡೆಯ-ತುಂಡನ್ನು ಎತ್ತಿಕೊಂಡಿತು.

ಅದನ್ನು ನೋಡಿ ಸಿದ್ಧಸಾಧಕನು ಕೋಪದಿಂದ ಹುಬ್ಬುಗಂಟು ಹಾಕಿಕೊಂಡು: "ಛೀ ಛೀ! ಈ ವಾನರಕ್ಕೆ ಕಲ್ಲುಬಿಸುಡುವುದೊಂದರ ಹೊರತು ಮತ್ತಾವ ವಿದ್ಯೆಯೂ ಗೊತ್ತಿಲ್ಲವೇನೋ? ಬಿಸುಡಲಿಕ್ಕಾದರೂ ಅದಕ್ಕೆ ಒಂದು ಗುರಿಯೂ ಇಲ್ಲ. ನನ್ನ ಶೂಲದಿಂದ ಒಂದೇ ತಿವಿತಕ್ಕೆ ಅದು ನೆಲಕಚ್ಚುವಂತೆ ಮಾಡಿ ಬಿಡುತ್ತೇನೆ ನೋಡಿರಿ!" ಎನ್ನುತ್ತಾ ಶೂಲವನ್ನೆತ್ತಿ ಆ ವಾನರದ ಕಡೆಗೆ ಧಾವಿಸಿ ಹೋದನು.

ಸಿದ್ಧಸಾಧಕನು ಆವೇಶಗೊಂಡು ದುಸ್ಸಾಹಸಕ್ಕೆ ಹೋಗಿ ಪ್ರಾಣಕ್ಕೆ ತಂದುಕೊಳ್ಳುವನೆಂದು ಜಯಶೀಲನಿಗೆ ತೋರಿತು. ಅವನು ಸಿದ್ಧಸಾಧಕನಿಗೆ





"ನಿಲ್ಲು!" ಎಂದು ಗರ್ಜಿಸಿ ಹೇಳಿ, ಬಿಲ್ಲಿಗೆ ಬಾಣ ಹೂಡಿ ನರವಾನರಕ್ಕೆ ಬಿಟ್ಟನು.

ಬಾಣವು ಗುರಿ ತಪ್ಪಿ ಕೃಪಾಣಜಿತ್ತುವಿನ ಕೈಯಲ್ಲಿದ್ದ ಕಬ್ಬಿಣದ ಸಂಕಲೆಗೆ ತಾಗಿತು. ಆ ಏಟಿಗೆ ಸಂಕಲೆ ಅವನ ಕೈಯಿಂದ ಜಾರಿ ಠಣಠಣನೆ ಕೆಳಗೆ ಬಿತ್ತು. ಕೂಡಲೇ ನರವಾನರವು ಕಲ್ಲನ್ನು ಅಲ್ಲೇ ಕೆಳಗೆ ಹಾಕಿ ಓಡಿಹೋಯಿತು. ಆದರೆ ಕೃಪಾಣಜಿತ್ತು ಹಾರಿ ಸಂಕಲೆಯನ್ನು ಎತ್ತಿಕೊಂಡು ನರವಾನರವನ್ನು ಹಿಂದಕ್ಕೆ ಎಳೆದನು. ಆಗಲೇ ತನ್ನ ಮೇಲೆ ಬಾಣ ಪ್ರಯೋಗ ಮಾಡಿದವನು ಯಾರೆಂಬುದನ್ನು ನೋಡಿ, ಏನೋ ಗುರುತು ಹಿಡಿದವನಂತೆ "ಓಹೋ! ಇವನೋ!" ಎಂದ ತನಗೆತಾನೇ.

ಈ ನೆನಪು ಬಲವಾದಂತೆ ಭಯದಿಂದಲೂ ಆಶ್ಚರ್ಯದಿಂದಲೂ ಅವನು ನಡುಗತೊಡಗಿದನು. ನಿಮಿಷದವರೆಗೂ ಅವರಾರೋ ಸಾಧಾರಣ ಮನುಷ್ಯರೆಂದೇ ತಿಳಿದಿದ್ದನು. ಆ ಜಯಶೀಲ ಇಂಥಾ ಸ್ಥಳಕ್ಕೆ ಬರುವುದೆಂದರೇನು? ಯಾವ ಕಾರ್ಯಕ್ಕಾಗಿ ಇಲ್ಲಿಯವರೆಗೆ ಬಂದಿದ್ದಾನೆ? ಅವನ ಜತೆಯಲ್ಲಿ ಕ್ರೂರನಂತೆ ಕಾಣುವ ಸಿದ್ಧಸಾಧಕನನ್ನು ಅವನು ಇದುವರೆಗೂ ಕಂಡಿರಲಿಲ್ಲ. ಜಯಶೀಲನೊಂದಿಗೆ ಆ ಮಂತ್ರವಾದಿಯಂತಹನನ್ನು ಕಂಡು ಅವನಿಗೆ ಇನ್ನಷ್ಟು ಹೆದರಿಕೆಯೇ ಆಯಿತು.

ಮರು ನಿಮಿಷದಲ್ಲಿ ಅವನು ತನ್ನ ಭಯವನ್ನು ಹೊರಗೆ ಹಾಯಗೊಡದೆ ಸಮಾಳಿಸಿಕೊಂಡು ಕಳ್ಳರ ನಾಯಕ ಗಡೇಗುಡ್ಡನನ್ನು ನೋಡಿ, "ಗಡೇಗುಡ್ಡ! ಇದೀಗ ಶತ್ರುಗಳನ್ನು ಹತಮಾಡಲು ಪಕ್ವವಾದ ಸಮಯವಲ್ಲ. ಅಲ್ಲಿ ಬಿಲ್ಲುಬಾಣ ಹಿಡಿದವನು ದೂರದಿಂದಲೇ ನಮ್ಮೆಲ್ಲರ ಪ್ರಾಣಗಳನ್ನೂ ತೆಗೆಯಬಲ್ಲನು. ನರವಾನರವು ಮೃಗವಾದುದರಿಂದ ಬಾಣದೇಟು ತಗಲಿದರೂ ತಾಳಿಕೊಂಡೀತು. ಇಂಥಾ ಏಟಿಗೆ ನಮ್ಮಂಥವರು ಸಾಯುವುದೇ ಸರಿ!" ಎನ್ನುತ್ತಾ ಕೃಪಾಣಜಿತ್ತು ನರವಾನರವನ್ನು ಬೆಟ್ಟದ ಆಚೆ ಬದಿಗೆ ಎಳೆದೊಯ್ಯುವ ಪ್ರಯತ್ನಮಾಡಿದನು. ಅವನ ಮಾತು ಕೇಳಿ ಗಡೇಗುಡ್ಡನಿಗೂ ಭಯವಾಯಿತು.

ಗಡೇಗುಡ್ಡನು ಜಯಶೀಲ ಸಿದ್ಧಸಾಧಕರ ಕಡೆಗೆ ಸಂದೇಹದಿಂದ ನೋಡಿ ಕೃಪಾಣಜಿತ್ತುವನ್ನು ಕುರಿತು, "ಅಯ್ಯಾ, ಮಹಾಕಾಯ! ನಿಮ್ಮ ಅಭಿಪ್ರಾಯವನ್ನು ಅಲ್ಲವೆನ್ನಲಾರೆ. ಆದರೆ ನೀವು ನರವಾನರದೊಂದಿಗೆ ಒಂದೇ ರಭಸಕ್ಕೆ ಹೋಗಿ ಆ ಬಿಲ್ಲುಬಾಣ ಹಿಡಿದವನನ್ನು ಕೊಲ್ಲಲು ಸಾಧ್ಯವಿಲ್ಲವೆ? ನಾವು ಅದೇ ಸಮಯದಲ್ಲಿ ದುಷ್ಟ ರಾಣಿಯ ಸೈನಿಕರನ್ನೆಲ್ಲಾ ನಮ್ಮ ಭಲ್ಲೆಗಳಿಗೆ ಬಲಿಹಾಕಿ ಚೆಲ್ಲಿಬಿಡುತ್ತೇವೆ. ನಮಗಿರುವ ಎರಡುಪಾಲು ಶಕ್ತಿ ಸಾಹಸಗಳು ನಿಮಗೂ ಇದ್ದೀತಲ್ಲವೇ?" ಎಂದನು.

ಕೃಪಾಣಜಿತ್ತು ಗಡೇಗುಡ್ಡನನ್ನು ಕಣ್ಣು ಕೆರಳಿಸಿ ನೋಡಿ, ನರವಾನರವನ್ನು ಬೆಟ್ಟದ ಕೆಳಗಡೆಗೆ ಎಳೆಯುತ್ತ, "ನನ್ನನ್ನು ಏನೆಂದುಕೊಂಡೆಯೋ ಗಡೇ

ಗುಡ್ಡಾ ? ನಿನ್ನ ತಲೆಯ ಮೇಲಿರುವ ಗರಿಗಳ ರಾಜನಾದ ರಣಹದ್ದು ಎಂದುಕೊಂಡೆಯಾ ? ಆಕಾಶದಲ್ಲಿ ಹೋಗಿ ಅವರಮೇಲೆ ಬೀಳುವುದೆಂತೆ? ಈ ಕೋತಿ ಪುರಾಣದ ಹನುಮಾನನೂ ಅಲ್ಲ. ಎಲ್ಲಾ ಒಂದೇಬಾರಿಗೆ ಆಗಬೇಕೆಂಬ ಅವಸರಕ್ಕೆ ಇದು ಬಾಳೇ ಹಣ್ಣು ಎಂದುಕೊಂಡೆಯಾ? ಸುಮ್ಮನೆ ತಲೆಹರಟೆ ಬೇಡ. ಅವರನ್ನು ಕೊಲ್ಲಲು ಬೇರೆ ಉಪಾಯವಿದೆ. ಸುಮ್ಮನೆ ಹರಟದೆ ಮೊದಲು ನೀವೆಲ್ಲಾ ಜೀವದೊಂದಿಗೆ ಓಡಿಹೋಗಿ ನಿಮ್ಮ ನಿಮ್ಮ ಗುಡಾರ ಸೇರಿಕೊಳ್ಳಿ. ಗೊತ್ತಾಯಿತೇ ? " ಎಂದನು.

ಗಡೇಗುಡ್ಡ ಮತ್ತೇನೂ ಉಪಾಯಗಾಣದೆ, ತನ್ನ ಅನುಚರರಿಗೆ ಬೆಟ್ಟವಿಳಿದು ತಮ್ಮ ಕೇರಿಗೆ ಹೋಗಲು ಅಜ್ಞೆ ಮಾಡಿದನು. ಆ ಕೂಡಲೇ ಅವನ ಟಗರು ರಾವುತರೂ, ಭಲ್ಲೆಗಳ ವೀರರೂ ಬೇಗಬೇಗನೇ ಬೆಟ್ಟವನ್ನಿಳಿಯ ತೊಡಗಿದರು.

ಹೀಗೆ ಶತ್ರುಗಳು ಓಡಿಹೋಗುವುದನ್ನು ನೋಡಿ ಜಯಶೀಲನು ಕುಳ್ಳರ ಸೇನಾಪತಿಯೊಂದಿಗೆ, "ತ್ವರೆ ಮಾಡು ಸೇನಾಧಿಪತೀ ! ಇದೇ ನಿನಗೆ ಸರಿಯಾದ ಸಮಯ. ಸಮೀಪದವರ ಮೇಲೆ ಭಲ್ಲೆಗಳನ್ನು ಪ್ರಯೋಗಿಸಿರಿ. ದೂರದವರ ಮೇಲೆ ಬಂಡೆಗಳನ್ನು ಉರುಳಿಸಿರಿ. ಅನೇಕ ಶತ್ರುಗಳನ್ನು ಪರಲೋಕಕ್ಕೆ ಕಳುಹಿಸಬಹುದು. ತೋರಿಸಿರಿ ನಿಮ್ಮ ಚುರುಕುತನ" ಎಂದು ಹುರುಡಿಸಿದನು.

ಶತ್ರುಗಳು ತಾವಾಗಿ ಬೆನ್ನು ಕೊಟ್ಟು ಓಡುವುದರಿಂದ ಕುಳ್ಳರ ಸೇನಾಧಿಪತಿಗೆ ಇನ್ನಿಷ್ಟು ಧೈರ್ಯ ಉಂಟಾಯಿತು. ಅವನು ತನ್ನ ಭಟರಿಗೆ ಜೋರಿನಿಂದ ಆಜ್ಞೆಮಾಡುತ್ತ, "ಓ ವೀರಶೂರ ಗಡೇಕಾರಿ ಭಟರೇ ! ಹೆಬ್ಬುಲಿಗಳ ಹಾಗೆ, ರಣಸಿಂಗಗಳ ಹಾಗೆ ನಮ್ಮ ದ್ರೋಹಿಗಳು ಗಡೇಗುಡ್ಡನ ಗುಂಪಿನವರನ್ನು ನಮ್ಮ ಭಲ್ಲೆಗಳಿಂದ ಸೀಳಿರಿ ! ಭಲ್ಲೇ ಕುಳ್ಳ ಮಲ್ಲರಾಗಿರಿ ! ಭಯಂಕರ ಮೃಗ ಓಡಿಹೋಗುತ್ತದೆ !



ಆದರ ಭಯ ನಮಗಿಲ್ಲ. ಓಡಿರಿ! ಹಿಡಿಯಿರಿ! ಪುಡಿ ಹಾರಿಸಿರಿ!" ಎಂದು ಜೋರಾಗಿ ಹೇಳಿದನು.

ತಮ್ಮ ನಾಯಕನ ಮಾತುಗಳಿಂದ ಕುಳ್ಳರಾಣಿಯ ಭಟರೆಲ್ಲರೂ ಉತ್ಸಾಹಗೊಂಡು ದೊಡ್ಡ ದನಿಯಿಂದ ವೀರಗರ್ಜನೆ ಮಾಡುತ್ತ ಬೆಟ್ಟದಮೇಲಕ್ಕೆ ಹೋದರು. ಅಲ್ಲಿ ಅವರಿಗೆ ಓಡಿ ಹೋಗುತ್ತಿರುವ ಟಗರುರಾವುತರೂ ಭಲ್ಲೆಯ ಭಟರೂ ಸಿಕ್ಕಿದರು. ರಾಣಿಯ ಭಟರು ಅವರನ್ನು ಭಲ್ಲೆಗಳಿಂದ ತಿವಿದು ಇಳಿಜಾರಾಗಿರುವ ಬೆಟ್ಟದಲ್ಲಿ ಹೊರಳಿಸ ತೊಡಗಿದರು. ಕುಳ್ಳರ ಸೇನಾಧಿಪತಿ ಭಲ್ಲೆಯನ್ನು ಎತ್ತಿ ಹಿಡಿದು ತನ್ನ ಟಗರು ವಾಹನವನ್ನು ಅತ್ತಿತ್ತ ಓಡಿಸುತ್ತ ಭಟರನ್ನು ಉತ್ಸಾಹಪಡಿಸುತ್ತಿದ್ದನು. ಅವರ ಟಗರುಗಳೂ ಈ ಬಗೆಯ ಯುದ್ಧದಲ್ಲಿ ಒಳ್ಳೇ ನುರಿತ ಸೊಕ್ಕಿನವುಗಳೇ.

ಹಾಗೆ ಕುಳ್ಳಕುಳ್ಳರ ಗುಂಪಿನ ನಡುವೆ ಯುದ್ಧವು ನಡೆಯುತ್ತಿದ್ದಾಗ, ಜಯಶೀಲನೂ ಸಿದ್ಧಸಾಧಕನೂ



ಅಲ್ಲಿಗೆ ಹೋಗಿ ನಿಂತರು. ಅಲ್ಲಿ ಅವರು ಆಚೆಕಡೆ ನೋಡಿದಾಗ, ಗಡೇಗುಡ್ಡನ ಅನುಚರರೊಂದಿಗೆ ನರವಾನರವನ್ನು ಎಳೆದುಕೊಂಡು ಹೋಗುತ್ತಿರುವ ಕೃಪಾಣಜಿತ್ತು ಕೂಡಾ ಕಾಣಿಸಿದನು.

ಸಿದ್ಧಸಾಧಕನು ಶೂಲವನ್ನು ಎತ್ತಿ ಹಿಡಿದು, "ಜೈ ಮಹಾಕಾಳಾ!" ಎಂದು ಗುಡ್ಡಬೆಟ್ಟಗಳು ನಡುಗುವಂತೆ ಕೂಗಿ "ಜಯಶೀಲಾ! ನೋಡುತ್ತೀ ಏನು? ಆಗೋ ಅಲ್ಲಿ ಮರಗಳ ಗುಂಪಿನೆಡೆಯಲ್ಲಿ ಕಾಣುವುದೇ ಈ ಗಡೇಗುಡ್ಡನ ಕಡೆಯವರ ಕೇರಿ. ನಾವು ಹೋಗಿ ಹಠಾತ್ತಾಗಿ ಅದರ ಮೇಲೆ ಬಿದ್ದು ಕೃಪಾಣಜಿತ್ತನ್ನೂ, ಅವನ ಆಟದ ಕೋತಿಯನ್ನೂ, ಗಡೇಗುಡ್ಡನ ಕುಳ್ಳರ ಗುಂಪನ್ನೂ ನೆಲ ಸಮಮಾಡಿ ಬಂದುಬಿಡೋಣ, ಅವರೆಲ್ಲ ಚೆನ್ನಾಗಿ ಹೆದರಿ ಮುದುಡಿರುವ ಈ ಸಮಯವೇ ಸರಿಯಾದ ಸಮಯ! ಒಂದೇ ಬಾರಿಗೇ ದೊಡ್ಡ ವಿಜಯ!" ಎಂದನು. ಸಿದ್ಧಸಾಧಕನ ಹುಚ್ಚು ಉತ್ಸಾಹದ ಮಾತು ಕೇಳಿ ಜಯಶೀಲನು ಕಿರುನಗೆ ನಕ್ಕ. "ಶತ್ರುಗಳ ಬಲವನ್ನು ಹತ್ತಿಯಹಾಗೆ ಎಣಿಸುವುದು ಎಂದಿಗೂ ಒಳ್ಳೆಯದಲ್ಲ. ಅವರನ್ನು ಇಲ್ಲಿಂದ ಹೆದರಿಸಿ ಓಡಿಸುವುದಕ್ಕೂ, ಅವರ ಕೇರಿಯಮೇಲೆ ಬಿದ್ದು ಕೊಲ್ಲುವುದಕ್ಕೂ ತುಂಬಾ ವ್ಯತ್ಯಾಸವಿದೆ. ಅಗೂ ಅಲ್ಲದೆ ನಮಗೆ ಈ ಗಡೇಗುಡ್ಡಂದಿರ ಮೇಲೆ ಹಗೆ ತೀರಿಸುವಂತಹ ಕಾರಣವೂ ಇಲ್ಲ, ಅಗತ್ಯವೂ ಇಲ್ಲ. ಸಾಧ್ಯವಾದರೆ ಅವರಿಗೂ ಕುಳ್ಳರಾಣಿಗೂ ಏನಾದರೂ ರಾಜಿಯಾಗುವ ಪ್ರಯತ್ನ ಮಾಡಿ ನೋಡಬಹುದು. ಅದನ್ನೇ ಆಲೋಚನೆ ಮಾಡುತ್ತಿದ್ದೇನೆ" ಎಂದನು.

"ಹಾಗಾದರೆ ನಮ್ಮ ಶತ್ರುವಾದ ಕೃಪಾಣಜಿತ್ತುವಿನ ಸಮಾಚಾರ ಹೇಗೆ? ಅವನು ಸಾಗಿಸುತ್ತಿರುವ ನರವಾನರದ ಸಂಗತಿ ಏನು? ಅದರ ಸಹಾಯದಿಂದ ಆ ದುಷ್ಟನು ಈ ಸುತ್ತುಮುತ್ತಲೂ ಇರುವ ಸಾವಿರ ಹರದಾರಿ ಪ್ರಾಂತಗಳಿಗೆಲ್ಲಾ ಚಕ್ರವರ್ತಿಯಾದಾನು. ಇದನ್ನೆಲ್ಲ ನಾವು ನೋಡುತ್ತಾ ಸುಮ್ಮನಿರುವುದು ಹೇಗೆ?" ಎಂದ ಸಿದ್ಧಸಾಧಕ.

ಜಯಶೀಲನು ಅವನಿಗೆ ಏನೋ ಹೇಳಬೇಕೆಂದಿರಲು, ಕುಳ್ಳರ ಸೇನಾಧಿಪತಿ ಅವನಮುಂದೆ ಬಂದು, "ಅಯ್ಯಾ, ನಿಮ್ಮ ಅಪ್ಪಣೆಯಾದರೆ, ನಿಮ್ಮ ಸಹಾಯವೂ ದೊರೆತರೆ, ನಾವೆಲ್ಲಾ ಈಗ ಬೆಟ್ಟ ಇಳಿದು ಹೋಗಿ ಗಡೇಗುಡ್ಡನ ಕೇರಿಯೊಳಗೆ ನುಗ್ಗಿ ಶತ್ರುಗಳನ್ನು ಬೇರುಸಹಿತವಾಗಿ ಕಿತ್ತು ನಾಶಮಾಡಿ ಬಂದು ಬಿಡುತ್ತೇವೆ. ಏನು ನಿಮ್ಮ ಅಜ್ಞೆ?" ಎಂದು ಕೇಳಿದನು.

ಜಯಶೀಲನು ಸುತ್ತಲೂ ಒಂದುಬಾರಿ ನೋಡಿ, ಆ ಸೇನಾಧಿಪತಿಯ ಬೆನ್ನು ತಟ್ಟುತ್ತ, "ಕುಳ್ಳವೀರ ಸೇನಾಧಿಪತಿಯೇ! ನಿನ್ನ ಧೈರ್ಯವೂ ಸಾಹಸಗಳೂ ಮೆಚ್ಚತಕ್ಕದ್ದೇ. ಇಲ್ಲಿ ಕೈಗೆ ಸಿಕ್ಕಷ್ಟು ಶತ್ರುಗಳನ್ನು ಕೊಂದಿರುವಿರಿ. ಉಳಿದವರೂ ನರವಾನರ ಸಹಿತವಾಗಿ ಕೇರಿ ಸೇರಿಕೊಂಡಿದ್ದಾರೆ. ಇದೆಲ್ಲವೂ ನಿಮಗೆ ಜಯವೇ

ಇನ್ನೂ ದಾಳಿಮಾಡಿದರೆ ಅನಾವಶ್ಯಕವಾಗಿ ಪಾತವಾಗುತ್ತದೆ. ಅಷ್ಟೇಹೊರತು ಅದರಿಂದ ವಿಜಯವೆಂಬ ಹರ್ಷಕ್ಕೇನೂ ಸತ್ವ ಉಳಿ ವುದಿಲ್ಲ" ಎಂದನು.

"ಹಾಗಾದರೆ ನಾವು ಈಗ ಏನು ಮಾಡಬೇಕೆಂದು ಅಜ್ಞೆ ?" ಎಂದು ಕೇಳಿದ ಕುಳ್ಳರ ನಾಯಕ.

"ನೀವೆಲ್ಲರೂ ಬೆಟ್ಟದಿಂದಿಳಿದು ನಿಮ್ಮ ರಾಣಿಯ ಹೋಗಿರಿ. ಆಮೇಲೆ ನಿಮ್ಮ ಕೇರಿಗೆ ತಕ್ಕ ಯನ್ನು ಮಾಡಿಕೊಳ್ಳಿ. ನಮಗೆ ಬಂದಂತಹ ೋಚನೆಯೇ ಶತ್ರುಗಳಿಗೂ ಬಂದಿರುವುದೆಂದು ರಿ. ಅವರು ಹಠಾತ್ತಾಗಿ ನಿಮ್ಮಮೇಲೆ ಬಂದು ದಂತೆ ತಕ್ಕ ಜಾಗ್ರತೆಯಲ್ಲಿರಿ. ಹೋಗಿರಿ, ಬ್ಬರೂ ಬೇಗದಲ್ಲೇ ನಿಮ್ಮ ಕೇರಿಗೆ ಬರುತ್ತೇವೆ." ದ ಜಯಶೀಲ.

ಳ್ಳರ ಸೇನಾಧಿಪತಿ ಜಯಶೀಲ ಸಿದ್ಧಸಾಧಕರಿಗೆ ತೋರಿಸಲು ಒಬ್ಬ ಕುಳ್ಳಭಟನನ್ನು ಅಲ್ಲಿ ಉಳಿದವರೊಂದಿಗೆ ಹೊರಟನು. ಎಲ್ಲರೂ ವಿಜಯಧ್ವಾನಗಳನ್ನು ಮಾಡುತ್ತ ಬೆಟ್ಟದಿಂದ ಇಳಿದು ತಮ್ಮ ರಾಣಿಯ ಬಳಿಗೆ ಹೋದರು.

ಜಯಶೀಲನು ಗಡೇಗುಡ್ಡನ ಕೇರಿಯನ್ನು ನೋಡುತ್ತಾ ಸುಮ್ಮನೆ ನಿಂತನು. ಸಿದ್ಧಸಾಧಕನು ಅವನನ್ನೇ ಸ್ವಲ್ಪ ಹೊತ್ತು ನೋಡಿ, "ಜಯಶೀಲಾ, ಹಾಗೆ ನೋಡುತ್ತ ಏನೋ ದೀರ್ಘಾಲೋಚನೆ ಮಾಡುತ್ತಿರುವೆಯಲ್ಲಾ ? ನಾವು ಸುಮ್ಮಸುಮ್ಮನೆ ಈ ಕುಳ್ಳರ ಗುಂಪಿನವರ ವ್ಯವಹಾರದಲ್ಲಿ ಸಿಕ್ಕಿ ಕೊಂಡದ್ದು ನಮ್ಮದೇ ತಪ್ಪು." ಎಂದನು.

"ನಾವು ಬೇಕೆಂತಲೇ ಇಲ್ಲಿಗೆ ಬಂದು ಬೀಳಲಿಲ್ಲ ವಲ್ಲಾ ? ಸಾಧಕಾ. ಅದಕ್ಕೆ ಕಾರಣ ಆ ಮೊಸಳೆಯಾಕಾರದ ದುಷ್ಟ ಮಕರಕೇತು. ನಾವು ಜಲಪಾತದಲ್ಲಿ ಸಿಕ್ಕಿಕೊಂಡು ಬೆಟ್ಟದ ಮೇಲಿನ ಪ್ರವಾಹದಿಂದ ಹೊಡೆದುಕೊಂಡು ಬಂದು ಹೀಗೆ ಬಿದ್ದವರು. ಇಲ್ಲಿ ನಮಗೆ ತಿಳಿಯದಂತೆಯೇ ಈ ಅರಣ್ಯವಾಸಿಗಳ ವ್ಯವಹಾರದಲ್ಲಿ ಸಿಕ್ಕಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಏನಾದರೂ ನಾವು ಈ ಪ್ರಾಂತದಿಂದ



ಹೊರಟುಹೋಗುವುದರೊಳಗೆ. ಆ ಕೃಪಾಣಜಿತ್ತನ್ನು ಮಾತ್ರ ಪರಲೋಕಕ್ಕೆ ಕಳುಹಿಸಿಯೇ ತೀರಬೇಕು." ಎಂದ ಜಯಶೀಲ.

"ಮಹಾಕಾಲನ ದಯದಿಂದ ಆ ಕೆಲಸ ತೀರಿಸಲಿಕ್ಕೇ ನಾವಿಲ್ಲಿ ಬಂದಿರಬೇಕು. ಆ ಕೃಪಾಣಜಿತ್ತುವಿನೊಂದಿಗಿರುವ ಕ್ರೂರ ಮೃಗವನ್ನು ಕೂಡಾ ಕೊಂದು ಅದರ ಚರ್ಮ ತೆಗೆದುಕೊಳ್ಳಲೇಬೇಕು. ಬಾರಯ್ಯ, ಹೋಗೋಣ. ಬೋದ ತಪ್ಪುವಷ್ಟು ಹಸಿವೆಯಾಗುತ್ತದೆ. ಕುಳ್ಳರಾಣಿಯ ಗೂಡಾರಕ್ಕೆ ಹೋಗಿ ಏನಾದರೂ ತುಂಬಿಸಿಕೊಳ್ಳೋಣ" ಎಂದು ಹೇಳಿ ಸಿದ್ಧಸಾಧಕನು ಅಲ್ಲಿಂದ ಹೊರಟುಬಿಟ್ಟನು.


ಜಯಶೀಲನೂ ಅವನೊಂದಿಗೇ ಹೊರಟನು. ಇಬ್ಬರೂ ಅದೂ ಇದೂ ಮಾತಾಡುತ್ತ ಕೆಳಗಿಳಿಯುತ್ತಿರುವಾಗ, ಕೆಳಗೆ ಮರಗಳ ಹಿಂದೆ ಅಡಗಿಕೊಂಡು ಗಡೇಗುಡ್ಡನೂ. ಕೃಪಾಣಜಿತ್ತುವೂ ತಮಗುಂಟಾದ ಅಪಜಯಕ್ಕೆ "ನೀನೇಕಾರಣ" ಎಂದು ಒಬ್ಬರ ಮೇಲೊಬ್ಬರು ತಪ್ಪನಿಂದೆ ಮಾಡಿಕೊಂಡಿದ್ದರು.

"ಅಯ್ಯಾ, ಮಹಾಕಾಯರೇ. ನಿಮಗಿರುವುದೆಲ್ಲಾ ಭಾರಿಯ ಶರೀರವೇ ಹೊರತು ಅದಕ್ಕೆ ತಕ್ಕ ಹಾಗೆ ಗುಂಡಿಗೆ ಬಲವೇನೂ ಕಾಣುವುದಿಲ್ಲ. ನಮಗಿಂತಲೂ ಮೊದಲು ನೀವೇ ಓಡಿಹೋಗಲು ಪ್ರಾರಂಭ ಮಾಡಿದಿರಿ. ನೀವು ಪಳಗಿಸಿಕೊಂಡು ಕೆಲಸ ಮಾಡಿಸುವ ಈ ನರವಾನರ ನಿಮ್ಮನ್ನೇ ಕೊಲ್ಲಲು ಪ್ರಯತ್ನಮಾಡಿತಲ್ಲಾ! ನಿಮ್ಮದೇನು ಹೆಬ್ಬಾಳಿಕೆ ನಮಗಿಂತಲೂ ?" ಎಂದ ಗಡೇಗುಡ್ಡ.

ಅವನ ಮಾತುಗಳಿಂದ ಕೃಪಾಣಜಿತ್ತು ರುಬ್ಬಿ ಹಲ್ಲು ಕಡಿಯುತ್ತ, "ಎಲೋ ಕುರುಡಗುಡ್ಡ, ನಾನು ಶತ್ರುಗಳಿಗೆ ಬೆನ್ನು ತೋರಿಸಿ ಓಡಲಿಲ್ಲ. ಸಮಯವಲ್ಲವೆಂದೇ ಓಡಿರುಗಿದೆ ಅಷ್ಟೇ. ಕಡೆಗೆ ಬಾಣ ಹೊಡೆದ ಜಯಶೀಲನೆಂಬ ಪರಮ ದುಷ್ಟ ಶತ್ರುವನ್ನು ನಾಳೆ ಸೂರ್ಯೋದಯದ ಒಳಗೆ ಕೊಲ್ಲದೇ ಹೋದರೆ ನನ್ನ ಹೆಸರು ಕೃಪಾಣಜಿತ್ತು ಅಲ್ಲ, ಕೀಟಜಿತ್ತು! ಇನ್ನು ನನ್ನ ನರವಾನರದ ಸಂಗತಿ ಕೇಳುವೆಯಾ? ಅದು ಕೋತಿಯ ಮುಖದ್ದು. ನಾನು ಹೇಳಿದ ಹಾಗೇ ಕೇಳುವಂಥಾದ್ದು. ಅದಕ್ಕೆ ರುಜುವುಬೇಕೇ?..." ಎಂದು ಹೇಳಿ ನರವಾನರಕ್ಕೆ ಗಡೇಗುಡ್ಡನನ್ನು ತೋರಿಸಿ ಕೈಯಾಡಿಸಿದನು.

ನರವಾನರವು ಮಿಂಚಿನ ವೇಗದಲ್ಲಿ ಹೋಗಿ ಗಡೇಗುಡ್ಡನನ್ನು ಎತ್ತಿಕೊಂಡು ಭಯಂಕರವಾಗಿ ಕಿರುಚ ತೊಡಗಿತು. ತಮ್ಮ ಒಡೆಯನು ಪ್ರಾಣಾಪಾಯ ಸ್ಥಿತಿಯಲ್ಲಿರುವುದನ್ನು ನೋಡಿ ಗಡೇಗುಡ್ಡನ ಅನುಚರರು ಭಲ್ಲೆಗಳನ್ನೆತ್ತಿ ಕೂಗುತ್ತ ನರವಾನರ ಕೃಪಾಣಜಿತ್ತುಗಳ ಮೇಲೆ ಹಾರಿ ಬರತೊಡಗಿದರು.

(ಮುಂದುವರಿಯುವುದು)





May 1977

# ಮಾಯಾಸರೋವರ


## ೧೬

[ಜಯಶೀಲನು ಬಿಟ್ಟ ಬಾಣವು ನರವಾನರಕ್ಕೆ ತಗಲುತ್ತಲೇ ಕೃಪಾಣಜಿತ್ತು ಬೆಟ್ಟದ ಕೆಳಗೆ ನೋಡಿ ಆ ಬಾಣ ಬಿಟ್ಟವನ ಗುರುತು ಹಿಡಿದನು. ಕೂಡಲೇ ಅವನು ಗಡೇಗುಡ್ಡನ ಅನುಚರರೊಂದಿಗೆ ಅವರ ಕೇರಿಗೆ ಓಡಿಹೋದನು. ಗಡೇಗುಡ್ಡ ಅವನನ್ನು ಅವಹೇಳನೆ ಮಾಡಲು, ಕೃಪಾಣಜಿತ್ತು ನರವಾನರವನ್ನು ಅವನ ಮೇಲೆಯೇ ಕೆರಳಿಸಿ ಬಿಟ್ಟ.]

ಗಡೇಗುಡ್ಡನ ಅನುಚರರು ಹೇಡಿಗಳೇನಲ್ಲ. ಅವರು ತಮ್ಮ ಒಡೆಯನನ್ನು ರಕ್ಷಿಸಲು ಆಯುಧಗಳನ್ನೆತ್ತಿಕೊಂಡು ಕೃಪಾಣಜಿತ್ತುವಿನ ಮೇಲೆ ಬೀಳಲು ಧಾವಿಸಿದರು. ಅವರೆಲ್ಲ ಕುಳ್ಳರಾದರೂ, ಅವರ ವೀರಾವೇಶವನ್ನು ನೋಡಿ ಕೃಪಾಣಜಿತ್ತು ಭಯದಿಂದ ನಡುಗಿದನು.

ತನ್ನ ಮುಂದೆ ಅವರೆಷ್ಟೇ ಅಲ್ಪಬಲದವರಾದರೂ ಗುಂಪಾಗಿರುವವರ ಮುಂದೆ ತಾನೊಬ್ಬನೇ ಹೆಣಗುವುದು ಸಾಧ್ಯವಿಲ್ಲದ ಮಾತು. ಆ ಕುಳ್ಳರು ತಮ್ಮ ನಾಯಕನ ರಕ್ಷಣೆಗಾಗಿ ವೀರ ಇರುವೆಗಳ ಹಾಗೆ ಸಾಯಲಿಕ್ಕೂ ಸಿದ್ಧರಾಗಿದ್ದಾರೆಂದು ಅವನಿಗೆ ತೋರಿತು. ಈ ಇಕ್ಕಟ್ಟಿನ ಕುತ್ತಿನಿಂದ ತನ್ನನ್ನು ಕಾಪಾಡಿಕೊಳ್ಳಲು ತವಕಿಸಿದನು.

ಮರುಕ್ಷಣದಲ್ಲಿ ಕೃಪಾಣಜಿತ್ತು ಒಂದು ನಿಶ್ಚಯಕ್ಕೆ ಬಂದು, ಶಾಂತವಾಗಿ ಕಿರುನಗು ತೋರಿಸುತ್ತ ತನ್ನನ್ನು ಸುತ್ತಿಕೊಂಡ ಕುಳ್ಳರ ಕಡೆಗೆ ನೋಡಿ, "ತಡೆಯಿರಿ, ಸ್ವಲ್ಪ ನಿಧಾನಿಸಿರಿ. ನಾನು ನಿಮ್ಮ ಮಿತ್ರನೆಂಬುದನ್ನು ಆಲೋಚಿಸಿರಿ. ಆ ನರವಾನರವನ್ನು ನಾನು ಎಷ್ಟು ಚೆನ್ನಾಗಿ ಪಳಗಿಸಿದ್ದೇನೆಂದು ನಿಮ್ಮ ನಾಯಕನಿಗೆ ನಿರೂಪಿಸಬೇಕೆಂತಲೇ ಅವ



ನನ್ನ ಹಿಡಿದುಕೊಳ್ಳಲು ಹೇಳಿದೆನೇ ಹೊರತು ಮತ್ತೇನಿಲ್ಲ. ನಿಮಗೆ ದ್ರೋಹಮಾಡಿ ನನಗೇನಾಗ ಬೇಕಾಗಿದೆ ?" ಎಂದು ಹೇಳಿ, ವಾನರದ ಕೈಗೆ ಸಿಕ್ಕಿ ಕೊಂಡ ಗಡೇಗುಡ್ಡನನ್ನು ಬಿಡಿಸಿದನು.

ಗಡೇಗುಡ್ಡನು ಪ್ರಾಣಭೀತಿಯಿಂದ ತರಗೆಲೆ ಯಂತೆ ನಡುಗುತ್ತ, ದೂರದಲ್ಲಿದ್ದ ಒಂದು ಗುಡಿಸ ಲಿನ ಮುಂದೆ ಹೋಗಿ, ಅಲ್ಲಿದ್ದ ಒಂದು ಒಣಮರದ ತುಂಡಿನ ಮೇಲೆ ಉಸ್ಸೆಂದು ಕುಳಿತನು. ತಾನು ಯಮನ ಕೈಯಿಂದ ಪಾರಾದೆನೆನಿಸಿತ್ತು ಅವನಿಗೆ. ಅವನ ಅನುಚರರೆಲ್ಲರೂ ಅವನ ಸುತ್ತಲೂ ಸೇರಿ, ಈಗೇನು ಮಾಡಬೇಕೆಂದು ಕೇಳಿದರು. ಎಲ್ಲಿಂದಲೋ ಬಂದು ಸೇರಿದ ಈ ಮಹಾಕಾಯನ ಸಹಾಯ ವನ್ನು ಕೇಳಿ, ತಾನು ಅಸಲಿಗೇ ಮೋಸ ತಂದು ಕೊಂಡೆನೆಂದು ಗಡೇಗುಡ್ಡನಿಗೆ ಬಹಳ ಯೋಚನೆ ಯಾಗಿತ್ತು. ನಮ್ಮ ನಮ್ಮೊಳಗಿನ ಜಗಳಕ್ಕೆ ಈ ಮಹಾಕಾಯ ಪರ್ವತ ಪ್ರಾಣಿಗಳನ್ನು ಇಟ್ಟು ಕೊಂಡದ್ದು ಬಹು ದೊಡ್ಡ ತಪ್ಪಾಯಿತೆಂದು ಅವನಿಗೆ ಈಗ ಪಶ್ಚಾತ್ತಾಪವಾಗಿತ್ತು.

ಅವನು ಒಂದು ನಿಟ್ಟುಸಿರುಬಿಟ್ಟು, ತಲೆಯೆತ್ತಿ ತನ್ನ ಅನುಚರರನ್ನು ನೋಡಿ, ಸಣ್ಣ ಕಂಠಸ್ವರ ದಿಂದ, "ಈಗ ನಾನು ಹೇಳುವ ಮಾತನ್ನು ಲಕ್ಷ್ಯ ಗೊಟ್ಟು ಕೇಳಿರಿ. ಆನೆಯಂಥ ಶರೀರದ ಆ ಮಹಾ ಕಾಯನು ತನ್ನ ವಾನರದ ಬಳಿಯಲ್ಲೇ ನಿಂತು ಕೊಂಡು ನಾವೇನು ಮಾಡುತ್ತೇವೆಂದು ಕಣ್ಣು ಹೊರಳಿಸಿ ಹೊರಳಿಸಿ ನೋಡುತ್ತಿದ್ದಾನೆ. ಅವ ನೊಂದಿಗೆ ಎದುರೆದುರೇ ಹೋರಾಡಿ ಜಯಿಸಲು ನಮ್ಮಿಂದಾಗದು. ಏನಾದರೊಂದು ಉಪಾಯದಿಂದ ಅವನ ಕೈಯಲ್ಲಿರುವ ಕತ್ತಿಯನ್ನೂ, ಆ ವಾನರ ಭೂತವನ್ನೂ ಬೇರ್ಪಡಿಸಿಬಿಡಬೇಕು. ಆಗ ನಮ್ಮಲ್ಲಿ ಕೆಲವರು ಸತ್ತರೂ ಅವನನ್ನು ಕೊಂದು ಪೀಡೆ ಪರಿಹಾರ ಮಾಡಿಕೊಳ್ಳಬಹುದು" ಎಂದನು.

"ಅದು ನಿಜ. ಚೆನ್ನಾಗಿದೆ. ಆದರೆ ಅವನಿಗೆ ತಿಳಿಯ ದಂತೆ ಆಗಬೇಕಲ್ಲ ? ಉಪಾಯವೇನು ?" ಎಂದು ಒಬ್ಬ ಕುಳ್ಳ ಕೇಳಿದ.

"ಈ ಮಹಾಕಾಯದವನು ಸತ್ತ ಸಮಾಚಾರ ಗೊತ್ತಾದ ಕೂಡಲೇ ಗಡೇಕಾರ ರಾಣಿ ನಮ್ಮೆಲ್ಲ ರನ್ನೂ ಸುಲಭದಲ್ಲಿ ನಾಶಮಾಡಲು ಸಾಧ್ಯವಿಲ್ಲ ಯಲ್ಲಾ ? ಈಗ ಆ ದುಷ್ಟಳಿಗೆ ರಾಕ್ಷಸರಂಥ ಇಬ್ಬರು ಮಹಾಕಾಯರು ಬೇರೆ ಸಹಾಯಕರಾಗಿದ್ದಾರೆ. ಆ ಸಂಗತಿಯನ್ನು ಕೂಡ ನಾವು ಮರೆಯುವಂತಿಲ್ಲ ವಷ್ಟೆ?" ಎಂದು ಇನ್ನೊಬ್ಬ ಕುಳ್ಳ ನೆನಪು ಮಾಡಿದ.


ಗಡೇಗುಡ್ಡ ಹಾಗೆ ಹೇಳಿದವನನ್ನು ಕೋಪದಿಂದ ನೋಡುತ್ತ, "ಹಾಗೊಂದು ವೇಳೆ ಸಾಯು ದಾದರೆ ನಮ್ಮ ಜಾತಿಯವರ ಕೈಯಲ್ಲೇ ಸಾಯೋಣ. ಅದೂ ಬೇಡ, ನಾವೆಲ್ಲಾ ಆ ಗಡೇರಾಣಿಯ ಬಳಿಗೆ ಹೋಗಿ ಶರಣು ಶರಣು ಅಂತ ರೋದಿಸಿ ಇನ್ನು ಮೇಲೆ ಅವಳಿಗೆ ವಿಧೇಯರಾಗಿರುವೆವೆಂದೂ, ಸಿ


ಡುತ್ತೇವೆಂದೂ ಹೇಳೋಣ. ಅವಳು ಕನಿಕರದಿಂದ ಕ್ಷಮಿಸದೆ ಹೋಗಲಾರಳು, ಆದರ ಬದಲಿಗೆ ಈ ಮಹಾಕಾಯನ ಕೈಯಲ್ಲಿ ನಜ್ಜುಗುಜ್ಜಾಗಿಯಬೇಕೇನು ? " ಎಂದನು.

"ಆ ಕೆಲಸ ಈಗಲೇ ಮಾಡಬಹುದಲ್ಲಾ ?" ಎಂದು ಒಬ್ಬನು ದೊಡ್ಡ ಧ್ವನಿಯಿಂದಲೇ ಕೂಗಿದ. ಅದನ್ನು ಕೇಳಿ ಗಡೇಗುಡ್ಡನು ಕೆಟ್ಟ ಸಿಟ್ಟಿನಿಂದ ಎಟಕುತಿದ್ದ ಒಂದು ದೊಣ್ಣೆಯನ್ನೆತ್ತಿ ಹಾಗೆ ಕೂಗಿದವನನ್ನು ಜೋರಾಗಿ ಹೊಡೆದನು.

ದೂರದಲ್ಲಿದ್ದು ಇದನ್ನೆಲ್ಲಾ ನೋಡುತ್ತಿದ್ದ ಕೃಪಾಣಜಿತ್ತು, ಗಡೇಗುಡ್ಡನು ತನ್ನ ಅನುಚರರೊಂದಿಗೆ ಒಮ್ಮೆಗೇ ತನ್ನ ಮೇಲೆ ಮುಗಿಬೀಳುವ ಆಲೋಚನೆಯಲ್ಲಿರುವನೆಂದು ಅನುಮಾನಿಸಿ, ನರವಾನರವನ್ನು ಹಗ್ಗದಿಂದೆಳೆಯುತ್ತ ಅವನ ಹತ್ತಿರ ಬಂದು, "ಈಗ ನೀವು ಮಾಡುತ್ತಿರುವ ಉಪಾಯವೇನು ? ಎಲ್ಲರೊಟ್ಟಿಗೆ ಒಂದೇಸಾರಿ ನನ್ನ ಮೇಲೆ ಬಿದ್ದು ಕೊಲ್ಲಬೇಕೆಂದಿರುವಿರಾ ? ನಿಜ ಹೇಳಿಬಿಡಿ. ನಿಮಗೆ ನಂಬುಗೆ ಇಲ್ಲದಿದ್ದರೆ ಎರಡರಲ್ಲೊಂದು ತೀರಿಸಿಬಿಡೋಣ" ಎನ್ನುತ್ತ ಕಟಕಟನೆ ಹಲ್ಲು ಕಡಿದ.

ಗಡೇಗುಡ್ಡನು ತನ್ನ ಅನುಚರರೆಲ್ಲ ನಿಶ್ಶಬ್ದವಾಗಿರುವಂತೆ ಕೈಯಾಡಿಸಿ, ತಾನು ಕುಳಿತಿದ್ದ ಮರದ ತುಂಡಿನ ಮೇಲೆಯೇ ನಿಂತುಕೊಂಡು ಕೃಪಾಣಜಿತ್ತುವನ್ನು ನೋಡಿ, "ಅಯ್ಯಾ ಮಹಾಕಾಯನೇ, ನಾವು ಆಲೋಚನೆ ಮಾಡುವ ಉಪಾಯ ಮತ್ತೇನಿಲ್ಲ, ಈಗಿನ ಪರಿಸ್ಥಿತಿ ಹೇಗಿರುವುದೆಂದರೆ, ಅತ್ತ ಗಡೇಕಾರೀ ರಾಣಿಯಾಗಲಿ, ಅಥವಾ ನೀವೇ ಆಗಲಿ, ನಮ್ಮೆಲ್ಲರನ್ನೂ ಕೆಲವೇ ಕ್ಷಣಗಳಲ್ಲಿ ಹತಮಾಡಿ ಬಿಡಬಲ್ಲಿರಿ. ಅದಕ್ಕಾಗಿ ಸೂರ್ಯನು ಮುಳುಗುವುದರೊಳಗೆ ನಾವೆಲ್ಲಾ ಈ ಕೇರಿಯನ್ನು ಬಿಟ್ಟು ಕಾಡಿನಲ್ಲಿ ಎತ್ತಾದರೂ ದೂರ ಓಡಿಬಿಡಬೇಕೆಂದಿದ್ದೇವೆ. ಅದೇ ನಮ್ಮ ಆಲೋಚನೆ. ನಿಮ್ಮನ್ನು ಎದುರಿಸಿ ಗೆಲ್ಲಲಾರೆವೆಂದು ತಿಳಿಯದಷ್ಟು ಮೂಢರಲ್ಲ ನಾವು. ನಮಗೂ ನಿಮಗೂ ಕೂಡಿಕೆ ಹೊಂದದು. ಅಷ್ಟೇ." ಎಂದನು. ಗಡೇಗುಡ್ಡನ ಮಾತು ಕೇಳಿ ಕೃಪಾಣಜಿತ್ತು






ವಿಗೆ ಭಯವಾಯಿತು. ಅವನು ಈ ಗುಂಪಿಗೆ ಸೇರುವ ಮೊದಲು, ಅರಣ್ಯದಲ್ಲಿ ಒಬ್ಬಂಟಿಗನಾಗಿ ಪಟ್ಟಕಷ್ಟಗಳೆಲ್ಲವೂ ನೆನಪಿಗೆ ಬಂದಿತು. ಈ ಸಮಯದಲ್ಲಿ ಎಷ್ಟೇ ಅಲ್ಪರಾದರೂ ಈ ಕುಳ್ಳಜನಾಂಗದ ಸಹಾಯವಿಲ್ಲದೆ ಹೋದರೆ, ತನ್ನ ಪ್ರಬಲ ಶತ್ರುವಾದ ಜಯಶೀಲನು ಬಹುಸುಲಭವಾಗಿ ತನ್ನನ್ನು ಈ ಗುಡ್ಡಗಾಡು ಪ್ರದೇಶದಲ್ಲಿ ಬೇಟೆಯಾಡಿಬಿಡುತ್ತಾನೆ.

ಹೀಗೆ ಆಲೋಚನೆ ಮಾಡಿ ಕೃಪಾಣಜಿತ್ತು ಗಡೇಗುಡ್ಡನೊಂದಿಗೆ ತುಂಬ ಮರ್ಯಾದೆಯ ಸೋಗು ತಂದುಕೊಂಡು, "ಅಯ್ಯಾ, ಗಡೇಗುಡ್ಡಾ, ನಿನಗೆ ನನ್ನಿಂದ ಮೇಲಾಗುತ್ತದೆಯೇ ಹೊರತು ಎಂದಿಗೂ ಕೆಡುಕಾಗದು. ನಿನ್ನ ಶತ್ರುವಾದ ಆ ರಾಣಿಯನ್ನೂ ಅವಳಿಗೆ ಸಹಾಯಕರಾಗಿರುವ ನನ್ನ ಶತ್ರುಗಳಿಬ್ಬರನ್ನೂ ನಾಳೆ ಸೂರ್ಯೋದಯವಾಗುವುದರೊಳಗೆ ಪರಲೋಕಕ್ಕೆ ಕಳುಹಿಸಿಬಿಡುತ್ತೇನೆ. ಈ ದಿನ ಮಧ್ಯರಾತ್ರಿಯ ಸಮಯದಲ್ಲಿ ನಿಮ್ಮಲ್ಲಿ ಕೆಲವರು ನನಗೆ ಸಹಾಯಕರಾಗಿ ಬರಲಿ. ಅವರು ಆ ರಾಣಿ ಗುಡಾರದ ಕಡೆಗೆ ಮುಂದೆ ನಡೆಯಲಿ. ನಾ ಆ ಶತ್ರುಗಳೆಲ್ಲರನ್ನೂ ನಿದ್ರೆಯಲ್ಲಿದ್ದ ಹಾಗೆಯೇ ನ ವಾನರದೊಂದಿಗೆ ಕೂಡಿ ನೆಲಕ್ಕೆ ಅರೆದುಬಿಡುತ್ತೇ ಆಮೇಲೆ ನೀನು ಕಣ್ಣಿಗೆ ಕಾಣುವಷ್ಟು ದೂರ ಕಾನನ ಪ್ರದೇಶಕ್ಕೆಲ್ಲಾ ಒಬ್ಬನೇ ರಾಜನಾಗು ನಿನ್ನನ್ನು ಎದುರಿಸುವವರು ಆ ಮೇಲೆ ಯಾರ ಇಲ್ಲ! ತಿಳಿಯಿತೇ? ಜೈ! ಗಡೇಗುಡ್ಡ ಕುಬ್ಜರಾ ರಾಜನಿಗೆ!" ಎಂದು ಕೂಗಿ, ನರವಾನರವನ್ನು ಕತ್ತಿ ಹಿಡಿಯಿಂದ ಬಲವಾಗಿ ಹೊಡೆದನು.

ನರವಾನರವು ನೋವಿನಿಂದ ಕೋಪದಿಂದ ಕರ್ಕ ಸ್ವರದಿಂದ ಕೂಗಿ, ತನ್ನ ಕೋರೆ ಹಲ್ಲುಗಳ ಹೊರಗೆ ತೋರಿಸಿ ಕೃಪಾಣಜಿತ್ತುವನ್ನು ಹಿಡಿಯ ಕೈಗಳನ್ನು ಚಾಚಿ, ಅವನ ಕೈಯಲ್ಲಿರುವ ಕತ್ತಿಯನ್ನು ನೋಡಿ, ಹಿಂದಡಿಯಿಟ್ಟು ಗುರ್ರೆಂದಿತು.

ಗಡೇಗುಡ್ಡನು ತೃಪ್ತಿಯಿಂದ ತಲೆಯೊಲಿಯು "ಅಯ್ಯಾ ಮಹಾಕಾಯ! ನೀವು ನಿಮ್ಮ ಸಾ ವಾನರವನ್ನು, ಇಷ್ಟು ಕ್ರೌರ್ಯಮಾಡದೆ ಸ್ವ ದಯದಿಂದ ನೋಡಿದರೆ, ಅದು ಆಗಾಗ ನಿ ಮೇಲೆ ತಿರುಗಿಬೀಳದೆ ಇದ್ದೀತು. ನಮಗೂ ಆಗ ಹೆದರಿ ಬೀಳುವ ಪ್ರಸಂಗಬಾರದು." ಎಂದನು.

"ಈ ಸೇವಕ ಪ್ರಾಣಿಯನ್ನು ದಯೆಯಿ ನೋಡಿದರೆ ಅಷ್ಟೇ! ಹಾಗೆ ಮಾಡಿಬಿಟ್ಟರೆ ಕ್ಷ ಮಾತ್ರದಲ್ಲಿ ಅದೇ ನನಗೆ ಯಜಮಾನನಾಗಿಬಿ ತ್ತದೆ. ಈ ಲೋಕದಲ್ಲಿ ಪೆಟ್ಟಿಗೆ ಭಯಪಡದ ಪ್ರಾ ಯಾವುದೂ ಇರಲಾರದು. ಸರಿ. ಈಗ ನಮಗ ರಿಗೂ ಹೊಟ್ಟೆಗೆ ಆಗಬೇಕಲ್ಲ? ನಾನೀಗ ನ ಕುಟೀರಕ್ಕೆ ಹೋಗುತ್ತೇನೆ" ಎಂದು ಹೇಳಿ ಕೃಪಾ ಜಿತ್ತು ಅಲ್ಲಿಂದ ಹೊರಟನು.

"ನಿಮ್ಮ ಊಟ ತಿಂಡಿಗಳೆಲ್ಲ ಅಲ್ಲಿ ಸಿದ್ಧವಾಗಿ ಎಂದ ಗಡೇಗುಡ್ಡ.

ಕೃಪಾಣಜಿತ್ತು ಆ ಕೇರಿಯಲ್ಲಿ ಇತರರ ಮನೆಗಳಿಗೆ ಟ್ಟ ದೂರದಲ್ಲಿರುವ ತನ್ನ ನಿವಾಸಸ್ಥಾನದ ಬಳಿಗೆ ೋಗಿ ತಿರುಗಿ ನೋಡಿ ದೊಡ್ಡ ಕಂಠಸ್ವರದಿಂದ, ೂರ್ಯ ಮುಳುಗಿ, ಮಧ್ಯ ರಾತ್ರಿಯಾಗುವ ಗೂ ನನ್ನನ್ನು ಯಾರೂ ಎಬ್ಬಿಸಬೇಡಿ. ಆ ಮೇಲೆ ಗಾಗುವವರೆಗೂ ಎಚ್ಚರದಲ್ಲಿರಬೇಕಲ್ಲಾ? ನೆನಪಿರಲಿ, ಮಧ್ಯ ರಾತ್ರಿಯ ಹೊತ್ತಿಗೆ ನಿನ್ನ ಕಡೆಯವರು ಲಿ; ಆಗಲೇ ನಾನು ಶತ್ರುಸಂಹಾರಕ್ಕೆ ಹೊರಡು ದು!" ಎಂದನು.

ಗಡೇಗುಡ್ಡ ತೃಪ್ತಿಯಿಂದ ತಲೆಯಾಡಿಸಿ "ಆಗ ಗಲಿ" ಎಂದು ಕೂಗಿದ. ಆಮೇಲೆ ಸಣ್ಣ ನಗುವಿ ಂದಿಗೆ ತನ್ನ ಸುತ್ತಲೂ ಸೇರಿದವರನ್ನು ನೋಡಿ, ನರವಾನರವು ಅವನಿಗೆ ಅಪಾಯ ಬರುವಾಗ ಾಯಕ್ಕೇನೂ ಹೋಗುವುದಿಲ್ಲ. ಅದು ತಪ್ಪಿಸಿ ಂಡು ಸ್ವೇಚ್ಛೆಯಾಗಿ ಓಡಲಿಕ್ಕೇ ನೋಡು ್ತಾದ್ದು. ಈ ಪರಿಸ್ಥಿತಿಯಲ್ಲಿ ಬೆಳಗಾಗುವು ೊಳಗೆ ಶತ್ರು ಸಂಹಾರವಂತೆ! ಇವನದೇ ಾರ! ಮೊದಲು ಅವನ ಕತ್ತಿಯ ಸಮಾಚಾರ. ನ್ನು ನಾವು ಸಪ್ಪಳಿಲ್ಲದೆ ಅಪಹರಿಸಿಬಿಡಬೇಕು" ದನು. ಆ ಕೆಲಸಕ್ಕೆ ತನ್ನ ಅನುಚರರಲ್ಲಿ ನಂಬಿ ರೂ, ಧೈರ್ಯಶಾಲಿಗಳೂ ಆದ ನಾಲ್ಕು ಮಂದಿ ನ್ನು ಆರಿಸಿ ತನ್ನ ಮನೆಗೆ ಕರೆದುಕೊಂಡು ೋದನು.

ಆಮೇಲೆ ಎರಡು ಮೂರು ಗಂಟೆಗಳ ಕಾಲ ವ ಸದ್ದೂ ಇಲ್ಲದೆ ವಾತಾವರಣವೆಲ್ಲ ಬಿರು ಳಿಗೆ ಮೊದಲಿರುವಂತೆ ಸ್ತಬ್ಧಮೌನವಾಗಿತ್ತು. ಟ್ಟೆ ತುಂಬ ತಿಂದು ಕುಡಿದು ಮಲಗಿ ಗೊರಕೆ ಡೆಯುತ್ತಿರುವ ಕೃಪಾಣಜಿತ್ತುವಿಗೆ ಹಠಾತ್ತಾಗಿ ರಿಕೆಯಾಯಿತು.


"ಇದೆಂಥ ಎಣ್ಣೆಯ ಕಮಟು ವಾಸನೆಯಪ್ಪ!" ದು ಗೊಣಗುತ್ತ ಸುತ್ತಲೂ ಒಮ್ಮೆ ನೋಡಿ,



"ಯಾರಲ್ಲಿ ಹೊರಗೆ? ಏನೋ ಕೊಳಕು ಹರಳೆಣ್ಣೆ ವಾಸನೆ ಬರುತ್ತಿದೆಯಲ್ಲಾ? ಏನ್ಮಾಡ್ತೀರೋ?" ಎಂದು ಕೂಗಿ ಕೇಳಿದ.

ಅದಕ್ಕೆ ಒತ್ತರವಾಗಿ ಹೊರಗಿನಿಂದ, "ಅಯ್ಯಾ, ಮಹಾಕಾಯರೇ, ಅದು ಹರಳೆಣ್ಣೇವಾಸನೆಯಲ್ಲ. ಬೇವಿನ ಎಣ್ಣೆಯೊಂದಿಗೆ ಒಳ್ಳೆಯ ಬಂಗಾರದ ಬಣ್ಣದ ಎಳ್ಳೆಣ್ಣೆಯೂ ಬೆರೆತ ಮಿಶ್ರ ಎಣ್ಣೇ ಪರಿಮಳ. ಸೊಳ್ಳೆಗಳೂ ಕ್ರಿಮಿಕೀಟಗಳೂ ರಾತ್ರಿಯಲ್ಲಿ ನಿಮಗೆ ನಿದ್ರಾಭಂಗ ಮಾಡಬಾರದೂ ಅಂತ ನಮ್ಮ ನಾಯಕರು ನಿಮ್ಮ ಕುಟೀರದ ಮಾಡಿನ ತಾಳೆಯೋಲೆಗೂ ತಡಿಕೆಗಳಿಗೂ ಈ ಎಣ್ಣೆ ಹಚ್ಚಲು ಹೇಳಿದರು" ಎಂದು ಗಡೇಗುಡ್ಡನ ಅನುಚರನೊಬ್ಬ ಕೂಗಿ ಹೇಳಿದ.

"ಹಾಗೇನು! ಸರಿ, ಸರಿ!" ಎಂದು ಆಕಳಿಸಿ ಕೃಪಾಣಜಿತ್ತು ಮತ್ತೆ ನಿದ್ದೆಮತ್ತಿನಿಂದ ಕಣ್ಣುಗಳನ್ನು ಮುಚ್ಚಿಕೊಂಡನು. ಆ ಗುಡಿಸಲಿನ ನಡುವಿನಲ್ಲಿರುವ



ಬಲವಾದ ಕಂಬಕ್ಕೆ ಕಬ್ಬಿಣದ ಸಂಕಲೆಯಿಂದ ಬಂಧಿಸಲ್ಪಟ್ಟ ನರವಾನರವು ಮಾತ್ರ ಆ ವಾಸನೆಯನ್ನು ತಾಳಲಾರದೆ ಓಡಿಹೋಗುವ ಪ್ರಯತ್ನದಲ್ಲಿ ಅತ್ತಿತ್ತ ಗಿರಿಕೀ ಹೊಡೆಯುತ್ತ ಎಳೆದಾಡಿಕೊಂಡಿತ್ತು.

ಕೃಪಾಣಜಿತ್ತು ಮೈಮರೆತು ಗಾಢನಿದ್ರೆಯಲ್ಲಿ ಮುಳುಗಿಬಿಟ್ಟ. ಆ ಗುಡಿಸಲಿನ ಮುಂದೆ ಗಡೇಗುಡ್ಡನು ತನ್ನ ಅನುಚರರೊಂದಿಗೆ ಬಂದನು. ಅವನು "ಹುಂ" ಎಂದು ಸೈಗೆ ಮಾಡಿದ ಕೂಡಲೇ ಒಬ್ಬ ಕಳ್ಳನು ನಿಶ್ಶಬ್ದವಾಗಿ ಗುಡಿಸಲಿನ ಬಾಗಿಲು ದೂಡಿ ಒಳಗೆ ಹೋಗಿ, ಕೃಪಾಣಜಿತ್ತು ಗೋಡೆಗೆ ಒರಗಿಸಿಟ್ಟಿದ್ದ ಕತ್ತಿಯನ್ನು ಹೊತ್ತುಕೊಂಡು ಬೇಗ ಬೇಗನೆ ಹೊರಗೆ ಬಂದನು.

ಗಡೇಗುಡ್ಡನು ಆ ಕತ್ತಿಯನ್ನು ಅತ್ತಿತ್ತ ತಿರುಗಿಸಿ ನೋಡಿ, "ಆ ಮಹಾಕಾಯನ ನಿದ್ದೆಯು ಮತ್ತು ಗುಡಿಸಲಿನ ಮಾಡು ಸುಟ್ಟು ಮೈ ಮೇಲೆ ಬಿದ್ದ ಹೊರತು ಇಳಿಯದು. ಈ ಕತ್ತಿಯನ್ನು ನಾವು ಹೊರಬಲ್ಲೆವೇ ಹೊರತು ಆಯುಧವಾಗಿ ಉಪ ಯೋಗಿಸಲಾರೆವು. ನಮಗಿದು ಯಾವ ಪ್ರಯೋ ಜನಕ್ಕೂ ಬಾರದು. ಆದರೂ ಬಿಸುಡಬೇಡಿ, ಇದನ್ನು ಎಲ್ಲಿಯಾದರೂ ಅಡಗಿಸಿಟ್ಟುಬಿಡಿ" ಎಂದು ಆ ಕತ್ತಿ ಯನ್ನು ಅನುಚರರಿಗೆ ಕೊಟ್ಟನು.

ಆಮೇಲೆ ಈ ಮೊದಲೇ ಹೇಳಿಟ್ಟಂತೆ ಬಲ್ಲೆ ಗಳನ್ನು ಹಿಡಿದಿದ್ದ ವೀರ ಕುಳ್ಳಯೋಧರನೇಕರು ಅಲ್ಲಿಗೆ ಬಂದರು. ಅವರಲ್ಲಿ ಕೆಲವರು ಟಗರಿ ರಾಹುತರಾಗಿಯೂ ಇದ್ದರು. ಗಡೇಗುಡ್ಡನು ಅವ ರನ್ನೆಲ್ಲ ಒಂದುಸಾರಿ ನೋಡಿ, "ಹುಂ, ಇನ್ನು ನಮ್ಮ ಸಾವೋ ಆ ದುಷ್ಟಮಹಾಕಾಯನ ಸಾವೋ ಎರಡರ ಲ್ಲೊಂದು ಆಗಿಯೇಬಿಡಲಿ. ಈ ಗುಡಿಸಲು ಮನೆಗೆ ಎಲ್ಲಾ ದಿಕ್ಕುಗಳಲ್ಲಿಯೂ ಒಂದೇ ಬಾರಿಗೆ ಬೆಂಕಿ ಹಚ್ಚಿರಿ. ಅವನು ಜೀವದೊಂದಿಗೆ ಹೊರಗೆ ಬಂದರೆ ಬಲ್ಲೆಯಿಂದ ತಿವಿಯಿರಿ. ನರವಾನರವು ಬಹುಶಃ ಕಬ್ಬಿಣದ ಸಂಕಲೆ ಕಡಿದುಕೊಂಡು ಹೊರಗೆ ಬರ ಲಾರದು. ಅದು ಅಲ್ಲೇ ಬೆಂಕಿಯಲ್ಲಿ ಸುಟ್ಟುಬೆಂದು ಸಾಯುತ್ತದೆ. ಹುಂ" ಎಂದನು.

ನಾಯಕನ ಅಪ್ಪಣೆಯಾದ ಕೂಡಲೇ ಕುಳ್ಳ ಭಟರು ನಾಲ್ವರು ಉರಿಯುವ ಕೊಳ್ಳಿಯನ್ನು ತೆಗೆದುಕೊಂಡು ಗುಡಿಸಲಿನ ಎಲ್ಲಾ ಭಾಗಗಳಿಗೂ ಬೆಂಕಿ ಹಚ್ಚಿಬಿಟ್ಟರು. ಎಣ್ಣೆಯಿಂದ ನೆನೆದಿರುವ ಒಣಗಿದ ತಾಳೆಯೋಲೆಯ ಗುಡಿಸಲಿನ ಮಾಡು ಒಮ್ಮೆಗೇ ಚಟಚಟನೆ ಹತ್ತಿಕೊಂಡು ಭಗಭಗ ಉರಿಯ ತೊಡಗಿ ದೊಡ್ಡ ಬೆಂಕಿಯ ಕೆನ್ನಾಲಗೆಗಳು ಮೇಲೇಳತೊಡಗಿದುವು.


ಒಂದೆರಡು ಕ್ಷಣಗಳಲ್ಲಿ ಗಢದ್ದು ನಿದ್ದೆಯಲ್ಲಿ ಕೃಪಾಣಜಿತ್ತುವಿನ ಶರೀರವೆಲ್ಲ ಭಗ್ಗನೆ ಉರಿಯಲ್ಲಿ ತಾಗಿ ಧಿಗ್ಗನೆ ಹಾರಿ ಎದ್ದ. ಕಣ್ಣುಬಿಡಿಸಿದಾಗ ತಾ ರುವ ಗುಡಿಸಲು ಮನೆ ಉರಿಯುವುದನ್ನು ತಿಳಿ ಪ್ರಾಣಭಯದಿಂದ ಕೆಟ್ಟದನಿ ತೆಗೆದು ಕೂ

"ಮೋಸ! ಓ! ಬಿಡಲಾರೆ, ಸಾಯುವವರೆಗೂ ಪ್ರತೀಕಾರ ಮಾಡದೆ ಬಿಡಲಾರೆ!" ಎಂದು ಅತ್ತಿತ್ತ ಎಗರಾಡುತ್ತ ತನ್ನ ಕತ್ತಿಗಾಗಿ ಹುಡುಕಿದ. ಅದು ಇರಬೇಕಾದಲ್ಲಿ ಇರಲಿಲ್ಲ. ಮೇಲಿನಿಂದ ಆಚೆ ಈಚೆ ಬದಿಗಳಿಂದ ಬೆಂಕಿಯ ಮಾಲೆಗಳು ಉದುರುತ್ತಿವೆ! ಕೃಪಾಣಜಿತ್ತು ಗಡಗಡ ನಡುಗುತ್ತ ಅತ್ತಿತ್ತ ಕುಣಿಯುತ್ತ ಏನು ಮಾಡಲೆಂದು ಯೋಚಿಸುವಷ್ಟರಲ್ಲಿ ಉರಿಯುತ್ತಿರುವ ತಾಳೆಯೋಲೆಯೊಂದು ಅವನ ಮೇಲೆ ಬಿತ್ತು. ನರವಾನರವು ಒಂದುಸಾರಿ ಭೀಕರವಾಗಿ ಅರಚಿ ಬಲವಾಗಿ ಎಳೆದಾಗ, ಅದರ ನಡುವಿಗೆ ಬಿಗಿದಿದ್ದ ಕಬ್ಬಿಣದ ಸಂಕಲೆ ತುಂಡಾಯಿತು. ಅದು ಕೃಪಾಣಜಿತ್ತುವನ್ನು ಹಿಡಿಯಲು ಹೋಗಿ, ಸುತ್ತಲೂ ಆಕ್ರಮಿಸುವ ಬೆಂಕಿಗೆ ಹೆದರಿ, ಮುಚ್ಚಿಕೊಂಡಿದ್ದ ಬಾಗಿಲಿನ ಕಡೆಗೆ ಓಡಿತು.

ಇನ್ನು ತನಗೆ ಮರಣವೇ ಗತಿಯೆಂದುಕೊಂಡ ಕೃಪಾಣಜಿತ್ತು ಭಯದಿಂದುಂಟಾದ ಆವೇಶದಲ್ಲಿ ನರವಾನರದ ಸೊಂಟದಲ್ಲಿ ನೇತಾಡುತಿದ್ದ ಕಬ್ಬಿಣದ ಸಂಕಲೆಯ ತುಂಡನ್ನು ಹಿಡಿದುಕೊಂಡನು. ಅದೇ ಸಮಯದಲ್ಲಿ ವಾನರವು ಒಂದೇ ಉಸಿರಿಗೆ ಓಡಿ ದ್ವಾರಬಂಧಗಳನ್ನು ಮುರಿದು ಹೊರಕ್ಕೆ ಹಾರಿತು. ಅದರೊಂದಿಗೆ ಅಂಟಿಕೊಂಡಿದ್ದ ಕೃಪಾಣಜಿತ್ತು ಕೂಡಾ ಹೊರಕ್ಕೆ ಬಂದುಬಿದ್ದ. ಆ ಸಮಯಕ್ಕೆ ಸಂಕಲೆಯಿಂದ ಅವನ ಕೈಜಾರಿ ನರವಾನರವು ಮುಕ್ತವಾಗಿ ಮುಂದೆ ಓಡಿತು.

ಹಠಾತ್ತಾಗಿ ನರವಾನರವೂ ಅದರ ಹಿಂದೆ ಕೃಪಾಣಜಿತ್ತೂ ಉರಿಯುವ ಗುಡಿಸಲಿನೊಳಗಿನಿಂದ ಹೊರಗೆ ಬಿದ್ದುದನ್ನು ನೋಡಿ ಗಡೇಗುಡ್ಡನೂ ಅವನ ಅನುಚರರೂ ತುಂಬ ಹೆದರಿದರು. ಆದರೆ ಈಗ ಕೃಪಾಣಜಿತ್ತು ನಿರಾಯುಧನಾಗಿದ್ದಾನೆ. ನರವಾನರವಂತೂ ಸಮಯಸಿಕ್ಕಿದರೆ ಕಾಡಿನೊಳಗೆ ಓಡುವ ಪ್ರಾಣಿ!

ಅಂತೆಯೇ ಗಡೇಗುಡ್ಡ ಧೈರ್ಯವನ್ನು ತಂದುಕೊಂಡು, ಹೆದರಿಕೆಯಿಂದ ಓಡಲು ನೋಡುತ್ತಿದ್ದ ತನ್ನ ಅನುಚರರಿಗೆ ಧೈರ್ಯ ಹೇಳುತ್ತ "ನರವಾನ



ರಕ್ಕೆ ಏನೂ ಮಾಡಬೇಡಿ ! ಅದರ ಪಾಡಿಗೆ ಓಡಲಿ. ಈ ದುಷ್ಟನನ್ನು ಮಾತ್ರ ಬಿಡಬೇಡಿ. ಇದೇ ಸಮಯ ! ಬಲ್ಲೆಗಳಿಂದ ಚುಚ್ಚಿ ಕೊಂದೇಬಿಡಿ. ಹೆದರಬೇಡಿ !" ಎಂದು ಕೂಗಿ ಹೇಳಿದನು.

ನಾಯಕನ ಬಾಯಿಯಿಂದ ಹೊರಟ ಗಟ್ಟಿ ಉತ್ಸಾಹದ ಮಾತು ಕೇಳಿ ಕುಳ್ಳವೀರರಿಗೆಲ್ಲಾ ಧೈರ್ಯ ಬಂದಿತು. ಆಗಲೇ ನರವಾನರವು ದೊಡ್ಡದನಿಯಿಂದ ಅರಚಿ ಸುಮ್ಮನೆ ಓಡುವುದನ್ನು ಬಿಟ್ಟು ಕೈಗೆ ಸಿಕ್ಕಿದ ಕುಳ್ಳರನ್ನು ಹಿಡಿದು ಅತ್ತಿತ್ತ ತಿರುಗಿಸಿ ಬಿಸುಡತೊಡಗಿತು. ಅವರಲ್ಲಿ ಕೆಲವರು ಓಡಿಹೋಗಲು ನೋಡಿದರೆ, ಕೆಲವರು ಅದನ್ನಿದಿರಿಸಿ ಬಲ್ಲೆಗಳಿಂದ ತಿವಿಯುತ್ತಿದ್ದರು.

ಈ ಗಲಾಟೆ ಕೃಪಾಣಜಿತ್ತುವಿಗೆ ಒಳ್ಳೆಯ ಅವಕಾಶ ಕಲ್ಪಿಸಿದಂತಾಯಿತು. ಅವನು ಏನಾದರೂ ಆಯುಧ ಸಿಗುವುದೋ ಎಂದು ಅತ್ತಿತ್ತ ನೋಡಲು, ಒಂದು ಕಡೆಯಲ್ಲಿ ಒಣಗಿದ ಉದ್ದವಾದೊಂದು ಮರದ ಕೊಂಬೆ ಕಾಣಿಸಿತು. ಅವನು ಅದನ್ನು ಕೈಗೆತ್ತಿಕೊಂಡು ಭೀಕರವಾಗಿ ಕೂಗಿ ಅಬ್ಬರಿಸುತ್ತ ಗಡೇಗುಡ್ಡನ ಅನುಚರರನ್ನು ಸಿಕ್ಕಾಬಟ್ಟೆ ಹೊಡೆಯತೊಡಗಿದನು. ಕುಳ್ಳವೀರರು ಕೂಡಾ ಪ್ರಾಣದ ಮೇಲಿನ ಆಸೆಬಿಟ್ಟು ಕೃಪಾಣಜಿತ್ತುವಿನೊಂದಿಗೆ ತಮ್ಮ ಬಲ್ಲೆಗಳಿಂದ ಹೋರಾಡತೊಡಗಿದರು. ಆ ಕುಳ್ಳವೀರರ ಬಲ್ಲೆಯುದ್ಧ ಅತ್ಯದ್ಭುತವಾಗಿತ್ತು. ಅಷ್ಟೊಂದು ಕರಾಮತಿಯಿಂದ ಯಂತ್ರವೇಗದಲ್ಲಿ ಬಲ್ಲೆ ತಿರುಗಿಸಿ ತಿವಿಯುವವರನ್ನು ಕೃಪಾಣಜಿತ್ತು ಅದುವರೆಗೂ ನೋಡಿರಲಿಲ್ಲ. ಅವರ ಬಲ್ಲೆಗಳಿಂದ ಅವನ ಸರ್ವಾಂಗವೂ ಗಾಯಗಳಾಗಿ ರಕ್ತ ಕಾರ ಹತ್ತಿತು. ಕೃಪಾಣಜಿತ್ತು ಬದುಕುವ ಆಶೆಬಿಟ್ಟ.

ಈ ಕುಳ್ಳಜನಾಂಗದ ಕೇರಿಯಲ್ಲಿ, ಆ ರಾತ್ರಿಯ ಹೊತ್ತಿನಲ್ಲಿ ಉರಿಯುವ ಬೆಂಕಿ, ಏಳುವ ಹೊಗೆ, ಹೊರಡುವ ಕೂಗಾಟ, ಅರಚಾಟ, ಆರ್ತನಾದಗಳನ್ನು ಕೇಳುತ್ತಾ ತುಸು ದೂರದಲ್ಲಿ ಇಬ್ಬರು ವಿಚಿತ್ರಮನುಷ್ಯರು ಸುಮ್ಮನಿದ್ದರು. ಅವರು ಕುದುರೆಗಳ ರೂಪದಲ್ಲಿದ್ದ ಎರಡು ಅದ್ಭುತ ಪ್ರಾಣಿಗಳ ಮೇಲೆ ಕುಳಿತುಕೊಂಡಿದ್ದರು. ಆ ವಾಹನ ಪ್ರಾಣಿಗಳ ಶರೀರಗಳು ಮೀನಿನ ಪೊರೆಗಳಂತೆ ಕಾಣುತ್ತಿದ್ದಿತು. ಮಕರಕೇತುವಿನ ವಾಹನವಾದ ಜಲಗೃಹದ ಜಾತಿಯ ಕುದುರೆಗಳಂತೆ ಅವೂ ಇದ್ದುವು. ಅವುಗಳ ಮೇಲೆ ಕುಳಿತವರು ಸಮುದ್ರ ಪ್ರಾಣಿಯ ಚರ್ಮದಿಂದ ಹೊಲಿದ ದುಸ್ತುಗಳನ್ನು ಧರಿಸಿದ್ದರು. ಅವರ ನಡುವಿನಲ್ಲಿ ಉದ್ದವಾದ ಕತ್ತಿಗಳು ನೇತಾಡುತ್ತಿದ್ದುವು. ಇಬ್ಬರೂ ಮಾತಾಡದೆ ಆ ಅಗ್ನಿಕಾಂಡದ ಹಾಹಾಕಾರದ ಕಡೆಗೇ ನೋಡುತ್ತಿದ್ದರು.

(ಮುಂದುವರಿಯುವುದು)





June 1977

# ಮಾಯಾಸರೋವರ

೧೭


[ ಕೃಪಾಣಜಿತ್ತು ಮೋಸದ ಮಾತುಗಳಿಂದ ಗಡೇಗುಡ್ಡನ ಕಡೆಯವರನ್ನು ನಂಬಿಸಲು ನೋಡಿದನು. ಅವನನ್ನು ಕೊಲ್ಲಲು ಗಡೇಗುಡ್ಡನು ಅವನು ನಿದ್ರೆಯಲ್ಲಿರುವಾಗ ಮನೆಗೇ ಬೆಂಕಿ ಹಚ್ಚಿಸಿದನು. ಕೃಪಾಣಜಿತ್ತು ಆ ಗುಡಿಸಲಿನಿಂದ ಹೊರಗೆ ಹಾರಿ ಕೈಗೆ ಸಿಕ್ಕಿದ ಮರದ ಕೊಂಬೆಯಿಂದ ಕಳ್ಳರನ್ನು ಹೊಡೆಯತೊಡಗಿದನು. ಇದೆಲ್ಲವನ್ನೂ ನೋಡುತ್ತ ಇಬ್ಬರು ವಿಚಿತ್ರ ಮನುಷ್ಯರು ದೂರದಲ್ಲಿ ನಿಂತಿದ್ದರು.]

ಅರಣ್ಯದ ಮರಗಳ ಗುಂಪಿನೆಡೆಯಲ್ಲಿ ನಿಂತು ಕಳ್ಳರ ...ರಿಯಲ್ಲಿ ಹೊರಟ ಆ ಬೆಂಕಿಯನ್ನೂ, ಮಾರಣ ...ೋಮದಂತಹ ಜಗಳವನ್ನೂ ಅತ್ಯಾಶ್ಚರ್ಯದಿಂದ ...ೋಡುತ್ತಿದ್ದರು ಆ ವಿಚಿತ್ರ ಮನುಷ್ಯರು. ಒಂದು ...ಮಿಷ ಸುಮ್ಮನೆ ನೋಡಿದ ಮೇಲೆ ಒಬ್ಬನು ತನ್ನ ...ಯನ್ನು ಹಿರಿದು ಇನ್ನೊಬ್ಬನೊಂದಿಗೆ, "ಅಣ್ಣಾ ...ರ್ಣನಖಿ ! ಆ ಬಡಕೇರಿಯ ಮೇಲೆ ಯಾರೋ ...ತ್ರುಗಳು ಮುತ್ತಿ ಸರ್ವ ನಾಶಮಾಡುತ್ತಿರುವ ...ಾಗಿದೆ ಪಾಪ ! ಸ್ವಲ್ಪ ಹೋಗಿ ಏನು ಸಂಗತಿ ಅಂತ ...ೋಡೋಣವೇ ? " ಎಂದನು.

ತಮ್ಮನ ಮಾತು ಕೇಳಿ ಸರ್ಪನಖನೆಂಬ ಅಣ್ಣನು ನಿರ್ಲಕ್ಷ್ಯವಾಗಿ, "ಸರ್ವ ನಾಶಮಾಡಲಿ, ಏನು ಬೇಕಾದರೂ ಮಾಡಲಿ. ಸರ್ಪಸ್ವರಾ, ನೀನೇಕೆ ಕತ್ತಿ ತೆಗೆಯುವೆ ? ನಮಗೇಕೆ ಅವರ ಕರ್ಮ ? ನಮ್ಮದು ಯಾವ ಲೋಕ ? ಇದು ಯಾವಲೋಕ ? ಇವರ ಗೊಡವೆ ಕಟ್ಟಿಕೊಂಡು ನಮಗೇನಾಗ ಬೇಕಾಗಿದೆ ? ನಾವು ಬಂದ ಕೆಲಸ ಮುಖ್ಯ. ಆ ಕೆಲಸದ ಮೇಲೆ ನಮ್ಮ ಜಲಾಶ್ವಗಳ ಚಾಲಪಾದಗಳು ಸವೆದು ಹೋಗುವ ಹಾಗೆ ಈ ಕಾಡುಗುಡ್ಡಗಳನ್ನೆಲ್ಲಾ ತಿರುಗಾಡಿದೆವಲ್ಲಾ ? ಇನ್ನೂ ಯಾವ ಸುಳಿವೂ ಸಿಕ್ಕಿಲ್ಲ !



17-1 283



ಈ ಗಲಾಟೆಯ ವಿಕೃತ ಸೌಂದರ್ಯವನ್ನು ನೋಡಿದ್ದು ಸಾಕು ಬಿಡು" ಎಂದನು.

"ನಿನ್ನ ಮಾತು ನಿಜವೇ. ಆದರೂ ಅಣ್ಣ! ನನಗೊಂದು ಅನುಮಾನ ಕಾಣುತ್ತದೆ; ತಡೆ" ಎಂದು ಹೇಳಿ ಸರ್ಪಸ್ವರನು ತನ್ನ ಕುದುರೆಯ ಮೇಲೆ ತಟ್ಟನೆ ನಿಂತು ಹಾರಿ ಮರದ ಕೊಂಬೆಯನ್ನು ಎಟಕರಿಸಿಕೊಂಡು ನೇತಾಡುತ್ತ ಆ ಕುಳ್ಳರ ಕೇರಿಯ ಕಡೆಗೆ ನೋಡಿ, "ಅಣ್ಣಾ! ಇದೇನೋ ಬಹಳ ವಿಚಿತ್ರವಾಗೇ ಇದೆ. ಭಯಂಕರವಾದ ಗುಡ್ಡದಂತಹ ನರವಾನರವೊಂದು ಒಬ್ಬ ಸಾಧಾರಣ ಮನುಷ್ಯನ ಮಾತಿಗೆ ಕಟ್ಟುಬಿದ್ದು ಕುಳ್ಳ ಜನಾಂಗವನ್ನು ಚಿತ್ರವಧೆ ಮಾಡುತ್ತಿದೆ. ಆ ಕುಳ್ಳರೂ ಸಾಮಾನ್ಯದವರಲ್ಲ! ಏನು ಅವರ ಸಾಹಸ! ಎಂಥ ಧೈರ್ಯ! ಕೆಂಪಿರುವೆಗಳ ಹಾಗೆ ಸತ್ತರೂ ಬಿಡುವವರಲ್ಲ! ಇದನ್ನು ನೋಡಿ ನಾವು ಸುಮ್ಮನಿರುವುದು ಹೇಗೆ?" ಎಂದನು.

"ಹಾಗೇನು? ಹಾಗಿದ್ದರೆ ಆ ನರವಾನರವನ್ನೂ ಮನುಷ್ಯನನ್ನೂ ನಾವು ಜೀವದೊಂದಿಗೆ ಹಿಡಿಯಲೇಬೇಕು. ಆ ಮನುಷ್ಯನ ಮೂಲಕ ಕಾಣೆಯಾಗಿ ಹೋದ ನಮ್ಮವನ ಸಮಾಚಾರವೇನಾದರೂ ತಿಳಿಯಬಹುದು. ಯಾವುದಕ್ಕೂ ನೋಡಿಬಿಡೋಣ." ಎಂದು ಸರ್ಪನಖಿನು ತನ್ನ ಕುದುರೆಯನ್ನು ಹುರುಡಿಸಿ, ಜೀನಿನಲ್ಲಿ ನೇತಾಡುತ್ತಿದ್ದ ತಾಮರದಂಟಿನ ಹಗ್ಗವನ್ನು ಕೈಯಲ್ಲೆತ್ತಿಕೊಂಡನು.

ಇಬ್ಬರೂ ತಮ್ಮ ಕುದುರೆಗಳ ಮೇಲೆ ವೇಗವಾಗಿ ಗಡೇಗುಡ್ಡನ ಗೂಡಾರದ ಕಡೆಗೆ ಓಡಿದರು. ಆ ಸಮಯದಲ್ಲಿ ನರವಾನರವು ಕುಪ್ಪಳಿಸುತ್ತ ತನ್ನ ಬಲವಾದ ಕೈಗಳಿಂದ ಗುಡಿಸಲು ಮಗುಚಿ ಬೀಳುವಂತೆ ಮಾಡುತ್ತಿತ್ತು. ಕೃಪಾಣಜಿತ್ತು ಹುಚ್ಚು ಹಿಡಿದವನ ಹಾಗೆ ಕೂಗುತ್ತ ತನ್ನ ಮೇಲೆ ಬರುವ ಕುಳ್ಳರನ್ನು ಮರದ ಕೊಂಬೆಯಿಂದ ಹೊಡೆಯುತ್ತಿದ್ದ. ಆ ಹೊಡೆತಕ್ಕೆ ಕುಳ್ಳರು ಬೀಳುತ್ತಲೂ, ಏಳುತ್ತಲೂ, ಸಾಯುತ್ತಲೂ ಇದ್ದರೂ, ಒಬ್ಬರಾದರೂ ಹೆದರಿ ಓಡುವವರಾಗಿರಲಿಲ್ಲ. ಮತ್ತೆ ಮತ್ತೆ ಎದ್ದೆದ್ದು ಬಂದು ಕೃಪಾಣಜಿತ್ತು ನರವಾನರಗಳನ್ನು ಸಿಕ್ಕಿದ ಹಾಗೆ ಹೊಡೆಯುತ್ತಿದ್ದರು.

"ಅಣ್ಣಾ, ಈ ನರವಾನರವನ್ನು ನಾನು ನೋಡಿಕೊಳ್ಳುತ್ತೇನೆ. ನೀನು ಆ ಗೂಳಿಯಂತಹ ಮನುಷ್ಯನನ್ನು ಹಿಡಿದು ಬಂಧಿಸು." ಎಂದು ಸರ್ಪಸ್ವರನು ತನ್ನ ಕುದುರೆಯನ್ನು ನರವಾನರದ ಕಡೆಗೆ ಓಡಿಸಿಕೊಂಡು ಹೋದನು.


ಸರ್ಪನಖಿನು ತಾಮರೆದಂಟಿನ ಹಗ್ಗವನ್ನು ಬೀಸುತ್ತ, ಅದರಲ್ಲಿದ್ದ ಉರುಳು ಕೃಪಾಣಜಿತ್ತುವಿನ ಕಂಠಕ್ಕೆ ಬೀಳುವಂತೆ ಗುರಿಯಿಟ್ಟು ಬೀಸಿ ಎಸೆದು "ಮಾಯಾ ಸರೋವರೇಶ್ವರನಿಗೆ ಜಯವಾಗಲಿ!" ಎಂದು ತೀಕ್ಷ್ಣವಾದ ಕೀಚು ಶಬ್ದದಿಂದ ಅರಚಿದನು.

ಕೃಪಾಣಜಿತ್ತುವಿನ ಕೊರಳಿಗೆ ಉರುಳು ಬೀಳುವುದಕ್ಕೂ, ಆ ಕೀಚು ಶಬ್ದ ಹೊರಡುವುದಕ್ಕೂ

ಹೋಯಿತು. ಮರುಕ್ಷಣ ಆತನ ಆಟ ಕಟ್ಟಿತು. ಚಿತ್ರಾಕಾರದ ಕುದುರೆಗಳ ಮೇಲೆ ಆಕಸ್ಮಿಕವಾಗಿ ದ್ದು ಮೇಲೆ ಬಂದುಬಿದ್ದ ಸರ್ಪನಖಿ ಸರ್ಪಸ್ವರ ನ್ನು ನೋಡಿದ ಕೂಡಲೇ ಕೃಪಾಣಜಿತ್ತುವೂ ಳ್ಳರೂ ನಿಶ್ಚೇಷ್ಟಿತರಾದರು. ಸರ್ಪನಖಿನು ಬೀಸಿದ ಾಮರೆದಂಟಿನ ಹಗ್ಗದ ಉರುಳು ಕೃಪಾಣಜಿತ್ತು ನ ಕಂಠಕ್ಕೆ ಬಿದ್ದು ಬಿಗಿಯತೊಡಗಿತು. ಅಷ್ಟರೊಳಗೆ ೃಪಾಣಜಿತ್ತು ಸಾಯುವವನ ಹಾಗೊಮ್ಮೆ ಕೂಗಿ, ಉರುಳು ಬಿಸುಟವನನ್ನು ಪಿಳಿಪಿಳಿ ನೋಡುತ್ತ "ಅಯ್ಯಯ್ಯಾ ! ಕೊಲ್ಲಬೇಡ ! ನಾನೂ ನಿನ್ನಂಥ ಮನುಷ್ಯನೇ. ನಿನ್ನ ಕುದುರೆಯಂಥದೇ ಒಂದು ರಾನೆಯ ಮೊಸಳೇ ಮಹಾ ಮನುಷ್ಯನಿಗೆ ನಾನು ಂಬಾ ಸಹಾಯಮಾಡಿದ್ದೇನೆ" ಎಂದ. ಅಂಥ ಮಯದಲ್ಲಿಯೂ ಬದುಕುವ ಆಶೆಯಿಂದ ಏನೋ ಪಕ ಬಂದಿತ್ತು ಅವನಿಗೆ.

ಉರುಳನ್ನು ಎಳೆಯದೆ ಅವನ ಮಾತನ್ನು ಕೇಳುತ್ತ ರ್ಪನಖಿನು ಆಶ್ಚರ್ಯಪಟ್ಟು, "ಹಾಗಾದರೆ ನೀನು ಮ್ಮ ಮಕರಕೇತುವನ್ನು ನೋಡಿದ್ದೀ ಎಂದಾಯಿತು. ಷ್ಟು ದೊಡ್ಡ ಮಹಾಯೋಧನು ನಿನ್ನ ಸಹಾಯ ದಿರಬೇಕಾದರೆ, ಅವನು ಭಾರೀ ಕಷ್ಟಕ್ಕೆ ಸಿಕ್ಕಿರ ಕು. ಆ ಮಕರಕೇತು ಈಗ ಎಲ್ಲಿದ್ದಾನೆಂಬುದು ಗೆ ಗೊತ್ತಿದೆ ಎಂದಾಯಿತು. ಎಲ್ಲಿದ್ದಾನೆ ಬೇಗ ಳು." ಎಂದು ಕೇಳಿದನು.


ಕೃಪಾಣಜಿತ್ತು ಕೈಗಳೆರಡನ್ನೂ ಮುಂದೆ ಚಾಚಿ, ನಿನ್ನ ಪ್ರಶಸ್ತವಾದ ತಾಮರೇದಂಟಿನ ಹಗ್ಗ ನ್ನು ಸಡಿಲುಮಾಡಲು ಬಿಡಯ್ಯಾ. ಮಾತಾಡಲಿಕ್ಕೇ ಷ್ಟವಾಗಿದೆ. ನಾನು ಹೇಗೆ ಉತ್ತರ ಕೊಡಲಿ? ನ್ನು ಸ್ವಲ್ಪ ಸಡಿಲುಮಾಡಲು ಅನುಮತಿ ಕೊಡು ಯಾ?" ಎಂದು ಪ್ರಾರ್ಥಿಸಿದ, ಕುತ್ತಿಗೆಯ ರುಳಿನೆಡೆಗೆ ಕೈತುರುಕಿಸಲು ಪ್ರಯತ್ನಿಸುತ್ತ. ಾಗೇ ಮಾಡು. ಜಾರಿಸಿಕೊಳ್ಳಬೇಡ. ಓಡಲು



ಪ್ರಯತ್ನಮಾಡಿದರೆ ಈ ಹಗ್ಗವೇ ನಿನಗೆ ಯಮಪಾಶ ವಾಗುತ್ತದೆ, ಎಚ್ಚರ!" ಎಂದ ಸರ್ಪನಖಿ.

ಕೃಪಾಣಜಿತ್ತು ಕುತ್ತಿಗೆಯ ಉರುಳನ್ನು ಎರಡು ಕೈಗಳಿಂದಲೂ ಎಳೆದು ಸಡಿಲುಮಾಡಿ, ಬಲವಾಗಿ ಒಮ್ಮೆ ಶ್ವಾಸ ಎಳೆದುಕೊಂಡನು.

"ಅಯ್ಯಾ, ನಿಜ ಹೇಳುತ್ತೇನೆ. ಆ ಮಕರಕೇತು ಈಗ ಎಲ್ಲಿರುವನೆಂಬುದು ನನಗೆ ತಿಳಿಯದು. ನಿನ್ನನ್ನು ನೋಡಿದ ಕೂಡಲೇ ನನಗೆ ಅವನದೇ ನೆನಪು ಬಂತು. ಅಷ್ಟೇ ಅಲ್ಲ, ನಡೆದ ಸಂಗತಿ ಎಲ್ಲಾ ನೆನಪಿಗೆ ಬಂತು, ಈಗ್ಗೆ ಕೆಲವು ದಿನಗಳ ಕೆಳಗೆ ಅಮರಾವತೀ ನಗರದವನಾದ ಜಯಶೀಲನೆಂಬವನೂ, ಅವನ ಸ್ನೇಹಿತನಾದ ಕಾಪಾಲಿಕನೊಬ್ಬನೂ ಅರಣ್ಯದಲ್ಲಿದ್ದ ಮಕರಕೇತುವಿಗೆ ನಾನಾ ಹಿಂಸೆ ಕೊಟ್ಟರಂತೆ. ಇದನ್ನೆಲ್ಲಾ ಅರಣ್ಯ ಪ್ರಾಂತದಲ್ಲಿರುವವರು ಹೇಳಿದುದರಿಂದ ನನಗೆ ತಿಳಿಯಿತು." ಎಂದನು. ಅವನ ಮಾತು ಕೇಳುತ್ತಿದ್ದ ಸರ್ಪನಖಿನಿಗೆ ಸಿಟ್ಟಿನಿಂದ ಕಣ್ಣು



ಕೆಂಪಗಾಗಲು, "ಎಲವೋ ಮೋಸಗಾರಾ! ಸಾಕು ಮಾಡು ನಿನ್ನ ಹಾಳು ಹರಟೆ. ನಾನು ಕೇಳಿದ್ದೇನು? ನೀನು ಹೇಳುವುದೇನು? ಮಕರಕೇತುವಿಗೆ ಏನೋ ಸಹಾಯ ಮಾಡಿದೆನೆಂದು ಹೇಳಿದೆಯಲ್ಲವೆ? ಅವನು ಈಗ ಎಲ್ಲಿದ್ದಾನೆಂತಲೂ ಕೇಳಿದೆ. ಅದಕ್ಕೆ ಉತ್ತರ ಕೊಡುವುದನ್ನು ಬಿಟ್ಟು ಅರ್ಥವಿಲ್ಲದ ಮಾತುಗಳಿಂದ ಕಾಲಹರಣ ಮಾಡುವೆಯೇನು? ಮಕರಕೇತು ಕ್ಷೇಮವಾಗಿದ್ದಾನೋ ಮೊದಲು ಹೇಳು" ಎಂದನು.

ಕೃಪಾಣಜಿತ್ತುವಿಗೆ ಏನು ಹೇಳಲೂ ತೋರಲಿಲ್ಲ. ಆ ಕ್ಷಣದಲ್ಲಿ ಪ್ರಾಣಾಪಾಯದಿಂದ ಮುಕ್ತನಾಗಲು ಮಕರಕೇತುವಿನ ಪರಿಚಯ ತನಗಿದೆಯೆಂದು ಹೇಳಿದನೇ ಹೊರತು, ನಿಜಕ್ಕೂ ಮಕರಕೇತುವನ್ನು ಅವನು ನೋಡಿದ್ದೇ ಇಲ್ಲ. ಆದರೆ ಅವನು ಅರಣ್ಯದಲ್ಲಿ ತಿರುಗುತ್ತಿರುವಾಗ ಅರಣ್ಯವಾಸಿಗಳ ಬಾಯಿಯಿಂದ ಹೊರಟ ಮಾತುಗಳಿಂದ, ಮಕರಕೇತುವಿನ ವಿಷಯ ಸ್ವಲ್ಪಮಟ್ಟಿಗೆ ತಿಳಿದಿತ್ತು. ಸರ್ಪನಖನೂ ಜಲವಾಸಿಯಂತೆ ಕಂಡುದರಿಂದ ಹಾಗೊಂದು ತು ಬಾಣ ಹಾರಿಸಿದ್ದ, ಅಷ್ಟೇ.

ಈಗ ಎಂತಹ ಸುಳ್ಳನ್ನು ಹೇಳಿ ತನ್ನ ಪ್ರಾಣವನ್ನು ಉಳಿಸಿಕೊಳ್ಳುವುದೆಂದು ಅವನ ಮನಸ್ಸು ಬೆಂಕಿಯ ಮೇಲೆ ನಿಂತಂತೆ ಕುಣಿಯುತ್ತಿರಲು, ಕಳ್ಳರ ಗುಂಪಿನಿಂದ ಒಮ್ಮೆಗೇ ಕಿರಿಚಾಟ ಕೇಳಿಸಿತು. ಸರ್ಪನಖನ ಲಕ್ಷ್ಯ ಅವರ ಕಡೆಗೆ ಹೋಯಿತು.

ಆಗ ಗಡೇಗುಡ್ಡ ಅವನ ಮುಂದೆ ತುರುತುರ ಓಡಿ ಬಂದು ಕೈಮುಗಿದು, "ಅಯ್ಯಾ, ಜಲಾಶ್ವ ವೀರರೇ, ನೀವು ಈ ದುಷ್ಟನೊಂದಿಗೆ ಮಾತಾಡುತ್ತಾ ನಿಮ್ಮ ಜತೆಗಾರನಿಗೆ ಏನಾಯಿತೆಂಬುದನ್ನು ಮರೆತೇ ಬಿಟ್ಟಹಾಗಿದೆ" ಎಂದನು.

ಆ ಮಾತು ಕೇಳಿದ ಕೂಡಲೇ ಸರ್ಪನಖನಿಗೆ ತನ್ನ ತಮ್ಮನ ಸಂಗತಿ ನೆನಪಾಗಿ ಗಾಬರಿಯಾಯಿತು. "ಏನಾಯಿತು ಅವನಿಗೆ?" ಎನ್ನುತ್ತ ತಲೆ ತಿರುಗಿ ನಾಲ್ಕೂ ಕಡೆಗೆ ನೋಡುತ್ತ "ಓ ತಮ್ಮಾ ಸರ್ಪಸ್ವರಾ! ಏನು ಮಾಡಿದೆಯೋ? ಆ ನರವಾನ ಏನಾಯಿತು? ಎಲ್ಲಿ ಹೋದೆಯೋ ತಮ್ಮಾ!" ಎಂದು ಕೂಗಿ ಕೂಗಿ ಕೇಳಿದನು.

ತಮ್ಮನ ಕಡೆಯಿಂದ ಯಾವ ಪ್ರತ್ಯುತ್ತರವೂ ಬಾರದಿರಲು, "ಅವನಿಗೇನಾಯಿತು? ನೀವೇನು ನೋಡಿದಿರಿ?" ಎಂದು ಕಳ್ಳರನ್ನು ನೋಡಿ ಸರ್ಪನಖ. ಕಳ್ಳರು ಏನೂ ಹೇಳದೆ, ತಲೆಬಗ್ಗಿ ನೆಲವನ್ನು ನೋಡುತ್ತ ನಿಂತುಬಿಟ್ಟರು. ಅದನ್ನು ನೋಡಿ ಸರ್ಪನಖನಿಗೆ ಇನ್ನಿಷ್ಟು ಗಾಬರಿಯಾಯಿತು.

"ಎಲವೋ ಮಂದಮತಿ ಕಳ್ಳ ನರಹುಳಗಳೇ ಹೀಗೆ ಮುಖಜೋಲು ಹಾಕಿ ನೋಡುವಿರೇನು! ಏನು ನಡೆಯಿತೋ ಬಾಯಿಬಿಡಿರಿ!" ಎಂದು ಗದರಿಸಿದನು.

ಆಗ ಗಡೇಗುಡ್ಡ ತಲೆಯೆತ್ತಿ, "ಜಲಾಶ್ವಶೂರಾ! ನಿಮ್ಮ ತಮ್ಮನೂ ನರವಾನರವೂ ಕೂಡಿ ಅದೋ



ಅಲ್ಲಿ ಕಾಣುವ ಮರಗಳ ಗುಂಪಿನೊಳಗೆ ಹೋದರು. ಅವರ ಜಲಾಶ್ವ ಮತ್ತೊಂದು ದಿಕ್ಕಿಗೆ ಹೋಯಿತು. ಕೆಟ್ಟ ವಾನರವು ಕೃಪಾಣಜಿತ್ತು ಎಂಬ ಈ ದುಷ್ಟನ ಜೀವಪ್ರಾಣಿ. ಅದು ಇವನ ಮನಸ್ಸನ್ನೇ ತಿಳಿದು ಅದಕ್ಕೆ ತಕ್ಕ ಹಾಗೆ ನಡೆಯುವಂಥಾದ್ದು. ಅದು ನಿಮ್ಮ ತಮ್ಮನನ್ನು ಎತ್ತಿ ಭುಜದ ಮೇಲೆ ಹೊತ್ತುಕೊಂಡು ಅಡವಿಯೊಳಗೆ ತಪ್ಪಿಸಿಕೊಂಡು ಹೋಗಬೇಕೆಂದು ಇವನು ನೆನೆಸಿಕೊಂಡಿದ್ದಾನೆ. ಸನ್ನೆಯಿಂದಲೂ ಆಜ್ಞಾಪಿಸಿದ್ದಾನೆ, ಕೂಡಲೇ ಅದು ಹಾಗೇ ಮಾಡಿಬಿಟ್ಟಿತು. ಅದರ ಶಕ್ತಿಗೆ ಈಡುಜೋಡಿಲ್ಲ. ನಾವೆಷ್ಟು ಹೊಡೆದರೂ ಅದು ಓಡಿಯೇಬಿಟ್ಟಿತು. ಎಲ್ಲದಕ್ಕೂ ಈ ದುಷ್ಟನೇ ಕಾರಣ !" ಎಂದನು.


"ಕೆಟ್ಟ ಸಾವಿನ ಸಮಾಚಾರವನ್ನು ಎಷ್ಟು ತಣ್ಣಗೆ ಹೇಳುವಿಯೋ ಕುಳ್ಳಕುನ್ನೀ !" ಎಂದು ಸರ್ಪನಖನು ಸಂಕಟಪಡುತ್ತ ಕೂಗಿ, ಕೃಪಾಣಜಿತ್ತುವಿನ ಕೊರಳಿಗೆ ಬಿಗಿಸಿದ ತಾಮರೆದಂಟಿನ ಹಗ್ಗವನ್ನು ಗಡೇಗುಡ್ಡನ ಕೈಗೆಕೊಟ್ಟು, "ಈ ದುಷ್ಟ ಓಡಿ ಹೋಗದಂತೆ ನೋಡುವ ಬಾಧ್ಯತೆ ನಿನ್ನದು. ಸಹಾಯಕರನ್ನೂ ಕರೆದುಕೋ. ಆ ನರವಾನರವನ್ನು ಚಚ್ಚಿಹಾಕಿ, ನನ್ನ ತಮ್ಮನನ್ನು ಈಗಲೇ ಬಿಡಿಸಿಕೊಂಡು ಬರುತ್ತೇನೆ" ಎಂದು ಹೇಳಿ ತನ್ನ ಜಲಾಶ್ವವನ್ನು ಆ ಮರಗಳ ಗುಂಪಿನ ಕಡೆಗೆ ಓಡಿಸಿದನು.

ಈ ಗಡೇಗುಡ್ಡನ ಮನೆ ಹೊತ್ತಿಕೊಂಡು ಉರಿಯುವಾಗ ಎದ್ದ ಬೆಂಕಿಯನ್ನು, ಹೊಗೆಯನ್ನು, ಕೃಪಾಣಜಿತ್ತು ನರವಾನರಗಳೊಂದಿಗೆ ಗಡೇಗುಡ್ಡನ ಕಡೆಯವರು ಹೋರಾಡುವುದನ್ನು, ಆಗ ಉಂಟಾದ ಶಬ್ದವನ್ನು, ಜಯಶೀಲ, ಸಿದ್ಧಸಾಧಕರು ಕಲ್ಲುಗಳ ರಾಶಿಯ ಮರೆಯಲ್ಲಿ ನಿಂತು ನೋಡುತ್ತಿದ್ದರು. ಅದಕ್ಕೆ ಕಾರಣವೇನೆಂಬುದು ಅವರಿಗೆ ಗೊತ್ತಾಗಲಿಲ್ಲ. ಅವರು ತಮ್ಮ ಬಳಿಯಲ್ಲಿದ್ದ ಕುಳ್ಳರ ಸೇನಾಪತಿಗೆ, ಅದನ್ನು ತೋರಿಸಿ, ಅಲ್ಲಿ ನಡೆಯುವ ಗಲಾಟೆಗಳಿಗೆ ಕಾರಣ ತಿಳಿದು ಬರುವಂತೆ ಹೇಳಿ ಕಳುಹಿಸಿದರು. ಕುಳ್ಳರ ಸೇನಾಧಿಪತಿ ಇಬ್ಬರು ಅನುಚರರನ್ನು ಕರೆದುಕೊಂಡು, ಕಲ್ಲುಗಳ ರಾಶಿಯ ತುದಿಗೆ ಹತ್ತಿ ಗಡೇಗುಡ್ಡನ ಕೇರಿಯ ಕಡೆಗೆ ನೋಡಿದನು. ಆಗ ಕೆಲವು ಗುಡಿಸಲುಗಳು ಉರಿಯುತ್ತಿರಲು, ಕೃಪಾಣಜಿತ್ತು ನರವಾನರಗಳೊಂದಿಗೆ ಜಟಾಪಟಿ ನಡೆಸುವ ಕುಳ್ಳರನ್ನೂ ಅವರು ನೋಡಿದರು.

ಗಡೇ ರಾಣಿಯು ಆ ಸೇನಾಧಿಪತಿಗೆ ತಮ್ಮ ಶತ್ರುಗಳಿಗಾಗುವ ಹಿಂಸೆಯನ್ನು ನೋಡಿ ಬಹಳ ಸಂತೋಷವಾಯಿತು. ಈ ಶುಭವಾರ್ತೆಯನ್ನು ಜಯಶೀಲನಿಗೆ ಹೇಳಬೇಕೆಂಬ ಆತುರದಿಂದ ಹಿಂದಿರುಗಿದನು. ಆಗ ಹಠಾತ್ತಾಗಿ ಜಲಾಶ್ವಗಳ ಮೇಲೆ ಕಾಣಿಸಿದ ಇಬ್ಬರು ವಿಚಿತ್ರ ಮನುಷ್ಯರೂ ಅವರಿಗೆ ಕಾಣಿಸಿದರು. ಅವರೂ ಆ ಜಗಳದಲ್ಲಿ ಸೇರಿದುದನ್ನೂ ನೋಡಿದರು. ಅವರಿಗೆ ಇನ್ನಷ್ಟು ಕುತೂಹಲವಾಯಿತು. ಆದರಿಂದ "ಆ ವಿಚಿತ್ರ ಕುದುರೆಗಳೇನು ? ಅದರ ಮೇಲಿ



೧೭-೫



ರುವ ವಿಚಿತ್ರ ಮನುಷ್ಯರೇನು ?" ಎಂದು ಕುಳ್ಳರ ಸೇನಾಧಿಪತಿ ಆಶ್ಚರ್ಯಪಡುತ್ತಿರಲು, ಜಲಾಶ್ವದ ಮೇಲಿದ್ದವನು ಹಗ್ಗ ಎಸೆದು ಕೃಪಾಣಜಿತ್ತುವಿನ ಕೊರಳಿಗೆ ಉರುಳು ಹಾಕಿದ್ದೂ ಆಯಿತು. ಎರಡನೇ ಜಲಾಶ್ವಿಕನು ಕತ್ತಿ ಕುಣಿಸಿಕೊಂಡು ನರವಾನರದ ಮೇಲೆ ಎರಗಿದುದನ್ನೂ ನೋಡಿದರು.

ಗಡೇರಾಣಿಯ ಸೇನಾಧಿಪತಿ ಅತ್ಯಾನಂದಕೊಂಡು ದೊಡ್ಡ ದನಿಯಿಂದ ನಕ್ಕು, ತನ್ನ ಅನುಚರರನ್ನು ಅಲ್ಲೇ ಇರುವಂತೆ ಹೇಳಿ, "ಭೇಷ್ ! ಭೇಷ್ ! ಗಡೇ ಗುಡ್ಡನ ಗುಂಪಿನವರನ್ನೆಲ್ಲಾ ಚೂರುಚೂರು ಮಾಡಿ ರಾಶಿ ಹಾಕಲು ನಮಗಿದು ಒಳ್ಳೆಯ ಅವಕಾಶ. ಇದನ್ನು ಸುಮ್ಮನೆ ಬಿಡಬಾರದು. ಈ ಸಂಗತಿ ಯನ್ನು ನಮ್ಮ ರಾಣಿಯೊಂದಿಗೂ, ನಮ್ಮ ಮಹಾ ಕಾಯರೊಂದಿಗೂ ಹೇಳಿ ನಮ್ಮ ಭಟರನ್ನು ಕರೆದು ಕೊಂಡು ಬರುತ್ತೇನೆ. ಏನಾಗುವುದೋ ನೋಡಿ ಬಿಡೋಣ. ನೀವು ಮಾತ್ರ ಇಲ್ಲೇ ಇದ್ದು ಅಲ್ಲೇನು ನಡೆಯುವುದೋ ನೋಡುತ್ತಾ ಇರಬೇಕು" ಎಂದು ಹೇಳಿ ಉತ್ಸಾಹದಿಂದ ಹಿಂದಿರುಗಿ ಓಡಿಬಂದನು.

ಗಡೇರಾಣಿಯ ಸೇನಾಧಿಪತಿ ಜಯಶೀಲ ಸಿದ್ಧ ಸಾಧಕರ ಬಳಿಗೆ ಬಂದು, ಗಡೇಗುಡ್ಡನ ಕೇರಿಯ ತಾನು ಕಂಡ ಸಂಗತಿಯನ್ನೆಲ್ಲಾ ಉತ್ಸಾಹದಿಂ ಹೇಳಿದನು. ಅದನ್ನು ಕೇಳಿ ಸಿದ್ಧ ಸಾಧಕ ಸಂತೋಷದಿಂದ ಕುಣಿದು ಕುಪ್ಪಳಿಸಿ ಶೂಲವನ್ನ "ಜೈ ಮಹಾಕಾಳಾ !" ಎಂದು ಕೂಗಿ ಜಯಶೀ ನೊಂದಿಗೆ, "ಭೇಷ್ ! ಭೇಷ್ ! ಇನ್ನು ನಮ್ಮ ಕೆ ಮುಗಿದಂತೇ ಸರಿ. ಆ ವಿಚಿತ್ರ ಕುದುರೆಯ ಮೇ ಬಂದವರಿಬ್ಬರೂ ಅದೇ ಬಗೆಯ ವಿಚಿತ್ರ ಆನೆ ಗ್ರಹದ ಮೇಲೆ ಬಂದ ಮಕರಕೇತುವಿನ ಗುಂಪಿ ರೆನ್ನಲು ಸಂದೇಹವೇನಿಲ್ಲ. ಆ ಮಕರಕೇತು ನಮ್ಮಿಂ ತಪ್ಪಿಸಿಕೊಂಡುಹೋದನಲ್ಲಾ ? ಈಗ ಇವರಿಬ್ಬರನ್ನ ಹಿಡಿದು ನಯದಿಂದಲೋ ಭಯದಿಂದಲೋ ಅ ಬಾಯಿಯಿಂದ ಆ ಮಾಯಾ ಸರೋವರೇಶ್ವರನಿ ಸ್ಥಳವನ್ನು ಕಂಡು ಹಿಡಿಯಬಹುದು. ಆ ಮೇ ಕನಕಾಕ್ಷರಾಜರ ಮಕ್ಕಳು ಕಾಂಚನ ವರ್ಮ ಕಾಂ ಮಾಲೆಯರನ್ನೂ ಕಂಡುಹಿಡಿದು ಕರೆದುಕೊಂ ಹೋಗುವುದು ತುಂಬ ಸುಲಭ. ನೋಡಿದೆಯಾ ಮಹಾಕಾಳನ ದಯವೆಂದರೆ ಹೀಗೆಯೇ ಜೈ ಮಹಾಕಾಳಾ !" ಎಂದನು.

ಸಿದ್ಧಸಾದಕನು ಹೇಳುವ ಮಾತುಗಳನ್ನು ಜ ಶೀಲನು ಸುಮ್ಮನೆ ಕೇಳಿದನು. ಅವನಲ್ಲಿ ಯ ಭಾವಾವೇಶವೂ ಕಾಣಲಿಲ್ಲ. ಅದನ್ನು ನೋಡಿ ಸಿ ಸಾಧಕನು ಬೇಸರದಿಂದ ರೇಗಿ, "ಜಯಶೀಲಾ, ನಾ ಹೇಳಿದ್ದನ್ನು ನೀನು ಕೇಳಲೇ ಇಲ್ಲವೆ ? ಏನ ಗಾಢಾಲೋಚನೆ ? ನಿನ್ನ ಮನಸ್ಸು ಯಾವ ಲೋ ದಲ್ಲಿಯೋ ವಿಹರಿಸಿಕೊಂಡಿದೆಯಲ್ಲಾ ?" ಎಂದ

ಜಯಶೀಲನು ಕಿರುನಗೆಯೊಂದನ್ನು ಸೂ "ಸಿದ್ಧಸಾಧಕಾ ! ಇಷ್ಟು ಹೊತ್ತು ಪಾಠ ಹೇ

ಹಾಗೆ ನೀನು ಹೇಳಿದುದೆಲ್ಲಾ ಕಿವಿಯೊಳಗೆ ಇಳಿಯದೆ ಹೋಗುವುದುಂಟೆ? ಆದರೆ ನನಗೆ ಒಂದೇ ಆಶ್ಚರ್ಯ. ಏಕೆಂದರೆ, ಯಾರೋ ಇಬ್ಬರು ವಿಚಿತ್ರ ಮನುಷ್ಯರು ವಿಚಿತ್ರ ಕುದುರೆಗಳ ಮೇಲೆ ಬಂದರೆಂದು ಕೇಳಿದ ಕೂಡಲೇ ನೀನು ಕನಕಾಕ್ಷರಾಜರ ಕುಮಾರ ಕುಮಾರಿಯರು ಸಿಕ್ಕಿದಷ್ಟು ಉತ್ಸಾಹದಿಂದ ಮಾತಾಡುವಿಯಲ್ಲ! ನಿನ್ನ ಮನಸ್ಸು ಕೋತಿಯ ಹಾಗೆ ಎಲ್ಲೆಲ್ಲೋ ಹಾರುತ್ತಿದೆಯಲ್ಲಾ !" ಎಂದನು.

ಜಯಶೀಲನ ಮಾತು ಸಿದ್ಧಸಾಧಕನನ್ನು ತುಂಬ ನಿರುತ್ಸಾಹ ಪಡಿಸಿತು. ಅವನು ಶೂಲದಿಂದ ಗಟ್ಟಿಯಾಗಿ ನೆಲವನ್ನು ಕುಟ್ಟಿ, "ಜಯಶೀಲಾ ! ಹೀಗೆಲ್ಲಾ ಅನುಮಾನದಿಂದ ಲಾಭ ಪಡೆಯದೆ ಸುಮ್ಮನಿದ್ದರೆ ಯಾವ ಕಾಲಕ್ಕೆ ರಾಜನ ಮಕ್ಕಳ ಸಮಾಚಾರ ಗೊತ್ತಾದೀತು ? ಅಷ್ಟರೊಳಗೆ ನಾವು ಈ ಅರಣ್ಯದಲ್ಲಿ ತಿರುಗಿ ತಿರುಗಿ ಮುದುಕರಾಗಿ ಎಲ್ಲಿಯೋ ಬಿದ್ದು ಸತ್ತುಹೋಗುತ್ತೇವೆ." ಎಂದನು.

"ಮುದುಕರಾಗುವ ಅವಸ್ಥೆ ಕಾಡಿನಲ್ಲಲ್ಲದಿದ್ದರೆ ನಾಡಿನಲ್ಲಿ ರಾಜಭವನದೊಳಗಿದ್ದರೂ ಬರುತ್ತದೆ. ನಾನು ಆಲೋಚನೆ ಮಾಡುವುದೇನೆಂದರೆ, ಇಲ್ಲಿಗೆ ಬಂದಿರುವ ಈ ಇಬ್ಬರು ವಿಚಿತ್ರ ಮನುಷ್ಯರು ಈ ಪ್ರಾಂತಕ್ಕೆ ಏಕೆ ಬಂದಿರಬಹುದು ? ಎರಡನೆಯದು, ಅವರನ್ನು ಜೀವದೊಂದಿಗೆ ಹಿಡಿಯುವ ಉಪಾಯವೇನು ಅಂತ." ಎಂದ ಜಯಶೀಲ.

ಜಯಶೀಲನ ಮಾತು ಕೇಳಿದ ಮೇಲೆ ಸಿದ್ಧಸಾಧಕನ ಎಲ್ಲಾ ಉತ್ಸಾಹವೂ ಇಳಿದುಹೋಯಿತು. ಅವನು ತನ್ನ ಶೂಲವನ್ನು ನೆಲದ ಮೇಲೆ ಹಾಕಿ, "ಜಯಶೀಲಾ! ನಿನ್ನ ಮಾತು ನಿಜವೇ ! ನನಗೆ ಸ್ವಲ್ಪ ಆತುರಬುದ್ಧಿ ಹೆಚ್ಚು, ಒಪ್ಪಿಕೊಳ್ಳುತ್ತೇನೆ. ನಾನು ಹೇಳಿದಂತೆ ಮಾಡಲಿಕ್ಕಾದರೂ ಮೊದಲು ಅವರಿಬ್ಬರನ್ನು ಜೀವದೊಂದಿಗೆ ಹಿಡಿಯಲೇಬೇಕು. ಅದು ಹೇಗೆ ಹಿಡಿಯುವುದೆಂಬುದನ್ನು ನೀನೇ



ಆಲೋಚನೆ ಮಾಡಿ ಹೇಳಬೇಕು." ಎಂದನು. "ಹಾಗೆ ತಗ್ಗಿ ದಾರಿಗೆ ಬಾರಪ್ಪ ಕಾಳಭಕ್ತ. ಉತ್ಸಾಹದ ಆವೇಶದಿಂದ ಹಾರಿಬಿಟ್ಟರೆ ಕೆಲಸ ಮುಗಿದಂತಾಗದು. ಈಗ ನಿನ್ನ ಶೂಲವನ್ನೇಕೆ ಕೆಳಗೆ ಹಾಕಿದೆ ? ಇನ್ನು ಮೇಲೆ ನೀನು ನಿನಗಿರುವ ಮಂತ್ರಶಕ್ತಿ ಮಾತ್ರ ನಂಬುವಿಯಾ ? ಶೂಲದ ಅಗತ್ಯವೇ ಇಲ್ಲವೇ ?" ಎಂದು ಕೇಳಿದ.

ಸಿದ್ಧಸಾಧಕನು ತಟಕ್ಕನೆ ಶೂಲವನ್ನು ಎತ್ತಿಕೊಂಡು, "ಭೋ ! ಮಹಾಕಾಳಾ ! ನನ್ನ ಅಪಚಾರ ಮನ್ನಿಸು" ಎಂದು ಗೊಣಗಿ, "ಜಯಶೀಲಾ, ನನ್ನ ಮಂತ್ರಶಕ್ತಿ ಸರಿಯಾಗಿ ಪರಿಪಕ್ವವಾದುದಲ್ಲ. ಆ ದಿನ ಸ್ಮಶಾನದಲ್ಲಿ ಮಹಾಕಾಳನ ಬಂಟನಾದ ಕಾಲಕಾಲನೇ ನನ್ನ ಪ್ರಾಣ ತೆಗೆಯಲು ನೋಡಿದನಲ್ಲ ! ಅದೇ ನನ್ನ ಮಂತ್ರಶಕ್ತಿ ಪರಿಪಕ್ವವಾಗಿಲ್ಲವೆಂಬುದಕ್ಕೆ ಗುರುತು" ಎಂದನು. "ಹೌದು ಹೌದು. ಅದಕ್ಕೆ ಕಾರಣ ನಿನ್ನ ಆತುರ ಬುದ್ಧಿ ಎಂಬುದು ತಿಳಿಯಿತಷ್ಟೆ ? ಆ ಕಾಲ

ಕಾಲನಿಗೆ ಬದಲಾಗಿ ಈಗ ನಮ್ಮಿಬ್ಬರ ಪ್ರಾಣಗಳನ್ನೂ ಆ ಮಾಯಾ ಸರೋವರೇಶ್ವರನೋ ಅವನ ಕಡೆಯವರೋ ಎಳೆದುಕೊಂಡು ಹೋಗುವ ಪರಿಸ್ಥಿತಿ ಬಂದಿದೆ." ಎಂದು ಜಯಶೀಲನು ಕುಳ್ಳರ ಸೇನಾಧಿಪತಿಯ ಕಡೆಗೆ ನೋಡಿ, "ಸೇನಾಧಿಪತೀ! ನೀನು ನಿನ್ನ ಕೆಲವುಂದಿ ವೀರಭಟರೊಂದಿಗೆ, ನಮ್ಮ ಜತೆಯಲ್ಲಿ ಸಹಾಯಕ್ಕೆ ಬರಬೇಕು" ಎಂದನು.

"ಅಯ್ಯಾ, ಅಂತಹ ಆಜ್ಞೆಗಾಗಿಯೇ ನಾನು ಕಾದುಕೊಂಡಿದ್ದೇನೆ! ಇದೋ ತಯಾರು!" ಎಂದು ಕುಳ್ಳರ ಸೇನಾಧಿಪತಿ ತುಸು ದೂರದಲ್ಲಿ ನಿಂತಿರುವ ತನ್ನ ಭಟರಿಗ ಸಂಜ್ಞೆ ತೋರಿಸಿದನು.

ಹೀಗೆ ಕುಳ್ಳರ ಸೇನೆಯನ್ನು ಸಾಗಿಸಿಕೊಂಡು ಅವರೆಲ್ಲ ಗಡೇಗುಡ್ಡನ ಕೇರಿಯಕಡೆಗೆ ಹೊರಟರು. ಅವರು ಸ್ವಲ್ಪ ದೂರ ಹೋಗಲು, ಬಲಭಾಗದ ಅರಣ್ಯದೊಳಗಿನಿಂದ ನರವಾನರದ ಭಯಂಕರ ಕೂಗು ಗರ್ಜನೆಗಳು ಕೇಳಿಬರತೊಡಗಿತು. ಜಯಶೀಲ ಮೊದಲಾದವರು ಗಕ್ಕನೆ ನಿಂತು, ಆ ಕಡೆಗೆ ಲಕ್ಷ್ಯಗೊಟ್ಟರು.

ನರವಾರವು ಒಂದು ಹೆಮ್ಮರದ ಕೆಳಗೆ ಕುಣಿದು ಕುಪ್ಪಳಿಸುತ್ತ ನಡೆಯುತ್ತಿತ್ತು. ಆದರ ಭುಜಗಳ ಮೇಲೆ ವಿಚಿತ್ರ ಮನುಷ್ಯನೊಬ್ಬ ಸಿಕ್ಕಿ ಅಚಲನಾಗಿ ಬಿದ್ದಿದ್ದಾನೆ. "ಜಯಶೀಲ! ನಾನು ಯಾರನ್ನು ಪ್ರಾಣದೊಂದಿಗೆ ಹಿಡಿದು ಮಾಯಾಸರೋವರದ ರಹಸ್ಯಗಳನ್ನು ತಿಳಿಯಬೇಕೆಂದುಕೊಂಡೆನೋ ಅವರಲ್ಲೊಬ್ಬನು ನರವಾನರದ ಕೈಯಲ್ಲಿ ಸತ್ತಹಾಗಿದೆ! ಇನ್ನು ಎರಡನೆಯವನ ಪತ್ತೆಯಾಗಬೇಕಾಗಿದೆ" ಎಂದ ಸಿದ್ಧಸಾಧಕ.


ಜಯಶೀಲನು ಒಂದೆರಡು ಕ್ಷಣ ನಿಶ್ಚೇಷ್ಟಿತನಾಗಿದ್ದು, "ಆ ಎರಡನೇ ವಿಚಿತ್ರಮನುಷ್ಯ ಕೃಪಾಣಜಿತ್ತುವಿನ ಕೈಯಲ್ಲಿ ಸಾಯಲಿಲ್ಲವಷ್ಟೆ?" ಎಂದನು.


"ಹಾಗೇನಾದರೂ ಆಗಿಬಿಟ್ಟರೆ ಮತ್ತೆ ಕೃಪಾಣಜಿತ್ತುವಿಗೆ ಯಾರೂ ಎದುರಿಲ್ಲ. ಒಬ್ಬ ವಿಚಿತ್ರ ಮನುಷ್ಯನನ್ನು ಆ ನರವಾನರವೇ ಎತ್ತಿಕೊಂಡು ಹೋಗುತ್ತಿದೆ. ಎರಡನೆಯವನನ್ನು..."

ಸಿದ್ಧಸಾಧಕನ ಮಾತು ಮುಗಿಯುವುದರೊಳಗೆ ಜಲಾಶ್ವದ ಮೇಲೆ ಕುಳಿತಿರುವ ಸರ್ಪನಖನು ಬೇಗಬೇಗನೇ ಆ ಮರದ ಅಡಿಗೆ ಬರುತ್ತ, "ಸರ್ಪಸ್ವರಾ! ಎಲ್ಲಿರುವಿಯೋ? ಬಾರೋ ಸರ್ಪಸ್ವರಾ!" ಎಂದು ಆಗಾಗ ಕೂಗುತ್ತಿದ್ದನು.

ಜಯಶೀಲನು ಕೈಯನ್ನು ಅಡ್ಡ ಹಿಡಿದು, "ಅವನ ಕಣ್ಣಿಗೆ ಬೀಳದಂತೆ ಎಲ್ಲರೂ ಅಡಗಿಕೊಳ್ಳಿ, ಹೇಗಾದರೂ ಸರಿಯೇ, ಅವನನ್ನು ಜೀವದೊಂದಿಗೆ ಹಿಡಿಯಬೇಕು." ಎಂದು ಎಚ್ಚರಿಸಿದನು.

(ಇನ್ನೂ ಇದೆ)







# ಮಾಯಾಸರೋವರ

೧೮

[ಸರ್ಪನಖ ಮತ್ತು ಸರ್ಪಸ್ವರರೆಂಬ ಅಣ್ಣ ತಮ್ಮಂದಿರು ಜಲಾಶ್ವಗಳ ಮೇಲೆ ಕುಳಿತುಕೊಂಡು ಕುಳ್ಳರ ಕೇರಿಯ ಕಡೆಗೆ ಬಂದರು. ಸರ್ಪನಖನು ಕೃಪಾಣಜಿತ್ತುವಿನ ಕುತ್ತಿಗೆಗೆ ಹಗ್ಗದ ಉರುಳು ಹಾಕಿದನು. ನರವಾನರವು ಸರ್ಪಸ್ವರನ ಮೇಲೆ ಬಿದ್ದು ಅವನನ್ನು ಎತ್ತಿಕೊಂಡುಹೋಯಿತು. ಈ ಸಂಗತಿ ಕೇಳಿದ ಜಯಶೀಲ ಸಿದ್ಧಸಾಧಕರು ಆ ಕೇರಿಗೆ ಬರುವುದರೊಳಗೆ ಸರ್ಪನಖನೆಂಬವನು ಅವರ ಕಣ್ಣಿಗೆ ಬಿದ್ದನು.]

ನ್ನ ತಮ್ಮನು ಕಾಣದೇಹೋದ ಕಳವಳದಿಂದ ರ್ಪನಖನೆಂಬ ಆ ಜಲಲೋಕವಾಸಿ, ತನ್ನ ವಾಹನ ನ್ನು ಒಂದು ಮರದ ಬುಡದಲ್ಲಿ ನಿಲ್ಲಿಸಿದನು. ುಂದೆ ಹೋಗಲು ಮನಸ್ಸುಬಾರದೆ, ತಾನು ಂದ ದಾರಿಯಲ್ಲಿ ತಮ್ಮನೇನಾದರೂ ಬರುತ್ತಿರು ನೋ ಎಂದು ನೋಡಿದನು. ನಾಲ್ಕು ದಿಕ್ಕು ಗೂ ತಲೆ ತಿರುಗಿಸಿ ಕಣ್ಣುಹರಿದಷ್ಟು ದೂರದ ರೆಗೂ ನೋಡಿದನು. ಸುತ್ತಮುತ್ತಲೂ ಆಕಾಶ ನ್ನು ಮುತ್ತಿಡುವ ಮಹಾವೃಕ್ಷಗಳೂ, ಅವುಗಳ ಡದಲ್ಲಿ ಒತ್ತೊತ್ತಾಗಿ ಬೆಳೆದ ದಟ್ಟವಾದ ಪೊ... ಗಳೂ ಹೊರತು ಅವನ ತಮ್ಮನ ಜಾಡು ಕಾಣಲೇ ಇಲ್ಲ. "ಓ ಸರ್ಪಸ್ವರಾ?" ಎಂದು ದಿಕ್ಕುಗಳು ಪ್ರತಿಧ್ವನಿಸುವಂತೆ ಗಟ್ಟಿಯಾಗಿ ಒಮ್ಮೆ ಕೂಗಿದನು.

ಆ ಕೂಗಿಗೆ ಅವನ ಪ್ರತಿಧ್ವನಿಯ ಹೊರತು ಮತ್ತೇನೂ ಪ್ರತ್ಯುತ್ತರ ಬರಲಿಲ್ಲ. ನೋಡ ನೋಡುತ್ತಿರಲು ಅವನ ಗಾಬರಿ ಪ್ರಚಂಡ ಕೋಪಕ್ಕೆ ತಿರುಗಿತು. ಸರ್ರನೆ ಒರೆಯಿಂದ ತನ್ನ ಕತ್ತಿಯನ್ನು ಸೆಳೆದು ಬದಿಯಲ್ಲಿದ್ದ ಮರದ ಕಾಂಡಕ್ಕೆ ಬಲವಾಗಿ ಚುಚ್ಚಿ ಗಟ್ಟಿಯಾಗಿ. "ಈ ವನಕ್ಕೇನಾದರೂ ಒಂದು ದೇವತೆ ಇದ್ದಾಳಾದರೆ ಕೇಳಲಿ! ಇದೇ ನನ್ನ



ಪ್ರತಿಜ್ಞೆ ! ನನ್ನ ತಮ್ಮ ಸರ್ಪಸ್ವರನನ್ನು ಪ್ರಾಣ ದೊಂದಿಗೆ ನೋಡಲಾರದೆ ಹೋದೆನಾದರೆ ಅವನನ್ನು ಕೊಂದ ನರವಾನರವನ್ನೂ ಅದರ ಯಜಮಾನನಾದ ದುಷ್ಟಮನುಷ್ಯನನ್ನೂ ಕೊಂದು, ಈ ಅರಣ್ಯಕ್ಕೆ ಅವರ ರಕ್ತದ ಬಲಿಕೊಟ್ಟೇ ಈ ಪ್ರಾಂತದಿಂದ ಹೋಗುತ್ತೇನೆ !" ಎಂದು ಕೂಗಿದನು.

ಪೊದರುಗಳ ಮರೆಯಲ್ಲಿ ಅಡಗಿಕೊಂಡಿದ್ದು ಆ ಮಾತುಗಳನ್ನು ಕೇಳಿದ ಜಯಶೀಲನು ತಲೆಯಾಡಿಸಿ ನಗುತ್ತ, ಸಿದ್ಧಸಾಧಕನೊಂದಿಗೆ ಪಿಸುಮಾತಿನಿಂದ, "ಸಾಧಕಾ, ಈ ಸರ್ಪನಖನ ಪ್ರತಿಜ್ಞೆ ಕೇಳಿದೆಯಾ ? ಅರಣ್ಯದೇವತೆಯ ಸಾಕ್ಷಿಯಾಗಿ ಕಠೋರ ಪ್ರತಿಜ್ಞೆ ಮಾಡಿದ್ದಾನೆ ! ಭಲೆ !" ಎಂದನು.

"ಹೌದೌದು. ಪ್ರೀತಿಯ ತಮ್ಮ ಅಂತ ಕಾಣುತ್ತೆ. ಅವನು ಕಾಣದೇಹೋದ ದಿಗಿಲಿನಿಂದ ಇವನ ಬುದ್ಧಿಕೆಟ್ಟಹಾಗಿದೆ. ಅದೇನಾದರೂ ಅವನನ್ನು ಜೀವದೊಂದಿಗೆ ಹಿಡಿಯುವ ಉಪಾಯವೇನು ? ಅದೀಗ ನಮಗೆ ಮುಖ್ಯ" ಎಂದನು ಸಿದ್ಧಸಾಧಕ.

ಜಯಶೀಲನು ಸರ್ಪನಖನನ್ನೇ ನೋಡುತ್ತಿದ್ದ. ಅವನು ತೀವ್ರವಾದ ಆವೇಶದಲ್ಲಿರುವುದು ನಿಜ. ಅಂತಹವನ ಎದುರಿಗೆ ನಿಂತು ಶರಣಾಗತನಾಗು ವಂತೆ ಹೇಳಿದರೆ ಪ್ರಯೋಜನವೇನಿಲ್ಲ. ಅವನು ಪ್ರಾಣದ ಮೇಲಿನ ಆಶೆಬಿಟ್ಟು ಹೋರಾಡಲು ಸಿದ್ಧ ನಾಗುತ್ತಾನೆ. ಆದುದರಿಂದ ಬೇರೇನಾದರೂ ಉಪಾಯದಿಂದಲೇ ಅವನನ್ನು ಹಿಡಿಯಬೇಕು...

ಜಯಶೀಲನು ಹೀಗೆ ಆಲೋಚಿಸಿ ಸಿದ್ಧಸಾಧಕ ನೊಂದಿಗೆ, "ಜಯಶೀಲಾ, ನಿನ್ನ ರೂಪವೂ ಮಾತೂ ಸಾಧಾರಣ ಮನುಷ್ಯರಿಗಿಂತ ಭಿನ್ನವಾಗೇ ಇದೆ. ಆದುದರಿಂದ ನೀನೇ ಅವನನ್ನು ಹಿಡಿಯಬೇಕು. ಇವನು ನಮಗೆ ಸುರಕ್ಷಿತನಾಗಿ ಸಿಗುವುದರಲ್ಲಿಯೇ ನಾವು ಮಾಯಾಸರೋವರವನ್ನು ಸೇರುವೆವೋ ಇಲ್ಲವೋ ಗೊತ್ತಾಗಬೇಕಾಗಿದೆ" ಎಂದನು.

"ಹೌದು. ಮೊದಲು ನಾವು ಗೊತ್ತಿದ್ದೇ ಮೋಸ ಹೋಗಿ ಮಕರಕೇತುವನ್ನು ಬಿಟ್ಟುಬಿಟ್ಟೆವು. ಈಗ ಅವನ ಮಿತ್ರನಾದ ಈ ಸರ್ಪನಖನನ್ನು ಹಿಡಿದ ವೆಂದರೆ, ಇವನು ನಮ್ಮನ್ನು ಮಾಯಾಸರೋವರದ ಕಡೆಗೆ ಕರೆದೊಯ್ಯುವವರೆಗೂ ಬಿಡಬಾರದು" ಎಂದ ಸಿದ್ಧಸಾಧಕ.

"ಮೊದಲು ಅವನು ಸಿಕ್ಕಿಬೀಳಬೇಕು. ಆಮೇಲೆ ಯಾರು ಬಿಡುತ್ತಾರೆ ? ನೀನು ಯಾವುದೋ ಒಂದು ಅರಣ್ಯದೇವಿಯ ದೂತನಂತೆ ಅವನ ಎದುರು ಹೋಗಿ ಅವನ ಕೈಯಲ್ಲಿ ಕತ್ತಿ ಇಲ್ಲದಂತೆ ಮಾಡಿ ಬಿಡು. ಆಮೇಲೆ ಅವನನ್ನು ಬಂಧಿಸಿ ಅವನ ಮೂಲಕ ಮಾಯಾಸರೋವರಕ್ಕೆ ಹೋಗುವ ದಾರಿ ಯನ್ನು ನಾನು ತಿಳಿದುಕೊಳ್ಳುತ್ತೇನೆ" ಎಂದ ಜಯಶೀಲ.

ಸರಿ, ಎಂದು ಸಿದ್ಧಸಾಧಕನು ಮಹಾಕಾಳನಿಗೆ ಜಯಜಯವೆನ್ನುತ್ತ, ಪೊದೆಗಳ ಹಿಂದಿನಿಂದ ಬಗ್ಗಿ


ಗ್ಗಿ ಕುಪ್ಪಳಿಸಿಕೊಂಡೇ ಸರ್ಪನಖನು ನಿಂತಿದ್ದ ಮರದ ಬಳಿಗೆ ಹೋದನು. ಜಯಶೀಲನು ತನ್ನ ಡೆಯಲ್ಲಿರುವ ಕುಳ್ಳರಾಣಿಯ ಸೇನಾಧಿಪತಿ ಯೊಂದಿಗೆ, "ಸೇನಾಧಿಪತಿಯೇ, ಈ ವಿಚಿತ್ರರೂಪ ಯವನ ಶಕ್ತಿಸಾಮರ್ಥ್ಯಗಳೆಂತಹುವೋ ನಾವರಿಯೆವು. ಅಗತ್ಯಬಿದ್ದರೆ ಸಿದ್ಧಸಾಧಕನಿಗೆ ಸಹಾಯಮಾಡಲು ನೀನು ನಿನ್ನ ಟಗರುವಾಹನದೊಂದಿಗೆ ಸಮೀಪದಲ್ಲೇ ಅಡಗಿರಬಲ್ಲೆಯಾ ?" ಎಂದು ಕೇಳಿದನು.

"ಅದೇನು ಕಷ್ಟ ಮಹಾದೊರೆಗಳೇ ! ಬೇಕಾದರೆ ನಾನು ಆ ಮರದಕೊಂಬೆಯ ಮೇಲಕ್ಕೆ ಹಾರಿ, ಆ ನರು ಕುದುರೆಯವನ ಕೈಕಾಲುಗಳನ್ನು ಕಟ್ಟಿಹಾಕ ಲೇನು ?" ಎನ್ನುತ್ತಾ, ಕುಳ್ಳರ ಸೇನಾಧಿಪತಿ ತನ್ನ ಟಗರುವಾಹನದ ಮೇಲೆ, ಅಕಡೆಯಲ್ಲಿದ್ದ ದಟ್ಟವಾದ ಪೊದರಿನ ಕಡೆಗೆ ಹೊರಟನು.


ಅನಂತರ ಒಂದೆರಡು ನಿಮಿಷಗಳಲ್ಲಿ ಸಿದ್ಧಸಾಧ ಕನು ಶೂಲವನ್ನು ಎತ್ತಿ ಹಿಡಿದುಕೊಂಡು ಮರಗಳ ಮರೆಯಿಂದ ಹೊರಗೆ ಬರುತ್ತ, "ಎಲೆಲಾ ಪುಂಡು ಗರಾ ! ನಾನು ಸಾಕಿದ ಸಾಲವೃಕ್ಷವನ್ನು ತಿವಿದು ಗಾಯಮಾಡಿದೆಯಲ್ಲಾ ! ಇದು ಎಷ್ಟೊಂದು ನರಳು ತ್ತಿದೆ ! ಅದರ ದೀನಶಬ್ದದಿಂದ ನಿದ್ರಾಭಂಗವಾಗಿ ಬಂದು ನೋಡಿದರೆ ನೀನು ! ಕಟುಕಾ ! ನಿನ್ನನ್ನು ಹಾಗೆಯೇ ತಿವಿದುಕೊಲ್ಲುತ್ತೇನೆ !" ಎಂದು ಗರ್ಜಿ ಸುತ್ತಾ ಕಣ್ಣು ತಿರುಗಿಸುತ್ತಾ ಬೆದರಿಸಿದನು.

ಸರ್ಪನಖನು ಸ್ವಲ್ಪವೂ ಹೆದರದೆ, ತಟ್ಟನೆ ಕತ್ತಿ ಯನ್ನು ಮರದ ಕಾಂಡದಿಂದ ಎಳೆದು, ಸಾಧಕನ ಕಡೆಗೆ ಬೀಸುವವನಂತೆ ಗುರಿ ಹಿಡಿಯುತ್ತ, "ನಾನು ಯಾರಿಗೂ ಹೆದರುವವನಲ್ಲ !" ಎಂದನು.

ಸಾಧಕನು ಅವನ ಬಳಿಗೆ ಬಂದು, "ಹಾಗಾದರೆ ನನಗೆ ಸರಿಯಾದ ಎದುರಾಳಿ ! ಓಹ್ ! ತಿಳಿಯಿತು ! ನೀನು ಮಾಯಾಸರೋವರೇಶ್ವರನ ಬಂಟನಂತಿರುವೆ. ನಿಜತಾನೇ ?" ಎಂದನು.



ಇಂತಹ ದಿಕ್ಕುಗಾಣದ ಭಯಂಕರ ಕಾನನದಲ್ಲಿ ತನ್ನನ್ನು ನೋಡಿದ ಕೂಡಲೇ ತನ್ನ ಯಜಮಾನ ಯಾರೆಂಬುದನ್ನು ಇವನು ಹೇಗೆ ತಿಳಿದುಕೊಂಡ ? ಇವನಾವನೋ ದೊಡ್ಡ ಮಂತ್ರವಾದಿಯಾಗಿರ ಬೇಕು. ಈ ಅನುಮಾನ ಆಶ್ಚರ್ಯಕ್ಕೊಳಗಾದ ಸರ್ಪನಖನು ಅದರೊಂದಿಗೆ ಭಯಪಡಲೂ ತೊಡ ಗಿದನು. ಅವನ ಮುಖದಲ್ಲಿ ಥಕ್ಕನೆ ಭಯದ ಛಾಯೆ ಆವರಿಸಿದುದನ್ನು ನೋಡಿ ಸಿದ್ಧಸಾಧಕನು ಸಂತೋಷಿ ಸುತ್ತ, "ಮಾಯಾಸರೋವರೇಶ್ವರನ ಬಂಟನೆಂಬ ಗರ್ವದಿಂದ ಹಾಗೆ ಕುದುರೆಯ ಮೇಲೆ ಠೀವಿಯಾಗಿ ಕುಳಿತಿರುವೆಯಾ ? ಮೂರ್ಖ ! ಮೊದಲು ಕುದುರೆ ಯಿಂದ ಕೆಳಗಿಳಿ. ವೃಕ್ಷವನ್ನು ತಿವಿದು ಅರಣ್ಯ ದೇವಿಗೆ ಅವಮಾನಪಡಿಸಿದ ತಪ್ಪಿಗೆ, ಅರಣ್ಯದೇವಿಯ ಪೂಜಾರಿಯಾದ ನನ್ನ ಮುಂದೆ ಕ್ಷಮೆ ಕೇಳು" ಎಂದನು ಜೋರಿನಿಂದ. ಆ ಕೂಡಲೇ ಸರ್ಪನಖನು ತಟ್ಟನೆ ಜಲಾಶ್ವದ ಬೆನ್ನಿನ ಮೇಲಿಂದ ಕೆಳಕ್ಕೆ



ಹಾರಿದನು. ಸಾಧಕನು ಅವನ ಮುಂದೆ ಬಂದು, "ಹುಂ, ಮೊದಲು ನಿನ್ನ ಕತ್ತಿಯನ್ನು ಇತ್ತ ಕೊಡು" ಎಂದು ಕೈನೀಡಿದನು.

ಆ ಮಾತು ಕೇಳಿದ ಕೂಡಲೇ ಸರ್ಪನಖನು ಏನೋ ಮಿಂಚಿದವನಂತೆ ನಾಲ್ಕೈದಡಿ ಹಿಂದಿಟ್ಟು, ಸಾಧಕನನ್ನು ಅನುಮಾನದಿಂದ ನೋಡುತ್ತ, "ನನ್ನ ಕತ್ತಿಯನ್ನು ನಿನಗೆ ಕೊಡಬೇಕೆ? ಅದರಿಂದ ನಿನಗೇನು ಕೆಲಸ? ನನ್ನನ್ನು ನಿರಾಯುಧನನ್ನಾಗಿ ಮಾಡಬೇಕೆಂದಿರುವೆ. ಇದರಲ್ಲೇನೋ ಮೋಸವಿದೆ. ಅಂದ ಹಾಗೆ ನನ್ನ ಯಜಮಾನನ ಹೆಸರು ನಿನಗೆ ಹೇಗೆ ಗೊತ್ತಾಯಿತು? ಮರಗಳು ಮಾಡುವ ದೀನಶಬ್ದವನ್ನು ಕೇಳುವಷ್ಟು ದೊಡ್ಡ ಮಂತ್ರವಾದಿಯೋ ನೀನು? ನೋಡಿದರೆ ಮನುಷ್ಯನ ಹಾಗೆ ಕಾಣುವ ನೀನು ಅರಣ್ಯದೇವಿಯ ಪೂಜಾರಿಯೆಂದರೆ ನನಗೆ ನಂಬುಗೆ ಇಲ್ಲ. ನನ್ನ ಕತ್ತಿಯನ್ನು ನೋಡಿ ನಿನಗೆ ಭಯವಾಗಿದೆ, ಹೌದಾ?" ಎಂದನು.

ಸಿದ್ಧಸಾಧಕನು ಧೂಳು ಹಾರುವಂತೆ ದೊಡ್ಡ ದನಿಯಿಂದ ನಕ್ಕು, "ಎಲೋ ಸರ್ಪನಖಾ! ನಿನ್ನವು ಎಲ್ಲವೂ ಬುದ್ಧಿಗೇಡು ಪ್ರಶ್ನೆಗಳು! ನಾನು ನಿನ್ನ ಮಿತ್ರನಾದ ಅಥವಾ ಯಜಮಾನನಾದ ಮಕರಕೇತುವನ್ನೂ ಬಲ್ಲೆ. ಆ ಕತ್ತಿ ನಿನ್ನ ಕೈಯಲ್ಲಿದ್ದರೆ ನಿನಗೆ ಅಪಾಯ! ಅದನ್ನು ಒಳ್ಳೆಯ ಮಾತಿನಲ್ಲಿ ಕೂಡಲೇ ಕೆಳಗೆ ಹಾಕಿಬಿಡು" ಎಂದು ಶೂಲವನ್ನು ಎತ್ತಿ ಕುಣಿಸುತ್ತಾ, ಸರ್ಪನಖನ ಬಳಿಗೆ ಬರತೊಡಗಿದನು.

ಸರ್ಪನಖನು ತುಸುಬೆರಗಾದರೂ, ಅಷ್ಟರೊಳಗೆ ಎಲ್ಲವನ್ನೂ ಎದುರಿಸುವವನಂತೆ ಹಲ್ಲು ಕಡಿಯುತ್ತಾ, "ನೀನು ಯಾರೆಂಬುದು ನನಗೆ ನೆನಪಾಗುತ್ತದೆ. ನರವಾನರದ ಒಡೆಯನಾದ ಕೃಪಾಣಜಿತ್ತು ಎಂಬವನು ನಿನ್ನನ್ನೂ ನಿನ್ನ ಮಿತ್ರನೊಬ್ಬನನ್ನೂ ಅರಣ್ಯದಲ್ಲಿ ನೋಡಿದೆನೆಂದು ಹೇಳಿದ್ದಾನೆ. ನೀನೊಬ್ಬ ಕಾಪಾಲಿಕ. ನಿಜತಾನೇ?" ಎಂದು ಕತ್ತಿಯನ್ನು ಎತ್ತಿ ಹಿಡಿದ.

ಅವನನ್ನು ಹೆಚ್ಚು ಮಾತಾಡಲು ಬಿಡದೆ ಶೂಲದಿಂದ ಚುಚ್ಚಿ ಎತ್ತಿ ಬಿಡಬೇಕೆಂಬಷ್ಟು ಸಿಟ್ಟು ಸಿದ್ಧಸಾಧಕನಿಗೆ ಬಂತು. ಆದರೆ ಅವನನ್ನು ಪ್ರಾಣದೊಂದಿಗೆ ಹಿಡಿಯಬೇಕೆಂದು ಜಯಶೀಲನು ಹೇಳಿದ್ದಾನೆ. ಆದರೆ ಸರ್ಪನಖನು ಸುಲಭದಲ್ಲಿ ಬಗ್ಗುವವನ ಹಾಗೆ ಕಾಣುವುದಿಲ್ಲ. ಸಿದ್ಧಸಾಧಕನಿಗೆ ಆ ಸಮಯದಲ್ಲಿ ಒಂದು ಉಪಾಯ ಹೊಳೆಯಿತು. ಅವನು ಶೂಲವನ್ನು ನೆಲದಲ್ಲಿ ಚುಚ್ಚಿ ನಿಲ್ಲಿಸಿ "ಎಲೋ ಸರ್ಪನಖಾ! ನೀನು ಊಹಿಸುವಂತೆ ನಾನು ಸಾಧಾರಣ ಕಾಪಾಲಿಕನಂತೂ ಅಲ್ಲ. ಸಿದ್ಧಸಾಧಕನಾದವನು. ನಾನು ಪ್ರಾರ್ಥಿಸಿದರೆ ಅರಣ್ಯದೇವಿ ಮಾತ್ರವಲ್ಲ, ಬೇರೆ ಭೂತಗಳೂ ಓಡಿ ಬರುತ್ತವೆ. ಅದೆಲ್ಲ ಹಾಗಿರಲಿ. ನಿನ್ನ ಅನುಮಾನವೇ ಬೇಕಾದರೆ, ನನ್ನ ಈ ಶೂಲವನ್ನು ದೂರ ಬಿಸುಟು ಬಿಡುತ್ತೇನೆ. ನೀನು ನಿನ್ನ ಕತ್ತಿಯನ್ನೂ ಬಿಸುಟು

ಬೇಕು. ಆಮೇಲೆ ಉಳಿದ ಸಂಗತಿಯನ್ನು ಸಾವಕಾಶವಾಗಿ ಮಾತಾಡಿಕೊಳ್ಳೋಣ" ಎಂದನು.


"ಆಹಾ ! ಕಪಾಲಿಕನೇ ! ನಿನ್ನ ಉಪಾಯ ಗೊತ್ತಾಯಿತು ಬಿಡು. ನನ್ನನ್ನು ನಿರಾಯುಧನನ್ನಾಗಿ ಮಾಡಿ, ಹಿಡಿದುಕೊಂಡು ಯಾವ ಕ್ಷುದ್ರ ದೇವತೆಗೋ ಬಲಿಕೊಡಬೇಕೆಂದು ನೋಡು ಯೋ ! ಏಕೆ ನಿನ್ನೊಡನೆ ತಗಾದೆ ? ನಿನ್ನಂಥವನನ್ನು ಮೊದಲು ತೀರಿಸಿಬಿಡಬೇಕು. ಪರಲೋಕಕ್ಕೆ ಸಿದ್ಧನಾಗು" ಎಂದು ಹೇಳಿ ಸರ್ಪನಖನು ಕತ್ತಿ ಚಾಚಿ ಸಿದ್ಧಸಾಧಕನ ಮೇಲೆ ಧುಮುಕಿದನು.

ಸಿದ್ಧಸಾಧಕನು ತಟಕ್ಕನೆ ನೆಲಕ್ಕೆ ಚುಚ್ಚಿದ್ದ ಶೂಲವನ್ನು ಕಿತ್ತುಕೊಂಡು ಅವನ ಕಡೆಗೆ ಎತ್ತಿದನು. ಅವರಿಬ್ಬರ ಪ್ರಾಣಾಂತಕ ಆಯುಧಗಳು ಒಬ್ಬರರೊಬ್ಬರಿಗೆ ತಾಗುವುದರೊಳಗೆ, ಹಿಂದಿನಿಂದ ಕುಳ್ಳ ಣಿಯ ಸೇನಾಧಿಪತಿ ತನ್ನ ಟಗರನ್ನು ಸರ್ಪನಖನ ಮೇಲೆ ಹಾರಿಸಿ. ಅವನ ಹೊಟ್ಟೆಗೆ ಢೀಕೊಡಿಸಿದನು. ಆಕಸ್ಮಿಕವಾದ ಈ ಪೆಟ್ಟಿನಿಂದ ಸರ್ಪನಖನು ಕೆಟ್ಟ ಸ್ವರದಿಂದ ಕೂಗುತ್ತಾ ಹೊಟ್ಟೆ ಹಿಡಿದುಕೊಂಡು ಕೌಚಿ ಬಿದ್ದನು. ಅವನ ಕೈಯಲ್ಲಿದ್ದ ಕತ್ತಿ ಜಾರಿ ದೂರ ಬಿದ್ದುಹೋಯಿತು.

ಸಿದ್ಧಸಾಧಕನು ಆ ಕಡೆಗೆ ಹಾರಿಹೋಗಿ ಆ ಕತ್ತಿಯ ಮೇಲೆ ತನ್ನ ಪಾದವನ್ನಿಟ್ಟು, ದೊಡ್ಡ ದನಿಯ ಒಂದು ನಗುವನ್ನು ಹಾರಿಸಿ, "ಭೇಷ್ ! ಕುಬ್ಜ ಸೇನಾಧಿಪತಿಯೇ ! ನಿನ್ನ ಸಮಯ ಸಾಧಕ ತನವು ಮೆಚ್ಚತಕ್ಕಂಥಾದ್ದು. ಮಹಾಕಾಲನು ನಿನ್ನನ್ನು ಯಾವಾಗಲೂ ರಕ್ಷಿಸುತ್ತಾನೆ, ಜೈ ಮಹಾಕಾಳಾ !" ಎಂದನು ಉತ್ಸಾಹದಿಂದ.

ಅಷ್ಟರಲ್ಲಿ ಅಲ್ಲಿಗೆ ಜಯಶೀಲನು ಬಂದನು. ಅವನು ಕೌಚಿಬಿದ್ದಿದ್ದ ಸರ್ಪನಖನ ಭುಜಗಳನ್ನು ಹಿಡಿದು ಎಬ್ಬಿಸಿ, "ಏಳೇಳು ಸರ್ಪನಖ ! ಎಂಥ ಹೆಸರಪ್ಪ ನಿನ್ನದು ! ಸರ್ಪನಖ ! ಈ ಹೆಸರೇ ಒಂದು ವಿಚಿತ್ರ ! ನಿನ್ನ ಪ್ರವರ್ತನೆ ಮತ್ತಿಷ್ಟು ವಿಚಿತ್ರ ! ಸರ್ಪಗಳಿಗೆ ಕೋರೇ ಹಲ್ಲುಗಳಿರುವ ಸಂಗತಿ ಗೊತ್ತಿದೆ ಯಾದರೂ ಉಗುರುಗಳಿರುವುದು ಗೊತ್ತಿರಲಿಲ್ಲ.





ನಿನಗೆ ಬುದ್ಧಿಯೂ ಸ್ವಲ್ಪ ಮಂದ. ನಿನ್ನ ಮೊಂಡು ಕತ್ತಿಯಿಂದ ಸಿದ್ಧಸಾಧಕನಂಥವನನ್ನು ತಿವಿದು ಕೊಲ್ಲಲು ನೋಡಿದೆಯಲ್ಲಾ! ನಿನ್ನ ಅದೃಷ್ಟ ಗಟ್ಟಿ ಇದ್ದುದರಿಂದಲೇ ಟಗರಿನಿಂದ ನೀನು ಬದುಕಿ ಉಳಿದೆ!" ಎಂದನು.

"ಹಾ! ಮಾಯಾಸರೋವರೇಶ್ವರಾ! ನೀನೇ ರಕ್ಷ!" ಎಂದು ಸರ್ಪನಖನು ದೀರ್ಘಶ್ವಾಸಪೂರ್ವಕವಾಗಿ ಉದ್ಗಾರ ತೆಗೆದು, "ಹುಶ್! ನೀವು ಯಾರೋ ಎಂಥವರೋ? ನನ್ನನ್ನು ಮೋಸದಿಂದ ಅಥರ್ವದಿಂದ ನಿರಾಯುಧನನ್ನಾಗಿ ಮಾಡಿಬಿಟ್ಟಿರಿ. ಆ ಕತ್ತಿ ನನ್ನ ಕೈಯಲ್ಲಿರುತ್ತಿದ್ದರೆ ಇಷ್ಟು ಹೊತ್ತಿಗೆ ನಿಮ್ಮೆಲ್ಲರನ್ನೂ ಚೂರುಚೂರು ಮಾಡುತ್ತಿದ್ದೆ" ಎಂದ ಕೋಪದಿಂದ ನಡುಗುತ್ತ.

ಜಯಶೀಲನು ತಟಕ್ಕನೆದ್ದು ಸಿದ್ಧಸಾಧಕನ ಬಳಿಗೆ ಹೋಗಿ, "ಆ ಸರ್ಪನಖನ ಕತ್ತಿಯನ್ನು ಇತ್ತಕೊಡು" ಎಂದನು. ಸಿದ್ಧಸಾಧಕನು ತನ್ನ ಕಾಲಿನ ಬುಡದಲ್ಲಿದ್ದ ಆ ಕತ್ತಿಯನ್ನು ತೆಗೆದು ಜಯಶೀಲನ ಕೈಗೆ ಕೊಟ್ಟನು. ಜಯಶೀಲನು ಅದನ್ನು ಸರ್ಪನಖನಿಗೆ ಕೊಡುತ್ತ, "ತಗೊಳ್ಳಪ್ಪ, ವೀರಾಧಿವೀರ ಸರ್ಪನಖ! ನಿನ್ನ ಒಡೆಯನಾದ ಮಾಯಾಸರೋವರೇಶ್ವರನು ಹೇಡಿ ಕಳ್ಳನ ಹಾಗೆ ಹಿರಣ್ಯಪುರದ ರಾಜರ ಕುಮಾರ ಕುಮಾರಿಯರನ್ನು ಅಪಹರಿಸಿಕೊಂಡು ಹೋದ. ಅವನ ಬಂಟನಾದ ನೀನು ಏನೇನೋ ಜಂಬ ಮಾತಾಡುವೆ. ಎಲ್ಲಿ, ನಿನ್ನ ಪ್ರತಾಪ ತೋರಿಸು. ನನ್ನೊಂದಿಗೆ ಕತ್ತಿಯುದ್ಧಕ್ಕೆ ಬಾ. ನಿನ್ನನ್ನು ಮಾತ್ರ ನಾನು ಕೊಲ್ಲುವುದಿಲ್ಲ. ಏಕೆಂದರೆ ನಿನ್ನಿಂದ ನನಗೊಂದು ಕೆಲಸವಾಗಬೇಕು," ಎಂದನು.

"ನನ್ನಮೂಲಕ ನಿನ್ನ ಕೆಲಸ! ಹೂಂ! ಅದೇನೆಂದು ನನಗೆ ಗೊತ್ತಿದೆ. ಅಷ್ಟರವರೆಗೆ ನಿನ್ನನ್ನು ಬದುಕಲು ಬಿಟ್ಟರೆತಾನೇ?" ಎನ್ನುತ್ತಾ ಸರ್ಪನಖನು ಜಯಶೀಲನ ಕಂಠಕ್ಕೆ ಗುರಿಯಿಟ್ಟು ಕತ್ತಿಯನ್ನು ಬೀಸಿದ.

ಜಯಶೀಲನು ತನ್ನ ಕತ್ತಿಯಿಂದ ಸರ್ಪನಖನ ಕತ್ತಿಯನ್ನು ಪಕ್ಕಕ್ಕೆ ಹೊಡೆದು ತಳ್ಳಿ ಎಡದ ಕಾಲಿನಿಂದ ಅವನ ಮೊಣಕಾಲಿನ ಮೇಲೆ ಬಲವಾಗಿ ಒದೆದನು. ಆ ಏಟಿಗೆ ಸರ್ಪನಖನು ಮಾಲಿಬಿದ್ದು, ತಟ್ಟನೆದ್ದು "ಅನ್ಯಾಯ! ಇದೆಂಥಾ ಕತ್ತಿಯುದ್ಧ?" ಎಂದು ಅರಚಿ ತಿರಗಿ ಜಯಶೀಲನ ಮೇಲೆ ಎಗರಿದನು.

"ನಿನ್ನದು ಮಾತ್ರ ನ್ಯಾಯವೋ ಕುತ್ತಿಗೆಗೆ ಗುರಿಯಿಡುವುದು? ನಾನಂತೂ ನಿನ್ನನ್ನು ಕೊಲ್ಲುವುದಿಲ್ಲವೆಂದು ಹೇಳಿಬಿಟ್ಟಿದ್ದೇನೆ. ಈಗ ನಿನ್ನ ಮಿತ್ರನಾದ ಆ ಮಕರಕೇತು ನಿನ್ನಿಂದ ಮಾಡಿಸುವ ಕೆಲಸವನ್ನು ನಾನೇ ನಿನ್ನಿಂದ ಮಾಡಿಸಿಬಿಡುತ್ತೇನೆ," ಎಂದವನೇ ಜಯಶೀಲನು ಇನ್ನೊಮ್ಮೆ ಬಲಗಾಲನ್ನೆತ್ತಿ, ಹಾರಿ ತನ್ನ ಎದೆಗೆ ನೇರಾಗಿ ಬಂದ ಸರ್ಪನಖನ ಕತ್ತಿಯನ್ನು ಹೊಡೆದು ಜಾರಿಸಿ, ಅವನ ಹೊಟ್ಟೆಗೆ ಒದ್ದನು.

ಈ ಒದೆ ತಿಂದ ಸರ್ಪನಖನು ಕೆಟ್ಟದನಿಯಿಂದ ರುಚಿ ಮುದುಡಿ ಬಿದ್ದು ನರಳತೊಡಗಿದ. ಅವನ ಯಲ್ಲಿದ್ದ ಕತ್ತಿ ದೂರ ಹೋಗಿ ಬಿತ್ತು. ಆದರೆ ರುಕ್ಷಣದಲ್ಲಿ ಅವನು ಹಾರಿನಿಂತು, "ಛೀ ! ಛೀ ! ದು ಕತ್ತಿಯುದ್ಧವೇ ಅಲ್ಲ. ಮಲ್ಲಯುದ್ಧಕ್ಕಿಂತಲೂ ಧಮವಾಗಿದೆ !" ಎಂದನು ದುರುಗುಟ್ಟಿ ಜಯ ಲನನ್ನು ನೋಡುತ್ತಾ.

"ಹಾಗಾದರೆ ಬಾ. ಮಲ್ಲಯುದ್ಧದಲ್ಲೇ ನನ್ನನ್ನು ಯಿಸಿಬಿಡು." ಎನ್ನುತ್ತಾ ಜಯಶೀಲನು ಸಡ್ಡು ಹೊಡೆದು ಎದೆತಟ್ಟಿ ಅವನ ಮೇಲೆ ಬಿದ್ದು, ಒಮ್ಮೆಗೇ ವನ ಸೊಂಟ ಹಿಡಿದು ಸುತ್ತಿ ಎತ್ತಿ ತಿರುಗಿಸಿದನು. ಲ್ಪ ದೂರದಲ್ಲಿ ನಿಂತು ನೋಡುತ್ತಾ ವಿನೋದಿಸು ರುವ ಸಿದ್ಧಸಾಧಕನೊಂದಿಗೆ, "ಸಾಧಕಾ, ಈ ಹಾವೀರ ಜಲಪುರುಷನು ನೆಲದಮೇಲೆ ಬಿದ್ದು ಯದಂತೆ ಹಿಡಿದುಕೋ. ಆಮೇಲೆ ಬೇಕಾದರೆ ನ್ನ ಶೂಲದಿಂದ ತಿವಿದುಕೊಲ್ಲು. ನಾನಂತೂ ಇವ ನ್ನು ಕೊಲ್ಲುವುದಿಲ್ಲವೆಂದು ಮಾತುಕೊಟ್ಟಿದ್ದೇನೆ." ಎಂದು ಹೇಳಿ ಅವನ ಕಡೆಗೆ ಬೀಸಿ ಬಿಸುಟನು. ಸಿದ್ಧಸಾಧಕನು ಸರ್ಪನಖನನ್ನು ಹಿಡಿಯಲು ಕೈಚಾಚಿದಾಗ, ಒಂದು ಕೈಗೆ ಅವನ ಕುತ್ತಿಗೆಯೂ, ಇನ್ನೊಂದು ಕೈಗೆ ಅವನ ಕಾಲೂ ಸಿಕ್ಕಿದುವು. ಅವನು ಆತ್ಮಾನಂದದಿಂದ ಸರ್ಪನಖನನ್ನು ಗಿರಗಿರನೆ ತಿರುಗಿಸಿ "ಭಲೇ ! ಇವನು ನನ್ನ ಆರಾಧ್ಯ ದೈವ ಮಹಾಕಾಲನಿಗೆ ಪ್ರಶಸ್ತವಾದ ಬಲಿಪಶುವೇ ಸರಿ." ಎನ್ನುತ್ತಾ ನೆಲದಮೇಲೆ ಹಾಕಿದನು.

ಸರ್ಪನಖನ ಗರ್ವವೆಲ್ಲಾ ನೀರುನೀರಾಗಿ ಹೋಯಿತು. ಅಂಗಾತ ಬಿದ್ದ ಅವನು ಮೆಲ್ಲಗೆ ಎದ್ದು ಕುಳಿತು ಗಡಗಡನೆ ನಡುಗುತ್ತ, "ಅಯ್ಯಗಳಿರಾ, ನನ್ನನ್ನು ಕೊಲ್ಲಬೇಡಿ. ನಾನೂ ನನ್ನ ತಮ್ಮ ಸರ್ಪಸ್ವರನೂ ಮಕರಕೇತು ಎಂಬವನನ್ನು ಹುಡುಕುತ್ತಾ ಈ ಪ್ರಾಂತಕ್ಕೆ ಬಂದವರು. ನನ್ನ ತಮ್ಮನನ್ನು ಭಯಂಕರವಾದ ಒಂದು ವಾನರ ಮೃಗ ಎತ್ತಿಕೊಂಡು ಹೋಯಿತು. ಅವನನ್ನು ಹುಡುಕಿಕೊಂಡು ನನ್ನ ಪಾಡಿಗೆ ಹೋಗಿಬಿಡುತ್ತೇನೆ" ಎಂದನು ದೀನಸ್ವರದಲ್ಲಿ,



"ಹೀಗೆ ದಾರಿಗೆ ಬಾರಯ್ಯ ! ಈಗ ನೀನು ನಮಗೆ ಬೇಕಾದವನಾದೆ !" ಎಂದು ಹೇಳಿ ಜಯಶೀಲನು ಸಿದ್ಧಸಾಧಕನೊಂದಿಗೆ, "ಸಾಧಕಾ, ಆತುರಪಡಬೇಡ. ಇವನನ್ನು ಬಲಿಕೊಡಲಿಕ್ಕೆ ಇನ್ನೂ ಹೊತ್ತುಬರಲಿಲ್ಲ. ನಾನು ಹೇಳುವವರೆಗೆ ತಡೆ" ಎಂದು ಹೇಳಿದನು. ಆಮೇಲೆ ಸರ್ಪನಖನ ಕಡೆಗೆ ತಿರುಗಿ, "ನಿನ್ನ ತಮ್ಮನ ವಿಷಯ ಸ್ವಲ್ಪ ನನಗೂ ಗೊತ್ತಿದೆ ಅವನನ್ನು ಎತ್ತಿಕೊಂಡು ಹೋದ ನರವಾನರವೂ, ಆದರ ಯಜಮಾನ ಕೃಪಾಣಜಿತ್ತು ಎಂಬವನೂ ಬದುಕಿಯೇ ಇದ್ದಾರೆ. ನಿನ್ನ ತಮ್ಮನೂ ಬದುಕಿರಬಹುದು. ಅವನನ್ನು ಹುಡುಕುವುದರಲ್ಲಿ ನಾವು ಕೂಡಾ ನಿನಗೆ ಸಹಾಯ ಮಾಡುತ್ತೇವೆ. ಆದರೆ ನೀನು ಮಾಯಾ ಸರೋವರೇಶ್ವರನಿರುವ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗುವುದಾಗಿ ನನಗೆ ಮಾತು ಕೊಡಬೇಕು." ಎಂದನು.

"ಆದಾಗದಯ್ಯ, ಆತನ ಅನುಮತಿಯಿಲ್ಲದೆ ಮಾನವರಾರೂ ಅಲ್ಲಿಗೆ ಜೀವದೊಂದಿಗೆ ಪ್ರವೇಶಿಸಲಾರರು" ಎಂದ ಸರ್ಪನಖ.

"ಹಾಗಾದರೆ ಆ ಸರೋವರವಿರುವ ದಿಕ್ಕು ದೆಸೆ ದಾರಿಗಳನ್ನು ನಮಗೆ ಹೇಳು. ನಾವೇ ಅಲ್ಲಿಗೆ ಹೋಗಿ ಸೇರುವ ಪ್ರಯತ್ನ ಮಾಡಿಕೊಳ್ಳುತ್ತೇವೆ. ಆ ಪ್ರಯತ್ನದಲ್ಲಿ ನಾವು ಸತ್ತುಗಿತ್ತು ಹೋದರೂ ನೀನೇನೂ ಬಾಧ್ಯನಾಗುವುದಿಲ್ಲವೆಂದೂ ಭರವಸೆಕೊಡುತ್ತೇನೆ. ಚಿಂತಿಸಬೇಡ. ಸರಿತಾನೇ ?" ಎಂದ ಜಯಶೀಲ.

ಸರ್ಪನಖನು ಜಯಶೀಲನನ್ನು ಬೆದರುಕಂಗಳಿಂದ ಪಿಳಪಿಳನೆ ನೋಡುತ್ತಾ "ಆ ಸರೋವರವಿರುವ ಸ್ಥಳವನ್ನು ಕುರಿತು ಹೇಳಿದೆನಾದರೆ ನನ್ನ ತಲೆ ಪುಡಿಪುಡಿಯಾಗಿ ಹೋಗುತ್ತದೆ. ಹೀಗೊಂದು ಶಾಪವಿದೆ ಅಯ್ಯಾ !" ಎಂದ ಉಪಾಯಗಾಣದವನಂತೆ.

"ಆ ಶಾಪವನ್ನು ನಾನೇ ಅಮಲುಗೊಳಿಸಿಬಿಡುತ್ತೇನೆ !" ಎಂದು ಜಯಶೀಲನು ಸರ್ಪನಖನ ತಲೆಗೆ ಗುರಿಯಿಟ್ಟು ಕತ್ತಿಯನ್ನೆತ್ತಿದನು.

ಅದೇ ಸಮಯದಲ್ಲಿ ತುಸು ದೂರದಲ್ಲಿ ಒಂದು ಕೂಗಾಟ ಕೇಳಿಸಿತು. ಎಲ್ಲರೂ ಆ ಕಡೆಗೆ ನೋಡಿದರು.

ವಿಚಿತ್ರವಾದೊಂದು ಜಲಾಶ್ವದ ಮೇಲೆ ಬರುವವನು ಯಾರು ? ಸರ್ಪಸ್ವರನಂತೂ ಅಲ್ಲ, ಕೃಪಾಣಜಿತ್ತು ! ಅವನು ಕತ್ತಿಯನ್ನು ತಿರುಗಿಸುತ್ತ "ಎಲ್ಲಿ ಆ ಜಯಶೀಲ ? ಅವನ ಮಿತ್ರ ಆ ಬೋಳಕಪಾಲಿನೆಲ್ಲಿ ? ಅವರನ್ನು ನನ್ನ ಕತ್ತಿಗೆ ಬಲಿ ಕೊಟ್ಟುಬಿಡುತ್ತೇನೆ" ಎಂದು ಹೇಳುತ್ತ ಜಯಶೀಲ ಮೊದಲಾದವರಿರುವ ಸ್ಥಳಕ್ಕೆ ವೇಗವಾಗಿ ಬರುತ್ತಿದ್ದನು. ಜಲಾಶ್ವದಮೇಲೆ ಬರುವ ಅವನನ್ನು ನೋಡಿ ಜಯಶೀಲನಿಗೆ ತುಂಬ ಚೋದ್ಯವೆನಿಸಿತು.

(ಮುಂದುವರಿಯುವುದು)





August 1977

# ಮಾಯಾಸರೋವರ

## ೧೯

[ನರವಾನರವು ಎತ್ತಿಕೊಂಡು ಹೋದ ತನ್ನ ತಮ್ಮನನ್ನು ಹುಡುಕುತ್ತಿರುವ ಸರ್ಪನಖನು, ಒಂದು ಮರದ ಹತ್ತಿರ ಜಯಶೀಲ ಸಿದ್ಧಸಾಧಕರ ಕಣ್ಣಿಗೆ ಬಿದ್ದನು. ಅವರು ಅವನನ್ನು ಹಿಡಿದು ಮಾಯಾ ಸರೋವರಕ್ಕೆ ದಾರಿ ತಿಳಿಸದೆ ಹೋದರೆ ಕೊಲ್ಲುವೆವೆಂದು ಹೆದರಿಸಿದರು. ಆಗ ಕೃಪಾಣಜಿತ್ತು ಕತ್ತಿ ತಿರುಗಿಸುತ್ತಾ ಯಾರನ್ನೋ ಹುಡುಕಿಕೊಂಡು ಅವರಕಡೆಗೇ ಬರುತ್ತಿದ್ದನು.]


ಕೃಪಾಣಜಿತ್ತುವಿನ ಕೂಗು ಕೇಳಿದ ಕೂಡಲೇ ಜಯಶೀಲನು ಸರ್ಪನಖನ ತಲೆಗೆ ನೇರಾಗಿ ಎತ್ತಿದ ಕೈಯನ್ನು ಹಾಗೆಯೇ ಹಿಡಿದು ಅವನ ಕಡೆಗೆ ನೋಡಿದನು. ಕೃಪಾಣಜಿತ್ತು ತುಸು ದೂರದಲ್ಲಿ ಅಶ್ವದ ಮೇಲೆ ಕುಳಿತು ಹುಡುಕಾಡುವವನ ಹಾಗೆ ಅತ್ತಿತ್ತ ತಿರುಗುತ್ತಿದ್ದನು. ಅವನಿನ್ನೂ ಇವರ ಕಡೆಗೆ ನೋಡಿದಂತಿಲ್ಲ.

ಸಿದ್ಧಸಾಧಕನು ಶೂಲವನ್ನು ಬಿಗಿಯಾಗಿ ಹಿಡಿದು ತಿರುಗಿಸುತ್ತ, "ಆಹಾ! ಕಡೆಗೂ ಈ ಕೃಪಾಣಜಿತ್ತು ಈ ಶೂಲಕ್ಕೆ ಬಲಿಯಾಗಲು ಬಂದಿದ್ದಾನೆ. ಜೈ ಮಹಾಕಾಳಾ!" ಎನ್ನುತ್ತಾ ಅವನಕಡೆಗೆ ಹೊರಟನು. ಅದನ್ನು ನೋಡಿ ಸರ್ಪನಖನು ಸಿದ್ಧಸಾಧಕನ ಬಲ ಗೈಯನ್ನು ಹಿಡಿದುಕೊಂಡು, "ಅಯ್ಯ, ತುಸು ನಿಲ್ಲಿ. ಒಂದು ಮಾತು! ನನ್ನ ಸಂದೇಹವನ್ನು ಇನ್ನಿಷ್ಟು ಗಟ್ಟಿಪಡಿಸಿಕೊಳ್ಳಲು ಕೇಳುತ್ತೇನೆ. ಅಲ್ಲಿ ಕಾಣುವ ಆ ಕೃಪಾಣಜಿತ್ತುವೇ ನನ್ನ ತಮ್ಮನನ್ನು ಎತ್ತಿಕೊಂಡು ಹೋದ ನರವಾನರಕ್ಕೆ ಯಜಮಾನನೆ?" ಎಂದು ಕೇಳಿದನು.

"ಹೌದು ಹೌದು. ಇವನೇ ಪಳಗಿಸಿದ ಇವನದೇ ಸ್ವಂತ ನರವಾನರವೇ ನಿನ್ನ ತಮ್ಮನನ್ನು ಹೊತ್ತು



19—7 299



ಕೊಂಡು ಹೋಗಿದೆ. ಬೇರೆ ನರವಾನರ ಯಾವುದೂ ಈ ಪ್ರಾಂತದಲ್ಲಿಲ್ಲ." ಎಂದ ಸಿದ್ಧಸಾಧಕ.

"ಹಾಗಾದರೆ ಆ ದುಷ್ಟನನ್ನು ಕೊಲ್ಲಲೇಬೇಕು. ಕೊಲ್ಲುವುದಕ್ಕೆ ಮೊದಲು ಆ ನರವಾನರವು ನನ್ನ ತಮ್ಮನನ್ನು ಎಲ್ಲಿಗೆ ಕೊಂಡುಹೋಯಿತೆಂದು ಇವನಿಂದ ತಿಳಿದುಕೊಳ್ಳಬೇಕು. ಆದ್ದರಿಂದ ನಾನೇ ಮೊದಲು ಅವನನ್ನು ಮಾತಾಡಿಸುತ್ತೇನೆ. ಅವನಿಗಾಗಿ ನೀವು ಕಷ್ಟಪಡಬೇಡಿ. ನಾನೇ ನೋಡಿಕೊಳ್ಳುತ್ತೇನೆ." ಎಂದ ಸರ್ಪನಖಿ.

"ಛೀ. ಮೊದಲು ಕೈ ಬಿಡು. ನಿನ್ನ ತಮ್ಮನ ಗತಿ ಏನಾದರೆ ನನಗೇನಾಯಿತು? ಅದಕ್ಕಾಗಿ ನಾನೇಕೆ ನಮ್ಮ ಶತ್ರುವನ್ನು ನಿನಗೆ ಬಿಟ್ಟುಕೊಡಲಿ? ಜಯಶೀಲನಿಗೂ ನನಗೂ ಪ್ರಬಲ ಶತ್ರುವಾದ ಇವನನ್ನು ಈ ಲೋಕದಿಂದ ಕಳುಹಿಸಿಯೇ ಬೇರೆ ಕೆಲಸ ನೋಡುವ ತವಕದಲ್ಲಿ ನಾನಿರುವಾಗ, ನೀನೊಬ್ಬ ಅಡ್ಡಬರುವುದೆಂದರೇನು? ನನ್ನ ಬಲಿಯನ್ನು ನಿನಗೆ ಕೊಡುವುದೆಂದರೇನು? ಮೊದಲು ಅವನು ಸತ್ತ ಮೇಲೆ ನಿನ್ನ ತಮ್ಮನ ಸಂಗತಿ ನೋಡೋಣ. ಅತ್ತ ತೊಲಗು!" ಎಂದು ಸಿದ್ಧಸಾಧಕನು ಹಲ್ಲು ಕಡಿದನು.


ಅವರಿಬ್ಬರ ಸಂಭಾಷಣೆಗಳನ್ನು ಕೇಳುತ್ತಿದ್ದ ಜಯಶೀಲನಿಗೆ ಅಕಸ್ಮಾತ್ತಾಗಿ ಒಂದು ಹೊಸ ಆಲೋಚನೆ ಬಂದಿತು. ಸರ್ಪನಖಿನನ್ನು ಒಳ್ಳೆಯದು ಮಾಡಿಕೊಳ್ಳಲು ಇದೊಂದು ಒಳ್ಳೆಯ ಅವಕಾಶವಾಗಿ ಅವನಿಗೆ ತೋರಿತು.

"ಎಲೋ ಸರ್ಪನಖಾ, ನಿನ್ನ ಮಾಯಾಸರೋವರವು ಎಲ್ಲಿರುವುದೆಂದು ಹೇಳಲು ನೀನು ನಿರಾಕರಿಸಿದರೂ ನಿನ್ನ ಪ್ರೀತಿಯ ತಮ್ಮ ಸರ್ಪಸ್ವರನನ್ನು ಹುಡುಕುವ ಕೆಲಸದಲ್ಲಿ ನಾನು ನಿನಗೆ ಸಹಾಯ ಮಾಡದೆ ಬಿಡುವುದಿಲ್ಲ. ಈಗ ಒಂದು ಕೆಲಸ ಮಾಡುವ. ನಾನೂ ಸಿದ್ಧಸಾಧಕನೂ ಮರಗಳ ಹಿಂದೆ ಹೋಗಿ ಅಡಗಿಕೊಳ್ಳುತ್ತೇವೆ. ನೀನು ಕೃಪಾಣಜಿತ್ತುವನ್ನು ಕೂಗಿ ಕರೆದು ನರವಾನರವೂ ನಿನ್ನ ತಮ್ಮನೂ ಎಲ್ಲಿರುವರೆಂದು ಕೇಳಿ ತಿಳಿದುಕೋ. ಹುಂ, ನಿನ್ನ ಕೆಲಸವೇ ಮೊದಲು ಆಗಲಿ. ನೋಡುವ, ನಿಮ್ಮಿಬ್ಬರ ವ್ಯವಹಾರ ಏನಾಗುವುದೆಂದು." ಎಂದು ಜಯಶೀಲನು ಸಿದ್ಧಸಾಧಕನಿಗೂ ಸುಮ್ಮನಿರುವಂತೆ ಕಣ್ಸನ್ನೆ ಮಾಡಿದನು.

"ಅಯ್ಯಾ! ನಿಮ್ಮ ಮನಸ್ಸು ದೊಡ್ಡದು. ಕೃತಜ್ಞತೆಗಳು. ನಾನು ನನ್ನ ವಾಹನವನ್ನೂ ಕತ್ತಿಯನ್ನೂ ಉಪಯೋಗಿಸಬಹುದೇ?" ಎಂದು ಸರ್ಪನಖಿನು ಕೇಳಿದ.

ಜಯಶೀಲನು ಸರ್ಪನಖಿನಿಗೆ ಕತ್ತಿಯನ್ನು ಹಿಂದಿರುಗಿ ಕೊಟ್ಟು, "ಎಚ್ಚರಿಕೆ! ಕೃಪಾಣಜಿತ್ತು ಕತ್ತಿಯುದ್ಧದಲ್ಲಿ ಮಹಾಶೂರ. ಮರೆಯದಿರು" ಎಂದು ಎಚ್ಚರಿಸಿದನು.

ಕೂಡಲೇ ಜಯಶೀಲನು ಸಿದ್ಧಸಾಧಕನೊಂದಿಗೆ ಮರಪೊದರುಗಳ ನಡುವಿಗೆ ಹೋಗಿ ಕಾಣೆಯಾದನು.



ರ್ಪನಖಿನು ಉತ್ಸಾಹದಿಂದ ತನ್ನ ಜಲಾಶ್ವ ಸೇರಿ ಕೃಪಾಣಜಿತ್ತು ಎಲ್ಲಿರುವನೆಂದು ನೋಡಿ ನು. ಅವನು ಇನ್ನೂ ಕೋಪದಿಂದ ಕೂಗುತ್ತ, ಣ್ಯ ವೃಕ್ಷಗಳ ನಡುವೆ ಅಲ್ಲಿ ಇಲ್ಲಿ ಹುಡುಕುತ್ತ ಲಾಶ್ವದ ಮೇಲೆ ಸವಾರಿ ಮಾಡಿಕೊಂಡಿದ್ದನು. ಸರ್ಪ ಖಿನು ಹೇಗೆ ಅವನ ಬಳಿಗೆ ಹೋಗಿ ಮಾತಾಡಿಸು ದು ಒಳ್ಳೆಯದೆಂದು ಆಲೋಚಿಸುತ್ತಿರಲು, ಅವನ ನ್ನಿಗೆ ಏನೋ ಚುಚ್ಚಿದಂತೆ ಚುರುಕ್ಕೆಂದಿತು.

ಸರ್ಪನಖಿನು ಬೆರಗುವಡೆದು ದಿಗಿಲು ಬಿದ್ದು ಂದಿರುಗಿ ನೋಡಿದನು. ಟಗರಿನ ಮೇಲೆ ಕುಳಿತಿದ್ದ ಳ್ಳರ ಸೇನಾಧಿಪತಿ ಬಲ್ಲೆಯನ್ನು ಆಡಿಸಿಕೊಂಡು ಗುಳುನಕ್ಕನು.

"ಎಲೋ ಕುಳ್ಳರಕುನ್ನೀ! ಬಲ್ಲೆಯಿಂದ ನನ್ನ ನ್ನಿನಲ್ಲಿ ತಿವಿಯುವಷ್ಟು ಧೈರ್ಯವೇ ನಿನಗೆ? ಥವಾ ಬುದ್ಧಿಗಿದ್ದಿ ಕೆಟ್ಟಿದೆಯೆ?" ಎಂದು ಸರ್ಪ ಖಿನು ಕಣ್ಣು ತಿರುಗಿಸಿ ಕೇಳಿದನು.

ಕುಳ್ಳರ ಸೇನಾಧಿಪತಿ ನಕ್ಕು, "ಹೆದರಬೇಡಯ್ಯಾ, ರುಕುದುರೆಯವನೇ! ನಾನು ನಿಜವಾಗಿ ನಿನ್ನನ್ನು ವಿದ್ದರೆ ನೀನು ಇಷ್ಟು ಹೊತ್ತಿಗೆ ನೆಲದ ಮೇಲೆ ೂರಳಾಡಬೇಕಿತ್ತು. ನಿನ್ನನ್ನು ಮಾತಾಡಿಸಬೇಕೂಂತ ಲ್ಲೆಯಿಂದ ನಿನ್ನ ಬೆನ್ನಿನ ಮೇಲೆ ಸಮ್ಮನೆ ಗೀರಿದೆ. ಟ್ಟೇ. ಏನೋ ಮುಟ್ಟಿದಂತಾದುದಕ್ಕೇ ಇಷ್ಟು ರಿ ಕಣ್ಣು ತಿರುಗಿಸುವೆಯಲ್ಲಾ?" ಎಂದನು.

"ನನ್ನನ್ನು ಮಾತಾಡಿಸಲು ಇದುವೋ ಪದ್ಧತಿ? ದ್ದ ಅನಾಗರಿಕ ಕಾಡಾಡೀ ಪದ್ಧತಿ." ಎಂದು ರ್ಪನಖಿನು ಕುದುರೆಯನ್ನು ಮುಂದಕ್ಕೆ ಬಿಡಲು ೋಡಿ ಮತ್ತೆ ನಿಂತು, "ಹೌದು. ನನ್ನ ಹತ್ತಿರ ಗೇನು ಕೆಲಸ? ನಾನು ಯಾರೆಂದಾದರೂ ನಿನಗೆ ತ್ತೇ? ಸರ್ವ ಶಕ್ತಿಸಂಪನ್ನನಾದ ಮಾಯಾ ೋಕವರೇಶ್ವರನ ಬಂಟ ನಾನು. ನೀನು ಈ ಅಡವಿ ಲ್ಲಿ ಬದುಕುವ ಇರುವೆಯಂಥವನು. ನಿನಗೂ ನನಗೂ ಎಲ್ಲಿಯ ಸಂಬಂಧ? ಏನು ಮಾತು? ಆಂ? ದೂರ ನಿಲ್ಲು" ಎಂದನು.

"ನಾನು ಇರುವೆಯೋ ಸರ್ಪವೋ ತೋರಿಸಿ ಬಿಡುತ್ತೇನೆ" ಎಂದು ಕುಳ್ಳರ ಸೇನಾಧಿಪತಿ ಕೋಪ ದಿಂದ ಬಲ್ಲೆಯನ್ನು ಎತ್ತಿದ. ಆ ಸಮಯಕ್ಕೆ ಕೃಪಾಣ ಜಿತ್ತು ಥಕ್ಕನೆ ಮರಗಳ ಮರೆಯಿಂದ ಅಲ್ಲಿಗೇ ಬಂದು. ಸರ್ಪನಖಿನನ್ನು ನೋಡಿ ತಟ್ಟನೆ ನಿಂತು, "ಓಹ್! ನೀನೋ? ಗಡೇಗುಡ್ಡರ ಕೇರಿಯಲ್ಲಿ ನನ್ನ ಕೊರಳಿಗೆ ಹಗ್ಗದ ಉರುಳು ಬಿಗಿದವನಲ್ಲವೇ ನೀನು? ಯಾವ ಜಲಲೋಕದವನೋ? ಮತ್ತೇನು ಮಾಡಬೇಕೆಂದಿರು ವೆಯೋ?" ಎಂದನು,

"ಹೌದು, ನಾನೇ. ನನ್ನ ಉರುಳಿನಿಂದ ನೀನು ಹೇಗೆ ತಪ್ಪಿಸಿಕೊಂಡೆಯೋ ಗೊತ್ತಾಗಲಿಲ್ಲ. ಆದರ ಮೇಲೆ ನೀನು ಸವಾರಿ ಮಾಡುತ್ತಿರುವ ಈ ಜಲಾಶ್ವವು ನನ್ನ ತಮ್ಮನಾದ ಸರ್ಪಸ್ವರನದು. ಅವ ನಿಗೆ ನೀನೇನೋ ಮಾಡಿರಬೇಕು. ಅದೇನು ಮಾಡಿ



ಡೆಯೋ ಸತ್ಯ ಹೇಳಿಬಿಡು, ನನ್ನ ತಮ್ಮನ ಸಂಗತಿ ಗೊತ್ತಾಗದೆ ನಿನ್ನನ್ನು ಮುಂದೆ ಹೋಗಲು ಬಿಡಲಾರೆ" ಎಂದು ಸರ್ಪನಖನು ಕುದುರೆಯನ್ನು ಕೃಪಾಣಜಿತ್ತುವಿನ ಬಳಿಗೆ ನಡೆಯಿಸಿದನು.

ಕೃಪಾಣಜಿತ್ತು ಎರಡು ಕೈಗಳನ್ನೂ ಮೇಲೆತ್ತಿ ತಡೆಯುತ್ತ, "ಅಲ್ಲೇ ನಿಲ್ಲು. ಮುಂದೆ ಬರಬೇಡ. ಮೊದಲು ನಾವು ಮಾತಾಡಬೇಕಾದ ವಿಷಯ ತುಂಬಾ ಇದೆ" ಎಂದನು.

ಸರ್ಪನಖನು ತನ್ನ ಜಲಾಶ್ವವನ್ನು ನಿಲ್ಲಿಸಿ, "ಅದೇನು ಮಾತು? ನನ್ನ ತಮ್ಮ ಎಲ್ಲಿದ್ದಾನೆಂದು ಮೊದಲು ಹೇಳು" ಎಂದನು.

"ಅದನ್ನೇ ಹೇಳುತ್ತೇನೆ. ಕೇಳು. ನರವಾನರವು ಹಠಾತ್ತಾಗಿ ಮೇಲೆ ಬಿದ್ದು ಜಲಾಶ್ವದ ಮೇಲಿನಿಂದ ನಿನ್ನ ತಮ್ಮನನ್ನು ಎತ್ತಿಕೊಂಡು ಹೋಗುವಾಗ ಅವನು ಅಣ್ಣಾ ಸರ್ಪನಖಾ ಎಂದು ಕೂಗಿದ. ಹಾಗಾದರೆ ಅವನ ಅಣ್ಣ ಸರ್ಪನಖ ಅಂದರೆ ನೀನೇ ಆಗಿರಬೇಕು. ನಾನು ಏರಿರುವ ಈ ಕುದುರೆ ನಿನ್ನ ತಮ್ಮನದೇ. ನಾನೇಕೆ ಸುಳ್ಳು ಹೇಳಲಿ? ಇದನ್ನು ಕೇರಿಯ ಹತ್ತಿರದ ಮರದ ಬಳಿಯಲ್ಲಿ ಹಿಡಿದು ಕೊಂಡೆ" ಎಂದ ಕೃಪಾಣಜಿತ್ತು.

"ನಾನು ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಲಿಲ್ಲ, ಈಗ ನನ್ನ ತಮ್ಮ ಎಲ್ಲಿದ್ದಾನೆ?" ಎಂದು ಗರ್ಜಿಸುತ್ತ ಸರ್ಪನಖ ಕತ್ತಿಯನ್ನೆತ್ತಿದ.

"ಸರ್ಪನಖಾ, ಅವಸರ ಪಡಬೇಡ. ವಿಧಿಯ ಬಲಕ್ಕೆ ಯಾವುದೂ ಎದುರಿಲ್ಲ ಅನ್ನುತ್ತಾರೆ. ನಿನ್ನ ತಮ್ಮನಿಗೆ ಆ ನರವಾನರದ ಕೈಯಲ್ಲಿ ಮರಣ ಅಂತ ಬರೆದಿದ್ದರೆ ಇಷ್ಟು ಹೊತ್ತಿಗೆ ಅವನ ಕತೆ ಮುಗಿದು ಹೋಗಿದ್ದೀತು. ಅಥವಾ ಅವನು ತನ್ನ ಬುದ್ಧಿವಂತಿಕೆಯಿಂದ ಆ ನರವಾನರವನ್ನು ಅಡಗಿಸಿ ತನ್ನಿಷ್ಟದಂತೆ ನಡೆಸಿ, ಅದರ ಸಹಾಯದಿಂದ ನಮ್ಮಿಬ್ಬರ ಶತ್ರುವಾದ ಜಯಶೀಲ ಸಿದ್ಧಸಾಧಕರನ್ನು ಹಿಡಿಯಲು ಕಾಡಿನಲ್ಲೆಲ್ಲಾ ಅಲೆದಾಡಿಕೊಂಡಿದ್ದರೂ ಇರಬಹುದು, ಯಾರಿಗೆ ಗೊತ್ತು, ನರವಾನರವು ಪಳಗಿಸಿದವರ ಕೈ ಬೊಂಬೆಯಾಗುವಂಥಾ ಒಂದು ಪ್ರಾಣಿ. ನಿಮ್ಮ ಕಡೆ ಯುವನಾದ ಆ ಮಕರಕೇತುವನ್ನು ಜಯಶೀಲನೂ ಅವನ ಜತೆಗಾರನಾದ ಸಾಧಕಪುಂಡನೂ ಎಷ್ಟೊಂದು ಪೀಡಿಸಿದ್ದಾರೋ! ಕಾಡುಹಳ್ಳಿಯ ಜನರು ತುಂಬಾ ಹೇಳುತ್ತಾರಪ್ಪ" ಎಂದ ಕೃಪಾಣಜಿತ್ತು.


ಕೃಪಾಣಜಿತ್ತುವಿನ ಮಾತು ಕೇಳುತ್ತಿದ್ದಂತೆ ಸರ್ಪನಖನ ಕೋಪವು ಹೆಚ್ಚುತ್ತಾ, ಅವನ ಮಾತು ನಿಂತ ಕ್ಷಣವೇ ಅರಚು ಕಂಠದಿಂದ, "ಸಾಕುಮಾಡು ದುಷ್ಟಾ! ನನ್ನ ತಮ್ಮನ ಮರಣಕ್ಕೆ ನೀನೇ ಕಾರಣ! ಉಳಿದ ಶತ್ರುಗಿತ್ರುಗಳ ಕತೆಯೆಲ್ಲಾ ಆಮೇಲೆ! ಮೊದಲು ನಿನ್ನ ತಲೆ ಕಡಿದು ನನ್ನ ತಮ್ಮನ ಆತ್ಮಕ್ಕೆ ಶಾಂತಿಮಾಡುತ್ತೇನೆ. ಸಾಯುವ ಮೊದಲು ತಮ್ಮನ ಶವವೆಲ್ಲಿದೆಯೋ ಹೇಳು." ಎಂದು ಹೇಳುತ್ತಾ ಕತ್ತಿಯ ಹಿಡಿಯಿಂದ ಕುದುರೆಯನ್ನು ಹೊಡೆದನು.

ಆ ಕೂಡಲೇ ಕುದುರೆ ಕೃಪಾಣಜಿತ್ತುವಿನ ಕಡೆಗೆ ಟದೋಡಿತು. ಅದರ ವೇಗವನ್ನು ನೋಡುತ್ತಲೇ ಪಾಣಜಿತ್ತು ಭೀತನಾಗಿ ತನ್ನ ಕುದುರೆಯನ್ನು ಂದಕ್ಕೆ ತಿರುಗಿಸಿ, "ಊಹುಂ! ನನ್ನ ಗರ್ಭಶತ್ರು ಯಶೀಲನನ್ನು ಕೊಂದಹೊರತು ನಾನು ಸಾಯ ರೆ. ಆದುದರಿಂದ ಈಗ ನಾನು ನಿನ್ನೊಡನೆ ಸಾಟಕ್ಕೆ ನಿಲ್ಲದೆ ಓಡುತ್ತಿದ್ದೇನೆ." ಎಂದು ಳುತ್ತಾ ಜಲಾಶ್ವವನ್ನು ಬಹು ವೇಗವಾಗಿ ಓಡಿಸಿ ನು. ಸರ್ಪನಖನೂ ಅವನನ್ನು ಓಡಿಸಿಕೊಂಡು ಹೋದನು.

ಮರಗಳ ಮರೆಯಲ್ಲಿ ಇದನ್ನೆಲ್ಲಾ ನೋಡುತ್ತಿದ್ದ ಯಶೀಲನು ಸಿದ್ಧಸಾಧಕನೊಂದಿಗೆ, "ಸಾಧಕಾ, ನಾಗಿ ಹೋಯಿತು! ಓಡುತ್ತಿರುವವರಲ್ಲಿ ಒಬ್ಬನು ಮ್ಮ ಪರಮಶತ್ರು. ಇನ್ನೊಬ್ಬನನ್ನು ಮಿತ್ರನನ್ನಾಗಿ ಡಿ ಮಾಯಾ ಸರೋವರವನ್ನು ಸೇರಬೇಕೆಂದು ಂಡೆವು. ಎರಡೂ ಹಾರಿಹೋಗುವ ಹಾಗಿದೆ. ಬಾರದು, ಹೇಗಾದರೂ ಮಾಡಿ ಇಬ್ಬರನ್ನೂ ಡಿಯಲೇಬೇಕು!" ಎಂದನು.

"ಯಾವುದೋ ವಿಷ ಗಳಿಗೆಯ ಪ್ರಭಾವ! ಗೇನು ಮಾಡೋಣ? ನಾವೂ ಓಡೋಣವೇ?" ದ ಸಿದ್ಧಸಾಧಕ.


ಜಯಶೀಲನು ಮರಗಳ ಮರೆಯಿಂದ ಈಚೆಗೆ ದು, ಆಶ್ಚರ್ಯಪಡುತ್ತ ದಿಕ್ಕು ದಿಕ್ಕು ನೋಡು ರುವ ಕಳ್ಳ ಸೇನಾಪತಿಯೊಂದಿಗೆ, "ಸೇನಾ ಯೇ! ಆ ಕುದುರೆಗಳ ಮೇಲೆ ಓಡುವವರಿಬ್ಬ ನ್ನೂ ಹಿಡಿಯಲೇಬೇಕು. ಸುತ್ತುಮುತ್ತಲೂ ನಿಮ್ಮ ಯುವವರೆಷ್ಟೋ ಮಂದಿ ಇದ್ದಾರಲ್ಲವೇ? ಅವರೆಲ್ಲ ನ್ನೂ ಸೇರಿಸಿ, ಓಡುವವರಿಬ್ಬರನ್ನೂ ಜೀವದೊಂದಿಗೆ ಡಿಯಲು ಸಾಧ್ಯವೇ? ತಕ್ಕ ಉಪಾಯವಿದೆಯೆ?" ಂದು ಕೇಳಿದನು. "ಅಷ್ಟೇತಾನೇ? ಅದೇನು ದ್ದ ಕೆಲಸ? ನೋಡಿರಿ! ಈ ಸುತ್ತಮುತ್ತಲಿನ



ಗುಡ್ಡ ಬೆಟ್ಟ ಕಣಿವೆಗಳಲ್ಲೆಲ್ಲಾ ನಮ್ಮ ಕಡೆಯವರೇ ಇದ್ದಾರೆ. ಈಗಲೇ ಅಂಚೇ ತಮಟೇ ಮೂಲಕ ಎಲ್ಲರಿಗೂ ಆಜ್ಞೆ ಮಾಡಿಬಿಡ್ತೇನೆ." ಎಂದು ಹೇಳಿ ಕಳ್ಳರ ಸೇನಾಧಿಪತಿ ತನ್ನ ಟಗರು ವಾಹನವನ್ನು ಕೇರಿಯ ಕಡೆಗೆ ಬಿರುಗಾಳಿಯಷ್ಟುವೇಗವಾಗಿ ಓಡಿಸಿ ಕೊಂಡು ಹೋದನು.

ಸಿದ್ಧಸಾಧಕನಿಗೆ ಏನೋ ಹೊಸ ಹುರುಪು ಬಂದ ಹಾಗಾಯಿತು. "ಜೈ ಮಹಾ ಕಾಳಾ! ನಾವು ಹಿರಣ್ಯ ಪುರದಿಂದ ಹೊರಟ ವೇಳೆ ವಿಷಾಮೃತ ವೇಳೆಯಾಗಿರ ಬೇಕು! ಎಷ್ಟು ಕಷ್ಟಗಳು! ಎಂಥೆಂಥಾ ಇಕ್ಕಟ್ಟುಗಳು! ಆದರ ಬೆನ್ನಿಗೇ ಏನೋ ವಿಮೋಚನೆಗಳು! ಅಬ್ಬಬ್ಬ! ಮಹಾಕಾಳ ಕೈ ಬಿಡದಿದ್ದರೆ ಸರಿ!" ಎಂದು ಸಿದ್ಧ ಸಾಧಕನು ದೊಡ್ಡದೊಂದು ನಿಟ್ಟುಸಿರು ಬಿಟ್ಟು ಜಯ ಶೀಲನೊಂದಿಗೆ ನಡೆದನು.

ಜಯಶೀಲ ಸಿದ್ಧಸಾಧಕರು ಕಲ್ಲುಗಳ ಗುಡ್ಡದ ಮೇಲೆ ನಡೆದು ತುದಿಯಲ್ಲಿ ನಿಂತು ಸುತ್ತಲೂ ನೋಡಿ



ದರು. ಮೊದಲು ಕೇರಿಯ ಕಡೆಯಿಂದ ಒಂದು ಬಗೆಯ ತಾನದಲ್ಲಿ ಬಹುಗಟ್ಟಿಯಾಗಿ ತಮ್ಮಟೆ ಮೊಳಗಿತು. ಅದನ್ನನುಸರಿಸಿ ಅರಣ್ಯದ ಎಲ್ಲಾ ಪ್ರಾಂತಗಳಲ್ಲೂ ತಮ್ಮಟೆಯ ಶಬ್ದವೂ, ಆಯುಧಗಳನ್ನು ಧರಿಸಿದ ಕುಳ್ಳ ವೀರರು ಅರಣ್ಯದ ಎಲ್ಲಾ ದಿಕ್ಕುಗಳಿಗೂ ಗುಂಪುಗುಂಪಾಗಿ ಓಡುವುದನ್ನೂ ಅವರು ನೋಡಿದರು. ಕುಳ್ಳ ಜನಾಂಗದ ಧೈರ್ಯ, ಸಮಯ ಸಾಧಕತೆ, ಚುರುಕು, ಉತ್ಸಾಹಗಳನ್ನು ನೋಡಿ ಜಯಶೀಲನು ತಲೆದೂಗಿದನು.

ಇಷ್ಟರಲ್ಲಿ ಕೃಪಾಣಜಿತ್ತುವನ್ನು ಓಡಿಸಿಕೊಂಡು ಹೋಗುತ್ತಿರುವ ಸರ್ಪನಖನು, ಮರ ಗಿಡ ಬಳ್ಳಿ ಪೊದೆಗಳ ಮಧ್ಯೆ ಕೃಪಾಣಜಿತ್ತುವನ್ನು ಹಿಡಿದುಕೊಳ್ಳುವುದು ಸಾಧ್ಯವಲ್ಲವೆಂದು ತಿಳಿದು ದೊಡ್ಡ ಕಂಠದಿಂದ, "ಎಲೋ, ಕೃಪಾಣಜಿತ್ತೂ! ನಿಲ್ಲು! ನೀನು ಹೇಳಿದ ಹಾಗೆ ನನ್ನ ತಮ್ಮ ಬದುಕೇ ಇರುವನೋ ಏನೋ? ಸತ್ತಿದ್ದಾನೆಂಬುದು ಇನ್ನೂ ಗೊತ್ತಾಗಿಲ್ಲವಷ್ಟೇ? ನೀನು ನಮ್ಮ ಜಲಾಶ್ವವನ್ನು ನನಗೆ ಕೊಟ್ಟು, ನಿನ್ನ ಪಾಡಿಗೆ ಹೋಗಯ್ಯ. ನಿನ್ನನ್ನೇನೂ ಮಾಡಲಾರೆ" ಎಂದನು.

"ಓಹೋ! ಈ ಕುದುರೆಯನ್ನು ತೆಗೆದುಕೊಳ್ಳು ನೆವನದಲ್ಲಿ ನನ್ನನ್ನು ಕತ್ತಿಗೆ ಬಲಿಕೊಡಲಾರೆಯೆಂ ಹೇಗೆ ನಂಬುವುದು? ಹಾಗೆಂದ ಮಾತ್ರಕ್ಕೆ ನಾ ನಿನ್ನೊಡನೆ ಹೋರಾಡಲು ಹೆದರುತ್ತೇನೆಂದು ತಿಳಿ ಬೇಡ. ಯುದ್ಧದಲ್ಲಿ ವಿಜಯವು ಯಾರಿಗೋ ಹೇಗೆ ಹೇಳುವುದು? ನಾನು ಮೊದಲು ಜಯಶೀಲನನ್ನು ಕೊಲ್ಲಬೇಕು. ಆಮೇಲೆ ನಿನ್ನ ಸಂಗತಿ ನೋ ತ್ತೇನೆ." ಎಂದು ತೇಕಿಕೊಂಡೇ ಉತ್ತರ ಕೊಡು ಕೃಪಾಣಜಿತ್ತು ಜಲಾಶ್ವವನ್ನು ವೇಗವಾಗಿ ಓ ಕೊಂಡು ನದಿಯ ತೀರವನ್ನು ಸೇರಿಕೊಂಡನು. ಇನ್ನು ಬೆನ್ನಟ್ಟುವವನಿಂದ ತಪ್ಪಿಸಿಕೊಳ್ಳಬೇಕಾದರೆ ಹೇಗೆ

ಇನ್ನು ಮೇಲೆ ಒಳ್ಳೆಯ ಮಾತುಗಳಿಂದ ಕೃಪಾ ಜಿತ್ತುವನ್ನು ಹಿಡಿಯುವುದು ಸಾಧ್ಯವಿಲ್ಲವೆಂ ಸರ್ಪನಖನು ಜಲಾಶ್ವವನ್ನು ಇನ್ನಷ್ಟು ಜೋರ ಕೊಂಡು ಓಡಿಸುತ್ತಾ ನದಿಯ ತೀರವನ್ನು ತಲು ದನು. ಇಬ್ಬರೂ ನದಿಯ ತೀರದಲ್ಲೇ ಕುದುರೆಯ ಓಡಿಸಿಕೊಂಡು ಹೋಗುತ್ತಿದ್ದರು.

ಕೇರಿಗಳಿಂದ ಹೊರಟ ತಮಟೆಯ ಶಬ್ದದ ಅ ದಂತೆ ಗುಂಪುಗುಂಪಾಗಿ ಹೊರಟ ಕುಳ್ಳರ ಒಂದೆ ಗುಂಪುಗಳು ಅದೇ ನದಿಯ ಬದಿಗೂ ಬಂದು ಕೃಪಾಣಜಿತ್ತುವನ್ನೂ ಸರ್ಪನಖನನ್ನೂ ಹಿಡಿ ಬಂಧಿಸಲು ಒಂದುಕಡೆಯಲ್ಲಿ ಆಯುಧಗಳನ್ನು ಎ ಹಿಡಿದುಕೊಂಡು ಗುಂಪಾಗಿ ನಿಂತರು.


ದೂರದಲ್ಲಿ ಅವರನ್ನು ನೋಡಿದ ಕೃಪಾಣಜಿ ತತ್ತರಿಸಿದನು. ತನ್ನನ್ನು ಯಮಕಿಂಕರರು ಮು ಕೊಳ್ಳುವಂತೆ ಆವನಿಗೆ ತೋರಿತು. ಮುಂದೆ ಹೋ ಅವನನ್ನು ನಾನಾ ಹಿಂಸೆಗೆ ಗುರಿ ಮಾಡಿದ ಕು ಶೂರರು! ನೆಲದಮೇಲೆ ಎತ್ತ ತಿರುಗಿದರೂ ಅವ

ಹಿಂದೆ ತಿರುಗಿದರೆ ತಮ್ಮನ ಬಗೆಗೆ ಸೇಡು ತೀರಿಸಲು ಬರುತ್ತಿರುವ ಯಮದೂತನಂತಹ ಸರ್ಪನಖಿ !

ಈ ಸಂದಿಗ್ಧದಲ್ಲಿ ಸಿಕ್ಕಿದ ಕೃಪಾಣಜಿತ್ತುವಿಗೆ ನದಿಗೆ ಹಾರುವುದೇ ಉತ್ತಮವಾದ ಮಾರ್ಗವೆಂದು ತೋರಿತು. ಅಂತೆಯೇ ಅವನು ನದಿಯಕಡೆಗೆ ಕುದುರೆಯನ್ನು ತಿರುಗಿಸಿದನು. ನದೀ ಜಲದಲ್ಲಿ ಈಲಾಡುತ್ತಿದ್ದ ಎರಡು ಮೊಸಳೆಗಳು ಅವನನ್ನು ತಟಸ್ಥಗೊಳಿಸಿದುವು.

ಈ ಹೊಸ ಅಪಾಯದರ್ಶನದಿಂದ ಅವನ ಗುಂಡಿಗೆ ಧಡಧಡ ಎಂದಿತು, ಎದೆಗೆ ಚುಚ್ಚಿಕೊಳ್ಳುವ ಕುಳ್ಳರ ಬಲ್ಲೆಯ ಏಟು ಒಳ್ಳೆಯದೋ ? ಬೆನ್ನಿನ ಮೇಲೆ ಬೀಳುವ ಸರ್ಪನಖಿನ ಕತ್ತಿಯ ಪೆಟ್ಟು ಒಳ್ಳೆಯದೋ? ಅಥವಾ ಗರಗಸದಂತಹ ಹಲ್ಲುಗಳ ಮೊಸಳೆ ಬಾಯಿ ಒಳ್ಳೆಯದೋ ? ಈದಿನ ಹೇಗಾದರೂ ಸಾವು ತಪ್ಪದಿರುವಾಗ, ನಿರಾಶೆಯ ಮೊಂಡು ಧೈರ್ಯ ತಂದುಕೊಂಡು, "ಕುಳ್ಳರಿಗಿಂತಲೂ, ಸರ್ಪನಖಿನಿಗಿಂತಲೂ ಈ ಮೊಸಳೆಗಳು ಸ್ವಲ್ಪ ಸಾಧು ಜೀವಿಗಳು. ಆದರ ಮೇಲೆ ನಾನು ಹತ್ತಿರುವ ಕುದರೆ ನೀರು ಕುದುರೆ ಇದು ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ ನನ್ನನ್ನೂ ರಕ್ಷಿಸಬಹುದು. ಅಥವಾ ಇದನ್ನು ಮೊಸಳೆಗೆ ಬಲಿಗೊಟ್ಟು ನಾನಾದರೂ ತಪ್ಪಿಕೊಳ್ಳಬಹುಧು. ಆಯುಷ್ಯವಿದ್ದರೆ ಸಮುದ್ರವೂ ಮೊಳಕಾಲುದ್ದ ಆಳವೇ ಅಂತೆ!" ಎಂದುಕೊಳ್ಳುತ್ತಾ ಕುದುರೆಯನ್ನು ನದಿಯೊಳಗೆ ಹಾರಿಸಿದನು.

ಕೃಪಾಣಜಿತ್ತುವನ್ನು ಬೆನ್ನಟ್ಟಿ ಬರುತ್ತಿದ್ದ ಸರ್ಪನಖಿನು, ಅದನ್ನು ನೋಡಿ, "ಎಲೆಲಾ ! ಬುದ್ಧಿಗೆಟ್ಟ ನರ ಮನುಷ್ಯಾ ! ಬೇಕೆಂದೇ ಮೊಸಳೆಗಳ ಬಾಯಿಗೆ ಬಿದ್ದಿಯಲ್ಲೋ ! ಈಗ ಮೊಸಳೆಗಳು ನಿನ್ನನ್ನು ಮಾತ್ರವಲ್ಲದೆ ನನ್ನ ತಮ್ಮನ ಕುದುರೆಯನ್ನು ಕೂಡಾ ನುಂಗುತ್ತಾವಲ್ಲಾ ! ಅದನ್ನು ಹೇಗಾದರೂ ಕಾಪಾಡಬೇಕು. ನನ್ನ ತಮ್ಮನು ಬದುಕಿದ್ದು ಮಾಯಾಸರೋವರಕ್ಕೆ ಹೋಗಬೇಕಾದರೆ ಅವನ ಜಲಾಶ್ವವು ಬೇಕೇ ಬೇಕು" ಎಂದುಕೊಳ್ಳುತ್ತಾ ತನ್ನ ಜಲಾಶ್ವವನ್ನೂ ನದಿಯೊಳಗೆ ಹಾರಿಸಿದನು.



ಕೃಪಾಣಜಿತ್ತು ಜಲಾಶ್ವದ ಮೇಲೆ ಪ್ರವಾಹದೊಂದಿಗೆ ಸಾಗುತ್ತಿರುವುದನ್ನು ನೋಡಿ ಎರಡು ಮೊಸಳೆಗಳೂ ಅವನನ್ನು ಅನುಸರಿಸಿದುವು. ಸರ್ಪನಖನು ಕತ್ತಿಯನ್ನೆತ್ತಿಕೊಂಡು ಮೊಸಳೆಗಳನ್ನು ಕೊಲ್ಲುವ ತವಕದಲ್ಲಿ ಸಾಗುತ್ತಿದ್ದನು.

ತೀರದಲ್ಲಿರುವ ಕುಳ್ಳರ ಗುಂಪು ಅಲ್ಲಲ್ಲಿದ್ದ ಕಲ್ಲುಗಳನ್ನೆತ್ತಿ ಕೃಪಾಣಜಿತ್ತುವಿನ ಕಡೆಗೆ ಬಿಸುಡತೊಡಗಿದರು. ಕೆಲವರು ಒಣಗಿದ ಕಟ್ಟಿಗೆ ತುಂಡುಗಳನ್ನೂ ಬೀಸುತ್ತಿದ್ದರು. ಅದನ್ನು ನೋಡಿ ಸರ್ಪನಖನು, ಅವರಿಗೆ ಕೇಳಿಸುವಂತೆ ಕಿರುಚು ಕಂಠದಿಂದ, "ಓಹೋಯಿ! ನಾನು ನಿಮ್ಮ ಮಿತ್ರನೇ. ಆ ದುಷ್ಟನನ್ನು ಜೀವದೊಂದಿಗೆ ಹಿಡಿಯಬೇಕೆಂತಲೇ ಇದ್ದೇನೆ. ಕಲ್ಲುತುಂಡು ಬಿಸಾಡಬೇಡಿ!" ಎಂದು ಕೂಗಿದನು. ಕುಳ್ಳರು ಅವನ ಕೂಗನ್ನು ಲಕ್ಷ್ಯ ಮಾಡಿದಂತೆ ಕಾಣಲಿಲ್ಲ. ಅಷ್ಟರಲ್ಲಿ ಮೊಸಳೆಯೊಂದು ಬಾಯಿ ತೆರೆದು ಕೃಪಾಣಜಿತ್ತುವಿನ ಸೊಂಟವನ್ನು ಹಿಡಿಯುವಷ್ಟರೊಳಗೆ, ಅವನು ಕತ್ತಿಯಿಂದ ಅದರ ಬೆನ್ನಿನ ಮೇಲೆ ಹೊಡೆದನು.


ಆ ಪೆಟ್ಟಿಗೆ ಮೊಸಳೆ ಭಾರೀ ಗಾಯವಾಗಿ ನೀರಲ್ಲಿ ಮಗುಚಾಡುತ್ತಾ ಅಲ್ಲಕಲ್ಲೋಲಗೊಳಿಸಿತು. ಆಗ ಎರಡನೇ ಮೊಸಳೆ ನೀರಿನ ಅಡಿಗೆ ಹೋಗಿ ಬಾಯಿ ತೆರೆದುಕೊಂಡು ಕೃಪಾಣಜಿತ್ತುವಿನ ಕಡೆಗೆ ಬರತೊಡಗಿತು. ಅದನ್ನು ನೋಡಿದ ಜಲಾಶ್ವವು ಹೆದರಿ, ಕೃಪಾಣಜಿತ್ತು ಎಷ್ಟು ತಡೆದರೂ ಕೇಳದೆ, ತೀರಕ್ಕೆ ಈಜುತ್ತಾ ಹೋಗಿ ಒಂದುಕಡೆಯಲ್ಲಿ ನೀರನ್ನು ಬಿಟ್ಟು ತೀರವನ್ನೇರಿಬಿಟ್ಟಿತು.


ಅದು ನೆಲವೇರಿದ ಜಾಗದಲ್ಲಿಯೇ ಮೃತ್ಯುವೃಕ್ಷವಿದ್ದಿತು. ಅಂತೆಯೇ ದೂರದಲ್ಲಿರುವ ಕುಳ್ಳರು ಮುಂದಿನ ಅಪಾಯವನ್ನು ತಿಳಿದು, "ಎಲೆಲೋ ಮಹಾಕಾಯಾ! ಕುದುರೆಯನ್ನು ಹಿಂದಕ್ಕೆ ತಿರುಗಿಸು. ಆ ಮರಕ್ಕೆ ಬಲಿಯಾಗುವೆಯೋ! ಇತ್ತ ಬಾ! ಇತ್ತ ಬಾ!" ಎಂದು ಅರಚಿ ಎಚ್ಚರಿಸಿದರು.

ಸವಾರನ ಹತೋಟಿಯನ್ನು ಮೀರುವುದೆಂದೇ ಗಟ್ಟಿಮಾಡಿದ್ದ ಆ ನಿರ್ಭಾಗ್ಯದ ನೀರುಗುದುರೆ ಅವನನ್ನು ಹೊತ್ತುಕೊಂಡು ನೇರಾಗಿ ಮೃತ್ಯುವೃಕ್ಷದ ತಳಕ್ಕೆ ಹೋಯಿತು.

ತತ್‌ಕ್ಷಣವೇ ಸರ್ರನೆ ಬಾಗಿಬಂದ ಆ ಮರದ ಕೊಂಬೆಯ ಇಕ್ಕುಳದಲ್ಲಿ, ಧುಮುಕಬೇಕೆಂದು ಪ್ರಯತ್ನಿಸಿದ ಕೃಪಾಣಜಿತ್ತು ಸಿಕ್ಕಿಕೊಂಡ. ಅದರ ದೈತ್ಯಶಕ್ತಿ ಅವನನ್ನು ಮೇಲಕ್ಕೆ ಕೊಂಡೊಯ್ಯತೊಡಗಿತು. ಕೃಪಾಣಜಿತ್ತು ಕೈಕಾಲುಗಳ ಆಧಾರವಿಲ್ಲದೆ ತಟಪಟ ತುಳ್ಳಾಡುತ್ತ ಕೊಂಬೆಯೊಂದಿಗೆ ಮೇಲೆ ಹೋಗುತ್ತಿದ್ದ.

(ಮುಂದುವರಿಯುವುದು)





# ಮಾಯಾ ಸರೋವರ

೨೦

[ಮಾಯಾ ಸರೋವರವನ್ನು ತಲುಪಲು ಸರ್ಪನಖನ ಸಹಾಯ ಅಗತ್ಯವೆಂದು ಜಯಶೀಲನಿಗೆ ತೋರಿತು. ಸರ್ಪನಖನು ತನ್ನ ತಮ್ಮನ ವಿಷಯ ಮುಂದಾಗಿ ತಿಳಿಯಬೇಕೆಂದು ಹಟ ಹಿಡಿದನು. ನರವಾನರದ ಒಡೆಯನಾದ ಕೃಪಾಣಜಿತ್ತುವನ್ನು ನೋಡಿದ ಕೂಡಲೇ ಸರ್ಪನಖನು ಜಲಾಶ್ವದ ಮೇಲೆ ಅವನನ್ನು ಓಡಿಸಿಕೊಂಡು ಹೋದನು. ಓಡಿ ಹೋಗಲೆತ್ನಿಸಿದ ಕೃಪಾಣಜಿತ್ತುವನ್ನು ಮೃತ್ಯು ವೃಕ್ಷ ಹಿಡಿದೆತ್ತಿತು.]

**ಮೃ**ತ್ಯುವೃಕ್ಷದ ಕೊಂಬೆ ಸರ್ರನೆ ಕೆಳಕ್ಕಿಳಿದು ಕೃಪಾಣಜಿತ್ತುವಿನ ತಲೆಯನ್ನೇ ಹಿಡಿದು ಎತ್ತಿಬಿಟ್ಟಿತ್ತು. ಆಗ ಅವನು ಕೈ ಕಾಲುಗಳನ್ನು ಆಡಿಸುವಾಗ, ಆ ಕೊಂಬೆಯ ಪಕ್ಕದಲ್ಲಿದ್ದ ಚಿಕ್ಕ ಕೊಂಬೆಗಳಲ್ಲೊಂದು ಬಗ್ಗಿ ಬಂದು ಅವನ ಭುಜವನ್ನೂ, ಮತ್ತೊಂದು ಕೊಂಬೆ ಅವನ ಕೈಯನ್ನೂ ಹಿಡಿದು ಮೇಲಕ್ಕೆ ಎಳೆದುವು.

ಕೃಪಾಣಜಿತ್ತು ಆ ಹಿಡಿತಗಳಿಂದ ತಪ್ಪಿಸಿಕೊಳ್ಳಲಾಗದೆ ಒದ್ದಾಡುತ್ತ "ರಕ್ಷಿಸೀ! ರಕ್ಷಿಸೀ!..." ಎಂದು ಕೂಗುತ್ತಿದ್ದನು. ಕೂಗಲೂ ಆಗದಂತೆ ಕುತ್ತಿಗೆ ಅಮುಕಲ್ಪಡುತ್ತಿದ್ದುದರಿಂದ ಅವನ ಸ್ವರವು ಗೊರ ಗೊರ ಗಟ್ಟುತ್ತಿತ್ತು. ಆ ರೀತಿಯಾಗಿ ಹೊರಟ ಕೃಪಾಣಜಿತ್ತುವಿನ ಆರ್ತನಾದವನ್ನು ಕೇಳಿದ ಕುಳ್ಳ ಜನರಾರೂ ಅವನ ಸಹಾಯಕ್ಕಾಗಿ ಧಾವಿಸಲಿಲ್ಲ. ಎಂತಹ ಪರಿಸ್ಥಿತಿಯಲ್ಲಾದರೂ ಆ ಮೃತ್ಯು ವೃಕ್ಷವನ್ನು ಸಮೀಪಿಸುವುದೆಂದರೆ ಯಮನ ಬಾಯೊಳಗೆ ಹೋದಂತೆಯೇ ಎಂದು ಅವರಿಗೆ ಗೊತ್ತು. ಅದರ ಮೇಲೆ ಈ ಕೃಪಾಣಜಿತ್ತುವಿನಿಂದ ಅವರು ಅನೇಕ ಬಗೆಯ ಕಷ್ಟಗಳಿಗೆ ಒಳಗಾಗಿದ್ದರು. ಮೃತ್ಯುವೃಕ್ಷಕ್ಕೆ ಒಳ್ಳೆಯ ಬಲಿ ಸಿಕ್ಕಿತೆಂದು ಕೆಲಮಂದಿ ಕುಳ್ಳರು



ಬಾಯಿಬಿಟ್ಟೇ ಹೇಳಿದರು! ಕೃಪಾಣಜಿತ್ತು ಏರಿ ಬಂದ ಜಲಾಶ್ವವನ್ನು ಮಾತ್ರ ಕುಳ್ಳರಲ್ಲಿ ಕೆಲವರು ಹಿಡಿದು, ಅದು ಓಡಿ ಹೋಗದಂತೆ ನೋಡಿಕೊಂಡರು.

ಇದನ್ನೆಲ್ಲ ನೋಡುತ್ತ ತುಸು ದೂರದಲ್ಲಿ ಬಂಡೆ ಕಲ್ಲುಗಳ ಗುಡ್ಡದ ಮೇಲೆ ನಿಂತುಕೊಂಡಿದ್ದ ಜಯಶೀಲ ಸಿದ್ಧಸಾಧಕರು ಗುಡ್ಡ ಇಳಿದು ಓಡುತ್ತೋಡುತ್ತ ಮೃತ್ಯುವೃಕ್ಷದ ಬಳಿಗೆ ಬಂದರು. ಅಷ್ಟರೊಳಗೆ ಸರ್ಪನಖನು ಜಲಾಶ್ವದ ಮೇಲೆ ಅಲ್ಲಿಗೆ ಬಂದು "ಅರೆರೇ! ನನ್ನ ತಮ್ಮನು ಎಲ್ಲಿರುವನೆಂದು ತಿಳಿದಿರುವ ಒಬ್ಬನೇ ಒಬ್ಬ ಮನುಷ್ಯ, ಸಾಯುತ್ತಿದ್ದಾನಲ್ಲಾ! ಇವನನ್ನು ಸಾಯಲು ಬಿಡಬಾರದು!" ಎನ್ನುತ್ತಾ ತನ್ನ ಕುದುರೆಯನ್ನು ಮೃತ್ಯುವೃಕ್ಷಬಳಿಗೆ ಹಾರಿಸಿ, ಕೃಪಾಣಜಿತ್ತುವನ್ನು ಹಿಡಿದ ಕೊಂಬೆಗಳಲ್ಲಿ ಒಂದನ್ನು ತನ್ನ ಕತ್ತಿಯಿಂದ ಬಲವಾಗಿ ಹೊಡೆದನು, ಬೇಡ ಬೇಡವೆಂದು ಕುಳ್ಳರು ಹಾರಿಹಾರಿ ಕೂಗುತ್ತಿದ್ದರೂ ಸರ್ಪನಖನು ಲಕ್ಷ್ಯಮಾಡಲಿಲ್ಲ.

ಅವನ ಪೆಟ್ಟಿಗೆ ಮೃತ್ಯುವೃಕ್ಷ ತನ್ನ ಕಾಂಡದಿಂ(ದ) ಕೊನೆಯ ಕೊಂಬೆಯವರೆಗೂ ಬಲವಾದ ಗಾಳಿ(ಗೆ) ಓಲಾಡಿದಂತೆ ಓಲಾಡಿತು. ಆದರೊಂದಿಗೆ "ಗೊಂ..." ಎಂಬ ನರಳಿಕೆಯ ಸದ್ದೊಂದು ಭೂಮಿಯಡಿಯಿಂ(ದ) ಹೊರಟಂತೆ ಕೇಳಿಸಿತು.

ಮರುಕ್ಷಣದಲ್ಲಿ ಹೆಬ್ಬೆರಳಿನಷ್ಟು ದಪ್ಪದ ಉದ್ದವಾದ ಕೊಂಬೆಯೊಂದು ಹಾವಿನಂತೆ ಬಳುಕುತ್ತಾ, ತಿರುಗುತ್ತಾ, ನೇತಾಡಿಕೊಂಡು ಬಂದು ಸರ್ಪನಖನ ಕೊರಳನ್ನು ಸುತ್ತಿಕೊಂಡಿತು. "ಹಾ! ಮಾಯಾ ಸರೋವರೇಶ್ವರಾ! ರಕ್ಷಿಸು! ರಕ್ಷಿಸು!" ಎಂದು ಸರ್ಪನಖನು ಬೆಚ್ಚಿ ಬಿದ್ದು ಕಿರುಚಿದನು. ಅವನ ಜಲಾಶ್ವವು ಹೆದರಿ ಮುಂದಕ್ಕೆ ಜಾರಿ ಓಡಿ ಹೋಯಿತು.

ಸರ್ಪನಖನು ಮತ್ತೆ ಅರಚಲೂ ಸಾಧ್ಯವಿಲ್ಲದ ಉರುಳಿನಲ್ಲಿ ನೇತಾಡಿದ ಅದೇ ಕ್ಷಣದಲ್ಲಿ ಜಯಶೀಲ ಸಿದ್ಧಸಾಧಕರು ಅಲ್ಲಿಗೆ ಬಂದುಬಿಟ್ಟರು. ಸಿದ್ಧಸಾಧಕನು ಸರ್ಪನಖನ ಎರಡು ಕಾಲುಗಳನ್ನು ತಟ್ಟನೆ ಹಿಡಿದು ಕೆಳಕ್ಕೆಳೆಯುತ್ತಿರಲು, ಜಯಶೀಲನು ಹಾರಿ ಕತ್ತಿಯ ಒಂದೇಏಟಿಗೆ ಆ ಹಾವಿನಂತಹ ಕೊಂಬೆಯನ್ನು ಕಡಿದು ಹಾಕಿದನು.

ಸರ್ಪನಖನ ತಲೆ ನೆಲಕ್ಕೆ ಬಡಿಯದಂತೆ ಸಿದ್ಧ ಸಾಧಕನು ಅವನನ್ನು ತಲೆ ಕೆಳಗಾಗಿ ಹಿಡಿದುಕೊಂಡು "ಎಲೋ ಬುದ್ಧಿಯಿಲ್ಲದವನೇ! ನಿನ್ನ ದುಡುಕು ಸಾಹಸದಿಂದ ನಮಗೆ ಮಾಯಾ ಸರೋವರಕ್ಕೆ ಹೋಗುವ ದಾರಿ ಹೇಳುವವನೇ ಇಲ್ಲದಂತಾಗುತ್ತಿದ್ದ! ಮಹಾಕಾಲನ ದಯ!" ಎಂದು ಹೀಯಾಳಿಸುತ್ತಾ ಸರ್ಪನಖನನ್ನು ನೆಲದ ಮೇಲೆ ನಿಲ್ಲಿಸಿ ದೂರ ಎಳೆದೊಯ್ದನು.

ಸರ್ಪನಖನು ಎರಡು ಕೈಗಳಿಂದಲೂ ತನ್ನ ಕುತ್ತಿಗೆಯನ್ನು ಹಿಡಿದು ಪೂಸುತ್ತ, ಸೂಸೂ ಎಂದು ದೀರ್ಘ ಶ್ವಾಸಬಿಟ್ಟು, ಮಾತಾಡುವ ಶಕ್ತಿ ತಂದುಕೊಂಡು,

"ಆಹಾ ! ಆಪದ್ಬಾಂಧವನಾದ ಮಾಯಾ ಸರೋವರೇಶ್ವರಾ ! ನನಗೆ ಗೊತ್ತು. ಮಾಯಾ ಸರೋವರೇಶ್ವರನು ತನ್ನ ಸೇವಕರನ್ನು ಆಪತ್ತಿನಿಂದ ತಪ್ಪದೆ ಕಾಪಾಡುತ್ತಾನೆ !" ಎಂದು ಕಣ್ಣು ಮುಚ್ಚಿ ನಮಸ್ಕಾರ ಮಾಡಿದನು.

ಅವನ ಮಾತು ಕೇಳಿ ಸಿದ್ಧಸಾಧಕನು ಕೋಪದಿಂದ ಹಲ್ಲು ಕಡಿಯುತ್ತ, "ಎಲೋ ಸರ್ಪಮೂತಿ ! ಈಗ ನಿನ್ನನ್ನು ಕಾಪಾಡಿದ್ದು ನಿನ್ನ ಯಜಮಾನನೆಂದು ಕೊಂಡೆಯೇನು ? ನಿನ್ನ ಬುದ್ಧಿ ಮೊದಲೇ ಸತ್ತುಹಾಗಿದೆ." ಎಂದನು.

"ಅದಕ್ಕೆ ಸಂದೇಹವೇನು ? ಸ್ವಯಂ ಅವನು ಬಾರದಿದ್ದರೇನಾಯಿತು ? ನಿಮ್ಮಿಬ್ಬರ ಶರೀರದಲ್ಲಿ ಆವೇಶಿಸಿ ನನ್ನನ್ನು ರಕ್ಷಿಸಿದನಲ್ಲ !" ಎಂದು ಸರ್ಪನಖನು ತಲೆ ತಿರುಗಿಸಿ ಮೃತ್ಯುವೃಕ್ಷದ ಕಡೆಗೆ ನೋಡಿದನು.

ಕೊಂಬೆಯಲ್ಲಿ ಅಲುಗಾಡುತ್ತಿರುವ ಕೃಪಾಣಜಿತ್ತುವನ್ನು ಕಂಡು, "ಅಯ್ಯಯ್ಯೊ ! ನನ್ನ ತಮ್ಮ ಸರ್ಪಸ್ವರನ ಗುಟ್ಟು ತಿಳಿದಿರುವವನು ಸತ್ತು ಹೋಗುತ್ತಾನೆ! ಅವನನ್ನು ಸಾಯಲು ಬಿಡಬಾರದು !" ಎನ್ನುತ್ತಾ ಮತ್ತೆ ವೃಕ್ಷದ ಕಡೆಗೆ ಓಡಲು ಪ್ರಯತ್ನಿಸಲು, "ನಿಲ್ಲು" ಎಂದು ಜಯಶೀಲನು ಅವನ ಭುಜ ಹಿಡಿದು ಹಿಂದಕ್ಕೆಳೆದನು.

"ಅವನನ್ನೂ ಬೇಕಾದರೆ ನಿನ್ನ ಮಾಯಾ ಸರೋವರೇಶ್ವರನೇ ಕಾಪಾಡುತ್ತಾನೆ ! ಬುದ್ಧಿಗೆಟ್ಟ ಆ ಮಾಯಾ ಸರೋವರೇಶ್ವರ ನಿನ್ನ ಮೇಲೆಯೇ ಆವೇಶಿತನಾದನೆಂದು ಕಾಣುತ್ತೆ. ಅದಕ್ಕೇ ಸಾಯಲಿಕ್ಕೆ ಅವಸರಪಟ್ಟು ಓಡುತ್ತೀಯಾ !" ಎಂದು ಹೀಯಾಳಿಸಿದ ಸಿದ್ಧಸಾಧಕ,

ಜಯಶೀಲನು ಅಲ್ಲಿ ಸೇರಿದ ಕುಳ್ಳರನ್ನು ನೋಡಿ, "ನಿಮ್ಮ ಸೇನಾಧಿಪತಿ ಎಲ್ಲಿ ? ಇವನಿಗೆ ಜೀವದ ಭಯದಲ್ಲಿ ಬುದ್ಧಿ ಕೆಟ್ಟಿದೆ. ಇವನನ್ನು ನದಿಯಲ್ಲಿ



ನಾಲ್ಕಾರುಬಾರಿ ಮುಣುಗಿಸಿ, ಬಿಸಿಲಿನಲ್ಲಿ ಚೆನ್ನಾಗಿ ಒಣಗಹಾಕಿರಿ" ಎಂದನು.

ಕೂಡಲೇ ಕುಳ್ಳರೂ, ಅವರ ಸೇನಾಧಿಪತಿಯೂ ಸರ್ಪನಖನನ್ನು ಹಿಡಿದುಕೊಂಡರು. ಸರ್ಪನಖನು ಗಟ್ಟಿಯಾಗಿ ಕೂಗಿ, "ದೂರ ಹೋಗಿ. ನನಗೇನೂ ಬುದ್ಧಿ ಕೆಡಲಿಲ್ಲ, ಎಲ್ಲವೂ ತಿಳಿಯುತ್ತಾ ಇದೆ. ನೀವೆಲ್ಲಾ ಕುಳ್ಳ ಜನರು. ಇವರು ಜಯಶೀಲ, ಅವರು ಕಾಪಾಲಿಕರು. ಇಲ್ಲಿ ಮುಂದೆ ಕಾಣುವುದು ಮೊಸಳೆಗಳ ನದಿ ! ನನಗೋ ಬುದ್ಧಿ ಕೆಟ್ಟಿದ್ದು ?" ಎನ್ನುತ್ತಾ ಕೈಕಾಲು ಜಾಡಿಸಿ ಒದರಾಡಿದನು.

"ಎಲೋ ನೀರುಮನಷ್ಯಾ ! ಬಾಯಿ ಮುಚ್ಚು ! ಸುಮ್ಮನೆ ಕಿರುಚುತ್ತಾ ಇದ್ದರೆ ನಿನ್ನನ್ನು ಮೊಸಳೆಗಳ ಬಾಯಿಗೇ ಹಾಕಿಬಿಡುತ್ತೇವೆ" ಎನ್ನುತ್ತಾ ಕುಳ್ಳರು ಗುಂಪುಗೂಡಿ ಮುತ್ತಿ ಅವನನ್ನು ಎಳೆದುಕೊಂಡು ನದಿಯಕಡೆ ಸಾಗಿದರು. ಆ ಸಮಯದಲ್ಲಿ ಅಲ್ಲಿಗೆ ಇನ್ನೊಂದು ಕಡೆಯಿಂದ ರಥದ ಮೇಲೆ ಕುಳಿತು



ಕೊಂಡು ಕುಳ್ಳರ ರಾಣಿ ಬಂದಳು. ಅವಳ ಶತ್ರುಗಳಾದ ಗಡೇಗುಡ್ಡನೂ ಅವನ ಅನುಚರರೂ ಕೈಕಟ್ಟಿಕೊಂಡು ತಲೆತಗ್ಗಿಸಿ ರಥದ ಹಿಂದೆಯೇ ಅಲ್ಲಿಗೆ ಬಂದರು. ಅವರ ಸ್ಥಿತಿ ನೋಡಿದರೆ ರಾಣಿಯ ಕಡೆಯವರಿಂದ ಸೋತು ಶರಣಾದಂತಿದ್ದರು. ಅದಕ್ಕೆ ತಕ್ಕಂತೆ ರಾಣಿಯ ಮುಖ ಗೆಲುವಿನಿಂದ ಕಳೆಗಟ್ಟಿದ್ದಿತು.

ರಾಣಿಯನ್ನು ನೋಡಿ ಜಯಶೀಲನು, "ನೋಡಿದೆಯಾ ಕುಬ್ಜರಾಣೀ, ನಿಮ್ಮೊಳಗಿನ ಜಾತಿಕಲಹವನ್ನು ತನ್ನ ಲಾಭಕ್ಕೆ ಉಪಯೋಗಿಸಲು ನೋಡಿದ ಕೃಪಾಣಜಿತ್ತುವೆಂಬ ಆ ದುಷ್ಟನನ್ನು ಮೃತ್ಯು ವೃಕ್ಷ ಬಲಿತೆಗೆದುಕೊಳ್ಳುತ್ತಿದೆ. ಇನ್ನು ನಿಮ್ಮೊಳಗಿನ ಜಗಳ ಬಿಟ್ಟು ಹಾಯಾಗಿ ಬದುಕಿಕೊಂಡಿರಿ. ನಮ್ಮ ದಾರಿ ಹಿಡಿದು ನಾವು ಹೋಗುತ್ತೇವೆ. ಹೋಗುವಮೊದಲು ನಮ್ಮ ನೆನಪಿರುವಂತೆ ಒಂದು ಮುಖ್ಯ ಕೆಲಸ ಮಾಡುತ್ತೇವೆ. ಅದೇನೆಂದರೆ, ಈ ಭಯಂಕರ ಮೃತ್ಯು ವೃಕ್ಷವನ್ನು ಅಗ್ನಿಗೆ ಆಹುತಿ ಮಾಡಬೇಕೆಂದಿದ್ದೇವೆ. ಇದು ಏನೂ ತಿಳಿಯದವರನ್ನು ಅಕಸ್ಮಾತ್ತಾಗಿ ನುಂಗಿಬಿಡುತ್ತದೆ. ಇಂಥ ಅಪಾಯದ ವೃಕ್ಷ ಇರಲೇಬಾರದು" ಎಂದನು.

"ಅಯ್ಯಗಳಿರಾ. ಹಾಗೇ ಮಾಡಿಬಿಡಿ. ನಿಮ್ಮ ಸಹಾಯಕ್ಕೆ ತುಂಬಾ ಕೃತಜ್ಞರಾಗಿದ್ದೇವೆ. ಇನ್ನೊಂದು ಭಯ ನಮಗೆ ಇಲ್ಲೆಲ್ಲಿಯೋ ಇರಬೇಕು. ಆ ಭಯಂಕರ ನರವಾನರದ ಯಜಮಾನ ಸಾಯುತ್ತಿದ್ದರೂ, ಆ ವಾನರ ಇಲ್ಲೆಲ್ಲೋ ತಿರುಗಾಡಿಕೊಂಡಿದೆ. ರಾತ್ರೀ ಹಗಲೂ ಅದರ ಭಯ ನಮಗೆ ತಪ್ಪದಂತಾಗಿದೆ" ಎಂದಳು ಕುಬ್ಜರಾಣಿ.

ಜಯಶೀಲನು ಕನಿಕರದಿಂದ ಅವಳನ್ನು ನೋಡಿ, "ಜಲಾಶ್ವದ ಮೇಲೆ ಬಂದ ಸರ್ಪನಖನೆಂಬುವನೊಬ್ಬ ನಮಗೆ ಸಿಕ್ಕಿದ್ದಾನೆ. ಅವನ ತಮ್ಮನನ್ನು ಆ ನರವಾನರ ಎತ್ತಿಕೊಂಡು ಹೋಗಿದೆ. ಸರ್ಪನಖನ ಸಹಾಯ ನಮಗೆ ಅಗತ್ಯವಾದುದರಿಂದ, ಅವನ ತಮ್ಮನನ್ನು ಹುಡುಕುವ ಪ್ರಯತ್ನವನ್ನೂ ನಾವು ಮಾಡಬೇಕಾಗಿದೆ, ಆಗ ಆ ಭಯಂಕರ ವಾನರ ನಮ್ಮ ಕೈಗೆ ಸಿಗಬಹುದು. ಸಿಕ್ಕಿದರೆ ಖಂಡಿತವಾಗಿ ಕೊಂದುಬಿಡುತ್ತೇವೆ. ಆದುದರಿಂದ ಅದರ ಭಯವನ್ನು ನೀವಾರೂ ಹಚ್ಚಿಕೊಳ್ಳಬೇಕಾಗಿಲ್ಲ," ಎಂದನು.

"ಊಹುಂ, ಅದನ್ನು ಕೊಲ್ಲುವುದಲ್ಲ. ಅದು ನಮಗೆ ಸಿಕ್ಕಿದರೆ ನಾನು ಅದಕ್ಕೆ ತಕ್ಕ ಶಿಕ್ಷಣ ಕೊಟ್ಟು ನನಗೆ ವಾಹನವನ್ನಾಗಿ ಮಾಡಿಬಿಡುತ್ತೇನೆ. ಸುಮ್ಮನೆ ಕೊಲ್ಲುವುದೇಕೆ?" ಎನ್ನುತ್ತ ಸಿದ್ಧಸಾಧಕನು ಸುತ್ತಲೂ ನೋಡಿದನು.

ಜಯಶೀಲನು ಹೇಳಿದಂತೆ ನಾಲ್ಕೈದು ಮಂದಿ ಕುಳ್ಳರು ಭಗಭಗನೆ ಉರಿಯುವ ದೊಂದಿಗಳನ್ನು ಹಿಡಿದುಕೊಂಡು ಮುಂದೆ ಬಂದರು. ಸಿದ್ಧಸಾಧಕನು ಅವರಲ್ಲಿ ಒಬ್ಬನ ಕೈಯಿಂದ ದೊಂದಿಯನ್ನು ತೆಗೆದುಕೊಂಡು, "ಈ ಮೃತ್ಯು ವೃಕ್ಷ ಪ್ರಾಣಿಗಳನ್ನು ತಿಂದೇ ಬದುಕುವುದರಿಂದ ಮರದ ತುಂಬ ಕೊಬ್ಬು ಪದಾರ್ಥ

ಗಳು ಇದ್ದೀತು. ದೂರದಲ್ಲಿದ್ದು ಈ ಉರಿಯುವ ದೊಂದಿಯನ್ನು ಅದರ ಮೇಲೆ ಬಿಸುಟು ಏನಾಗುವು ದೆಂದು ನೋಡೋಣ" ಎನ್ನುತ್ತ ಉರಿಯುವ ದೊಂದಿಯನ್ನು ಅದರ ಮೇಲೆ ಬಿಸುಡಲು ಸ್ವಲ್ಪ ಹಿಂದಕ್ಕೆ ಹೋದನು.

ಆಗ ಹಿಂದಿನಿಂದ "ನಿಲ್ಲು! ಎಲೋ ಪಾಪಿಯೇ! ಚಿರಂಜೀವಿಯಾದ ಮೃತ್ಯು ವೃಕ್ಷವನ್ನೇ ಬೂದಿ ಮಾಡಲು ನೋಡುವಿಯಾ! ಅದು ನಿನ್ನಿಂದಾಗದು. ಸುಮ್ಮನೆ ಅದಕ್ಕೆ ತೊಂದರೆ ಕೊಟ್ಟು ನರಕಕ್ಕೆ ಬೀಳ ಬೇಡ." ಎಂಬ ಕೂಗು ಕೇಳಿಸಿತು.

ಜಯಶೀಲ ಸಿದ್ಧಸಾಧಕರು ಹಾಗೆ ಕೂಗಿದವನು ಯಾರೆಂದು ನೋಡಿದರು. ಅವನೂ ಒಬ್ಬ ಕುಳ್ಳ ಜಾತಿಯವನೇ: ಆದರೂ ಅಪರಿಗಿಂತ ಎರಡಂಗುಲ ಹೆಚ್ಚು ಉದ್ದವಿದ್ದ. ಅವನ ಎದೆಯಲ್ಲಿ ಮಣಿಮಾಲೆಗ ಳಿದ್ದುವು. ಭುಜದಲ್ಲಿ ಕೊಡಲಿ ತಗಲಿಸಿಕೊಂಡಿದ್ದ. ತಲೆಗೂದಲನ್ನು ಬಿಚ್ಚಿ ಹಾಕಿಕೊಂಡು ಕುಪ್ಪಳಿಸುವವ ನಂತೆ ಓಡುತ್ತಾ, ಬಂದು ಜಯಶೀಲ ಸಿದ್ಧಸಾಧಕರ ಮುಂದೆ ನಿಂತನು. ಅಷ್ಟು ಮಾತು ಹೇಳಿದುದರಿಂದ ಬಹಳ ಆಯಾಸವಾಗಿ ತೇಕುತ್ತಿದ್ದನು.

ಸಿದ್ಧಸಾಧಕನು ಶೂಲದಿಂದ ಅವನನ್ನು ಮೃದು ವಾಗಿ ತಟ್ಟಿ ನೋಡಿ, "ಯಾರೋ ನೀನು? ಮಹಾ ಕಾಳನ ಭಕ್ತನಾದ ನನ್ನನ್ನೇ ಪಾಪೀ ಎಂದು ಕರೆಯು ವಷ್ಟು ಸಾಹಸ ಹೇಗೆ ಬಂತು ನಿನಗೆ?" ಎಂದು ಕೇಳಿದನು.

ಆ ಮಣಿಮಾಲೆಯ ಕುಳ್ಳ ಸಿದ್ಧಸಾಧಕನ ಮುಖ ವನ್ನು ತೀಕ್ಷ್ಣವಾಗಿ ನೋಡಿ, ಸ್ವಲ್ಪವೂ ಹೆದರದೆ ಕೈಗಳನ್ನಾಡಿಸುತ್ತ, "ನಾನು ಈ ಚಿರಂಜೀವೀ ಮೃತ್ಯು ವೃಕ್ಷದ ಪೂಜಾರಿ. ನೀವು ಪುಂಡುತನದಿಂದ ಈ ಮರದ ಕೊಂಬೆಯ ಮೇಲೆ ಕತ್ತಿಯಿಂದ ಹೊಡೆದಾಗ, ಅದು ನರಳಿದ ಶಬ್ದ ನಿಮಗೆ ಕೇಳಲಿಲ್ಲವೆ? ನಿಮ್ಮ ಕಿವಿ ಕೆಪ್ಪೇ?" ಎಂದನು.



ಅವನ ಮಾತು ಕೇಳಿ ಜಯಶೀಲನು ಅನುಮಾನ ದಿಂದ, "ಎಲೋ, ಠಕ್ಕಿನ ಪೂಜಾರೀ! ಆ ಮರದ ಹಿಂದಿನ ಕಲ್ಲಿನಡಿಯಲ್ಲಿದ್ದು ಹಾಗೆ ಗೂಂ ಅಂತ ಕೂಗಿ ದವನು ನೀನುತಾನೇ? ನಿಜ ಹೇಳು" ಎನ್ನುತ್ತಾ ಅವನ ಕುತ್ತಿಗೆ ಹಿಡಿದನು.

ಕುಳ್ಳ ಪೂಜಾರಿ ಸ್ವಲ್ಪವೂ ಹೆದರದೆ, "ಹೌದು. ಹಾಗೆ ಕೂಗಿದವನು ನಾನೇ. ಹಾಗೆ ಕೂಗಬೇಕೆಂದು ಪ್ರೇರೇಪಿಸಿದ್ದು ಆ ವೃಕ್ಷವನ್ನು ಆವಾಹಿಸಿರುವ ಮೃತ್ಯು ದೇವಿ. ನಾನು ಆಕೆಯ ಪೂಜಾರಿ, ಭಕ್ತ, ಕೇವಲ ಸೇವಕ. ಆಕೆಯ ಪ್ರೇರಣೆಯಿಲ್ಲದೆ ನನ್ನದೊಂದು ಕೂದಲೂ ಅಲುಗಾಡದು!" ಎಂದನು.

ಇಂತಹ ಮೊಂಡನನ್ನು ಏನು ಮಾಡುವುದೆಂಬಂತೆ ಜಯಶೀಲನು ಸಿದ್ಧಸಾಧಕನನ್ನು ನೋಡಿದನು. ಸಾಧಕನು ಕುಳ್ಳ ಪೂಜಾರಿಯ ಭುಜದಲ್ಲಿದ್ದ ಕೊಡಲಿ ಯನ್ನು ಎತ್ತಿಕೊಂಡು, "ಎಲೋ ಮೃತ್ಯುವಿನ ಅರ್ಚಕಾ! ನಿನ್ನ ಮೃತ್ಯುದೇವತೆಗೆ ನಾವೇ ಮೃತ್ಯು



ವೆಂಬುದನ್ನು ಈಗ ತೋರಿಸುತ್ತೇವೆ. ಆಮೇಲೆ ನಿನ್ನ ಉದ್ಯೋಗವೂ ಹೋದಹಾಗೆಯೇ. ನಿನ್ನ ಈ ಕೊಡಲಿ ಚೆನ್ನಾಗಿದೆ. ಇದರಿಂದ ಕಟ್ಟಿಗೆ ಕಡಿದು ಮಾರಾಟ ಮಾಡುತ್ತಾ ಬದುಕು. ಏನೂ ತಿಳಿಯದ ಪ್ರಾಣಿಗಳನ್ನು ಬಲಿಗೊಳ್ಳುವ ಈ ಮೃತ್ಯು ವೃಕ್ಷ ಸುಟ್ಟು ಹೋಗಲೇ ಬೇಕು. ಅದಕ್ಕೆ ಸಾಧ್ಯವಿದ್ದರೆ ಈ ಬೆಂಕಿಯನ್ನು ನಂದಿಸಿ ಹಾಕಲಿ, ನೋಡೋಣ!" ಎಂದು ಉರಿಯುವ ದೊಂದಿಯನ್ನು ಬೀಸಲು ಎತ್ತಿದನು. ಕುಳ್ಳ ಪೂಜಾರಿ ಹಾರಿ ಅವನ ಕೈಯನ್ನು ಗಟ್ಟಿಯಾಗಿ ಹಿಡಿದನು. "ದುಷ್ಟನೇ! ಮಹಾಕಾಳನ ಭಕ್ತನನ್ನೇ ತಡೆಯುವಷ್ಟು ಧೈರ್ಯವೇ ನಿನಗೆ?" ಎನ್ನುತ್ತಾ ಸಿದ್ಧಸಾಧಕನು ಕುಳ್ಳ ಪೂಜಾರಿಯನ್ನು ದೂಡಿದನು.

ಕುಳ್ಳ ಪೂಜಾರಿ ಅಷ್ಟು ದೂರ ಹೋಗಿ ಬಿದ್ದು ಎದ್ದು ಬರುತ್ತ, "ಅಯ್ಯಾ, ಈ ಮೃತ್ಯು ವೃಕ್ಷ ದುಷ್ಟರನ್ನೂ ಮೋಸಗಾರರನ್ನೂ ಹೊರತು ಧರ್ಮಮಾರ್ಗದಲ್ಲಿ ನಡೆಯುವವರನ್ನು ಕೊಲ್ಲುವುದಿಲ್ಲ. ಇಂತಹ ಅಪೂರ್ವ ಯಮಧರ್ಮ ದೇವರ ಮೃತ್ಯು ವೃಕ್ಷವನ್ನು ಏನೂ ಮಾಡಬೇಡಿ!" ಎಂದು ಕೂಗಿದನು.

ಜಯಶೀಲನು ಅವನನ್ನು ಹಿಡಿದು "ಹಾಗೇನು? ಒಳ್ಳೆಯದು, ನೀನು ಧರ್ಮಮಾರ್ಗದಲ್ಲಿ ನಡೆಯುವ ಒಳ್ಳೆಯವನೇನು? ನಿನಗೆ ಮೋಸಮಾಡಲು ಬರುವುದಿಲ್ಲತಾನೇ?" ಎಂದು ಕೇಳಲು, "ಅದಕ್ಕೆ ಸಂದೇಹವೇ?" ಎಂದ ಕುಳ್ಳ ಪೂಜಾರಿ.

"ಸರಿ ನೋಡೋಣ" ಎಂದು ಜಯಶೀಲನು ಅವನನ್ನು ಎತ್ತಿ ಆ ಮೃತ್ಯು ವೃಕ್ಷದ ಕಡೆಗೆ ಬೀಸಲು ಹವಣಿಸಿದನು. "ಅಯ್ಯಯ್ಯೋ! ಬಿಡಿ! ಬಿಡಿ! ಅಂಥಾ ಸಾವು ಸಾಯಲಾರೆನಯ್ಯೋ! ಇಲ್ಲಾ, ಬಿಡಿ ಬಿಡೀ!" ಎಂದು ನಡುಗುತ್ತ ಚೀರ ತೊಡಗಿದ ಕುಳ್ಳ ಪೂಜಾರಿ.

ಜಯಶೀಲನು ನಗುತ್ತ ಅವನನ್ನು ಕೆಳಗಿಳಿಸಿ, "ಗೊತ್ತಾಯಿತು ಬಿಡು. ಈ ಮೃತ್ಯು ವೃಕ್ಷದ ಹೆಸರಿನಲ್ಲಿ ರಕ್ಷಿಸುವೆನೆಂದು ಪಾಪದವರನ್ನು ನಂಬಿಸಿ ಪೂಜಾರಿಯಾಗಿ ಬದುಕಲು ಇನ್ನು ಸಾಧ್ಯವಿಲ್ಲ. ಹೋಗಾಚೆ." ಎಂದು ಹೇಳಿ, "ಸಿದ್ಧಸಾಧಕಾ, ಇನ್ನು ಇಲ್ಲಿ ಸುಮ್ಮನೆ ಕಾಲಹರಣ ಮಾಡುವುದು ಸರಿಯಲ್ಲ. ಮೃತ್ಯು ವೃಕ್ಷಕ್ಕೆ ಬೆಂಕಿ ಹಚ್ಚಿಬಿಡು" ಎಂದನು.

ಸಿದ್ಧಸಾಧಕನು ಕುಳ್ಳರ ಕೈಗಳಿಂದ ಉರಿಯುವ ದೊಂದಿಯನ್ನು ತೆಗೆದುಕೊಂಡು ಆ ಮರದ ಕಾಂಡದ ಕಡೆಗೂ, ಕೊಂಬೆಗಳ ಕಡೆಗೂ ಬಿಸುಟನು. ಎಣ್ಣೆಯಲ್ಲಿ ನೆನೆದ ದೊಂದಿಯ ಬೆಂಕಿ ವೃಕ್ಷಕ್ಕೂ ಹಿಡಿಯಿತು. ಉರಿಯೂ ಹೊಗೆಯೂ ಒಂದು ಬಗೆಯ ದುರ್ವಾಸನೆಯೂ ಹೊರಟಿತು. ಕಡೆಗೆ ಇಡಿಯ ಮರವೂ ಧಗಧಗಿಸಿ ಉರಿಯ ತೊಡಗಿತು.

ಆ ಮರದ ಕೊಂಬೆಯಲ್ಲಿ ನೇತಾಡುತಿದ್ದ ಕೃಪಾಣ ಜಿತ್ತುವಿನ ಶವವೂ ಸುಡುವುದನ್ನು ನೋಡುತ್ತ ಜಯಶೀಲರು ನಿಟ್ಟುಸಿರು ಬಿಟ್ಟು, "ಇವನು ಅಮರಾವತೀ ನಗರದ ರಾಜನ ಅಶ್ವದಳನಾಯಕ. ಒಂದು

ಜೂಜಿನ ಗೃಹದಲ್ಲಿ ಇವನಿಗೂ ನನಗೂ ಬಂದ ಜಗಳದ ಮೂಲಕವಾಗಿ ನಾನು ಹೀಗೆ ಅರಣ್ಯದ ಪಾಲಾಗಬೇಕಾಯಿತು. ದುಷ್ಟರಿಗೆ ಒಳ್ಳೆಯ ಸಾವು ದುರ್ಲಭವೇ ಎಂಬುದನ್ನು ಈ ಮೃತ್ಯುವೃಕ್ಷ ರುಜುಪಡಿಸಿತು ! ಅದೇ ಜೂಜಿನ ಗೃಹದಲ್ಲಿದ್ದ ನನ್ನ ಮಿತ್ರ ದೇವಶರ್ಮನೂ ಸಹಾ ದೇಶಾಂತರಕ್ಕೆ ಹೋಗಿದ್ದಾನೆ. ಎಲ್ಲಿ ಅಲೆದಾಡುತ್ತಿದ್ದಾನೋ ಏನೋ !" ಎಂದು ನೆನೆಸಿಕೊಂಡು ಹೇಳಿದನು.

"ಜಯಶೀಲಾ, ನಾವು ಮಾಯಾ ಸರೋವರವನ್ನು ಸೇರಿ, ಹಿರಣ್ಯಪುರದ ರಾಜನ ಕುಮಾರ ಸುವಾರಿಯರನ್ನು ಶೋಧಮಾಡುವುದರೊಳಗೆ ಆ ನಿನ್ನ ಸ್ನೇಹಿತನೂ ನಮಗೆ ಸಿಕ್ಕಬಹುದು. ತಪ್ಪಿ ಹೋದವರು ಮಹಾನಗರಗಳಲ್ಲಿದ್ದರೆ ಹಿಡಿಯುವುದು ಕಷ್ಟ. ಕಾಡುಗಳಲ್ಲಿದ್ದರೆ ಹುಡುಕುವುದು ಸುಲಭ" ಎಂದ ಸಿದ್ಧಸಾಧಕ.

"ಹೌದು, ಸಿದ್ಧಸಾಧಕಾ. ನಿನ್ನ ಮಾತು ಕೇಳುವಾಗ, ಅವನು ಕಾಡಿನಲ್ಲೇ ಅಲೆದುಕೊಂಡಿರಬಹುದೆನಿಸುತ್ತದೆ. ಆದರೆ ಎಷ್ಟು ಕಾಡುಗಳು ಎಲ್ಲಿವೆಯೋ ? ನಾವು ಸುತ್ತಾಡುವುದೆಲ್ಲೋ ? ನಮಗೆ ಬೇಕಾದವರಿರುವುದೆಲ್ಲೋ ? ಹುಂ, ಸರಿ ಸರಿ. ಹೊರಡೋಣ, ಎಲ್ಲಿ, ಸರ್ಪನಖಿನೆಲ್ಲೀ ?" ಎಂದು ಜಯಶೀಲನು ಸುತ್ತಲೂ ನೋಡಿದನು.

ಸರ್ಪನಖಿನು ಒಂದು ಜಲಾಶ್ವವನ್ನೇರಿಕೊಂಡು, ದೂರದಲ್ಲಿರುವ ಗುಡ್ಡಗಳ ಕಡೆಗೆ ನೋಡುತ್ತ ಏನೋ ಆಲೋಚಿಸಿಕೊಂಡಿದ್ದನು. ಜಯಶೀಲನು ಅಲ್ಲಿರುವ ಒಡನೇ ಜಲಾಶ್ವವನ್ನು ಸಿದ್ಧಸಾಧಕನಿಗೆ ತೋರಿಸಿ, "ಸಾಧಕಾ, ಆ ನೀರುಕುದುರೆಯನ್ನು ಸುಮ್ಮನೆ ಇಲ್ಲಿ ಬಿಡುವುದೇಕೆ ? ಕುಳ್ಳರಿಗಂತೂ ಆ ಕುದುರೆಯಿಂದ ಏನೂ ಪ್ರಯೋಜನವಿಲ್ಲ. ನಮ್ಮಲ್ಲಿ ಒಬ್ಬರು ಅದನ್ನು ಉಪಯೋಗಿಸಿಕೊಳ್ಳಬಹುದಲ್ಲ ?" ಎಂದನು.

"ಜಯಶೀಲಾ. ನೀನೇ ಆ ಜಲಾಶ್ವದ ಮೇಲೆ



ಹತ್ತಬೇಕು. ನಾನು ಕಾಲುನಡಿಗೆಯಲ್ಲೇ ನಿನ್ನನ್ನೂ ಅನುಸರಿಸಬಲ್ಲೆ. ಎಲ್ಲಿಯಾದರೂ ಆ ಭಯಂಕರ ಸರವಾಸರವು ನನ್ನ ಕಣ್ಣಿಗೆ ಬಿದ್ದರೆ, ಅದನ್ನೇ ಹಿಡಿದು ಪಳಗಿಸಿ ನನ್ನ ವಾಹನವಾಗಿ ಮಾಡಿಕೊಳ್ಳುತ್ತೇನೆ. ಆಮೇಲೆ ನನ್ನ ಬಲವು ಇಮ್ಮಡಿಯಾದ ಹಾಗೆಯೇ !" ಎಂದ ಸಿದ್ಧಸಾಧಕ.

"ಅಂತಹ ಕಾರ್ಯಕ್ಕೆ ನೀನು ಸಮರ್ಥನೇ ನಿಜ, ಹೊರಡಿನ್ನು" ಎಂದು ಜಯಶೀಲನು ಅಲ್ಲಿದ್ದ ಕುಬ್ಜರಾಣಿ ಮುಂತಾದ ಎಲ್ಲಾ ಕುಳ್ಳರ ಸಮುದಾಯವನ್ನೂ ನೋಡಿ, "ಇನ್ನು ನಿಮಗೇನೂ ಭಯವಿಲ್ಲ. ನಿಮ್ಮ ಪ್ರಬಲ ಶತ್ರು ಕೃಪಾಣಜಿತ್ತು ನಿಮ್ಮ ಕಣ್ಣೆದಿರೇ ಸತ್ತುಹೋದನಲ್ಲ ? ಇನ್ನು ನೆಮ್ಮದಿಯಾಗಿರಿ. ನಮ್ಮ ದಾರಿ ಹಿಡಿದು ನಾವು ಹೋಗುತ್ತೇವೆ. ನಿಮ್ಮನ್ನೆಂದೂ ಮರೆಯಲಾರೆವು." ಎಂದನು.

ಜಲಾಶ್ವದ ಮೇಲೆ ಜಯಶೀಲನು ಕುಳಿತು ಮುಂದೆ ಹೊರಟನು. ಅವನ ಹಿಂದೆ ಸಿದ್ಧಸಾಧಕನೂ ಹೊರ

ಟನು. ಕಳ್ಳರ ತಂಡವು ದಿಕ್ಕುಗಳು ಗಡಚಿಕ್ಕುವ ಹಾಗೆ ಅವರಿಗೂ ತಮ್ಮ ರಾಣಿಗೂ ಜಯಜಯಕಾರ ಮಾಡಿದರು. ಆ ಶಬ್ದವನ್ನು ಕೇಳಿ ದೂರದಲ್ಲಿದ್ದ ಸರ್ಪನಖನು ಜಯಶೀಲ ಸಿದ್ಧಸಾಧಕರನ್ನು ಕೂಗಿ ಕರೆಯುತ್ತ, "ಸ್ವಲ್ಪ ನಿಲ್ಲಿರೋಯ್. ನನ್ನ ತಮ್ಮ ನನ್ನು ಹುಡುಕಬೇಕಲ್ಲಾ ? ನೀವೂ ಸಹಾಯ ಮಾಡು ವುದಾಗಿ ಹೇಳಿದ್ದೀರಿ. ನಿಲ್ಲಿ, ನಾನೂ ಬರುತ್ತೇನೆ" ಎಂದು ತನ್ನ ಕುದುರೆಯನ್ನು ವೇಗದಿಂದ ಅವರ ಕಡೆಗೆ ಓಡಿಸಿಕೊಂಡು ಬಂದನು.


ಜಯಶೀಲನು ಅವನನ್ನು ಒಂದುಸಾರಿ-ಪರೀಕ್ಷಿಸಿ ನೋಡಿ, "ಕಳ್ಳರು ಮಾಡಿಸಿದ ನದೀಸ್ನಾನದಿಂದ ನಿನ್ನ ಬುದ್ಧಿ ತಿಳಿಯಾಗಿದೆ. ಇನ್ನು ನಿನ್ನ ದಾರಿ ಹಿಡಿದು ನೀನು ಹೋಗಬಹುದು. ನಿನ್ನಂಥ ಅಲ್ಪನ ಪರೀಕ್ಷೆಯಿಂದ ನಿನ್ನ ಯಜಮಾನ ಎಷ್ಟರಮಟ್ಟಿನವ ನೆಂದೂ ಗೊತ್ತಾಯಿತು. ನಾವಿಬ್ಬರೂ ನಿನ್ನ ಮಾಯಾ ಸರೋವರವು ಎಲ್ಲಿರುವುದೆಂದು ತಿಳಿದು ಕೊಂಡು, ಅದರ ಯಜಮಾನನನ್ನು ತುಂಡು ತುಂಡಾಗಿ ಕತ್ತರಿಸಿ, ನೀರಿನ ಹಕ್ಕಿಗಳಿಗೂ, ಪ್ರಾಣಿ ಗಳೂ ಆಹಾರವಾಗಿ ನಿವೇದಿಸಿ ಬಿಡುತ್ತೇವೆ," ಎಂದನು.


ಆ ಮಾತು ಕೇಳಿ ಸರ್ಪನಖನ ಮುಖವು ಅನಿಷ್ಟ ಬಡಿದಂತೆ ಕೊಂಕಿತು. ಅವನೇನೂ ಮಾತಾಡದೆ ಅವ ರೊಂದಿಗೆ ಹೋದನು. ಸುಮಾರು ಅರ್ಧಗಂಟೆ ಕಾಡಿನಲ್ಲಿ ಪ್ರಯಾಣಮಾಡಿ, ಹಿಂದೆ ಜಯಶೀಲನೂ ಸಿದ್ಧಸಾಧಕನೂ ಜಲಪಾತದಲ್ಲಿ ಬಿದ್ದ ಪ್ರಾಂತವನ್ನು ತಲಪಿದರು. ಅಕಸ್ಮಾತ್ತಾಗಿ ಪರಿಚಯದ ಜಾಗೆಗೆ ಬಂದುದನ್ನು ನೋಡಿ ಅವರಿಗೆ ಆಶ್ಚರ್ಯ ವಾಯಿತು.

ಜಯಶೀಲನು ಹಿಂದೆ ಆ ಸ್ಥಳದಲ್ಲಿ ತಮಗಾದ ಅನು ಭವಗಳನ್ನು ನೆನೆಸಿ ಸರ್ಪನಖನೊಂದಿಗೆ ಏನೋ ಹೇಳಬೇಕೆಂದು ನೆನೆದನು.

ಆಗ ಸರ್ಪನಖನು ತುಸು ದೂರದಲ್ಲಿರುವ ಗುಡ್ಡದ ಗುಹೆಯೊಳಗೆ ಏನೋ ಇರುವುದನ್ನು ತೋರಿಸುತ್ತ "ಅಲ್ಲಿ ಆ ಗುಹೆಯೊಳಗೆ ಇರುವುದು ನರವಾನರವಲ್ಲವೆ ?" ಎಂದನು.

"ಹೌದು ! ಅದೇ ನರವಾನರ !" ಎನ್ನುತ್ತ ಜಯಶೀಲನು ಅತ್ಯಾಶ್ಚರ್ಯದಿಂದ ಸಿದ್ಧಸಾಧಕನನ್ನು ನೋಡಿದನು. ಅಷ್ಟರಲ್ಲಿ ಇವರನ್ನು ನೋಡಿದ ನರ ವಾನರವು ಭಯಂಕರವಾಗಿ ಗರ್ಜಿಸುತ್ತ ಗುಹೆಯಿಂದ ಹೊರಗೆ ಧುಮುಕಿತು. ಮರುಕ್ಷಣದಲ್ಲಿ ದೊಡ್ಡ ದೊಂದು ಘೀಂಕಾರ ಮಾಡುತ್ತ ಮಕರಕೇತುವಿನ ವಾಹನವಾದ ಗಜಜಲಗ್ರಹವು ಅದೇ ಗುಹೆಯಿಂದ ಹೊರಟು ಬಂದು ನರವಾನರವನ್ನು ಸೊಂಡಿಲಿನಿಂದ ಹಿಡಿದುಕೊಂಡಿತು. (ಇನ್ನೂ ಇದೆ)





Oct 1977

# ಮಾಯಾ ಸರೋವರ

೨೧


[ತನ್ನ ಶತ್ರುವಾದ ಕೃಪಾಣಜಿತ್ತು ಮೃತ್ಯು ವೃಕ್ಷಕ್ಕೆ ಬಲಿಯಾಗಿ ಹೋಗುತ್ತಲೇ ಜಯಶೀಲನು ಸಿದ್ಧ ಸಾಧಕನೊಂದಿಗೆ ಮಾಯಾ ಸರೋವರವು ಎಲ್ಲಿರುವುದೆಂದು ಹುಡುಕಲು ಹೊರಟನು. ಸರ್ಪನಖನೂ ಅವರನ್ನು ಅನುಸರಿಸಿದ. ಆಗ ಒಂದು ಗುಹೆಯಿಂದ ಹೊರಗೆ ಬರುವ ನರವಾನರವನ್ನು ಜಲಗ್ರಹವು ಸೊಂಡಿಲಿನಿಂದ ಹಿಡಿಯುವುದನ್ನು ಅವರು ನೋಡಿದರು.]

ಯಶೀಲ ಸಿದ್ಧಸಾಧಕರು ಪರಿಚಯದ ಜಾಗೆಗೆ ದೆವೆಂದು ಆಶ್ಚರ್ಯ ಪಡುತ್ತಿರಲು ಗುಹೆಯೊಳಗಿ ದ್ದ ಹೊರಬಿದ್ದ ನರವಾನರ, ಅದನ್ನು ಸೊಂಡಿಲಿ ದ ಬಳಸಿ ಹಿಡಿಯುವ ಜಲಗ್ರಹವೆಂಬ ಆನೆ ನ್ನು ನೋಡಿ ಇನ್ನಷ್ಟು ಆಶ್ಚರ್ಯ ಪಟ್ಟರು. ಒಡೆಯನ ಆನೆಯನ್ನು ನೋಡಿ ಸರ್ಪನಖನಿಗೂ ರ್ಯವಾಯಿತು. ಅವನು ತನ್ನ ಜಲಾಶ್ವವನ್ನು ಯಶೀಲನ ಬಳಿಗೆ ನಡೆಸಿ, "ಜಯಶೀಲ ಸಿದ್ಧ ಧಕರೇ! ನೋಡಿದಿರಾ, ಜಲಗ್ರಹವೆಂಬ ಆ ಆನೆ, ದೊಡ್ಡ ಶಕ್ತಿಶಾಲಿಯಾದ ಮಕರಕೇತುವಿನ ವಾಹನ. ಮಕರಕೇತುವೆಂದರೆ ಯಾರೆಂದುಕೊಂಡಿರಿ? ಸರ್ವಶಕ್ತನಾದ ಮಾಯಾ ಸರೋವರೇಶ್ವರನಿಂದ ಸೇವಕೋತ್ತಮನೆಂಬ ಬಿರುದು ಪಡೆದ ಘನವಂತ! ಅವನ ವಾಹನದ ದರ್ಶನವಾದುದರಿಂದ ನಮಗಿನ್ನು ಕಷ್ಟಗಳು ತಗ್ಗುತ್ತವೆ!" ಎಂದನು.

ಅವನ ಮಾತು ಕೇಳಿ ಸಿದ್ಧಸಾಧಕನು ತಲೆಯಾಡಿಸಿ "ಜೈಮಹಾಕಾಳಾ!" ಎನ್ನುತ್ತ, ಶೂಲವನ್ನು ಮೇಲೆತ್ತಿ, "ಎಲೋ ಜಲಗಾರ ಸರ್ಪನಖ! ಸಾಕು ಬಾಯಿ ಮುಚ್ಚು! ಆ ಮಕರಕೇತುವಿನ ಶಕ್ತಿ ಎಂಥಾದ್ದೆಂದು ನಮಗೆ ಗೊತ್ತಿಲ್ಲವೆಂದುಕೊಂಡೆಯಾ?



೨೧-೧ 315



ನಾನು ವಾಹನ ಮಾಡಿಕೊಳ್ಳಬೇಕೆಂದಿದ್ದ ನರವಾನರ ವನ್ನು ಕೊಲ್ಲಲು ನೋಡುತ್ತಿದೆ ಆ ಕ್ರೂರ ಜಲಗ್ರಹ. ಅದನ್ನು ಮೊದಲು ಕೊಂದು ಆಮೇಲೆ ಅದರ ಯಜಮಾನನ್ನು ಮಹಾಕಾಳನಿಗೆ ಬಲಿಕೊಟ್ಟುಬಿಡು ತ್ತೇನೆ. ಅಷ್ಟರವಟ್ಟಿಗೆ ಇದೀಗ ಒಳ್ಳೇ ಯೋಗವೇ ಕೂಡಿಬಿಟ್ಟಿದೆ!" ಎಂದು ಹೇಳಿ ಆ ಗುಹೆಯ ಬಳಿಗೆ ಓಡಲು ನೋಡಿದಾಗ, ಜಯಶೀಲನು ಅವನನ್ನು ಹಿಂದಕ್ಕೆ ಕರೆದನು.


"ಸಿದ್ಧಸಾಧಕಾ! ನಿಲ್ಲು. ಅವಸರಪಡಬೇಡ." ಎಂದು ಜಯಶೀಲನು ತನ್ನ ಜಲಾಶ್ವವನ್ನು ಅವನ ಹತ್ತಿರ ನಡೆಸಿ, ಸಣ್ಣಕಂಠದಿಂದ, "ನಾವು ಮಾಯಾ ಸರೋವರವನ್ನು ತಲಪುವುದಕ್ಕೆ ಈಗ ಒಳ್ಳೆಯ ಅವ ಕಾಶ ದೊರಕಿದೆ. ಆ ಮಕರಕೇತುವಿನೊಂದಿಗೆ ಒಳ್ಳೆಯ ರೀತಿಯಲ್ಲಿ ಮಾತಾಡಿ, ಯಾವುದೋ ಒಂದು ವಿಧ ವಾಗಿ ಕನಕಾಕ್ಷ ರಾಜರ ಮಕ್ಕಳನ್ನು ಅಪಹರಿಸಿದ ಮಾಯಾ ಸರೋವರೇಶ್ವರನ ಬಳಿಗೆ ಹೋಗಬೇಕು. ನೀನು ದುಡುಕಿ ಕೆಲಸ ಕೆಡಿಸಿಬಿಡಬೇಡ. ಕೊಲ್ಲುವುದು ಸುಲಭ, ಕೊಲ್ಲದೆ ಕಾರ್ಯ ಸಾಧಿಸಿಕೊಳ್ಳುವುದಕ್ಕೆ ಸ್ವಲ್ಪ ನಿಧಾನ ಬೇಕು" ಎಂದನು.

ಸಿದ್ಧಸಾಧಕನು ಎತ್ತಿದ ಶೂಲವನ್ನು ಕೆಳಗಿಳಿಸಿ, "ಆ ಮಕರಕೇತು ಇನ್ನೂ ಬದುಕಿರುವನೆಂದು ಹೇಗೆ ನಂಬುವುದು? ಅವನ ಪಕ್ಕೆಯಲ್ಲಿ ಕತ್ತಿಯ ತುಂಡು ಚುಚ್ಚಿಕೊಂಡಿತ್ತು, ಭುಜದ ಮೇಲೆ ಬೇಡರಭೀ[illegible] ಬಾಣದ ಗಾಯ. ಇವುಗಳಿಂದ ಅವನು ಎಂದೋ ಸತ್ತುಹೋಗಿರಬೇಕು. ಅವನ ಜಲಗ್ರಹವೆಂಬ [illegible] ಆನೆ ಯಜಮಾನನನ್ನು ಕಳೆದುಕೊಂಡು, ಈ ಗು[illegible] ಗಾಡಿನಲ್ಲಿ ಸ್ವೇಚ್ಛೆಯಾಗಿ ತಿರುಗಿಕೊಂಡಿದೆಯಲ್ಲ!" ಎಂದನು.

ಹೀಗೆ ಇವರಿಬ್ಬರೂ ಮಾತಾಡುತ್ತಿರುವಾಗ, ಗುಹೆಯಮುಂದಿರುವ ಮೈದಾನದಂತಹ ಸ್ಥಳದ[illegible] ಜಲಗ್ರಹ ನರವಾನರಗಳ ತುಮುಲ ಯುದ್ಧ ನಡೆಯು ತ್ತಿತ್ತು. ಆವುಗಳ ಹೋರಾಹೋರಿಯಿಂದ[illegible] ಅಲ್ಲಿಯ ಪೊದರುಗಳು ನೆಲಮಟ್ಟವಾಗಿ ಅದೊಂ[illegible] ಮೈದಾನದಂತಾಯಿತು. ನರವಾನರದ ಅರಚಾ[illegible] ಜಲಗ್ರಹದ ಘೀಂಕಾರಗಳೂ ಕರ್ಣಕರ್ಕಶವಾಗಿದ್ದ[illegible] ಆನೆಯ ಸೊಂಡಿಲಿನ ಹಿಡಿತದಿಂದ ನುಣುಚಿಕೊಂ[illegible] ನರವಾನರವು ಆನೆಯ ಬೆನ್ನಿನ ಮೇಲೆ ಹಾರಿ [illegible] ಕೋರೆಗಳಿಂದ ಕುಂಭಸ್ಥಳವನ್ನು ಕುಕ್ಕುತ್ತಾ, ಕೈಗಳಿ[illegible] ಹೊಡೆಯುತ್ತಾ, ಪರಚುತ್ತಾ ಇರಲು, ಆನೆ ಸೊಂ[illegible] ಲನ್ನು ಮೇಲೆತ್ತಿ ತಿರುಗಿಸಿ ನರವಾನರವನ್ನು ಹಿಡಿ[illegible] ಕೆಳಕ್ಕೆ ಬೀಳಿಸಿ ಕಾಲಿನಿಂದ ತುಳಿಯಲು ನೋಡಿ[illegible] ನರವಾನರ ಹೊರಳಿ ತಪ್ಪಿಸಿಕೊಂಡಿತು. ಜಲಗ್ರ[illegible] ಅದನ್ನು ಬೀಳಿಸಲು ದೇಹವನ್ನು ಭರಭರನೆ ನಡ[illegible] ಸಿತು. ನರವಾನರ ಆನೆಯ ತಲೆಯನ್ನು ಅವು[illegible] ಹಿಡಿಯಿತು.

"ಸಾಧಕಾ, ಈ ದುಷ್ಟ ಮೃಗಗಳೆರಡೂ ಒ[illegible] ಕ್ಕೊಂದು ಸರಿಯಾದ ಜೋಡಿಯಾಗಿವೆ. ಮಕರಕೇ[illegible]

ಸತ್ತುಹೋದನೆಂದು ಸುಮ್ಮನೆ ಅನುಮಾನಿಸಿ ಉಪಯೋಗವಿಲ್ಲ. ಅಗೋ ಅಲ್ಲಿ ನೋಡು ! ಗುಹೆಯ ಮೇಲು ಭಾಗದಲ್ಲಿರುವ ಬಂಡೆಕಲ್ಲುಗಳ ಮೇಲೆ ನಾಲ್ಕುಮಂದಿ ಮನುಷ್ಯರು ನಿಂತಿದ್ದಾರಲ್ಲ ! ಅವರು ಸುಮ್ಮನೆ ನಿಂತು ನರವಾನರ ಜಲಗ್ರಹಗಳ ಹೋರಾಟ ನೋಡುತ್ತಾ ಇದ್ದಾರೆ ! ಯಾರವರು ಗೊತ್ತಾಯಿತೇ ?" ಎಂದ ಜಯಶೀಲ.



ಸಿದ್ಧಸಾಧಕನು ಜಯಶೀಲನು ಹೇಳಿದಕಡೆಗೆ ದೃಷ್ಟಿ ಸಾರಿಸಿದನು. ಹೌದು, ಅಲ್ಲಿ ನಾಲ್ವರು ನಿಂತುಕೊಂಡಿರುವುದು ನಿಜವೇ. ಆ ನಾಲ್ವರ ವೇಷಭೂಷಣಗಳು ಬೇರೆ ಬೇರೆಯಾಗಿವೆ. ಅವರಲ್ಲಿ ಒಬ್ಬನು ಮಕರಕೇತುವೇ ಎಂದು ಸಿದ್ಧಸಾಧಕನು ಗುರುತು ಹಿಡಿದನು.

ಆದರೆ ಮಕರಕೇತುವಿನೊಂದಿಗಿದ್ದ ಮತ್ತಿಬ್ಬರು ಜಯಶೀಲನನ್ನು ಗುರುತಿಸಿಬಿಟ್ಟಿದ್ದರು. ಅವರಲ್ಲೊಬ್ಬನು ಈ ಕಡೆಗೆ ನೋಡುತ್ತ ಆಶ್ಚರ್ಯದಿಂದ ಕಣ್ಣರಳಿಸಿದ್ದರೆ, ಇನ್ನೊಬ್ಬನು ಭೀತಿಯಿಂದ ಕಣ್ಣು ಬಿಟ್ಟು ನೋಡುತ್ತಿದ್ದಾನೆ.

ಮಕರಕೇತು ತನ್ನೊಂದಿಗಿರುವವರನ್ನು ನೋಡಿ ತಲೆದೂಗಿ, ಅವರಲ್ಲಿ ಭವ್ಯವೇಷದವನನ್ನು ನೋಡಿ, "ವೈದ್ಯದೇವಾ, ಅಲ್ಲಿ ಜಲಾಶ್ವದ ಮೇಲಿರುವ ಯುವಕನೇ ಜಯಶೀಲ. ಶೂಲಪಾಣಿಯಾಗಿ ನೆಲದ ಮೇಲೆ ನಿಂತಿರುವವನು ಒಬ್ಬ ಸಿದ್ಧಸಾಧಕ, ಆ ಮೂರನೇಯವನು, ಗೊತ್ತಾಯಿತಷ್ಟೆ ? ನನ್ನ ಅನುಚರರಲ್ಲೊಬ್ಬ, ಈ ಸರ್ಪಸ್ವರನ ಅಣ್ಣ ಸರ್ಪನಖ !" ಎಂದನು.

ಹೀಗೆ ವೈದ್ಯದೇವನೆಂದು ಕರೆಯಿಸಿಕೊಳ್ಳಲ್ಪಟ್ಟವನು ಚಿಕ್ಕದಾದ ಗಡ್ಡಮೀಸೆಗಳಿಂದ, ಚಿನ್ನದಕಟ್ಟಿನ ವಜ್ರಖಚಿತವಾದ ಬೆತ್ತವನ್ನು ಹಿಡಿದುಕೊಂಡಿದ್ದನು.

ಮಕರಕೇತುವಿನ ಮಾತು ಕೇಳಿ, ಸರ್ಪಸ್ವರನು ಆತುರದಿಂದ, "ಆಹ ! ನನ್ನಣ್ಣನನ್ನು ಪ್ರಾಣದೊಂದಿಗೆ ನೋಡುವ ಆಶೆ ಇದ್ದಿಲ್ಲ !" ಎನ್ನುತ್ತಾ, ಅಲ್ಲಿಂದ ಹಾರಿ ಓಡಿಬರಲು ಪ್ರಯತ್ನಿಸಿದನು.

ಮಕರಕೇತು ಅವನನ್ನು ಹಿಂದಕ್ಕೆಳೆದು ನಿಲ್ಲಿಸಿ, "ಎಲೋ ಸರ್ಪಸ್ವರಾ, ನಿನಗೇನಾದರೂ ಬುದ್ಧಿಗಿದ್ದಿ ಮಂಕಾಯಿತೇ ? ಆ ಜಯಶೀಲನೂ ಸಿದ್ಧಸಾಧಕನೂ ಒಂದುಬಗೆಯಲ್ಲಿ ನಮಗೆ ಶತ್ರುಗಳು. ಆದರೂ ಮಾಯಾ ಸರೋವರೇಶ್ವರನ ಆಜ್ಞೆಯಪ್ರಕಾರ ನಾವು ಅವರೊಂದಿಗೆ ಸ್ನೇಹವನ್ನೇ ನಟಿಸಬೇಕಾಗಿದೆ. ಅದಕ್ಕೆ ತಕ್ಕ ಉಪಾಯ ಆಲೋಚನೆ ಮಾಡಬೇಕು," ಎಂದನು. ಆಮೇಲೆ ವಜ್ರಖಚಿತ ಬೆತ್ತದವನನ್ನು ನೋಡಿ, "ವೈದ್ಯದೇವಾ, ನಿಮ್ಮ ಅಭಿಪ್ರಾಯ ವೇನೆಂದು ಅಪ್ಪಣೆಯಾಗಬೇಕು" ಎಂದನು.

ವೈದ್ಯದೇವನೆಂದು ಕರೆಯಲ್ಪಟ್ಟವನು ಗುಡ್ಡದ ಕೆಳಗೆ ಬಗ್ಗಿ ನೋಡಿ ಆಶ್ಚರ್ಯದಿಂದ, "ಅಯ್ಯಾ ಮಕರಕೇತು, ಅಲ್ಲಿ ಎಂತಹ ಕಾದಾಟ ನಡೆಯುತ್ತಿದೆಯೋ ನೋಡು. ನರವಾನರ ಸೋತುಹೋಗು



ತ್ತಿದೆ. ನಿನ್ನ ಜಲಗ್ರಹವು ಆ ಜಯಶೀಲನ ಕತ್ತಿಯ ಪೆಟ್ಟಿನಿಂದ ಪ್ರಾಣಬಿಟ್ಟರೂ ಬಿಟ್ಟೀತು !" ಎಂದನು.

ಮಕರಕೇತು ಬಾಗಿ ಸರಿಯಾಗಿ ಕೆಳಗೆ ನೋಡಿ, "ಹೌದಲ್ಲ ! ಹಾ ! ಮಾಯಾ ಸರೋವರೇಶ್ವರಾ ! ರಕ್ಷ ! ರಕ್ಷ ! ನನ್ನ ವಾಹನವನ್ನುಳಿಸು !" ಎಂದು ಗಟ್ಟಿಯಾಗಿ ಕೂಗಿ ಗುಡ್ಡವನ್ನು ಬೇಗಬೇಗನೆ ಇಳಿದು ಬರತೊಡಗಿದನು. ಅವನ ಹಿಂದೆಯೇ ಉಳಿದವರೂ ಇಳಿದು ಬರತೊಡಗಿದರು. ಅವರಲ್ಲೊಬ್ಬನು ಈಗ ಸ್ಪಷ್ಟವಾಗಿ ಕಾಣತೊಡಗಿದ. ಅವನಿಗೆ ಇಪ್ಪತ್ತೈದು ವಯಸ್ಸಿರಬಹುದು. ಅವನ ಬಲದಕಾಲು ಮರದ ಕಾಲು. ಅವನು ಒಂದು ದಪ್ಪದ ದಂಟೆಯನ್ನು ಊರಿಕೊಂಡು ಅದರ ಆಧಾರದಲ್ಲಿ ಮೆಲ್ಲಮೆಲ್ಲನೆ ಗುಡ್ಡವನ್ನು ಇಳಿಯುತ್ತಿದ್ದನು.

ನರವಾನರ ಜಲಗ್ರಹಗಳ ಹೋರಾಟದಲ್ಲಿ ನರವಾನರವು ಜಲಗ್ರಹದ ಮಹಾಶಕ್ತಿಗೆ ತಾಳಲಾಗದೆ ಓಡಿಹೋಗಲು ನೋಡುತ್ತಿರುವಂತೆ ಸಿದ್ಧಸಾಧನಿಗೆ ಗೊತ್ತಾಯಿತು. ಕೂಡಲೇ ಅವನು ಶೂಲವನ್ನೆತ್ತಿಕೊಂಡು ಅವುಗಳ ಕಡೆಗೆ ಹೊರಟನು.

ಜಯಶೀಲನು ಅವನಿಗೆ ಎಚ್ಚರಿಕೆ ಹೇಳುತ್ತ, "ಜಾಗ್ರತೆಯಪ್ಪಾ, ಸಾಧಕಾ! ನಾವೀಗ ಮಕರಕೇತುವನ್ನು ಮಾತ್ರವಲ್ಲದೆ ಅವನೊಂದಿಗಿರುವ ಮೂವರನ್ನು ಎದುರಿಸಿ ಕಾದಾಡಬೇಕಾದೀತು. ಮೈಮರೆತು ಏನಾದರೂ ಮಾಡಿಬಿಡಬೇಡ !" ಎಂದನು.

"ಗೊತ್ತಿದೆ ಜಯಶೀಲಾ! ನಾವು ಈ ಲೋಕದಲ್ಲಿ ಯಾರಿಗೂ ಭಯಪಡಬೇಕಾಗಿಲ್ಲ. ಸಾಕ್ಷಾತ್ ಮಹಾಕಾಲನ ಬಂಟನೇ ಕೊಟ್ಟ ಮಹತ್ವದ ಕತ್ತಿ ನಿನ್ನ ಕೈಯಲ್ಲಿದೆ. ಇನ್ನು ನನ್ನ ಶೂಲದ ಶಕ್ತಿಯನ್ನು ಕುರಿತು ಹೇಳಬೇಕಾಗಿಲ್ಲವಷ್ಟೆ ? " ಎಂದನು.

ಆಗ ಸರ್ಪನಖನು ಗಾಬರಿಯಿಂದ ತನ್ನ ಜಲಾಶ್ವದ ಮೇಲೆ ಮುಂದೆಬರುತ್ತ, "ಅಯ್ಯಾ, ಆ ನರವಾನರವನ್ನು ಬೇಕಾದರ ಕೊಂದುಬಿಡಿರಿ. ಆದರೆ ಜಲಗ್ರಹಕ್ಕೆ ಮಾತ್ರ ಏನೂ ಹಾನಿ ಮಾಡಬೇಡಿ. ಅದರ ಯಜಮಾನ ಮಹಾ ಪೌರುಷದವನು. ಮಹಾ ಸತ್ವದವನು. ಅವನಿಗೆ ಕೋಪ ಬಂದರೆ ಏನಾದೀತೋ ಹೇಳಲಾಗದು! ಜಲಗ್ರಹದ ಮೇಲೆ ಕೈಯೆತ್ತಬೇಡಿ !" ಎಂದು ಗಟ್ಟಿಯಾಗಿ ಕೂಗಿದನು.

"ಗೊತ್ತಿದೆಬಿಡೋ! ನಿನ್ನ ಆ ಮಹಾಶಕ್ತ ಒಡೆಯನನ್ನು ನನ್ನ ಶೂಲಕ್ಕೆ ಚುಚ್ಚಿ ಆಕಾಶಕ್ಕೆತ್ತಿ ಒಗೆದು ಚರ್ಮಸುಲಿಯುತ್ತೇನೆ. ಸುಮ್ಮನೆ ಬಾಯಿಮುಚ್ಚಿ ನೋಡುತ್ತಿರು!" ಎಂದು ಸಿದ್ಧಸಾಧಕನು ಹಲ್ಲು ಕಡಿದು "ಜೈ ಮಹಾಕಾಳಾ!" ಎಂದು ಕೂಗಿ ವೇಗವಾಗಿ ಮುಂದಕ್ಕೆ ಓಡಿದನು.


ಸಿದ್ಧಸಾಧಕನು ಹೋರಾಡುವ ಪ್ರಾಣಿಗಳ ಬಳಿಗೆ ಹೋಗುವುದರೊಳಗೆ, ಜಯಶೀಲನು ತನ್ನ ಜಲಾಶ್ವವನ್ನು ಅವುಗಳ ಬಳಿಗೆ ಓಡಿಸಿಕೊಂಡು ಹೋಗಿ ಜಲಗ್ರಹದ ಸೊಂಡಿಲಿನ ಮೇಲೆ ಕತ್ತಿಯ ಹಿಡಿಯಿಂದ ಬಲವಾಗಿ ಹೊಡೆದನು. ಆ ಹೊಡೆತಕ್ಕೆ


ಜಲಗ್ರುಹವು ನೋವಿನಿಂದ ಕೆಟ್ಟದಾಗಿ ಘೀಂಕರಿಸಿ ಜಯಶೀಲನ ಮೇಲೆ ಹಾರಲು ನೋಡಿತು. ಜಯಶೀಲನು ಲಾಘವದಿಂದ ಜಲಾಶ್ವದ ಮೇಲಿನಿಂದ ಜಲಗ್ರುಹದ ಬೆನ್ನಮೇಲೆ ಹಾರಿದನು. ಅವನ ಜಲಾಶ್ವ ಮುಂದೆ ಓಡಿತು. ಜಲಗ್ರುಹದ ಸೊಂಡಿಲಿನ ಪೆಟ್ಟುಗಳಿಂದ ಹೈರಾಣಾದ ನರವಾನರ ಓಡಲೂ ಸಾಧ್ಯವಾಗದೆ ಬಿದ್ದಲ್ಲೇ ವಿಕಾರವಾಗಿ ಮೂಲುಗುತ್ತಾ ಹೊರಳಿಕೊಂಡು ಹೋಗುತ್ತಿತ್ತು.

ಈಗ ಜಲಗ್ರುಹವು ನರವಾನರದ ಗೊಡವೆಯನ್ನು ಪೂರ್ಣಬಿಟ್ಟು ತನ್ನ ಬೆನ್ನೇರಿದ ಜಯಶೀಲನನ್ನು ಕೆಳಗೆ ಎಳೆಯಲಿಕ್ಕಾಗಿ ಸೊಂಡಿಲನ್ನು ತಲೆಯ ಮೇಲೆತ್ತಿ ಹಿಂದೆ ತಿರುವಿ ಅವನನ್ನು ಹಿಡಿಯಲು ನೋಡಿತು. ಜಯಶೀಲನು ಆ ಸೊಂಡಿಲನ್ನು ಎಡ ಕೈಯಲ್ಲಿ ಬಿಗಿಹಿಡಿದು ಬಲದ ಕೈಯಲ್ಲಿ ಕತ್ತಿಯ ಹಿಡಿಯಿಂದ ಅದರ ಕುಂಭ ಸ್ಥಳದ ಮೇಲೆ ಹೊಡೆಯ ತೊಡಗಿದನು. ಆನೆಯ ಕಿವಿಗಳು ಘಟಿಘಟಿಸಿದುವು. ತನ್ನ ಆನೆಗಾಗುವ ಬಾಧೆಯನ್ನು ನೋಡಿ ಮಕರಕೇತು ಬೇಡಬೇಡವೆಂದು ಕೈಬೀಸಿಕೊಂಡು ಓಡುತ್ತಾ ಅಲ್ಲಿಗೆ ಬಂದನು. ಅವನನ್ನು ನೋಡಿ ಜಯಶೀಲನು, "ಬಂದೆಯಾ ಮಕರಕೇತೂ! ನೋಡು ನಿನ್ನ ಕಣ್ಣೆದಿರೇ ನಿನ್ನ ಆನೆಯನ್ನು ಹತಮಾಡಿ ಆಮೇಲೆ ನಿನ್ನ ಬಲವೆಷ್ಟೆಂದು ನೋಡುತ್ತೇನೆ. ನಿನ್ನ ಕಾರಣದಿಂದ ನಾನೂ ಸಿದ್ಧಸಾಧಕನೂ ಈ ಅರಣ್ಯದಲ್ಲಿ ನಾನಾಯಾತನೆಗಳಿಗೊಳಗಾದೆವು! ಈ ಹಾಳು ಆನೆಯನ್ನು ಕೊಲ್ಲುವುದೇ ಸರಿ!" ಎಂದನು.

"ಬೇಡಬೇಡ ಜಯಶೀಲಾ! ನಿನ್ನ ಪುಣ್ಯ! ಜಲಗ್ರುಹವನ್ನು ಕೊಲ್ಲಬೇಡ. ಈ ಕ್ಷಣದಿಂದ ನಾವಿಬ್ಬರೂ ಮಿತ್ರರು. ನಿನಗೆ ಬೇಕಾದದ್ದು ಮಾಯಾ ಸರೋವರಕ್ಕೆ ಹೋಗುವ ದಾರಿತಾನೇ? ಅದನ್ನು ನಾನು ತೋರಿಸುತ್ತೇನೆ. ಜಲಗ್ರುಹವನ್ನು ಹೊಡೆಯ ಬೇಡ, ಬಿಡು" ಎಂದ ಮಕರಕೇತು.

"ಹಾಗೇನು?" ಎಂದು ಜಯಶೀಲನು ತಟಕ್ಕನೆ ಜಲಗ್ರುಹದಿಂದ ಕೆಳಗೆ ಹಾರಿ, "ನನಗೆ ಬೇಕಾದುದು ಮಾಯಾಸರೋವರಕ್ಕೆ ಹೋಗುವ ಮಾರ್ಗ ಮಾತ್ರ





ವಲ್ಲ, ಅಲ್ಲಿ ಬಂಧಿಸಲ್ಪಟ್ಟಿರುವ ನಮ್ಮ ಕನಕಾಕ್ಷ ರಾಜರ ಮಗನೂ, ಮಗಳೂ ಬಂಧನದಿಂದ ಮುಕ್ತರಾಗಬೇಕು. ಅದಕ್ಕಾಗಿ ನಿನ್ನನ್ನು ಸ್ವತಂತ್ರನಾಗಿ ಬಿಡಲು ಸಾಧ್ಯವಿಲ್ಲ. ಈ ಗುಹೆಯಲ್ಲೇ ನಿನ್ನನ್ನು ಬಂಧಿಸಿಟ್ಟು ನಿನ್ನ ಮಿತ್ರರ ಮೂಲಕವಾಗಿ ನಿನ್ನ ದೇವರು ಆ ಮಾಯಾ ಸರೋವರೇಶ್ವರನಿಗೆ ಸಮಾಚಾರ ಕಳುಹಿಸುವುದೇ ಸರಿ. ಆಗ ದಾರಿಗೆ ಬರುತ್ತಾನೆ. ಏನನ್ನುವಿ ?" ಎಂದು ಕೇಳಿದನು.

ಮಕರಕೇತು ಉತ್ತರ ಕೊಡುವುದರೊಳಗೆ ಸಿದ್ಧಸಾಧಕನ ಅಟ್ಟಹಾಸದ ಧ್ವನಿ ಹೊರಟಿತು. "ಜೈ ಮಹಾಕಾಳಾ! ಭೇಷ್ ಭೇಷ್! ಜಯಶೀಲಾ, ನೀನು ಮಾಡಲಿರುವ ಕೆಲಸ ದಿವ್ಯವಾಗಿದೆ. ಓಡಿ ಹೋಗದಿರಲು ಇವನ ಕುತ್ತಿಗೆಯನ್ನು ಅರ್ಧ ಕಡಿದು ಕೈಕಾಲುಕಟ್ಟಿ ಗುಹೆಯೊಳಗೆ ಹಾಕಿಬಿಡು. ಅವನ ಸ್ನೇಹಿತರು ಮೂವರನ್ನೂ ಕೆಲಸವಾದ ಮೇಲೆ ಈ ನರವಾನರಕ್ಕೆ ಬಲಿಕೊಡೋಣ. ಈ ನರವಾನರಕ್ಕೆ ಮಹಾಕಾಲನ ಆವೇಶಬರಿಸಿಬಿಟ್ಟರೆ ಇದು ಅವರನ್ನು ಹಸಿಹಸೀ ತಿಂದೀತು." ಎಂದು ಸಾಧಕನು ನರವಾನರದ ಗುಂಡಿಗೆಯ ಹತ್ತಿರ ಕಿವಿಯಿಟ್ಟು ಪರೀಕ್ಷಿಸಿ, "ಇದು ಸಾಯಲಿಲ್ಲ. ಆ ನೀರಾನೆಯ ಪೆಟ್ಟಿನಿಂದ ಬೋದ ತಪ್ಪಿ ಬಿದ್ದಿದೆ. ಎಲೋ ಸರ್ಪನಖಾ! ಓಡಿ ಹೋಗಿ ನದಿಯಲ್ಲಿ ಯಾವುದಾದರೂ ವಸ್ತ್ರವನ್ನು ಮುಳುಗಿಸಿ ತೆಗೆದುಕೊಂಡು ಬಾ!" ಎಂದು ಸರ್ಪನಖನಿಗೆ ಆಜ್ಞೆಮಾಡಿದನು.

ಸರ್ಪನಖನು ಉಕ್ಕಿಬರುವ ಕೋಪವನ್ನು ಹಲ್ಲು ಕಚ್ಚಿ ನುಂಗಿಕೊಂಡು ಮಕರಕೇತುವಿನ ಮೋರೆ ನೋಡಿದನು. ಅದನ್ನು ನೋಡಿದ ಸಿದ್ಧಸಾಧಕನು ಶೂಲವನ್ನೆತ್ತಿ ಅವನ ಬಳಿಗೆಹೋಗಿ, "ಎಲೋ ನೀರುಜಾತಿಯ ನರಹುಳುವೇ! ಬುದ್ಧಿ ಇದೆಯೋ ನಿನಗೆ? ಈಗ ಇಲ್ಲಿ ನಿನಗೆ ಯಜಮಾನ ನಾನೇ ಎಂಬುದು ತಿಳಿಯಲಿಲ್ಲವೆ? ಅವನ ಮುಖದಲ್ಲೇನಿದೆ ಮಣ್ಣು? ಹೋಗು. ನಾನು ಹೇಳಿದ ಕೆಲಸ ಬೇಗನೆ ಮಾಡು." ಎಂದು ಜೋರುಮಾಡಿದನು.

ಮಕರಕೇತು ಯಾವ ಮಾತೂ ಆಡದೆ ಎಲ್ಲೋ ನೋಡುವುದನ್ನು ನೋಡಿ ಸರ್ಪನಖನಿಗೆ ತಾವು ಪೂರ್ಣ ಸೋತಿದ್ದೇವೆನಿಸಿತು, ಮಹಾ ಪ್ರತಾಪಿಯಾದ ಮಕರಕೇತುವೇ ಈ ಜಯಶೀಲ ಸಿದ್ಧಸಾಧಕರ ಮುಂದೆ ಶರಣಾದಂತೆ ಕಾಣುವುದನ್ನು ನೋಡಿ, ಬೇರೆ ಉಪಾಯವಿಲ್ಲದೆ ಸರ್ಪನಖನು ತುಸುದೂರದಲ್ಲಿರುವ ನದಿಯ ಕಡೆಗೆ ಹೋದನು.


ಸಿದ್ಧಸಾಧಕನು ಮಕರಕೇತುವಿನ ಬಳಿಗೆ ಹೋಗಿ, "ಏನಯ್ಯಾ, ಮಹಾವೀರ ಮಕರಕೇತೂ, ನಿನ್ನ ಜತೆಯಲ್ಲಿ ಮತ್ತೆ ಮೂವರು ನೀರು ಮನುಷ್ಯರು ಇದ್ದಾರಲ್ಲ? ಅವರಿಗೆ ಏನು ಕೆಲಸವೋ?" ಎನ್ನುತ್ತ, ಸಮೀಪಕ್ಕೆ ಬರುವವರನ್ನು ಸರಿಯಾಗಿ ನೋಡಿ, "ಎಲೆಲಾ! ಒಬ್ಬನಿಗೆ ಮರದಕಾಲು! ಪಾಪ! ಅವನನ್ನೇಕೆ ಇಂಥಾ ಸ್ಥಳಕ್ಕೆ ಕರೆದುಕೊಂಡು ಬಂದೆ?

ಥಾ ಮಹತ್ವ ಇವನಲ್ಲೇನಿದೆ?" ಎಂದು ಕೇಳಿದನು. ಕರಕೇತು ಶಾಂತ ಸ್ವರದಲ್ಲೇ ಉತ್ತರಕೊಟ್ಟ: ಹೌದು ಸಾಧಕಾ, ಅವನಿಗೆ ಮರದಕಾಲು, ನಿಜ. ವನು ನಮ್ಮ ಹಾಗೆ ಮಾಯಾಸರೋವರ ಪ್ರಾಂತ ಲ್ಲಿ ಹುಟ್ಟಿಬೆಳೆದವನಲ್ಲ. ನಿಮ್ಮ ಹಾಗಿರುವ ನೆಲದ ಮೇಲಿನ ಮನುಷ್ಯ. ಅವನೂ ತನಗೆ ಸಾಧ್ಯವಾದ ರೀತಿಯಲ್ಲಿ ಕನಕಾಕ್ಷರಾಜರ ಕುಮಾರಕುಮಾರಿಯ ನ್ನು ಹುಡುಕಲು ಹೊರಟು, ಕಾಡಿನಲ್ಲಿ ಹೆಬ್ಬುಲಿಯ ಬಾಯಿಗೆ ಸಿಕ್ಕಿ ಕಾಲುಕಳೆದುಕೊಂಡ. ಅವನ ಹೆಸರು ಮಂಗಳವರ್ಮ."

ಮಂಗಳವರ್ಮನ ಹೆಸರು ಕೇಳಿದ ಕೂಡಲೇ ದ್ಧಸಾಧಕನ ಕಣ್ಣುಗಳು ಅರಳಿದುವು. "ಓಹೋ! ರಣ್ಯಪುರದ ಸೇನಾಧಿಪತಿಯ ಮಗ ಮಂಗಳ-ರ್ಮನೇ? ಹೌದಲ್ಲ! ಜಯಶೀಲನಿಗೆ ಪ್ರತಿಸ್ಪರ್ಧಿ ಯಾಗಿ ಹುಲಿಗಳೊಂದಿಗೆ ಹೋರಾಡಲು ಹೋಗಿ ಸೋತು ಮುಖ ಮುದುಡಿಹೋದವನಿವನು! ಕೈಲಾಗ ವನು ಈ ಮಹಾ ಕಾರ್ಯವನ್ನು ನಿಭಾಯಿಸುವೆನೆಂದು ಜಂಬ ಹೊಡೆದುಬಂದಿದ್ದಾನೆಯೇ? ಹಾಗಾದರೆ ಇವನಿಗೇನೋ ಹೊಸ ಬಲ ಬಂದಿರಬೇಕು." ಎಂದು ಸಿದ್ಧಸಾಧಕನು ಜಯಶೀಲನನ್ನು ನೋಡಿ "ನೋಡಿದೆಯಾ? ಆ ಮರದಕಾಲಿನ ಮಂಗಳವರ್ಮನನ್ನು ಗುರುತಿಸಿದೆಯಾ?" ಎಂದನು.

"ನನಗೆ ಆಗಲೇ ಗೊತ್ತಾಗಿತ್ತು, ಬಿಡು!" ಎಂದು ಜಯಶೀಲನು ವೈದ್ಯದೇವನೆಂದು ಸಂಬೋಧಿಸಲ್ಪಟ್ಟವನನ್ನು ನೋಡಿ ಏನೋ ಸಂಕೋಚಪಡುತ್ತ, ಸಂಭ್ರಮದಿಂದ, ಆಶ್ಚರ್ಯದಿಂದ, ತುಸುಭೀತಿಯಿಂದಲೂ "ದೇವಶರ್ಮ" ಎಂದು ತನಗೆ ತಾನೇ ಗೊಣಗಿಕೊಳ್ಳುತ್ತ, ಸರಿಯಾಗಿ ಹೇಳಲು ಧೈರ್ಯವಾಗದೆ ತಡಬಡಿಸಿಕೊಂಡಿದ್ದನು.

ಅದನ್ನು ಗಮನಿಸಿದ ವೈದ್ಯದೇವನೆಂಬವನು ಜಯಶೀಲನಿಗೆ ಮಾತ್ರ ತಿಳಿಯುವಂತೆ ಏನೋ ಸೈಗೆ ಮಾಡಿದನು. ಅದರ ಅರ್ಥ ತನ್ನನ್ನು ಗುರುತಿಸಿಕೊಂಡಂತೆ ತೋರಿಸಿಕೊಳ್ಳಬಾರದೆಂಬುದನ್ನು ಜಯಶೀಲನೂ ತಿಳಿದುಕೊಂಡನು.




ತನ್ನ ಬೆನ್ನಮೇಲಿನಿಂದ ಮೃತ್ಯುವಿನಂತಹ ಜಯಶೀಲನು ಕೆಳಗೆ ಹಾರಿದ ಮೇಲೆ ಜಲಗ್ರಹವು ಮಕರಕೇತುವಿನ ಪಕ್ಕಕ್ಕೆ ಸರಿಯಿತು. ಮಕರಕೇತು ಅದನ್ನು ಪೂಸಿ ನೀವಿ ಸಮುಜಾಯಿಸಿಕೊಂಡಿರಲು, ಸರ್ಪನಖನು ನದಿಯ ಕಡೆಯಿಂದ ಬಂದನು. ಅವನ ಕೈಯಲ್ಲಿ ನೀರಿಳಿಯುವ ಬಟ್ಟೆಯಿದ್ದಿತು. ಸಿದ್ಧಸಾಧಕನು ಅದನ್ನು ತೆಗೆದುಕೊಂಡು ನರವಾನರದ ತಲೆಯ ಮೇಲೆ ಸ್ವಲ್ಪ ನೀರನ್ನು ಹಿಂಡಿ, ಬೊಗಸೆಯಲ್ಲಿಯೂ ಹಿಂಡಿಕೊಂಡ ನೀರನ್ನು ನರವಾನರದ ತಲೆಗೂ ಮುಖಕ್ಕೂ ಹೊಡೆಯುತ್ತ, "ಏ! ವಾನರವೀರಾ! ನೀನು ಸಾಯಲಿಲ್ಲಪ್ಪಾ! ಏಳೇಳು! ಈ ಸಿದ್ಧಸಾಧಕನ ಮಾತನ್ನು ನಿಜಮಾಡು! ನಾನೇ ನಿನ್ನ ಯಜಮಾನ. ಏಳಪ್ಪಾ! ಇನ್ನೇನೂ ಭಯವಿಲ್ಲ." ಎಂದು ಗಟ್ಟಿಯಾಗಿ ಕೂಗಿದನು.

ನರವಾನರವು ಕಣ್ಣು ತೆರೆದು ಸುತ್ತಲೂ ನೋಡಿತು. ತುಸುದೂರದಲ್ಲಿ ಸೊಂಡಿಲಾಡಿಸುತ್ತ ನಿಂತಿರುವ ಜಲಗ್ರಹವನ್ನು ನೋಡಿದ ಕೂಡಲೇ ಭಯಂಕರವಾಗಿ ಅರಚಿ ಏಳಲು ಪ್ರಯತ್ನಪಟ್ಟಿತು. ಸಿದ್ಧಸಾಧಕನು ಅದರ ಭುಜಹಿಡಿದು ಅದುಮುತ್ತ "ಅದೇನೂ ಮಾಡುವುದಿಲ್ಲ ಇನ್ನು! ನೀನು ಶಾಂತನಾಗು! ಈಗ ನಿನಗೆ ಪ್ರಾಣದಾನ ಮಾಡಿದವನು ನಾನು, ತಿಳಿಯಿತೇ? ಇನ್ನು ನಾನು ಹೇಳಿದ ಹಾಗೆ ಸಂತೋಷದಿಂದ ಕೇಳಬೇಕು, ಇಂದಿನಿಂದ ನೀನು ನನ್ನ ಬಂಟ! ನನ್ನ ವಾಹನ! ಒಪ್ಪಿದೆಯಪ್ಪೆ?" ಎಂದು ಶೂಲದಿಂದ ಅದರ ಭುಜವನ್ನೂ, ಬೆನ್ನನ್ನೂ ತಡವಿ ತಡವಿ ತೆಗೆದನು. ಕೈಯಿಂದ ಅದರ ಮುಖವನ್ನು ತಡವಿದನು.

ನರವಾನರ ಎದ್ದುನಿಂತು. ಸಿದ್ಧಸಾಧಕನನ್ನು ದುರುದುರು ನೋಡುತ್ತ ಹಲ್ಲು ತೋರಿಸುತ್ತ ಅವನ ಮೇಲೆ ಹಾರುವ ತಯಾರಿಕೆ ನಡೆಸುತ್ತಿರಲು, "ಬೇಡ! ಜಲಗ್ರಹವನ್ನು ಕರೆಯುತ್ತೇನೀಗ! ನಿನ್ನ ಸೊಕ್ಕು ನನ್ನ ಮೇಲೆ ತೋರಿಸಿದರೆ ಹೀಗೆ ಹೊಡೆಯುತ್ತೇನೆ! ಜೈ ಮಹಾಕಾಳಾ!" ಎಂದು ಕೂಗಿ ಅದರ ಹಣೆಯ ಮೇಲೆ ಒಂದೇಟು ಗುದ್ದಿದನು. ಆ ಪೆಟ್ಟು ಬಿದ್ದ ನರವಾನರವು ಗಂಟಲಲ್ಲೇ ಗರ್ಜಿಸಿದಂತೆ ನರಳುತ್ತ ಅಲ್ಲಿಂದ ಓಡಲು ನೋಡಿತು! ಸಿದ್ಧಸಾಧಕನು ಶೂಲವನ್ನು ಅಡ್ಡಹಿಡಿದು "ಜೈ ಮಹಾಕಾಳಾ!" ಎಂದು ಮತ್ತೊಮ್ಮೆ ಕೂಗಿದನು. ಆಗ ನರವಾನರವು ಸಿದ್ಧಸಾಧಕನ ಕಾಲಮುಂದೆ ಬಿದ್ದು ಮೂರು ಹೊರಳು ಹಾಕಿ, ಕೈಗಳನ್ನು ಮೇಲೆತ್ತಿ ತನ್ನ ತಲೆಯ ಮೇಲಿಟ್ಟುಕೊಂಡಿತು. ಸಿದ್ಧಸಾಧಕನು ಆನಂದದಿಂದ ಪ್ರದಕ್ಷಿಣೆ ಕುಣಿದು "ಭಲೇ ಭಲೇ! ಮಹಾಕಾಳನ ದಯ! ಜಯವಾಯಿತು! ನನಗೆ ವಾನರ ವಾಹನ ದೊರಕಿತು!" ಎಂದು ನಗುತ್ತಾ ನರವಾನರದ ಭುಜವನ್ನು ಬಡಬಡನೆ ತಟ್ಟಿದ. (ಇನ್ನೂ ಇದೆ)





# ಮಾಯಾಸರೋವರ

Nov 1977

೨೨


[ ನದೀ ತೀರದ ಗುಡ್ಡದ ಮುಂದಿದ್ದ ಮೈದಾನ ಪ್ರದೇಶದಲ್ಲಿ ಜಯಶೀಲ ಸಿದ್ಧಸಾಧಕರಿಗೆ ಮಕರಕೇತು ನೋಡಲು ಸಿಕ್ಕಿದನು. ಅವನೊಂದಿಗೆ ಜಯಶೀಲನ ಬಾಲ್ಯಮಿತ್ರನಾದ ದೇವಶರ್ಮನೂ, ಸೇನಾಪತಿಯ ಮಗ ಮಂಗಳವರ್ಮನೂ ಇದ್ದರು. ಸಿದ್ಧಸಾಧಕನು ಜಲಗ್ರಹದಿಂದ ನರವಾನರವನ್ನು ಕಾಪಾಡಿ, ತನ್ನ ವಶಕ್ಕೆ ಬರುವ ಹಾಗೆ ಮಾಡಿದನು.]

ರಾಕ್ಷಸ ರೂಪದ ನರವಾನರವು ಸಿದ್ಧಸಾಧಕನಿಗೆ ರಣಾಗಿ ಅವನು ಹೇಳಿದ ಹಾಗೆ ಕೇಳುವಂತೆ ವಶ ಾದುದನ್ನು ನೋಡಿ ಮಕರಕೇತು ಮೊದಲಾದವ ಲ್ಲರೂ ಅತ್ಯಾಶ್ಚರ್ಯಪಟ್ಟರು. ಜಯಶೀಲನು ದ್ಧಸಾಧಕನನ್ನು ನೋಡಿ ತೃಪ್ತಿಯಿಂದ ತಲೆ ೊಲೆದು ನಗುತ್ತ, "ಭಲೇ, ಸಾಧಕಾ ! ಬಹಳ ಲದ ಮೇಲೆ ನೀನೊಂದು ವಾಹನವನ್ನು ಸಂಪಾ ಿ ಬಿಟ್ಟೆ! ಆದರೆ ಒಮ್ಮೆಗೇ ಅದರ ಮೇಲೆ ಪೂರ್ಣ ಂಬುಗೆ ಇಟ್ಟು ಮೋಸಹೋಗಬೇಡ. ಅದು ಾಯಕರವಾದ ಭೂತವಾಹನ. ಜಲಗ್ರಹ ದಂತಹ ಆನೆಯೊಂದಿಗೆ ಹೋರಾಡಿ ಬದುಕಿದೆ. ಕೃಪಾಣಜಿತ್ತು ವಿನಂತಹ ಯಜಮಾನನನ್ನೇ ಕೊಲ್ಲು ವಷ್ಟರಮಟ್ಟಿಗೆ ಪೀಡಿಸಿದೆ. ಈ ಸರ್ಪಸ್ವರನನ್ನು ಎತ್ತಿ ಕೊಂಡೇ ಓಡಿದೆ. ಅವನು ಹೇಗೆ ಜೀವದೊಂದಿಗೆ ಉಳಿದಿದ್ದಾನೋ ಗೊತ್ತಾಗಿಲ್ಲ." ಎಂದನು.

"ಸರ್ಪಸ್ವರನನ್ನು ನರವಾನರದಿಂದ ಕಾಪಾಡಿದ ವನು ನಾನೇ. ಅವನ ಮೂಲಕ ನೀನು ಈ ಪ್ರಾಂತ ದಲ್ಲಿರುವ ಸಂಗತಿ ಗೊತ್ತಾಯಿತು. ಆದಕ್ಕೇ ನಾನು ಇಲ್ಲಿಗೆ ಬಂದೆ. ನಿನ್ನ ಹತ್ತಿರ ನನಗೆ ಮುಖ್ಯ ಕೆಲಸ ವಿದೆ ಗೊತ್ತಾ ? " ಎಂದ ಮಕರಕೇತು.



323



ಜಯಶೀಲನು ಮಕರಕೇತುವನ್ನು ಆಪಾದಮಸ್ತಕ ಪರ್ಯಂತ ಪರೀಕ್ಷಿಸಿ ನೋಡಿ, "ನೀನು ಪೂರ್ಣ ಸ್ವಸ್ಥನಾಗಿರುವೆಯಲ್ಲಾ? ನಿನ್ನ ಶರೀರದಲ್ಲಿ ಪ್ರಾಣಾಂತಕವಾದ ದೊಡ್ಡ ದೊಡ್ಡ ಗಾಯಗಳಿದ್ದುವು. ಇಷ್ಟು ಬೇಗ ನೀನು ಸಂಪೂರ್ಣ ಸ್ವಸ್ಥನಾದುದು ಆಶ್ಚರ್ಯವಾಗಿದೆ. ಬಹುಶಃ ನಿನ್ನ ಮಾಯಾಸರೋವರದ ವೈದ್ಯ ಅಸಾಧಾರಣವಾದುದಾಗಿರಬೇಕು." ಎಂದನು.

ಮಕರಕೇತು ದೇವಶರ್ಮನನ್ನು ತೋರಿಸುತ್ತ, "ಅದಕ್ಕೆ ಕಾರಣ ಈ ಮಹಾನುಭಾವರು. ನಾನು ಗುಡ್ಡದಲ್ಲೊಂದುಕಡೆ ಸಾವು ಬದುಕುಗಳ ಅಂಚಿನಲ್ಲಿ ನರಳಿಕೊಂಡು ಬಿದ್ದಿದ್ದೆ, ಆಗ ಇವರು ತಕ್ಕ ಚಿಕಿತ್ಸೆ ಮಾಡಿ ಕಾಪಾಡಿದರು. ನನ್ನ ಪುಣ್ಯದಿಂದಲೇ ಇಂಥ ಮಹನೀಯರ ದರ್ಶನವಾಯಿತೆಂದು ಹೇಳಬಹುದು. ಎಲ್ಲರೂ ಇವರನ್ನು ವೈದ್ಯದೇವರೆಂದು ಕರೆಯುವುದರಿಂದ ನಾನೂ ಆ ಹೆಸರಿನಿಂದಲೇ ಕರೆಯುತ್ತೇನೆ. ಆ ನಡುವೆ ನಾನೊಂದುಸಾರಿ ಮಾಯಾಸರೋವರಕ್ಕೆ ಹೋಗಿ, ಮತ್ತೆ ಇತ್ತಕಡೆ ಬಂದು ನಿನ್ನನ್ನು ಹುಡುಕುತ್ತಾ ತಿರುಗುತ್ತಿದ್ದೆ." ಎಂದನು.

ಜಯಶೀಲನು ದೇವಶರ್ಮನನ್ನು ನೋಡಿದನು. ಅಮರಾವತೀ ನಗರದಲ್ಲಿಯ ತನ್ನ ಬಾಲ್ಯಮಿತ್ರನೂ ಜೂಜಿನ ಗೃಹದಲ್ಲಿ ತನ್ನ ಜತೆ ಜೂಜುಗಾರನೂ ಆಗಿದ್ದ ದೇವಶರ್ಮ, ಯಾವಾಗ ವೈದ್ಯಕೀಯ ಕಲಿತು ಅಪ್ಸರೊಳಗೆ ವೈದ್ಯದೇವ ಹೇಗಾದ? ಜಯಶೀಲನು ಆಶ್ಚರ್ಯ ಪಡುತ್ತ, ಹೊಸ ಪರಿಚಯದಂತೆ ದೇವಶರ್ಮನಿಗೆ ನಮಸ್ಕಾರ ಮಾಡಿ, "ಅಯ್ಯಾ, ವೈದ್ಯ ದೇವರೆ! ತಮ್ಮ ಸಮಾಚಾರ ಕೇಳುವುದಕ್ಕೆ ಕ್ಷಮಿಸಬೇಕು. ಈ ಮಂಗಳವರ್ಮ ತಮ್ಮ ಅನುಚರನೇನು? ಅಥವಾ ಶಿಷ್ಯನೋ?" ಎಂದು ಕೇಳಿದನು.

ಜಯಶೀಲನ ಮಾತು ಕೇಳಿ ದೇವಶರ್ಮನು ನಗುತ್ತ, "ಸರಿಯಾಗಿ ಊಹಿಸಿದೆ. ಮಂಗಳವರ್ಮ ನನ್ನ ಶಿಷ್ಯನೇ ನಿಜ. ನನ್ನ ಹತ್ತಿರ ಇವನು ವೈದ್ಯ ವಿದ್ಯೆ ಕಲಿಯುತ್ತಾನೆ. ಹಿಂದೊಮ್ಮೆ ಇವನಿಗೆ ಮಾಯಾಸರೋವರಕ್ಕೆ ಹೋಗಬೇಕೆಂದಿತ್ತು. ಈಗ ಅಂತಹ ಆಶೆ ಯಾವುದೂ ಇವನಿಗಿಲ್ಲ. ಅಲ್ಲವೇ ಮಂಗಳವರ್ಮಾ?" ಎಂದನು.

ಮಂಗಳವರ್ಮನು ಏನೋ ಬಾಧೆಯಿಂದ ನಿಟ್ಟುಸಿರು ಬಿಟ್ಟು, ತನ್ನ ಮರದ ಕಾಲನ್ನು ನೋಡಿ 'ಹೂಂ' ಎಂದು ಉದ್ಗರಿಸಿದನಷ್ಟೇ. ಮತ್ತೇನೋ ಅವನು ಹೇಳುತ್ತಿದ್ದನೋ ಇಲ್ಲವೋ? ಅಪ್ಸರೊಳಗೆ ಆಕಾಶದ ಕಡೆಯಿಂದ ಫಡಫಡನೆ ದೊಡ್ಡ ದನಿಯಿಂದ ರೆಕ್ಕೆಗಳ ಶಬ್ದ ಕೇಳಿಬಂದುದರಿಂದ ಎಲ್ಲರೂ ತಲೆ ಎತ್ತಿದರು!

ಆಕಾಶದ ಕಡೆಯಿಂದ ಹಂಸಗಳ ಗುಂಪೊಂದು ಒಂದು ರಥವನ್ನು ಎಳೆದುಕೊಂಡು ಬರುತ್ತಿದ್ದಿತು. ಆ ದೃಶ್ಯವನ್ನು ನೋಡಿದ ಕೂಡಲೇ ಮಕರಕೇತುವೂ ಸರ್ಪನಖ ಸರ್ಪಸ್ವರರೂ ಕೈಗಳನ್ನೆತ್ತಿ, "ಜೈ

ಾಯಾ ಸರೋವರೇಶ್ವರನಿಗೆ!" ಎಂದು ಏಕಕಂಠ ಂದ ಕೂಗಿದರು. ಆಮೇಲೆ ಏಗರುತ್ತಾ ಕೈಗಳ್ನಾಡಿ ತ್ತಾ ನಿಂತರು.


ಆ ಕೂಗು ಹಂಸಗಳ ರಥದಲ್ಲಿರುವವರಿಗೆ ಕೇಳಿಸಿರ ಕು. ಆ ಕೂಡಲೇ ರಥವು ಆಕಾಶದಲ್ಲಿ ತಟ್ಟನೆ ತಿತು. ಆಮೇಲೆ ಜಯಶೀಲನೇ ಮೊದಲಾದವರು ತಿರುವ ಸ್ಥಳಕ್ಕೆ ಇಳಿಯುತ್ತಾ ಬಂದು ಸಮೀಪ ಲ್ಲಿದ್ದ ನದಿಯ ನೀರಿನ ಮೇಲೆ ಇಳಿದು ತೇಲಾಡಿ ಲ್ಲನೆ ನಿಂತಿತು.

ಆದನ್ನು ನೋಡಿ ನದೀ ತೀರದಲ್ಲಿದ್ದ ಮಕರಕೇತು, ರ್ಣಸ್ವರ, ಸರ್ಪನಖಿರು ಭಯಾಶ್ಚರ್ಯವನ್ನು ವ್ಯಕ್ತ ಡಿಸುತ್ತ, "ಇದೇನಿದು ? ಸರೋವರೇಶ್ವರನೆಲ್ಲಿ ? ನ ಅಂಗರಕ್ಷಕನೊಬ್ಬನೇ ರಥದ ಮೇಲಿದ್ದಾನಲ್ಲ ? ಗಾಗಲು ಕಾರಣವೇನೋ ?" ಎಂದು ಒಬ್ಬ ಡನೊಬ್ಬರು ಕೇಳಿಕೊಳ್ಳುತ್ತಾ, ಏನೋ ಗಾಬರಿ ಾದವರಂತೆ ತೀರದಿಂದ ನೀರಿಗೆ ಹಾರಿ ಬೇಗ ಗನೆ ಆ ರಥದಬಳಿಗೆ ಹೋದರು.

ಈಗ ನದಿಯ ತೀರದಲ್ಲಿ ಜಯಶೀಲ, ಸಿದ್ಧಸಾಧಕ, ವೈದ್ಯದೇವನೆಂದು ಹೊಸ ಹೆಸರು ಪಡೆದ ದೇವ ಶರ್ಮ, ಸೇನಾಧಿಪತಿಯ ಮಗ ಮಂಗಳವರ್ಮ ಇಷ್ಟು ಜನರು ಮಾತ್ರವಿದ್ದರು.


ಜಯಶೀಲನು ದೇವಶರ್ಮನಿಗೆ ಕಣ್ಣುಸನ್ನೆ ತೋರಿಸಿ, ಮಂಗಳವರ್ಮನೊಂದಿಗೆ, "ಅಯ್ಯಾ ಮಂಗಳವರ್ಮ, ನಮ್ಮೊಳಗೆ ಎಂದಿಗೂ ಶತ್ರುತ್ವ ವಿರಲಿಲ್ಲ. ನೀನು ಮಾಯಾಸರೋವರಕ್ಕೆ ಹೋಗಿ ಬಂದಿರುವವನ ಹಾಗೆ ಕಾಣುವೆ. ಅದು ನಿಜತಾನೆ ? ಹಾಗಿದ್ದರೆ ಅಲ್ಲಿ ಕನಕಾಕ್ಷ ಮಹಾರಾಜರ ಕುಮಾರ ಕುಮಾರಿಯರಾದ ಕಾಂಚನವರ್ಮ ಕಾಂಚನ ಮಾಲೆಯರು ಹೇಗಿದ್ದಾರೆ ? ನೀನು ನೋಡಿರಬಹು ದಷ್ಟೆ? ಅವರು ಕ್ಷೇಮವೋ ಹೇಗೆಂಬುದನ್ನು ಮೊದಲು ಹೇಳಿಬಿಡು." ಎಂದು ಕೇಳಿದನು.

ಮಂಗಳವರ್ಮನು ನೇರಾಗಿ ಜಯಶೀಲನಿಗೆ ಉತ್ತರ ಕೊಡುವವನಂತೆ ಕಾಣಲಿಲ್ಲ. ಒಮ್ಮೆ ತಲೆ ತಗ್ಗಿಸಿ ತನ್ನ ಮರದ ಕಾಲನ್ನು ನೋಡಿಕೊಂಡು, ಆ





22-3



ಮೇಲೆ ದೇವಶರ್ಮನನ್ನು ನೋಡಿ, " ಇಂತಹ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದರೆ ವೈದ್ಯದೇವರ ಅನುಜ್ಞೆಬೇಕು " ಎಂದನು.

"ನಿನ್ನ ಗುರುಭಕ್ತಿ ಮೆಚ್ಚುವಂಥಾದ್ದೇ ಸರಿಯಪ್ಪಾ." ಎಂದು ಜಯಶೀಲನು, ಹಾಗಾದರೆ ನನ್ನ ಪ್ರಶ್ನೆಯನ್ನು ವೈದ್ಯದೇವರಿಗೇ ಕೇಳುತ್ತೇನೆ " ಎಂದು ದೇವಶರ್ಮನನ್ನು ನೋಡಿದನು.

ಅಷ್ಟರಲ್ಲಿ ಅಲ್ಲಿಗೆ " ಜೈ ಮಹಾಕಾಳಾ ! " ಎನ್ನುತ್ತ ಸಿದ್ಧಸಾಧಕನು ತನ್ನ ಹೊಸ ರಾಕ್ಷಸ ವಾಹನವಾದ ನರವಾನರದ ಮೇಲೆ ಏರಿ ಬಂದು, " ಜಯಶೀಲಾ, ನೀನು ಹೀಗೆ ಹರಟೆ ಹೊಡೆಯುತ್ತಾ ಇರುವೆಯಲ್ಲ ! ಅಲ್ಲಿ ನೋಡು; ಆ ಮೊಸಳೆ ಮುಖದವನೂ ಅವನ ಸ್ನೇಹಿತರೂ, ಅಲ್ಲಿ ಬಂದ ಹಕ್ಕಿಗಳ ರಥದಲ್ಲಿ ಹತ್ತಿ ಹಾರಿ ಹೋಗಲು ನೋಡುತ್ತಿದ್ದಾರೆ ! ಅವರು ಹೋಗಿಬಿಟ್ಟರೆ ಎಲ್ಲಾ ವ್ಯರ್ಥವಾಗುತ್ತದೆ ! " ಎಂದನು.

" ನೋಡುತ್ತಲೇ ಇದ್ದೇನೆ ಬಿಡು ಸಾಧಕಾ. ಅವರು ನಿಜಕ್ಕೂ ಓಡಿ ಹೋಗಬೇಕೆಂದಿದ್ದರೆ ನಾವು ತಡೆಯಲು ಸಾಧ್ಯವೇ ? ಒಂದು ವೇಳೆ ಅವರು ಓಡಿ ಹೋದರೂ ನಮಗೇನೂ ಮುಳುಗಿ ಹೋಗುವುದಿಲ್ಲ. ಅವರ ಅನುಚರರಿಬ್ಬರು ಇಲ್ಲೇ ಇದ್ದಾರೆ ! " ಎಂದ ಜಯಶೀಲ.

ಸಿದ್ಧಸಾಧಕನು ಮಂಗಳವರ್ಮನ ಕಡೆಗೂ, ದೇವಶರ್ಮನ ಕಡೆಗೂ ಕಣ್ಣು ತಿರುಗಿಸುತ್ತಾ ನೋಡಿ, " ಈ ಮಂಗಳವರ್ಮ ನಮಗೆ ಗೊತ್ತಿದ್ದವನೇ ! ಈ ಎರಡನೇಯವನು ಯಾರೋ ? ನೀರು ಮನುಷ್ಯನ ಜಾತಿಯವನಲ್ಲ. ಇವರನ್ನಿಟ್ಟುಕೊಂಡು ನಾವೇನು ಮಾಡೋಣ ? ನಾವು ಮಾಯಾಸರೋವರವನ್ನು ಸೇರಲು ಸಹಾಯ ಮಾಡುವವರು ನೀರಿಗೆ ಬಿದ್ದಿದ್ದಾರೆ, ಅವರು ಅಲ್ಲಿಂದತ್ತಲೇ ಓಡಿ ಗೀಡಿ ಹೋಗಿಬಿಟ್ಟರೆ, ನಾವು ಸದ್ಯ ಮಾಯಾಸರೋವರವನ್ನು ತಲಪುವ ಆಸೆ ಬಿಡಬೇಕಾದ್ದೇ." ಎಂದನು.

ಅವನ ಮಾತು ಕೇಳಿ ದೇವಶರ್ಮನು ತುಸು ಕೋಪದಿಂದ, " ಅಪ್ಪಾ ಸಾಧಕಾ. ನಿನ್ನಲ್ಲಿ ಆಲೋಚನೆಗಿಂತಲೂ ಉದ್ರೇಕವೇ ಹೆಚ್ಚಾಗಿದೆ. ಆ ಮಂಗಳ ಕೇತು ಬೇಕಂತ ಕಷ್ಟಪಟ್ಟು ಈ ಪ್ರಾಂತಕ್ಕೆ ಏಕೆ ಬಂದಿದ್ದಾನೆಂದು ಆಲೋಚಿಸಿದೆಯಾ ? ನಿನ್ನನ್ನೂ ನಿನ್ನ ಮಿತ್ರನನ್ನೂ ಆ ಮಾಯಾಸರೋವರಕ್ಕೆ ಕರೆದೊಯ್ಯಬೇಕೆಂತಲೇ ಬಂದಿದ್ದಾನೆ. ಅಲ್ಲಿ ಭಯಂಕರನಾದ ಜಲವೃಕ ರಾಕ್ಷಸನ ಅನುಚರರೊಂದಿಗೆ ನೀವಿಬ್ಬರೂ ಹೋರಾಡಿ ಗೆಲ್ಲಬೇಕಾಗಿದೆ ಈಗ ! " ಎಂದನು.

" ಜಲರಾಕ್ಷಸರೆ ? ಅವರ ನೀರು ಕಾರಿಸಿಬಿಡಲು ನನ್ನ ಶೂಲವೊಂದೇ ಸಾಕು. ಮಹಾಕಾಲನ ದಯೆದಿಂದ ಅವರನ್ನೆಲ್ಲ ಈ ಶೂಲಕ್ಕೆ ಚುಚ್ಚಿ ಎತ್ತಿ ನಿಂದೆಳೆದು ನೆಲಕ್ಕೆ ಅಪ್ಪಳಿಸಿ ಒಗೆಯ ಬಲ್ಲೆ. ಜಯಶೀಲನು ಸಾಮಾನ್ಯನೇನು ? ಅವನ ಶಕ್ತಿ



22-4 M.R.U 326

ಮಹಾಕಾಲನ ಬಂಟನಾದ ಕಾಲಕಾಲನು ಸ್ವಯಂ ಬಹುಮಾನವಾಗಿ ಕೊಟ್ಟ ಖಡ್ಗವಿದೆ!" ಎಂದ ಸಿದ್ಧಸಾಧಕ.

ದೇವಶರ್ಮನೆಂದರೆ ಯಾರೆಂಬುದನ್ನರಿಯದ ಸಿದ್ಧಸಾಧಕನು, ಅವನೊಂದಿಗೆ ಹುಡುಗಾಟಿಕ್ಕೆ ಇಳಿಯುವನೇನೋ ಎಂದುಕೊಂಡು, ಜಯಶೀಲನು ದೇವಶರ್ಮನೊಂದಿಗೆ, "ಅಯ್ಯಾ, ವೈದ್ಯದೇವರೇ, ನಮ್ಮ ಶಿಷ್ಯನಾದ ಈ ಮಂಗಳವರ್ಮನನ್ನು ಕಳುಹಿಸಿ, ನದಿಯಲ್ಲಿ ಮಕರಕೇತು ಆ ರಥದವನೊಂದಿಗೆ ಏನು ಮಾತಾಡುತ್ತಾನೋ, ಅದೇನು ತಂತ್ರವೋ ತಿಳಿದುಕೊಂಡುಬರಲು ಹೇಳುವಿರಾ?" ಎಂದನು.

ಜಯಶೀಲನು ಇಂತಹ ಮಾತನ್ನು ಏಕೆ ಹೇಳಿದನೆಂಬುದನ್ನು ಊಹಿಸಿದ ದೇವಶರ್ಮನು ಮಂಗಳವರ್ಮನೊಂದಿಗೆ, "ಶಿಷ್ಯಾ, ಮಂಗಳಾ, ನೀನು ಹೋಗಿ ಆ ಹಂಸ ರಥವಲ್ಲಿ ಮಾಯಾಸರೋವರೇಶ್ವರನ ಬದಲಿಗೆ, ಅವನ ಅಂಗರಕ್ಷಕನು ಮಾತ್ರ ಏಕೆ ಬಂದ, ಒಡೆಯನಿಗೆ ಏನಾಯಿತು ಎಂಬುದನ್ನು ತಿಳಿದುಕೊಂಡು ಬಂದುಬಿಡು" ಎಂದನು.

ಮಂಗಳವರ್ಮನು ದೇವಶರ್ಮನಿಗೆ ತಲೆ ಬಾಗಿ ನಮಸ್ಕರಿಸಿ ನದಿಯಕಡೆಗೆ ಹೋದನು. ಅವನು ದೂರಹೋದಕೂಡಲೇ ಜಯಶೀಲನು ದೇವಶರ್ಮನೊಂದಿಗೆ, "ಶರ್ಮಾ, ಈಗ ಹೇಳು. ಮಾಯಾಸರೋವರೇಶ್ವರನೆಂಬುವನು ಅಪಹರಿಸಿಕೊಂಡು ಹೋದ ನಮ್ಮ ಕನಕಾಕ್ಷ ರಾಜರ ಕುಮಾರಕುಮಾರಿಯರು ಕ್ಷೇಮವಾಗಿರುವರೋ?" ಎಂದು ಆತುರದಿಂದ ಕೇಳಿದನು.

"ಅವರಿಬ್ಬರೂ ಕ್ಷೇಮವಾಗಿಯೇ ಇದ್ದಾರೆ. ಅವರು ಅಪಹರಿಸಲ್ಪಟ್ಟಿದ್ದಕ್ಕಾಗಿ, ಹಿರಣ್ಯಪುರದ ರಾಜನು ದುಃಖಿಸುತ್ತಿದ್ದರೆ, ಅಪಹರಿಸಿಕೊಂಡು ಹೋದುದಕ್ಕೆ ಆ ಮಾಯಾಸರೋವರೇಶ್ವರನೂ ಚಿಂತಿ



ಸುತ್ತಿದ್ದಾನೆ. ಅವನೊಂದು ಮಾಡಿದರೆ ಇನ್ನೊಂದಾಗಿದೆ!" ಎಂದ ದೇವಶರ್ಮ.

ಜಯಶೀಲನೂ ದೇವಶರ್ಮನೂ ಸಂಭಾಷಿಸಿಕೊಳ್ಳುವ ರೀತಿಯನ್ನು ನೋಡಿ, ಸಿದ್ಧಸಾಧಕನು ಆಶ್ಚರ್ಯದಿಂದ, "ಜೈ! ಮಹಾಕಾಳಾ!" ಎಂದು ಕೂಗಿ ನರವಾನದಿಂದ ಕೆಳಗೆ ಧುಮುಕಿ, "ಜಯಶೀಲಾ! ನಾನು ಏನೋ ಅಂದುಕೊಂಡೆ. ಈಗ ನೋಡಿದರೆ ನೀವಿಬ್ಬರೂ ಪರಿಚಿತರೇನಾ? ಆ ಸಂಗತಿ ಇಷ್ಟು ಹೊತ್ತು ಅಡಗಿಸಿಟ್ಟೆಯೇಕೆ? ಅದೇನಾದರೂ ರಹಸ್ಯ ವಿಷಯವೇ?" ಎಂದು ಕೇಳಿದ.

ಜಯಶೀಲನು ಸಿದ್ಧಸಾಧಕನಿಗೆ ಮೆಲ್ಲಗೆ ಮಾತಾಡುವಂತೆ ಎಚ್ಚರಿಸಿ, "ಸಾಧಕಾ, ಸ್ವಲ್ಪ ನಿಧಾನಿಸು. ಈ ದೇವಶರ್ಮನೂ ನಾನೂ ಬಾಲ್ಯಸ್ನೇಹಿತರು. ನಮ್ಮಿಬ್ಬರದೂ ಅಮರಾವತೀ ನಗರ. ಆ ನಗರದಲ್ಲಿ ನಾವಿಬ್ಬರೂ ದೊಡ್ಡ ಜೂಜುಗಾರರಾಗಿದ್ದೆವು. ಅದೆಲ್ಲಾ ದೊಡ್ಡಕತೆ. ಈಗ ಬೇಡ.



ಈಗ ನಾವಿಬ್ಬರೂ ಸ್ನೇಹಿತರೆಂಬ ಸಂಗತಿ ಮಕರಕೇತುವಿಗೆ ತಿಳಿಯಕೂಡದು. ಹಾಗೇನಾದರೂ ತಿಳಿದುಬಿಟ್ಟರೆ ನಾವು ಆ ಮಾಯಾ ಸರೋವರೇಶ್ವರನೆಂಬವನನ್ನು ಹಿಡಿದು ಚಿತ್ರವಧೆ ಮಾಡಿ ಕಾಂಚನವರ್ಮ ಕಾಂಚನಮಾಲೆಯರನ್ನು ಬಂಧಮುಕ್ತರನ್ನಾಗಿ ಮಾಡುವ ಕೆಲಸ ಅಸಾಧ್ಯವಾದೀತು. ಜಾಗರೂಕತೆಯಿಂದಿರಬೇಕು" ಎಂದನು.

"ಹಾಗೇನು ಸಂಗತಿ? ಅದರೆಡೆಯಲ್ಲಿ ಈಗ ಈ ಹಕ್ಕಿಗಳ ರಥದ ಗೊಡವೆಯೊಂದು ಬಂದಿದೆಯಲ್ಲಾ? ಇದರ ಹಿಂದಿರುವ ರಹಸ್ಯವೆಂಥದೋ? ಬಹುಶಃ ಇದೆಲ್ಲ ನಮ್ಮ ಮಿತ್ರಶ್ರೇಷ್ಠರಾದ ದೇವಶರ್ಮರಿಗೆ ಗೊತ್ತಿದ್ದೀತು!" ಎಂದವನೇ ಸಿದ್ಧಸಾಧಕನು ದೇವಶರ್ಮನ ಬಳಿಗೆ ಹಾರಿ ಆಪ್ಯಾಯತೆಯಿಂದ "ನೀವು ನಮ್ಮವರಂತ ನನಗೆ ಗೊತ್ತೇ ಇರಲಿಲ್ಲ, ಕ್ಷಮಿಸಿ!" ಎನ್ನುತ್ತಾ ಆಲಿಂಗಿಸಿಕೊಂಡನು. ದೇವಶರ್ಮನು ನಗುತ್ತ ಸಿದ್ಧಸಾಧಕನ ಭುಜಗಳನ್ನು ತಟ್ಟಿ, "ಸಿದ್ಧಸಾಧಕಾ, ಮಾಯಾ ಸರೋವರದಲ್ಲಿರುವ ಜಲವೃಕರಾಕ್ಷಸನನ್ನು ನೀನು ಕೊಲ್ಲಲು ಶಕ್ತನಾದರೆ, ನಿನಗೆ ಮಹಾಕಾಲನಿಂದ ಸರ್ವಶಕ್ತಿಗಳೂ ಸಿದ್ಧಿಸಿಬಿಡುತ್ತವೆ. ಆ ಜಲವೃಕನು ನೀನು ಆರಾಧಿಸುವ ಮಹಾಕಾಲನಿಗೆ ಬದ್ಧವಿರೋಧಿ!" ಎಂದನು.

"ಹಾಗೇನು? ಇನ್ನೂ ಒಳ್ಳೇದಾಯಿತು. ಅವನನ್ನು ಹಿಡಿದು ಈ ನರವಾನರಕ್ಕೆ ಭರ್ಜರಿ ಮೇವಾಗಿ ಹಾಕಿಬಿಡುತ್ತೇನೆ. ಏನೋಯ್, ವೀರಬಂಟಾ, ನರವಾನರಾ? ದೊಡ್ಡಬಲಿಗೆ ಸಿದ್ಧನೇನಾ?" ಎಂದು ಸಿದ್ಧಸಾಧಕನು ನರವಾನರದ ಭುಜವನ್ನು ಶೂಲದಿಂದ ಮೆಲ್ಲಗೆ ಮುಟ್ಟಿದನು.


ನರವಾನರವು ಹಾರಿ ಕಿರಿಚಿ, ನದಿಯ ಬದಿಯಲ್ಲಿ ನಿಂತಿದ್ದ ಜಲಗ್ರಹ ಆನೆಯ ಕಡೆಗೆ ಹೊರಟಿತು. ಸಾಧಕನು ಓಡಿ ಹೋಗಿ ಅದರ ಕೈ ಹಿಡಿದು, "ಇನ್ನು ಅದು ನಿನ್ನ ಶತ್ರುವೆಂದುಕೊಳ್ಳುವೆಯಾ? ಬಿಡಬಿಡು! ಈಗ ನಾವೂ ಮಕರಕೇತುವೂ ಅವನ ಯಜಮಾನನಾದ ಮಾಯಾ ಸರೋವರೇಶ್ವರನ ಮಿತ್ರರು. ಆ ನೀರಾನೆ ನಿನಗಿನ್ನು ಅಣ್ಣ. ನೆನಪಿಟ್ಟುಕೋ!" ಎಂದನು.

ಅವನ ಮಾತುಗಳನ್ನು ಕೇಳಿ ದೇವಶರ್ಮನಿಗೆ ನಗುವನ್ನು ತಡೆಯಲಾಗಲಿಲ್ಲ. ಅವನು ನಗುತ್ತ ತನ್ನ ಕೈಯಲ್ಲಿದ್ದ ವಜ್ರಖಚಿತ ಬೆತ್ತವನ್ನೆತ್ತಿ ನದಿಯ ಕಡೆಗೆ ತೋರಿಸುತ್ತ, "ಅಲ್ಲಿ ಮಾಯಾ ಸರೋವರದಲ್ಲಿ ಏನೋ ಆಗಬಾರದ್ದೇ ಆಗಿರಬೇಕು. ಹಾಗಿಲ್ಲದಿದ್ದರೆ ಸರೋವರೇಶ್ವರನು ಜಲವಿಹಾರ ಮಾಡುವಂಥ ಆ ಹಂಸಗಳ ರಥವು ಹೀಗೆ ಆಕಾಶದಲ್ಲಿ ಹಾರುತ್ತ ಈ ನದಿಗೆ ಬಂದು ಇಳಿಯಲಾರದು. ಏನಾಯಿತೋ! ಸರೋವರೇಶ್ವರನೆಲ್ಲಿ ಹೋದನೋ? ಅಂಗರಕ್ಷಕರು ಹೇಗೆ ಬೇರೆಯಾದರೋ? ಇದು ತುಂಬ ವಿಚಿತ್ರವಾಗಿದೆ!" ಎಂದನು.

ಆ ಸಮಯದಲ್ಲಿ ಮುಂದಿನಿಂದ ಮಂಗಳವರ್ಮನೂ, ಅವನ ಹಿಂದೆ ಚಿಂತೆಯಿಂದ ತಲೆಬಗ್ಗಿಸಿದವನಾಗಿ ಮಕರಕೇತುವೂ ಭಾರವಾದ ಹೆಜ್ಜೆಗಳಿಂದ ಅಲ್ಲಿಗೆ ಬಂದರು. ಮಕರಕೇತು ಜಯಶೀಲ ಮೊದಲಾದವರೊಂದಿಗೆ ದುಃಖ ಗದ್ಗದಿತ ಕಂಠದಿಂದ, "ಜಯಶೀಲಾ, ವೈದ್ಯದೇವಾ! ಎಂಥ ಅನರ್ಥವಾಗಿಹೋಯಿತು! ಏನು ಹೇಳಲಿ? ಈಗ ಒಂದು ಗಂಟೆಯ ಮೊದಲು ಸರೋವರದಲ್ಲಿ ಹಂಸರಥದ ಮೇಲೆ ಜಲವಿಹಾರ ಮಾಡುತ್ತಿದ್ದ ಮಾಯಾ-ಸರೋವರೇಶ್ವರನನ್ನೂ, ಅವನೊಂದಿಗಿದ್ದ ರಾಜಕುಮಾರಿ ಕಾಂಚನಮಾಲೆಯನ್ನೂ ಜಲವೃಕರಾಕ್ಷಸನ ಕಡೆಯ ರಾಕ್ಷಸರು ಹಠಾತ್ತಾಗಿ ನೀರಿನಿಂದ ಮೇಲೆದ್ದು ಅವರನ್ನು ಹಿಡಿಯಲು ನೋಡಿದರು. ರಥವನ್ನು ನಡೆಯಿಸುವವನೂ, ಅಂಗರಕ್ಷಕನೂ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಹೆಣಗುತ್ತಾ, ರಥವನ್ನು ಆಕಾಶಕ್ಕೆ ಹಾರಿಸಿದರು. ಆಗ, ಆಗ..." ಮುಂದೆ ಹೇಳಲು ಗಂಟಲೇಳದೆ ಕಣ್ಣೀರು ಒರೆಸಿಕೊಳ್ಳುತ್ತಾ ಸುಮ್ಮನೆ ನಿಂತುಬಿಟ್ಟನು. ರಾಜಕುಮಾರಿಗೆ ಏನಾಯಿತೋ ಎಂದು ಜಯಶೀಲನಿಗೆ ಭಯವಾಯಿತು.

ದೇವಶರ್ಮನು ಗಾಬರಿಯಾಗಿ, ಆತ್ಮಾತುರದಿಂದ, "ಏನಾಯಿತು ? ಧೈರ್ಯದಿಂದ ಹೇಳಿಬಿಡು. ರಥದಲ್ಲಿರ ಬೇಕಾಗಿದ್ದ ಸರೋವರೇಶ್ವರನೂ, ಕಾಂಚನಮಾಲೆಯೂ ಏನಾದರು ? ಬೇಗ ಹೇಳಿಬಿಡು !" ಎಂದನು.

ಮಕರಕೇತು ತನ್ನನ್ನುತಾನು ಸಮಾಳಿಸಿಕೊಂಡು, ನಿಟ್ಟುಸಿರುಬಿಟ್ಟು, "ಬಹಳ ಘೋರ ಸಂಗತಿ ! ವೈದ್ಯದೇವಾ. ಹಂಸಗಳ ರಥ ಆಕಾಶದಲ್ಲಿ ಹಾರಿಕೊಂಡು ಹೋಗುವಾಗ ಅವುಗಳ ಮೇಲೆ ರಣಹದ್ದುಗಳ ಗುಂಪೊಂದು ಬಂದುಬಿದ್ದಿತಂತೆ. ಹಂಸಗಳು ಹೆದರಿ ಕಿರಿಚುತ್ತ, ಚೆಲ್ಲಾಚೆದರಾಗಿ ಹಾರುವ ಪ್ರಯತ್ನದಲ್ಲಿ ರಥವನ್ನು ಆಚೆ ಈಚೆ ಮೇಲೆ ಕೆಳಗೆ ಎಳೆದುವು. ರಥ ಅಡಿ ಮೇಲಾಗಿ ಹೋಯಿತು. ಆ ಸಮಯದಲ್ಲಿ ಸರೋವರೇಶ್ವರನೂ, ಕಾಂಚನಮಾಲೆಯೂ, ರಥವನ್ನು ಓಡಿಸುವವನೂ ಪಟ್ಟು



ತಪ್ಪಿ ಮಹಾರಣ್ಯದಲ್ಲಿ ಎಲ್ಲೋ ಬಿದ್ದುಬಿಟ್ಟರು! ಇನ್ನೇನು ಗತಿಯೋ!" ಎಂದು ಹೇಳಿ ತಲೆ ಚಚ್ಚಿಕೊಂಡನು.

ಈ ಮಾತುಗಳನ್ನು ಕೇಳಿ ದೇವಶರ್ಮನಂತೆ ಜಯಶೀಲ ಸಿದ್ಧಸಾಧಕರೂ ನಿರ್ವಿಣ್ಣರಾಗಿ ಬಿಟ್ಟರು. "ಅಯ್ಯಯ್ಯೋ! ರಾಜಕುಮಾರಿ ಕಾಂಚನಮಾಲೆ ಅಷ್ಟು ಎತ್ತರದಿಂದ ಬಿದ್ದ ಮೇಲೆ ಜೀವದಿಂದಿರುವಳೆಂದು ಹೇಳಲು ಸಾಧ್ಯವೇ? ಸಾಧಕಾ! ಇಷ್ಟು ಕಾಲದಿಂದ ನಾವು ಪಟ್ಟ ಶ್ರಮವೆಲ್ಲಾ ವ್ಯರ್ಥವಾಗಿ ಹೋಯಿತು. ನಮ್ಮ ಯಾವ ಪಾಪಗಳಿಂದ ಇಂಥಾ ವ್ಯರ್ಥಶ್ರಮದ ತಾಪವೋ ತಿಳಿಯಲಿಲ್ಲ! ಎಲ್ಲಾ ಹಾಳಾಯಿತು!" ಎನ್ನುತ್ತ ಜಯಶೀಲನು ತನ್ನ ಕತ್ತಿಯನ್ನು ಒರೆಯಿಂದ ಹೊರಗೆಳೆದು ದೂರಬಿಸುಟು ತಲೆ ಹಿಡಿದುಕೊಂಡನು.


"ಈ ಸಮಾಚಾರ ಕೇಳಿದ ಮೇಲೆ ಇನ್ನು ಯಾರು ಯಾರು ಎಂತೆಂತಹ ರೀತಿಯಲ್ಲಿ ಆತ್ಮಘಾತಕ್ಕೊಳಗಾಗುವರೋ! ತನ್ನ ತಂದೆಯ ಗತಿಯನ್ನು ನೋಡಿ ಪದ್ಮಮುಖಿ ಏನು ಜೀವಕ್ಕೆ ತಂದುಕೊಳ್ಳುವಳೋ! ಹಾ! ಭಗವಾನ್! ನೀನು ಇಷ್ಟೊಂದು ದಯಾಹೀನನೆಂದು ಯಾರು ಊಹಿಸಿದ್ದರು?" ಎನ್ನುತ್ತ ದೇವಶರ್ಮನು ತನ್ನ ಬೆತ್ತವನ್ನು ನೆಲದ ಮೇಲೆ ಪಟಪಟನೆ ಬಡೆದನು.


ಸಿದ್ಧಸಾಧಕನು ಅಷ್ಟೇನೂ ಸಂಕಟಪಟ್ಟಂತೆ ಕಾಣಲಿಲ್ಲ. ಅವನು ಎಲ್ಲರ ಮುಖವನ್ನೂ ಒಂದುಸಾರಿ ನೋಡಿ, "ಏನೂ ತಿಳಿಯದೆ ಹೀಗೆ ನಿರಾಶೆಪಡಬಾರದೆಂದು ನನಗೆ ಕಾಣುತ್ತದೆ. ರಥದಿಂದ ಜಾರಿ ಕೆಳಗೆಬಿದ್ದವರು ಯಾವ ಕೊಳದಲ್ಲಿಯೋ, ದಟ್ಟಗಾಗಿ ಎಲೆ ತುಂಬಿದ ಆಲದ ಮರದ ಮೇಲೋ, ಬಿದ್ದರೆ ಸುರಕ್ಷಿತರಾಗಿರುವ ಸಂಭವವೂ ಉಂಟು. ನಾವು ಅವರನ್ನು ಹುಡುಕಿಸಲು ಕೆಲವರನ್ನು ಕಳುಹಿಸೋಣ. ಉಳಿದವರು ಆ ಜಲರಾಕ್ಷಸರ ಸಮಾಚಾರ ತೆಗೆದುಕೊಳ್ಳೋಣ. ಇಷ್ಟೆಲ್ಲಾ ಆದ ಮೇಲೆ ನನ್ನ ಮಹಾಕಾಲನಿಗೆ ಸರಿಯಾದ ಬಲಿ ಕೊಡದೆ ಹೋಗಲೇ ಬಾರದು! ನನ್ನ ಮಹಾಕಾಲನು ಅಷ್ಟೊಂದು ನಿರ್ದಯನಲ್ಲ. ಪರೀಕ್ಷಿಸುತ್ತಾನೆ, ಅಷ್ಟೆ!" ಎಂದನು.

ಸಿದ್ಧಸಾಧಕನು ಮಾತು ಮುಗಿಸುವಷ್ಟರಲ್ಲಿ ನದಿಯ ಕಡೆಯಿಂದ, "ಅಯ್ಯೊ! ಜಲರಾಕ್ಷಸರು! ಜಲರಾಕ್ಷಸರು!" ಎಂಬ ಕೂಗು ಕೇಳಿಸಿತು.

ಜಯಶೀಲನೇ ಮೊದಲಾದವರು ಹಾರಿಬಿದ್ದು ತಿರುಗಿನೋಡಿದರು. ತೋಳದ ತಲೆಗಳಿರುವ ಕೆಲವು ರಾಕ್ಷಸರು ಕಲ್ಲಿನ ಗದೆಗಳನ್ನು ಎತ್ತಿ ಹಿಡಿದುಕೊಂಡು ನದಿಯಲ್ಲಿ ಈಜುತ್ತಾ, ಹಂಸಗಳ ರಥವನ್ನು ಸುತ್ತಿ ಮುತ್ತಿಗೆ ಹಾಕಲು ರಭಸದಿಂದ ಬರುವುದನ್ನು ನೋಡಿದರು.

(ಇನ್ನೂ ಇದೆ)





# ಮಾಯಾಸರೋವರ

## ೨೩

[ ಜಯಶೀಲ, ಸಿದ್ಧಸಾಧಕರು ನದಿಯ ಹತ್ತಿರ ಮಕರಕೇತುವನ್ನೂ ದೇವಶರ್ಮನನ್ನೂ ನೋಡಿದರು. ಆ ಸಮಯದಲ್ಲಿ ಹಂಸಗಳ ರಥವೊಂದು ನೀರಿನಲ್ಲಿಳಿಯಿತು. ಅದರಲ್ಲಿದ್ದ ಮಾಯಾ ಸರೋವರೇಶ್ವರನೂ, ಕಾಂಚನಮಾಲೆಯೂ ಎಲ್ಲೋ ಕಾಡಿನಲ್ಲಿ ಬಿದ್ದರೆಂದು ತಿಳಿಯಿತು. ಮುಂದೇನು ಮಾಡುವುದೆಂದು ಅವರೆಲ್ಲ ಯೋಚಿಸುವಾಗ ಜಲವೃಕರಾಕ್ಷಸರು ಹಂಸರಥದ ಮೇಲೆ ದಾಳಿ ತೆಗೆದರು.]

ವಿಕಾರ ರೂಪದ ಜಲವೃಕರಾಕ್ಷಸರು ಹಂಸಗಳ ರಥವನ್ನು ಮುತ್ತಿಗೆ ಹಾಕಿ ಹಿಡಿಯಲು ಪ್ರಯತ್ನಿಸುತ್ತಿರಲು, ಅದರೊಳಗಿದ್ದವನು ಅವರಿಂದ ತಪ್ಪಿಸಿಕೊಳ್ಳಲು ರಥವನ್ನು ಚಕ್ರಾಕಾರವಾಗಿ ನೀರಿನಲ್ಲಿ ಸುತ್ತಿಸತೊಡಗಿದನು.

ಜಯಶೀಲನು ತನ್ನ ಕೈಯಲ್ಲಿ ಕತ್ತಿಯನ್ನು ಹಿಡಿದು ಆಡಿಸುತ್ತ, "ಈ ವಿಕೃತಭೂತಗಳೇ ಜಲವೃಕರಾಕ್ಷಸರೇ? ತೋಳದ ತಲೆಗಳೂ ಮಾನವ ಶರೀರವೂ ಅಬ್ಬಬ್ಬ! ಎಂತಹ ಅಸಹ್ಯ! ಯಾವ ಲೋಕದ ಪ್ರಾಣಿಗಳೋ!" ಎಂದನು.

ಮಕರಕೇತು ತನ್ನ ಕೈಯಲ್ಲಿದ್ದ ಶೂಲವನ್ನು ಮೇಲೆತ್ತಿ ಹಿಡಿದು, ಜಲವೃಕರನ್ನು ಹತಮಾಡುವ ಉದ್ದೇಶದಿಂದ ನಾಲ್ಕಡಿ ಮುಂದೆ ಸಾಗಿ, ತಟ್ಟನೆ ನಿಂತು ಜಯಶೀಲನನ್ನು ನೋಡಿ, "ಮಿತ್ರ, ಜಯಶೀಲಾ, ಈ ದುಷ್ಟ ಜಲರಾಕ್ಷಸರು ಹಂಸರಥವನ್ನು ಹಿಡಿಯಲು ನೋಡುತ್ತಿದ್ದಾರೆ. ಅವರನ್ನು ಹತಮಾಡಲು ನೀನೂ ಸಹಾಯ ಮಾಡಲಾರೆಯಾ? ನನ್ನೊಂದಿಗೆ ನಿನ್ನ ಕಾರ್ಯವೂ ಬೆರೆತರೆ ಆ ದುಷ್ಟರನ್ನು ಚೂರು ಚೂರು ಮಾಡುವುದು ಸುಲಭ" ಎಂದನು.



ಜಯಶೀಲನು ಗಂಭೀರನಾಗಿ ತನ್ನ ಕತ್ತಿಯನ್ನು ಒರೆಯೊಳಗೆ ಹಾಕಿ, "ಈ ಜಲವೃಕಗಳಿಗೂ ನನಗೂ ಸಂಬಂಧವೇನಿಲ್ಲ. ನಮ್ಮ ಕನಕಾಕ್ಷರಾಜರ ಮಕ್ಕಳನ್ನು ಅಪಹರಿಸಿದವನು ನಿನ್ನ ಮಾಯಾ ಸರೋವರದ ಪ್ರಭು. ನನಗೆ ನಮ್ಮ ರಾಜನ ಮಕ್ಕಳನ್ನು ರಕ್ಷಿಸಬೇಕಾದ ಬಾಧ್ಯತೆಯೋ ಹೊರತು ಉಳಿದ ಹಾಳು ಹರಟೆಗಳ ಮಾತೇಕೆ? ಈ ದುಷ್ಟ ಕಾರ್ಯಗಳನ್ನು ಮಾಡಿದ ನಿನ್ನ ಒಡೆಯನ ಮೇಲೆ ಹಗೆ ತೀರಿಸುವ ಕರ್ತವ್ಯ ನನಗಿದೆ. ಆ ಹಂಸ ರಥದಲ್ಲಿ ಅವನಿಲ್ಲದಿರುವುದು ಸದ್ಯ ಅವನ ಅದೃಷ್ಟ! ಅರ್ಥವಾಯಿತೇ?" ಎಂದನು.

ಅವನು ಹೇಳಿದ ಮಾತುಗಳನ್ನು ಕೇಳಿ ಮಕರಕೇತುವಿನ ಮುಖ ಬಿಳಿಚಿಕೊಂಡಿತು. ಅವನು ದೇವಶರ್ಮನನ್ನು ನೋಡಿ, "ವೈದ್ಯ ದೇವಾ, ಜಯಶೀಲನಿಗೆ ನಮ್ಮ ಮೇಲೆ ಇಷ್ಟೊಂದು ತೀವ್ರ ದ್ವೇಷವಿದೆಯೆಂದು ನಾನು ಊಹಿಸಿರಲಿಲ್ಲ. ನೀವೇ ನೋಡಿದಿರಷ್ಟೆ? ರಾಜನ ಕುಮಾರಕುಮಾರಿಯರಿಗೆ ಮಾಯಾ ಸರೋವರೇಶ್ವರನಿಂದ ಯಾವ ಕೆಡುಕೂ ಆಗಲಿಲ್ಲ. ಆದರ ಮೇಲೆ ಅವರಿಬ್ಬರನ್ನೂ ಎಷ್ಟೋ ಪ್ರೀತಿಯಿಂದ ಪೋಷಿಸಿದ್ದಾನೆ! ನಿಮಗೆಲ್ಲಾ ಗೊತ್ತಿದೆ. ಈಗ ಈ ಜಲವೃಕಗಳಿಂದ ನಮ್ಮ ರಥವನ್ನು ಕಾಪಾಡಲೇಬೇಕಾಗಿದೆ. ನೀವೇ ಜಯಶೀಲನಿಗೆ ಹೇಳುವಿರಾ?" ಎಂದನು.

ದೇವಶರ್ಮನು ತಲೆದೂಗುತ್ತ "ಹೌದು ಹೌದು. ಜಯಶೀಲಾ, ನನ್ನ ಮಾತುಕೇಳಿ, ಮೊದಲು ಕತ್ತಿಯನ್ನು ಒರೆಯಿಂದೆತ್ತು. ಸರೋವರೇಶ್ವರನ ಮೇಲೆ ಹಗೆ ಸಾಧಿಸಲಿಕ್ಕೆ ಇದು ತಕ್ಕ ಸಮಯವಲ್ಲ. ತಡಮಾಡಿದರೆ, ಅವರಿಗೆ ಮಾತ್ರವಲ್ಲ, ನಮಗೆಲ್ಲರಿಗೂ ಕೆಡುಕೇ ಆಗಬಹುದು. ನಮ್ಮ ಕಾರ್ಯಕ್ಕೆ ಈ ಅದ್ಭುತ ರಥವೂ ಆಗತ್ಯ. ಹುಂ, ಮೊದಲು ಈ ಜಲವೃಕರ ಗಂಡಾಂತರ ತೊಲಗಲಿ!" ಎಂದ ದೇವಶರ್ಮ.

ಮರುಕ್ಷಣವೇ ಜಯಶೀಲನು ವೀರಾವೇಶದಿಂದ ಕತ್ತಿಯನ್ನು ಹಿರಿದು ಝಳಪಿಸಿದನು. ಅವನ ಬೆನ್ನಿಗೇ ಸಿದ್ಧಸಾಧಕನು "ಜೈ ಮಹಾಕಾಳಿ!" ಎಂದು ಕರ್ಕಶವಾಗಿ ಕೂಗಿ ತನ್ನ ನರವಾನರದ ಮೇಲೆ ಹಾರಿ ಕುಳಿತನು. ಕಣ್ಣು ಮುಚ್ಚಿ ಬಿಡುವುದರೊಳಗೆ ಎಲ್ಲರೂ ಭೀಕರವಾಗಿ ಕೂಗುತ್ತಾ ಹೋಗಿ ನದಿಗೆ ಹಾರಿ ಜಲವೃಕರಾಕ್ಷಸರ ಮೇಲೆ ಬಿದ್ದರು. ನದಿಯಲ್ಲಿ ಭಾರಿ ಯುದ್ಧವೇ ತೊಡಗಿತು.


ಅಷ್ಟರವರೆಗೂ ಹಂಸಗಳ ರಥದಲ್ಲಿದ್ದ ಸರೋವರೇಶ್ವರನ ಅಂಗರಕ್ಷಕನು, ರಥವು ಜಲರಾಕ್ಷಸರ ಕೈಗೆ ಸಿಕ್ಕದಂತೆ ನದಿಯಲ್ಲಿ ಆಚೆಗೂ ಈಚೆಗೂ ಓಡಿಸಿಕೊಂಡಿದ್ದನು. ಅದರಲ್ಲಿ ಅವನ ಕರಾಮತಿ ಅಮೋಘವಾಗಿ ತೋರುತ್ತಿದ್ದರೂ, ಜಲವೃಕರಾಕ್ಷಸರ ಕೈಯೇ ಮೇಲಾಗುವುದರಲ್ಲಿತ್ತು. ಮಕರಕೇತು ತನ್ನ ಜಲಗ್ರಹವೆಂಬ ಆನೆಯ ಮೇಲೇರಿ ಶೂಲವನ್ನು ತಿರುಗಿಸುತ್ತಾ ಜಲರಾಕ್ಷಸರ ಕಡೆಗೆ ಹಾಯ್ದನು. ಅವನನ್ನೂ


ರವಾನರದ ಮೇಲೆ ಕುಳಿತು ಶೂಲಪಾಣಿಯಾದ ದ್ಧಸಾಧಕನನ್ನೂ ನೋಡಿ ಜಲರಾಕ್ಷಸರು ಹೆದರಿ ೀರಿನಲ್ಲಿ ಮುಳುಗಿ ಓಡಿಹೋಗಲು ನೋಡಿದರು. ಷ್ಟರಲ್ಲಿ ಮಕರಕೇತು ಕೆರಳಿಸಿಬಿಟ್ಟ ಜಲಗ್ರಹವು ವರನ್ನು ಸೊಂಡಿಲಿನಿಂದ ಹಿಡಿದೆತ್ತಿ ನದಿಯ ತೀರಕ್ಕೆ ೀಸಿಬೀಸಿ ಒಗೆಯುತೊಡಗಿತು. ಆಗ ಜಲವೃಕರ ಕಂಠ ಂದೇಳುವ ಆರ್ತನಾದವು ಕರ್ಣಕರ್ಕಶವಾಯಿತು. ಯಶೀಲನು ನೀರಿನಲ್ಲಿ ಈಜುತ್ತ, ತನ್ನ ಅಳವಿಗೆ ಕ್ಕಿದ ಜಲವೃಕಗಳನ್ನು ಕತ್ತಿಯಿಂದ ತಿವಿಯತೊಡಗಿ ನು. ನದಿಯ ನೀರು ಕೆಂಪುಕೆಂಪಾಗತೊಡಗಿತು. ದ್ಧಸಾಧಕನ ಶೂಲವೂ ನರವಾನರವೂ ಕೆಲವು ತ್ರುಗಳಿಗೆ ಅಂತ್ಯಗಾಣಿಸಿದುವು.

ಕಾಲುಗಂಟೆ ಕಳೆಯುವಷ್ಟರಲ್ಲಿ ಕೆಲಮಂದಿ ಜಲ ೃಕರು ಸತ್ತರು. ಹಲವರು ಗಾಯಗೊಂಡು ಅರೆ ತ್ತವರಾಗಿ ಮುಳುಗಲಾರದೆ, ತೇಲಲಾರದೆ ನದಿಯ ್ರವಾಹದ ಗುಂಟ ಹೊಡೆದುಕೊಂಡುಹೋದರು. ಲಗ್ರಹದ ಸೊಂಡಿಲಿನಿಂದ ಬಿಸುಡಲ್ಪಟ್ಟವರು, ಕೈಕಾಲು ಸೊಂಟಗಳನ್ನು ಮುರಿದುಕೊಂಡೂ, ಉಳುಕಿಸಿಕೊಂಡೂ ನೀರಿಗೆ ಬರಲಾಗದೆ ಅಲ್ಲಲ್ಲೇ ನರಳತೊಡಗಿದರು. ಸತ್ತವರನ್ನು ಬಿಸಿಬಿಸೀ ತಿನ್ನುವ ತವಕದಲ್ಲಿ ರಣಹದ್ದುಗಳೂ ಬರತೊಡಗಿದುವು.

ಸಿದ್ಧಸಾಧಕನು ಏರಿದ್ದ ನರವಾನರವು ಒಬ್ಬ ಜಲ ವೃಕರಾಕ್ಷಸನನ್ನು ಎರಡು ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು, ನೀರಿನಿಂದ ಮೇಲೆ ಬಂದಿತು. ಹಿಂದೆಯೇ ಮಕರಕೇತೂ, ಸರ್ಪನಖಿ, ಸರ್ಪಸ್ವರರೂ ತೀರದ ಮೇಲೆ ಬಂದರು.

ಜಯಶೀಲನು ಮಾತ್ರ ಹಂಸಗಳ ರಥದ ಮೇಲೆ ಹತ್ತಿ ಕುಳಿತು, ಅದರಲ್ಲಿದ್ದವನ ಮುಂದೆ ಕತ್ತಿಯನ್ನಾಡಿಸಿ ಹೆದರಿಸುತ್ತ, "ಎಲೋ, ಮಾಯಾ ಸರೋವರೇಶ್ವರನ ಅಂಗರಕ್ಷಕನೇ! ನಾನು ಹೇಳಿದಂತೆ ಮಾಡು. ರಥವನ್ನು ತೀರಕ್ಕೆ ಸೇರಿಸು. ರಥವನ್ನು ಆಕಾಶಕ್ಕೆ ಹಾರಿಸಿ ತಪ್ಪಿಸಿಕೊಳ್ಳಲು ನೋಡಿದರೆ, ನಿನ್ನ ತಲೆ ಮುಂಡದಿಂದ ಉದುರಿ ಹೋಗುತ್ತದೆ! ಜಾಗ್ರತೆ!" ಎಂದು ಎಚ್ಚರಿಸಿದನು.





ಆ ಮಾತು ಕೇಳಿ ಅಂಗರಕ್ಷಕನು ಹುಬ್ಬು ಗಂಟಿಕ್ಕಿ ಕಣ್ಣು ಕೆಂಪುಮಾಡಿ, "ನೀನು ಹೇಳಿದಂತೆ ನಾನೇಕೆ ಮಾಡಬೇಕು? ನೀನೊಬ್ಬ ಸಾಮಾನ್ಯ ಮಾನವ. ಮಹಾಶಕ್ತಿ ಸಂಪನ್ನನಾದ ಮಾಯಾ ಸರೋವರೇಶ್ವರನ ಅಂಗರಕ್ಷಕನಾದ ನನ್ನನ್ನು ಈವರೆಗೂ ಯಾರೂ ಹೀಗೆ ಅವಮಾನಪಡಿಸಿದ್ದಿಲ್ಲ! ನೀನು..." ಎನ್ನಲು ಜಯಶೀಲನು "ಹೌದು ನಾನು! ನಾನಿದ್ದೇನೆ. ಎಲ್ಲಿ ನೋಡುತ್ತೇನೆ, ನಿನ್ನ ಪ್ರತಾಪವನ್ನು! ಕತ್ತಿ ತೆಗೆ ಧೈರ್ಯವಿದ್ದರೆ!" ಎನ್ನುತ್ತಾ, ತನ್ನ ಕತ್ತಿಯನ್ನು ಕೆಳಗಿಟ್ಟು, ಎಡಗೈಯಿಂದ ಅಂಗರಕ್ಷಕನ ಕೊರಳನ್ನು ಬಿಗಿಯಾಗಿ ಹಿಡಿದುಕೊಂಡನು.

ಅಂಗರಕ್ಷಕನು ಆ ಮುಷ್ಟಿಯ ಬಿಗಿತವನ್ನು ಬಿಡಿಸಿಕೊಳ್ಳಲಾಗದೆ ತತ್ತರಿಸುತ್ತ, "ನೀನಾರೋ ದೊಡ್ಡ ಧೈರ್ಯಶಾಲಿಯೇ ನಿಜ! ಬಲಶಾಲಿಯೇ ನಿಜ! ನನ್ನ ಕುತ್ತಿಗೆ ಬಿಡು" ಎಂದನು ತೊದಲುತ್ತಾ, ಪೇಚಾಡಿಕೊಂಡು. ಜಯಶೀಲನು ಅವನನ್ನು ಬಿಟ್ಟು, "ಇನ್ನು ಎದುರು ಮಾತಾಡುವುದನ್ನು ಬಿಟ್ಟು ಈ ರಥವನ್ನು ತೀರಕ್ಕೆ ನಡೆಸು. ನಿನ್ನ ಒಡೆಯನನ್ನು ಕುರಿತು ನಿನ್ನ ಹತ್ತಿರ ಮಾತಾಡಬೇಕಾದ ವಿಷಯ ನನಗೆ ತುಂಬಾ ಇದೆ" ಎಂದನು.

ಅಂಗರಕ್ಷಕನು ಮತ್ತೆ ಬಾಯಿಯೆತ್ತದೆ, ಅವನು ಹೇಳಿದಂತೆ ರಥದ ಹಂಸಗಳನ್ನು ತೀರದ ಕಡೆಗೆ ಸಾಗಿಸಿದನು. ಹಂಸರಥ ನೀರಿನಿಂದ ತೀರದ ಮೇಲೆ ಬಂದು ನಿಲ್ಲುತ್ತಲೇ, ಸಿದ್ಧಸಾಧಕನು ಉತ್ಸಾಹದಿಂದ ಕೇಕೇ ಹಾಕಿ ನರವಾನರದ ಮೇಲಿನಿಂದ ಕೆಳಗೆ ಹಾರಿದನು.

ವಾನರದ ಕೈಯಲ್ಲಿ ಸಿಕ್ಕಿಕೊಂಡು ನಡುಗುತ್ತಿರುವ ಜಲವೃಕರಾಕ್ಷಸನ ಎರಡು ಕಿವಿಗಳನ್ನೂ ಸಿದ್ಧಸಾಧಕನು ಹಿಡಿದೆತ್ತಿ ನೆಲದ ಮೇಲಿಳಿಸಿ, "ಎಲೋ, ನೀರು ತೋಳದವನೇ! ಓಡಿ ಗೀಡಿ ಹೋಗಲು ನೋಡಿದರೆ ಚಿತ್ರವಧೆಯಿಂದ ಸಾಯುವೆ! ಜೋಕೆ!" ಎಂದು ಎಚ್ಚರಿಸಿ, ಹಂಸರಥದ ಬಳಿಗೆ ಹೋಗಿ, "ಜಯಶೀಲಾ! ಈ ರಥ ಭಲೇ ಪಸಂದಾಗಿದೆ! ಇದರ ಮೇಲೆ ನರವಾನರದೊಂದಿಗೆ ಹಿಮಾಲಯ ಶಿಖರಗಳಿಗೆ ಹೋಗಿ, ಅಲ್ಲಿ ತಪಸ್ಸು ಮಾಡಬೇಕೆಂದಿದ್ದೇನೆ. ನನ್ನನ್ನೂ ನರವಾನರವನ್ನೂ ಇದು ಹೊರಬಲ್ಲುದೇ?" ಎಂದು ಕೇಳಿದನು.

ಅವನ ಪ್ರಶ್ನೆ ಕೇಳಿ ಜಯಶೀಲನು ನಗುತ್ತ ರಥದಲ್ಲಿರುವ ಅಂಗರಕ್ಷಕನನ್ನು ನೋಡಿ, "ಹೇಗೆ? ಇದು ಎಷ್ಟು ಭಾರವನ್ನು ಹೊರುತ್ತದೆ?" ಎಂದು ಕೇಳಿದನು.

ಅಂಗರಕ್ಷಕನು ರಥದ ಚಕ್ರಗಳನ್ನು ಕಣ್ಣುಗಳಿಗೆ ಒತ್ತಿಕೊಂಡು, "ಅಯ್ಯೋ! ಈ ರಥದ ಮಹತ್ವ ಸಾಮಾನ್ಯವಲ್ಲ. ಕುಬೇರನ ಪುಷ್ಪಕವನ್ನು ನೋಡಿ ರಚಿಸಿದ್ದಾಗಿದೆ. ಈ ಹಂಸಗಳು ಕೇವಲ ಅಲಂಕಾರಪ್ರಾಯವಾದುವು. ಸರೋವರೇಶ್ವರನು ನೆನೆಸಿದರೆ ಈ ರಥವು ಈರೇಳು ಹದಿನಾಲ್ಕು ಲೋಕಗಳನ್ನು

ತ್ತಿ ಬರಬಲ್ಲುದು. ಎಲ್ಲಾ ಸರೋವರೇಶ್ವರ ಮಿಯ ಕೈಯಲ್ಲಿದೆ. ನನ್ನ ಮಾತು ಅತಿಶಯೋಕ್ತಿ ಂದು ತಿಳಿಯಬೇಡಿರಿ" ಎಂದನು.

"ಹಾಗೇನು? ಮತ್ತೆ, ಇಷ್ಟೊಂದು ಮಹತ್ವದ ಥವು ಹದ್ದುಗಳ ದಾಳಿಗೆ ಸಿಕ್ಕಿ ತಲೆಕೆಳಗಾಗಿ ೋಗಲು ಕಾರಣವೇನು? ಆ ಸಮಯದಲ್ಲಿ ಮಹಾ ನಾದ ಸರೋವರೇಶ್ವರನೇ ಈ ರಥದಲ್ಲಿದ್ದನಲ್ಲಾ! ಮಗೆ ಬುದ್ಧಿಯಿಲ್ಲವೆಂದೆಣಿಸಿ ಬಾಯಿ ಹರಿಬಿಡ ಡ. ಹೀಗೆಲ್ಲಾ ನಿನ್ನ ಪಾಡಿಗೆ ಹರಟಿಕೊಂಡಿದ್ದರೆ ನ್ನ ಗಂಟಲಿಗೆ ಈ ಶೂಲವನ್ನು ಚುಚ್ಚಿ ನದಿಯ ಧ್ಯಕ್ಕೆ ಬೀಸಿ ಒಗೆದು ಬಿಡುತ್ತೇನೆ!" ಎಂದು ದ್ಧಸಾಧಕನು ಅಂಗರಕ್ಷಕನ ಮೇಲೆ ಶೂಲ ಎತ್ತಿದನು.

ಜಯಶೀಲನು ಅವನನ್ನು ತಡೆಯುತ್ತ, "ಸಿದ್ಧ ಧಕಾ, ಈ ರಥದಿಂದ ಅರಣ್ಯದಲ್ಲಿ ಜಾರಿಬಿದ್ದುದು ರೋವರೇಶ್ವರನೊಬ್ಬನೇ ಅಲ್ಲ. ನಮ್ಮ ಹಿರಣ್ಯ ರದ ಕನಕಾಕ್ಷ ಮಹಾರಾಜರ ಕುಮಾರಿ ಕಾಂಚನ ಾಲೆ ಕೂಡಾ ಬಿದ್ದುಬಿಟ್ಟಿದ್ದಾಳೆ. ಈ ಸಂಗತಿ ಪಿಟ್ಟುಕೊಂಡೇ ವರ್ತಿಸು" ಎಂದನು.

ಜಯಶೀಲನು ಹೇಳಿದುದನ್ನು ಕೇಳುವಾಗ ಮಕರ ತುವಿಗೆ ಬಹಳ ಚಿಂತೆಯಾಯಿತು. "ಜಯಶೀಲಾ, ಮ್ಮ ಯಜಮಾನನನ್ನು ಹುಡುಕಲು ನಾವು ಈ ಸರಥದ ಮೇಲೆ ಹೊರಡಬೇಕಾಗಿದೆ. ಬೇರೆ ದಾರಿ ಲ್ಲ. ನಮ್ಮ ಒಡೆಯನು ಎಂತಹ ಇಕ್ಕಟ್ಟಿಗೆ ಸಿಕ್ಕಿ ಕೊಂಡಿದ್ದಾನೊ? ಏನು ಮಾಡುತ್ತಿದ್ದಾನೋ?" ದನು ಸಂಕಟಪಡುತ್ತ.

"ನಮಗೂ ಅದು ಮುಖ್ಯವೇ. ನಮ್ಮ ರಾಜ ಮಾರಿ ಕಾಂಚನಮಾಲೆ ಏನಾಗಿದ್ದಾಳೋ ನಾವೂ ಿದುಕೊಳ್ಳಬೇಕು. ಒಂದುವೇಳೆ ಅವಳಿಗೇನಾದರೂ ೊಡ್ಡ ಅಪಾಯವೇ ಆಗಿದ್ದರೆ, ಅದಕ್ಕೆಲ್ಲಾ ನಿಮ್ಮ ಾಮಿಯಾ ಸರೋವರೇಶ್ವರನದೇ ಪೂರ್ತಿ ಬಾಧ್ಯತೆ.



ಅವನ ತಲೆಯನ್ನೇ ಕನಕಾಕ್ಷ ರಾಜರಿಗೆ ಕಾಣಿಕೆಯಾಗಿ ಕೊಂಡೊಯ್ಯಬೇಕಾಗುತ್ತದೆ. ಅಂತೂ ನಾವು ಬರಿಗೈಯಿಂದ ಹಿಂದಿರುಗುವವರಲ್ಲ." ಎಂದ ಜಯಶೀಲ.

ಆದುವರೆಗೂ ಏನೂ ಮಾತಾಡದೆ, ಎಲ್ಲವನ್ನೂ ಕೇಳುತ್ತ, ದೀರ್ಘಾಲೋಚನೆಯಲ್ಲಿದ್ದ ದೇವಶರ್ಮನು, ಥಕ್ಕನೆ ತಲೆಯೆತ್ತಿ ಜಯಶೀಲನನ್ನು ನೋಡಿ, "ಜಯಶೀಲಾ! ಕೋಪದ ಮಾತುಗಳನ್ನು ಬಿಡಪ್ಪಾ, ಮೊದಲೇ ಹೇಳಿದ್ದೇನೆ, ಹಗೆ ಸಾಧಿಸಲು ಇದು ಸಮಯವಲ್ಲವೆಂದು. ಕೂಡಲೇ ಹೊರಟು ಆ ಸರೋವರೇಶ್ವರನೂ, ಕಾಂಚನಮಾಲೆಯೂ ಜಾರಿ ಬಿದ್ದಿರುವ ಅರಣ್ಯದಕಡೆಗೆ ಹೋಗುವುದೀಗ ಮುಖ್ಯ, ಅವರು ಜೀವದಿಂದಿದ್ದಾರೋ ಇಲ್ಲವೋ, ಆಮೇಲೆ ಎಲ್ಲಾ ಮಾತು" ಎಂದನು.

"ಹೌದೌದು. ನನಗೂ ಗೊತ್ತಿದೆ. ಸರೋವರದ ರಾಜನ ಗತಿ ಏನಾಗಿದ್ದರೂ ಕಾಂಚನಮಾಲೆಯ ವಿಷಯ ನನಗೆ ತಿಳಿಯಲೇಬೇಕು. ಏನೋಯ್,



ಸಾಧಕಾ, ಇನ್ನು ಹೊರಡೋಣವೇ ಆ ಕಡೆ?" ಎಂದ ಜಯಶೀಲ.

ಸಿದ್ಧಸಾಧಕನು ಸುತ್ತಲೂ ಒಂದುಸಾರಿ ನೋಡಿ, "ಇಷ್ಟೊಂದು ಭೀಕರವಾದ ದಟ್ಟಡವಿಯಲ್ಲಿ ಅವರು ಯಾವ ಮೂಲೆಯಲ್ಲಿ ಬಿದ್ದರೆಂಬುದನ್ನು ತಿಳಿಯುವ ಬಗೆ ಹೇಗೆ?" ಎಂದನು.

ಸಾಧಕನ ಈ ಮಾತನ್ನು ಕೇಳಿ, ಹಂಸರಥದಲ್ಲಿದ್ದ ಅಂಗರಕ್ಷಕನು ಕೆಳಗಿಳಿದು ಸಾಧಕನಬಳಿಗೆ ಬಂದು, ನರವಾನರವನ್ನು ನೋಡಿ ಎರಡು ಹೆಜ್ಜೆ ಹಿಂದಕ್ಕಿಟ್ಟು, "ಅಯ್ಯಾ, ನೀವು ಆ ವಿಷಯದಲ್ಲಿ ಅನುಮಾನ ಪಡಬೇಕಾಗಿಲ್ಲ. ನಮ್ಮ ಒಡೆಯನೂ ಕಾಂಚನಮಾಲೆ ಎಂಬ ಆ ಮಾನವರಾಜಕುಮಾರಿಯೂ ಅರಣ್ಯದಲ್ಲಿ ಜಾರಿಬಿದ್ದ ಸ್ಥಳ ನನಗೆ ಚೆನ್ನಾಗಿ ಗೊತ್ತು. ಆ ಪ್ರದೇಶದ ಪಕ್ಕದಲ್ಲಿ ಒಂದು ಬೆಟ್ಟವಿದೆ. ಆಕಾಶವನ್ನು ಮುಟ್ಟುವಂತಹ ಭಾರೀ ಭಾರೀ ವೃಕ್ಷಗಳಿವೆ. ಒಂದು ಬದಿಯಲ್ಲಿ ಮರಗಿಡಗಳಾವುದೂ ಇಲ್ಲದ ಖಾಲೀ ಪ್ರದೇಶವಿದೆ. ಆ ಕಡೆಯಿಂದ ಬೆಳ್ಳಗಿನ ಹೊಗೆ ಆಕಾಶಕ್ಕೆ ಹರಡಿಕೊಂಡಿದೆ. ಇಷ್ಟೆಲ್ಲ ಗುರುತುಗಳಿರುವಾಗ ಅವರನ್ನು ಹುಡುಕಲು ಹೆಚ್ಚು ಕಷ್ಟವಾಗದು. ನಾವು ಬೇಗ ಹೊರಟರೆ ಒಳ್ಳೆಯದು." ಎಂದನು.

"ಆಹಾ! ಅಮೃತದಂಥ ಮಾತು! ಇಂಥಾ ಅಂಗರಕ್ಷಕನ ಸಹಾಯದಲ್ಲಿ ನಾವೆಲ್ಲಾ ಸುಲಭವಾಗಿ ಆ ಪ್ರದೇಶವನ್ನು ಕಂಡು ಹಿಡಿಯಬಹುದು. ಇನ್ನು ರಥದ ಮೇಲೇರಿರಿ" ಎಂದು ಹೇಳುತ್ತಾ ದೇವಶರ್ಮನು ರಥದಕಡೆಗೆ ಹೊರಟನು.

"ವೈದ್ಯದೇವಾ, ರಥದಲ್ಲಿ ಎಲ್ಲರಿಗೂ ಸ್ಥಳವಿದೆಯೆ? ಸಿದ್ಧಸಾಧಕನಿಗೂ ಅವನ ವಾಹನಕ್ಕೂ ಏನು ಗತಿ? ಮಕರಕೇತು ಜಲಗ್ರಹ ಗಜದ ಮೇಲೇರಿ ಆಕಾಶದಲ್ಲಿ ಹಾರುತ್ತಾ ನಮ್ಮನ್ನು ಅನುಸರಿಸುತ್ತಾನೆಯೇ?" ಎಂದ ಜಯಶೀಲ.

ದೇವಶರ್ಮನು ಎಲ್ಲರನ್ನೂ ಒಂದುಸಾರಿ ನೋಡಿ, "ವಾಹನವಿರುವವರೆಲ್ಲಾ ತಮ್ಮ ತಮ್ಮ ವಾಹನದಲ್ಲೇ ಬನ್ನಿರಿ. ಏನು ಸಾಧಕಾ, ಸಾಧ್ಯವಿಲ್ಲವೆ? ಮಕರಕೇತೂ, ನೀನು ಬರುವೆಯಷ್ಟೆ?" ಎಂದು ಕೇಳಿದನು.

ಮಕರಕೇತು ಸಿದ್ಧಸಾಧಕನನ್ನು ನೋಡಿದನು, ಅವನೇನು ಹೇಳುವನೋ ಎಂದು. ಸಿದ್ಧಸಾಧಕನು ಹಲ್ಲು ಕಡಿಯುತ್ತ ಮಕರಕೇತುವನ್ನು ಕಣ್ಣುಕುಕ್ಕಿ ನೋಡಿ, "ನಾನು ನರವಾನರದ ಮೇಲೆ ರಥವನ್ನು ವೇಗವಾಗಿಯೇ ಹೋಗಬಲ್ಲೆನು. ಆದರೆ ದಾರಿಯಲ್ಲಿ ಈ ಮಕರಕೇತು ಏನಾದರೂ ಮೋಸಮಾಡಬೇಕೆಂದು ನೋಡಿದನೋ, ಇವನನ್ನು ಈ ನರವಾನರಕ್ಕೆ ಮೇವಾಗಿ ಮಾಡಿ ಹಾಕುತ್ತೇನೆ. ಈ ಎಚ್ಚರಿಕೆ ಇದ್ದರೆ ಸರಿ." ಎಂದನು.

"ಸಾಧಕಾ, ಕೋಪವಿಟ್ಟುಕೊಳ್ಳಬೇಡ. ಈಗ ನಾವೆಲ್ಲಾ ಮಿತ್ರರು. ಅನ್ಯಭಾವನೆಗೆ ಎಡೆಯೇ ಇಲ್ಲ." ಎಂದು ಮಕರಕೇತು ಬಹಳ ಪ್ರಯತ್ನಪಟ್ಟು ನಗುವನ್ನು ತೋರಿಸಿದನು.

"ಈ ಮಾತನ್ನು ಬಹಳಸಾರಿ ಕೇಳಿದ್ದೇನೆ. ರಾಜನ ಮಕ್ಕಳು ಕಾಂಚನಮಾಲ, ಕಾಂಚನವರ್ಮರು ಸುರಕ್ಷಿತವಾಗಿ ದೊರಕುವವರೆಗೂ ಈ ಮಾಯಾ ಸರೋವರದ ತಂಡದವರೆಲ್ಲಾ ನಮಗೆ ಶತ್ರುಗಳೇ." ಎಂದ ಸಿದ್ಧಸಾಧಕ.

"ಸರಿ ಸರಿ. ಅಷ್ಟರವರೆಗಾದರೂ ಒಳ್ಳೆಯ ರೀತಿಯಲ್ಲಿ ಬಂದುಬಿಡಿ." ಎಂದ ದೇವಶರ್ಮ.


ಆಮೇಲೆ ಸಾಧಕನೂ ಮಕರಕೇತುವೂ ಹೊರತು ಉಳಿದವರೆಲ್ಲಾ ಹಂಸರಥವನ್ನು ಏರಿದರು. ಅಂಗರಕ್ಷಕನು ಮಕರಕೇತು ಸಿದ್ಧಸಾಧಕರಿಗೆ ಸಾಗಬೇಕಾದ ದಿಕ್ಕನ್ನು ತೋರಿಸಿ, "ಒಂದು ದೊಡ್ಡ ಬೆಟ್ಟ. ಮೇಘಗಳನ್ನು ಮುಟ್ಟುವ ಮಹಾ ವೃಕ್ಷಗಳು, ಖಾಲೀ ಸ್ಥಳ...ಚೆನ್ನಾಗಿ ನೆನಪಿಟ್ಟುಕೊಳ್ಳಿ," ಎಂದನು.

ಹಂಸಗಳ ರಥವು ಆಕಾಶದಕಡೆಗೆ ಎದ್ದು ಹೊರಟಿತು. ಅದು ಕಣ್ಣಿಗೆ ಕಾಣದೆ ಹೋದ ಮೇಲೆ, ಸಿದ್ಧಸಾಧಕನು ನರವಾನರದ ಭುಜದ ಮೇಲೇರಿ. " ಕರಕೇತೂ, ನೀನೂ ಹೊರಡು !" ಎಂದನು.

ಮಕರಕೇತು ತನ್ನ ಜಲಗ್ರಹ ಗಜದ ಮೇಲೆ ಏರಿಕೊಂಡನು. ಅಷ್ಟರಲ್ಲಿ ಸಾಧಕನಿಗೆ ಬಂದಿಯಾಗಿ ದೊರಕಿದ ಜಲವ್ಯಕರಾಕ್ಷಸನು ಅವನ ಮುಂದೆ ಅಡ್ಡ ಬಿದ್ದೇಳುತ್ತ, "ಮಹಾವೀರಾ ! ನನ್ನನ್ನು ಮರೆತುಬಿಟ್ಟಿರಲ್ಲಾ! ನನ್ನ ಕಡೆಯವರೆಲ್ಲಾ ಹೋಗಿಬಿಟ್ಟರು. ನನಗಿನ್ನು ಯಾರೂ ಇಲ್ಲ. ನನ್ನನ್ನೂ ನಿಮ್ಮ ಬಂಟನನ್ನಾಗಿ ಕರೆದುಕೊಂಡು ಹೋಗಿರಿ. ಈ ದಿನದಿಂದ ನಾನು ನಿಮ್ಮ ಸೇವಕ. ಆಜ್ಞಾಧಾರಕ ! ಪ್ರಮಾಣ ಮಾಡುತ್ತೇನೆ." ಎಂದನು.

ಅವನ ಮಾತು ಕೇಳಿ ಸಿದ್ಧಸಾಧಕನು ಸಂತೋಷದಿಂದ ಉಬ್ಬಿ, "ಭಲೇ! ಭಲೇ! ಹಾಗೆ ಬಾ ದಾರಿಗೆ! ಸರಿಯಾದ ದಾರಿಗೇ ಬಂದಿದ್ದೀಯಾ ! ಭೇಷ್ ! ನಾವು ಹೋಗುವ ದಾರಿಯಲ್ಲಿ ನೀರಿಲ್ಲವಲ್ಲಾ ? ನೆಲದ ಮೇಲೆ ನನ್ನ ನರವಾನರದಷ್ಟು ವೇಗವಾಗಿ ಅನುಸರಿಸಿ ಬರಬಲ್ಲೆಯಾ ? " ಎಂದನು.

"ದೊರೇ ! ನನಗೆ ರೆಕ್ಕೆಗಳಿಲ್ಲ ಅಂತ ಆಲೋಚಿಸಬೇಡಿ. ನೆಲದಲ್ಲಿಯೂ, ನೀರಿನಲ್ಲಿಯೂ, ಆಕಾಶ



ದಲ್ಲಿಯೂ ಪಕ್ಷಿಯಷ್ಟು ವೇಗವಾಗಿ ಓಡಬಲ್ಲೆ." ಎಂದ ಜಲವೃಕರಾಕ್ಷಸ.

"ಆಹಾ! ಹಾಗಾದರೆ ಮೆಚ್ಚಬಹುದು ನಿನ್ನನ್ನು." ಎಂದು ಸಿದ್ಧಸಾಧಕನು ಜಲವೃಕನ ಭುಜವನ್ನು ತಟ್ಟಿ "ಒಳ್ಳೆಯದು, ಒಪ್ಪಿದೆ" ಎಂದನು.

ಆ ಸಮಯಕ್ಕೆ ಅಲ್ಲಿಗೆ ಕುಳ್ಳರ ಸೇನಾಪತಿ ಕೆಲ ಮಂದಿ ಅನುಚರರೊಂದಿಗೆ ಟಗರು ವಾಹನದ ಮೇಲೆ ಬೇಗಬೇಗನೆ ಬಂದನು.

"ಓಹೊ! ವೀರಕುಬ್ಜ ಸೇನಾಧಿಪತಿಯೇ, ಏನು ವಿಶೇಷ?" ಎಂದು ಕೇಳಿದ ಸಿದ್ಧಸಾಧಕ.

ಕುಳ್ಳರ ಸೇನಾಪತಿ, ನದಿಯ ತೀರದಲ್ಲಿ ಗಾಯಗೊಂಡು ನರಳಿಕೊಂಡಿರುವ ಜಲವೃಕರಾಕ್ಷಸರನ್ನು ಸಿದ್ಧಸಾಧಕನಿಗೆ ತೋರಿಸುತ್ತ, "ದೊರೆಗಳೇ, ಇಲ್ಲಿ ನಡೆದುದನ್ನೆಲ್ಲಾ ಗುಡ್ಡದ ಮರೆಯಲ್ಲಿದ್ದು ನಾವು ನೋಡುತ್ತಿದ್ದೆವು. ಇಲ್ಲಿ ನರಳಿಕೊಂಡಿರುವ ತೋಳದ ತಲೆಯವರನ್ನೆಲ್ಲಾ ಏನು ಮಾಡಬೇಕು? ಇವರನ್ನು ಹೀಗೇ ನರಳಿ ನರಳಿ ಸಾಯುವ ಹಾಗೆ ಬಿಡುವುದು ಧರ್ಮವಾಗಲಿಕ್ಕಿಲ್ಲ ಅಲ್ಲವೆ? ಆಯುಸ್ಸಿದ್ದವರು ಬದುಕುವಂತೆ ನಾವು ಚಿಕಿತ್ಸೆಮಾಡಲು ಅನುಮತಿಯೆ?" ಎಂದು ಕೇಳಿದನು.


"ಒಳ್ಳೆಯ ಮಾತೇ ಹೇಳುವೆ. ದುಷ್ಟರಿಗೆ ಚಿಕಿತ್ಸೆ ಮಾಡಿಸಿಯೇ ಪರಲೋಕಕ್ಕೆ ಕಳುಹಿಸು. ಆದರೆ ಜಾಗ್ರತೆ! ಆ ರಾಕ್ಷಸ ಜಾತಿಗೆ ಶ್ವಾಸವೂ ಶಕ್ತಿಯೂ ಬಲವಾದಕೂಡಲೇ, ನಿಮ್ಮನ್ನೇ ಹಿಡಿದು ನುಂಗಿ ಬಿಟ್ಟಾರು! ಆಬಗ್ಗೆ ಎಚ್ಚರಿಕೆಯಲ್ಲಿದ್ದರೆ ಸರಿ" ಎಂದ ಸಿದ್ಧಸಾಧಕ.

"ಅದೆಲ್ಲಾ ನಮಗೆ ಗೊತ್ತು" ಎಂದು ಕುಳ್ಳರ ಸೇನಾಪತಿ, ಅರಣ್ಯದಕಡೆಗೆ ಆಶ್ಚರ್ಯದಿಂದ ನೋಡುತ್ತಾ" ದೊರೆಗಳೇ! ಅತ್ತನೋಡಿದಿರಾ? ಆಕಾಶದಲ್ಲಿ ಅಷ್ಟೊಂದು ಹೊಗೆಯೇನದು? ಅರಣ್ಯ ಸುಡುವುದೋ? ಅದರಾಚೆಗಿನ ಊರು ಗೀರು ಸುಡುತ್ತಿದೆಯೋ?" ಎಂದನು.

ಸಿದ್ಧಸಾಧಕನು ಅತ್ತ ನೋಡಿ ತಲೆಯಾಡಿಸುತ್ತ, "ಅದು ಅರಣ್ಯ ಸುಡವುದೂ ಅಲ್ಲ, ಹಳ್ಳಿಗೆ ಬೆಂಕಿ ಬಿದ್ದುದೂ ಅಲ್ಲ. ಮಾಯಾ ಸರೋವರೇಶ್ವರನೆಂಬವನ ಶರೀರ ಸಜೀವ ದಹನವಾಗುತ್ತಿದೆ! ಬಂಟಾ? ನರವಾನರಾ! ನಾವು ಹೋಗಬೇಕಾದ ಸ್ಥಳ ಅದೋ ಕಾಣಿಸುತ್ತಿದೆ. ಆ ಹೊಗೆಯ ಕಡೆಗೆ ವಾಯುವೇಗದಿಂದ ಓಡು. ಜೈ, ಮಹಾಕಾಳಾ!" ಎಂದು ನರವಾನರವನ್ನು ತಟ್ಟಿಬಿಟ್ಟನು.

ನರವಾನರವು ಅರಣ್ಯವು ಪ್ರತಿಧ್ವನಿಸುವಂತೆ ಕಿರಿಚಿ, ವೇಗವಾಗಿ ಓಡತೊಡಗಿತು. ಹಿಂದೆಯೇ ಜಲವೃಕರಾಕ್ಷಸನೂ, ಜಲಗ್ರಹದ ಮೇಲೆ ಮಕರಕೇತುವೂ ಸಾಗಿದರು.

(ಇನ್ನೂ ಇದೆ)





January 1978


# ಮಾಯಾಸರೋವರ

## ೨೪

[ಹಂಸ ರಥದ ಮೇಲೆ ದಾಳಿ ಮಾಡಿದ ಜಲವೃಕ ರಾಕ್ಷಸರನ್ನು ಜಯಶೀಲನೂ ಅವನ ಅನುಚರರೂ ಇದಿರಿಸಿ ಹತ ಮಾಡಿದರು. ಮಾಯಾ ಸರೋವರೇಶ್ವರನೂ, ರಾಜಕುಮಾರಿ ಕಾಂಚನಮಾಲೆಯೂ ರಥದಿಂದ ಕೆಳಗೆ ಬಿದ್ದರು. ಅವರು ಬಿದ್ದ ಅರಣ್ಯದ ಕಡೆಯಿಂದ ಬೆಳಗಿನ ಹೊಗೆ ಬರುವುದನ್ನು ನೋಡಿ ಎಲ್ಲರೂ ಆ ಕಡೆಗೆ ಹೋದರು.]

ಆಕಾಶದಲ್ಲಿ ಹಂಸ ರಥದ ಮೇಲೆ ರಣ ಹದ್ದುಗಳ ದಾಳಿಯಾಗಿ, ರಥವು ತಲೆಕೆಳಗಾಗಿ, ಮಾಯಾ ಸರೋವರೇಶ್ವರನೂ, ಕಾಂಚನ ಮಾಲೆಯೂ, ರಥದ ಸಾರಥಿಯೂ ಒಂದೇ ಬಾರಿ ಒಂದೇ ಸ್ಥಳಕ್ಕೆ ಬಿದ್ದು ಬಿಡಲಿಲ್ಲ. ಬೇರೆಬೇರೆ ಸ್ಥಳಗಳಲ್ಲಿ ಬಿದ್ದು ಬಿಟ್ಟಿದ್ದರು. ಹಾಗೆ ಬಿದ್ದ ಮಾಯಾ ಸರೋವರೇಶ್ವರನು ವಿಚಿತ್ರವೂ ಭಯಂಕರವೂ ಆದ ಅನುಭವಕ್ಕೆ ಗುರಿಯಾದನು. ಅವನೊಂದು ದೊಡ್ಡ ಗುಡಾಣದಂಥ ಭಾಂಡದೊಳಗಿನ ಬಿಸಿ ನೀರಿಗೆ ಬಿದ್ದು ಬಿಟ್ಟಿದ್ದನು. ತಾನು ಎಲ್ಲಿಗೆ ಬಿದ್ದೆನೆಂದು ಗೊತ್ತಾಗದೆ ತತ್ತಳಿಸಿದನು.

ಅದು ಹೇಗೆಂದರೆ, ಅವನು ಬಿದ್ದ ಸ್ಥಳವು ನರ ಭಕ್ಷಕರಾದ ಆಟವಿಕರಿರುವ ಪ್ರದೇಶ. ಅವರಿಗೆ ಇತ್ತೀಚೆಗೆ ಎಂಟು ಹತ್ತು ದಿನಗಳಿಂದ ತಕ್ಕ ಆಹಾರವೇ ಸಿಗಲಿಲ್ಲ. ಮೃಗಗಳನ್ನು ಬೇಟೆಯಾಡಿ ತಿನ್ನೋಣವೆಂದರೆ ಯಾವ ಮೃಗಗಳೂ ಕಾಣಲಿಲ್ಲ. ಅದಕ್ಕೆ ಕಾರಣವೇನೆಂದರೆ, ಆ ಪ್ರಾಂತಕ್ಕೆ ದೂರ ಪ್ರಾಂತದಿಂದ ಆಹಾರವನ್ನು ಅನ್ವೇಷಿಸುತ್ತಾ ಹುಲಿಗಳ ಗುಂಪೊಂದು ಬಂದಿತ್ತು, ಆ ಹುಲಿಗಳು ಆ ಕಾಡಿನಲ್ಲಿ ಎಲ್ಲಾ ಸಾಧು ಮೃಗಗಳನ್ನೂ ಹೊಂಚು ಹಾಕಿ ಹಿಡಿದು ತಿಂದು ತೀರಿಸಿದ್ದುವು. ಹುಲಿಗಳು ಬೇಟೆ



ಯಾಡುವಾಗ ಹೊರಡಿಸುವ ಭಯಂಕರ ಶಬ್ದಗಳಿಗೆ ಅಂಜಿ, ಉಳಿದ ಮೃಗಗಳೆಲ್ಲ ಗುಡ್ಡಗಳನ್ನು ದಾಟಿ ಎಲ್ಲೆಲ್ಲಿಗೋ ಓಡಿಹೋದುವು. ಹೀಗಾಗಿ ನರಭಕ್ಷಕ ಜಾತಿಯವರಿಗೆ ಅನೇಕ ದಿನಗಳಿಂದ ಬರಗಾಲ ಬಂದಷ್ಟು ಕಷ್ಟವಾಗಿತ್ತು.

ಆ ನರಭಕ್ಷಕರ ನಾಯಕನ ಹೆಸರು ಹೆಬ್ಬುಲಿ ಹೆಗ್ಗ. ಅವನಿಗೆ ಈ ಕಷ್ಟ ಪರಿಸ್ಥಿತಿಯಲ್ಲಿ ತನ್ನ ಗುಂಪಿನ ಕೆಲವರು ಬೇರೆಲ್ಲಿಗಾದರೂ ಪಲಾಯನ ಮಾಡುವ ಹಂಚಿಕೆಯಲ್ಲಿದ್ದಾರೆಂದು ತಿಳಿಯಿತು. ತನ್ನ ಪೂರ್ವಿಕರಿಂದ ತಲೆ ತಲಾಂತರವಾಗಿ ಹುಟ್ಟಿ ಬೆಳೆದು ಬಂದ ಆ ಕಾಡನ್ನು ಬಿಟ್ಟುಹೋಗುವುದೂ, ಹೋಗುವವರನ್ನು ನೋಡಿ ಸುಮ್ಮನಿರುವುದೂ ಮಹಾ ಪಾಪವಾಗಿ ಅವನಿಗೆ ತೋರಿತು. ಹೀಗೆ ತಮ್ಮ ಗುಂಪು ಶಿಥಿಲವಾಗಿಹೋದರೆ ಕರಿಯಾಲದ ಮರದ ಬುಡದ ನೆರಳಿನಲ್ಲಿರುವ ಶಿಥಿಲ ದೇವಾಲಯದ ಕಾಡಮ್ಮ ಮಾತಾಯಿಗೆ ವರ್ಷಕ್ಕೊಂದು ಬಾರಿ ಕೂಡಾ ನರಮಾಂಸದ ನೈವೇದ್ಯ ನೀಡುವವರಾರು? ನೋಡುವವರಾರು ಆ ಮಾತಾಯಿಯನ್ನು? ಅವಳ ಶಾಪಕ್ಕೆ ಗುರಿಯಾದರೆ ತಮ್ಮೆಲ್ಲರ ಗತಿಯೇನಾದೀತು ?

ಹೆಬ್ಬುಲಿಹೆಗ್ಗನು ತಲೆ ಕೊಡರಿಕೊಳ್ಳುತ್ತಾ, "ಹೇಗಾದರೂ ಸರಿ, ಈ ಪ್ರಾಂತದವರಾರೂ ಇಲ್ಲಿಂದ ಹೊರಟು ಹೋಗದ ಹಾಗೆ ಮಾಡಲೇಬೇಕು. ಅದಕ್ಕೆ ಬೇಕಾದ ಶಕ್ತಿಯನ್ನು ಆ ಮಾತಾಯಿಯೇ ನೀಡಬೇಕು. ನಾನೇನು ಮಾಡಬಲ್ಲೆ?" ಎಂದು ಹೇಳಿಕೊಳ್ಳುತ್ತಾ, ಕರಿಯಾಲದ ಮರದ ಕಾಡಮ್ಮನ ಆಲಯಕ್ಕೆ ಹೊರಟನು.

ಅದು ಯಾವ ತಾತರ ತಾತನ ಕಾಲದ್ದೋ ಏನೋ. ಅದಕ್ಕೆ ಬಾಗಿಲುಗಳೇ ಇರಲಿಲ್ಲ. ಬಿಸಿಲು ಮಳೆ ಬೀಳದ ಹಾಗೆ ಮಾಡು ಕೂಡಾ ಇರಲಿಲ್ಲ, ಮಳೆಗಾಲದಲ್ಲಿ ಮಹಾ ತುಫಾನುಗಳಿಗೆ ತಾಳಲಾರದೆ ಅರಣ್ಯ ಮೃಗಗಳು ಕೆಲವು ಆಗಾಗ ರಾತ್ರಿವೇಳೆಯಲ್ಲಿ ಅದರೊಳಗೆ ಅಡಗಿಕೊಳ್ಳುತ್ತಿದ್ದುವು. ಯಾವಾಗಲಾದರೊಮ್ಮೆ ಪೂಜೆಯ ಕಾಲದಲ್ಲಷ್ಟೇ ಅಲ್ಲಿ ಗದ್ದಲ.

ಆ ದಿನ ಬೆಳಿಗ್ಗೆ ಹೆಬ್ಬುಲಿಹೆಗ್ಗ ಕಾಡಮ್ಮನ ಶಿಥಿಲ ದೇವಾಲಯದೊಳಗೆ ಹೊಕ್ಕು ಒಂದು ಅದ್ಭುತ ದೃಶ್ಯವನ್ನು ನೋಡಿ ಗಕ್ಕನೆ ನಿಂತನು. ಭಾರಿಯಾದೊಂದು ಹೆಬ್ಬಾವು ಕಾಡಮ್ಮ ಮಾತಾಯಿಯ ವಿಗ್ರಹದ ಮುಂದೆ ಒಂದು ತೋಳವನ್ನು ತನ್ನ ಶರೀರದಿಂದ ಸುತ್ತಿಕೊಂಡಿತ್ತು. ಆದರೆ ಹೆಬ್ಬಾವಿನ ತಲೆ ತೋಳದ ಬಾಯಿಯೊಳಗೆ ಸಿಕ್ಕಿಕೊಂಡಿತ್ತು. ಅವೆರಡೂ ಒಂದನ್ನೊಂದು ಕೊಲ್ಲಲಿಕ್ಕೆ ಅಥವಾ ಜೀವದೊಂದಿಗೆ ಉಳಿದು ತಪ್ಪಿಸಿಕೊಳ್ಳಲಿಕ್ಕೆ ತೀವ್ರವಾಗಿ ಉರುಳಾಡಿಕೊಂಡಿದ್ದುವು. ಎರಡೂ ಸಮಾನ ಬಲವುಳ್ಳವಾಗಿದ್ದುವು.

ಈ ಮಹಾ ದೃಶ್ಯವನ್ನು ನೋಡಿ ಹೆಬ್ಬುಲಿಹೆಗ್ಗ ಭಯಕಂಪಿತನಾಗಿ ಹಿಂದಿರುಗಿ ಸ್ವಲ್ಪ ಓಡಿದ.


ಕಾಡಮ್ಮನ ಮುಂದೆ ಆ ದೃಶ್ಯವಿದ್ದುದರಿಂದ ಆಕೆಯೇ ತನ್ನ ಆಹಾರಕ್ಕಾಗಿ ಅವೆರಡನ್ನೂ ಆ ರೀತಿಯಲ್ಲಿ ಸಿಗಿಸಿಕೊಂಡಿರುವಾಗ ತಾನು ಪ್ರವೇಶಿಸಿದ್ದು ಅಪಚಾರ ವಾಯಿತೇನೋ ಎಂದು ಅವನಿಗೆ ಭಯವಾದು ದರಿಂದ ನಡುಗುತ್ತ ನಿಂತ.

ಆದರೆ ಅಷ್ಟರಲ್ಲಿ ಧೈರ್ಯ ತಂದುಕೊಂಡು, ದೂರದಲ್ಲಿ ಕಾಣುವ ಕಾಡಮ್ಮನ ವಿಗ್ರಹಕ್ಕೆ ಅಡ್ಡ ಬಿದ್ದು ಗಲ್ಲಗಳನ್ನು ನೆಲಕ್ಕೆ ಬಡಿದು ರಕ್ತಗಾಯಮಾಡಿ ಕೊಂಡು ಸಮೀಪ ಹೋಗಿ "ಓಮಾ ! ಕಾಡಮ್ಮಾ! ಮಾತಾಯಮ್ಮಾ ! ನೀನು ತೋರಿಸುವ ಮಹತ್ವದ ದೃಷ್ಟಾಂತ ನನ್ನ ಮೊದ್ದು ಮಂಡೆಗೇನು ತಿಳಿಯುತ್ತೆ? ಹತ್ತು ದಿನಗಳಿಂದ ನಿನ್ನ ಭಕ್ತರಿಗೆ ಆಹಾರವಿಲ್ಲ. ಹಸಿವಿನಿಂದ ಹೊರಳಾಡುತ್ತಿದ್ದೇವೆ. ...ನ್ನ ಕಣ್ಣಿಗೆ ಇಂಥಾ ದೃಶ್ಯವನ್ನು ತೋರಿಸಿ ಏನೆಂದು ಆಜ್ಞಾ ಪಿಸುತ್ತಿರುವೆಯಮ್ಮಾ ? " ಎಂದು ಕೂಗಿ ಕೇಳಿದನು.

ಅವನಿಗೆ ಬರುವ ಪ್ರತ್ಯುತ್ತರವೋ ಎಂಬಂತೆ ಗೋಡೆಯ ಕಲ್ಲುಗಳ ಎಡೆಯಲ್ಲಿ ಕಾಡುಬೆಕ್ಕೊಂದು ತಲೆಹೊರಗೆ ಹಾಕಿ, ಕೇಳುವವರ ಕಿವಿಗಳಲ್ಲಿ ಗಿಂಗುರು ಗುಟ್ಟುವಂತೆ "ಮ್ಯಾಂವ್, ಮ್ಯಾಂವ್" ಎಂದಿತು.

"ಹಾಗಂದರೆ ? ನನಗೇನು ಅರ್ಥವಾಗುತ್ತೆ ಮಾತಾಯೇ ? ಹೌದೌದು ! ಮಾತಾಯಮ್ಮನ ಪೂಜಾರೀನ ಕೇಳಬೇಕಾದ್ದೇ. ಇವುಗಳಿಗಿರುವ ಗೂಢಾರ್ಥಗಳನ್ನು ಆ ಮುದುಕನೇ ಅರ್ಥಮಾಡಿ ಹೇಳ ತಕ್ಕವನು !" ಎಂದು ಹೇಳಿಕೊಂಡು ಹೆಬ್ಬುಲಿ ಹೆಗ್ಗ "ಓಮ್ಮಾ, ಮಾತಾಯಮ್ಮಾ!" ಎಂದು ದೊಡ್ಡದಾಗಿ ಕೂಗಿ, ತನ್ನ ಗುಂಪಿನವರಬಳಿಗೆ ಓಡಿ ಯೋಡಿ ಬಂದನು. ಎಲ್ಲರೂ ಕಣ್ಣು ಬಾಯಿಬಿಟ್ಟು ಅವನನ್ನು ನೋಡತೊಡಗಿದರು.

ಆ ಸಮಯದಲ್ಲಿ ಚಿಕ್ಕವರೂ ದೊಡ್ಡವರೂ, ಗಂಡೂ ಹೆಣ್ಣೂ ಕೂಡಿದ ನರಭಕ್ಷಕರು, ಅರಣ್ಯದ ನಡುವಿನ ಚಿಕ್ಕ ಮೈದಾನ ಪ್ರದೇಶದಲ್ಲಿ ಗುಂಪಾಗಿ



ಕುಳಿತುಕೊಂಡು, ಹೊಟ್ಟೆಯ ವಿಷಯವನ್ನು ಕುರಿತು ಎಲ್ಲರೊಟ್ಟಿಗೆ ಮಾತಾಡಿಕೊಂಡಿದ್ದರು. ಹಸಿವನ್ನು ಇಂಗಿಸಲಿಕ್ಕೆ ಮರದ ಕಾಯಿಗಳನ್ನೋ, ಗೆಡ್ಡೆಬೇರು ಗಳನ್ನೋ, ಬೆಳೆದ ಎಲೆ ಚಿಗುರೆಲೆಗಳಲ್ಲಿ ಯಾವು ದನ್ನೋ, ತಿಂದರೆ ಒಳ್ಳೆಯದೆಂದು ಚರ್ಚೆಮಾಡುತ್ತ, ಹಾಗಲ್ಲ ಹೀಗೆಂದು ಕಿರಿಚಾಡುತ್ತ, ಜುಟ್ಟು ಹಿಡಿದೆಳೆ ಯುವ ಪರಿಸ್ಥಿತಿಯಲ್ಲಿದ್ದರು.

ಹೆಬ್ಬುಲಿ ಹೆಗ್ಗ ದೊಡ್ಡ ದೊಡ್ಡ ಹಾರಿಕೆಯಿಂದ ಓಡೋಡಿ ಬಂದು, "ಓ ಹೋಯ್ ! ಕಾಡಮ್ಮಾ ತಾಯಿ ದಯೆಮಾಡಿದಳೂ ! ಎಲ್ಲಿ ತಾಯಮ್ಮನ ಪೂಜಾರಿ ? ಅದರ ಅರ್ಥ ಹೇಳಬೇಕು. ಬೇಗಬರಲಿ ಮುಂದೆ !" ಎಂದು ದಿಕ್ಕುಗಳು ಪ್ರತಿಧ್ವನಿಸುವಂತೆ ಕೂಗಿದನು.

ನರಭಕ್ಷಕರೆಲ್ಲಾ ಒಂದೇಬಾರಿ ತಮ್ಮ ನಾಯಕ ನನ್ನು ನೋಡಿದರು. ಅವನ ಮಾತಿನಲ್ಲಿ ಅವರ ಕಣ್ಣಿಗೆ ಜಿಂಕೆಗಳ ಗುಂಪುಗಳೂ, ಕಾಡು ಹಂದಿಯ



ಮಂದೆಯೂ ಕಂಡುಬಂದುವು. ಅವರಲ್ಲಿ ಕೆಲವು ಹುಡುಗರು ಇಷ್ಟಿಷ್ಟೆತ್ತರಕ್ಕೆ ಹಾರಿ ಕುಣಿಯುತ್ತ, "ಹೆಗ್ಗಪ್ಪ ದೊರೇ ! ಕಾಡಮ್ಮನ ಗುಡಿಯಲ್ಲಿ ಜಿಂಕೆಗಳು, ಹಂದಿಗಳು ತುಂಬಾ ಸೇರಿವೆಯೇ ?" ಎಂದು ಕೇಳಿದರು. "ನಾನು ಮೊದಲು ತಿಂತೇನೆ" ಎಂದು ಅವರೊಳಗೆ ಮಾರಾಮಾರಿ ಏಳತೊಡಗಿತು.

ಹೆಬ್ಬುಲಿಹೆಗ್ಗ ಅದಕ್ಕೇನೂ ಉತ್ತರ ಕೊಡದೆ, ಸುತ್ತಲೂ ಹುಡುಕಾಡಿ ಪೂಜಾರಿಯನ್ನು ಕಾಣದೆ ಬೇಸತ್ತು, "ಓಹೋಯ್, ಹೆಣಪಿಂಡಗಳೇ ! ನಾನು ಕೇಳಿದ್ದೇನು ? ನೀವು ಹೇಳೋದೇನು ? ಮುದುಕ ಪೂಜಾರಿ ಎಲ್ಲಿ ? ಕಾಡಮ್ಮನ ಹತ್ತಿರ ಎಂಥದೋ ಗೂಢಾರ್ಥ ಅಲುಗುತ್ತಿದೆ. ಅದನ್ನು ಬಿಡಿಸಿ ಹೇಳುವವನು ಪೂಜಾರಿ ಒಬ್ಬನೇ. ಕರೆಯಿರಿ ಬೇಗ !" ಎಂದು ಕೂಗಿದನು.

ಆಗ ಪೂಜಾರಿ ದೂರದಲ್ಲಿದ್ದೊಂದು ಮರದ ನೆರಳಿನಲ್ಲಿ ಕುಳಿತುಕೊಂಡು ಹಸಿವೆಯಿಂದ ಮಯಕ ಬಂದು ತೂಕಡಿಸಿಕೊಂಡಿದ್ದನು. ಅವನು ಮರದ ಬುಡದಲ್ಲಿರುವ ಸಂಗತಿಯನ್ನು ಹುಡುಗರು ಓಡಿ ಬಂದು ಹೇಳಿದರು. "ಕರೆದರೆ ನೋಡುವುದೇ ಇಲ್ಲ" ಎಂತಲೂ ಹೇಳಿದರು.

ಹೆಬ್ಬುಲಿಹೆಗ್ಗ ಅವನ ಬಳಿಗೆ ಧಾವಿಸಿ ಹೋಗಿ, ತಾನು ಗುಡಿಯಲ್ಲಿ ನೋಡಿದ ದೃಶ್ಯವನ್ನು ಅವನ ಮುಂದೆ ಬಡಬಡನೆ ಹೇಳಿ, ಆಯಾಸದಿಂದ ಉದ್ದದ ಶ್ವಾಸಬಿಟ್ಟು, "ಏಳಯ್ಯಾ ! ಇದಕ್ಕೆ ಅರ್ಥವೇನೆಂದು ಬೇಗ ಹೇಳಿಬಿಡು. ನಮಗೆಲ್ಲಾ ಬೇಗದಲ್ಲೇ ಬೇಕಾದಷ್ಟು ಪ್ರಾಣಿಗಳು ಸಿಕ್ಕುವ ಅರ್ಥ ಆ ತೋಳ ಹೆಬ್ಬಾವುಗಳ ಗಂಟಿನಲ್ಲಿದೆಯೋ ತಿಳಿದು ಹೇಳಯ್ಯಾ" ಎಂದು ಕೂಗಿದನು.

ಪೂಜಾರಿ ಅವನು ಹೇಳಿದ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳದೆ, ಮತ್ತೆ ತೂಕಡಿಸುತ್ತ, "ನಮ್ಮ ಕಾಡಮ್ಮಾ ತಾಯಿಯ ಪೂಜಾರಿತನ ಮಾಡಿ ಮಾಡಿ ನನ್ನ ಕೂದಲೆಲ್ಲಾ ಹಣ್ಣಾಯಿತು. ಇಷ್ಟಾದರೂ ಆ ಕಾಡಮ್ಮ ನೇರಾಗಿ ಏನೂ ಹೇಳುವುದಿಲ್ಲ. ಎಲ್ಲದಕ್ಕೂ ಗೂಢಾರ್ಥವೇನಾ ! ಅರ್ಥಮಾಡಿಕೊಳ್ಳುವಾಗ ತಲೆ ಒಡೆದು ಹೋಗುತ್ತದೆ. ನನಗೆ ತೋರುವುದೇನಂದರೆ, ಕಾಡಿನಲ್ಲಿರುವ ಬೇರೆ ಜಾತಿಯವರ ಹಾಗೆಯೇ ಸಿಕ್ಕಿದಾಗ ಮಾಂಸ, ಸಿಕ್ಕದಿರುವಾಗ ಬಿದಿರಕ್ಕಿಯೋ, ಹಣ್ಣೋ ಕಾಯೋ ತಿನ್ನುವುದಕ್ಕೆ ಕಲಿಯುವುದೇ ಒಳ್ಳೆಯದು. ಏನನ್ನುವೆ ಹೆಬ್ಬುಲಿಹೆಗ್ಗಾ ?" ಎಂದನು.


"ನಾನ್ನುವುದು—" ಎಂದವನೇ ಹೆಬ್ಬುಲಿಹೆಗ್ಗ ಪಕ್ಕದಲ್ಲಿದ್ದವನ ಕೈಯಿಂದ ಮೊರಟು ದೊಣ್ಣೆಯನ್ನು ಎಳೆದುಕೊಂಡು, ಒಂದೇಟು ಆ ಮುದಿ ಪೂಜಾರಿಯ ಬೆನ್ನಿಗೆ ಹಾಕಿ, "ಜಾತಿ ದ್ರೋಹದ ಮಾತು ಹೇಳುವೆಯಾ ಮುದಿಯಾ ? ನಿನ್ನಂಥವನ ಬಾಯಿಯಿಂದ ಇಂಥ ಮಾತು ಬರುವುದೆಂದರೇನು ? ನಮ್ಮ ಜಾತಿ ಮಾಂಸದ ಹೊರತು ಮತ್ತೇನೂ

ಮುಟ್ಟಕೂಡದೆಂಬ ಕಟ್ಟಳೆಗೆ ದ್ರೋಹ ಬಗೆಯುವೆಯಾ ?" ಎಂದು ಗರ್ಜಿಸಿದನು.

ಆ ಪೆಟ್ಟಿಗೆ ಪೂಜಾರಿ ಆರ್ಭಟಿಸಿ ಹಾರಿನಿಂತನು. ಕೆದರಿದ ಬಿಳಿ ತಲೆಗೂದಲು ಹಾರಾಡುವಂತೆ ಮುಖವನ್ನು ಬರಬರ ಆಡಿಸುತ್ತ "ಓಹೋ ! ಕಾಡಮ್ಮಾ !" ಎಂದು ದೊಡ್ಡದನಿಯಿಂದ ಕೂಗಿದನು. "ಎಲವೆಲಾ ! ಹೆಬ್ಬುಲಿಹೆಗ್ಗಾ ! ಈಗ ಹೇಳು ! ಏನು ಸಂಗತಿ ? ಜಾತಿ ನಾಯಕನಾದ ನಿನ್ನ ಏಟಿನಿಂದ ಹಸಿವೆ ಹಾರಿಹೋಗಿ ಹುರುಪೇರಿತು !" ಎಂದು ಆಕಾಶಕ್ಕೆ ಹಾರಿ ಕೈಗೆಟಕಿದ ಮರದಕೊಂಬೆಯನ್ನು ಹಿಡಿದು ಕೋತಿಯಂತೆ ಓಲಾಡುತ್ತ ಕೂಗತೊಡಗಿದನು. ಕಾಡಮ್ಮನ ಆವೇಶ ಬಂದಿತ್ತು ಅವನಲ್ಲಿ.

ಹೆಬ್ಬುಲಿಹೆಗ್ಗ ಹೇಳಿದಂತೆ ಇಬ್ಬರು ಮೂವರು ನರಭಕ್ಷಕ ಹುಡುಗರು ಪೂಜಾರಿಯ ಕಾಲುಗಳನ್ನು ಹಿಡಿದು ಎಳೆದು, ಅವನು ಕೆಳಗೆ ಬೀಳುವ ಸಮಯಕ್ಕೆ ಸೊಂಟ ಹಿಡಿದು ನೇರಾಗಿ ನಿಲ್ಲಿಸಿದರು. ಹೆಬ್ಬುಲಿಹೆಗ್ಗ ಕೈಕಟ್ಟಿ ಬೆನ್ನು ಬಗ್ಗಿಸಿ ಭಕ್ತಿ ವಿಧೇಯತೆಯಿಂದ ಇನ್ನೊಂದುಸಾರಿ ತಾನು ಗುಡಿಯಲ್ಲಿ ನೋಡಿದ ಅದ್ಭುತ ದೃಶ್ಯವನ್ನು ಅವನ ಮುಂದೆ ಮಂತ್ರದ ಹಾಗೆ ಹೇಳಿದನು.

ಈಸಾರಿ ಪೂಜಾರಿ ಅವನು ಹೇಳುವುದನ್ನು ಶ್ರದ್ಧೆಯಿಂದ ಕೇಳಿ, ಮಾತು ಮಾತಿಗೂ ತಲೆಯಾಡಿಸಿ, ಆಮೇಲೆ ಸ್ವಲ್ಪ ಹೊತ್ತು ಆಕಾಶದ ಕಡೆಗೆ ನೋಡಿ, ಬಾಯಿಯಿಂದ ಏನೇನೋ ಮಂತ್ರಗಳನ್ನು ಪಟಪಟಿಸಿ, ಥಕ್ಕನೆ ಬಗ್ಗಿ ಮಣ್ಣು ಬಾಚಿಕೊಂಡು, ಅಲ್ಲಿದ್ದವರ ತಲೆಯ ಮೇಲೆ ಬೀಳುವಂತೆ ಸುತ್ತಲೂ ಚೆಲ್ಲಿ, "ಓಹೋಯ್ ! ಎಲ್ಲಾ ಬನ್ನಿ. ಮರಗಳಿಲ್ಲದ ಖಾಲೀ ಜಾಗೆಯಲ್ಲಿ ಒಲೆತೋಡಿರಿ ! ಉರಿ ಹಾಕಿರಿ ! ಅದರ ಮೇಲೆ ಹಂಡೆ ತುಂಬಾ ನೀರು ಕಾಸಿರಿ ! ಕಾಡಮ್ಮಾ



ತಾಯಿಯ ಗುಡಿಯಲ್ಲಿರುವ ಹೆಬ್ಬಾವನ್ನೂ, ತೋಳವನ್ನೂ, ಕಾಡುಬೆಕ್ಕನ್ನೂ ಇಲ್ಲಿಗೆ ತನ್ನಿರಿ ! ಆ ಹಂಡೆಯೊಳಗೆ ಅವುಗಳನ್ನು ಹಾಕಿ ಕುದಿಸಿರಿ." ಎಂದನು.

"ಆ ಬೆಕ್ಕು ಇನ್ನೂ ಆ ಕಲ್ಲು ಗೋಡೆಯಲ್ಲಿ ಇರಲಿಕ್ಕಿಲ್ಲ. ಇಲ್ಲದಿದ್ದರೆ ಎಲ್ಲಿದ್ದರೂ ಹುಡುಕಿಸಿ ತರಿಸುತ್ತೇನೆ. ಹೆಬ್ಬಾವೂ ತೋಳವೂ ಒಂದನ್ನೊಂದು ಕೊಂದುಕೊಂಡಿರಬಹುದು. ಈಗಲೇ ತರಿಸುತ್ತೇನೆ" ಎಂದ ಹೆಬ್ಬುಲಿಹೆಗ್ಗ.

"ಆ ಬೆಕ್ಕು ಸಿಕ್ಕದೆ ಹೋದರೆ ಅದು ಮ್ಯಾಂವ್ ಎಂದ ಕಲ್ಲನ್ನೇ ಎತ್ತಿಕೊಂಡು ಬನ್ನಿ. ಅದು ಮುಖ್ಯ. ಅದನ್ನು ಸಳಸಳ ಕುದಿಯುವ ಹಂಡೇ ನೀರಿನೊಳಗೆ ಹಾಕಲೇಬೇಕು ! ಬೆಕ್ಕು ಸಿಕ್ಕಿದರೆ ಅದನ್ನೂ ಹಾಕಿರಿ !" ಎಂದ ಮುದುಕ ಪೂಜಾರಿ.

"ಅದರ ಗೂಢಾರ್ಥ ಹೇಳಿಸು ತಾಯೇ. ಹೆಬ್ಬಾವು ತೋಳಕ್ಕೆ ಗಂಟುಹಾಕಿಕೊಂಡು ನನ್ನ ಕಣ್ಣಿಗೆ ಏಕೆ



ತೋರಿಸಿದೆಯಮ್ಮಾ? ನಮಗೆ ಬೇಗದಲ್ಲೇ ಬೇಟೆಯಾಡಲು ಒಳ್ಳೊಳ್ಳೆಯ ಪ್ರಾಣಿಗಳು ಸಿಕ್ಕುತ್ತವೋ? ಏನು ಕಾಡಮ್ಮಾ ತಾಯಿಯ ಅರ್ಥ?" ಎಂದು ಕೇಳಿದ ಹೆಬ್ಬುಲಿಹೆಗ್ಗ ಹೆದರುತ್ತ.

ಆ ಪ್ರಶ್ನೆಗೆ ಮುದಿ ಪೂಜಾರಿ ಹಾರಿ ಕುಣಿದು, ಮೂರು ಸುತ್ತು ತಿರುಗಿ, ಆಚೀಚೆ ಓಲಾಡುತ್ತಾ ನಿಂತು, "ಎಲೋ ಹೆಬ್ಬುಲಿಹೆಗ್ಗಾ, ನಾನಾರು? ಕಾಡಮ್ಮಾ ತಾಯಿ! ಎಲೋ ಮಗನೇ! ನಾನು ದಯಮಾಡಿದರೆ ಕಾಡು ಮೃಗಗಳು ಮಾತ್ರವಲ್ಲಾ, ನರಮಾಂಸ ಕೂಡಾ ದೊರಕುತ್ತದೆ. ಹೆದರಬೇಡ. ಸುಭಿಕ್ಷಕಾಲ ಬಂತು. ಹೇಳಿದಹಾಗೆ ಮುಡಿಸು!" ಎಂದು ಕಿರಿಚಿದ.

ಆ ಕೂಡಲೇ ಹೆಬ್ಬುಲಿಹೆಗ್ಗನ ಆಜ್ಞೆಯಂತೆ ಮರಗಳ ನಡುವಿನ ಖಾಲೀ ಪ್ರದೇಶದಲ್ಲಿ ದೊಡ್ಡದೊಂದು ಒಲೆಯ ಹೊಂಡವನ್ನು ತೋಡಿದರು. ಅದರ ಮೇಲೆ ಭಾರಿಯಾದೊಂದು ಹಂಡೆಯನ್ನಿಟ್ಟು ನೀರು ತಂದು ಸುರಿದರು. ಎಲ್ಲರಿಗೂ ಹೊಸ ಆಶೆ ಮೂಡಿತು. ಮಿತಿಮೀರಿದ ಉತ್ಸಾಹದಿಂದ ಹುಡುಗರು ಓಡುತ್ತ ಕುಣಿಯುತ್ತ, ಒಣಗಿದ ಕಟ್ಟಿಗೆಗಳನ್ನು ತಂದು ತಂದು ಬೆಂಕಿಯಲ್ಲಿ ಹಾಕತೊಡಗಿದರು. ಬೆಂಕಿ ಜೋರಾಗಿ ಉರಿಯುತ್ತ ಬಿಳಿಯ ಹೊಗೆ ಆಕಾಶದಲ್ಲಿ ವ್ಯಾಪಿಸತೊಡಗಿತು.

ಇಲ್ಲಿ ಹೀಗೆ ನಡೆಯುತ್ತಿರುವಾಗಲೇ ಮಾಯಾ ಸರೋವರೇಶ್ವರನು ಏರಿದ ಹಂಸರಥದ ಮೇಲೆ ಆಕಾಶದಲ್ಲಿ ಕೆಲವು ರಣಹದ್ದುಗಳು ಬಂದುಬಿದ್ದುವು. ಹಂಸಗಳು ರಥವನ್ನು ತಲಾ ಒಂದೊಂದು ದಿಕ್ಕಿಗೆ ಎಳೆದುದರಿಂದ ರಥವು ತಲೆಕೆಳಗಾಗಿ ನೆಲೆ ತಪ್ಪಿತು. ರಥದ ಹಿಡಿಕೆಯೊಂದನ್ನು ಹಿಡಿದುಕೊಂಡು ಮಾಯಾ ಸರೋವರೇಶ್ವರನ ಅಂಗರಕ್ಷಕನೊಬ್ಬ ಮಾತ್ರ ಕೆಳಗೆ ಬೀಳದೆ ಉಳಿದುಕೊಂಡನು. ರಥವನ್ನು ಹೊಡೆಯುವವನೂ, ಮಾಯಾ ಸರೋವರೇಶ್ವರನೂ, ಕನಕಾಕ್ಷ ರಾಜನ ಕುಮಾರಿ ಕಾಂಚನಮಾಲೆಯೂ ಒಬ್ಬೊಬ್ಬರೂ ಅಷ್ಟೆತ್ತರದಿಂದ ಕೆಳಗೆ ಬೀಳತೊಡಗಿದರು.

ಒಬ್ಬರು ಬಿದ್ದುದಕ್ಕೂ ಇನ್ನೊಬ್ಬರು ಬಿದ್ದುದಕ್ಕೂ ಸಮಯ ವ್ಯತ್ಯಾಸವಿದ್ದುದರಿಂದ ಒಬ್ಬರಿಗೊಬ್ಬರು ದೂರದೂರವಾಗಿಯೇ ಪಲ್ಟೀ ಹೊಡೆದು ಬಿದ್ದರು. ದೇಹದಲ್ಲಿ ದೇವರು ಬಂದು ತಲೆಕೆದರಿ ಮೇಲೆ ನೋಡುತ್ತಿದ್ದ ನರಭಕ್ಷಕರ ಪೂಜಾರಿ ನರಾಕಾರವೊಂದು ಆಕಾಶದಲ್ಲಿ ಕಂಡ ಕೂಡಲೇ, "ಓಹೋ! ಕಾಡಮ್ಮಾ! ದಯ ಮಾಡಿದಳು! ಹಸಿವಿನಿಂದ ನರಳುವ ಮಕ್ಕಳಿಗೆ ಕಾಡಮ್ಮ ದಯಮಾಡಿದಳು. ನಮಗೆ ಆಹಾರವಾಗಿ ಮನುಷ್ಯನನ್ನೇ ಕಳುಹಿಸಿದ್ದಾಳೆ! ನೀರು ಬೇಗ ಬಿಸಿಯಾಗಲಿ. ನರಮಾಂಸ, ಹೆಬ್ಬಾವು, ತೋಳ, ಬೆಕ್ಕುಗಳ ಮಾಂಸಗಳೊಂದಿಗೆ ಬೇಯಿಸಿ ಮೊದಲು ಕಾಡಮ್ಮಾ ತಾಯಿಗೆ ನೈವೇದ್ಯ ಮಾಡಬೇಕು. ಆಮೇಲೆ ನಮಗೆ ಬೇಕಾಗುವಷ್ಟು ಬೇಟೆ ದೊರುಕುತ್ತಾ ಇರುತ್ತೆ. ನಮ್ಮ ಕಷ್ಟ


ವಲ್ಲಾ ತೀರಿತು. ಜೈ ಕಾಡಮ್ಮಾ!" ಎಂದನು. ನರಭಕ್ಷಕ ಜಾತಿಯವರೆಲ್ಲರೂ ಉತ್ಸಾಹದಿಂದ ತಲೆಯೆತ್ತಿ ನೋಡುತ್ತಾ ಚಪ್ಪಾಳೆ ತಟ್ಟಿಕೊಂಡಿರಲು, ಮಾಯಾಸರೋವರೇಶ್ವರನು ನೆಲಕ್ಕೆ ಬಿದ್ದು ತಲೆ ಯೊಡೆದು ಸಾಯದೆ, ಅದೃಷ್ಟವಶಾತ್ ನೇರಾಗಿ ಆ ಹಂಡೆಯೊಳಗೇ ಬಿದ್ದುಬಿಟ್ಟನು.

ಅವನು ಹಂಡೆಯ ನೀರಿನಲ್ಲಿ ಒಂದು ಮುಳುಗು ಹಾಕಿ, ಎದ್ದು ಸಣ್ಣ ದನಿಯಿಂದ ಕೂಗಿ ಹಂಡೆಯ ಅಂಚು ಹಿಡಿದುಕೊಂಡು ಸುತ್ತಲೂ ನೋಡಿ, ತುಂಬಾ ಹೆದರಿದನು.

ಆ ನರಭಕ್ಷಕರ ಗುಂಪಿನ ನಡುವಿನಿಂದ, ಪೂಜಾರಿ ನಗುತ್ತ ಅವನ ಬಳಿಗೆ ಬಂದು, "ಓಹೋ! ನಮ್ಮ ಕಾಡಮ್ಮ ಸೊರಕಲು ಮನುಷ್ಯನನ್ನು ನಮಗೆ ಕೊಡಲಿಲ್ಲ. ಒಳ್ಳೇ ಕೊಬ್ಬಿದ ಕೋಣದಂಥವನನ್ನೇ ಬಹುಮಾನ ಕಳಿಸಿದ್ದಾಳೆ. ಯಮಲೋಕದ ಶಿಕ್ಷೆಗೆ ಪಾತ್ರನಾದವನನ್ನೇ ಕಳುಹಿಸಿರಬೇಕು. ನಮಗೇನೂ ಶ್ರಮವಾಗದಂತೆ ತಾನಾಗಿ ಒಲೆಯ ಮೇಲಿನ ಹಂಡೆಯೊಳಗೆ ಬೀಳುವಂತೆ ಮಾಡಿದ್ದಾಳೆ! ಅಡ್ಡ ಬಿದ್ದೇ! ಇನ್ನೂ ಅನೇಕ ನರರನ್ನು ಕಳುಹಿಸುವ ಏರ್ಪಾಡು ಮಾಡಮ್ಮಾ! ಕಾಡಮ್ಮಾ!" ಎಂದು ನೆಲದಲ್ಲಿ ದಂಡಪ್ರಣಾಮಮಾಡಿ ಎದ್ದನು.

ಪೂಜಾರಿಯ ಮಾತುಗಳನ್ನು ಕೇಳಿ ಮಾಯಾ-ಸರೋವರೇಶ್ವರನು ಇನ್ನಷ್ಟು ಹೆದರಿದನು. ತಾನು ಕ್ರೂರ ನರಭಕ್ಷಕರ ಕೈಗೆ ಸಿಕ್ಕಿಬಿದ್ದೆನೆಂದು ತಿಳಿದು ಏನು ಉಪಾಯವೆಂದು ತೀವ್ರವಾಗಿ ಯೋಚಿಸಿದನು. ಎಂತಹ ತನಗೆ ಇಂತಹ ದುರ್ಗತಿಯೇ! ಹಂಡೆಯ ನೀರು ಕ್ರಮವಾಗಿ ಬಿಸಿಯೇರಿಕೊಂಡು ಬರುತ್ತಿದೆ. ಶರೀರವು ಚುರ್ರೆನ್ನತೊಡಗಿತು. ಕಳೆಯುವ ಪ್ರತಿ ಕ್ಷಣವೂ ಯಾತನೆಯದು!

ಮಾಯಾಸರೋವರೇಶ್ವರನು ಹಂಡೆಯೊಳಗಿನಿಂದ ಹೊರಗೆ ಹಾರಲು ಪ್ರಯತ್ನಮಾಡಿದನು. ಆಗ



ಮುದುಕ ಪೂಜಾರಿ ಉರಿಯುವ ಕೊಳ್ಳಿಯನ್ನೆತ್ತಿ ಕೊಂಡು ಅವನಿಗೆ ಗುರಿ ತೋರಿಸುತ್ತ, "ಎಲೋ! ನಮ್ಮ ಹೊಟ್ಟೆಗೆ ಸೇರಲಿರುವ ಮನುಷ್ಯಾ! ಹಂಡೆಯ ನೀರಿನ ಬಿಸಿತಾಳದೆ ಹೊರಗೆ ಹಾರಲು ಯತ್ನಿಸಿದರೆ, ಎತ್ತಿ ಒಲೆಯೊಳಗೇ ಹಾಕಿ ಸುಟ್ಟು ತಿಂದೇವು! ಜಾಗ್ರತೆ! ಒಳಗೇ ಕುಕ್ಕರಿಸಿಕೋ." ಎಂದು ಗದರಿಸಿದನು.

ಇನ್ನು ತನಗೆ ಮರಣವೇ ಗತಿಯೆಂದು ಮಾಯಾ-ಸರೋವರೇಶ್ವರನಿಗೆ ಗೊತ್ತಾಯಿತು. ಸಾಯುವುದಕ್ಕೆ ಅವನು ಹೆದರುವುದಿಲ್ಲವಾದರೂ ಬಿಸಿನೀರಿನಲ್ಲಿ ಸುಟ್ಟುಸುಟ್ಟು ಸಾಯುವುದು ಕಷ್ಟಕರವಲ್ಲವೇ? ಏನಾದರೂ ಮಾಡಿ ಹಂಡೆಯೊಳಗಿನಿಂದ ಹೊರಗೆ ಪಾರಾಗಲೇಬೇಕು. ಇದು ಶತ್ರುವಿಗೂ ಬರಬಾರದ ಸಾವು.

ಪುಣ್ಯವಶಾತ್ ಒಂದು ಉಪಾಯ ಹೊಳೆಯಿತು. ಅವನು ಪೂಜಾರಿಯೊಂದಿಗೆ ಏನೋ ಗುಟ್ಟು

ಹೇಳುವವನ ಹಾಗೆ ಸಣ್ಣ ಸ್ವರದಲ್ಲಿ, "ಸ್ವಲ್ಪ ಕೇಳಿರಿ ಮಹಾ ಪೂಜಾರ್ರೇ! ನಿಮ್ಮ ದೇವಮ್ಮ ಆಕಾಶದಲ್ಲಿ ಇನ್ನೂ ಮೂವರನ್ನು ನಿಮ್ಮ ಆಹಾರಕ್ಕಾಗಿ ಕಳಿಸಿದಳು!" ಎನ್ನಲು, ಪೂಜಾರಿ ಆಶ್ಚರ್ಯದಿಂದ, "ಅವರೆಲ್ಲಿ?" ಎಂದ.

"ಅವರು ದಾರಿತಪ್ಪಿ ಅರಣ್ಯದಲ್ಲಿ ಮತ್ತೆಲ್ಲೋ ಇಳಿದ ಹಾಗಿದೆ. ನೀವು ನನ್ನನ್ನೂ ಕರೆದುಕೊಂಡು ಹೋಗಿ ನೋಡಿದರೆ ಅವರು ಸಿಗುವರು. ಇಲ್ಲೆಲ್ಲೋ ಸಮೀಪದಲ್ಲಿದ್ದಾರೆ. ತಡಮಾಡಿದರೆ ತಪ್ಪಿಸಿಕೊಳ್ಳುವರು" ಎಂದು ಹುಸಿಗುಂಡನ್ನು ಹಾಕಿದ ಮಾಯಾಸರೋವರೇಶ್ವರ.

ಆ ಮಾತು ನಿಜವೆಂದೇ ತೋರಿತು ಪೂಜಾರಿಗೆ. ಅವನು ಕೂಡಲೇ ಸರೋವರೇಶ್ವರನನ್ನು ಹಂಡೆಯೊಳಗಿನಿಂದ ಹೊರಕ್ಕೆ ಎಳೆಯಿಸಿ, ಕಾಡಮ್ಮನ ಗುಡಿಗೆ ಹೋಗಿದ್ದ ಹೆಬ್ಬುಲಿಹೆಗ್ಗನಿಗೆ ಇಲ್ಲಿ ನಡೆದ ಸಂಗತಿ ಹೇಳುವಂತೆ ಒಬ್ಬನನ್ನು ಕಳುಹಿಸಿದನು. ಆಮೇಲೆ ನಾಲ್ಕು ಮಂದಿಯನ್ನು ತನ್ನೊಂದಿಗೆ ಕರೆದುಕೊಂಡು, ಮಾಯಾಸರೋವೇಶ್ವರನನ್ನು ಕರೆದುಕೊಂಡು ಅರಣ್ಯದೊಳಗೆ ಹೊರಟನು.


ಅವರು ಅರಣ್ಯದಲ್ಲಿ ಸಾಯಂಕಾಲದ ವರೆಗೂ ತಿರುಗಿದರು. ಎಷ್ಟೋ ಪ್ರದೇಶಗಳಲ್ಲಿ ಹುಡುಕಿದರು. ಆಗ ಮಾಯಾಸರೋವೇಶ್ವರನಿಗೆ ಹಂಸರಥ ಸಾರಥಿಯ ಚಾಟಿಕೋಲು ಒಂದು ಕಡೆ ಬಿದ್ದಿರುವುದು ಕಾಣಿಸಿತು. ಆತುರದಿಂದ ಅದರ ಕಡೆಗೆ ಓಡಿದನು. ಅದನ್ನು ಎತ್ತಿಕೊಂಡು ತನ್ನ ಸಾರಥಿ ಈ ಮರದ ಕೊಂಬೆಯಲ್ಲಿರುವನೇನೋ ಎಂದುಕೊಂಡು ತಲೆಯೆತ್ತಿ ಪರಿಶೀಲಿಸುವ ದೃಷ್ಟಿಯನ್ನು ಬೀರಿದನು. ಮರದಕೊಂಬೆಯಲ್ಲಿ ಯಾರೂ ಕಾಣಲಿಲ್ಲ. ಅಷ್ಟರಲ್ಲಿ ಅಕಸ್ಮಾತ್ತಾಗಿ ಅಲ್ಲಿಗೆ ಆಗಲೇ ಹಾರಿಬಂದ ತನ್ನ ಹಂಸರಥವನ್ನು ಆಕಾಶದಲ್ಲಿ ನೋಡಿದನು. ಆಶೆಯು ಕುಡಿ ತಲೆ ಎತ್ತಿತು.

ಅದೇ ಸಮಯದಲ್ಲಿ ಮತ್ತೇನೋ ಶಬ್ದ ಕೇಳಿಬರತೊಡಗಿತು. ಈ ಪ್ರಾಂತದಿಂದ ಎದ್ದು ಆಕಾಶದಲ್ಲಿ ತುಂಬಿದ ಹೊಗೆಯ ಮಂಡಲವನ್ನು ಗುರುತಿಸಿಕೊಂಡು ಬರುತ್ತಿರುವ ಸಿದ್ಧ ಸಾಧಕ, ಮಕರ ಕೇತುಗಳು ನರಭಕ್ಷಕರಿರುವ ಈ ಪ್ರಾಂತಕ್ಕೆ ಬಂದುಬಿಟ್ಟರು.

ಸಿದ್ಧಸಾಧಕನು ತನ್ನ ಬೃಹತ್ ವಾಹನವಾದ ನರವಾನರವನ್ನು ತಟ್ಟಿ ತಟ್ಟಿ ಕೆರಳಿಸುತ್ತ "ಜೈ! ಮಹಾಕಾಳಾ!" ಎಂದು ಕರ್ಕಶವಾಗಿ ಕೂಗಿದ ಕೇಕೇ ಶಬ್ದವನ್ನು ಕೇಳಿ, ಮಾಯಾಸರೋವರೇಶ್ವರನೂ, ಅವನೊಂದಿಗಿರುವ ನರಭಕ್ಷಕ ಜಾತಿಯವರೂ ತುಂಬಾ ಹೆದರಿ ನಡುಗಲು ತೊಡಗಿದರು.

(ಇನ್ನೂ ಇದೆ)






# ಮಾಯಾ ಸರೋವರ

೨೫

[ಆಕಾಶದಲ್ಲಿ ಹಾರುವ ಹಂಸ ರಥದಿಂದ ಜಾರಿಬಿದ್ದ ಮಾಯಾ ಸರೋವರೇಶ್ವರನು, ಅರಣ್ಯದ ಒಂದು ಕಡೆಯಲ್ಲಿದ್ದ ನರಭಕ್ಷಕ ಜಾತಿಯವರ ಬಿಸಿ ನೀರು ಹಂಡೆಯೊಳಗೆ ಬಿದ್ದನು. ಇನ್ನೂ ಕೆಲವರು ನೆಲಕ್ಕೆ ಬಿದ್ದಿದ್ದಾರೆಂದು ಅವನು ಹೇಳಲು ನರಭಕ್ಷಕರು ಅವನನ್ನು ಹಂಡೆಯಿಂದೆತ್ತಿ ಹುಡುಕುತ್ತಿರುವಾಗ, ಸಿದ್ಧಸಾಧಕನ ಕೂಗು ಅವರಿಗೆ ಕೇಳಿಸಿತು.]

ಸಿದ್ಧಸಾಧಕನು ತನ್ನ ಆರಾಧ್ಯ ದೈವನಾದ ಮಹಾಕಾಳನಿಗೆ ಜಯಜಯಕಾರ ಮಾಡುತ್ತಾ, ಬರುವ ಶಬ್ದ ಕೇಳಿ ಮಾಯಾ ಸರೋವರೇಶ್ವರನು, ನೆಲದಲ್ಲಿ ಕಾಲು ಹೂಗಿದವನಂತೆ ನಿಂತು ಗಡಗಡ ನಡುಗುವುದನ್ನು ನೋಡಿ, ನರಭಕ್ಷಕರ ಪೂಜಾರಿ ಮುದುಕ ಆತ್ಯಾಶ್ಚರ್ಯ ಪಟ್ಟನು.

ಆ ನರಮನುಷ್ಯನ ಕೂಗಿಗೆ ಈ ನರಮನುಷ್ಯ ಹೀಗೇಕೆ ಹೆದರುತ್ತಾನೆ ? ಒಂದುವೇಳೆ ಕೂಗುವವನು ಯಾವುದೋ ಬೇರೆ ಭಯಂಕರ ಜಾತಿಯವನೋ ? ಆ ಪೂಜಾರಿಯು ಜತೆಯಲ್ಲಿದ್ದ ನಾಲ್ವರು ನರಭಕ್ಷಕರು ಮಾತ್ರ ಆ ಶಬ್ದ ಕೇಳಿಬಂದ ಕಡೆಗೆ ಉತ್ಸಾಹದಿಂದ ಓಡಿದರು ದೇವಿ ಇನ್ನಾರನ್ನೋ ಕಳುಹಿಸಿದಳೆಂದು.

ಆಗ ಮಾಯಾ ಸರೋವರೇಶ್ವರನು ಎಚ್ಚರಕ್ಕೆ ಬಂದು ನರಭಕ್ಷಕ ಪೂಜಾರಿಯೊಂದಿಗೆ, "ನಿಮ್ಮವರನ್ನು ಹಿಂದಕ್ಕೆ ಕರೆಯಿರಿ. ಆ ಕೂಗು ಮಹಾಕಾಳನ ಭಕ್ತನದು. ಅವನು ಸಾಮಾನ್ಯದವನಲ್ಲ. ಅವನ ಮಂತ್ರಶಕ್ತಿಗಳ ಮುಂದೆ ನಿಮ್ಮ ಈಟಿಕೋಲುಗಳೆಲ್ಲ ಹುಲ್ಲು ಕಡ್ಡಿಗಳಿಗೆ ಸಮ ! ಅವನಿಗೆ ಕೋಪ ಬಂದರೆ ಈ ಅರಣ್ಯವೆಲ್ಲವೂ ಉರಿದು ಸುಟ್ಟು ಬೂದಿಯಾದೀತು !" ಎಂದನು.



ಅದನ್ನು ಕೇಳಿ ಪೂಜಾರಿ ಗಡಗಡನೆ ನಕ್ಕು. "ನಮ್ಮ ನರಭಕ್ಷಕರಿಗೆ ನರಮನುಷ್ಯರು ಮಾಡುವ ಯಾವ ಮಂತ್ರ ತಂತ್ರಗಳ ಭಯವೂ ಇಲ್ಲ. ನಮ್ಮ ಆಹಾರಕ್ಕಾಗಿ ಕಾಡಮ್ಮಾ ತಾಯಿ ಇನ್ನೊಬ್ಬ ಮನುಷ್ಯನನ್ನು ಕಳುಹಿಸಿದ್ದಾಳೆ. ಸುಮ್ಮನೆ ಬುರುಡೇ ಬಿಟ್ಟು ನಮ್ಮನ್ನು ಹೆದರಿಸಬೇಡ. ಅವನು ಪಾಪ, ಕಡೇಗಾಲ ಬಂತೂಂತ ಏನೋ ಕೂಗಿಕೊಳ್ಳುತ್ತ ನಮ್ಮ ಬಾಯಿಗೆ ಬೀಳಲು ಬರುತ್ತಿದ್ದಾನೆ." ಎಂದನು.

ಅಷ್ಟರಲ್ಲಿ ಆ ಕೂಗಾಳಿಯನ್ನು ಚುಚ್ಚಿಕೊಲ್ಲಲು ಉತ್ಸಾಹದಿಂದ ಓಡಿದ ನರಭಕ್ಷಕರು ಕುಯ್ಯೋ ಮುರ್ಯೋ ಎಂದು ಕೆಟ್ಟ ಆರ್ತನಾದ ಮಾಡುತ್ತ ಬಿದ್ದೆದ್ದುಕೊಂಡು ಓಡುತ್ತಾ ಪೂಜಾರಿಯ ಹತ್ತಿರ ಬಂದು, "ಕಾಪಾಡಿ ಕಾಪಾಡಿ, ಕಾಡಪ್ಪದೇವರಪೂಜಾರಿಗಳೇ! ಆನೆಯಷ್ಟು ದೊಡ್ಡ ನರವಾನರದ ಮೇಲೆ ಯಮಕಿಂಕರನಂಥ ಒಬ್ಬನು ಆರ್ಭಟಿಸಿಕೊಂಡು ಇಲ್ಲಿಗೇ ಬರುತ್ತಾನೆ. ಆತ ನಮ್ಮ ಆಹಾರದ ನರಮನುಷ್ಯನ ಹಾಗೆ ಕಾಣುವುದಿಲ್ಲ. ನಮ್ಮನ್ನೆಲ್ಲಾ ಧ್ವಂಸ ಮಾಡಲಿಕ್ಕೆ ಬಂದ ವಾನರ ಭೂತದ ಹಾಗಿದ್ದಾನೆ." ಎಂದರು.

ಆ ಮಾತು ಕೇಳಿ ನರಭಕ್ಷಕ ಪೂಜಾರಿಗೂ ಭಯವಾಯಿತು. ಓಡಲೋ ಬಿಡಲೋ ಎಂಬಂತೆ ಅಚೀಚೆ ನೋಡತೊಡಗಿದ.

ಅಷ್ಟರಲ್ಲಿ ತುಸುದೂರ ಮರಗಳ ಮರೆಯಿಂದ, ಶೂಲವನ್ನು ಮೇಲೆತ್ತಿ ನರವಾನರವನ್ನು ವೇಗವಾಗಿ ಓಡಿಸುತ್ತ ತಮ್ಮಕಡೆಗೆ ಬರುವ ಸಿದ್ಧಸಾಧಕನನ್ನು ಅವನೂ ನೋಡಿದನು.

"ಇವನಾರೋ ತಿಳಿಯಲಿಲ್ಲ. ಏನೋ ಕೆಟ್ಟಕಾಲ ಬಂದಿದೆ. ನಾವಿಲ್ಲಿಂದ ಓಡಿಹೋಗುವುದೇ ಒಳ್ಳೆಯದು. ಒಬ್ಬನು ಮುಂದಾಗಿ ಓಡಿಹೋಗಿ ಹೆಬ್ಬುಲಿಹೆಗ್ಗನಿಗೆ ಈ ಯಮಕಿಂಕರನನ್ನು ಕುರಿತು ಹೇಳಲಿ. ಈ ಮಹಾಭೂತದವನ ಕೈಯಲ್ಲಿಬಿದ್ದರೆ ನಮ್ಮ ಜಾತಿಯವರಿಗೆ ಸರ್ವನಾಶವೇ ಗತಿ! ಮೊದಲು ಓಡಿಹೋಗಿ ಎಲ್ಲಾದರೂ ಅಡಗಿ ಅವನು ಏಕೆ ಬಂದನೆಂದು ನೋಡೋಣ. ಎಲ್ಲರೂ ಓಡಿರಿ!" ಎಂದು ಹೇಳಿ ಪೂಜಾರಿ, ಓಡಿಹೋಗುವ ಎತ್ತುಗಡೆಯಲ್ಲಿ ತಿರುಗಿದನು.

ಅಷ್ಟರೊಳಗೆ ಸಿದ್ಧಸಾಧಕನು "ಓಂ! ಮಹಾಕಾಳಾ!" ಎಂದು ಕೂಗಿ, ಓಡಿಹೋಗಲು ನೋಡುವ ನರಭಕ್ಷಕರ ಮುಂದೆ ನರವಾನರದೊಂದಿಗೆ ಬಂದು ನಿಂತು, "ಕದಲಬೇಡಿ ಹೇಡಿಗಳಿರಾ! ಒಂದರಿ ಕದಲಿದಿರೆಂದರೆ ನಿಮ್ಮನ್ನೆಲ್ಲಾ ನರವಾನರಕ್ಕೆ ಬಲಿ ಹಾಕಿಬಿಡುತ್ತೇನೆ. ಯಾರು ನೀವೆಲ್ಲಾ? ನಾನು ಕೇಳುವುದಕ್ಕೆ ಬೇಗ ಉತ್ತರ ಕೊಡಿ. ಕಾಂಚನಮಾಲೆ ಎಂಬ ರಾಜಕುಮಾರಿಯೊಬ್ಬಳು ಹಂಸ ರಥದಿಂದ ಜಾರಿ ಇಲ್ಲೆಲ್ಲೋ ಬಿದ್ದಳು. ನೋಡಿದಿರಾ? ನಿಮಗೆ ಗೊತ್ತೇ?" ಎಂದು ಗರ್ಜಿಸಿ ಕೇಳಿದನು. ಸಿದ್ಧಸಾಧಕನು ಹೇಳಿದ ಮಾತುಗಳು ಆ ಪೂಜಾರಿ

ಗಾಗಲೀ, ಇತರ ನರಭಕ್ಷಕರಿಗಾಗಲೀ ಸ್ವಲ್ಪವೂ ಅರ್ಥವಾಗಲಿಲ್ಲ. ಪೂಜಾರಿ ಸ್ವಲ್ಪ ಹೊತ್ತು ಏನನ್ನೋ ನೆನಪು ಮಾಡಿಕೊಂಡವನಂತೆ, ಮಾಯಾ ಸರೋವರೇಶ್ವರನ ಕಡೆಗೆ ತಿರುಗಿ, ಸಿದ್ಧಸಾಧಕನಿಗೆ ಅವನನ್ನು ತೋರಿಸುತ್ತ, "ಸತ್ಯ ಹೇಳುತ್ತೇನೆ. ನಮ್ಮ ಕಾಡಮ್ಮ ಮಾತಾಯಿ ನಮಗೆ ಆಹಾರವಾಗಿ ಆಕಾಶದಿಂದ ಅವನನ್ನು ಕೆಳಗೆ ಕಳಿಸಿದಳು. ನೀವು ಹೇಳುವ ರಾಜಕುಮಾರಿಯ ಸಂಗತಿ ಯಾವುದೂ ನಮಗೆ ಗೊತ್ತಿಲ್ಲ. ಅದು ಅವನಿಗೆ ಗೊತ್ತಿದ್ದೀತು. ಕೇಳಿ ನೋಡಿ" ಎಂದನು.

ಅದುವರೆಗೂ ನರಭಕ್ಷಕರ ವಿಚಿತ್ರ ವರ್ತನೆಯ ಮೇಲೆಯೇ ಲಕ್ಷ್ಯವಿಟ್ಟುಕೊಂಡಿದ್ದ ಸಿದ್ಧಸಾಧಕನು, ಸ್ವಲ್ಪ ದೂರ ಮರಗಳ ಅಡ್ಡದಲ್ಲಿ ನಿಂತಿದ್ದ ಮಾಯಾ ಸರೋವರೇಶ್ವರನನ್ನು ನೋಡಿರಲಿಲ್ಲ. ಈಗ ನೋಡಿದ ಕೂಡಲೇ, "ಇಲ್ಲಿದ್ದಾನೇನು? ಓಹೋ! ನೀನೇಯೇನು ಮಾಯಾ ಸರೋವರೇಶ್ವರ! ಹೇಡಿಗಳ ಆರಾಧ್ಯದೇವ! ನಿನ್ನ ಟೋಪೀ ಕಿರೀಟವೂ ನೀನೂ! ಕಳ್ಳನ ಹಾಗೆ ಓಡಿಹೋಗಲು ನೋಡುವೆಯಾ? ಜಾಗ್ರತೆ! ಶೂಲಕ್ಕೆ ಚುಚ್ಚಿ ಭೂಮಿಯಲ್ಲಿ ಹೂಗಿದು ಹಾಕೇನು! ಬಾ ಮುಂದೆ! ಸರಿಯಾಗಿ ನಿಲ್ಲು!" ಎಂದನು.

ಸಿದ್ಧಸಾಧಕನ ಮಾತಿನಿಂದ ಸರೋವರೇಶ್ವರನಿಗೆ ಬಹಳ ಕೋಪಬಂದಿತು. ಅವನು ಕತ್ತಿಯ ಹಿಡಿಯ ಮೇಲೆ ಕೈ ಹಾಕಿ, ಹಲ್ಲು ಕಡಿದು ತನ್ನ ಕೋಪವನ್ನು ಹತ್ತಿಕ್ಕಿಕೊಂಡು, "ಸ್ವಲ್ಪ ನಿನ್ನ ಪ್ರತಾಪವನ್ನು ಹದ್ದಿನಲ್ಲೇ ಇಟ್ಟುಕೋ. ನಿನ್ನ ವೇಷಭಾಷೆಗಳನ್ನು ನೋಡಿದರೆ ನೀನೊಬ್ಬ ಕಾಡು ಕಾಪಾಲಿಕ ಎಂಬುದರ ಹೊರತು, ನಿನ್ನ ಊರು ಹೆಸರು ಯಾವುದೂ ನನಗೆ ತಿಳಿಯದು. ನಿನಗೂ ನನಗೂ ಯಾವ ಸಂಬಂಧವೂ ಇಲ್ಲ. ಸರಿಸಮಾನರ ಮೇಲೆ ಮಾತ್ರವೇ ನಾನು ಕತ್ತಿ ಎತ್ತುವವನು. ಆದುದರಿಂದ ಇಷ್ಟಕ್ಕೇ ನಿನ್ನ ಕ್ರೂರ



ಮಾತುಗಳನ್ನು ನಿಲ್ಲಿಸಿ ನಿನ್ನ ದಾರಿ ಹಿಡಿದು ಹೋಗಿಬಿಡು" ಎಂದನು ಹೀನಯಿಸುವಂತೆ.


"ಓಹೋ! ದೊಡ್ಡ ದೇವನಿಗೆ ನನ್ನ ಹೆಸರು ದೆಸೆ ತಿಳೀಬೇಕೇನು? ಕೇಳು. ನಾನು ಸಿದ್ಧಸಾಧಕ. ಮಹಾಕಾಳನ ಭಕ್ತ. ನಿನ್ನ ಬಲಪರಾಕ್ರಮ ವೊದಲಾದ ಅಂತಸ್ತಿಗೆ ತಕ್ಕ ಬಂಟ ನನಗಿದ್ದಾನೆ. ನಾನು ಇಲ್ಲಿಗೆ ಬರುವಾಗ, ಇಲ್ಲಿ ಎಲ್ಲಿಯಾದರೂ ನಮ್ಮ ರಾಜಕುಮಾರಿ ಬಿದ್ದಿದ್ದಾಳೋ ಅಂತ ಹುಡುಕುತ್ತಾ ಬರಲು ಅವನಿಗೆ ಹೇಳಿದ್ದೇನೆ. ಈಗಲೆ ಅವನನ್ನು ಕರೆಯುತ್ತೇನೆ. ನೋಡುವಿಯಂತೆ" ಎಂದು ಸಿದ್ಧಸಾಧಕನು ದೊಡ್ಡ ಕಂಠ ಸ್ವರದಿಂದ, "ಎಲೋ ಜಲವೃಕಾ! ಎಲ್ಲಿದ್ದೀಯೋ? ಬೇಗ ಬಾ! ನಿಮ್ಮೆಲ್ಲರ ಶತ್ರು ಮಾಯಾ ಸರೋವರೇಶ್ವರ ಇಲ್ಲಿದ್ದಾನೆ. ಅವನಿಗೆ ಸರಿಸಮಾನರೇ ಬೇಕಂತೆ. ಬಂದು ಅವನ ಬಲ ದರ್ಪಗಳನ್ನಿಷ್ಟು ಪರೀಕ್ಷೆ ಮಾಡು." ಎಂದು ಕೂಗಿ ಹೇಳಿದನು.

ಜಲವೃಕ ರಾಕ್ಷಸನು ಆಕಾಶ ಮಾರ್ಗದಲ್ಲಿ ವೇಗವಾಗಿ ಬಂದು ಕೆಳಗಿಳಿಯುವಾಗ, ದಪ್ಪವಾದೊಂದು ತೇಗಿನ ಮರದ ಹಿಂದಿನಿಂದ ಮಕರಕೇತು ತನ್ನ ಜಲಗ್ರಹದ ಮೇಲೆ ಮುಂದಕ್ಕೆ ಬಂದು ಅವನನ್ನು ಅಡ್ಡಗಿಸಿದನು. ಅವನ ಸಂಜ್ಞೆಯಂತೆ ಜಲಗ್ರಹ ಆನೆ ಘೀಂಕಾರ ಮಾಡಿ ಸೊಂಡಿಲನ್ನು ಚಾಚಿ ಜಲರಾಕ್ಷಸನನ್ನು ಹಿಡಿಯಲು ನೋಡಿತು.

ಜಲರಾಕ್ಷಸನು ತಟ್ಟನೆ ಹಿಂದಕ್ಕೆ ಹಾರಿ ಬದಿಗೆ ಹೋಗಿ, ಮಿಂಚಿನ ವೇಗದಲ್ಲಿ ಹಿಂದಿರುಗಿ ಕೈಯಲ್ಲಿರುವ ಕಲ್ಲಿನ ಗದೆಯಿಂದ ಜಲಗ್ರಹದ ತಲೆಗೆ ಒಂದೇಟು ಹಾಕಿದನು. ಆ ಪೆಟ್ಟಿಗೆ ಜಲಗ್ರಹವು ಪಕ್ಕಕ್ಕೆ ಒರಗಿ ಬಿತ್ತು. ಮಕರಕೇತು ಭೀಕರವಾದೊಂದು ಗರ್ಜನೆ ಹಾಕಿ, "ಎಲೋ ಜಲವೃಕ ರಕ್ಕಸನೇ ! ನಿನ್ನನ್ನೀಗಲೇ ಯಮಲೋಕಕ್ಕೆ ಕಳುಹಿಸಿಬಿಡುತ್ತೇನೆ" ಎಂದು ಕತ್ತಿಯಿಂದ ಅವನ ಕಂಠವನ್ನು ಕಡಿಯಲು ನೋಡಿದನು. ಅಷ್ಟರಲ್ಲಿ ಜಲವೃಕನು ಕದಲಿದುದರಿಂದ ಕತ್ತಿ ಗುರಿ ತಪ್ಪಿ ಅವನ ಭುಜವನ್ನು ಮಾತ್ರ ಗೀರಿ ಛಿಲ್ಲನೆ ರಕ್ತ ಹರಿಸಿತು. ನರವಾನರದ ಮೇಲಿದ್ದು ಇದನ್ನೆಲ್ಲಾ ನೋಡುತ್ತಿದ್ದ ಸಿದ್ಧಸಾಧಕನು, ತನ ಬಂಟನಾದ ಜಲವೃಕನ ಭುಜದಲ್ಲಿ ಹರಿಯುವ ರಕ್ತವನ್ನು ನೋಡಿ ಸಹಿಸದೆ ಆತ್ಮಾವೇಶಗೊಂಡನು. ಜಯಶೀಲನು ಏನಂದರೂ ಪರವಾಯಿಲ್ಲ ಎಂದುಕೊಂಡು, ಮೊದಲು ಮಕರಕೇತುವಿನ ಒಡೆಯನಾದ ಈ ಮಾಯಾ ಸರೋವರದವನನ್ನು ಚಿತ್ರವಧೆ ಮಾಡಿಬಿಡುವುದೇ ಸರಿ, ಎಂಬ ನಿಶ್ಚಯದಲ್ಲಿ ನರವಾನರವನ್ನು ಅವನ ಮೇಲೆ ಹಾರಿಸಿದನು.

ಅದೇ ವೇಳೆಯಲ್ಲಿ ಸುತ್ತುಮುತ್ತಲೂ ಒಮ್ಮೆಗೇ ತಮಟೇ ಶಬ್ದಗಳೂ, ಸಿಳ್ಳುದನಿಗಳೂ ಹೊರಟುವು. ಸಿದ್ಧಸಾಧಕನು ಆಶ್ಚರ್ಯದಿಂದ ಯಾರು ಬರುತ್ತಿರುವುದೆಂದು ನೋಡಿದನು.

ದೊಡ್ಡದೊಂದು ನರಭಕ್ಷಕರ ಗುಂಪೇ ಅಲ್ಲಿಗೆ ಬರುತ್ತಿತ್ತು. ಅವರ ನಾಯಕನಾದ ಹೆಬ್ಬುಲಿಹೆಗ್ಗದೊಡ್ಡ ಈಟಿಯನ್ನು ಭುಜದ ಮೇಲಿಟ್ಟುಕೊಂಡು



ತಮ್ಮಟೆಯ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಿಕೊಂಡು ಬರುವುದನ್ನು ನೋಡಿ ಸಿದ್ಧಸಾಧಕನು ಸ್ತಬ್ಧನಾಗಿ ನಿಂತನು. ಹಾಗೆ ಬಂದ ಹೆಬ್ಬುಲಿಹೆಗ್ಗ ಪೂಜಾರಿಯೊಂದಿಗೆ, "ಏನಿದು ಕಾಡಮ್ಮಾತಾಯಿಯ ಪೂಜಾರಿಯೇ! ಆ ಮಹಾತಾಯಿ ನಮಗೆ ಆಹಾರವಾಗಿ ಒಂದೇಸಾರಿ ಇಷ್ಟು ನರರನ್ನು ಕಳುಹಿಸಿದ್ದು ಆಶ್ಚರ್ಯವಲ್ಲವೇ? ಆಹಾ! ಭಕ್ತರ ಪಾಲಿಗೆ ಜೇನು ಹುಟ್ಟು ನಮ್ಮ ಮಹಾತಾಯಿ!" ಎಂದನು ಸಂತೃಪ್ತಿಯಿಂದ.

ಹೆಬ್ಬುಲಿಹೆಗ್ಗನ ಮಾತುಗಳು, ಅವನ ಕಡೆಯ ನರಭಕ್ಷಕರು ಜೊಲ್ಲು ಸುರಿಸುತ್ತ ತಮ್ಮ ಸುತ್ತಲೂ ಕೂಡುವುದು ಮುಂತಾದುವನ್ನು ನೋಡಿದ ಸಿದ್ಧಸಾಧಕನು, ತನ್ನ ಶತ್ರುಗಳೊಂದಿಗೆ ತನಗೂ ಪ್ರಾಣಾಪಾಯವಿರುವುದೆಂದು ಊಹಿಸಿ, ಸಾಹಸ ಮಾಡುವುದೇ ಒಳ್ಳೆಯದೆಂದುಕೊಂಡು, ಒಮ್ಮೆಗೇ ನರವಾನರವನ್ನು ಮಕರಕೇತುವಿನ ಬಳಿಗೆ ಓಡಿಸಿದನು.

ಮಕರಕೇತು ಗಾಯಗೊಂಡ ಜಲಗ್ರಹದ ತಲೆಯ ಮೇಲೆ ಕೈಗಳಿಂದ ಮೆಲ್ಲನೆ ತಟ್ಟಿ ನೀವುತ್ತ, ಅದು ಎದ್ದುನಿಂತ ಮೇಲೆ, ಅದರ ಮೇಲೆ ಏರಿಕೊಳ್ಳಲು ನೋಡಿದನು.


ಆಗ ಏನೋ ನೆನಪಾಗಿ, ಅಷ್ಟು ದೂರದಲ್ಲಿದ್ದ ಮಾಯಾಸರೋವರೇಶ್ವರನನ್ನು ನೋಡಿ, "ಸರೋವರೇಶ್ವರಾ, ದಯಮಾಡಿ ಈ ಜಲಗ್ರಹವನ್ನು ಆರೋಹಿಸಿಬಿಡಿ. ಈ ಸಿದ್ಧಸಾಧಕನು ಅವಸರದಿಂದ ಆವೇಶಗೊಳ್ಳುವನೇ ಹೊರತು, ತುಂಬ ಒಳ್ಳೆಯವನು. ಇವನ ಮಿತ್ರನಾದ ಜಯಶೀಲನು ನಮಗೆಲ್ಲರಿಗೂ ಮಿತ್ರನೇ. ವೈದ್ಯದೇವನೂ ಅವನೂ ಕೂಡಿ ನಿಮ್ಮ ಹಂಸರಥದಲ್ಲಿ ಈಗಲೇ ಇಲ್ಲಿಗೆ ಬರಲಿದ್ದಾರೆ. ನೀವು ಬರಿನೆಲದ ಮೇಲಿರುವುದನ್ನು ನಾನು ನೋಡಲಾರೆನು. ಬನ್ನಿ, ಏರಿಕೊಳ್ಳಿ, ಈ ಜಲಗ್ರಹವನ್ನು" ಎಂದನು ವಿನಯದಿಂದ.



ನದಿಯ ಬಳಿಯಲ್ಲಿ ನಡೆದ ಸಂಗತಿಗಳೊಂದೂ ತಿಳಿಯದಿದ್ದ ಮಾಯಾಸರೋವರೇಶ್ವರನಿಗೆ ಮಕರಕೇತುವಿನ ಮಾತು ಸ್ವಲ್ಪವೂ ಅರ್ಥವಾಗಲಿಲ್ಲ ಆದರೂ ಜಲಗ್ರಹ ಆನೆಯ ಮೇಲೆ ಏರಿಕೊಂಡರೆ ತನಗೆ ಸ್ವಲ್ಪ ರಕ್ಷಣೆಯಾಗಿದ್ದೀತೆಂದುಕೊಂಡು, ಅವನು ಮೆಲ್ಲನೆ ಅಡಿಮೇಲಡಿ ಇಟ್ಟುಕೊಂಡು ಜಲಗ್ರಹವನ್ನು ಸಮೀಪಿಸಿದನು.

ಅಷ್ಟರೊಳಗೆ ಮಕರಕೇತುವಿನಿಂದ ಕತ್ತಿಯ ಹೊಡೆತ ತಿಂದು ನೋವಿನಿಂದ ಬಿದ್ದುಕೊಂಡಿದ್ದ ಜಲವೃಕ ರಾಕ್ಷಸನು, ಮರದಕಾಂಡವನ್ನು ಹಿಡಿದುಕೊಂಡು ಎದ್ದುನಿಂತು, ಕೈಕಾಲುಗಳನ್ನು ಝಾಡಿಸಿ ಸುಧಾರಿಸಿಕೊಂಡು, ಸಿದ್ಧಸಾಧಕನನ್ನು ನೋಡಿ, "ದೊರೆಗಳೇ, ಏನಪ್ಪಣೆ? ಸಿದ್ಧನಾದೇ" ಎಂದನು.

ಸಿದ್ಧಸಾಧಕನು ಅವನ ಬಳಿಗೆ ಬಂದು, "ಹುಂ, ನಿನಗೆ ತಾಕಿದ ಗಾಯ ಅಷ್ಟೇನೂ ಅಪಾಯಕಾರಿ ಅಲ್ಲವೆಂದು ಕಾಣುತ್ತದೆ. ಮೊದಲು ನಿನ್ನಕಲ್ಲಿನ ಗದೆ




ಯನ್ನು ಎತ್ತಿಕೋ ನೋಡೋಣ" ಎಂದನು. ಅವನು ಗದೆಯನ್ನೆತ್ತಿಕೊಂಡ ಕೂಡಲೇ ಸಿದ್ಧ ಸಾಧಕನು ಮಕರಕೇತುವನ್ನು ನೋಡಿ, "ನೋಡಿದೆಯಾ? ಈಗ ಯಾರಿಂದ ಯಾರಿಗೆ ಅಪಾಯವೋ ತಿಳಿಯಿತೇನು?" ಎಂದು ಕೇಳಿದನು.

ಮಕರಕೇತು ತನ್ನ ಕತ್ತಿಯ ಹಿಡಿಯನ್ನು ಬಿಗಿಯಾಗಿ ಹಿಡಿದುಕೊಂಡು, "ಈ ನರಭಕ್ಷಕರ ಹೊಲಬನ್ನು ನೋಡಯ್ಯ. ಸ್ವಲ್ಪ ಬುದ್ಧಿ ತಂದುಕೊಂಡು ಆಲೋಚನೆ ಮಾಡಯ್ಯ. ಅವರ ಕಾಡಮ್ಮಾತಾಯಿ ತಮ್ಮ ಆಹಾರಕ್ಕಾಗಿ ನಮ್ಮನ್ನೆಲ್ಲಾ ಕಳಿಸಿರುವಳೆಂದು ಭ್ರಮಿಸಿಕೊಂಡಿದ್ದಾರೆ. ಈಗ ನಮ್ಮ ದ್ವೇಷವನ್ನು ಮರೆತು, ಈ ಕ್ರೂರರಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕಾಗಿದೆ. ಆಮೇಲೆ ನಾವು ಎಷ್ಟು ಬೇಕಾದರೂ ಜಗಳಾಡೋಣ" ಎಂದನು.

"ಭೇಷ್! ಮಕರಕೇತೂ! ನಿನ್ನ ಬುದ್ಧಿಗೆ ಮೆಚ್ಚುತ್ತೇನೆ. ನಮ್ಮ ರಾಜನ ಮಕ್ಕಳನ್ನು ಹುಡುಕಿ ರಕ್ಷಿಸಿ ಅವರಿಗೆ ಒಪ್ಪಿಸದೆ, ನಾನಾಗಲೀ ಜಯಶೀಲನಾಗಲೀ ಯಾವ ನರಭಕ್ಷಕರಬಾಯಿಗೂ ಬೀಳಲಾರೆವು. ಮೊದಲು ಈ ಅನಾಗರಿಕರಿಗೆ ಒಳ್ಳೆಯ ರೀತಿಯಲ್ಲಿ ಹೇಳಿ ನೋಡುತ್ತೇನೆ. ಸಂದಾನವಿಲ್ಲದೆ ಸಂಗ್ರಾಮ ಕೂಡದು. ಕೇಳದೇ ಹೋದರೆ, ಎಲ್ಲರನ್ನೂ, ಹೆಣ್ಣುಗಳನ್ನೂ ಮಕ್ಕಳನ್ನೂ ಬಿಟ್ಟು, ಹುಲ್ಲು ಹರಿದುಬಿಡೋಣ" ಎಂದ ಸಿದ್ಧಸಾಧಕ.

ಅಷ್ಟು ಹೊತ್ತಿನವರೆಗೂ ನರಭಕ್ಷಕರ ಪೂಜಾರಿ ಮುದುಕ, ದೇವಿಯ ಆವೇಶ ಬರಿಸಿಕೊಳ್ಳುವವನಂತೆ ಕಣ್ಣು ಮುಚ್ಚಿ ಆಚೆಗೂ ಈಚೆಗೂ ಓಲಾಡುತ್ತಿದ್ದವನು, ದಿಡುಕ್ಕನೆ ಅಷ್ಟೆತ್ತರ ಹಾರಿ "ಓಂ! ಕಾಡಮ್ಮಾ ತಾಯಿಾ!" ಎಂದು ದೊಡ್ಡದಾಗಿ ಅರ್ಭಟಿಸಿ, "ಹಸಿವೆ! ಹಸಿವೆ! ಎಲೋ! ಕಾಡಮ್ಮಾತಾಯಿ ನಮ್ಮ ಆಹಾರವಾಗಿ ಕಳಿಸಲ್ಪಟ್ಟ ಮಾನವರೇ! ಹಾಗೆ ನೋಡುವಿರೇನು? ನಡೆಯಿರಿ ಕಾಡಮ್ಮಾತಾಯಿಯ ಆಲಯಕ್ಕೆ. ಅಲ್ಲಿ ಕಾಡಪ್ಪ ಕಾಡಮ್ಮರಿಗೆ ನಿಮ್ಮ ನೈವೇದ್ಯವಾಗಬೇಕು. ಆಮೇಲೆ ನಾವು ತಿನ್ನುವುದು! ಹೂಂ! ಮಹಾ ಪೂಜೆಗೆ ತಯಾರಾಗಲಿ! ಕರೆದೊಯ್ಯಿರೋಯ್ ಇವರನ್ನು!" ಎಂದನು.

ಸಿದ್ಧಸಾಧಕನು ಸ್ವಲ್ಪವೂ ಹೆದರದೆ ಶೂಲವನ್ನು ಎತ್ತಿಹಿಡಿದು, "ಓಹೋಯ್! ನರಮಾಂಸ ಭಕ್ಷಕರೇ, ನೀವು ನಮ್ಮನ್ನು ತಪ್ಪಾಗಿ ತಿಳಿದಿದ್ದೀರಿ. ನಿಮ್ಮ ಆಹಾರಕ್ಕಾಗಿ ಯಾವ ಕಾಡಪ್ಪ ಕಾಡಮ್ಮಂದಿರೂ ನಮ್ಮನ್ನು ಇಲ್ಲಿಗೆ ಕಳುಹಿಸಲಿಲ್ಲ. ಆಕಾಶದಲ್ಲಿ ಹಾರುವ ಹಂಸ ರಥದಿಂದ ಜಾರಿಬಿದ್ದ ನಮ್ಮವರನ್ನು ಹುಡುಕುತ್ತಾ ಬಂದವರು ನಾವು. ಅವರಲ್ಲೊಬ್ಬ ಮಾಯಾ ಸರೋವರೇಶ್ವರ ಎಂಬವನು ಸಿಕ್ಕಿದ್ದಾನೆ. ಇನ್ನು ನಮ್ಮ ಪಾಡಿಗೆ ನಾವು ಹೋಗುತ್ತೇವೆ. ವೃಥಾ ಗಲಭೆ ಮಾಡದೆ ಬುದ್ಧಿ ತಂದುಕೊಂಡು ನಿಮ್ಮ ದಾರಿ ಹಿಡಿದು ಹೋಗಿಬಿಡಿ. ನಿಮಗೂ ನಮಗೂ ಯಾವ ತಕರಾರೂ ಇಲ್ಲ." ಎಂದನು.

"ಅದೆಲ್ಲಾ ನಡೆಯದು. ನಮ್ಮ ದೇವರು ಕಳುಹಿಸಿದವರೇ ನೀವುಗಳು. ನಿಮ್ಮನ್ನು ಬಿಟ್ಟರೆ ನಮ್ಮ ಹಸಿವೆಗೇನು ದಾರಿ? ಎಷ್ಟೋ ದಿನಗಳಿಂದ ತಿನ್ನಲೇನೂ ಸಿಕ್ಕದೆ ಉಪವಾಸದಲ್ಲಿದ್ದೇವೆ. ಸಮಯಕ್ಕೆ ಸಿಕ್ಕಿದ ಆಹಾರವನ್ನು ಬಿಟ್ಟುಬಿಡಲು ನಾವೇನೂ ಮುಟ್ಠಾಳರಲ್ಲ," ಎಂದ ಹೆಬ್ಬುಲಿಹೆಗ್ಗ ಈಟಿಯನ್ನು ಝಳಪಿಸುತ್ತ.

ನರಭಕ್ಷಕ ಪೂಜಾರಿ ಮಾಯಾಸರೋವರೇಶ್ವರನನ್ನು ನೋಡಿ, "ಎಲೋ ಮಾಯಾಸರೋವರೇಶ್ವರನೆಂದರೆ ನೀನೇನಾ? ನೀನು ಹೇಳು. ನಮ್ಮ ಕಾಡಮ್ಮಾತಾಯಿ ನಿನ್ನನ್ನು ಆಕಾಶದಿಂದ ನಾವು ಮಾಂಸ ಕುದಿಸುವ ಹಂಡೆಯೊಳಗೆ ಹಾಕಿದಳೋ ಇಲ್ಲವೋ? ನೀನು ಸರಿಯಾಗಿ ಅದರೊಳಗೆ ಬಿದ್ದವನಲ್ಲವೇ? ನಿಜ ಮರೆಮಾಚದೆ ಹೇಳು" ಎಂದನು.

ಮಾಯಾಸರೋವರೇಶ್ವರನು ಏನೂ ಹೇಳಲಿಲ್ಲ. ಅಷ್ಟರಲ್ಲಿ ಸಿದ್ಧಸಾಧಕನ ಸನ್ನೆಯಂತೆ ನರವಾನರವು ಹೆಬ್ಬುಲಿಹೆಗ್ಗನನ್ನು ಎರಡು ಕೈಗಳಿಂದ ಅಪ್ಪಿಹಿಡಿದು, ಮೇಲಕ್ಕೆ ಎತ್ತಿತು. ಮಾಯಾಸರೋವರೇಶ್ವನು ಏರಿಕೊಂಡಿದ್ದ ಜಲಗ್ರಹ ಆನೆ ಒಮ್ಮೆಗೇ ಮುಂದೆ ಹಾರಿ ಸೊಂಡಿಲುಚಾಚಿ ಪೂಜಾರಿಯ ಸೊಂಟವನ್ನು ಸುತ್ತಿಹಿಡಿದು ಎತ್ತಿ ಬೀಸತೊಡಗಿತು. ಪೂಜಾರಿ ಕೆಟ್ಟದ್ವನಿಯಿಂದ ಕಿರಿಚುತ್ತಾ, ಮಧ್ಯ ಮಧ್ಯ, "ಬಿಡಬೇಡ್ರೋ! ಕೈಗೆ ಸಿಕ್ಕಿದ ಆಹಾರವನ್ನು ಬಿಡಬೇಡಿ. ಇದು ಕಾಡಮ್ಮಾತಾಯಿ ನಿಮ್ಮ ಬಲವನ್ನು ಪರೀಕ್ಷೆ ಮಾಡ್ತಾಳೆ! ಮನುಷ್ಯರನ್ನು ಈಟಿಗಳಿಂದ ಚುಚ್ಚಿರೋ! ಕೊಲ್ಲಿರೋ! ಹಂಡೆಯೊಳಗೆ ಹಾಕಿ ಒಬ್ಬೊಬ್ಬರನ್ನೇ ಬೇಯಿಸಿ ಬೇಯಿಸಿ ತೆಗೆಯಿರಿ. ಬಿಡಬೇಡಿರಿ!" ಎಂದು ಕೂಗಿ ಕೂಗಿ ಆಜ್ಞೆ ಮಾಡಿದನು.

"ಹೂಂ! ಇನ್ನು ಲಾಭವಿಲ್ಲ. ಮಾರಾಮಾರಿ ಆಗಿ ಹೋಗಲಿ. ಹೇ ಜಲವೃಕಾ! ತೋರಿಸು ನಿನ್ನ ಪ್ರತಾಪ! ಈ ನರಭಕ್ಷಕರನ್ನು ನಿನ್ನ ಕಲ್ಲಿನ ಗದೆಯಿಂದ ಪುಡಿ ಮಾಡು. ಒಬ್ಬರನ್ನೂ ಬಿಡಬೇಡ." ಎಂದು ತನ್ನ ಹೊಸ ಬಂಟ ಜಲವೃಕನಿಗೆ ಹೇಳಿದನು ಸಿದ್ಧಸಾಧಕ. "ಸಿದ್ಧಸಾಧಕ ದೊರೆಗಳಿಗೆ ಜಯವಾಗಲಿ!"



ಎಂದು ಗರ್ಜಿಸಿ ಜಲವೃಕ ರಾಕ್ಷಸನು ಕಲ್ಲಿನ ಗದೆಯನ್ನೆತ್ತಿ ನರಭಕ್ಷಕರ ಮೇಲೆ ಮೂರ್ಖವಾಗಿ ಬಿದ್ದನು. ಹಸಿವೆಯ ತೀವ್ರತೆಯಲ್ಲಿ ಜೀವದಾಶೆಬಿಟ್ಟಿದ್ದ ನರಭಕ್ಷಕರು ಅವನನ್ನು ಎದುರಿಸಿ ತಮ್ಮ ಬಲವನ್ನು ತೋರಿಸ ತೊಡಗಿದರು. ಜಲವೃಕ ರಾಕ್ಷಸನು ಕೈಗೆ ಸಿಕ್ಕ ನರಭಕ್ಷಕರನ್ನು ಎಲ್ಲೆಂದರಲ್ಲಿ ಹೊಡೆಯುತ್ತಿರಲು, ನರಭಕ್ಷಕರು ಅವನನ್ನು ಈಟಿಗಳಿಂದ ತಿವಿಯಲು ನೋಡುತ್ತ, ತಮ್ಮ ಕೂಗಾಟ ಚೀರಾಟಗಳಿಂದ ಅರಣ್ಯವೇ ಪ್ರತಿಧ್ವನಿಸುವಂತೆ ಮಾಡ ತೊಡಗಿದರು.

ಸಿದ್ಧಸಾಧಕನು ತನ್ನ ಹೊಸ ಬಂಟನಾದ ಜಲವೃಕನು ಅಷ್ಟು ಮಂದಿ ನರಭಕ್ಷಕರ ಟೋಳಿಯನ್ನು ಎದುರಿಸಿ ಹೋರಾಡುವ ಧೈರ್ಯ ಸಾಮರ್ಥ್ಯಗಳನ್ನು ನೋಡಿ, "ಭೇಷ್! ಜಲವೃಕಾ! ನೀನು ಪೌರುಷವುಳ್ಳವನೇ! ಮಹಾ ಧೈರ್ಯಶಾಲಿ ಕೂಡಾ. ನಾನೂ ನಿನಗೆ ಸಹಾಯಕನಾಗಿ ಬರುತ್ತೇನೆ" ಎಂದು ಕೂಗಿ ಹೇಳಿ, ನರವಾನರದ ಕೈಯಲ್ಲಿ ಸಿಕ್ಕಿ ಗುಂಜಿಕೊಳ್ಳಲು ಪ್ರಯತ್ನಿಸುವ ಹೆಬ್ಬುಲಿಹೆಗ್ಗನನ್ನು ದೂರ ಬೀಸಿ ಒಗೆಯಿಸಿ, "ಜೈ! ಮಹಾಕಾಳಾ!" ಎಂದು ಗರ್ಜಿಸುತ್ತ, ನರಭಕ್ಷಕರ ಮೇಲೆ ನರವಾನರವನ್ನು ಧುಮುಕಿಸಿದನು. ದೂರ ಬಿದ್ದ ಹೆಬ್ಬುಲಿಹೆಗ್ಗ ನರಳುತ್ತಾ, ಎದ್ದು ಬರಲು ಹೆಣಗುತ್ತಿದ್ದನು. ಅಲ್ಲಿಂದಲೇ ಕೂಗಿ ಆಜ್ಞೆ ಮಾಡುತ್ತಿದ್ದನು.

ಭಾರೀ ಮೂರ್ಖಯುದ್ಧ ಪ್ರಾರಂಭವಾಯಿತು. ಒಂದು ನಿಮಿಷ ಕೂಡಾ ಆಗಿರಲಿಕ್ಕಿಲ್ಲ, ಅಷ್ಟರಲ್ಲಿ ಹತ್ತು ಮಂದಿ ಅಶ್ವೀಕರು ವೇಗದಿಂದ ಅಲ್ಲಿಗೆ ಓಡಿ ಬರುವುದು ಕಾಣಿಸಿತು.

"ಹೋರಾಡ ಬೇಡಿರೋ! ಎಲ್ಲರೂ ಹಾಗೆ ಹಾಗೇ ನಿಲ್ಲಿರಿ! ಇದು ಹಿರಣ್ಯಪುರ ಮಹಾರಾಜರು ಕನಕಾಕ್ಷರಾಜರ ಆಜ್ಞೆ!" ಎಂದು ಅಶ್ವೀಕರು ಗಟ್ಟಿಯಾಗಿ ಕೂಗಿ ಹೇಳಿದರು.

ಅದನ್ನು ಕೇಳಿ ಮಾರಾಮಾರೀ ಮಾಡಿಕೊಂಡಿದ್ದ ನರಭಕ್ಷಕರೂ, ಸಿದ್ಧಸಾಧಕನೂ ಗಕ್ಕನೆ ನಿಂತು ಆಶ್ಚರ್ಯದಿಂದ ಅವರನ್ನು ನೋಡತೊಡಗಿದರು. ಮಾಯಾ ಸರೋವರೇಶ್ವರನು ತುಂಬಾ ಹೆದರಿ, "ಮಕರಕೇತೂ, ನಾವಿಲ್ಲಿರಬಾರದು! ವೇಗವಾಗಿ ನಮ್ಮ ಮಾಯಾ ಸರೋವರಕ್ಕೆ ಹೋಗಿಬಿಡೋಣ! ಬಾ ಬೇಗ!" ಎಂದನು.

ಮಕರಕೇತು ಉತ್ತರ ಕೊಡುವುದರೊಳಗೆ, ಆ ಮಾತನ್ನು ಕೇಳಿದ ಸಿದ್ಧಸಾಧಕನು ಕಣ್ಣು ಕೆಂಪು ಮಾಡಿ, "ಎಲೋ ಕಳ್ಳ ಸರೋವರದ ಮಾಯೇಶ್ವರಾ! ನೀನು ಎಲ್ಲಿಗಾದರೂ ಓಡಲು ಪ್ರಯತ್ನಿಸಿದರೆ, ಅದು ನಿನಗೆ ಕೇಡುಕಾಲ! ಜಾಗ್ರತೆ! ಇಲ್ಲೇ ಇರು!" ಎನ್ನುತ್ತಾ, ಶೂಲವನ್ನು ಅವನ ಗುಂಡಿಗೆಗೆ ಆನಿಸಿದನು. (ಇನ್ನೂ ಇದೆ)





March 1978

# ಮಾಯಾಸರೋವರ


೨೬

[ನರಭಕ್ಷಕರಿಗೆ ಮಾಯಾಸರೋವರೇಶ್ವರನು ದೊರಕಿದ ಸಮಯದಲ್ಲಿ ನರವಾನರದ ಮೇಲೆ ಸಿದ್ಧ ಸಾಧಕನು ಅಲ್ಲಿಗೆ ಬಂದನು. ಮಕರಕೇತು ಅಲ್ಲಿಗೆ ಬಂದು ತನ್ನ ಒಡೆಯನನ್ನು ರಕ್ಷಿಸಲು ನೋಡಿ ಜಲ ವೃಕರಾಕ್ಷಸನನ್ನು ಗಾಯಪಡಿಸಿದನು. ನರಭಕ್ಷಕರು ಅವರನ್ನು ತಿನ್ನಲು ಹವಣಿಸುವಾಗ, ಎಲ್ಲರೂ ಅವರ ಮೇಲೆ ತಿರುಗಿಬಿದ್ದರು. ಆಗ ಅಲ್ಲಿಗೆ ಕೆಲವು ಮಂದಿ ಆಶ್ವೀಕರು ಬಂದರು.]

ಆಶ್ವೀಕರ ಎಚ್ಚರಿಕೆ ಸಿದ್ಧಸಾಧಕನಿಗೆ ಕೇಳಿಸಿತೋ, ೕಳಿಯೂ ಅಲಕ್ಷ್ಯವಾಗಿದ್ದನೋ ತಿಳಿಯದು. ಅವನು ೂಲದ ಮೊನೆಯನ್ನು ಮಾಯಾಸರೋವರೇಶ್ವನ ಎದೆಗೆ ತಾಗಿಸಿ ಹಿಡಿದ ಕೈಯನ್ನು ಕದಲಿಸಲಿಲ್ಲ. ಆದರಿಂದ ಮಾಯಾಸರೋವರೇಶ್ವರನು ಭಯದಿಂದ ನಡುಗುತ್ತ, "ಇದು ಅನ್ಯಾಯ! ಅಧರ್ಮ! ಯಾರೂ ಮೆಚ್ಚುವಂತಹ ಕೆಲಸವಲ್ಲ. ಶತ್ರು ನಿರಾಯುಧನಾಗಿರುವಾಗ ವೀರನಾದವನಾವನೂ ಕೊಲ್ಲಲು ಪ್ರಯತ್ನಿಸಲಾರ. ಇದು ಹೇಡಿಗಳ ಕೆಲಸ! ಬಿಡುಬಿಡು!" ಎಂದು ಕೂಗಿದನು.

"ನಿಜ!" ಎಂದು ಸಿದ್ಧಸಾಧಕನು ಶೂಲವನ್ನು ನೆಲಕ್ಕೆ ಇಳಿಸಿ, "ಒಪ್ಪಿದೆ. ನಾನು ಅಂಥವನಲ್ಲ. ವೀರರೊಳಗೆ ವೀರಾಧಿವೀರ ನಾನು. ಎಲ್ಲಿ, ಕತ್ತಿಯನ್ನು ಹಿರಿ ಬೇಗ. ನಿನ್ನ ಬಲದರ್ಪಗಳು ಎಷ್ಟರಮಟ್ಟಿನದೋ ನೋಡುತ್ತೇನೆ." ಎಂದನು.

ಮಾಯಾಸರೋವರೇಶ್ವರನು ಕತ್ತಿಯ ಹಿಡಿಯ ಕಡೆಗೆ ಕೈಹಾಕಿ, ತೆಗೆಯಲೋ ಬೇಡವೋ ಎಂಬಂತೆ ಹಾಗೆಯೇ ನಿಂತು, ತನ್ನ ಸೇವಕನಾದ ಮಕರಕೇತುವನ್ನು ನೋಡಿದನು. ಅಷ್ಟರಲ್ಲಿ ಅಲ್ಲಿಗೇ ಬಂದ ಆಶ್ವೀಕರ ನಾಯಕನು, ತನ್ನೊಂದಿಗೆ ಬಂದವರನ್ನು



ಹಿಂದೆ ನಿಲ್ಲಿಸಿ, ತಾನು ಒಬ್ಬನೇ ಕುದುರೆಯಿಂದಿಳಿದು ಕೈ ಬೀಸುತ್ತಾ ಬೇಗಬೇಗನೆ ಹಾರಿಹಾರಿ ಮುಂದೆ ಬಂದನು.

ಸಿದ್ಧಸಾಧಕನು ಕೋಪದಿಂದ ಆವನನ್ನು ನೋಡಿ, "ಯಾರು ನೀನು ? ನಮ್ಮ ಜಗಳದಲ್ಲಿ ನಿನಗೇನಯ್ಯ ಕೆಲಸ ? ದೂರ ನಡೆ" ಎಂದು ಅಥಟಿದನು.

ಆಶ್ವೀಕರ ನಾಯಕನು ಆ ಅವಿಧೇಯತೆಯ ಮಾತಿಗೆ ಅವಹೇಳನೆಯಿಂದ ವ್ಯಂಗ್ಯ ನಗುವಿನೊಂದಿಗೆ ಏನೋ ಹೇಳಲು ಬಾಯಿ ತೆರೆದು ಹಾಗೇ ಸ್ತಬ್ಧನಾದನು. ಭಯಂಕರವಾದ ನರವಾನರವನ್ನೂ, ಜಲಗೃಹವನ್ನೂ ನೋಡಿ ಸ್ವಲ್ಪ ದಿಗಿಲುಗೊಂಡವನಾಗಿ, ಮಾತು ಹೊರಡಿಸಿ "ನಾನು ಯಾರು, ಯಾರಿಂದ ಕಳಿಸಲ್ಪಟ್ಟು ಇಲ್ಲಿಗೆ ಬಂದವನು ಎಂಬುದನ್ನು ಅಷ್ಟು ದೂರದಿಂದಲೇ ಹೇಳಿದೆನಲ್ಲ? ತಿಳಿಯಲಿಲ್ಲವೇನು ? ಒಂದುವೇಳೆ ಕಿವಿಗಿವಿ ಸರಿಯಾಗಿಲ್ಲವೋ?" ಎಂದನು.


"ನಿನ್ನ ಎಚ್ಚರಿಕೆ ಗಿಚ್ಚರಿಕೆ ಹೆದರಿಕೆ ಬೆದರಿಕೆ ಕೇಳುವ ಸ್ಥಿತಿಯಲ್ಲಿ ನಾನಿರಲಿಲ್ಲ. ನಾನು ನನ್ನ ಶತ್ರುವಾದ ಈ ಮಾಯಾ ಮಾನವ ಪ್ರಾಣಿಯನ್ನು ಓಡಿಹೋಗದಂತೆ ನೋಡಿಕೊಳ್ಳುವ ಪ್ರಯತ್ನದಲ್ಲಿದ್ದೇನೆ. ಕಿವಿ ಕೇಳಿಸದವರು ಇಲ್ಲಿ ಯಾರೂ ಇಲ್ಲ. ಎಚ್ಚರಿಕೆಯಿಂದ ಮಾತಾಡು. ಈಗ ಇನ್ನೊಮ್ಮೆ ಕೇಳುತ್ತೇನೆ. ಈ ಕತ್ತೇ ಕುದುರೆಗಳ ಮೇಲೆ ನಮ್ಮ ನಡುವೆ ಬಂದಿರುವ ನೀನು ಯಾರು ?" ಎಂದ ಸಿದ್ಧಸಾಧಕ.

ಆಶ್ವೀಕರ ನಾಯಕನು ಕೂಡಲೇ ಉತ್ತರಕೊಡದೆ, ಸಿದ್ಧಸಾಧಕನನ್ನು ಅಡಿಯಿಂದ ಮುಡಿಯವರೆಗೆ ಪರೀಕ್ಷಿಸಿ ನೋಡುತ್ತ, "ಅರೆ, ನೀನು ಸಿದ್ಧಸಾಧಕನಲ್ಲವೇ? ಆದಿನ ಹಿರಣ್ಯಪುರದಲ್ಲಿ ಸ್ಮಶಾನದ ಕಾವಲುಗಾರನ ತಲೆ ಕಡಿದ ತಪ್ಪಿಗೆ ಇನ್ನೊಬ್ಬನೊಂದಿಗೆ ನೀನು ಕೂಡಾ ನಮ್ಮ ಮಹಾರಾಜರಬಳಿಗೆ ಬರಲ್ಪಟ್ಟೆಯಷ್ಟೇ ? ನಮ್ಮ ಮಹಾರಾಜರ ಕಾರ್ಯಕ್ಕೆ ಸಹಾಯಕನಾಗಿ ನೀನೂ ಹೊರಟವನು ತಾನೆ ?" ಎಂದು ಕೇಳಿದನು.

"ಓಹೋ ! ಈಗ ತಿಳಿಯಿತು ನೀನು ಯಾರೆಂಬುದು. ನಿನ್ನ ಹೆಸರು ತಿಳಿಯದು. ನಾನು ಯಾರೆಂಬುದು ನಿನಗೂ ತಿಳಿಯಿತು. ಇನ್ನೇನಿದೆ? ನೀನು ಹೇಳುವುದೆಲ್ಲಾ ಸತ್ಯವೆಂದರಾಯಿತಷ್ಟೆ ?" ಎಂದ ಸಿದ್ಧಸಾಧಕ.

"ನನ್ನ ಹೆಸರು ವೀರಸೇನನೆಂದು. ರಾಜಧಾನಿಯ ಪರಿಸರದಲ್ಲಿ ಅಪಹರಿಸಲ್ಪಟ್ಟ ನಮ್ಮ ಮಹಾರಾಜಕುಮಾರ, ಕುಮಾರಿಯರನ್ನು ಶೋಧಿಸಲು ನಿನ್ನ ಜತೆಯಲ್ಲಿ ಜಯಶೀಲನೆಂಬವನು ಹೊರಟಿದ್ದನಷ್ಟೆ ? ಅವನೆಲ್ಲಿ ಕಾಣುವುದಿಲ್ಲ? ಇಬ್ಬರೂ ಒಟ್ಟಿಗೇ ಹೊರಟಿರಲ್ಲ ? ಕಡೆಗೆ ನೀವಿಬ್ಬರೂ ಬೇರೆಬೇರೆಯಾದಿರೇನು ?" ಎಂದು ಕೇಳಿದ ವೀರಸೇನ.

"ಒಟ್ಟಿಗೇ ಇದ್ದೆವು. ಈದಿನ ಮಾತ್ರ ಬೇರೆಬೇರೆಯಾದೆವು. ಅವನು ಹಂಸ ರಥದಲ್ಲಿ ಆಕಾಶದಲ್ಲಿ ಎಲ್ಲಿಯೋ ಹಾರಿಕೊಂಡಿದ್ದಾನೆ. ಸದ್ಯ, ಹೆಬ್ಬ



ಮಾತಿಗೆ ಅವಕಾಶವಿಲ್ಲ. ಸ್ವಲ್ಪಬದಿಗೆ ಸರಿ. ಮಹಾ ವೀರನ ಹಾಗೆ ಜಂಬ ಹೇಳಿಕೊಳ್ಳುವ ಭೀರುವಾದ ಈ ನೀರು ಮನುಷ್ಯನ ಆಳ ನೋಡಬೇಕಾಗಿದೆ ಈಗ. ಎಲ್ಲೋ! ಎತ್ತು ಖಡ್ಗ! ಹಾರು ನನ್ನ ಮೇಲೆ, ಬಾ!" ಎನ್ನುತ್ತಾ ಸಿದ್ಧಸಾಧಕನು ಶೂಲ ವನ್ನು ಮೇಲೆತ್ತಿದನು.

"ಇಲ್ಲಿ ವೃಥಾ ರಕ್ತಪಾತವಾಗಕೂಡದು. ಅದನ್ನು ನಾನು ಸಹಿಸಲಾರೆ!" ಎಂದು ವೀರಸೇನನು, ತನ್ನೊಂದಿಗೆ ಬಂದ ಆಶ್ವೀಕರನ್ನು ಮುಂದೆ ಬರಲು ಸೈಗೆ ಮಾಡಿದನು.

ಆಶ್ವೀಕರು ಕತ್ತಿಗಳನೆತ್ತಿಕೊಂಡು ತನ್ನ ಬಳಿಗೆ ಬರುವುದರೊಳಗೆ ಸಿದ್ಧಸಾಧಕನು, ಸುತ್ತಲೂ ಒಮ್ಮೆ ನೋಡಿ ವೀರಸೇನನೊಂದಿಗೆ, "ನೋಡಯ್ಯಾ, ನಮ್ಮ ಸುತ್ತಲೂ ಅನೇಕ ದಿನಗಳಿಂದ ಉಪವಾಸದಲ್ಲಿ ಹಸಿದು ಬಾಯಿಬಿಡುವ ನರಭಕ್ಷಕರಿದ್ದಾರೆ. ಬೇಕಾದರೆ ಈ ಕ್ಷಣದಲ್ಲಿ ನಿನ್ನನ್ನೂ, ನಿನ್ನ ಕುದುರೇ ಸವಾರ ರನ್ನೂ, ಅಂಗಾಲಿನಿಂದ ಒರೆಸಿ ಬಿಡಬಲ್ಲೆ. ಹಾಗೆ ಮಾಡಿದರೂ ರಕ್ತಪಾತವಾಗೇ ಆಗುತ್ತದೆ. ಆದರಿಂದ ನರಭಕ್ಷಕರಿಗೆ ಹೊರತು ಬೇರೆಯಾರಿಗೂ ಲಾಭ ವಾಗದು" ಎಂದನು.

"ಲಾಭನಷ್ಟಗಳ ವಿಚಾರ ನನಗೆ ಜೇಡ. ಮುಖ್ಯ ಸಂಗತಿ ನೆನಪಿಟ್ಟುಕೋ. ಇಲ್ಲಿಗೆ ಸಮೀಪದಲ್ಲೇ ಕನ ಕಾಕ್ಷ ಮಹಾರಾಜರು ಬಂದು ತಂಗಿದ್ದಾರೆ. ಈಗ ನೀವೆಲ್ಲರೂ ಅಲ್ಲಿಗೆ ಬರಬೇಕು ಇದು ರಾಜಾಜ್ಞೆ!" ಎಂದ ವೀರಸೇನ.

ಸಿದ್ಧಸಾಧಕನು ಕಣ್ಣು ಕೆಂಪು ಮಾಡಿ ಅವನನ್ನು ನೋಡಿ, "ಇದೇನು ಆಜ್ಞೆಯೋ ಕೋರಿಕೆಯೋ? ನನ್ನ ಮಾತನ್ನೂ ನೆನಪಿಟ್ಟು ಮಾತಾಡು. ನಾನು ಈ ಭೂಪ್ರಂಚದಲ್ಲಿ ನನ್ನ ಆರಾಧ್ಯ ದೈವ ಮಹಾಕಾಳ ನೊಬ್ಬನಿಗೆ ಹೊರತು ಬೇರೆ ಯಾರ ಆಜ್ಞೆಗೂ ಅಧೀನನಾಗುವವನಲ್ಲ. ಗೊತ್ತೇ?" ಎಂದನು.

ಸಿದ್ಧಸಾಧಕನ ಮುಖವನ್ನೇ ನೋಡಿಕೊಂಡಿದ್ದ ಜಲವೃಕ ರಾಕ್ಷಸನು, ಸಾಧಕನಿಗೆ ವೀರಸೇನನ ಮೇಲೆ ಕೋಪ ಬಂದಿರುವುದನ್ನು ಗ್ರಹಿಸಿ, ಕಲ್ಲಿನ ಗದೆಯನ್ನು ನೆಲದ ಮೇಲೆ ಗಟ್ಟಿಯಾಗಿ ಕುಟ್ಟಿ ಹುಲಿಯಂತೆ ಒಂದು ಹೂಂಕಾರ ಮಾಡಿದನು. ಅದನ್ನು ನೋಡಿ ನರವಾನರವೂ ಎದೆ ತಟ್ಟಿ ಕೆರೆಯುತ್ತಾ ಅರಣ್ಯವು ಪ್ರತಿಧ್ವನಿಗೊಡುವಂತೆ ಬೊಬ್ಬಿರಿಯಿತು. ಈ ವಿಕೃತಾಕಾರಗಳ ಆಟ್ಟಹಾಸಗಳನ್ನು ನೋಡಿ ಆಶ್ವೀಕರ ಕುದುರೆಗಳು ಹೆದರಿ ಕುಣಿದುವು. ಒಬ್ಬನ ಕುದರೆ ಯಂತೂ, ಹಿಂಗಾಲುಗಳ ಮೇಲೆ ನಿಂತು, ತನ್ನ ಮೇಲಿನ ಸವಾರನು ಜಾರಿ ಕೆಳಗೆ ಬೀಳುತ್ತಲೇ ದೂರಕ್ಕೆ ಓಡಿಹೋಯಿತು.

ಇದನ್ನೆಲ್ಲ ನೋಡಿ ಭಯ ಕಂಪಿತನಾದ ವೀರ ಸೇನನು ಸಿದ್ಧಸಾಧಕನೊಂದಿಗೆ ವಿನಯದಿಂದ, "ಅಯ್ಯಾ, ಕೋಪಿಸಬಾರದು. ನೀವು ಸಹಾ ನನ್ನ ಹಾಗೆಯೇ ಹಿರಣ್ಯಪುರದ ಪ್ರಜೆಗಳೇ. ಮಹಾರಾಜರ



ದರ್ಶನ ಮಾಡಲು ಏಕೆ ಬರಬಾರದು ? ಅವರೇ ಕರೆ ಕಳುಹಿಸುವಾಗ ಬರಬೇಕಾದುದು ನ್ಯಾಯವಲ್ಲವೇ ?" ಎಂದನು ತಲೆಬಾಗಿ.

ಸಿದ್ಧಸಾಧಕನ ಕೋಪವು ಜರ್ರನೆ ಇಳಿದು ಹೋಯಿತು. ಅವನು ಅತ್ಯಾನಂದದಿಂದ ತಲೆದೂಗುತ್ತ, "ಈಗ ಹೇಳಿದೆಯಲ್ಲ, ಈ ಪದ್ಧತಿ ಚೆನ್ನಾಗಿದೆ. ಯಾರೂ ಮೆಚ್ಚಬಲ್ಲರು. ಮಹಾರಾಜರ ದರ್ಶನಕ್ಕೆ ಅಗತ್ಯವಾಗಿ ಬರುತ್ತೇನೆ. ಒಬ್ಬನೇ ಅಲ್ಲ, ಈ ನರಭಕ್ಷಕರ ಮುಖ್ಯಸ್ಥನನ್ನೂ, ಸರೋವರದ ದುಷ್ಟರಿಬ್ಬರನ್ನೂ ಅವರ ಬಳಿಗೆ ಎಳೆದುಕೊಂಡು ಹೋಗಬೇಕು. ಸರೋವರದವರು ಮಹಾ ಕಳ್ಳರು ! ಯಾವ ಕ್ಷಣದಲ್ಲಿಯೂ ತಪ್ಪಿಸಿಕೊಳ್ಳಲು ನೋಡುವವರು !" ಎಂದು ಸುತ್ತಲೂ ನಿಂತಿರುವವರನ್ನು ನೋಡಿದನು.

ಮಾಯಾಸರೋವರೇಶ್ವರನೂ, ಮಕರಕೇತುವೂ ಎಲ್ಲಿಯೂ ಕಾಣದಿರುವುದನ್ನು ನೋಡಿ ಆಶ್ಚರ್ಯದಿಂದ, "ಎಲ್ಲಿ ಆ ದುಷ್ಟರು ? ಅರರೇ, ಮಾತಾಡುವಾಗಲೇ ಮಾಯವಾದರಲ್ಲ ! ನೋಡಿರಾ ?" ಎಂದನು ಸಿದ್ಧಸಾಧಕ.

ಆಗ ನರಭಕ್ಷಕರೆಲ್ಲಾ ಒಂದೇಸಾರಿಗೆ, ಹೊಟ್ಟೆ ನುಚ್ಚಾಗುವಂತೆ ನಗತೊಡಗಿದರು. ಅವರ ನಾಯಕ ಹೆಬ್ಬುಲಿಹೆಗ್ಗನೂ, ಮುದಿಪೂಜಾರಿಯೂ ಮುಂದಕ್ಕೆ ಬಂದು ಸಿದ್ಧಸಾಧಕನೊಂದಿಗೆ, "ನೀನೂ ಈ ಕುದುರೆಯವನೂ ತಗಾದೆ ಮಾಡಿಕೊಂಡಿರುವಾಗ ಅವರಿಬ್ಬರೂ ಮೆಲ್ಲಗೆ ಮರಗಳ ಗುಂಪಿಗೆ ಓಡಿದರು. ಅವರೆಲ್ಲಾ ನಮ್ಮ ದೇವರು ನಮಗೆ ಕಳುಹಿಸಿದ ಆಹಾರ. ನಮಗೆ ಬೇಕಾದವರು. ಆದುದರಿಂದ ಅವರನ್ನು ಹಿಡಿಯಲು ನಮ್ಮವರು ಕೆಲವರೂ ಹೋಗಿದ್ದಾರೆ" ಎಂದರು.

"ಯಾರದು ಅರಣ್ಯದೇವರು ?" ಎಂದು ಸಾಧಕನು ಕೇಳಲು, ಹೆಬ್ಬುಲಿಹೆಗ್ಗ—"ಅಲ್ಲಿ ಗುಡಿಯೊಳಗೆ ಕಾಡಮ್ಮಾ ತಾಯಿಯಾಗಿಯೂ, ನಮ್ಮ ಶತ್ರುಗಳನ್ನು ಕೊಲ್ಲುವಾಗ ಕಾಡಪ್ಪಾ ದೇವನಾಗಿಯೂ ರಕ್ಷಿಸುತ್ತಾರೆ. ಅದೆಲ್ಲಾ ದೇವರ ದೂತ ಪೂಜಾರಿಗೆ ಗೊತ್ತು" ಎಂದನು.

"ಹೌದೌದು. ಸಮಯಕ್ಕೆ ಬೇಕಾದ ರೂಪ ಧರಿಸಿ ನಮ್ಮನ್ನು ಕಾಯುವ ಮಹಾದೇವರು !" ಎಂದ ವೃದ್ಧಪೂಜಾರಿ


"ಅದೆಲ್ಲಾ ನಿನ್ನ ಕರಾಮತಿ ಅಂತ ಕಾಣುತ್ತೆ. ಹುಂ. ಅವರು ಓಡಿಹೋಗುವಾಗ ನನಗೇಕೆ ಹೇಳಲಿಲ್ಲ ? ಅವರು ಜೀವದೊಂದಿಗೆ ಸಿಗುವವರೆಗೂ ನೀವಿಬ್ಬರೂ ನಮ್ಮ ಖೈದಿಗಳು !" ಎಂದು ಸಿದ್ಧಸಾಧಕನು ಜಲವೃಕರಾಕ್ಷಸನನ್ನು ನೋಡಿ, "ಜಲವೃಕಾ ! ಇವರಿಬ್ಬರನ್ನೂ ಹಿಡಿದುಕೊಂಡು ಹೋಗಿ ಒಂದು ಕುದುರೇ ಮೇಲೆ ಹಾಕಿ ಹಗ್ಗದಿಂದ ಕಟ್ಟು" ಎಂದನು. ಆ ಕೂಡಲೇ ಜಲವೃಕರಾಕ್ಷಸನು ಹೋ ಎಂದು ಗರ್ಜಿಸಿ ಮಿಂಚಿನ ವೇಗದಲ್ಲಿ ಹೆಬ್ಬುಲಿ

ಹೆಗ್ಗನನ್ನೂ ಮುದಿಪೂಜಾರಿಯನ್ನೂ ಒಂದೊಂದು ಕೈಯಲ್ಲಿ ಹಿಡಿದೆಳೆದುಕೊಂಡು ಹೋಗಿ, ಒಂದು ಕುದುರೆಯ ಸವಾರನು ಹೆದರಿ ಕೆಳಗಿಳಿಯುವುದರೊಳಗೇ ಮೊಣಕೈಯಿಂದ ಕುಟ್ಟಿ ಬೀಳಿಸಿ, ಅವರಿಬ್ಬರನ್ನೂ ಆ ಕುದುರೆಯ ಬೆನ್ನಿನ ಮೇಲೆ ಕಟ್ಟಿ ಹಾಕಿದನು.

ಆ ಕೆಲಸ ಮುಗಿದ ಮೇಲೆ ಸಿದ್ಧಸಾಧಕನು ವೀರಸೇನನೊಂದಿಗೆ, "ಇನ್ನು ನೀನು ಮುಂದೆ ನಡೆ. ಕನಕಾಕ್ಷ ಮಹಾರಾಜರನ್ನು ನೋಡೋಣ" ಎಂದು ನರವಾನರ ವಾಹನವನ್ನು ಹೊರಡಿಸಿದನು. ಆಗ ತಾವೇನು ಮಾಡಬೇಕೆಂದು ಆಲೋಚಿಸುತ್ತಾ ನಿಂತಿರುವ ನರಭಕ್ಷಕರ ಗುಂಪನ್ನು ನೋಡಿ ಸಾಧಕನು, "ಎಲವೋ, ಮನುಷ್ಯರನ್ನು ತಿನ್ನುವ ದುಷ್ಟಮನುಷ್ಯರೇ ! ನಿಮ್ಮವರು ಬೆನ್ನಟ್ಟಿಹೋದ ಸರೋವರದವನಿಗಾಗಲಿ, ಅವನ ಬಂಟ ಮೊಸಳೆ ಮುಖದವನಿಗಾಗಲೀ ಏನಾದರೂ ಹಾನಿ ಮಾಡಿದರೆ ನಿಮ್ಮ ದೊರೆಯನ್ನೂ, ಪೂಜಾರಿ ಮುದುಕನನ್ನೂ ಜಜ್ಜಿ ಹಾಕಿಸಿ, ನಿಮ್ಮನ್ನೆಲ್ಲಾ ಕ್ರೂರಮೃಗಗಳ ಹಾಗೆ ಬೇಟೆಯಾಡುತ್ತೇನೆ. ನಿಮ್ಮ ದೇವರನ್ನೆಲ್ಲಾ ಓಡಿಸಿಬಿಡುತ್ತೇನೆ. ಜಾಗ್ರತೇ !" ಎಂದು ಶೂಲವನ್ನು ಝಳಪಿಸುತ್ತಾ ಹೆದರಿಸಿದನು.

ನರಭಕ್ಷಕರು ಬಾಯಿ ಬಿಡಲಿಲ್ಲ. ಎಲ್ಲರ ಮುಖವೂ ಆಳುಮೊಗವಾಯಿತು. ತಮ್ಮ ನಾಯಕನನ್ನೂ ಪೂಜಾರಿಯನ್ನೂ ಆರ್ತದೃಷ್ಟಿಯಿಂದ ನೋಡುತ್ತಿದ್ದರು.

ಕುದುರೆಯ ಮೇಲೆ ಬಿಗಿಯಲ್ಪಟ್ಟವರು ಕೈಕಾಲು ಹೊಡೆದುಕೊಳ್ಳುತ್ತ ಪ್ರಲಾಪಿಸುತ್ತಿದ್ದರು. "ಕಾಡಮ್ಮಾ ತಾಯೀ ! ನಮಗಾಗಿ ಮಾನವಾಹಾರಗಳನ್ನು ಕಳುಹಿಸಿ ಪ್ರಾಣಕ್ಕೆ ತಂದೆಯಲ್ಲಾ !" ಎಂದು ಹೆಬ್ಬುಲಿಹೆಗ್ಗನೂ "ಕಾಡಪ್ಪಾ ದೇವಾ ! ಶತ್ರುಗಳನ್ನು ಹತಮಾಡು ! ಹತಮಾಡು !" ಎಂದು



ಪೂಜಾರಿಯೂ ಅಡಿಗಡಿಗೂ ಕೂಗುತ್ತಿದ್ದರು. ವೀರಸೇನನು ಅವರಿಗೆ ಕತ್ತಿ ತೋರಿಸಿ ಹೆದರಿಸುತ್ತ, ತನ್ನ ಅನುಚರರಿಗೆ ರಾಜನ ಬಿಡದಿಯ ಕಡೆಗೆ ಹೋಗಲು ಹೇಳಿದನು. ಅವರ ಹಿಂದಿನಿಂದ ನರವಾನರದ ಮೇಲೆ ಸಿದ್ಧಸಾಧಕನು ಜಲಮೃಕನೊಂದಿಗೆ ಹೋಗುತ್ತಿದ್ದನು.

ಅದೇ ಸಮಯದಲ್ಲಿ ಅರಣ್ಯದ ಮತ್ತೊಂದು ಪ್ರಾಂತದಲ್ಲಿ ಹಂಸರಥದಲ್ಲಿ ಹೋಗುತ್ತಿದ್ದ ಜಯಶೀಲ ಮತ್ತು ಅವನ ಮಿತ್ರರಿಗೆ ಆಕಸ್ಮಿಕವಾಗಿ ಒಂದು ಹೃದಯದ್ರಾವಕವಾದ ದೃಶ್ಯ ಕಾಣಿಸಿತು. ಯುವತಿಯೊಬ್ಬಳು ಭೂಮಿಯಲ್ಲಿ ಹುಲಿಯಿಂದ ತಪ್ಪಿಸಲಿಕ್ಕಾಗಿ ಮರಗಳ ಕಾಂಡದ ಸುತ್ತಲೂ ಗಿರಿಕೀ ಹೊಡೆಯುತ್ತಿದ್ದಾಳೆ. ಮಧ್ಯೆ ಮಧ್ಯೆ ಕೈಗೆ ಸಿಕ್ಕಿದ ಕೊಂಬೆಯನ್ನು ಹಿಡಿದು ನೇತಾಡಿ ಮೇಲೆ ಹತ್ತಿ ಬೀಳುತ್ತಿದ್ದಾಳೆ. ಹುಲಿಯೂ ಎಗರಾಡಿಕೊಂಡು ಅವಳ ಬೆಂಬತ್ತುತ್ತಿತ್ತು.



ಹಂಸರಥದಲ್ಲಿ ವೈದ್ಯದೇವನೆಂದು ಕರೆಯಲ್ಪಡುವ ದೇವಶರ್ಮನು ಅರಣ್ಯವನ್ನು ಸೂಕ್ಷ್ಮವಾಗಿ ನೋಡುತ್ತಿದ್ದುದರಿಂದ, ಮೊದಲು ಅವನ ಕಣ್ಣಿಗೇ ಆ ದೃಶ್ಯ ಕಂಡಿತು. ಅವನು ಭಯಾಶ್ಚರ್ಯಗಳಿಂದ ನಡುಗಿ, ಪಕ್ಕದಲ್ಲಿದ್ದ ಜಯಶೀಲನ ತೋಳನ್ನು ಹಿಡಿದೆಳೆದು ಅದನ್ನು ತೋರಿಸಿ, "ನೋಡು ಜಯಶೀಲಾ, ಹುಲಿಯ ಕಾಟಕ್ಕೆ ಬಿದ್ದ ಅವಳು, ಅವಳೇ ಕಾಂಚನಮಾಲೆ! ಮಾಯಾಸರೋವರೇಶ್ವರನ ಬಂಟರು ಅಪಹರಿಸಿಕೊಂಡು ಹೋದ ಕನಕಾಕ್ಷ ಮಹಾರಾಜರ ಕುಮಾರಿ! ಅಯ್ಯೋ! ನೋಡು! ಈಗೇನು ಮಾಡೋಣ!" ಎಂದನು.

ಜಯಶೀಲನು ತಟಕ್ಕನೆ ಎದ್ದು ನಿಂತು, ಕೆಳಗೆ ಬಗ್ಗಿ ನೋಡಿ, ರಥದ ಸಾರಥಿಯೊಂದಿಗೆ, "ಎಲೋ, ರಥವನ್ನು ತಕ್ಷಣ ಕೆಳಗಿಳಿಸು! ಬೇಗಬೇಗ!" ಎಂದು ಅವಸರದಿಂದ ಹೇಳಿದನು. ಸಾರಥಿಯಾದ ಆ ಅಂಗರಕ್ಷಕನು ಬಗ್ಗಿ ಕೆಳಗಿರುವ ವೃಕ್ಷಗಳನ್ನು ನೋಡಿ, "ಅಯ್ಯಾ! ಇಲ್ಲಿ ರಥವನ್ನು ಇಳಿಸುವುದು ಸಾಧ್ಯವಾಗದು. ಸ್ವಲ್ಪ ದೂರದಲ್ಲಿ ಮರಮಟ್ಟುಗಳಿಲ್ಲದ ಖಾಲೀ ಪ್ರದೇಶವಿದೆ, ಅಲ್ಲಿ ಇಳಿಸುತ್ತೇನೆ" ಎಂದನು.

ಜಯಶೀಲನು ಕೋಪದಿಂದ, "ಎಲೋ, ಮತಿಗೆಟ್ಟವನೇ! ನೀನು ರಥವನ್ನು ಅಲ್ಲಿ ಇಳಿಸುವುದರೊಳಗೆ ರಾಜಕುಮಾರಿ ಹುಲಿಯ ಹೊಟ್ಟೆಗೆ ಹೋಗಿಬಿಡುತ್ತಾಳೆ. ತಟ್ಟನೆ ರಥ ಕೆಳಕ್ಕೆ ಹೋಗಲಿ. ನಾನು ಮರದ ಕೊಂಬೆಗಳ ಮೇಲೆ ಹಾರುತ್ತೇನೆ. ಹೇಗಾದರೂ ಅವಳನ್ನು ಕಾಪಾಡಲೇ ಬೇಕು. ಇಲ್ಲದಿದ್ದರೆ ಎಲ್ಲಾ ಶ್ರಮವೂ ವ್ಯರ್ಥ!" ಎಂದನು.

ಅಂಗರಕ್ಷಕನು ಹಂಸಗಳ ಕೊರಳಹಗ್ಗವನ್ನು ಕೆಳಗೆಳೆದು ಸೈಗೆ ಮಾಡಿದನು. ಮರಗಳ ಕೊನೆಯ ಕೊಂಬೆಗಳ ಕಡೆಗೆ ಆ ರಥವು ಇಳಿದು ಬಂದಿತು. ಜಯಶೀಲನು ರಥದಿಂದ ಕೆಳಗೆ ಹಾರಿದ ಕೂಡಲೇ ಎರಡು ಕೈಗಳಿಂದಲೂ ಸಿಕ್ಕಿದ ಕೊಂಬೆಯನ್ನು ಹಿಡಿದುಕೊಂಡನು. ಆದರೆ ಅದು ಅವನ ಭಾರಕ್ಕೆ ನಿಟನಿಟಲೆಂದು ಮುರಿಯಿತು. ನಲುವತ್ತು ಐವತ್ತು ಅಡಿಗಳಷ್ಟೆತ್ತರದಿಂದ ಕೊಂಬೆಯೊಂದಿಗೆ ಅವನೂ ನೆಲಕ್ಕೆ ಬಿದ್ದನು.

ಕೊಂಬೆ ನೆಲಕ್ಕೆ ಬೀಳುವುದರೊಳಗೆ ಜಯಶೀಲನು ಒಂದು ಪಲ್ಟೀಹೊಡೆದು ವೇಗವಾಗಿ ನೆಲಮುಟ್ಟಿ, ಕೈಕಾಲುಗಳನ್ನು ಮುರಿದುಕೊಳ್ಳದೆ ಲಾಘವದಿಂದ ತನ್ನನ್ನು ತಾನು ಕಾಪಾಡಿಕೊಂಡು ನೆಟ್ಟಗೆ ನಿಂತನು.

ಆ ಸಮಯದಲ್ಲಿ ಕಾಂಚನಮಾಲೆಯನ್ನು ಬೆಂಬತ್ತಿದ ಹುಲಿ ಕೊಂಬೆ ಮುರಿದುಬಿದ್ದ ಶಬ್ದಕ್ಕೆ ಬೆಚ್ಚಿಬಿದ್ದು ಹಿಂದಿರುಗಿ ನೋಡಿತು. ಈ ಸಂಧಿಯನ್ನು ನೋಡಿ ಕಾಂಚನಮಾಲೆ ಪಕ್ಕದಲ್ಲಿದ್ದ ಮರದ ಕೊಂಬೆಗೆ ಜೋತಾಡಿ ಮೇಲೆ ಹೋಗತೊಡಗಿದಳು. ಹುಲಿ ಅಷ್ಟರಲ್ಲಿ ಭಾರೀಯಾದೊಂದು ಗಾಂಧ್ರಿಕೆ


ಹಾಕಿ ಮತ್ತೆ ಅವಳ ಕಡೆಗೆ ಓಡಿ ಛಂಗನೆ ಮರದ ಮೇಲೆ ಹಾರಿತು. ಕತ್ತಿ ಹಿರಿಯಲೂ ವ್ಯವಧಿ ಇಲ್ಲದೆ ಜಯಶೀಲನೂ ಒಮ್ಮೆಗೇ ಲಂಘಿಸಿ ಆ ಹುಲಿಯ ಹಿಂದಿನ ಕಾಲುಗಳೆರಡನ್ನೂ ಹಿಡಿದು ಎಳೆದು ರಭಸದಿಂದ ಬೀಸಿ ಒಗೆದು, ಒಗೆದ ವೇಗಕ್ಕೆ ತಾನೂ ಬಿದ್ದಿದ್ದನು.

ಕಾಂಚನಮಾಲೆಗೆ ಇನ್ನೂ ಸರಿಯಾದ ಕೊಂಬೆಯ ಹಿಡಿತ ಸಿಕ್ಕಿರಲಿಲ್ಲ. ಕಾಲಿನ ಆಧಾರ ತಪ್ಪಿತ್ತು. ಹಿಡಿದ ಕೊಂಬೆಯಲ್ಲೇ ನೇತಾಡುತ್ತ, ಆಯಾಸದಿಂದ ತೇಕುವ ದನಿಯಿಂದ "ಅಯ್ಯಾ! ಸಮಯಕ್ಕೆ ಬಂದು ಹುಲಿಯ ಬಾಯಿಯಿಂದೆಳೆದು ತಪ್ಪಿಸಿದಿರಿ. ಎಂದೂ ಮರೆಯಲಾರೆ ನಿಮ್ಮನ್ನು!" ಎಂದು ಕೃತಜ್ಞತೆ ಹೇಳಿದಳು.

ಜಯಶೀಲನು ಅವಳ ಸೌಂದರ್ಯವನ್ನು ನೋಡಿ ಅತ್ಯಾಶ್ಚರ್ಯಪಟ್ಟನು. ತಾನು ಇಷ್ಟುಕಾಲ ಬಹಳ ಶ್ರಮಗಳನ್ನು ಅನುಭವಿಸಿ, ಪ್ರಾಣಾಪಾಯಗಳಿಂದ ಪಾರಾಗಿ, ಅಂತೂ ಕಡೆಗೆ ಕನಕಾಕ್ಷರಾಜರ ಮಗಳನ್ನು ರಕ್ಷಿಸಿದ್ದೂ ಕಂಡುಹಿಡಿದದ್ದೂ ಒಂದೇಬಾರಿಗೆ ಆಗಿದೆ. ಆದರೆ ಇವಳ ಅಣ್ಣ ಕಾಂಚನವರ್ಮನೆಲ್ಲಿ? ಅವನ ಗತಿ ಏನಾಗಿದೆಯೋ! ಅವನೂ ಇವಳೂ ಎಷ್ಟು ಕಾಲದಿಂದ ಬೇರೆಬೇರೆಯಾಗಿದ್ದಾರೋ?

"ಕನ್ಯಾಮಣಿಯೇ, ನೀನು ಯಾರೆಂಬುದು ನನಗೆ ಗೊತ್ತಾಗಿದೆ. ನಿನ್ನ ಹೆಸರು ಕಾಂಚನಮಾಲೆ. ನಿನ್ನ ತಂದೆ ಯಾರೆಂಬುದನ್ನೂ ಬಲ್ಲೆ. ನಿನ್ನ ಅಣ್ಣ ಕಾಂಚನವರ್ಮನೆಲ್ಲಿದ್ದಾನೆ? ಹಂಸರಥದಲ್ಲಿ ಆಕಾಶದಿಂದ ಕೆಳಗೆ ಬಿದ್ದ ನೀನು ಇಷ್ಟೊಂದು ಸುರಕ್ಷಿತಳಾಗಿರುವಿಯೆಂದು ನಾನು ನಂಬಿರಲಿಲ್ಲ. ಹೇಗೆ ಪ್ರಾಣದಿಂದ ಉಳಿದೆ?" ಎಂದು ಕೇಳಿದ ಜಯಶೀಲ.

ಜಯಶೀಲನು ಮಾತಾಡುತ್ತಿರುವಾಗಲೇ, ಕಾಂಚನಮಾಲೆ ಮರದ ಕೊಂಬೆಯಿಂದ ನೆಲದ ಮೇಲೆ ಹಾರಿ ನಿಂತು, ಒಳ್ಳೆಯ ಮೈಕಟ್ಟಿನ ಧೈರ್ಯಶಾಲಿಯಾದ ಯುವಕನ ಕಡೆಗೆ ನೋಡುತ್ತ, ಇವ



ನಿಗೆ ತನ್ನ ಹೆಸರು ದೆಸೆಗಳೆಲ್ಲ ಹೇಗೆ ತಿಳಿಯಿತೆಂದು ಆಶ್ಚರ್ಯಪಡುತ್ತ, ಸಹಜಮಂಜುಲ ಧ್ವನಿಯಿಂದ, "ಅಯ್ಯಾ, ನಾನು ಹಂಸರಥದಿಂದ ಬಿದ್ದವಳು. ಆಯುಷ್ಯವಿದ್ದುದರಿಂದ ಕಲ್ಲು ನೆಲಕ್ಕೋ ಮುಳ್ಳಿನ ಪೊದರಿಗೋ ಬೀಳದೆ ಒಂದು ತೊರೆಯ ನೀರಿನಲ್ಲಿ ಬಿದ್ದುದರಿಂದ ಏನೂ ಆಗಲಿಲ್ಲ. ನನ್ನೊಂದಿಗೆ ರಥದಲ್ಲಿದ್ದ ಸರೋವರೇಶ್ವರನೂ, ಅವನ ಸಾರಥಿಯೂ ಬಿದ್ದವರು, ನನ್ನ ಹಾಗೆಯೇ ಇಲ್ಲೆಲ್ಲೋ ಕಾಡಿನೊಳಗೆ ಇರಬಹುದು. ಅವರು ಬದುಕಿರುವಂತಾಗಲೆಂದೇ ದೇವರನ್ನು ಪ್ರಾರ್ಥಿಸುತ್ತೇನೆ. ನನ್ನ ಸಹೋದರನಾದ ಕಾಂಚನವರ್ಮ ರಥದಲ್ಲಿ ಬರಲಿಲ್ಲ. ಮಾಯಾಸರೋವರದ ಭವನದೊಳಗೆ ಕ್ಷೇಮವಾಗಿಯೇ ಇದ್ದಾನೆ" ಎಂದಳು.

"ಮಾಯಾಸರೋವರೇಶ್ವರನನ್ನು ಕುರಿತು ಸ್ವಲ್ಪ ವಿಷಯ ನನಗೂ ಗೊತ್ತಿದೆ. ಅವನ ಸೇವಕರಾದ ಸರ್ಪನಖಿ, ಸರ್ಪಸ್ವರರೂ, ಮತ್ತೊಬ್ಬ ಪ್ರಮು

ಖನೂ ನನಗೆ ಪರಿಚಿತರಾಗಿದ್ದಾರೆ. ಮಾಯಾಸರೋವರದಲ್ಲಿರುವ ನಿನ್ನ ಅಣ್ಣನನ್ನು ಕೂಡಾ ಬಂಧಮುಕ್ತ ಮಾಡಿ ಕರೆದೊಯ್ಯಬೇಕಾಗಿದೆ. ಅಲ್ಲಿಗೆ ಹೋಗುವ ದಾರಿ ನಿನಗೆ ಗೊತ್ತಿರಬಹುದುಷ್ಟೆ? ಮೊದಲು ನಾವು ಇಲ್ಲೆಲ್ಲೋ ಸಮೀಪದಲ್ಲಿರುವ ನನ್ನ ಮಿತ್ರನಾದ ಸಿದ್ಧಸಾಧಕನನ್ನು ನೋಡಬೇಕು" ಎಂದನು ಜಯಶೀಲ.

ಕಾಂಚನಮಾಲೆ ಅವನೊಂದಿಗೆ ಹೊರಡಲು ತಯಾರಾದಳು. ಆಗ ಜಯಶೀಲನು ಬೀಸಿ ಒಗೆದ ಪೆಟ್ಟಿನಿಂದ ಸೊಂಟ ಮುರಿದ ಹುಲಿ, ಛಕ್ಕನೆ ತಲೆಯೆತ್ತಿ ಕೋರೆಗಳನ್ನು ತೋರಿಸುತ್ತ, ಗಾಂಢ್ರಿಸಿಕೊಂಡು ಅವರ ಮೇಲೆ ಹಾರಲು ನಿಂತು ಧೊಪ್ಪನೆ ನೆಲಕ್ಕೇ ಬಿತ್ತು..

"ಎಷ್ಟೇ ಕ್ರೂರಮೃಗವಾದರೂ ಈ ಸ್ಥಿತಿಯಲ್ಲಿ ನರಳಾಡುವಂತೆ ಬಿಟ್ಟುಹೋಗುವುದು ಒಳ್ಳೆಯದಲ್ಲ. ಈಗಲೇ ಅದರ ತಲೆಯನ್ನು ಬೇರೆ ಮಾಡಿ ಬಿಡುತ್ತೇನೆ" ಎಂದು ಜಯಶೀಲನು ಕತ್ತಿ ಹಿರಿದುಕೊಂಡು ಅದರ ಕಡೆಗೆ ನಡೆದನು.

"ಇದೆಂತಹ ಭಾರಿ ಹುಲಿಯಪ್ಪ! ನೀವು ಬರುವುದು ಸ್ವಲ್ಪ ತಡವಾಗಿರುತ್ತಿದ್ದರೆ, ನಾನು ಅದರ ಬಾಯಿಗೆ ಬಿದ್ದುಬಿಡುತ್ತಿದ್ದೆ. ದೇವರೇ ನಿಮ್ಮನ್ನು ಕಳಿಸಿದಂತಿದೆ!" ಎಂದಳು ಕಾಂಚನಮಾಲೆ.

ಅದುವರೆಗೆ ಪಕ್ಕದಲ್ಲಿದ್ದ ದೊಡ್ಡದೊಡ್ಡ ಪೊದರುಗಳ ಮರೆಯಲ್ಲಿ ಜಲಗ್ರಹ ಆನೆಯ ಮೇಲಿದ್ದು ಇದನ್ನೆಲ್ಲ ನೋಡುತ್ತಿದ್ದ ಮಾಯಾಸರೋವರೇಶ್ವರನು, ತನ್ನ ಪಕ್ಕದಲ್ಲಿ ಕುದುರೆಯ ಮೇಲಿರುವ ಮಕರಕೇತುವಿನೊಂದಿಗೆ, ಮೆಲ್ದನಿಯಿಂದ "ಈ ಜಯಶೀಲನೆಂಬವನನ್ನು ಬಂಧಿಸಲಿಕ್ಕೆ ಇದು ಒಳ್ಳೆಯ ಅವಕಾಶ. ಕಳೆದುಕೊಳ್ಳ ಕೂಡದು. ತಾವರೆ ದಾರದ ಉರುಳನ್ನು ಅವನ ಕಂಠಕ್ಕೆ ಬೀಸು. ಬೇಗ!" ಎಂದನು.

"ಮಹಾಪ್ರಭು! ಈ ಜಯಶೀಲನು ಮಹಾಸತ್ವಶಾಲಿ. ಅವನೊಂದಿಗೆ ವಿರೋಧವು ಒಳ್ಳೆಯದಲ್ಲವೆಂದು ನನಗೆ ಕಾಣುತ್ತದೆ ಅವನ ವಿಷಯದಲ್ಲಿ ನಾನು ಸಾಕಷ್ಟು ಅನುಭವಪಟ್ಟವನು. ಅವನಲ್ಲಿ ಯಾವುದೋ ದೈವಿಕ ಶಕ್ತಿಯೂ ಇರಬಹುದೆಂದು ನನ್ನ ಅನುಮಾನ." ಎಂದು ಮಕರಕೇತು ನಡುಗುವ ಸ್ವರದಲ್ಲಿ ಹೇಳಿದ.

"ಛೀ! ಹೇಡಿಹೆಟಗ! ತಾ ಇತ್ತ!" ಎಂದು ಮಾಯಾಸರೋವರೇಶ್ವರನು ಮಕರಕೇತುವಿನ ತೋಳಿನಲ್ಲಿದ್ದ ಹಗ್ಗದ ಸುರುಳಿಯನ್ನು ಎಳೆದುಕೊಂಡು, ಅದರ ಉರುಳನ್ನು ಎರಡು ಮೂರು ಸಾರಿ ಗಿರಿಗಿರಿ ತಿರುಗಿಸಿ ಜಯಶೀಲನ ಕಂಠದ ಕಡೆಗೆ ಗುರಿಯಿಟ್ಟು ಬೀಸಿದನು. (ಇನ್ನೂ ಇದೆ)





# ಮಾಯಾಸರೋವರ


April 1978

## ೨೭

[ ಹೆಬ್ಬುಲಿಹೆಗ್ಗನನ್ನೂ ಪೂಜಾರಿಯನ್ನೂ ಸಿದ್ಧಸಾಧಕನು ಬಂಧಿಸಿ ಆ ಕಡೆಗೆ ಬಂದಿದ್ದ ಕನಕಾಕ್ಷ ಮಹಾರಾಜರನ್ನು ನೋಡಲು ಸಾಗಿದನು. ಹಂಸ ರಥದಲ್ಲಿದ್ದ ಜಯಶೀಲನಿಗೆ ಹುಲಿಯ ಬಾಯಿಗೆ ಬೀಳಲಿದ್ದ ಕಾಂಚನಮಾಲೆ ಕಾಣಿಸಿದಳು. ಅವನು ಕೆಳಗೆ ಹಾರಿ ಅವಳನ್ನು ಕಾಪಾಡುವಾಗ, ಮರೆಯಲ್ಲಿದ್ದ ಮಾಯಾ ಸರೋವರೇಶ್ವರನು ಅವನ ಕೊರಳಿಗೆ ಉರುಳುಹಗ್ಗವನ್ನು ಬೀಸಿದನು.]

ತನ್ನ ಕೊರಳಿಗೆ ಜಿಲ್ಲೆಂದು ಹಾವಿನಂತೆ ಘಕ್ಕನೆ ಸುತ್ತಿಕೊಂಡ ತಾಮರೆದಂಟಿನ ಹಗ್ಗದುರುಳು ಬೀಳುತ್ತಲೇ ಜಯಶೀಲನು ಪೆಟ್ಟುಬಿದ್ದು ಸರ್ಪವೇ ಎಂದುಕೊಂಡು ರೋಮಾಂಚನಗೊಂಡನು. ಮರುಕ್ಷಣದಲ್ಲಿ ಹಗ್ಗವೆಂದು ತಿಳಿದು ಹಿಂದಿರುಗಿ ನೋಡಿದನು. ವಿಚಿತ್ರವಾದ ಜಲಗ್ರಹ ಆನೆಯ ಮೇಲೆ ಕುಳಿತಿದ್ದ ಮಾಯಾ ಸರೋವರೇಶ್ವರನನ್ನೂ, ಅವನ ಪಕ್ಕದಲ್ಲಿ ಕುದುರೆಯ ಮೇಲಿರುವ ಮಕರಕೇತುವನ್ನೂ ನೋಡಿದನು. ಅವನು ತಟ್ಟನೆ ಕತ್ತಿಯನ್ನೆತ್ತಿ ತನ್ನ ಕಂಠಕ್ಕೆ ಸುತ್ತಿದ ಉರುಳು ಬಿಗಿಯುವುದರೊಳಗೆ ಅದನ್ನು ಕಡಿದು ಹಾಕಬೇಕೆಂದು ಮಾಡಿ, ಏಕೋ ಸುಮ್ಮನೆ ನೋಡುತ್ತ ನಿಂತನು. ಅವನ ಕಣ್ಣು ಮಾಯಾ ಸರೋವರೇಶ್ವರನನ್ನೇ ದುರುಗುಟ್ಟಿ ನೋಡುತ್ತಿದ್ದಿತು. ಯಾರಾಗಿರಬಹುದು ಈ ಹೊಸಬ?

ಮಾಯಾ ಸರೋವರೇಶ್ವರನು ತನ್ನ ಕೈಯಲ್ಲಿದ್ದ ತಾಮರೆದಂಟಿನ ಹಗ್ಗದ ಸುರುಳಿಯನ್ನು ಸ್ವಲ್ಪ ಮಾತ್ರ ಎಳೆದು, "ಎಲೋ ಯುವಕನೇ, ಜಯಶೀಲನೆಂಬ ವೀರನು ನೀನೇ ಏನು? ಕಂಠಕ್ಕೆ ಬಿದ್ದ ಈ ಹಗ್ಗವನ್ನು ಕಡಿಯಲು ಕತ್ತಿ ಹಿರಿದು, ಸುಮ್ಮನೆ ನಿಂತೆಯಲ್ಲಾ? ಏನು ಆಲೋಚನೆ ಮಾಡುತ್ತೀ?"



ಎಂದು ಕೇಳಿದ. "ಓಹೋ! ಈಗ ತಿಳಿಯಿತು. ಮಾಯಾ ಸರೋವರೇಶ್ವರನೆಂದರೆ ನೀನೇನಾ? ನನ್ನ ಕೊರಳಿಗೆ ಉರುಳು ಬಿಸುಡಿದ ಪುಕ್ಕನಾದ ನೀನು, ಅದನ್ನು ಎಳೆದು ನನ್ನ ಪ್ರಾಣತೆಗೆಯಲು ಪ್ರಯತ್ನ ಮಾಡುವುದಿಲ್ಲವೇಕೆ? ಎಳೆನೋಡು ವಾ, ಎಷ್ಟುಬಲವಿದೆಯೋ? ಅದಕ್ಕಾಗಿಯೇ ಕತ್ತಿ ಹಿಡಿದು ಕಾದಿದ್ದೇನೆ. ಅಷ್ಟರೊಳಗೆ ನಿನ್ನ ಗಟ್ಟಿ ಧೈರ್ಯ ನೀರಾಗಿ ಹೋಯಿತೇನು?" ಎಂದನು ಜಯಶೀಲ.

"ನಿನ್ನ ಮಹಾಸತ್ವ ನೋಡಬೇಕೆಂತಲೇ ಕಾದಿದ್ದೇನೆ. ಮಹಾಸರೋವರದ ರಾಜನಾದ ನಾನು ನಿನ್ನ ಪ್ರಶ್ನೆಗಳಿಗೆಲ್ಲ ಉತ್ತರ ಕೊಡಬೇಕಾದ ಅಗತ್ಯವೇನಿಲ್ಲ." ಎಂದ ಮಾಯಾ ಸರೋವರೇಶ್ವರ.


ಜಯಶೀಲನು ಅವನಿಗೇನೋ ಉತ್ತರಕೊಡಲು ನೋಡಿದನು. ಅಷ್ಟರೊಳಗೆ ಕಾಂಚನಮಾಲೆ, ಇದನ್ನೆಲ್ಲ ನೋಡಿ ಬಹಳವಾಗಿ ತಳಮಳಿಸುತ್ತ, ಮಾಯಾ ಸರೋವರೇಶ್ವರನನ್ನು ನೋಡಿ, "ಓಹೋ! ಮಾವಯ್ಯಾ! ನೀವು ಹಂಸಗಳ ರಥದಿಂದ ನೆಲಕ್ಕೆ ಬಿದ್ದು ಹೀಗೆ ಚೆನ್ನಾಗಿದ್ದೀರಲ್ಲಾ! ಅಹಾ! ನಿಮ್ಮನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಆದರೆ ಮಾವಯ್ಯಾ, ನೀವು ಜಯಶೀಲನೆಂಬ ಈ ಯುವಕನಿಗೆ ಯಾವ ಹಾನಿಯೂ ಮಾಡಬಾರದು. ಇವನಿಂದಲೇ ನಾನು ಬದುಕಿದ್ದೇನೆ. ಇಲ್ಲದಿದ್ದರೆ ಇದೀಗ ಹುಲಿಯ ಹೊಟ್ಟೆಯೊಳಗೆ ಹೋಗಿಬಿಡುತ್ತಿದ್ದೆ. ಇವನು ತುಂಬ ಒಳ್ಳೆಯವನು. ಇವನಿಗೆ ಕೋಪ ಬರಿಸಬೇಡಿ ಮಾವಯ್ಯಾ!" ಎಂದಳು.

"ಅಮ್ಮಾ, ಕಾಂಚನಾ! ಅದನ್ನೆಲ್ಲಾ ನಾನೂ ನನ್ನ ಸ್ವಂತ ಕಣ್ಣುಗಳಿಂದಲೇ ನೋಡಿದ್ದೇನೆ. ಇವನನ್ನು ಕೊಲ್ಲಬೇಕೆಂಬ ಉದ್ದೇಶ ನನಗಿಲ್ಲವೇ ಇಲ್ಲ. ಇವನನ್ನು ಬಂಧಿಸಿ ಹೂವಿನ ಹಾಗೆ ಜೋಪಾನದಿಂದ ನಮ್ಮ ಮಾಯಾ ಸರೋವರಕ್ಕೆ ಕರೆದೊಯ್ಯಬೇಕೆಂದಿದ್ದೇನೆ." ಎಂದನು ಮಾಯಾ ಸರೋವರೇಶ್ವರ.

ಕಾಂಚನಮಾಲೆ ಜಯಶೀಲನನ್ನು ನೋಡಿ, "ಮಾವಯ್ಯನವರು ನಿನಗೇನೂ ಮಾಡಲಾರರೆಂದುದನ್ನು ಕೇಳಿದೆಯಷ್ಟೆ? ನೀನು ಸ್ವಂತ ಇಷ್ಟದಿಂದಲೇ ಮಾಯಾ ಸರೋವರಕ್ಕೆ ಏಕೆ ಬರಕೂಡದು?" ಎಂದು ಕೇಳಿದಳು.

"ಕಾಂಚನಾ, ಇದರಲ್ಲಿ ನನ್ನ ಇಷ್ಟ ಅನಿಷ್ಟಗಳ ಪ್ರಶ್ನೆಯೇ ಇಲ್ಲ. ಈ ಮಾಯಾ ಸರೋವರೇಶ್ವರನೆಂಬ ಮಾಯಗಾರನು ನನ್ನನ್ನು ಜಯಿಸಿ ಬಂದಿಯನ್ನಾಗಿ ಮಾಡಿ ತೆಗೆದುಕೊಂಡು ಹೋಗಬೇಕೆಂದಿದ್ದಾನೆ. ನಾನು ಮನಸ್ಸು ಮಾಡಿದರೆ ಈ ಕ್ಷಣದಲ್ಲೇ ಈ ಉರುಳು ಹಗ್ಗವನ್ನು ಕಡಿದು ಹಾಕಬಲ್ಲೆ. ಅವನ ನಿಜವನ್ನು ಪರೀಕ್ಷಿಸಲಿಕ್ಕೇ ಸುಮ್ಮನಿದ್ದೇನೆ." ಎಂದ ಜಯಶೀಲ.

ಆ ಮಾತನ್ನು ಕೇಳಿ ಮಾಯಾ ಸರೋವರೇಶ್ವರನು ತನ್ನ ಪಕ್ಕದಲ್ಲಿರುವ ಮಕರಕೇತುವಿನೊಂದಿಗೆ, "ಕೇತೂ, ನೀನು ಆಚೆಗೆ ಹೋಗಿ ಜಯಶೀಲನು ಓಡಿ



ಹೋಗದಂತೆ ದಾರಿಗೆ ಅಡ್ಡಗಟ್ಟು. ಅಷ್ಟರೊಳಗೆ ನಾನು ಅವನ ಕೊರಳಿನ ಹಗ್ಗವನ್ನು ಸ್ವಲ್ಪ ಎಳೆದು, ಬಲವನ್ಮರಣವೆಂದರೆ ಹೇಗಿರುವುದೆಂದು ಅವನಿಗೆ ಸ್ವಲ್ಪ ತೋರಿಸಿಬಿಡುತ್ತೇನೆ" ಎಂದನು.


ತನ್ನ ಯಜಮಾನನ ಆ ಮಾತು ಕೇಳಿ ಮಕರ ಕೇತುವಿನ ಮುಖದಲ್ಲಿ ಗಾಬರಿ ಹರಡಿತು. ಯಜ ಮಾನನಿಗೆ ಇದಿರಾಡಲೂ ಸಾಧ್ಯವಿಲ್ಲದೆ, ಆಜ್ಞೆ ಮೀರಲೂ ಆಗದೆ, ತನ್ನ ಕುದುರೆಯನ್ನು ಆಚೆಯ ಕಡೆಗೆ ಕದಲಿಸಿ ಕೊಂಡುಹೋದನು.

ಅಷ್ಟರಲ್ಲಿ ಕಾಂಚನಮಾಲೆ ಭಯಕಂಪಿತಳಾಗಿ "ಅಯ್ಯಯ್ಯೋ!" ಎಂದು ಕೂಗಿ ಜಯಶೀಲನ ಕಂಠದ ಹಗ್ಗವನ್ನು ಎರಡು ಕೈಗಳಿಂದಲೂ ಹಿಡಿದು ಕೊಂಡು, "ಮಾವಯ್ಯಾ, ಈ ಹಗ್ಗವನ್ನು ಇನ್ನಷ್ಟು ಗಟ್ಟಿಯಾಗಿ ಎಳೆದು ಇವನ ಕಂಠವನ್ನು ಬಿಗಿದಿರಾದರೆ ನಾನೂ ಇವನೊಂದಿಗೇ ಇದೇ ಹಗ್ಗದಿಂದ ಉರುಳು ಹಾಕಿಕೊಂಡು ಸಾಯುತ್ತೇನೆ." ಎನ್ನುತ್ತಾ, ಹಗ್ಗವನ್ನು ತನ್ನ ಕೊರಳಿಗೆ ಸುತ್ತಿಕೊಳ್ಳಲು ಮೇಲೆತ್ತಿದಳು.

"ಆಂ! ಇದೇನಾಶ್ಚರ್ಯ! ಕೆಲವೇ ಕ್ಷಣದೊಳಗೆ ಕಥೆ ಇಷ್ಟುದೂರ ಬಂದುಬಿಟ್ಟಿದೆಯೆಂದಾಯಿತು!" ಎಂದು ಮಾಯಾ ಸರೋವರೇಶ್ವರನು ಆಶ್ಚರ್ಯ ಪಡುತ್ತ, ಸ್ವಲ್ಪ ಆಲೋಚನೆಗೆ ಬಿದ್ದನು. ತಾನು ಅಂದುಕೊಂಡ ಕಾರ್ಯವನ್ನು ನೆರವೇರಿಸುವ ಪ್ರಯತ್ನ ಮಾಡುವುದರಿಂದ ತಪ್ಪೇನಿಲ್ಲವೆಂದು ಕೊಂಡು, ತಲೆಯೆತ್ತಿ ಗಂಭೀರ ಧ್ವನಿಯಿಂದ, "ಎಲೈ, ಜಯಶೀಲಾ! ನೀನು ಕತ್ತಿಯಿಂದ ನಿನ್ನ ಕೊರಳಿಗೆ ಸುತ್ತಿದ ಹಗ್ಗವನ್ನು ತುಂಡುಮಾಡಿಕೊಂಡರೂ, ಅದ್ಭುತ ಶಕ್ತಿಯ ಈ ಜಲಗ್ರಹ ಗಜದ ಕೈಯಿಂದ ತಪ್ಪಿಸಿಕೊಳ್ಳಲಾರೆ. ಇದು ನಿನ್ನನ್ನು ಸೊಂಡಿಲಿಂದೆತ್ತಿ ಹಾಕಿ, ಕಾಲುಗಳಿಂದ ಮಣ್ಣಿಗೆ ಸೇರಿಸಿಬಿಡುತ್ತದೆ. ಕೋರೆದಾಡೆಗಳಿಂದ ನೆಲವನ್ನಗೆದು ನಿನ್ನನ್ನು ಹೂಳಿ ಬಿಡುತ್ತದೆಂದು ತಿಳಿ." ಎಂದನು.

"ಹೌದು ಹೌದು. ನಿನ್ನ ಪರಿಕರಗಳೆಲ್ಲ ನೀನು ಹೆದರಿಸುವುದಕ್ಕೆ ಅನುಗುಣವಾಗಿಯೇ ಇವೆ. ಆಗಲಿ, ಅದನ್ನೂ ನೋಡಿಬಿಡೋಣ! ಪ್ರಾರಂಭಿಸು!" ಎಂದು ಜಯಶೀಲನು ಕತ್ತಿಯನ್ನೆತ್ತಿದನು. ಆಗ ಸಮೀಪ ಬಂದಿದ್ದ ಮಕರಕೇತು, ಸಣ್ಣ ದನಿಯಿಂದ, "ಜಯಶೀಲಾ! ತಾಳು ತಾಳು! ಅವಸರಪಟ್ಟರೆ ಹೆಚ್ಚು ಗಲಾಟೆಗೆ ಆಸ್ಪದವಾದೀತು! ನಮ್ಮ ಸರೋ ವರೇಶ್ವನು ನಿನ್ನನ್ನು ಮಾಯಾ ಸರೋವರಕ್ಕೆ ಕೊಂಡೊಯ್ಯುವುದರಲ್ಲಿ ಸಣ್ಣದೊಂದು ರಹಸ್ಯವಿದೆ. ಅದೂ ಅಲ್ಲದೆ ನೀನು ಆ ಸರೋವರಕ್ಕೆ ಹೋಗ ಬೇಕೆಂದು ತುಂಬ ಪ್ರಯತ್ನ ಮಾಡುತ್ತಲೂ ಇರುವೆ ಯಷ್ಟೆ? ಅವನ ಇಷ್ಟದಂತೆ ನಡೆಯುವುದರಿಂದ ನಿನಗೇನೂ ಕಡಮೆಯಾಗದು. ಯಾವ ಹಾನಿಯೂ ಬರಲಾರದು." ಎಂದನು.

ಮಕರಕೇತು ತನ್ನ ಒಳಿತಿಗಾಗಿಯೇ ಹೇಳುತ್ತಾ ನೆಂದು ಜಯಶೀಲನಿಗೆ ಗೊತ್ತಾಯಿತು. ಕನಕಾಕ್ಷ



ಮಹಾರಾಜರ ಮಕ್ಕಳಲ್ಲಿ ಕಾಂಚನ ಮಾಲೆಯೊಬ್ಬಳೇ ದೊರಕಿದ್ದಾಳೆ. ಅವರ ಮಗ ಕಾಂಚನವರ್ಮ ಇನ್ನೂ ಆ ಮಾಯಾ ಸರೋವರದಲ್ಲಿ ಬಂದಿಯಾಗಿದ್ದಾನೆ. ಆದರೆ ಈ ಕಾಂಚನಮಾಲೆ ತನ್ನನ್ನು ಅಪಹರಿಸಿ ಕೊಂಡುಹೋದ ಈ ಕಳ್ಳ ಮಾಯಾ ಸರೋವರೇಶ್ವರ ನನ್ನು ಮಾವಯ್ಯಾ ಎನ್ನುತ್ತ ಬಹಳ ಗೌರವ ತೋರಿಸುವುದೊಂದು ಆಶ್ಚರ್ಯವಾಗಿದೆ. ಏನೋ ಕೆಟ್ಟ ಅನುಮಾನವೂ ಬರುತ್ತಿದೆ. ದುಷ್ಟರು ಅವಳ ಬುದ್ಧಿಗೇನೋ ಮಂಕುಮಂತ್ರ ಕವಿಸಿರಬೇಕು.

ಇದರ ಆಳ ನೋಡಬೇಕಾದರೆ ಈಗ ತಗ್ಗಿ ಹೋಗುವುದೇ ಒಳ್ಳೆಯದೆಂದುಕೊಂಡು ಜಯ ಶೀಲನು ಮಾಯಾ ಸರೋವರೇಶ್ವರನನ್ನು ನೋಡಿ, "ಸರಿಯಯ್ಯಾ! ಮಹಾಮಹಿಮನಾದ ಮಾಯಾ ಸರೋವರೇಶ್ವರಾ! ನೀನು ನನಗಿಂತ ಎಷ್ಟೋ ಹೆಚ್ಚಿನ ಬಲವಂತನೆಂಬುದು ಸ್ಪಷ್ಟವೇ ಆಯಿತು. ನಾನೇನೂ ನನ್ನ ಬಲಕ್ಕೆ ಉಬ್ಬಿಕೊಂಡಿಲ್ಲ. ಗುಡ್ಡೆಗೆ ಗುಡ್ಡ ಅಡ್ಡವಿದ್ದೇ ಇದೆ. ನಾನೀಗ ನಿನಗೆ ವಶನಾಗಿ ಬಿಡುತ್ತೇನೆ. ಮುಂದೆ ನಿನ್ನಿಂದ ಬರುವ ಅಪಾಯಕ್ಕೂ ಎದೆಯೊಡ್ಡಿಕೊಳ್ಳುತ್ತೇನೆ. ಇನ್ನು ನನ್ನನ್ನು ಏನು ಮಾಡಬೇಕೆಂದಿರುವೆ ?" ಎಂದು ಕೇಳಿದನು.

"ಹಾಗೇನು ? ಒಂದುವೇಳೆ ನಿನ್ನಂಥವನು ಥಕ್ಕನೆ ಹೀಗೆ ಹೇಳುವುದರಲ್ಲಿ ಮೋಸವೇನಿಲ್ಲವಷ್ಟೆ ?" ಎಂದು ಕೇಳಿದ ಮಾಯಾ ಸರೋವರೇಶ್ವರ. ಆಗ ಅವನ ದೃಷ್ಟಿ ಜಯಶೀಲನ ಮುಖವನ್ನು ಪರೀಕ್ಷಿಸಿ ಕೊಂಡಿದ್ದಿತು.

"ಬಲಪರಾಕ್ರಮಗಳು ಏನೂ ಇಲ್ಲದವನೇ ಮರೆ ಮೋಸಗಳನ್ನು ಅಡ್ಡವಿಟ್ಟುಕೊಂಡು ಬದುಕುತ್ತಾನೆ. ನಾನು ಎಂಥವನೆಂಬುದು ನಿನ್ನ ಮಂತ್ರಿ ಈ ಮಕರ ಕೇತುವಿಗೆ ಸ್ವಲ್ಪಾದರೂ ತಿಳಿದಿರಬೇಕು. ಅಲ್ಲವೇ ಮಕರಕೇತು ? ಏಕೆ ಬಾಯಿ ಮುಚ್ಚಿಕೊಂಡಿರುವಿ ?" ಎಂದ ಜಯಶೀಲ, ಮುಗುಳುನಗುತ್ತ.

"ನಾನು ಮಹಾರಾಜನ ಹತ್ತಿರ ಈ ಮೊದಲೇ ಅರಿಕೆ ಮಾಡಿದ್ದೇನೆ; ನೀನು ಮಹಾಸತ್ವಶಾಲಿಗಳ ಗುಂಪಿಗೆ ಸೇರಿದವನೆಂದು ಹೇಳಿದ್ದೇನೆ" ಎಂದ ಮಕರಕೇತು.

"ಹೌದು ಹೌದು. ಇವನ ಸತ್ವ ಎಂತಹದೆಂದು ನಮ್ಮ ಸರೋವರ ಸೇರಿದ ಮೇಲೆ ನೋಡುತ್ತೇನೆ. ನಾವು ಈ ಮೊದಲೇ ಇಲ್ಲೊಬ್ಬ ಜಲವೃಕನನ್ನು ನೋಡಿದೆವಷ್ಟೆ ? ಏನು ತಂತ್ರದಿಂದ ಅವನಿಲ್ಲಿ ದ್ದಾನೋ ? ಮಕರಕೇತೂ, ಉಳಿದ ಜಲವೃಕ ಘಾತುಕರು ಇನ್ನೆಷ್ಟು ಘೋರಕೃತ್ಯ ಮಾಡುವರೋ ಅಲ್ಲಿ ?" ಎಂದು ಮಾಯಾ ಸರೋವರೇಶ್ವರನು ದೀರ್ಘವಾದೊಂದು ನಿಟ್ಟುಸಿರುಬಿಟ್ಟನು.

"ಅದೆಲ್ಲಾ ಇರಲಿ. ಈಗ ನನ್ನ ಕೊರಳಿಗೆ ಸುತ್ತಿರುವ ಈ ಉರುಳಿನ ಸಂಗತಿ ಏನು ?" ಎಂದು ಕೇಳಿದ ಜಯಶೀಲ. ಮಾಯಾ ಸರೋವರೇಶ್ವರನು ಉತ್ತರಕೊಡುವುದರೊಳಗೆ ಕಾಂಚನಮಾಲೆ ನಗುತ್ತ,

"ಅದನ್ನು ನಾನು ಹೇಳುತ್ತೇನೆ. ಇದನ್ನು ಏನೆಂದುಕೊಂಡೆ? ಇದು ಪ್ರಾಣ ತೆಗೆಯುವ ಉರುಳು ಹಗ್ಗವಲ್ಲ. ನಮ್ಮ ಮಾವಯ್ಯನವರು ಬಹುಮಾನವಾಗಿ ನಿನ್ನ ಕೊರಳಿಗೆ ಹಾಕಿದ ತಾವರೆ ಹೂದಂಟಿನ ಹಾರ!" ಎಂದು ಹೇಳುತ್ತಾ ಅದನ್ನು ಅವನ ಕೊರಳಿನಿಂದ ತೆಗೆದುಬಿಟ್ಟಳು.

ಅದನ್ನು ನೋಡಿ ಮಾಯಾ ಸರೋವರೇಶ್ವರನು ತನ್ನಲ್ಲಿ, "ಕಥೆ ಬೇಗನೇ ಮುಗಿಯುವ ಹಾಗಿದೆಯಲ್ಲಾ? ಪಾಪ, ಪದ್ಮಮುಖಿ ಎಲ್ಲದರಲ್ಲಿಯೂ ದುರದೃಷ್ಟವಂತಳೇ. ಕಡೇಪಕ್ಷ ಈ ಜಯಶೀಲ ನಮ್ಮ ಶತ್ರು ಜಲವೃಕರಾಜನನ್ನು ಕೊಲ್ಲಲು ಸಹಾಯ ಮಾಡಿದರೂ ನನಗೆ ದೊಡ್ಡ ಉಪಕಾರವಾದಂತೆ" ಎಂದುಕೊಂಡನು.


"ಮಹಾಪ್ರಭುಗಳೇ, ಈಗ ಏನು ಮಾಡಬೇಕೆಂದು ತಮ್ಮ ಆಜ್ಞೆ?" ಎಂದು ವಿನಯದಿಂದ ಕೇಳಿದ ಮಕರಕೇತು.

"ಈಗ ನಾವೆಲ್ಲರೂ ನಮ್ಮ ಸರೋವರಕ್ಕೆ ಹೋಗಬೇಕು. ಮುಂದೆ ನೀನು ಹೊರಡು. ನನ್ನ ಹಿಂದಿನಿಂದ ಉಳಿದವರು ಹೊರಡಲಿ." ಎಂದು ಆಜ್ಞೆಮಾಡಿದ ಮಾಯಾ ಸರೋವರೇಶ್ವರ.

"ಜಯಶೀಲನು ನಮ್ಮೊಂದಿಗೆ ಕಾಲು ನಡಿಗೆಯಿಂದ ಬರಬಲ್ಲನೇ?" ಎನ್ನುತ್ತ ಮಕರಕೇತು ಜಯಶೀಲನ ಮುಖವನ್ನು ನೋಡಿದನು.


ಆಗ ಮಾಯಾ ಸರೋವರೇಶ್ವರನು, "ಕಾಂಚನಮಾಲೆ ನನ್ನ ಜತೆ ಜಲಗ್ರಹದ ಮೇಲೆ ಬರುತ್ತಾಳೆ. ನೀನೂ ಜಯಶೀಲನೂ ಕುದುರೆಯ ಮೇಲೆ ಹೊರಡಿರಿ." ಎಂದನು.

ಕಾಂಚನಮಾಲೆ ಮತ್ತೆ ಮಾಯಾ ಸರೋವರಕ್ಕೆ ಹೋಗಲ್ಪಡುವ ಸಂಗತಿ ಗೊತ್ತಾದ ಕೂಡಲೇ, ಜಯಶೀಲನು ಅದುರಿಬಿದ್ದು ಮಕರಕೇತುವನ್ನು ನೋಡಿ, "ಎಲೋ ಮಕರಕೇತು, ಕಾಂಚನಮಾಲೆ



ಯನ್ನು ಮತ್ತೆ ನಿಮ್ಮ ಮಾಯಾ ಸರೋವರಕ್ಕೆ ಕರೆದೊಯ್ಯುವುದನ್ನು ನಾನು ಒಪ್ಪಲಾರೆ. ಕನಕಾಕ್ಷ ಮಹಾರಾಜರಿಗೆ ಅಪಹರಿಸಲ್ಪಟ್ಟ ಅವರ ಮಕ್ಕಳಿಬ್ಬರನ್ನೂ ಹುಡುಕಿ ತಂದು ಕೊಡುವುದಾಗಿ ನಾನು ಮಾತು ಕೊಟ್ಟಿದ್ದೇನೆ. ಈಗ ಸಿಕ್ಕಿದ ಕುಮಾರಿಯನ್ನು ಮತ್ತೆ ನಿಮ್ಮ ನಿರ್ಬಂಧಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇವಳನ್ನಾದರೂ ರಾಜನ ಬಳಿಗೆ ಒಪ್ಪಿಸಿಬಿಡಬೇಕು. ಆ ಕೆಲಸ ನಾನೇ ಮಾಡಿಬಿಡುತ್ತೇನೆ. ರಾಜಕುಮಾರನ ಸಂಗತಿ ಮತ್ತೆ ನೋಡುತ್ತೇನೆ" ಎಂದು ಹೇಳಿ, "ಎಲ್ಲರೂ ನಿಲ್ಲಿರಿ!" ಎಂದು ಗರ್ಜಿಸಿದನು.

ಅವನ ಮಾತು ಕೇಳುತ್ತಿದ್ದಂತೆ ಮಾಯಾ ಸರೋವರೇಶ್ವರನಿಗೆ ಕೋಪವೇರುತ್ತಾ ಹೋಯಿತು. ಕಾಂಚನಮಾಲೆಯೂ ತನ್ನನ್ನು ಕೋಪದಿಂದ ನೋಡುವುದನ್ನು ನೋಡಿ ಜಯಶೀಲನು ತುಸು ಬೆರಗಾದನು. ಆಗ ಕಾಂಚನಮಾಲೆ ಅವನನ್ನು ನೋಡಿ, "ಜಯಶೀಲಾ! ನಿನಗೆ ಹೆಚ್ಚಿನ ವಿವರ



ವೇನೂ ತಿಳಿಯದೆ ಹೀಗೆ ಮಾತಾಡುವೆ. ನಾನೂ ನನ್ನ ಅಣ್ಣ ಕಾಂಚನವರ್ಮನೂ ಅರಣ್ಯದಲ್ಲಿ ಅಪಹರಿಸಲ್ಪಟ್ಟ ಮಾತು ನಿಜವೇ. ಆದರೆ ಯಾರ ನಿರ್ಬಂಧದಲ್ಲಿಯೂ ನಾವಿಲ್ಲ. ಈಗ ಅಣ್ಣನನ್ನು ಬಿಟ್ಟು ನಾನೊಬ್ಬಳೇ ತಂದೆ ತಾಯಿಯರ ಬಳಿಗೆ ಹೇಗೆ ಹೋಗಲಿ? ನಿನ್ನಿಂದ ಸಾಧ್ಯವಾದರೆ ಅಣ್ಣನನ್ನು ಕೂಡಾ ನೀನು ಬಂಧನದಿಂದ ಬಿಡಿಸು. ನನ್ನನ್ನು ನೀನು ಆಕಸ್ಮಿಕವಾಗಿ ನೋಡಿ ರಕ್ಷಿಸಿದೆಯೇ ಹೊರತು, ನೀನಾಗಿ ಹುಡುಕಿ ಕಂಡುಹಿಡಿದವಳಲ್ಲವಷ್ಟೆ? ನಾನು ಎಷ್ಟು ಮಾತ್ರಕ್ಕೂ ನಿನ್ನ ಇಷ್ಟದಂತೆ ಬರುವವಳಲ್ಲ. ಮಾವಯ್ಯನೊಂದಿಗೆ ಜಲಗ್ರಹದಲ್ಲೇ ಹೋಗುತ್ತೇನೆ" ಎಂದು ಹೇಳುತ್ತಾ ಜಲಗ್ರಹದ ಬಳಿಗೆ ಹೋದಳು.

ಮಾಯಾ ಸರೋವರೇಶ್ವರನು ಕೈಚಾಚಿ ಅವಳನ್ನು ಹಿಡಿದು ಆನೆಯಮೇಲೇರಿಸಿಕೊಂಡನು. ಜಯಶೀಲನು ಅತ್ಯಾಶ್ಚರ್ಯದಿಂದ ಮಕರಕೇತುವನ್ನು ನೋಡಿ, "ಕೇತೂ, ಎಲ್ಲವೂ ವಿಚಿತ್ರವಾಗಿದೆ. ರಾಜನ ಮಕ್ಕಳ ಅಪಹಾರ, ಮಾಯಾ ಸರೋವರ, ಇದೆಲ್ಲಾ ಸುಳ್ಳಲ್ಲವಷ್ಟೆ? ಇವಳು ಈ ರೀತಿಯಾಗಿ ಮಾತಾಡುತ್ತಾಳಲ್ಲಾ? ನೀವೆಲ್ಲಾ ಕೂಡಿ ಮಾಯಾ ಮಂತ್ರ ಹಾಕಿಲ್ಲವಷ್ಟೆ?" ಎಂದನು.

"ಅದೇನಿಲ್ಲ. ಹೇಳುತ್ತೇನೆ. ಮೊದಲು ಬಂದು ಕುದುರೆಯನ್ನು ಆರೋಹಿಸು. ಎಲ್ಲಾ ಸಂಗತಿಯನ್ನೂ ನೀನೇ ನೋಡಿ ತಿಳಿಯುವೆ, ಬಾ" ಎಂದ ಮಕರಕೇತು.

ಜಯಶೀಲನು ಮತ್ತೇನೂ ಹೇಳದೆ ಮಕರಕೇತುವಿನ ಹಿಂದೆ ಕುದುರೆ ಏರಿ ಕುಳಿತನು. ಮಾಯಾ ಸರೋವರೇಶ್ವರನು ತನ್ನ ಜಲಗ್ರಹವನ್ನು ಮುಂದಕ್ಕೆ ನಡೆಯಿಸಿದನು. ಅದು ವೇಗವಾಗಿ ಹೋಗತೊಡಗಿತು. ಅದನ್ನು ಅನುಸರಿಸಿ ಮಕರಕೇತು ಕುದುರೆಯನ್ನು ಓಡಿಸತೊಡಗಿದನು.


ಆ ಸಮಯದಲ್ಲಿ ಜಯಶೀಲನಿಗೆ ಸಿದ್ಧಸಾಧಕನ ನೆನಪು ಬಂತು. ಎಷ್ಟೋ ಕಾಲದಿಂದ ಅರಣ್ಯದಲ್ಲಿ ತನ್ನ ಜತೆಯಲ್ಲೇ ಕಷ್ಟಗಳನ್ನನುಭವಿಸಿದ ಸಿದ್ಧಸಾಧಕನು. ತಾನು ಕಾಣದೆಹೋದರೆ ಏನೆಂದುಕೊಳ್ಳುವನು? ತಾನು ಸತ್ತುಹೋದುದಾಗಿ ಭಾವಿಸಿಬಿಡಲಿಕ್ಕಿಲ್ಲವಷ್ಟೆ? ಸ್ವಲ್ಪ ದುಡುಕುಗಾರನಾಗಿದ್ದಾನೆ. ಅಲ್ಲದೆ ಹಂಸರಥದಲ್ಲಿದ್ದ ತನ್ನ ಬಾಲ್ಯಮಿತ್ರ ದೇವಶರ್ಮ, ತಾನು ಕಾಂಚನಮಾಲೆಯನ್ನು ಕಾಪಾಡಲು ಹೋಗಿ ಹುಲಿಯ ಬಾಯಿಗೆ ಬಿದ್ದೆನೆಂದು ಶಂಕಿಸುವ ಸಾಧ್ಯತೆಯೂ ಇದೆ.

ಜಯಶೀಲನು ಇಂತಹ ಆಲೋಚನೆಗಳಲ್ಲಿ ಮುಳುಗಿರುವ ಸಮಯದಲ್ಲಿ ಅಶ್ವೀಕರನಾಯಕನಾದ ವೀರಸೇನನು, ಸಿದ್ಧಸಾಧಕ ಮೊದಲಾದವರನ್ನು ಅರಣ್ಯದಲ್ಲಿರುವ ಕನಕಾಕ್ಷರಾಜರ ಬೀಡಾರಕ್ಕೆ ಕರೆದುಕೊಂಡು ಹೋದನು. ಕನಕಾಕ್ಷ ಮಹಾರಾಜನು ಸಿದ್ಧಸಾಧಕನ ಗುರುತುಹಿಡಿದು, ಆಪ್ತಾ

ಯತೆಯಿಂದ ಮಾತಾಡಿಸಿ, ಕುಶಲ ವಿಚಾರಿಸುತ್ತ, "ಏನಪ್ಪಾ, ನಿನ್ನ ಜತೆಯಲ್ಲಿ ನಮ್ಮ ಕುಮಾರ ಕುಮಾರಿಯರನ್ನು ಹುಡುಕಲು ಜಯಶೀಲನೆಂಬ ಯುವಕನೂ ಹೊರಟಿದ್ದನಲ್ಲ? ಅವನೆಲ್ಲಿ? ನೀವು ಹೋಗಿ ಬಹಳ ಕಾಲವಾದರೂ ನಿಮ್ಮ ಸುದ್ದಿ ತಿಳಿಯದ್ದರಿಂದ ರಾಜ್ಯವ್ಯವಹಾರವನ್ನು ಮಂತ್ರಿಗಳಿಗೆ ಒಪ್ಪಿಸಿ ನಾನೇ ಸ್ವತಃ ಹೊರಟು ಬಂದು ಈ ಅರಣ್ಯದಲ್ಲಿ ಹುಡುಕಾಡಿಕೊಂಡಿದ್ದೇನೆ" ಎಂದನು.

"ಮಹಾರಾಜರೇ, ಬಹಳ ಮಟ್ಟಿಗೆ ಸಮಾಚಾರ ಗೊತ್ತಾಗಿದೆ. ಯುವರಾಜ ಯುವರಾಣಿಯರನ್ನು ಎತ್ತಿಕೊಂಡು ಹೋದವರು ಮಾಯಾ ಸರೋವರವೆಂಬಲ್ಲಿ ವಾಸಮಾಡುವ ವಿಚಿತ್ರವಾದ ವಿಜಾತೀಯ ಮನುಷ್ಯರು. ಅವರು ನೀರಿನಲ್ಲಿಯೂ ನೀರಿನ ಹೊರಗೂ ಬದುಕಿರಬಲ್ಲವರು. ಅವರಲ್ಲಿ ಕೆಲವರನ್ನು ನಾವು ಹಿಡಿದೆವು. ಅವರ ನಾಯಕನಾದ ಮಾಯಾ ಸರೋವರೇಶ್ವರ ಎಂಬವನು, ಆ ಕಡೆಯಲ್ಲಿ ನರಭಕ್ಷಕಜಾತಿಯವರ ಕೈಗೆ ಸಿಕ್ಕಿ, ತಪ್ಪಿಸಿಕೊಂಡು ಹೋದನು. ಆದರೂ ಕೆಲಸ ಕೆಡಲಿಲ್ಲ. ಅದೇ ಮಾಯಾ ಸರೋವರದಲ್ಲಿ ಮತ್ತೊಂದು ಪ್ರಾಂತದಲ್ಲಿ ಬದುಕಿರುವ ಅವರ ಶತ್ರುಗಳಲ್ಲಿ ಒಬ್ಬ ಈಗ ನನ್ನ ಬಂಟನಾಗಿ ಬದಲಾಯಿಸಿದ್ದಾನೆ. ಅವನು ಈ ಜಲವೃಕ ಜಾತಿಯವನು. ದೊಡ್ಡ ಮೊರಟು ವೀರ. ನನ್ನ ದಾಸನಾಗಿದ್ದಾನೆ. ಇವನ ಮೂಲಕ ಆ ಸರೋವರ ಎಲ್ಲಿದೆ ಎಂಬುದನ್ನು ಸುಲಭವಾಗಿ ತಿಳಿದುಬಿಡಬಹುದು" ಎಂದನು ಸಿದ್ಧಸಾಧಕ.

"ಹಾಗೇನು?" ಎಂದು ಕನಕಾಕ್ಷರಾಜನು ಸಿದ್ಧಸಾಧಕನ ಹಿಂದೆ ಗದೆಯನ್ನು ಭುಜದ ಮೇಲೆ ಇಟ್ಟುಕೊಂಡು ನಿಂತಿದ್ದ ಜಲವೃಕರಾಕ್ಷಸನನ್ನು ನೋಡಿ, "ಹಾಗಾದರೆ ಜಯಶೀಲನೆಲ್ಲಿಗೆ ಹೋದನು?" ಎಂದು ಕೇಳಿದನು. "ಅವನು ನನ್ನ ಜತೆಯಲ್ಲೇ ಇದ್ದನು. ಇಬ್ಬರು ಮಾಯಾ ಸರೋವರ ನಿವಾಸಿ



ಗಳೊಂದಿಗೆ ಕೂಡಿ ಹಂಸಗಳ ರಥದಲ್ಲಿ ಅರಣ್ಯದಲ್ಲಿ ಬಿದ್ದುಹೋದ ಆ ರಾಜನನ್ನು ಹುಡುಕಾಡುತ್ತಿದ್ದಾನೆ. ಆ ಕಳ್ಳರಾಜ ನನ್ನ ಕಣ್ಣಿಗೆ ಬಿದ್ದು ತಪ್ಪಿಸಿಕೊಂಡಿರುವ ಸಂಗತಿ ಅವನಿಗಿನ್ನೂ ತಿಳಿಯದು. ಎಲ್ಲಿ ಹುಡುಕುತ್ತಿದ್ದಾನೋ ಏನೋ? ನಾನೂ ಅವನನ್ನೇ ಹುಡುಕುತ್ತಿದ್ದೇನೆ." ಎಂದ ಸಿದ್ಧಸಾಧಕ.

"ಹಂಸಗಳ ರಥ? ಅರಣ್ಯದಲ್ಲಿ ಬಿದ್ದವ! ಈ ಜಲವೃಕ ರಾಕ್ಷಸ? ಏನು ವಿಚಿತ್ರ!" ಎಂದು ಕನಕಾಕ್ಷ ರಾಜನೂ ಇತರ ಪರಿವಾರದವರೂ ಎಲ್ಲಿಲ್ಲದ ಆಶ್ಚರ್ಯಕ್ಕೀಡಾದರು.

"ಆಶ್ಚರ್ಯಕ್ಕೆ ಹಂಸರಥ ಮಾತ್ರವಲ್ಲ, ಈ ಜಲವೃಕನ ಕಲ್ಲಿನ ಗದೆಯೆಂದರೇನು? ಈ ನರವಾನರವೇನು? ಇನ್ನೂ ಮೂರಡಿ ಎತ್ತರ ಕೂಡಾ ಇಲ್ಲದ ಮನುಷ್ಯರೇನು? ಪ್ರಾಣಿಗಳನ್ನು ಹಿಡಿದೆಳೆದು ನುಂಗುವ ಮರಗಳೇನು? ಹೀಗೆ ನಗರದಿಂದ ಅರಣ್ಯದಲ್ಲಿ ಪ್ರವೇಶಿಸಿದ ಮೇಲೆ ನಮಗೆ ಇದಿರಾದ ವಿಚಿತ್ರ

ಗಳು ಅನೇಕ ಮಹಾರಾಜರೆ." ಎಂದ ಸಿದ್ಧಸಾಧಕ. ಅಷ್ಟರಲ್ಲಿ ಸ್ವಲ್ಪದೂರದಲ್ಲಿ ಮರಗಳ ಹಿಂದಿನಿಂದ ಏನೋ ಕಲಕಲರವವು ಹೊರಟಿತು. ಅಲ್ಲಿದ್ದ ರಾಜ ಭಟರೊಂದಿಗೆ ಇಬ್ಬರು ನರಭಕ್ಷಕರು ವಾದವಿವಾದ ಮಾಡುತ್ತಿದ್ದರು. ತಮಗೊಂದು ದೊಡ್ಡ ರಹಸ್ಯ ಗೊತ್ತಿದೆಯೆಂದೂ, ನರವಾನರದ ಮೇಲೆ ತಿರುಗುವ ಭೂತರಾಜನೊಂದಿಗೆ ಅದನ್ನು ಹೇಳುತ್ತೇವೆಂದೂ, ಅವನ ಬಳಿಗೆ ಕರೆದೊಯ್ಯಬೇಕೆಂದೂ ಅವರು ಹೇಳುತ್ತಿದ್ದರು.

ಭಟರು ಅವರೊಂದಿಗೆ "ನೀವಾರು ? ಎಲ್ಲಿಂದ ಬರುತ್ತೀರಿ ? ಮಹಾರಾಜರ ಬಳಿಗೆ ಹಾಗೆಲ್ಲಾ ಬಿಡಲಾರೆವು" ಎಂದು ಹೇಳುತ್ತಿದ್ದರು.


ಸಿದ್ಧಸಾಧಕನು ಒಬ್ಬ ರಾಜಭಟನನ್ನು ಕಳುಹಿಸಿ ಸಂಗತಿ ತಿಳಿದುಕೊಂಡು, ಅವರಿಬ್ಬರನ್ನೂ ತನ್ನ ಬಳಿಗೆ ಕರೆತರಲು ಹೇಳಿದನು. ನರಭಕ್ಷಕರಿಬ್ಬರು ಅವನ ಬಳಿಗೆ ಬಂದು ಅಡ್ಡಬಿದ್ದು ಎದ್ದು, "ದೊರೆಗಳೇ, ನಮ್ಮ ನಾಯಕರನ್ನೂ, ಪೂಜಾರಿಯವರನ್ನೂ ಬಿಡುಗಡೆ ಮಾಡಿದರೆ, ನಿಮಗೊಂದು ದೊಡ್ಡ ರಹಸ್ಯ ಹೇಳುತ್ತೇವೆ" ಎಂದರು.


ಅವರಿಗೇನೋ ಮುಖ್ಯವಾದ ಸಂಗತಿ ಗೊತ್ತಾಗಿರಬೇಕೆಂದು ಸಿದ್ಧಸಾಧಕನಿಗೆ ಅನುಮಾನವಾಯಿತು. ಕೂಡಲೇ ಜಲವೃಕ ಬಂಟನನ್ನು ಕರೆದು, ಕುದುರೆಯ ಮೇಲೆ ಬಂಧಿಸಿದ ನರಭಕ್ಷಕರಿಬ್ಬರನ್ನೂ ಬಿಡಿಸಿ ಕರೆತರಲು ಹೇಳಿದನು. ಅವನು ಹೋಗಿ ಹೆಬ್ಬುಲಿಹೆಗ್ಗನನ್ನೂ, ಮುದುಕ ಪೂಜಾರಿಯನ್ನೂ ಬಿಟ್ಟು ಒಂದೊಂದು ಕೈಯಿಂದ ಎತ್ತಿ ತಂದು ಸಿದ್ಧಸಾಧಕನ ಮುಂದೆ ನಿಲ್ಲಿಸಿದನು.

"ಆಯಿತಲ್ಲ. ಈಗ ನಿಮಗೆ ತಿಳಿದ ರಹಸ್ಯವೇನೋ ಹೇಳಿರಿ" ಎಂದ ಸಿದ್ಧಸಾಧಕ.

"ಭೂತಗಳ ದೊರೆಯೇ, ನಿಮ್ಮಿಂದ ಓಡಿಹೋದ ಮೊಸಳೇ ಮುಖದವನನ್ನೂ, ವಿಚಿತ್ರ ಆನೆಯನ್ನೇರಿ ಬಂದವನನ್ನೂ ಹಿಡಿದು ತಿನ್ನಲು ನಾವು ಅರಣ್ಯದಲ್ಲಿ ಹುಡುಕುತ್ತಿರುವಾಗ, ಅವರ ಹತ್ತಿರ ನಿಮ್ಮಂಥ ಮನುಷ್ಯನೊಬ್ಬ, ಇನ್ನೊಬ್ಬಳು ಹೆಣ್ಣು ಕೂಡಾ ಇದ್ದರು. ಆಗ ನಾವು ಅವರನ್ನು ಹಿಡಿದುಕೊಳ್ಳಲು ಹೆದರಿದೆವು. ಹಿಡಿಯಲೋ ಬೇಡವೋ ಅಂತ ಅಡಗಿ ನೋಡುತ್ತಿರುವಾಗ ಆನೆಯವನೂ ಮೊಸಳೆಯವನೂ ಅವರಿಬ್ಬರನ್ನೂ ತಮ್ಮ ವಾಹನಗಳ ಮೇಲೆ ಹತ್ತಿಸಿಕೊಂಡು ಗುಡ್ಡಗಳ ಕಡೆಗೆ ಓಡಿದರು. ಇನ್ನೊಂದು ಗುಟ್ಟೇನಂದರೆ, ಹಂಸರಥದಿಂದ ನೆಲಕ್ಕೆ ಇಳಿದ ನಿಮ್ಮಂಥ ಕೆಲವರು ಅದೋ ಆ ಕಡೆ ಪೂರ್ವದಿಕ್ಕಿನಲ್ಲಿ ಕಾಣುವ ಕಾಡಿನ ಹತ್ತಿರ ಯಾವುದನ್ನೋ ಹುಡುಕಾಡಿಕೊಂಡಿದ್ದಾರೆ." ಎಂದರು ಆ ನರಭಕ್ಷಕರು.

—(ಇನ್ನೂ ಇದೆ)





# ಮಾಯಾ ಸರೋವರ

೨೮

[ಮಾಯಾ ಸರೋವರೇಶ್ವರನು ತನ್ನ ಕೊರಳಿಗೆ ಬಿಸುಟ ಉರುಳು ಹಗ್ಗವನ್ನು ಕಡಿದು ಹಾಕಲು ಜಯಶೀಲನು ಪ್ರಯತ್ನಿಸುತ್ತಿರಲು, ಮಾಯಾ ಸರೋವರೇಶ್ವರನು ಅವನೊಂದಿಗೆ ಒಳಿತಾಗಿ ಮಾತಾಡಿ, ಕಾಂಚನಮಾಲೆಯೊಂದಿಗೆ ಅವನನ್ನು ತನ್ನ ಸ್ಥಾನಕ್ಕೆ ಕರೆದೊಯ್ಯ ತೊಡಗಿದನು. ಆ ಸಂಗತಿ ನರ ಭಕ್ಷಕರ ಮೂಲಕವಾಗಿ ಸಿದ್ಧ ಸಾಧಕನಿಗೆ ಗೊತ್ತಾಯಿತು.]

ನರಭಕ್ಷಕರು ತಾವು ಮರೆಯಲ್ಲಿದ್ದು ನೋಡಿದ ಸಂಗತಿಯನ್ನೆಲ್ಲಾ ಸಿದ್ಧ ಸಾಧಕನ ಮುಂದೆ ಹೇಳಿದರು. ವಿಚಿತ್ರವಾದ ಆನೆಯ ಮೇಲಿದ್ದವನನ್ನೂ, ಅವನು ಸಾಗಿಸಿಕೊಂಡು ಹೋಗುತ್ತಿರುವ ಮನುಷ್ಯನ ರೂಪ ರೇಖೆಗಳನ್ನೂ ಆ ನರಭಕ್ಷಕರ ಬಾಯಿಯಿಂದ ಹೊರಡಿಸಿದನು. ಆ ಮನುಷ್ಯನು ತನ್ನ ಮಿತ್ರನಾದ ಜಯಶೀಲನೇ ಹೌದೆಂದು ಸಿದ್ಧಸಾಧಕನಿಗೆ ಗೊತ್ತಾಯಿತು. ಆದರೆ ಅವನೊಂದಿಗಿರುವ ಆ ಪರಮ ಸುಂದರ ಯುವತಿ ಯಾರಾಗಿರಬಹುದು? ನರ ಭಕ್ಷಕರು ವರ್ಣಿಸಿದ ಲಕ್ಷಣ ನೋಡಿದರೆ ಮಾನವಿಯಂತಿದ್ದಾಳೆ. ಆನೆಯ ಮೇಲಿನವನೊಂದಿಗೆ ಅವಳಾಗಿ ಹತ್ತಿಕೊಂಡಳೆಂಬುದನ್ನು ಕೇಳುವಾಗ ಮಾಯಾ ಸರೋವರದವಳಂತೆಯೂ ಊಹಿಸಬೇಕಾಗುತ್ತದೆ. ಜಯಶೀಲನೇಕೆ ಅವರ ಕೈಗೆ ಸಿಕ್ಕಿಕೊಂಡ? ಇದೊಂದು ಆಶ್ಚರ್ಯದ ವಿಷಯವೇ ಸರಿ. ಸಮಸ್ಯೆ ಜಟಿಲವಾಗುವಂತೆಯೂ ಇದೆ.

ನರಭಕ್ಷಕರು ಹೇಳಿದ ಮಾತುಗಳನ್ನು ಕನಕಾಕ್ಷ ರಾಜನೂ ಕೇಳಿ ಆಶ್ಚರ್ಯಪಡುತ್ತ ನಿಂತಿದ್ದನು. ಸಿದ್ಧ ಸಾಧಕನು ರಾಜನನ್ನು ನೋಡಿ, "ಮಹಾರಾಜರೇ, ಇನ್ನು ನನಗೆ ಅಪ್ಪಣೆ ಕೊಟ್ಟುಬಿಡಿರಿ. ನನ್ನ ಸ್ನೇಹಿತ



ನಾದ ಜಯಶೀಲನನ್ನು ಆ ಮಾಯಾ ಸರೋವರದ ದುಷ್ಟರು ಹೇಗೋ ಮಂಕುಗೊಳಿಸಿ ಬಂಧಿಸಿಕೊಂಡು ಹೋಗುತ್ತಾರೆಂದು ತಿಳಿಯಿತು. ಅಷ್ಟೊಂದು ಶೂರನಾದವನು ಅದು ಹೇಗೆ ಸಿಕ್ಕಿಕೊಂಡನೋ ಅರ್ಥವಾಗುವುದಿಲ್ಲ. ಯಾವುದು ಏನಾದರೂ ಅವನನ್ನು ರಕ್ಷಿಸಬೇಕಾದುದು ನನ್ನ ಮುಖ್ಯ ಕರ್ತವ್ಯ. ಉಳಿದುದೆಲ್ಲ ಆಮೇಲೆ, ಆದ್ದರಿಂದ ಹೊರಟೆ" ಎಂದು ಹೇಳಿ ರಾಜನ ಅಪ್ಪಣೆಗೂ ಕಾಯದೆ, ನರವಾನರದ ಭುಜದ ಮೇಲೆ ಏರಲು ನೋಡಿದನು.

ಆಗ ಕನಕಾಕ್ಷರಾಜನು ಅವನನ್ನು ತಡೆದು, "ಸಿದ್ಧಸಾಧಕನೇ, ಆ ಜಯಶೀಲ ನಿನಗೆಷ್ಟು ಆಪ್ತನೋ ನಮಗೂ ಅಷ್ಟೇ ಸಮೀಪದವನು. ಅವನನ್ನು ರಕ್ಷಿಸುವ ಬಾಧ್ಯತೆ ನನಗೂ ಇದೆ. ಕೆಲವುಮಂದಿ ಭಟರನ್ನೂ, ಅಶ್ವೀಕರನ್ನೂ ಕರೆದುಕೊಂಡು ನಾನೂ ನಿನ್ನೊಂದಿಗೆ ಬರುತ್ತೇನೆ. ನನ್ನ ಕಾರ್ಯಕ್ಕಾಗಿ ನನ್ನಿಂದ ವೀಳ್ಯಪಡೆದು ಹೊರಟ ಜಯಶೀಲನ ಸಂಗತಿ ಕೇಳಿ ನಾನಾದರೂ ಹೇಗೆ ಸುಮ್ಮನಿರಲಿ? ಈ ವಿಷಯದಲ್ಲಿ ನಾವು ತಡಮಾಡಬಾರದು. ಆ ಮಾಯಾ ಸರೋವರವು ಎಲ್ಲಿರುವುದೆಂದು ಮೊದಲು ತಿಳಿದುಕೊಳ್ಳಬೇಕು. ಅದಕ್ಕಾಗಿ ಎಲ್ಲೆಲ್ಲಿ ಸುತ್ತುವುದಕ್ಕಿಂತ ನಿನ್ನ ದಾಸನಾಗಿರುವ ಈ ಜಲವೃಕಬಂಟನನ್ನು ಕೇಳಿ ತಿಳಿದುಕೊಳ್ಳಬಾರದೇನು? ಅವನಿಗೆ ಗೊತ್ತೇ ಇರಬೇಕಲ್ಲ?" ಎಂದು ಹೇಳಿದನು.

"ನಿಜನಿಜ!" ಎಂದು ಸಿದ್ಧಸಾಧಕನು ಶೂಲವನ್ನು ಜಲವೃಕಬಂಟನ ಎದೆಗೆ ಗುರಿ ಹಿಡಿದು, "ಎಲ್ಲವೋ ಜಲವೃಕಬಂಟಾ! ನೀನು ನನ್ನ ವಿಶ್ವಾಸಕ್ಕೆ ಪಾತ್ರನಾದ ಭಟನು ಹೌದೋ ಅಲ್ಲವೋ? ಅಥವಾ ನಿನ್ನ ಹಳೇ ಯಜಮಾನ ಮಾಯಾ ಸರೋವರದ ಜಲವೃಕ ರಾಕ್ಷಸರ ಪಕ್ಷವಾಗಿ ಗೂಢಚಾರನಾಗಿ ನನ್ನ ಹತ್ತಿರ ನಟಿಸಿಕೊಂಡಿರುವೆಯಾ? ಈಗ ಪರೀಕ್ಷೆಕಾಲ, ಗೊತ್ತಾಗಿ ತೀರಬೇಕು. ನಿಜ ಹೇಳಿಬಿಡು!" ಎಂದನು.

ಅವನ ಪ್ರಶ್ನೆಗೆ ಜಲವೃಕಬಂಟ ಒಂದಿಷ್ಟೂ ಹೆದರದೆ, ತನ್ನ ಕಲ್ಲಿನ ಗದೆಯನ್ನು ಸಿದ್ಧಸಾಧಕನ ಪಾದಗಳ ಮುಂದೆ ಇಟ್ಟು, "ದೊರೆಗಳೇ, ನಿಜವಾದ ಜಲವೃಕನು ಆಡಿದ ಮಾತು ತಪ್ಪಲಾರ. ಹಾಗೆ ತಪ್ಪಿದವನನ್ನು ನೀರು ನರಿಯ ಹಾಗೆ ಬೇಟೆಯಾಡಿ ಕೊಲ್ಲುತ್ತೇವೆ. ನಾನು ತಮಗಾಗಿ ಪ್ರಾಣ ಬೇಕಾದರೂ ಕೊಡಲು ಸಿದ್ಧನಾಗಿದ್ದೇನೆ. ಪರೀಕ್ಷಿಸಿರಿ ನನ್ನ ಸ್ವಾಮಿಭಕ್ತಿಯನ್ನು! ಈಗ ಏನು ಮಾಡಬೇಕೋ ಹೇಳಿಬಿಡಿ!" ಎಂದನು.

"ಈ ಮಾತು ನಿಜವಾದರೆ ಈಗ ಹೇಳು. ಆ ಮಾಯಾ ಸರೋವರ ಎಲ್ಲಿದೆ? ಸರಿಯಾಗಿ ಹೇಳು" ಎಂದನು ಸಿದ್ಧಸಾಧಕ.

ಆ ಪ್ರಶ್ನೆ ಕೇಳಿ ಜಲವೃಕನು ಬೆಚ್ಚಿಬಿದ್ದು, "ದೊರೆಗಳೇ, ಹಿಂದೆ ಒಂದುಸಾರಿ ನಿಮಗೆ ಈ ವಿಷಯ ಹೇಳಿದ್ದೇನೆ. ಆ ಸರೋವರ ಎಲ್ಲಿರುವು

ದೆಂದು ನಾನು ಹೇಳಿದರೆ ನನ್ನ ತಲೆಯೊಡೆದು ಸಾಯುತ್ತೇನೆ. ಅದು ನಮ್ಮ ಜಾತಿಯವರಿಗೆ ಸರೋವರದ ರಾಜನೂ, ನಮ್ಮ ರಾಜನೂ ನಮಗೆ ಕೊಟ್ಟ ಶಾಪ. ನಾನೇನು ಮಾಡಲಿ ದೊರೇ ?" ಎಂದ ಮುಖವನ್ನು ಜೋತುಹಾಕಿಕೊಂಡು.

ಅವನ ಮಾತು ಕೇಳಿ ಸಿದ್ಧಸಾಧಕನು ಗಹಗಹಿಸಿ ನಕ್ಕು, "ಆ ಸರೋವರದ ನೀರು ಮುಳುಕನಿಗೆ ಶಾಪ ಕೊಡುವಷ್ಟು ಶಕ್ತಿಯಿದ್ದರೆ ಹಂಸರಥದ ಮೇಲಿಂದ ಪಟ್ಟು ತಪ್ಪಿಬೀಳುವಾಗ, ಅಲ್ಲಿಂದ ನೇರಾಗಿ ನರಭಕ್ಷಕರ ಕುದಿಯುವ ನೀರಿನೊಳಗೆ ಬೀಳಬೇಕಿತ್ತೇ ? ಸುರಕ್ಷಿತವಾದ ನೆಲಕ್ಕಾದರೂ ಬೀಳದೆ ? ಶಾಪವೇನು ಕೊಡುತ್ತಾನೆ ಮಣ್ಣು ? ನಿಮ್ಮನ್ನು ಸುಮ್ಮನೆ ಹೆದರಿಸಿಟ್ಟಿದ್ದಾರೆ," ಎಂದನು.

ಜಲವೃಕನು ಗಡಗಡ ನಡುಗುತ್ತ, "ದೊರೆಗಳೇ, ನೀವು ನನ್ನ ಮಾತು ನಂಬುವುದಿಲ್ಲವೆಂದು ಗೊತ್ತಾಯಿತು. ಇನ್ನು ನನಗೆ ಸಾವು ತಪ್ಪುವಂತಿಲ್ಲ. ಆದರೂ ಬಾಯಿಯಿಂದ ಹೇಳುವ ಬದಲಿಗೆ ಸಂಜ್ಞೆಗಳಿಂದ ತಿಳಿಯಪಡಿಸಿದರೆ ಒಂದುವೇಳೆ ಸಾಯದೆ ಬದುಕಿರುವೆನೋ ಏನೋ ? ಪ್ರಯತ್ನಿಸಿ ನೋಡುತ್ತೇನೆ" ಎಂದು ಹೇಳಿ ಆಚೆಗೆ ಹೋಗಿ ಮರದಿಂದ ಒಣಕಡ್ಡಿಯೊಂದನ್ನು ಮುರಿದು ತಂದನು.

"ಎಲೈ ಮೂಢ ನರಮೃಗನೇ ! ಏನೂ ಸಂದೇಹ ಪಡಬೇಡ. ಧೈರ್ಯವಾಗಿರು. ನಿನ್ನ ಜೀವಕ್ಕೆ ಯಾವ ಅಪಾಯವೂ ಇಲ್ಲ. ಮಹಾಕಾಲನ ಭಕ್ತನಾದ ನಾನು ಹೇಳುತ್ತೇನೆ. ಒಂದುವೇಳೆ ನೀನು ಸಾಯುವುದೇ ನಿಜವಾದರೆ ಮರುಕ್ಷಣವೇ ಕೈಲಾಸಕ್ಕೆ ಕಳುಹಿಸಿ, ಅಲ್ಲಿಯ ಶಿವಗಣಗಳೊಂದಿಗೆ ನಿನಗೆ ದೈವತ್ವ ಬರಿಸುತ್ತೇನೆ," ಎನ್ನುತ್ತಾ ಸಿದ್ಧಸಾಧಕನು ಶೂಲವನ್ನು ಆಕಾಶದ ಮೇಲಕ್ಕೆ ಎತ್ತಿತೋರಿಸಿದನು.

ಜಲವೃಕನು ತಾನು ತಂದ ಒಣಕಡ್ಡಿಯಿಂದ ನೆಲದಲ್ಲಿ ಗೆರೆಗಳನ್ನು ಗೀರುತ್ತ ನಡುನಡುವೆ "ಅಯ್ಯೊ !




ತಲೆ ಒಡೆಯುತ್ತದೆ. ಎದೆ ಗುಂಡಿಗೆಯಲ್ಲಿ ಏನೋ ಸಿಕ್ಕಿಕೊಂಡ ಹಾಗಾಗುತ್ತದಲ್ಲ !" ಎಂದೂ ಕೂಗುತ್ತಿದ್ದನು.

"ಏನೂ ಆಗೋದಿಲ್ಲ ! ನನ್ನನ್ನು ನಂಬು. ನನ್ನ ಮಹಾಕಾಲನು ನಿನ್ನನ್ನು ರಕ್ಷಿಸುತ್ತಾನೆ" ಎಂದು ಸಿದ್ಧಸಾಧಕನು ನೆಲವನ್ನು ಕುಟ್ಟಿ ಕುಟ್ಟಿ ಧೈರ್ಯ ಹೇಳಿದನು.

ಅವನ ಅವಸ್ಥೆಯನ್ನು ನೋಡಿ ಕನಕಾಕ್ಷರಾಜನು ಸಮೀಪ ಬಂದು, "ಸಿದ್ಧಸಾಧಕಾ, ನನ್ನ ಮಕ್ಕಳನ್ನು ತಕ್ಕಷ್ಟು ಅಂಗರಕ್ಷಕರ ಜತೆ ಕೊಡದೆ ಅರಣ್ಯಕ್ಕೆ ಹೋಗಲು ಬಿಟ್ಟದ್ದೇ ಇಷ್ಟೆಲ್ಲಾ ಕಷ್ಟಗಳಿಗೆ ಕಾರಣವಾಯಿತು. ಪಾಪ, ಈ ನೀರು ತೋಳದವನ ಸಂಕಟ ನೋಡಲಾರೆ. ನಿಜಕ್ಕೂ ತಲೆಯೊಡೆದು ಸಾಯುವನೇನೋ ?" ಎಂದನು.

"ಇಲ್ಲ ಮಹಾರಾಜರೇ, ಇವನು ಸಾಯುವುದಿಲ್ಲವೆಂಬುದಕ್ಕೆ ನನ್ನ ಪ್ರಾಣದ ಆಣೆ ಕೊಡುತ್ತೇನೆ. ಶತ



ಮೂರ್ಖನಿವನು. ಮಹಾಕಾಲನಾದ ಶಿವನ ಚಿತ್ತವಿಲ್ಲದೆ ಯಾವ ನರಮನುಷ್ಯರಿಗೂ ಇತರರನ್ನು ಶಪಿಸುವ ಶಕ್ತಿ ಬರುವುದಿಲ್ಲ." ಎಂದು ಹೇಳಿ ಸಿದ್ಧಸಾಧಕನು ನೆಲದಲ್ಲಿ ಗೀಚಿದ ಗೆರೆಗಳನ್ನು ಪರೀಕ್ಷಿಸಿ ನೋಡುತ್ತ, "ಸ್ವಲ್ಪ ಬಾಯಿಬಿಟ್ಟು ಹೇಳಿಬಿಡು. ಈ ನೇರ ಗೆರೆಗಳೇನು ? ಈ ವಕ್ರವಕ್ರ ಗೆರೆಗಳೇನು ?" ಎಂದು ಕೇಳಿದನು.

ಜಲವೃಕರಾಕ್ಷಸನು ತಲೆ ತಗ್ಗಿಸಿಕೊಂಡೇ ನಡುಗುವ ಸ್ವರದಿಂದ, "ದೊರೆಗಳೇ, ಇವು ಅಲ್ಲಿ ಸಮೀಪದಲ್ಲಿರುವ ಗುಡ್ಡಗಳು. ಇವೆಲ್ಲಾ ಅರಣ್ಯ ವೃಕ್ಷಗಳು. ಅವುಗಳಲ್ಲಿ ಎತ್ತರವಾದ ಈ ಮರ, ಈ ಕಲ್ಲಿನ ಗುಡ್ಡದ ಮೇಲಿದೆ. ಆ ಮರದ ಮೇಲೆ ಹತ್ತಿ ಕೊನೆಯಕೊಂಬೆಗೆ ಹೋಗಿ, ಒಂದುಸಾರಿ ಮೂಡು ದಿಕ್ಕನ್ನೂ ಮತ್ತೊಂದುಸಾರಿ ಪಶ್ಚಿಮ ದಿಕ್ಕನ್ನೂ ನೋಡಿ ಆ ಮೇಲೆ ಉತ್ತರ ದಿಕ್ಕನ್ನು ನೋಡಿದರೆ, ಮಾಯಾಸರೋವರ ಪ್ರಾಂತ ಜಗಜಗನೆ ಕಾಣುತ್ತದೆ" ಎಂದವನೇ ಎರಡು ಕೈಗಳಿಂದಲೂ ತಲೆಯನ್ನು ಒತ್ತಿ ಹಿಡಿದು, ಗಡಗಡಿಸುವ ಸ್ವರದಿಂದ, "ಅಯ್ಯೋ ! ದೊರೆಗಳೇ! ಗುಟ್ಟು ಹೇಳಿಬಿಟ್ಟೆ. ತಲೆ ಒಡೆಯುತ್ತಾ ಇದೆ. ಸತ್ತೆ! ಸತ್ತೆ! ಹಾ ! ಮಹಾಜಲವೃಕೇಶ್ವರಾ!" ಎನ್ನುತ್ತಾ ಧಡಾಲ್ಲನೆ ನೆಲದಲ್ಲಿ ಕೈಕಾಲು ಚಾಚಿ ಬಿದ್ದು ಸ್ತಬ್ಧನಾದನು.

ಸಿದ್ಧಸಾಧಕನು ತಟ್ಟನೆ ಬಾಗಿ ಜಲವೃಕನ ಮೂಗಿನ ಹತ್ತಿರ ಬೆರಳು ಒಡ್ಡಿನೋಡಿ, ಅವನಿನ್ನೂ ಉದ್ದುದ್ದ ಉಸಿರು ಬಿಡುತ್ತಿರುವುದನ್ನು ಗಮನಿಸಿ ಮುಗುಳು ನಗುತ್ತ, "ಮಹಾರಾಜರೇ, ಮೂಢನಂಬುಗೆಗಳು ಮುಪ್ಪು ತರುತ್ತವೆಂಬುದಕ್ಕೆ ಈ ಜಲವೃಕನೇ ಸಾಕ್ಷಿ. ಇವನು ಶಾಪದ ಭಯದಿಂದ ಎದೆಯವೇಗ ಹೆಚ್ಚಿಸಿಕೊಂಡು ಕೆಳಗೆ ಬಿದ್ದನೇ ಹೊರತು ಸಾಯಲಿಲ್ಲ. ಸಾಧಾರಣದವರನ್ನು ಕೊಲ್ಲಲಿಕ್ಕೂ ಇಷ್ಟು ಸಾಕನ್ನಿ. ಇವನದು ಕಲ್ಲುಗುಂಡಿಗೆ. ಏನೂ ಆಗದು. ಬದುಕುತ್ತಾನೆ ನೋಡಿ" ಎಂದು ಹೇಳಿ ಪಕ್ಕದಲ್ಲಿದ್ದ ನರಭಕ್ಷಕರೊಡನೆ, "ಏನು ನೋಡುತ್ತೀರಿ ? ಇವನನ್ನು ಬಿಗಿದು ತಿಂದುಬಿಡುವ ಆಲೋಚನೆಯೋ ? ಬೇಗ ಹೋಗಿ, ನಾಲ್ಕಾರುಬಿಂದಿಗೆ ನೀರು ತನ್ನಿ" ಎಂದನು.

ನರಭಕ್ಷಕರು ಆಶೆಯಿಂದ ಜಲವೃಕರಾಕ್ಷಸನನ್ನು ನೋಡುತ್ತ ಸುಮ್ಮನೆ ನಿಂತರು. ಅವರ ಆಶಯವನ್ನು ಗಮನಿಸಿದ ಸಿದ್ಧಸಾಧಕನು ಶೂಲವನ್ನೆತ್ತಿ, "ದುಷ್ಟರೇ ! ನನ್ನಾಜ್ಞೆ ಕೇಳಲಿಲ್ಲವೇ ? ಸುಮ್ಮನೆ ನಿಂತಿದ್ದೀರಾ ? ನೀರು ತರುವಿರೋ ಇಲ್ಲವೋ ?" ಎಂದು ಕಣ್ಣು ಕೆಕ್ಕರಿಸಿ ಗರ್ಜಿಸಿದನು.

ನರಭಕ್ಷಕರ ನಾಯಕನು ಸನ್ನೆಮಾಡಿದ ಕೂಡಲೇ ವೃದ್ಧ ಪೂಜಾರಿ ಮುಂದೆ ಬಂದು, ಕನಕಾಕ್ಷರಾಜನ ಮುಂದೆ ಸಾಷ್ಟಾಂಗ ಬಿದ್ದು ಎದ್ದು ಕೈ ಜೋಡಿಸಿ, "ಮಹಾಬುದ್ಧೀ! ಮಹಾ ದೊರೇ! ಕಾಡು ಮೂಲೆಗಳಲ್ಲಿ ಬದುಕಿಕೊಂಡಿರುವ ನಮಗೆ ಒಳ್ಳೇದೂ ಕೆಟ್ಟದೂ, ಮಾನಾಮರ್ಯಾದೇ ಗೊತ್ತಿರಲಿಕ್ಕಿಲ್ಲ.

ಯುವರಾಜ

ಮಹಾರಾಜರು ಅಂದರೆ ನಿಮ್ಮ ಹೆಸರಾಗಿರಲಿಕ್ಕಿಲ್ಲ, ಅಧಿಕಾರದ ಹೆಸರು ಅಂತ ಕಾಣುತ್ತೆ. ತಾವು ಈ ಶೂಲ ಹಿಡಿದ ಭೂತರಾಜನನ್ನು ಆಚೆಗೆ ಕಳುಹಿಸಿ, ಈ ನೀರು ರಾಕ್ಷಸನನ್ನು ನಮಗೆ ಒಪ್ಪಿಸಿಬಿಡಿ. ನಿಮ್ಮ ಹೆಸರು ಹೇಳಿಕೊಂಡು ತಿನ್ನುತ್ತೇವೆ ಬುದ್ಧೀ. ಇಲ್ಲಾ ಅನ್ನಬಾರದು." ಎಂದನು.


ಆ ಕ್ಷಣವೇ ಸಿದ್ಧಸಾಧಕನು ಹಾರಿ ಅವನ ತಲೆ ಕೂದಲು ಹಿಡಿದು ಕುಲುಕುತ್ತ, "ಎಲೋ, ನರಭಕ್ಷಕ ಮೃಗವೇ! ಎಂಥಾ ಮಾತು ಆಡುತ್ತೀ ಮಹಾರಾಜರ ಮುಂದೆ! ನೀನು ನನ್ನ ಶೂಲದ ಮೊನೆಯಿಂದ ಈಗಲೇ ಮಹಾಕಾಲನಿಗೆ ಬಲಿಯಾಗಿ ಬಿಡು!" ಎಂದು ಶೂಲವನ್ನೆತ್ತಿದನು. ಆದರೆ ಎತ್ತಿದ ಶೂಲ ಹಾಗೇ ನಿಂತಿತು.

ಕಾರಣವೇನಂದರೆ ಆಗಲೇ ದೂರದಿಂದೊಂದು ಕಂಠಸ್ವರವು ಗಟ್ಟಿಯಾಗಿ, "ಸಿದ್ಧಸಾಧಕಾ! ಅವಸರ ಪಡಬೇಡ. ಮಾಯಾ ಸರೋವರದ ಜಲವೃಕ ರಾಕ್ಷಸ ರೊಂದಿಗೆ ಹೋರಾಡಬೇಕಾದ ಪರಿಸ್ಥಿತಿ ಬಂದಿದೆ. ಆದಕ್ಕೆ ಈ ನರಭಕ್ಷಕರ ಸಹಾಯವೂ ಬೇಕು. ಬಂದೆ, ಬಂದೆ ತಡೆ!" ಎಂದು ಕೇಳಿಸಿತು.

ಸಿದ್ಧಸಾಧಕನು ಶೂಲವನ್ನು ಕೆಳಗಿಳಿಸಿ, ಆ ಕಡೆಗೆ ನೋಡಿದನು. ಅದೇ ಸಂಧಿಸಾಧಿಸಿ ನರಭಕ್ಷಕರ ವೃದ್ಧ ಪೂಜಾರಿ ಓಡಿಹೋಗಿ ತನ್ನವರ ಗುಂಪಿನೊಳಗೆ ಅಡಗಿಹೋದನು.

ಹಾಗೆ ಕೂಗಿಕೊಂಡು ಬಂದವನು ಸರ್ಪನಖನೇ. ಅವನು ಬಂದು ಕುದುರೆಯಿಂದ ಕೆಳಗೆ ಹಾರಿ, ನೆಲದ ಮೇಲೆ ಸತ್ತ ಹಾಗೆ ಬಿದ್ದಿರುವ ಜಲವೃಕನನ್ನು ನೋಡಿ, "ಸಾಧಕಾ, ಇವನನ್ನು ಪರಲೋಕಕ್ಕೆ ಕಳುಹಿಸಿಬಿಟ್ಟೆಯೇನು? ಇವನು ನಿನ್ನ ನಂಬುಗೆಯ ಬಂಟನಲ್ಲವೇ?" ಎಂದನು.

"ಇವನು ನನ್ನ ನಂಬುಗೆಯ ಬಂಟನೆಂಬುದು ಹೋಗಿ ಇವನಿಗೆ ನಿಮ್ಮ ಹಾಗೆಯೇ ಇವನ ರಾಜನ



ಮೇಲೆ ಮಾತ್ರವಲ್ಲದೆ ಸರೋವರೇಶ್ವರನ ಶಕ್ತಿಯಲ್ಲಿ ಕೂಡಾ ಗಟ್ಟಿನಂಬುಗೆ ಇರುವ ಹಾಗಿದೆ. ರಹಸ್ಯ ಹೇಳಿದರೆ ಶಾಪದಿಂದ ಸಾಯುತ್ತೇನೆನ್ನುತ್ತಾ ನನಗೆ ಹೆದರಿ ಮಾಯಾ ಸರೋವರದ ದಾರಿಯನ್ನು ಗೀಟು ಗಳ ಸಂಜ್ಞೆಯಿಂದ ತಿಳಿಸುತ್ತಾ ಕಡೆಗೆ ಹೀಗೆ ಸತ್ತ ಹಾಗೆ ಬಿದ್ದಿದ್ದಾನೆ. ಆದರೆ ಸಾಯಲಿಲ್ಲ. ಹೆದರ ಬೇಕಾಗಿಲ್ಲ." ಎಂದ ಸಿದ್ಧಸಾಧಕ.

ಅಷ್ಟರಲ್ಲಿ ಕೆಲವುಮಂದಿ ಕನಕಾಕ್ಷರಾಜನ ಭಟರು ಪಾತ್ರದಲ್ಲಿ ನೀರು ತಂದು ಜಲವೃಕರಾಕ್ಷಸನ ಮೇಲೆ ಹೊಯಿದರು, ಆ ತಣ್ಣೀರಿನಿಂದ ಶರೀರವು ಒದ್ದೆ ಯಾಗುತ್ತಲೇ ಅವನು ನೆಲದ ಮೇಲೆ ಹಾಗೆ ಹೀಗೆ ಹೊರಳಾಡುತ್ತ, ಮೆಲ್ಲ ಕಣ್ಣು ತೆರೆಯುತ್ತ, "ನಾನು ಎಲ್ಲಿದ್ದೇನೆ? ಇದು ನರಕವೋ, ಅಲ್ಲ ಸರೋ ವರವೋ? ಯಾರಿದ್ದೀರಿ ಇಲ್ಲಿ?" ಎಂದು ಕೂಗ ತೊಡಗಿದನು. ಸಿದ್ಧಸಾಧಕನು ಅವನ ಬೆನ್ನಿನ ಮೇಲೆ ಕಾಲಿನಿಂದ ಹದವಾಗಿ ಒದೆಯುತ್ತ, "ನಾನಿದ್ದೇನೆ.



ನೀನೂ ಇದ್ದೀ. ಏಳಪ್ಪಾ, ಜಲವೃಕಭಟಾ ! ನಿನಗೆ ಶಾಪ ವಿಮೋಚನೆಯಾಗಿದೆ. ನನ್ನ ದೇವ ಮಹಾಕಾಲ ನಿನ್ನನ್ನು ಬದುಕಿಸಿದ್ದಾನೆ. ನೀನು ಎಂದಿನಂತೆ ಭೂಮಿಯಲ್ಲೇ ಇರುವಿ ! ಇನ್ನೇನೂ ಭಯವಿಲ್ಲ" ಎಂದನು ಗಂಭೀರವಾಗಿ.

ಆ ಮಾತು ಕೇಳಿ ಜಲವೃಕನು ಎದ್ದು ಕುಳಿತನು. ಸರ್ಪನಖಿನು ತೃಪ್ತಿಯಿಂದ ತಲೆಯಾಡಿಸಿ, ಸಮೀಪದಲ್ಲಿದ್ದ ರಾಜಭಟರನ್ನೂ, ರಾಜನನ್ನೂ ನೋಡಿ, ಏನೋ ಯೋಚಿಸಿ ತಲೆದೂಗುತ್ತ, "ಇವರನ್ನೆಲ್ಲ ನೋಡುವಾಗ ನನಗೊಂದು ಅನುಮಾನವಾಗುತ್ತದೆ. ವೈದ್ಯದೇವನು ಹಂಸರಥದಲ್ಲಿ ಹಾರುವಾಗ ಇವರ ವಿಷಯವೇ ಹೇಳಿದುದೆಂದು ಕಾಣುತ್ತದೆ. ಅವರ ವರ್ಣನೆಗೆ ಸರಿಯಾಗಿಯೇ ಇವರೂ ಕಾಣುತ್ತಿದ್ದಾರೆ. ಇವರೇ ಅಲ್ಲವೇ ಹಿರಣ್ಯಪುರದ ಮಹಾರಾಜರಾದ ಕನಕಾಕ್ಷ ದೊರೆಗಳು ? " ಎಂದನು. ಕನಕಾಕ್ಷರಾಜನು ಆ ಕ್ಷಣದವರೆಗೂ ಸರ್ಪನಖಿನ ವಿಚಿತ್ರವೇಷವನ್ನೂ, ಅವನ ವಾಹನ ಜಲಾಶ್ವವನ್ನೂ ಆಶ್ಚರ್ಯದಿಂದ ನೋಡುತ್ತಿದ್ದವನು, ಅವನು ಹೇಳಿದ ಮಾತಿನ ಅರ್ಥವಾಗದೆ, " ಇವನಾರು ? ಯಾರು ಆ ವೈದ್ಯದೇವ ? ನಾನು ಕೇಳಿಯೇ ಇಲ್ಲವಲ್ಲಾ! ನನ್ನ ರಾಜ್ಯದವನೇನು?" ಎಂದು ಕೇಳಿದನು.

"ಅದೇನೋ ನಾನರಿಯೆನು ಮಹಾರಾಜರೇ. ಅವರೆಲ್ಲ ನನ್ನ ಹಿಂದೆಯೇ ಹೊರಟು ಇಲ್ಲಿಗೇ ಬರುತ್ತಿದ್ದಾರೆ." ಎಂದ ಸರ್ಪನಖಿ.

"ಸಿದ್ಧಸಾಧಕಾ, ಈ ವೈದ್ಯ ದೇವನನ್ನು ನೀನು ಬಲ್ಲೆಯಾ ? " ಎಂದು ರಾಜನು ಕೇಳಿದನು. ಸಿದ್ಧಸಾಧಕನು ಹೇಳಲೋ ಬೇಡವೋ ಎಂದು ಕೆಲವು ಕ್ಷಣ ಚಿಂತಿಸಿ ಕಡೆಗೆ, "ವೈದ್ಯದೇವನನ್ನು ಕುರಿತು ಮಾಯಾ ಸರೋವರೇಶ್ವರನ ಪರಮ ಶತ್ರುಗಳಾದ, ಜಲವೃಕರಾಕ್ಷಸರಿಗೂ, ಮಾಯಾ ಸರೋವರೇಶ್ವರನ ಅನುಚರರಿಗೂ ತಿಳಿಯದಿರುವ ರಹಸ್ಯವೊಂದಿದೆ. ಆತನೂ ಜಯಶೀಲನ ಹಾಗೆಯೇ ಅಮರಾವತೀ ನಗರ ನಿವಾಸಿಯಾಗಿದ್ದಾನೆ" ಎಂದನು.

"ಏನೇನು ? ಜಯಶೀಲನು ಅಮರಾವತೀ ನಗರದವನೇನು ? ಆ ದೇಶದ ರಾಜ ರುದ್ರಸೇನನು ನನ್ನ ಪ್ರಬಲ ಶತ್ರು. ನಾನು ಕಷ್ಟದಲ್ಲಿರುವುದನ್ನು ತಿಳಿದು, ಅವನು ನನ್ನ ಮೇಲೆ ಯುದ್ಧಕ್ಕೆ ಹೊರಡುವ ಎತ್ತುಗಡೆಯಲ್ಲಿದ್ದಾನೆಂತಲೂ ಗೂಢಚಾರರಿಂದ ತಿಳಿದುಬಂದಿದೆ. ಅವನ ಕಡೆಯವನಾದ ಜಯಶೀಲನನ್ನು ಹೇಗೆ ನಂಬುವುದು ? ಅವನಿಗೆ ಇಷ್ಟು ದೊಡ್ಡ ಜವಾಬ್ದಾರಿಯ ಕೆಲಸ ಒಪ್ಪಿಸಿದ್ದು ಎಂಥ ದೊಡ್ಡ ತಪ್ಪು !" ಎಂದನು ಕನಕಾಕ್ಷರಾಜ ಕೋಪದಿಂದ.

"ಒಂದು ನಿಶ್ಚಯ ಮಹಾರಾಜರೆ. ಜಯಶೀಲನು ನಂಬಿದವರಿಗೆ ದ್ರೋಹ ಮಾಡುವವನಲ್ಲ. ಅವನ ಪ್ರಾಮಾಣಿಕತೆಯ ಮೇಲೆ ಅನುಮಾನಪಡಬೇಡಿರಿ. ಅವನು ಯಾವದೇಶದ ಪ್ರಜೆಯಾದರೂ ತಮಗೆ ಮಾತು ಕೊಟ್ಟ ಹಾಗೆ ಯುವರಾಣಿ ಯುವರಾಜ

ರನ್ನು ಹುಡುಕಿ ತರುವ ಕಾರ್ಯ ನೆರವೇರಿಸಿ ತೀರುತ್ತಾನೆಂದು ನಾನು ನಿಮಗೆ ಮಾತುಕೊಡುತ್ತೇನೆ. ಒಂದು ದೇಶದ ರಾಜನು ಶತ್ರುವಾದರೂ ಪ್ರಜೆಗಳೂ ಶತ್ರುವಾಗ ಬೇಕಾಗಿಲ್ಲವಷ್ಟೆ?" ಎಂದನು ಸಿದ್ಧಸಾಧಕ.

ಅವನು ಮಾತಾಡಿ ಮುಗಿಸುವುದರೊಳಗೆ ಸ್ವಲ್ಪ ದೂರದಲ್ಲಿದ್ದ ನರಭಕ್ಷಕರ ಗುಂಪಿನಲ್ಲಿ ಏನೋ ಕಲಕಲ ವೆದ್ದಿತು. ಅದಕ್ಕೇನು ಕಾರಣವೆಂದು ಸಿದ್ಧಸಾಧಕನು ಆ ಕಡೆಗೆ ನೋಡುತ್ತಿರಲು, ನರಭಕ್ಷಕರ ನಾಯಕ ಚಿಬ್ಬುಲಿಹೆಗ್ಗನೂ ವೃದ್ಧ ಪೂಜಾರಿಯೂ ಅವನ ಬಳಿಗೆ ಓಡುತ್ತಾ ಬಂದು, "ಭೂತರಾಜಾ, ನಿಮ್ಮಂಥ ನಾಲ್ಕು ಮಂದಿ ಮನುಷ್ಯರು ಹತ್ತು ಹನ್ನೆರಡು ಮಂದಿ ಜಲವ್ಯಕರಾಕ್ಷಸರೊಂದಿಗೆ ಜಗಳವಾಡಿ ಕೊಂಡಿದ್ದಾರೆ. ನಾವು ಅವರಿಗೆ ಸಹಾಯ ಮಾಡಲು ಹೋಗಬಹುದೆ ? ಅಲ್ಲಿ ನಮಗಿಷ್ಟು ಆಹಾರವಾದರೂ ಸಿಕ್ಕೀತು. ಅಪ್ಪಣೆ ಕೊಡಿ" ಎಂದರು.



ಆ ಸುದ್ದಿ ಕಿವಿಗೆ ಬಿದ್ದಕೂಡಲೇ ಸರ್ಪನಖನು ತನ್ನ ಕುದುರೆಯ ಮೇಲೆ ಹಾರಿ ಕುಳಿತು, "ಸಾಧಕಾ, ಅವರು ಯಾರೆಂದರೆ, ನನ್ನ ತಮ್ಮ ಸರ್ಪಸ್ವರ, ವೈದ್ಯ ದೇವ ಮತ್ತು ಹಂಸರಥದಲ್ಲಿದ್ದ ನಮ್ಮ ಯಜಮಾನರ ಅಂಗರಕ್ಷಕ," ಎಂದು ಹೇಳಿ ಆ ಕಡೆಗೇ ಹೊರಟನು.

"ಜೈ ಮಹಾಕಾಳಾ !" ಎಂದು ಗರ್ಜಿಸುತ್ತಾ ಸಿದ್ಧಸಾಧಕನು ನರವಾನರದ ಭುಜದ ಮೇಲೆ ಹಾರಿ ಕುಳಿತು, ಕನಕಾಕ್ಷರಾಜನೊಂದಿಗೆ, "ಮೊದಲು ಆ ನೀರು ರಾಕ್ಷಸರ ಕಾಟದಿಂದ ನಮ್ಮವರನ್ನು ಕಾಪಾಡ ಬೇಕು" ಎಂದು ಹೇಳಿ ಸರ್ಪನಖನ ಹಿಂದೆಯೇ ಹೋದನು.

"ಓ ಓ ! ಅರಣ್ಯದೇವರೇ ! ನಮ್ಮ ಹಸಿವನ್ನು ಬೇಗ ತೀರಿಸಪ್ಪಾ ! ತುಂಬಾ ಹೆಣ ಬೀಳಲೀ !" ಎಂದು ನರಭಕ್ಷಕರು ಅರಚುತ್ತಾ ಅವರ ಹಿಂದೆ ಓಡ ತೊಡಗಿದರು. ಸರ್ಪನಖನೂ ಸಿದ್ಧಸಾಧಕನೂ ಹೋಗಿ ನೋಡುವಾಗ, ಜಲವ್ಯಕರೊಂದಿಗೆ ಹೋರಾಡುವ ಸರ್ಪಸ್ವರನು ತನ್ನ ಕತ್ತಿಯಿಂದ ಅವರನ್ನು ತಿವಿಯಲು ನೋಡುತ್ತಿದ್ದನು. ಜಲವ್ಯಕರು ತಪ್ಪಿಸಿ ಕೊಳ್ಳುತ್ತ, ವೈದ್ಯದೇವನೆಂದು ಕರೆಯಲ್ಪಡುವ ದೇವಶರ್ಮನನ್ನೂ, ಹಂಸರಥದ ಸಾರಥಿಯನ್ನೂ ಕುಂಟನಾದ ಮಂಗಳವರ್ಮನನ್ನೂ ಹಿಡಿಯಲು ನೋಡುತ್ತಿದ್ದರು. ದೇವಶರ್ಮನು ಅವರನ್ನು ತನ್ನ ವಜ್ರ ತಲೆಯ ದಂಡವನ್ನೆತ್ತಿ ನಿವಾರಿಸುತ್ತ, ಹಿಂದೆ ಹಿಂದೆ ಸರಿಯುತ್ತ. "ಎಲೋ ! ಮೂಢರೆ ! ಜಾಗ್ರತೆ ! ಈ ದಂಡದ ತುದಿಯಲ್ಲಿರುವ ಮುಳ್ಳು ಗಳು ಕ್ರೂರ ವಿಷದಿಂದ ತುಂಬಿವೆ. ನಿಮ್ಮ ಶರೀರ ಗಳಿಗೆ ಇದು ತಾಗಿದರೆ ಆ ಕ್ಷಣವೇ ಸಾಯುವಿರಿ !" ಎಂದು ಕೂಗಿ ಎಚ್ಚರಿಸುತ್ತಿದ್ದನು.

ಹಾಗಿರುವಾಗಲೇ ಅಲ್ಲಿಗೆ ಸಿದ್ಧಸಾಧಕನೂ, ಸರ್ಪ ನಖನೂ ಬಂದರು. ದೂರದಲ್ಲಿ ಕೂಗು ಹಾಕುತ್ತಾ ನರಭಕ್ಷಕರೂ, ಕತ್ತಿ ಝಳಪಿಸಿಕೊಂಡು ರಾಜನ ಭಟರೂ ಸಹಾ ಅಲ್ಲಿಗೇ ಬರುತ್ತಿದ್ದರು.

ಅವರನ್ನು ನೋಡಿದ ಕೂಡಲೇ ಜಲವೃಕರಿಗೆ ದಿಗಿಲು ಹಿಡಿಯಿತು. ಅವರು ಓಡಿಹೋಗಲು ಹವಣಿಸುವುದನ್ನು ನೋಡಿ, ಅವರ ನಾಯಕನಾದ ಜಲವೃಕನೊಬ್ಬ "ನಿಲ್ಲಿರಿ. ಇವರನ್ನು ಜೀವದಿಂದ ಹಿಡಿದು ತರಲು ಸಾಧ್ಯವಾಗದಿದ್ದರೆ ಕೊಂದು ತರಬೇಕೆಂದು ನಮ್ಮೊಡೆಯ ಹೇಳಿದ್ದಾನಷ್ಟೆ? ಹಾಗೇ ಮಾಡಿಬಿಡೋಣ." ಎಂದು ಕಲ್ಲಿನ ಗದೆಯನ್ನೆತ್ತಿ ದೇವಶರ್ಮನನ್ನು ಹೊಡೆಯಲು ಮುಂದಕ್ಕೆ ಹಾರಿದನು.


ದೇವಶರ್ಮನು ಒಂದಡಿ ಹಿಂದೆ ಹಾರಿ, "ನಿನಗೆ ಸಾವು ಬರೆದಿದೆ. ನಾನೇನು ಮಾಡಲಿ?" ಎನ್ನುತ್ತಾ ತನ್ನ ದಂಡದ ಕೊನೆಯಿಂದ ಜಲವೃಕ ನಾಯಕನ ಶರೀರದ ಮೇಲೆ ಹೊಡೆದನು. ಆ ಕ್ಷಣವೇ ಅವನು ಕೆಟ್ಟದನಿಯಿಂದ ಕಿರಿಚಿ ಕೆಳಗೆಬಿದ್ದು ತಟಪಟನೆ ಹೊರಳ ತೊಡಗಿದನು.

ದೇವಶರ್ಮನು ತನ್ನ ದಂಡವನ್ನು ಮೇಲೆತ್ತಿ, "ಎಲವೋ! ಸಾಯದೆ ಬದುಕಿರುವ ಜಲವೃಕಗಳೇ! ಸರೋವರದಲ್ಲಿರುವ ಮಾಯಾ ಸರೋವರೇಶ್ವರನ ಕುಮಾರಿ ಪದ್ಮಮುಖಿಗಾಗಲೀ, ಕಾಂಚನವರ್ಮನಿಗಾಗಲೀ, ಏನಾದರೂ ಕೆಡುಕಾಯಿತೆಂದರೆ, ನಿಮ್ಮ ರಾಜನನ್ನು ನಿಮ್ಮೆಲ್ಲರೊಂದಿಗೆ ನಿರ್ಮೂಲ ಮಾಡಿಬಿಡುತ್ತೇನೆ. ನನ್ನ ದಂಡದ ಪ್ರಭಾವ ಗೊತ್ತಾಯಿತಷ್ಟೆ? ಜಾಗ್ರತೆ! ಬೇಗನೆ ಹೋಗಿ ನಿಮ್ಮ ರಾಜನೊಂದಿಗೆ ಹೇಳಿರಿ." ಎಂದನು. ತಮ್ಮ ನಾಯಕ ಸತ್ತದ್ದು ನೋಡಿ ಜಲವೃಕರಾಕ್ಷಸರು ತುಂಬ ಹೆದರಿ ಹಾಹಾಕಾರ ಮಾಡುತ್ತ, ಅರಣ್ಯದೊಳಗೆ ಓಡಿಹೋಗ ತೊಡಗಿದರು.

ಸರ್ಪನಖನು ದೇವಶರ್ಮನ ಬಳಿಗೆ ಅವಸರದಿಂದ ಬಂದು ಕುದುರೆಯಿಂದಿಳಿದು, "ವೈದ್ಯದೇವಾ, ಮಾಯಾ ಸರೋವರೇಶ್ವರನೂ, ಕಾಂಚನಮಾಲೆಯೂ, ಜಯಶೀಲನೂ, ಜಲವೃಕ ರಾಕ್ಷಸರ ಅಪಾಯವನ್ನು ತಿಳಿಯದೆ ಸರೋವರಕ್ಕೆ ಹೋಗುತ್ತಿದ್ದಾರಷ್ಟೆ? ನಾವು ಮುಂದಾಗಿ ಹೋಗಿ ಅವರಿಗೆ ಎಚ್ಚರಿಕೆ ಕೊಡಬೇಡವೇ?" ಎಂದನು.

"ಆ ಕೆಲಸ ಮಾಡಬೇಕಾದವರು ನೀವಿಬ್ಬರು ಅಣ್ಣತಮ್ಮಂದಿರು ಮತ್ತು ಹಂಸರಥವನ್ನು ಓಡಿಸಿಕೊಂಡು ಬಂದವನು. ಹೊರಡಿರಿ, ಹೊರಡಿರಿ!" ಎಂದ ದೇವಶರ್ಮ.

ಸರ್ಪನಖ ಸರ್ಪಸ್ವರರು ತಮ್ಮ ಜಲಾಶ್ವವನ್ನು ವೇಗವಾಗಿ ಓಡಿಸಿಕೊಂಡುಹೋದರು. ಅಂಗರಕ್ಷಕನು ಸಮೀಪದಲ್ಲಿದ್ದ ಮರಗಳ ಹಿಂದೆ ಹೋಗಿ, ಅಲ್ಲಿದ್ದ ಹಂಸರಥವನ್ನು ಆಕಾಶಕ್ಕೆ ಹಾರಿಸಿದನು. ನರಭಕ್ಷಕರು ಉತ್ಸಾಹದಿಂದ ಕೂಗಾಡುತ್ತ, ಓಡುತ್ತಿರುವ ಜಲವೃಕ ರಾಕ್ಷಸರ ಬೆಂಬತ್ತಿ ಓಡಿದರು. —(ಇನ್ನೂ ಇದೆ)





June 1978

# ಮಾಯಾಸರೋವರ


೨೯

[ಮಾಯಾಸರೋವರೇಶ್ವರನು ಜಯಶೀಲನನ್ನು ತನ್ನೊಂದಿಗೆ ಕರೆದೊಯ್ಯುವನೆಂದು ತಿಳಿದು ಸಿದ್ಧ ಸಾಧಕನು ಹೊರಡುವ ಸಮಯದಲ್ಲಿ, ಜಲವೃಕ ರಾಕ್ಷಸರ ಸಮಾಚಾರವು ಗೊತ್ತಾಯಿತು. ಕನಕಾಕ್ಷ ರಾಜನೂ, ಸಿದ್ಧಸಾಧಕನೂ ಮುಂದೆ ಹೋಗುವಾಗ ಜಲವೃಕರೊಂದಿಗೆ ಜಗಳಾಡಿಕೊಂಡಿರುವ ದೇವಶರ್ಮ ಮೊದಲಾದವರು ಕಂಡುಬಂದರು. ಓಡಿ ಹೋಗುವ ಜಲವೃಕರನ್ನು ನರಭಕ್ಷಕರು ಬೆಂಬತ್ತಿದರು.]

ನರಭಕ್ಷಕರು ಜಲವೃಕ ರಾಕ್ಷಸರ ಬೆಂಬತ್ತಿ ಓಡುವುದರಲ್ಲಿ ಅವರ ಹಸಿವೆ ತೀರಿಸಿಕೊಳ್ಳುವ ಒಂದೇ ಉದ್ದೇಶವಲ್ಲದೆ, ಬೇರೆ ಯಾವ ಶತ್ರುಭಾವನೆಯೂ ಅವರಿಗಿಲ್ಲ. ಎಲ್ಲಿ ಯಾರ ಹೆಣ ಬೀಳುತ್ತೋ ಎಂದುಕೊಂಡು ಓಡುತ್ತಿರುವ ಅವರು ಯಾವ ದಾರಿ ಹಿಡಿದು ಆ ರಾಕ್ಷಸರು ಓಡುತ್ತಿದ್ದಾರೆಂಬುದನ್ನೂ ಗಮನಿಸಲಿಲ್ಲ. ಅದು ಅವರು ಈವರೆಗೂ ನೋಡದ ಹೊಸ ದಾರಿ. ಅದರಲ್ಲಿ ಎಷ್ಟೋ ತಿರುವುಗಳು.

ಅಂತಹ ದಾರಿಯಲ್ಲಿ ಇಬ್ಬರು ಜಲವೃಕರು ಎಲೆಗಳಿಂದ ದಟ್ಟವಾದೊಂದು ಮರದ ಕೊಂಬೆಯಲ್ಲಿ ಕುಳಿತುಕೊಂಡು ಕೆಳಗೆ ನಡೆಯುವುದನ್ನು ನೋಡುತ್ತಿದ್ದರು. ಅವರಿಬ್ಬರನ್ನು ಹಾಗೆ ಗೂಢಚಾರಿಕೆ ಮಾಡುವಂತೆ ಕಳುಹಿಸಿದುದು, ಅವರ ಒಡೆಯನಾದ ಜಲವೃಕನಾಥನೇ.

ಮರದ ಮೇಲಿರುವ ಆ ಜಲವೃಕ ರಾಕ್ಷಸರಲ್ಲಿ ಒಬ್ಬನು ಇನ್ನೊಬ್ಬನೊಂದಿಗೆ, "ಎಲೋ, ನಮ್ಮ ರಾಜನಿಗೆ ಶತ್ರುವಿನ ಬಲ ಎಷ್ಟು ದೊಡ್ಡದಿರುವುದೆಂದೂ ಸರಿಯಾಗಿ ತಿಳಿದಂತಿಲ್ಲ. ಇದಕ್ಕೆ ಮೊದಲು ಸರೋವರೇಶ್ವರನ ಪಕ್ಷದವರನ್ನೆಲ್ಲಾ ಹೊಡೆದು ಓಡಿಸಿದ್ದೇವಾಗಲೀ, ಅವನಿಗೆ ಮತ್ತೆ ಕೆಲವರ ಸಹಾಯ



ಏರುವಂತೆ ಕಾಣುತ್ತದೆ, ಮಾಯಾಸರೋವರದ ಕಡೆಗೆ ಹೊರಟಗುಂಪನ್ನು ನೋಡಿದೆಯಾ ?" ಎಂದನು.

ಮೊದಲನೆಯವನು ಹೇಳಿದ ಮಾತುಗಳನ್ನು ಎರಡನೆಯವನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಅವನ ದೃಷ್ಟಿ ಮಾಯಾಸರೋವರದ ಕಡೆಗೆ ಓಡುತ್ತಾ ಹೋಗುವವರನ್ನೇ ನೋಡಿಕೊಂಡಿತ್ತು. ಅದರ ಹಿಂದೆ ಓಡುತ್ತಿರುವ ನರಭಕ್ಷಕರನ್ನೂ, ಎಲ್ಲರಿಗಿಂತ ಹಿಂದೆ ಮರದ ಕಾಲಿನಿಂದ ಅಷ್ಟಷ್ಟುದೂರ ಹಾರಿಹಾರಿ ನಡೆದು ಬರುತ್ತಿದ್ದ, ಹಿರಣ್ಯಪುರದ ಸೇನಾಪತಿಯ ಮಗ ಮಂಗಳವರ್ಮನನ್ನೂ ಕುತೂಹಲದಿಂದ ನೋಡುತ್ತಿದ್ದನು.

ಒಮ್ಮಿಂದೊಮ್ಮೆಗೇ ಅವನು ತನ್ನ ಸಂಗಡಿಗನೊಂದಿಗೆ, "ಎಲೋ, ಆ ಕುಂಟನನ್ನು ಹಿಡಿದುಕೊಂಡು ಹೋಗಿ ನಮ್ಮ ಒಡೆಯರಿಗೆ ಒಪ್ಪಿಸಿದರೆ ಒಳ್ಳೆಯದಲ್ಲವೇ? ಬರೀ ಕಾವಲು ಕಾದು ಸಮಾಚಾರ ಹೇಳುವುದಕ್ಕಿಂತ ಇದೊಂದು ಕೆಲಸ ಮಾಡಿದರೇನು? ಇವನ ಬಾಯಿ ಬಿಡಿಸಿಬಿಟ್ಟರೆ ಹೊಸದಾಗಿ ಅ ಅರಣ್ಯಕ್ಕೆ ಬಂದ ರಾಜನೊಂದಿಗೆ ಎಷ್ಟೊಂದ ಬಳಗವಿದೆಯೆಂಬುದನ್ನೆಲ್ಲಾ ಲೆಕ್ಕ ತಪ್ಪದಂತೆ ತಿಳಿಯ ಬಹುದು. ಒಡೆಯನೂ ನಮ್ಮನ್ನು ಮೆಚ್ಚಿ ಸನ್ ನಿಸುವನು," ಎಂದನು.

"ಅದೇನೋ ಚೆನ್ನಾಗಿಯೇ ಇದೆ. ಇಲ್ಲಿ ಎರಡ ಗುಂಪುಗಳಾಗಿ ಮಾಯಾಸರೋವರದ ಕಡೆಗೆ ಹೋಗ ತ್ತಿರುವ ಶತ್ರುಗಳನ್ನೇನು ಮಾಡೋಣ? ಅವರ ಏನು ಮಾಡುವರೆಂಬುದನ್ನು ನಮ್ಮ ರಾಜನಿ ಮುಂದಾಗಿ ತಿಳಿಸಬೇಡವೇ? ನಮಗೆ ಒಪ್ಪಿಸಿ ಕೆಲಸವನ್ನು ಅರ್ಧದಲ್ಲಿ ಬಿಟ್ಟುಹೋದರೆ ಅಧಿ ಪ್ರಸಂಗ ಮಾಡಿದಿರೆಂದು ಕೋಪಿಸಲಾರನೆ?" ಎಂದ ಎರಡನೇ ಜಲವ್ಯಕನು ಕೇಳಿದನು.

"ಆ ಕೆಲಸ ನೀನು ನೋಡಿಕೊಂಡಿರು. ಅವರ ಹೋಗುವುದು ಮಾಯಾಸರೋವರಕ್ಕೇ ಎಂಬುದ ನಿಜ. ಅದರಲ್ಲಿ ತಿಳಿಯಬೇಕಾದಂತಹ ರಹಸ್ಯವೇನಿದೆ ಅಷ್ಟೊಂದು ನೀನೊಬ್ಬನೇ ನೋಡಿಕೊಂಡಿರು. ನಾನ ಈ ಸೊಟ್ಟ ಹೇಳವನನ್ನು ಹೆಗಲಲ್ಲಿ ಹೊತ್ತುಕೊಂಡ ಹೋಗಿ ನಮ್ಮ ರಾಜನಿಗೆ ಒಪ್ಪಿಸಿಕೊಟ್ಟು ಬರ ತ್ತೇನೆ" ಎಂದು ಹೇಳಿ ಮೊದಲನೇ ಜಲವ್ಯಕ ರಾ ಸನು ಸದ್ದು ಮಾಡದೆ ಮರದ ಕೊಂಬೆಯಿಂ ಇಳಿದು, ಮಂಗಳವರ್ಮನ ಹಿಂದೆಯೇ ಹೊಂಚ ಹಾಕಿ ನಡೆಯತೊಡಗಿದನು.

ಮಂಗಳವರ್ಮನಿಗೆ ತನ್ನ ಬೆನ್ನ ಹಿಂದೆ ಗಂಡಾಂತ ವಿರುವುದೆಂದು ಗೊತ್ತಾಗಲಿಲ್ಲ. ಆ ಬಗೆಯ ಅನ ಮಾನವೂ ಅವನಿಗಿರಲಿಲ್ಲ. ಕಾಲುಗಳು ಸರಿಯಾಗಿರ ವವರೂ, ಕುದುರೆಯ ಮೇಲಿರುವವರೂ ಗಡಿಬ ಯಲ್ಲಿ ತನ್ನನ್ನು ಮರೆತು, ಮಾಯಾಸರೋವರ ಕಡೆಗೆ ಧಾವಿಸುತ್ತಿರಲು, ಅವನು ಎಷ್ಟು ದೊಡ ಅಂಗಣ ಹಾಕಿದರೂ ಹಿಂದೆ ಬಿದ್ದಿದ್ದನು. ಸಾಧ ವಾದಷ್ಟು ಬೇಗ ಸರೋವರವನ್ನು ತಲಪಿ, ಯುದ

ದಲ್ಲಿ ತಾನೂ ಭಾಗವಹಿಸಬೇಕೆಂಬ ತವಕದಲ್ಲಿ ನಡೆಯುತ್ತಲಿದ್ದನು. ಒಬ್ಬ ಮನುಷ್ಯನು ವೀರನು ಹೌದೋ ಅಲ್ಲವೋ ಎಂಬುದನ್ನು ನಿರ್ಣಯಿಸುವುದು, ಕೈಕಾಲು ಕತ್ತಿಗಳಲ್ಲ, ಗುಂಡಿಗೆಯ ಬಲವೇ.

ಮಂಗಳವರ್ಮನು ಹೀಗೆ ಆಲೋಚಿಸುತ್ತ ನಡೆಯುತ್ತಿರಲು, ಅವನ ಹಿಂದಿನಿಂದ ದೊಡ್ಡದೊಂದು ಶಬ್ದವಾಯಿತು, ಅವನು ತಟ್ಟನೆ ಹಿಂದಿರುಗಿ ನೋಡಿದನು. ಜಲವೃಕ ರಾಕ್ಷಸನು ಅವನನ್ನು ಹಿಂದಿನಿಂದ ಹಠಾತ್ತನೆ ಹಿಡಿಯಬೇಕೆಂದು ಹಾರುವ ಆತುರದಿಂದ, ಕಾಲ ಕೆಳಗಿನ ದಾರಿ ಹೇಗಿದೆ ಎಂಬುದನ್ನು ಗಮನಿಸಲಿಲ್ಲ. ಆದುದರಿಂದ ಫಕ್ಕನೆ ಅವನ ಬಲಗಾಲು ಆಳವಾದೊಂದು ನೆಲದ ಸೀಳಿನೊಳಗೆ ಸಿಕ್ಕಿಕೊಂಡಿತು. ಅವನು ಮುಂದಕ್ಕೆ ಮಾಲಿಕೊಂಡನು. ಆಗ ಅವನ ಗದೆ ಕೆಳಗೆ ಬಿದ್ದು ದೂರಕ್ಕೆ ಉರುಳಿ ಹೋಯಿತು.

ಅವನು ದುಮ್ಮುಬಿಗಿದು ಕಾಲನ್ನು ಮೇಲಕ್ಕೆ ಎತ್ತಿಕೊಳ್ಳಲು ಪ್ರಯತ್ನಿಸಿದರೂ, ಆ ಎಳೆದಾಟದಲ್ಲಿ ಮೊಣಕಾಲು ಚೆನ್ನಾಗಿ ಉಳುಕಿ ನೋಯಿಸಿತು. ಆಗ ಅವನು ಆರ್ತದನಿಯಿಂದ, "ಹಾ! ಜಲವೃಕನಾಥಾ! ನಿನಗೇ ಶರಣು! ನಿನಗೆ ಒಳ್ಳೆಯದು ಮಾಡಲು ಹೋದೆ! ಹೀಗಾಯಿತು! ಕಾಪಾಡು!" ಎಂದು ಕೂಗಿದನು.

ತನಗೆ ಎಷ್ಟೊಂದು ಸ್ವಲ್ಪದರಲ್ಲಿ ಅಪಾಯವು ತಪ್ಪಿತೆಂಬುದು ಮಂಗಳವರ್ಮನಿಗೆ ಗೊತ್ತಾಯಿತು. ಅವನು ಆ ಜಲವೃಕನ ಬಳಿಗೆ ಹೋಗಿ, "ಎಲೋ ಘಾತಕನೇ! ಹೇಡಿಯಂತೆ ಹಿಂದಿನಿಂದ ನನ್ನನ್ನು ಹಿಡಿಯಲು ಬಂದುದು ಭೂಮಿತಾಯಿಗೆ ಸಹಿಸಲಿಲ್ಲ. ನಿನ್ನ ಕಾಲನ್ನು ಮುರಿದಳು. ಸರಿಯಾದ ಶಿಕ್ಷೆ. ಈಗ ನಿನಗೆ ಬೇಕಾದುದು ವೈದ್ಯ ಸಹಾಯ. ಎಲ್ಲಿಯೋ ಇರುವ ನಿನ್ನ ಜಲವೃಕನಾಥ ಬರುತ್ತಾನೇನು ನಿನಗೆ ಸಹಾಯ ಮಾಡಲು? ಇದಕ್ಕೆ ಮೊದಲು ನಿನ್ನ



ರಾಜ ಮಾಯಾಸರೋವರೇಶ್ವರನ ಭವನಗಳ ಮೇಲೆ ದಾಳಿ ಮಾಡಿಸಿ ಏನು ಕಟ್ಟಿಕೊಂಡ? ಯಾರು ಗೆದ್ದರು? ನಿಜ ಸಂಗತಿ ಹೇಳು. ನಾನು ನಿನಗೆ ಸಂಜೀವಿಯಂತಹ ಚಿಕಿತ್ಸೆಮಾಡಿ ನಿನ್ನ ಮುರಿದ ಕಾಲನ್ನು ಸರಿಗೊಳಿಸಿ ಸ್ವಲ್ಪಹೊತ್ತಿನೊಳಗೇ ನಡೆಯುವಂತೆ ಮಾಡುತ್ತೇನೆ." ಎಂದನು.

ಸಿಕ್ಕಿಕೊಂಡ ಜಲವೃಕನು ನೋವಿನ ಬಾಧೆಯಿಂದ ನರಳುತ್ತ ಏನೋ ಹೇಳಲು ಬಾಯಿ ತೆರೆದನು. ಅಷ್ಟರೊಳಗೆ ಇಲ್ಲಿ ನಡೆದುದನ್ನು ನೋಡಿಕೊಂಡೇ ಇದ್ದ ಅವನ ಸಂಗಡಿಗನಾದ ಜಲವೃಕನು ಕಲ್ಲಿನ ಗದೆಯನ್ನು ತಿರುಗಿಸುತ್ತ, ಕೂಗಿ ಹೆದರಿಸುತ್ತ, "ಎಲೋ ಮಾಯಾಸರೋವರೇಶ್ವರನ ಕುಂಟಬಂಟಾ! ಕಾಲೇಳದವನ ಮೇಲೆ ಪ್ರತಾಪ ತೋರಿಸುವಿಯಾ? ನಾನಿದ್ದೇನೆ! ನಿನ್ನನ್ನೀಗಲೇ ಯಮಲೋಕಕ್ಕೆ ಅಟ್ಟುತ್ತೇನೆ!" ಎನ್ನುತ್ತ ಬರತೊಡಗಿದನು. ಮಂಗಳವರ್ಮನು ಮಿಂಚಿನ ವೇಗದಲ್ಲಿ ತನ್ನ



ಊರುಗೋಲಿನ ಹಿಡಿಯನ್ನು ಸರ್ರನೆ ಮೇಲಕ್ಕೆ ಎಳೆದನು. ತಳತಳನೆ ಹೊಳೆಯುವ ಹದನಾದ ಕತ್ತಿ! ಅವನು ಆ ಕತ್ತಿಯನ್ನು ಕಾಲು ಸಿಕ್ಕಿಕೊಂಡ ಜಲವೃಕರಾಕ್ಷಸನ ಕಂಠದ ಮೇಲೆ ಇಟ್ಟು, ತನ್ನಬಳಿಗೆ ಬರುವ ಹರಾಮಿ ಜಲವೃಕನನ್ನು ನೋಡಿ, "ಎಲೋ ಕಿರಾತನೇ! ನಾನೀಗ ಒಂದರಿಂದ ಮೂರು ಹೇಳುವುದರೊಳಗೆ ನೀನು ಆ ಕಲ್ಲಿನ ಗದೆಯನ್ನು ದೂರ ಬಿಸುಟು, ಮೊಣಕಾಲಿನ ಮೇಲೆ ಅಂಬೆ ಗಾಲಿಕ್ಕಿಕೊಂಡು ಮುಂದೆ ಬರಬೇಕು. ತಪ್ಪಿದರೆ ನಿನ್ನ ಈ ಸಂಗಡಿಗನ ಕುತ್ತಿಗೆ ಕಡಿದುಬಿಡುತ್ತೇನೆ! ಆ ಮೇಲೆ ನಿನಗೂ ಅದೇಗತಿ! ಇಕೋ, ಒಂದು, ಎರಡು..." ಎಂದನು.

ಮಂಗಳವರ್ಮ ಮೂರು ಹೇಳುವುದರೊಳಗೆ ಆ ಜಲವೃಕನು ತಣ್ಣಗಾಗಿ ಕಲ್ಲು ಗದೆಯನ್ನು ದೂರ ಬಿಸುಟು, ಮೊಣಕಾಲು ಕೈಗಳನ್ನು ನೆಲಕ್ಕೆ ಊರಿ, "ಶರಣಾದೆ! ಶರಣಾದೆ! ಮಿತ್ರನನ್ನು ಕೊಲ್ಲಬೇಡ!" ಎಂದನು ನಡುಗುವ ಸ್ವರದಿಂದ ದೀನನಾಗಿ.

"ಆಹಾ! ನೀವು ತೋಳ ನೀಚರಾದರೂ ನಿಮ್ಮ ಸ್ನೇಹಧರ್ಮ ಮೆಚ್ಚುವಂತಿದೆ! ಒಳ್ಳೇದು. ನಾನು ನಿನ್ನ ಹಾಗೆ ಬಿದ್ದವನನ್ನು ಕೊಲ್ಲುವ ಆಲೋಚನೆಯ ಕ್ರೂರನಲ್ಲ! ನನ್ನ ಹಿಂದೆ ಬಾ. ನಿನಗೆ ಔಷಧೀ ಪತ್ರಗಳನ್ನು ತೋರಿಸುತ್ತೇನೆ." ಎಂದು ಹೇಳಿ ಮಂಗಳವರ್ಮನು ಸಮೀಪದಲ್ಲಿ ಒತ್ತೊತ್ತಾಗಿ ಬೆಳೆದಿದ್ದ ಸಣ್ಣಪುಟ್ಟ ಗಿಡಗಳ ರಾಶಿಯಕಡೆಗೆ ನಡೆದನು.

ಮಂಗಳವರ್ಮನು ಜಾಗರೂಕತೆಯಿಂದ ಪರಿಶೀಲಿಸಿ ಕೆಲವು ಹಣ್ಣೆಲೆಗಳನ್ನೂ, ಮತ್ತೆ ಕೆಲವು ಚಿಗುರುಗಳನ್ನೂ ಕೊಯಿದು, ಅವುಗಳನ್ನು ಅಂಗೈಯಲ್ಲಿಟ್ಟು ಮರ್ದಿಸಿ ಉಂಡೆಮಾಡಿ ಅದನ್ನು ಜಲವೃಕರಾಕ್ಷಸನಿಗೆ ಕೊಟ್ಟು, "ಇಕೋ, ಈ ಔಷಧವನ್ನು ನಿನ್ನ ಮಿತ್ರನ ಮೊಣಕಾಲಿಗೆ ಅಂಟಿಸಿ ಮೇಲೆ ಈ ದೊಡ್ಡ ಎಲೆಯನ್ನಿಟ್ಟು ಕಟ್ಟು. ಅವನೀಗ ಇರುವ ಸ್ಥಳದಲ್ಲಿಯೇ ಹನ್ನೆರಡು ಗಂಟೆ ಹೊತ್ತು ಇರಬೇಕು, ಹಾಗೆ ಮಾಡದೆ ಕದಲಿದನೆಂದರೆ, ಮೊಣಕಾಲಿನವರೆಗೆ ತುಂಡುಮಾಡಿ ಬಿಸಾಡಬೇಕಾಗುತ್ತದೆ. ನೆನಪಿರಲಿ ಇಬ್ಬರಿಗೂ." ಎಂದನು.

ಅವನ ಮಾತು ಕೇಳಿ ಜಲವೃಕರಾಕ್ಷಸರ ಮುಖಗಳಲ್ಲಿ ಅಳುವಿನ ಕಳೆ ಮೂಡಿತು. ಅವರು ಈ ಕಾಡಿನಲ್ಲಿ ಏನೋ ಮುಖ್ಯವಾದ ಕೆಲಸದಲ್ಲಿ ಇರಬೇಕೆಂದೂ, ಕೇಳಿದರೆ ಹೇಳಲಾರರೆಂದೂ ಮಂಗಳವರ್ಮನು ಊಹಿಸಿದನು. ಅವರನ್ನು ಹೆಚ್ಚು ಪೀಡಿಸಿ ಪ್ರಯೋಜನವಿಲ್ಲವೆಂದುಕೊಂಡು ಮಂಗಳವರ್ಮನು ಮುಂದಕ್ಕೆ ಕದಲಿದನು.

ಅವನು ಸ್ವಲ್ಪಕಾಲದವರೆಗೆ ಮಾಯಾಸರೋವರದಲ್ಲಿ ವಾಸಮಾಡಿದವನಾದುದರಿಂದ, ಅಲ್ಲಿಗೆ ಹೋಗುವ ಸಮೀಪದ ದಾರಿ ಯಾವುದೆಂಬುದು ಅವನಿಗೆ ಗೊತ್ತಿತ್ತು. ಆದರೆ ಮರದಕಾಲನ್ನು ಎತ್ತಿಕೊಂಡು ಏರು ತಗ್ಗುಗಳ ದಾರಿಯಲ್ಲಿ ನಡೆಯುವುದೇ


ಅವನಿಗೆ ಬಹಳ ಪ್ರಯಾಸದ ಕಾರ್ಯವಾಗಿತ್ತು. ಮಂಗಳವರ್ಮನು ಕುಂಟುತ್ತಾ ಐದಾರು ನಿಮಿಷಗಳಷ್ಟು ದಾರಿ ನಡೆದನು. ಅಷ್ಟರಲ್ಲಿ ಆಕಾಶದಷ್ಟೆತ್ತರವಾದೊಂದು ಮರದ ಮೇಲಿನಿಂದ, "ಮಂಗಳವರ್ಮಾ!" ಎಂಬ ಆರ್ತವಾದ ಕರೆಯುವ ಕಂಠಸ್ವರವು ಅವನನ್ನು ನಿಲ್ಲಿಸಿತು.

ಇದು ಯಾವ ರೂಪದ ವೃಕ್ಷಪಿಶಾಚಿಯೋ ಎಂದುಕೊಂಡು ಮಂಗಳವರ್ಮನು ತಲೆಯೆತ್ತಿ ನೋಡಿದನು. ಒಂದು ದೊಡ್ಡ ಮರದ ತುತ್ತ ತುದಿಯ ಭಾಗದಲ್ಲಿ ಬಲೆಯಂತೆ ಕಾಡು ಬಳ್ಳಿಗಳಿಂದ ಹೆಣೆಯಲಾದ ಉಯ್ಯಾಲೆಯಂತಹ ಜಾಲದಲ್ಲಿ ಒಬ್ಬ ಮನುಷ್ಯನು ನರಳುತ್ತಿರುವುದನ್ನು ನೋಡಿದನು. ಅವನು ಮಾಯಾಸರೋವರೇಶ್ವರನ ಹಂಸರಥವನ್ನು ಓಡಿಸುವ ಸಾರಥಿಯೇ ಎಂದು ಗೊತ್ತಾಯಿತು. ಹಂಸರಥವು ಆಕಾಶದಲ್ಲಿ ತಲೆಕೆಳಗಾಗಿ ಹೋಗಲು, ಅದರೊಳಗಿನಿಂದ ಅವನು ಜಾರಿ ಆ ಮರದ ಮೇಲಿನ ಕಾಡುಬಳ್ಳಿಗಳ ಬಲೆಯೊಳಗೆ ಸಿಕ್ಕಿ ಪ್ರಾಣ ಹಿಡಿದುಕೊಂಡ [illegible] ಉಳಿದಿದ್ದನು. "ಓಹೋ! ನೀನೋ ಹಂಸರಥ ಸಾರಥೀ! ಇಲ್ಲಿ ಸಿಕ್ಕಿಕೊಂಡು ಇಷ್ಟರವರೆಗೆ ಬದುಕಿಕೊಂಡಿರುವೆಯಾ? ಇಷ್ಟು ಕೆಳಗಿರುವ ನನ್ನ ಗುರುತು ಹಿಡಿದು ಕರೆಯುವಷ್ಟು ಶಕ್ತಿಯೂ ತಿಳಿವೂ ಇದೆಯೆಂದಾಯಿತು." ಎಂದು ಕೂಗಿ ಹೇಳಿದನು.

"ಮಾಯಾಸರೋವರೇಶ್ವರನ ದಯೆ!" ಎಂದು ಏರಿದ ಮೇಲಿನವ. "ಇದ್ದೀತಿದ್ದೀತು! ಯಾರು ಯಾವುದನ್ನು ನಂಬುವರೋ ಅದೇ ದೇವರು. ಬಹಳ ಸಂತೋಷ. ನಿನಗೆ ಕೆಳಗೆ ಬರಲು, ಯಾವ ಕೊಂಬೆರೆಂಬೆಗಳ ಆಧಾರವೂ ಸಿಗಲಿಲ್ಲವೇ? ಹೆಳವನಾಗಿರುವ ನಾನು ಯಾವ ರೀತಿಯ ಸಹಾಯ ಮಾಡುವುದೋ ಗೊತ್ತಾಗುವುದಿಲ್ಲವಲ್ಲಾ!" ಎಂದು ಕೇಳಿದ ಮಂಗಳವರ್ಮ.

"ಅದೋದೋ! ಸ್ವಲ್ಪ ಮೆಲ್ಲನೆ ಮಾತಾಡು ಮಂಗಳವರ್ಮಾ! ಅಲ್ಲಿ ಯಮಕಿಂಕರನ ಹಾಗೆ ಯಾವನೋ ಒಬ್ಬ ಭಯಂಕರವಾದ ನರವಾನರದ





ಮೇಲೆ ಕುಳಿತು ಇತ್ತಕಡೆಗೇ ಬರುತ್ತಿದ್ದಾನೆ. ಅವನ ಹಿಂದೆ ಕೆಲಮಂದಿ ಸೈನಿಕರೂ ಇದ್ದಾರೆ. ನಮ್ಮ ಶತ್ರುಗಳಾದ ಜಯಶೀಲನ ಕಡೆಯವರೇ ಆಗಿರಬೇಕು. ಗುಡ್ಡದಂಥ ನರವಾನರದ ಮೇಲಿರುವವನೇ ಸಿದ್ಧಸಾಧಕ ಎಂಬ ಘೋರ ಮಂತ್ರಗಾರನಾಗಿರಬೇಕು. ಅವನ ಕಣ್ಣಿಗೆ ಬಿದ್ದರೆ ತೀರೇಹೋಯಿತು!" ಎಂದನು.

ಆ ಮಾತು ಕೇಳಿ ಮಂಗಳವರ್ಮನಲ್ಲಿ ಉತ್ಸಾಹವೆದ್ದಿತು. ಹಾಗಿದ್ದರೆ ಆ ಗುಂಪಿನಲ್ಲಿ ವೈದ್ಯದೇವನೆಂದು ಕರೆಯಲ್ಪಡುವ ದೇವಶರ್ಮ ಕೂಡಾ ಇರಬಹುದು. ಈಗ ಅವರೊಂದಿಗೆ ಕೂಡಿ ಸಾಧ್ಯವಾದಷ್ಟು ಬೇಗದಲ್ಲಿ ಮಾಯಾಸರೋವರವನ್ನು ತಲಪಬಹುದು.

ಹೀಗೆಂದುಕೊಂಡು ಮಂಗಳವರ್ಮನು, "ಹಾಗಿದ್ದರೆ ಅವರನ್ನು ನೋಡಿ ನಾವು ಹೆದರಬೇಕಾಗಿಲ್ಲ. ಅವರು ಶತ್ರುಗಳೇನಲ್ಲ. ಮಿತ್ರರು ಹೌದೋ ಅಲ್ಲವೋ ಎಂಬುದೂ ಸರಿಯಾಗಿ ತಿಳಿಯದು. ಮಾಯಾಸರೋವರೇಶ್ವರನು ಜಯಶೀಲ ಎಂಬವನನ್ನು ಹಿಡಿದುಕೊಂಡು ಸರೋವರದಕಡೆಗೆ ಹೋಗಿದ್ದಾನೆಂದು ಗೊತ್ತಾಗಿದೆ. ನಿನಗೆ ಕಾಣುವ ಆ ಗುಂಪಿನಲ್ಲಿ ನಮ್ಮವನೇ ಆದ ವೈದ್ಯದೇವನೂ ಇರುತ್ತಾನೆ. ನಾನು ಒಂಟಿಕಾಲಿನಲ್ಲಿ ಮರದ ಮೇಲೆ ಹತ್ತಲು ಸಾಧ್ಯವಿಲ್ಲ. ನಿನಗೊಬ್ಬನಿಗೆ ಕೆಳಗಿಳಿಯಲಿಕ್ಕೂ ಆಗದು. ಹೆದರಬೇಡ. ಅಲ್ಲಿ ಬರುವವರು ಸಹಾಯಕರೆಂದೇ ತಿಳಿದು ಗಟ್ಟಿಯಾಗಿ ಕೂಗಿ ಕೈ ತಟ್ಟಿ ಕರೆ." ಎಂದನು.

ನರವಾನರ ವಾಹನದ ಮೇಲೆ ಬರುವವನೊಂದಿಗೆ ವೈದ್ಯದೇವನಿರುವನೆಂದು ತಿಳಿದ ಕೂಡಲೇ ಅಂತರದಲ್ಲಿ ಸಿಕ್ಕಿಕೊಂಡ ಹಂಸರಥ ಸಾರಥಿಗೆ ಜೀವ ಚೇತರಿಸಿಕೊಂಡಿತು. ತಾನು ಈ ಬಳ್ಳಿಯ ಬಲೆಯಲ್ಲಿ ಇಂದು ಸಾಯುವೆನೋ ನಾಳೆ ಸಾಯುವೆನೋ ಎಂದು ಲೆಕ್ಕಹಾಕಿಕೊಂಡಿದ್ದವನಿಗೆ ಜೀವಿಸುವ ಆಶೆಯ ಬೆಳಕು ಮೂಡಿತು. ಇದುವರೆಗೆ ಯಾವ ಜಲವೃಕನೂ, ನರಭಕ್ಷಕನೂ ತನ್ನನ್ನು ನೋಡದೆ ಹೋದುದನ್ನು ನೆನೆದು ಸಂತೋಷಪಟ್ಟನು.

ಹಂಸರಥ ಸಾರಥಿ ತಾನಿರುವ ಮರಕ್ಕೆ ತುಸು ದೂರದಲ್ಲಿ ಹೋಗುತ್ತಿರುವ ಸಿದ್ಧಸಾಧಕ, ಕನಕಾಕ್ಷ ಮಹಾರಾಜ ಮೊದಲಾದವರಿಗೆ ಕೇಳಿಸುವಂತೆ ದೊಡ್ಡ ಕಂಠಸ್ವರದಿಂದ, "ಓಹೋಯ್ ಅಯ್ಯಗಳಿರಾ! ನನ್ನನ್ನು ಕಾಪಾಡಿರಿ! ಇಲ್ಲಿ-ಈ ಮರದ ಕೊಂಬೆಗಳ ನಡುವೆ ಕಾಡುಬಳ್ಳಿಗಳಲ್ಲಿ ಸಿಕ್ಕಿಕೊಂಡಿದ್ದೇನೆ. ಬನ್ನಿರೋ, ಹೀಗೆ ಬನ್ನಿ." ಎಂದು ಗಂಟಲು ಹರಿದು ಹೋಗುವಂತೆ ಕೂಗಿದನು,

ಅವನ ಕೂಗು ಮೊದಲು ಕೇಳಿಸಿದ್ದು ನರವಾನರದ ಹರಿತವಾದ ಕಿವಿಗಳಿಗೇ!

ಆ ಕೂಡಲೇ ಅದು ಗಕ್ಕನೆ ನಿಂತು ತಲೆಯೆತ್ತಿ ನೋಡುತ್ತ ಹೆಗಲ ಮೇಲಿದ್ದ ಸಿದ್ಧಸಾಧಕನಿಗೆ ಮೇಲೂ ಕೆಳಗೂ ಹುಬ್ಬು ಹಾರಿಸುತ್ತ ಸನ್ನೆ ಮಾಡ

ೊಡಗಿತು. ಆಗ ಮರದಲ್ಲಿ ಸಿಕ್ಕಿಕೊಂಡವನು ುತ್ತೊಂದು ಸಾರಿ ಕೂಗಿದನು. ಅದು ಎಲ್ಲರ ಿಗೂ ಬಿದ್ದಿತು.

ದೇವಶರ್ಮನು ಬೇಗಬೇಗನೇ ಮುಂದಕ್ಕೆ ಬಂದು, "ಆ ಕೂಗು ಮಾಯಾಸರೋವರೇಶ್ವರನ ಹಂಸರಥದ ಸಾರಥಿಯ ಹಾಗಿದೆ. ಅವನು ಈ ಪ್ರಾಂತದಲ್ಲೇ ರಥದಿಂದ ಬಿದ್ದಿದ್ದಾನೆ." ಎಂದನು.

"ಆಹಾ! ಹಾಗಾದರೆ ಅವನನ್ನು ಹಿಡಿದು ಕೊಂಡು, ಅವನಿಂದ ಆ ಮಾಯಾಸರೋವರದ ಕಳ್ಳನ ರಹಸ್ಯವನ್ನು ಹೊರಗೆಳೆದು ಬಿಡುತ್ತೇನೆ. ಮೊದಲು ಜಯಶೀಲ ನನ್ನ ಕಣ್ಣಿಗೆ ಬೀಳಲಿ. ಆ ಮೇಲೆ ಈ ಗಂಪನ್ನೆಲ್ಲಾ ಮರಗಳಿಗೆ ಕಟ್ಟಿ ಮಹಾ ಕಾಲನಿಗೆ ಬಲಿಕೊಟ್ಟುಬಿಡುತ್ತೇನೆ." ಎಂದು ಸಿದ್ಧ ಸಾಧಕನು ನರವಾನರವನ್ನು ಜೋರಾಗಿ ಮುಂದಕ್ಕೆ ಹುರುಡಿಸಿದನು.

ನರವಾನರವು ಬೇಗಬೇಗನೆ ಓಡಿ ಬಂದು ಹಂಸರಥ ಸಾರಥಿ ಸಿಕ್ಕಿಬಿದ್ದ ಮರದಕೆಳಗೆ ನಿಂತಿತು. ಮಂಗಳ ವರ್ಮನು ಸಾಧಕನ ಮುಂದೆ ಬಂದು, "ಸಾಧಕಾ. ನೀನು ಹೇಗಾದರೂ ಮಾಡಿ ಅಲ್ಲಿ ಬಳ್ಳಿಗಳ ಹಂದರ ದಲ್ಲಿ ಸಿಕ್ಕಿ ಒದ್ದಾಡುವವನನ್ನು ಕೆಳಗಿಳಿಸಬೇಕು. ಅದು ಹೇಗೆ ಸಾಧ್ಯವೆಂಬುದು ನನಗಂತೂ ಗೊತ್ತಾಗುವು ದಿಲ್ಲ" ಎಂದನು.

ಸಿದ್ಧಸಾಧಕನು "ಜೈ ಮಹಾಕಾಳಾ!" ಎಂದು ಕೂಗಿ "ಅವನನ್ನು ಇಳಿಸುವುದೇನೂ ದೊಡ್ಡ ಕೆಲಸ ವಲ್ಲ. ನನಗೂ ಇದೆಲ್ಲಾ ಸಿಕ್ಕು ಸಿಕ್ಕಾಗಿ ಕಾಣುತ್ತದೆ. ಸರಿಯಾಗಿ ಅರ್ಥವಾಗುವುದಿಲ್ಲ. ಮಾಯಾಸರೋ ವರೇಶ್ವರ ಎಂಬ ಧೂರ್ತನು ಕನಕಾಕ್ಷ ಮಹಾರಾಜರ ಮಕ್ಕಳನ್ನು ಅಪಹರಿಸಿದ್ದರ ಮೇಲೆ ಈಗ ನನ್ನ ಮಿತ್ರ ನಾದ ಜಯಶೀಲನನ್ನೂ ಹಿಡಿದುಕೊಂಡು ಹೋಗಿ ದ್ದಾನೆ. ಅಂತಹ ದುಷ್ಟನ ಪರಿಚಯದವರಾದ ನೀವೆಲ್ಲ ಅವನ ಮೇಲೆ ಸ್ನೇಹದಿಂದ ಮಾತಾಡುತ್ತಿದ್ದೀರಿ. ಏನಿದು?"

ದೇವಶರ್ಮನು ಅವನನ್ನು ಶಾಂತ ಪಡಿಸುತ್ತ, "ಸಿದ್ಧಸಾಧಕಾ, ಈಗ ನಮಗೂ ಮಾಯಾ



ಸರೋವರೇಶ್ವರನಿಗೂ ಎಲ್ಲರಿಗೂ ಅಪಾಯಕರವಾದ ಶತ್ರುಗಳು. ಆ ಸರೋವರದ ಮತ್ತೊಂದು ಪ್ರಾಂತದಲ್ಲಿರುವ ಜಲವೃಕ ರಾಕ್ಷಸರು. ಎಲ್ಲರೂ ಕೂಡಿ ಅವರನ್ನು ನಾಶ ಮಾಡಿದ ಹೊರತು, ಕನಕಾಕ್ಷ ಮಹಾರಾಜರ ಮಕ್ಕಳನ್ನು ಕಾಪಾಡಲು ಸಾಧ್ಯವಿಲ್ಲ. ಈಗ ಆ ಸರೋವರವೆಲ್ಲಾ ಜಲವೃಕರಿಗೇ ವಶವಾಗಿದ್ದರೂ ಇರಬಹುದು" ಎಂದನು. ಆಗಲೇ ಅಲ್ಲಿಗೆ ಕನಕಾಕ್ಷ ರಾಜನ ಕೆಲ ಮಂದಿ ಸೈನಿಕರೂ ಬಂದು ಸೇರಿದರು.

"ಓಹೋಯ್! ಅಯ್ಯಗಳಿರಾ! ನನ್ನನ್ನು ಮರೆತಿರಾ? ದೊಡ್ಡದೊಂದು ಹೆಬ್ಬಾವು ನನ್ನ ಕಡೆಗೇ ಹರಿದುಕೊಂಡು ಬರುತ್ತಿದೆ." ಎಂದು ಹಂಸರಥ ಸಾರಥಿ ಕೆಟ್ಟ ಸ್ವರದಿಂದ ಕೂಗಿದನು.

ಆ ಕೂಡಲೇ ಸಿದ್ಧಸಾಧಕನು ನರವಾನರದ ಬೆನ್ನನ್ನು ತಟ್ಟಿ ಕೈಯೆತ್ತಿ ತೋರಿಸುತ್ತ, "ಅಲ್ಲಿ ಸಿಕ್ಕಿಕೊಂಡಿದ್ದವನನ್ನು ಕೆಳಗೆ ತೆಗೆದುಕೊಂಡು ಬಾ" ಎಂದು ಆಜ್ಞೆ ಮಾಡಿದನು.

ನರವಾನರವು ದಬಕ್ಕನೆ ಮರದ ಮೇಲೆ ಹಾರಿ, ಅದರ ಭಾರಕ್ಕೆ ಕೆಲವು ಕೊಂಬೆಗಳು ಮುರಿಯುತ್ತಿರಲು, ಅದನ್ನು ಲಕ್ಷ್ಯ ಮಾಡದೆ ಸರಸರನೆ ಮೇಲೆ ಹೋಯಿತು. ಒಂದು ನಿಮಿಷದೊಳಗೆ ಅದು ಅಷ್ಟೆತ್ತರಕ್ಕೆ ಹತ್ತಿ, ಒಂದು ಕೈಯಿಂದ ಆ ಸಾರಥಿಯನ್ನು ಹಿಡಿದು, ಎರಡನೇ ಕೈಯಿಂದ ಹೆಬ್ಬಾವನ್ನು ಹಿಡಿದು, ಬಳ್ಳಿಗಳ ನಡುವಿನಿಂದ ಅದನ್ನು ಎಳೆಯಿತು. ಸಾರಥಿ ಭಯಂಕರವಾದ ನರವಾನರವನ್ನು ನೋಡಿ ಹೆದರಿ ಕಿರಿಚುತ್ತ, ದೊಡ್ಡದೊಂದು ಕೊಂಬೆಯನ್ನು ಹಿಡಿದು. "ಇನ್ನು ನನ್ನನ್ನು ಬಿಡು. ನಾನು ಇಳಿದುಕೊಳ್ಳುತ್ತೇನೆ" ಎಂದು ಕೂಗಿದನು.


ಅಷ್ಟರಲ್ಲಿ ಜಲವೃಕ ರಾಕ್ಷಸರ ಗುಂಪೊಂದು ಕಲ್ಲಿನ ಗದೆಗಳನ್ನು ತಿರುಗಿಸುತ್ತ "ಜೈ ಜಲವೃಕನಾಥಾ!" ಎಂದು ಕೂಗುತ್ತಾ ಅವರ ಕಡೆಗೇ ಓಡಿ ಬಂದಿತು. ಎಲ್ಲರೂ ಅವರನ್ನು ಎದುರಿಸಲು ಆಯುಧಗಳನ್ನು ಹಿಡಿದು ನಿಂತರು.

ಆ ಜಲವೃಕ ರಾಕ್ಷಸರ ಗುಂಪಿನಲ್ಲಿ ಖಡ್ಗಮೃಗದ ಮೇಲೆ ಕುಳಿತುಕೊಂಡವನೊಬ್ಬ ತನ್ನ ಗದೆಯನ್ನು ಎತ್ತೆತ್ತಿ ತೋರಿಸುತ್ತ, "ಬಿಡಬೇಡಿ. ಇಲ್ಲಿರುವವರಲ್ಲಿ ಒಬ್ಬನೂ ಜೀವದಿಂದ ಹೋಗಕೂಡದು!" ಎಂದು ಜಲವೃಕರಿಗೆ ಅಪ್ಪಣೆ ಮಾಡಿದನು.

ಮರದ ಕೊಂಬೆಯಲ್ಲಿ ಇದನ್ನು ನೋಡಿದ ನರವಾನರವು ಅರಣ್ಯವೇ ನಡುಗುವಂತೆ ಕೂಗಿ, ಕೈಯಲ್ಲಿದ್ದ ಹೆಬ್ಬಾವನ್ನು ಚಾಟಿಯಂತೆ ಬೀಸಿ ಅಪ್ಪಳಿಸಿ, ಖಡ್ಗಮೃಗದ ಮೇಲಿದ್ದ ಜಲವೃಕನ ಮೇಲೆಯೇ ಹಾರಿಬಿಟ್ಟಿತು

(ಮುಂದಿನ ಸಂಚಿಕೆಯಲ್ಲಿ ಮುಕ್ತಾಯ)





# ಮಾಯಾಸರೋವರ


July 1978

## ೩೦

[ಮಾಯಾಸರೋವರದ ಕಡೆಗೆ ಹೋಗುತ್ತಿದ್ದ ಹೇಳವ ಮಂಗಳವರ್ಮನಿಗೆ ಮರಗಳ ಮೇಲೆ ಸಿಕ್ಕಿಕೊಂಡಿದ್ದ ಹಂಸರಥ ಸಾರಥಿ ಕಾಣಿಸಿದನು. ಅವನ ಆರ್ತನಾದ ಕೇಳಿ ಸಿದ್ಧಸಾಧಕನೂ, ಕನಕಾಕ್ಷ ರಾಜನೂ ಅಲ್ಲಿಗೆ ಬಂದರು. ಆಗಲೇ ಜಲವೃಕ ನಾಯಕನು ತನ್ನ ದಂಡಿನೊಂದಿಗೆ ಖಡ್ಗಮೃಗ ವಾಹನದಲ್ಲಿ ಬಂದನು. ಆಗ ಮರದಲ್ಲಿ ಸಿಕ್ಕಿಬಿದ್ದವನನ್ನು ಬಿಡಿಸಿದ ನರವಾನರವು ಅವನ ಮೇಲೆಯೇ ಹಾರಿತು.]

ಪರ್ವತಾಕಾರದ ವಾನರವು ಅಬ್ಬರಿಸಿಕೊಂಡು ಹಾರಿ ತನ್ನ ಮೇಲೆ ಬಿದ್ದ ಕೂಡಲೇ ಜಲವೃಕ ನಾಯಕನು ಖಡ್ಗಮೃಗ ಸಮೇತನಾಗಿ ಉರುಳಿ ಬಿದ್ದನು. ಈ ಆಕಸ್ಮಿಕ ವಾನರಪಾತದಿಂದ ಗಾಬರಿಯಾದ ಜಲವೃಕರು, ತಮ್ಮ ನಾಯಕನನ್ನು ಕಾಪಾಡಲು ಒಮ್ಮೆಗೇ ಕೂಡಿದರು. ಅವರೆಲ್ಲ ನರವಾನರವನ್ನು ಸಿಕ್ಕ ಸಿಕ್ಕ ಹಾಗೆ ಹೊಡೆಯತೊಡಗಿದರು. ಆ ಪ್ರಹಾರಗಳನ್ನು ತಾಳದೆ ನರವಾನರವು ವಿಕಾರಕಂಠದಿಂದ ಕೂಗಾಡತೊಡಗಿತು. ಇದನ್ನು ನೋಡುತ್ತಿದ್ದ ಕನಕಾಕ್ಷ ರಾಜನು ಜಲವೃಕರನ್ನು ಹೊಡೆದೋಡಿಸುವಂತೆ ತನ್ನ ಸೈನಿಕರಿಗೆ ಆಜ್ಞೆಮಾಡಿದನು. ತನ್ನ ವಾನರವನ್ನು ರಕ್ಷಿಸಲು ಸಿದ್ಧಸಾಧಕನೂ ಶೂಲವನ್ನೆತ್ತಿ, ಮಹಾಕಾಳನ ಜಯಜಯಾಕಾರವನ್ನು ಘೋಷಿಸುತ್ತ ಜಲವೃಕರನ್ನು ತಿವಿಯತೊಡಗಿದನು. ಆದರೆ ಜಲವೃಕರು ಹೆದರಿ ಓಡುವ ಅಳ್ಳೆದೆಯವರಾಗಿರಲಿಲ್ಲ.

ಈ ವಿಧವಾಗಿ ಭಯಂಕರ ಹೋರಾಟವು ಎರಡು ಮೂರು ನಿಮಿಷಗಳವರೆಗೆ ನಡೆಯುತ್ತಿರಲು, ನರವಾನರವು ಖಡ್ಗಮೃಗದ ಪಟ್ಟನ್ನು ಬಿಟ್ಟಿರಲಿಲ್ಲ. ಕಡೆಗೆ ಯಾವುದೋ ಕಲ್ಲುಗದೆಯ ಏಟು ಬಲವಾಗಿ



ತಗಲಿದುದರಿಂದ ಖಡ್ಗಮೃಗವನ್ನು ಬಿಟ್ಟು ನೆಲದ ಮೇಲೆ ಅಂಗಾತ ಬಿದ್ದು ಸ್ತಬ್ಧವಾಯಿತು.

ಆ ಕೂಡಲೇ ಜಲವೃಕನಾಯಕನು ಖಡ್ಗಮೃಗದ ಮೇಲೆ ಸರಿಯಾಗಿ ಕುಳಿತು ಗದೆಯನ್ನೆತ್ತಿ, "ಎಲವೋ ಮಾನವಾಧಮರೆ ! ನನ್ನನ್ನು ಯಾರೆಂದುಕೊಂಡಿರಿ ? ಮಾಯಾ ಸರೋವರಕ್ಕೆ ಸರ್ವಾಧಿಕಾರಿಯಾದ ಜಲವೃಕನಾಯಕನಾದ ಜಲವೃಕನಾಥನೆಂದರೆ ನಾನೇ. ನನಗೆ ಬಂದಿಯಾಗಿ ಸಿಕ್ಕಿದವರಲ್ಲಿ ಪದ್ಮಮುಖಿ ಎಂಬ ಕನ್ಯೆಯನ್ನು ಮಾತ್ರ ಬಿಟ್ಟು ಉಳಿದೆಲ್ಲರನ್ನೂ ನನ್ನ ಈ ಕಲ್ಲಿನ ಗದೆಗೆ ಬಲಿಕೊಡುತ್ತೇನೆ." ಎಂದು ಗರ್ಜಿಸಿದನು.

ಕನಕಾಕ್ಷರಾಜನ ಸನ್ನೆಯಂತೆ ಎಲ್ಲರೂ ಸುಮ್ಮನಾದರು. ಸಿದ್ಧಸಾಧಕನು ತನ್ನ ನರವಾನರವನ್ನು ನೋಡಿದನು. ಅದಕ್ಕೆ ಇನ್ನೂ ಸ್ಮೃತಿ ಬರಲಿಲ್ಲ. ಅಂತಹ ಅವಸ್ಥೆಯಲ್ಲಿಯೂ ಅದು ಕೈಗಳನ್ನು ಅತ್ತಿತ್ತ ತಿರುಗಿಸುತ್ತ ಹಲ್ಲು ಕಡಿದುಕೊಳ್ಳುತ್ತಿದ್ದಿತು. ಅದಕ್ಕೆ ಸರಿಯಾಗಿ ಎಚ್ಚರಿಕೆ ಬರುವಂತೆ ಮಾಡಲು ತನ್ನ ಬಂಟನಾದ ಜಲವೃಕನೊಬ್ಬನಿಗೇ ಸಾಧ್ಯವೆಂದು ಅವನಿಗೆ ತೋರಿತು. ಶತ್ರು ಇನ್ನೂ ಮೇಲೆ ಬೀಳುವಂತಾದರೆ ಅದು ಎಚ್ಚರಕ್ಕೆ ಬರಬಹುದೆಂದುಕೊಂಡು ಅವನು ತನ್ನ ಬಂಟ ಜಲವೃಕನಕಡೆಗೆ ನೋಡಿ, "ಏನೋ ಜಲವೃಕ ಭಟಾ ! ನನ್ನ ಬಳಿಯಲ್ಲೇ ಇರುವೆಯಾ? ಎಲ್ಲಿ ನಿನ್ನ ಹಳೇ ಯಜಮಾನನ ಕಡೆಗೆ ಹೋದೆಯೋ ಅಂದುಕೊಂಡೆ !" ಎಂದನು.

ಆ ಜಲವೃಕನು ಮುಂದೆ ಬಂದು, ಸಿದ್ಧಸಾಧಕನಿಗೆ ಅಡ್ಡ ಬಿದ್ದೆದ್ದು, "ದೊರಗಳೇ, ಜಲವೃಕ ರಾಕ್ಷಸರ ಸ್ವಾಮಿ ಭಕ್ತಿಯ ಮುಂದೆ ಹುಟ್ಟು ಗುಲಾಮರು ಕೂಡಾ ಸಾಟಿಯಾಗರು. ಜಲವೃಕನು ಮಾತು ತಪ್ಪುವವನಲ್ಲ. ಏನಪ್ಪಣೆ ?" ಎಂದನು.

"ಎಲೋ ವೃಕಭಟಾ ! ನರವಾನರಕ್ಕೆ ತಗಲಿದ ಗದೆಯ ಪೆಟ್ಟು ಅಷ್ಟೇನೂ ದೊಡ್ಡದಾಗಿರಲಿಕ್ಕಿಲ್ಲ. ಅದನ್ನು ಎತ್ತಿ ನಿಲ್ಲಿಸು ನೋಡುವಾ" ಎಂದನು.

"ದೊರೆಗಳೇ, ಇಂತಹ ಮೃಗಗಳಿಗೆ ಮರಣ ಭಯ ಮಾತ್ರವೇ ಎಚ್ಚರ ಬರಿಸಬಲ್ಲುದು !" ಎಂದು ಹೇಳಿ ಜಲವೃಕಭಟನು ನರವಾನರದ ಮೇಲೆ ಬಾಗಿ, ಅದರ ಕುತ್ತಿಗೆಯನ್ನು ಹಿಡಿದೊತ್ತಿ, ಕಲ್ಲಿನಗದೆಯನ್ನು ಅದರ ತಲೆಯ ಮೇಲೆ ಇಟ್ಟು, "ಎಲೋ ನರವಾನರವೇ ! ನಿನ್ನ ಬರಡು ತಲೆ ಪುಡಿ ಪುಡಿ ಮಾಡುತ್ತೇನೆ" ಎಂದು ಕರ್ಕಶವಾಗಿ ಅರಚಿದನು.

ಮರುಕ್ಷಣವೇ ನರವಾನರವು ಮಹಾ ಕಪ್ಪೆಯಂತೆ ಹಾರಿ ಕುಣಿದು ನಿಂತು, ಭಯಂಕರವಾಗಿ ಕೂಗುತ್ತ, ಜಲವೃಕಭಟನನ್ನು ಎರಡು ಕೈಗಳಿಂದಲೂ ಹಿಡಿದೆತ್ತಿ ದೂರ ಎಸೆಯಿತು. ಅವನು ನೆಲದ ಮೇಲೆ ಬೀಳದಂತೆ ಸೈನಿಕರು ಹಿಡಿದುಕೊಂಡರು.

ನರವಾನರವು ಮತ್ತೆ ಆ ಜಲವೃಕಭಟನ ಮೇಲೆ ಹಾರಲು ನೋಡುವಾಗ, ಸಿದ್ಧಸಾಧಕನು ಶೂಲವನ್ನು ಅಡ್ಡ ಹಿಡಿದು ತಡೆದು, "ಇನ್ನು ಸುಮ್ಮ

ನಿರೋ ನರವಾನರಾ! ನೀವಿಬ್ಬರೂ ನಮ್ಮ ಸೇವಕರಲ್ಲವೇನೋ? ಜಗಳಾಡಬಾರದು." ಎಂದು ಆದರ ಹಾಗು ಜಲವೃಕಭಟನ ಬೆನ್ನುಗಳನ್ನು ತಟ್ಟಿದನು. ನರವಾನರವು ಶಾಂತವಾಯಿತು.

ಸಿದ್ಧಸಾಧಕನು, ಅಲ್ಲಿಂದ ಹೊರಟುಹೋದ ಜಲವೃಕನಾಥನ ಕಡೆಗೆ ನೋಡುತ್ತ, "ಆ ಖಡ್ಗಮೃಗದವನು ಏನೋ ಹೇಳಿ ಎಲ್ಲಿಗೋ ಓಡಿದನಲ್ಲಾ? ಅವನು ಮಾಯಾಸರೋವರಕ್ಕೆ ಹೋದನೇನು? ಅದು ಇನ್ನೆಷ್ಟು ದೂರದಲ್ಲಿದೆ?" ಎಂದನು.

ವೈದ್ಯದೇವನೆಂದು ಕರೆಯಲ್ಪಡುವ ದೇವಶರ್ಮನು ಅವನಬಳಿಗೆ ಬಂದು, "ಸಾಧಕಾ, ಆ ಮಾಯಾ ಸರೋವರವು ಬಹಳ ದೂರವೇನಿಲ್ಲ. ಎಲ್ಲರೂ ನನ್ನ ಹಿಂದೆಯೇ ಬನ್ನಿರಿ" ಎಂದನು.

ಸಿದ್ಧಸಾಧಕನು ಒಪ್ಪಿಗೆ ಕೊಡುವವನಂತೆ ತಲೆಯಾಡಿಸಿದನು. ದೇವಶರ್ಮನು ಮುಂದಿನಿಂದ ದಾರಿ ತೋರಿಸಿಕೊಂಡು ಹೋಗಲು, ಎಲ್ಲರೂ ಅವನ ಹಿಂದೆ ನಡೆದರು. ಕನಕಾಕ್ಷ ಮಹಾರಾಜನು ದೇವಶರ್ಮನ ಪಕ್ಕದಲ್ಲೇ ನಡೆಯುತ್ತ, "ಶರ್ಮಾ, ಆ ಜಲರಾಕ್ಷಸನ ಮಾತು ಏನೋ ಸಮಸ್ಯೆಯ ಹಾಗಿದೆಯಲ್ಲಾ? ಪದ್ಮಮುಖಿ ಎಂಬ ಕನ್ಯೆಯೊಬ್ಬಳನ್ನೇ ಜೀವದೊಂದಿಗೆ ಬಿಡುತ್ತೇನೆನ್ನುತ್ತಾನೆ. ಹಾಗೆಂದರೇನೆಂಬುದೇ ನನಗೆ ಅರ್ಥವಾಗುವುದಿಲ್ಲ" ಎಂದನು.

"ಮಹಾರಾಜರೆ, ಈಗ ಕೇಳಿದ ವಾರ್ತೆಗಳ ಪ್ರಕಾರ, ಮಾಯಾಸರೋವರ ಪ್ರಾಂತವೆಲ್ಲವೂ ಆ ಜಲರಾಕ್ಷಸರ ಸ್ವಾಧೀನವಾಗಿ ಹೋಗಿರುವಂತೆ ಕಾಣುತ್ತದೆ. ಪದ್ಮಮುಖಿ ಮಾಯಾಸರೋವರೇಶ್ವರನ ಮಗಳು. ಆ ಜಲರಾಕ್ಷಸ ನಾಯಕನು ಅವಳನ್ನು ಕೊಲ್ಲವುದಿಲ್ಲವೆಂದು ಹೇಳಿದುದರಲ್ಲಿ ಹೆಚ್ಚಿನ ವಿಶೇಷವೇನಿಲ್ಲ. ಅವನಿಗೊಬ್ಬ ಮಗನಿದ್ದಾನೆ. ಅದೇ ಕಾರಣವನ್ನಿ!" ಎಂದ ದೇವಶರ್ಮ.

"ಹಾಗಾದರೆ...ಶರ್ಮಾ, ನನಗೇನೋ ಸಂಕಟ



ವೆನಿಸುತ್ತದೆ. ನನ್ನ ಮಗಳು ಕಾಂಚನಮಾಲೆಯನ್ನು ಕೂಡಾ ಇನ್ನೊಬ್ಬ ಜಲರಾಕ್ಷಸನು ಮದುವೆ ಮಾಡಿಕೊಳ್ಳಲು ಪ್ರಯತ್ನಿಸುವನೇನೋ!" ಎಂದು ಕನಕಾಕ್ಷರಾಜನು ವೇದನೆಯನ್ನು ಅನುಭವಿಸುತ್ತ ಹೇಳಿದನು.

"ಮಹಾರಾಜರೆ, ನೀವು ಇಲ್ಲದ ಹೊಲ್ಲದ ಆಲೋಚನೆಯಿಂದ ಚಿಂತಿಸಬೇಕಾಗಿಲ್ಲ. ಆ ಮಾಯಾ ಸರೋವರದ ಕಡೆಗೆ ಮಹಾಸತ್ವಶಾಲಿಯಾದ ಜಯಶೀಲನೂ, ಸರೋವರೇಶ್ವರನೂ ಯಾವಾಗಲೋ ಹೋಗಿದ್ದಾರೆ. ಧೈರ್ಯವಾಗಿರಿ" ಎಂದ ದೇವಶರ್ಮ.

ಹೀಗೆ ಮಾತಾಡುತ್ತ ಇವರೆಲ್ಲ ಸಾಗುತ್ತಿರಲು, ಜಯಶೀಲನು ತನ್ನನ್ನು ಕರೆದೊಯ್ಯುವವರೊಂದಿಗೆ ಮಾಯಾಸರೋವರವನ್ನು ಸೇರಿಬಿಟ್ಟಿದ್ದನು. ಆ ಸರೋವರವು ವಿಶಾಲವಾಗಿ ಸಮುದ್ರದಂತಿದ್ದಿತು. ಅದರ ಸುತ್ತಲೂ ಎತ್ತರವಾದ ಬೆಟ್ಟಗಳೂ, ನೀರಿನ



ಅಂಚಿನವರೆಗೆ ಹರಡಿದ ಮಹಾರಣ್ಯವೂ ಇದ್ದುವು. ಜಯಶೀಲನು ಆ ಪ್ರಾಂತವನ್ನು ಪರಿಶೀಲಿಸಿ ನೋಡಿ. ಸರೋವರದ ನೀರನ್ನು ಕತ್ತಿಯಿಂದ ಕಲಕುತ್ತ, "ಸರೋವರೇಶ್ವರಾ ! ನೀನು ವಾಸ ಮಾಡುವ ಮಾಯಾಸರೋವರವೆಂದರೆ ಇದೇ ಅಂತ ಕಾಣುತ್ತೆ. ನನ್ನ ಕೊರಳಿಗೆ ಹಾಕಿದ ಉರುಳನ್ನು ಕಾಂಚನಮಾಲೆಯ ಕೋರಿಕೆಯಂತೆ ತೆಗೆದು ಹಾಕಿದವನು ನೀನು. ಅದೇನೋ ಚೆನ್ನಾಗಿದೆ. ಆದರೂ ಸಂದೇಹ ತೀರಲಿಲ್ಲ. ನಾವೀಗ ಮಿತ್ರರೋ ಶತ್ರುಗಳೋ ? " ಎಂದು ಕೇಳಿದನು.

ಜಯಶೀಲನು ಕೇಳಿದ ಅನುಮಾನಕ್ಕೆ ಉತ್ತರ ಕೊಡದೆ ಮಾಯಾಸರೋವರೇಶ್ವರನು ಸಪ್ಪಗಿನ ಮುಖ ಮಾಡಿಕೊಂಡು ಕಾಂಚನಮಾಲೆಯನ್ನು ನೋಡಿದನು. ಕಾಂಚನಮಾಲೆ ತಡಬಡಿಸುವ ಸ್ವರದಿಂದ, "ಜಯಶೀಲಾ. ಇಲ್ಲಿ ಈಗ ನಮ್ಮೊಳಗೆ ಶತ್ರುಗಳು ಎಂದು ಯಾರೂ ಇಲ್ಲ. ಮಕರಕೇತುವಿನ ಮೂಲಕ ನಿನ್ನ ಸಮಾಚಾರ ಸ್ವಲ್ಪ ಗೊತ್ತಾಗಿದೆ. ನಿನ್ನ ಕೈಯಲ್ಲಿರುವ ಕತ್ತಿ ಮಹತ್ವದ ಕತ್ತಿಯಂತೆ. ಮಹಾಕಾಲನ ಆವಾಹಕನೊಬ್ಬ ಅದನ್ನು ನಿನಗೆ ಕೊಟ್ಟನಂತೆ. ಅದರ ಪೆಟ್ಟಿಗೆ ಇದಿರಿಲ್ಲವೆನ್ನುತ್ತಾರೆ. ಅದರ ಸಹಾಯದಿಂದ ನೀನು ನಮ್ಮ ದುಷ್ಟ ಶತ್ರುಗಳಾದ ಜಲವೃಕರಾಕ್ಷಸರನ್ನು ತರಿದು ಹಾಕಿ, ಮಾಯಾಸರೋವರೇಶ್ವರ ಮಾವಯ್ಯನ ಮಗಳು ಪದ್ಮಮುಖಿಯನ್ನು ರಕ್ಷಿಸಬೇಕು." ಎಂದಳು.

"ಏನೇನು ? ನಾನು ಏಕಾಂಗಿಯಾಗಿಯೇ ಅಷ್ಟು ಮಂದಿ ಪೊರಟು ರಕ್ಕಸರೊಂದಿಗೆ ಹೋರಾಡಿ ಸಾಯಬೇಕೆನ್ನುವೆಯಾ ? ಸರಿ. ಸಾಯಲಿಕ್ಕೆ ಹೆದರಲಾರೆ, ನೋಡುತ್ತೇನೆ. ನಿನ್ನ ತಂದೆಯಾದ ಕನಕಾಕ್ಷ ಮಹಾರಾಜರಿಗೆ ನಾನು ಮಾಡಿದ ವಾಗ್ದಾನದಂತೆ, ನಿನ್ನನ್ನೂ ನಿನ್ನ ಅಣ್ಣನನ್ನೂ ಬಿಡಿಸಿಕೊಂಡು ಬರಲೇಬೇಕಾಗಿದೆ. ಆ ಪ್ರಯತ್ನದಲ್ಲಿ ಪ್ರಾಣಹೋದರೂ ಚಿಂತಿಸಲಾರೆ. ಆದ್ದರಿಂದ ಸಹಾಯಕರಿದ್ದರೂ ಇಲ್ಲದಿದ್ದರೂ ಜಲವೃಕರಾಕ್ಷಸರೊಂದಿಗೆ ಯುದ್ಧಮಾಡಲು ಸಿದ್ಧನಿದ್ದೇನೆ: ಸರಿ. ಎಲ್ಲಿ ಆ ಧೂರ್ತರು ? " ಎಂದನು ಜಯಶೀಲ.


ಜಯಶೀಲನ ಮಾತು ಕೇಳಿ ಮಾಯಾಸರೋವರೇಶ್ವರನು ಮುಂದೆ ಬಂದು ಅವನ ಎರಡು ಕೈಗಳನ್ನೂ ಹಿಡಿದು, "ಜಯಶೀಲಾ. ನಾನು ಹಿರಣ್ಮಪುರದ ಮಹಾರಾಜರ ಮಕ್ಕಳನ್ನು ಅಪಹರಿಸಿ, ಈ ಸರೋವರ ಪ್ರಾಂತಕ್ಕೆ ತಂದು ಬಹು ದೊಡ್ಡ ತಪ್ಪು ಮಾಡಿದೆನೆಂದು ಭಾವಿಸಬೇಡ. ನಾನು ರಾಜಕುಮಾರನೊಬ್ಬನನ್ನೇ ಅಪಹರಿಸಿಕೊಂಡು ಬರುವಂತೆ ಮಕರಕೇತುವಿಗೆ ಹೇಳಿದ್ದೆ. ಅವನು ಸ್ವಲ್ಪ ತುಂಟ ಬುದ್ಧಿಯವನಾದುದರಿಂದ ಒಟ್ಟಿಗಿದ್ದ ಅಣ್ಣತಂಗಿಯರಿಬ್ಬರನ್ನೂ ಹಿಡಿದು, ಕಳುಹಿಸಿಬಿಟ್ಟನು. ಆ ಸಮಯದಲ್ಲಿ ರಾಜಭಟರಿಂದ, ಮಕರಕೇತು ಗಾಯಗೊಂಡುದರಿಂದ ಮಕರಕೇತು ನಿಮ್ಮ ದೃಷ್ಟಿಗೆ ಬಿದ್ದು ಇಷ್ಟು ಅವಾಂತರಗಳಿಗೆ ಕಾರಣನಾದನು" ಎಂದನು.

"ಹೊಂದಿಸಿ ಹೇಳಿ ನಂಬಿಸಲು ನೋಡುವೆಯಾದರೂ, ಇದಿಷ್ಟಕ್ಕೂ ಯುವರಾಜನನ್ನು ಅಪಹರಿಸಿ ತರುವುದರಲ್ಲಿ ನಿನ್ನ ಉದ್ದೇಶವೇನೆಂದು ತಿಳಿಯಲಿಲ್ಲವಲ್ಲ?" ಎಂದು ಕೇಳಿದ ಜಯಶೀಲ.

ಇದರಲ್ಲಿ ದೊಡ್ಡ ರಹಸ್ಯವೇನಿಲ್ಲ. ನನ್ನ ಒಬ್ಬಳೇ ಒಬ್ಬಳು ಮಗಳಾದ ಪದ್ಮಮುಖಿಯನ್ನು ಅವನಿಗೆ ಕೊಟ್ಟು ಮದುವೆ ಮಾಡಬೇಕೆಂದು ಆಶಿಸಿದ್ದೆ. ಈ ಮಾಯಾಸರೋವರ ಪ್ರಾಂತಕ್ಕೆ ಅವನನ್ನೇ ರಾಜನನ್ನಾಗಿ ಮಾಡಿ ಶುಭ ವೈಭವದೊಂದಿಗೆ ದಂಪತಿಗಳನ್ನು ಹಿರಣ್ಯಪುರಕ್ಕೆ ಕಳುಹಿಸಬೇಕೆಂದಿದ್ದೆ. ಆದರೇನು ಮಾಡಲಿ? ಪದ್ಮಮುಖಿ ಕಾಂಚನವರ್ಮನನ್ನು ಮದುವೆಯಾಗಲು ಒಪ್ಪಲೇ ಇಲ್ಲ" ಎಂದ ಮಾಯಾಸರೋವರೇಶ್ವರ.

ಜಯಶೀಲನಿಗೆ ಅವನ ಮಾತು ನಿಜವೆಂದೇ ತೋರಿತು. ಅವನು ಕಾಂಚನಮಾಲೆಯ ಕಡೆಗೆ ನೋಡಿದನು. "ಹೌದು. ಹೆಣ್ಣು ಮಕ್ಕಳ ಮನಸ್ಸನ್ನು ತಿಳಿಯದೆ ಹೆತ್ತವರು ತಮ್ಮಿಷ್ಟದಂತೆ ನಿರ್ಧರಿಸಬಾರದೆಂಬುದು ಅದಕ್ಕೇ" ಎಂದು ಹೇಳಿ ಕಾಂಚನಮಾಲೆ ನೀರಿನ ಬದಿಗೆ ಹೋಗಿ, ಒಂದು ತಾವರೆದಂಟನ್ನು ತಂದು, ಅದನ್ನು ಹಿಂಡಿ ಬಂದ ರಸದಿಂದ ಜಯಶೀಲನ ಹಣೆಯ ಮೇಲೆ ತಿಲಕ ಹಚ್ಚಿದಳು. "ಜಯಶೀಲಾ! ಈಗ ಈ ಮಾಯಾಸರೋವರದ ರಹಸ್ಯವನ್ನೂ ಹೇಳುತ್ತೇನೆ. ಈ ಸರೋವರದಲ್ಲಿ ಹುಟ್ಟಿದ ತಾವರೆದಂಟಿನ ರಸವನ್ನು ಹಣೆಯ ಮೇಲೆ ಹಚ್ಚಿಕೊಂಡರೆ, ಅವರಿಗೆ ನೀರಿನೊಳಗೆ ವಾಸಮಾಡುವ ಶಕ್ತಿ ಉಂಟಾಗುತ್ತದೆ. ಇದು ಜನ್ಮಪರ್ಯಂತವೂ ಇರುತ್ತದೆ. ನಿನ್ನ ಹಣೆಗೆ ಹಚ್ಚಿದ ತಿಲಕವು ಕಾಣದಿದ್ದರೂ ನಿನಗೀಗ ಆ ಶಕ್ತಿ ಬಂತು" ಎಂದಳು.

"ಹಾಗೇನು? ಈಗಲೇ ಪರೀಕ್ಷಿಸುತ್ತೇನೆ!" ಎಂದವನೇ ಜಯಶೀಲನು ಒಮ್ಮೆಗೇ ಸರೋವರದ ನೀರಿನೊಳಗೆ ಧುಮುಕಿದನು.



ಕಾಂಚನಮಾಲೆಯೂ ಮಕರಕೇತುವೂ ಬೆರಗಾಗಿ ನೋಡುತ್ತಿರಲು, ಎರಡು ನಿಮಿಷಗಳಾದರೂ ಜಯಶೀಲನು ನೀರಿನ ಮೇಲೆ ತೇಲಲಿಲ್ಲ. ಮತ್ತೆ ನಾಲ್ಕೈದು ನಿಮಿಷಗಳಾದುವು. ಇನ್ನೂ ಜಯಶೀಲನು ನೀರಿನ ಮೇಲೆ ಬಾರದಿರುವುದನ್ನು ನೋಡಿ, ಕಾಂಚನಮಾಲೆ ಹೆದರಿದವಳಾಗಿ, "ಏನಿದು ಮಾವಯ್ಯಾ? ಜಯಶೀಲನಿಗೇನಾಯಿತು? ಜಲವೃಕರಾಕ್ಷಸರು ನೀರಿನ ಅಡಿಯಲ್ಲಿ ಹೊಂಚಿಕೊಂಡಿದ್ದು ಅವನನ್ನು ಹಿಡಿದು ಸೆರೆಯಲ್ಲಿ ಹಾಕಿಬಿಟ್ಟಿರಬಹುದೇ?" ಎಂದಳು ನಡುಗುವ ಸ್ವರದಿಂದ.

"ಹಾಗಾಗದು! ಮಹಾಕಾಲ ಶಕ್ತಿಯ ಕತ್ತಿ ಅವನ ಕೈಯಲ್ಲಿದೆಯಲ್ಲ? ನೋಡೋಣ" ಎಂದು ಸರೋವರೇಶ್ವರನು ಹೇಳುತ್ತಿರುವಾಗಲೇ, ನೀರಿನಲ್ಲಿ ನೊರೆಗಳೂ ಗುಳ್ಳೆಗಳೂ ಕಲ್ಲೋಲದ ಅಲೆಗಳೂ ಏಳತೊಡಗಿದುವು. ಜಯಶೀಲನು ಒಬ್ಬ ಯುವಕನಾದ ಜಲವೃಕನ ಕುತ್ತಿಗೆ ಹಿಡಿದುಕೊಂಡು ನೀರ



ಮೇಲೆ ತೇಲಿ, ಅವನನ್ನು ದರದರನೆ ತೀರಕ್ಕೆ ಎಳೆದು ಕೊಂಡು ಬಂದನು.

ಆ ಜಲವ್ಯಕ ಯುವಕನನ್ನು ನೋಡಿದ ಕೂಡಲೇ ಮಕರಕೇತು, "ಆಹಾ! ನಮಗೆ ಸಿಕ್ಕಬೇಕಾದವನೇ ಸಿಕ್ಕಿಬಿಟ್ಟನು. ಇವನು ಜಲವ್ಯಕನಾಯಕನ ಮಗನೇ! ಬಂದಿಗಳಾಗಿ ಸಿಕ್ಕಿರುವ ನಮ್ಮವರಿಗೆ ಇವನ ತಂದೆ ಏನಾದರೂ ಕೆಡುಕು ಮಾಡಿದರೆ, ಇವನನ್ನು ಚಿತ್ರವಧೆ ಮಾಡಿ ಕೊಂದುಬಿಡೋಣ." ಎಂದನು.

ಮಾಯಾಸರೋವರೇಶ್ವರನು ಅವನ ರಟ್ಟೆಯನ್ನು ಹಿಡಿದು, "ಧೂರ್ತನೇ, ನೀನು ನೀರಿನಡಿಯಲ್ಲಿ ಅಡಗಿದ್ದು ನಮ್ಮ ಸಂಭಾಷಣೆಗಳನ್ನೆಲ್ಲ ಕೇಳು ತ್ತಿದ್ದೆಯಾ? ನಿನ್ನ ತಂದೆ, ಆ ದುಷ್ಟ ಜಲವ್ಯಕನಾಥ ಎಲ್ಲಿದ್ದಾನೆ? ನಿಜ ಹೇಳು" ಎನ್ನುತ್ತ ಕತ್ತಿಯನ್ನು ಮೇಲೆತ್ತಿದನು.

"ತಂದೆ ಅರಣ್ಯದಲ್ಲಿರುವ ಯಾವನೋ ರಾಜ ನನ್ನೂ, ಕಾಪಾಲಿಕನೊಬ್ಬನನ್ನೂ ಹತಮಾಡಲು ಹೋಗಿದ್ದಾರೆ. ಸ್ವಲ್ಪ ಎಚ್ಚರದಿಂದಿರಿ. ಬೇಗನೇ ಇಲ್ಲಿಗೆ ಬಂದು ನಿಮ್ಮೆಲ್ಲರನ್ನೂ ಚಚ್ಚಿ ಹಾಕುತ್ತಾರೆ" ಎಂದ ಯುವಕ ಜಲವ್ಯಕ.

"ಅದಕ್ಕೆ ಮೊದಲು ನಿನ್ನ ಪ್ರಾಣ ಹೋಗದಿರ ಬೇಕಷ್ಟೆ? ಸತ್ಯ ಹೇಳಿಬಿಡು. ಕಾಂಚನವರ್ಮ, ಪದ್ಮ ಮುಖಿಯರು ಎಲ್ಲಿದ್ದಾರೆ?" ಎಂದು ಜಯಶೀಲನು ಕೇಳಿದನು.

"ಅವರನ್ನು ಅಡಗಿಸಿಟ್ಟಿರುವ ರಹಸ್ಯ ಪ್ರದೇಶವು ನಿಜಕ್ಕೂ ನಾನರಿಯೆ. ಅದು ನನ್ನ ತಂದೆಗೊಬ್ಬರಿಗೇ ಗೊತ್ತು." ಎಂದ ಯುವಕ ರಾಕ್ಷಸ.

ಆಗಲೇ ತುಸು ದೂರದಲ್ಲಿ ಕಲಕಲರವವು ಕೇಳಿ ಬರತೊಡಗಿತು. ಮುಂದಿನಿಂದ ಖಡ್ಗಮೃಗದ ಮೇಲೆ ಜಲವ್ಯಕನಾಯಕನೂ, ಹಿಂದಿನಿಂದ ಜಲವ್ಯಕರ ದೊಂದು ಸೈನ್ಯವೂ ಕಲ್ಲಿನ ಗದೆಗಳನ್ನೆತ್ತಿಕೊಂಡು ಅಟ್ಟಹಾಸ ಮಾಡುತ್ತ ಅಲ್ಲಿಗೆ ಬಂದು, "ಶರಣಾಗಿ ಬಿಡಿ! ಇಲ್ಲದಿದ್ದರೆ ಸಾಯುವಿರಿ!" ಎಂದು ಕೂಗಿ ಹೇಳಿದರು.

ಆಗ ಜಯಶೀಲನು ಮಕರಕೇತುವಿನೊಂದಿಗೆ, "ಈ ಜಲರಾಕ್ಷಸನ ಮಗನನ್ನು ನಿನ್ನ ಜಲಗ್ರಹದ ಸೊಂಡಿಲಿನಿಂದ ಹಿಡಿಸಿ ಮೇಲಕ್ಕೆ ಎತ್ತಿಸು" ಎಂದನು.

ಮಕರಕೇತು ಜಲಗ್ರಹಕ್ಕೆ ಸನ್ನೆ ಮಾಡಿದನು. ಕೂಡಲೇ ಅದು ಆ ಜಲವ್ಯಕ ಯುವಕನನ್ನು ಸೊಂಡಿಲಿನಿಂದ ಸುತ್ತಿ ಅಮುಕಿ ಹಿಡಿದು ಮೇಲಕ್ಕೆ ಎತ್ತಿತು. ಹೆದರಿ ಕೆಟ್ಟದನಿಯಿಂದ ಚೀರಿದ ಆ ಯುವಕ ಜಲವ್ಯಕ.

ಜಯಶೀಲನು ಮುಂದೆ ಹೋಗಿ, ತಮ್ಮ ಬಳಿಗೆ ಬರುವ ಜಲವ್ಯಕರ ತಂಡವನ್ನು ನೋಡಿ, "ಎಲವೋ ದುಷ್ಟ ಜೀವಿಗಳೇ, ನಮ್ಮ ಮೇಲೆ ಹಲ್ಲೆ ಮಾಡಲು ನೋಡಿದಿರೋ, ಮೊದಲು ನಿಮ್ಮ ನಾಯಕನ ಮಗನು ಜಲಗ್ರಹದ ಕಾಲಬುಡದಲ್ಲಿ ಜಜ್ಜಿ ಹೋಗುತ್ತಾನೆ!" ಎಂದು ಕೂಗಿ ಹೇಳಿದನು.

ಅಷ್ಟರಲ್ಲಿ ಅವರೆಲ್ಲರ ಹಿಂದಿನಿಂದ, ನರವಾನರ ವಾಹನನಾಗಿ ವೇಗದಿಂದ ಬರುವ ಸಿದ್ಧಸಾಧಕನು, " ಮಹಾರಾಜರೆ, ನಿಮ್ಮ ಸೈನಿಕರಿಂದ ದುಷ್ಟರ ಮೇಲೆ ಮುತ್ತಿಗೆ ಹಾಕಿಸಿರಿ ! ಅದೋ ಜಯಶೀಲ ! ಜೈ ಮಹಾಕಾಳಾ ! ಜಯಶೀಲಾ ! ಚೆನ್ನಾಗಿರುವೆಯಾ? " ಎನ್ನುತ್ತಾ ಓಡಿ ಬಂದು ನರವಾನರದಿಂದ ಇಳಿದನು.

ಜಯಶೀಲನು ಸಿದ್ಧಸಾಧನ ಕೈಹಿಡಿದು ಕುಲುಕಿ, ಅಲ್ಲಿರುವವರ ಪರಿಚಯ ಮಾಡಿಸುತ್ತಿರುವಾಗ, ಜಲವೃಕ ರಾಕ್ಷಸರ ನಾಯಕನು ಖಡ್ಗಮೃಗದ ಮೇಲೆ ಎದ್ದುನಿಂತು, ಕಲ್ಲಿನ ಗದೆಯನ್ನು ದೂರ ಬಿಸುಟು, "ನಾನೂ ನನ್ನ ಪರಿವಾರದವರೂ ಶರಣಾದೆವು. ಬಂದಿಯಾಗಿ ಸಿಕ್ಕಿದ ನನ್ನ ಮಗನನ್ನು ಕೊಲ್ಲಬೇಡಿ. ನಾನು ಹಿಡಿದ ನಿಮ್ಮವರೆಲ್ಲರನ್ನೂ ಈಗಲೇ ಇಲ್ಲಿಗೆ ಕರೆಸುತ್ತೇನೆ." ಎಂದನು.

ಅಷ್ಟರಲ್ಲಿ ಜಯಶೀಲನಬಳಿಗೆ ಕನಕಾಕ್ಷ ಮಹಾ ರಾಜನೂ ಬಂದನು. ಕಾಂಚನಮಾಲೆ ಓಡಿಹೋಗಿ ತಂದೆಯನ್ನು ಆಲಿಂಗಿಸಿಕೊಂಡು "ಅಪ್ಪಾ, ಈ ಮಾಯಾಸರೋವರೇಶ್ವರರಿಗೆ ಯಾವ ಕೆಡುಕನ್ನೂ ಮಾಡಿಬಿಡಬೇಡಿ. ಅವರು ಒಳ್ಳೆಯವರು. ನಡೆದು ದಕ್ಕೆಲ್ಲಾ ತುಂಬಾ ಪಶ್ಚಾತ್ತಾಪ ಪಡುತ್ತಾರೆ" ಎಂದಳು.

" ಹೌದು ಪಾಪ. ಪಶ್ಚಾತ್ತಾಪ ಪಡದೇನು ಮಾಡಿ ಯಾನು ? ಅವನು ತನ್ನ ಮಗಳನ್ನು ಕೇಳದೆಯೇ ದುಡುಕಿಬಿಟ್ಟನು. ಅವನ ಮಗಳು ನಿಮ್ಮ ಸೊಸೆ ಯಾಗುವುದು ತಪ್ಪಿಹೋಯಿತು." ಎಂದು ಹೇಳಿ ಜಯಶೀಲನು ನಕ್ಕನು.

" ಪದ್ಮಮುಖಿಯ ಮನಸ್ಸು ನನಗೆ ಗೊತ್ತಿದೆ. ಅವಳು ದೇವಶರ್ಮನನ್ನು ಮದುವೆಯಾಗಬೇಕೆಂದು ನಿಶ್ಚಯಿಸಿದ್ದಾಳೆ." ಎಂದಳು ಕಾಂಚನಮಾಲೆ.

ದೇವಶರ್ಮನು ಜಲವೃಕ ರಾಕ್ಷಸರ ನಾಯಕನನ್ನು ಹಿಂಗಟ್ಟು ಕಟ್ಟಿಸಿ, ನಾಲ್ಕಾರು ಸೈನಿಕರಿಂದ ಕರೆಯಿಸಿ



ಕೊಂಡು ಜಯಶೀಲನ ಬಳಿಗೆ ಬಂದನು. "ಜಯ ಶೀಲಾ, ಈ ದುಷ್ಟನು ಬಂಧಿತರಾಗಿರುವ ಪದ್ಮ ಮುಖಿ, ಕಾಂಚನವರ್ಮರನ್ನು ಕರೆತರಲು ತನ್ನ ಅನುಚರರನ್ನು ಕಳುಹಿಸಿದ್ದಾನೆ. ಇದರಲ್ಲೇನಾದರೂ ಮೋಸವಿದ್ದರೆ ತಂದೆ ಮಗ ಇಬ್ಬರನ್ನೂ ಕೊಂದು ಬಿಡೋಣ" ಎಂದನು.

" ಹೌದು, ಹಾಗೇ ಮಾಡೋಣ. ಇಬ್ಬರನ್ನೂ ಜಲಗ್ರಹದ ಕಾಲಿಗೆ ಬಲಿಕೊಟ್ಟರಾಯಿತು " ಎಂದನು ಜಯಶೀಲ.

ಮುಂದೆ ಕೆಲವೇ ನಿಮಿಷಗಳಲ್ಲಿ ನಾಲ್ಕು ಮಂದಿ ಜಲವೃಕ ರಾಕ್ಷಸರು ಕಾಂಚನವರ್ಮನನ್ನೂ, ಪದ್ಮ ಮುಖಿಯನ್ನೂ ಅಲ್ಲಿಗೆ ಕರೆದುಕೊಂಡುಬಂದರು. ತನ್ನ ಮಗನನ್ನು ನೋಡಿ ಕನಕಾಕ್ಷರಾಜನೂ, ತನ್ನ ಮಗಳನ್ನು ನೋಡಿ ಮಾಯಾಸರೋವರೇಶ್ವರನೂ ಆತ್ಮಾನಂದಪಟ್ಟರು. ಸಿದ್ಧಸಾಧಕನಂತೂ ದಿಕ್ಕುಗಳು ಪ್ರತಿಧ್ವನಿಸುವ ಹಾಗೆ " ಜೈ ಮಹಾ ಕಾಳಾ !" ಎಂದು

ಹರ್ಷದಿಂದ ಕೂಗು ಹಾಕಿ, "ಈಗ ತಾನೇ ನನ್ನ ಕಿವಿಗೆ ಬಿದ್ದ ಮಾತಿನಂತೆ ಪದ್ಮಮುಖಿಗೆ ದೇವಶರ್ಮನೊಂದಿಗೆ ವಿವಾಹ ನಿಶ್ಚಯವಾದಂತೆಯೇ ಸರಿ! ಶುಭವಾಗಲಿ! ಇನ್ನು ರಾಜಕುಮಾರಿ ಕಾಂಚನಮಾಲೆಯ ಸಮಾಚಾರವೇನೆಂದು ಗೊತ್ತಾಗಲಿಲ್ಲವಲ್ಲ?" ಎಂದನು.

ಕನಕಾಕ್ಷರಾಜನು ಜಯಶೀಲನ ಕಡೆಗೆ ನೋಡಿ, "ಅದು ಮೊದಲೇ ನಿಶ್ಚಯಿಸಿದ ಮಾತು. ಅಪಹರಿಸಲ್ಪಟ್ಟ ನನ್ನ ಮಕ್ಕಳಿಬ್ಬರನ್ನೂ ಬಿಡಿಸಿಕೊಂಡು ಬರುವ ವೀರನಿಗೆ ಅರ್ಧರಾಜ್ಯ ಕೊಡುವೆನೆಂದು ಸಾರಿದ್ದೇನೆ. ವಿವಾಹದ ವಿಷಯ ಅವಳ ಇಷ್ಟ! ಅರ್ಧರಾಜ್ಯವೇ ವರದಕ್ಷಿಣೆಯಂತಾದರೆ ನನ್ನ ಭಾಗ್ಯ!" ಎಂದನು.

"ಕಾಂಚನಮಾಲೆಯಂತಹವಳಿಗೆ ಮಹಾ ವೀರನೇ ತಕ್ಕ ಪತಿಯಾಗಬೇಕು. ಜಯಶೀಲನಿಗೆ ಅದರಲ್ಲೇನೂ ಕೊರತೆಯಿರದು. ಅಲ್ಲವೇ ಕಾಂಚನಾ?" ಎಂದ ಸಿದ್ಧಸಾಧಕ.

ಕಾಂಚನಮಾಲೆ ನಾಚಿ ಕೆಂಪಗಾಗಿ ತಲೆ ಬಗ್ಗಿಸಿಕೊಂಡು ಹೋಗಿ ತಂದೆಯ ಮರೆಯಲ್ಲಿ ನಿಂತಳು. ಅದನ್ನು ನೋಡಿ ಸಿದ್ಧಸಾಧಕನು ಗಟ್ಟಿಯಾಗಿ ನಕ್ಕು, "ಜಯಶೀಲನಿಗೆ ಕಾಂಚನಮಾಲೆಯೊಂದಿಗೂ, ಪದ್ಮಮುಖಿಗೆ ದೇವಶರ್ಮನೊಂದಿಗೂ ಹಿರಣ್ಯಪುರದಲ್ಲಿ ಮಹಾ ವೈಭವದಿಂದ ವಿವಾಹವೆಂದು ನಿಶ್ಚಯವಾಯಿತು. ಇನ್ನು ನೀವೆಲ್ಲಾ ಹೊರಡಿ!" ಎಂದನು.

"ಅಂದರೆ, ನೀನು ನಮ್ಮೊಂದಿಗೆ ಬರುವುದಿಲ್ಲವೇನು?" ಎಂದು ಕೇಳಿದ ಜಯಶೀಲ.

"ನಾನು ಈ ಮಾಯಾಸರೋವರದ ತೀರದಲ್ಲಿ ಇನ್ನೂ ಸ್ವಲ್ಪ ಕಾಲದವರೆಗೆ ಮಹಾಕಾಲನ ಉಪಾಸನೆ ಮಾಡಿಕೊಂಡಿರುತ್ತೇನೆ. ಇಲ್ಲಿರುವ ಜಲವೃಕರಾಕ್ಷಸರೂ, ಅರಣ್ಯದಲ್ಲಿರುವ ನರಭಕ್ಷಕರೂ ನನ್ನ ಬಂಟರಾಗಿರುವಂತೆ ಮಾಡಿಕೊಳ್ಳುತ್ತೇನೆ." ಎಂದು ಸಿದ್ಧಸಾಧಕನು ತನ್ನ ಶೂಲವನ್ನು ಎತ್ತಿಹಿಡಿದನು.

ಜಯಶೀಲನೂ, ಕನಕಾಕ್ಷರಾಜನೂ, ಮಾಯಾಸರೋವರೇಶ್ವರನೂ ತಮ್ಮ ತಮ್ಮ ಪರಿವಾರದೊಂದಿಗೆ ಅಲ್ಲಿಂದ ಹೊರಟರು. ಅವರು ಸ್ವಲ್ಪ ದೂರ ಹೋದಕೂಡಲೇ, ಜಲವೃಕ ರಾಕ್ಷಸರೂ, ಮರಗಳ ಮರೆಯಲ್ಲಿದ್ದು ಹೊರಬಂದ ನರಭಕ್ಷಕರೂ ಸಿದ್ಧಸಾಧಕನ ಸುತ್ತಲೂ ಸೇರಿ, ಕೋಲಾಹಲವಾಗಿ ಕುಣಿಯತೊಡಗಿದರು.

ಸಿದ್ಧಸಾಧಕನು ಅವರಿಗೆ ಏನೋ ಉಪದೇಶ ಮಾಡತೊಡಗಿದನು. ಅವರೆಲ್ಲ ತಲೆವಾಗಿ ಅವನ ಮುಂದೆ ಅಡ್ಡಬಿದ್ದರು. ಅವರಿಗೆಲ್ಲಾ ಅವನೇ ನಾಯಕನಾದ ಲಕ್ಷಣ ತೋರಿತು.

—(ಮುಗಿಯಿತು)

